ಶ್ರೀ ಎನ್ ಧರ್ಮ್‌ಸಿಂಗ್ [ವಿರೋಧ ಪಕ್ಷದ ನಾಯಕರು] ಇಲ್ಲಿಯವರೆಗೆ ನಮ್ಮ ಎಲ್ಲಾ ಹಿರಿಯ ನಾಯಕರು ಪ್ರಸ್ತಾಪ ಮಾಡಿದರು ಇವತ್ತು 14ನೇ ತಾರೀಖು ಅಧಿವೇಶನವನ್ನು ಕರೆಯುವ ಪ್ರಮೇಯವಿರಲಿಲ್ಲ, ಆದರೂ ಕೂಡ ನೀವು ಕರೆದಿದ್ದೀರೆಂದು ನಿಮಗೆ ಗೌರವವನ್ನು ಕೊಟ್ಟಿದ್ದೇನೆ ಕಳೆದ ಸಲ ಅಜೆಂಡಾದಲ್ಲಿ ಏನು ಬಿಲ್ಲುಗಳಿದ್ದವೋ ಅವೇ ಬಂದಿವೆ ವಿಶೇಷವಾದ ಪರಿಸ್ಥಿತಿಯಲ್ಲಿ ಸದನವನ್ನು ಕರೆದಿದ್ದೇನೆ, ಚರ್ಚೆಯಾಗಬೇಕೆನ್ನುವ ರೀತಿಯಲ್ಲಿ, ಇದು ಸಮರ್ಥನೀಯವಾದುದ್ದಲ್ಲ ಆದರೂ ಕೂಡ ತಾವು ಅಧ್ಯಕ್ಷರಿದ್ದೀರೆಂದು ಗೌರವವನ್ನು ಕೊಡಬೇಕಾಗುತ್ತದೆ,

7/6

ಇವತ್ತು ತಾವೇನು ಹೇಳಿದ್ದೀರಿ ಅದಕ್ಕೆ ಒಪ್ಪುತ್ತೇವೆ ಆದರೆ ಇವತ್ತಿನ ದಿವಸ ಈ ಬಿಲ್‌ಗಳ ಮಧ್ಯದಲ್ಲಿ, ಕಾವೇರಿ ಬಗ್ಗೆ ರಾಜ್ಯದಲ್ಲಿ ಎಲ್ಲಾ ಕಡೆ ಪ್ರತಿಭಟನೆಗಳು ನಡೆಯುತ್ತಿವೆ, ರಾಷ್ಟ್ರಮಟ್ಟದಲ್ಲೂ ಕೂಡ ನಡೆಯುತ್ತಿದೆ ಅದರ ಬಗ್ಗೆ ಇವತ್ತು ನಾವು ವಿರೋಧಪಕ್ಷದ ಪರವಾಗಿ ನಿರ್ಣಯವನ್ನು ಕೊಟ್ಟಿದ್ದೇವೆ, ತಮಗೂ ಕೂಡ ಬಂದಿದೆ ಆ ನಿರ್ಣಯದ ಬಗ್ಗೆ ಚರ್ಚೆ ಮಾಡುವ ರೀತಿಯಲ್ಲಿ ಇವತ್ತು ಕಲಾಪ ಪ್ರಾರಂಭವಾಗಬೇಕು, ನಾವು ಚರ್ಚೆಯನ್ನು ಪ್ರಾರಂಭ ಮಾಡುತ್ತೇವೆ

ಅಧ್ಯಕ್ಷರು ಕಾವೇರಿ ವಿಚಾರವನ್ನೇನು ಪ್ರಸ್ತಾಪ ಮಾಡಿದ್ದಾರೆ, ಅದಕ್ಕೆ ಸರ್ಕಾರದಿಂದೇನು ರಿಯಾಕ್ಷನ್ ಎಂಬುದನ್ನು ಹೇಳಬೇಕು

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ ಸರ್, ತಮ್ಮ ಮೇಲೆ ಇದು ಅವಲಂಬಿಸಿದೆ ಏಕೆಂದರೆ, ಕಾವೇರಿ ತೀರ್ಪು ಹೊರಗೆ ಬಂದು ಇವತ್ತಿಗೆ 38 ದಿವಸಗಳಾಯಿತು 38 ದಿವಸದಲ್ಲಿ ಒಂದು ಸಂದೇಶವೇನು ಹೋಗುತ್ತದೆ ಎಂದರೆ ಅಧಿವೇಶನ 16ನೇ ತಾರೀಖು ಇದ್ದರೂ ಕೂಡ, 14ನೇ ತಾರೀಖು ಅಧಿವೇಶನವನ್ನು ಕರೆಯಿಸಿ, ಈ ಬಗ್ಗೆ ಚರ್ಚೆಯನ್ನು ಕೂಡ ಮಾಡಿಲ್ಲ ಎನ್ನುವುದೊಂದು ಈಗಾಗಲೇ ನಡೆದ ಸರ್ವಪಕ್ಷ ಸಭೆಯಲ್ಲೂ ಕೂಡ ಕೆಲವು ಸದಸ್ಯರು, ಕೆಲವು Non-political NGOs, ಕೆಲವು Farmers Associations, ಬೇರೆ ಬೇರೆ Associations ಅವರು ಏನು ಕೇಳಿದರೆಂದರೆ, ಇದನ್ನು ಸದನದಲ್ಲಿ ಏತಕ್ಕೆ ಚರ್ಚೆ ಮಾಡಲಿಲ್ಲ ಎನ್ನುವ ಪ್ರಶ್ನೆ ಅಲ್ಲಿ ಬಂತು ಎರಡು ದಿವಸಗಳ ಮುಂಚೆ ಅಧಿವೇಶನವನ್ನು ಕರೆಯುತ್ತೀರೆಂದರೆ, ನಾವೇನು ತಿಳಿದುಕೊಂಡೆವೆಂದರೆ, ನಿಮ್ಮ top & priority agenda ಕಾವೇರಿ ಅವಾರ್ಡ್ ಎಂದು ತಿಳಿದುಕೊಂಡಿದ್ದೇವೆ ಅದಕ್ಕೆ ಇದರ ಬಗ್ಗೆ ಚರ್ಚೆ ಮಾಡುತ್ತಾರೆಂದು ನಾವು ಕೂಡ ತಲೆಯಲ್ಲಿಟ್ಟುಕೊಂಡು ಬಂದಿದ್ದೇವೆ ಆದರೆ ನೀವು, ಬಿಲ್ ತೆಗೆದುಕೊಳ್ಳುವ, ಬಿಲ್‌ಗೋಸ್ಕರ ಬಂದಿದ್ದೇವೆಂದರೆ, ನಿಜವಾಗಿಯೂ ಇದರ ಮಹತ್ವ ಹೋಗುತ್ತದೆ ಮತ್ತೆ ಇವತ್ತು ಅಧಿವೇಶನ ಸೇರಿದ ಮೇಲೆ ಏನು ಚರ್ಚೆಯಾಗುತ್ತದೆ ಎನ್ನುವುದರ ಬಗ್ಗೆ ರಾಜ್ಯದ ಜನರು ಕೂಡ ಈ ಕಡೆ ಗಮನಹರಿಸಿದ್ದಾರೆ Special Session ಕರೆದಿದ್ದಾರೆ, 16ನೇ ತಾರೀಖು ಬಜೆಟ್ ಇತ್ತು, ಆದರೂ 24ನೇ ತಾರೀಖು ಅಧಿವೇಶನವನ್ನು ಕರೆದು ಇದರ ಬಗ್ಗೆ ಚರ್ಚೆ ಮಾಡಬೇಕೆಂದು ಎಲ್ಲಾ ಶಾಸಕರು ಸೇರಿದ್ದಾರೆ ಎಂಬುದು ನಮ್ಮ ಅಭಿಪ್ರಾಯ ದಯವಿಟ್ಟು ಆ ಅಭಿಪ್ರಾಯಕ್ಕೆ ಮನ್ನಣೆ ಕೊಟ್ಟು ತಾವು ಇವತ್ತು

ಕಾವೇರಿ ಜಲವಿವಾದದ ವಿಷಯದ ಬಗ್ಗೆ ಚರ್ಚೆ ಮಾಡಲು ತಾವು ಅವಕಾಶ ಮಾಡಿಕೊಡಬೇಕು, ಮತ್ತೆ ಈಗೇನು Resolution move ಮಾಡಿದ್ದೇವೆ, ಇದು ಕೇವಲ 5 sentence resolution. ಇದನ್ನು ಬೇಕಾದರೆ ಅವರು ನೋಡಿಕೊಳ್ಳಲಿ, ನೋಡಿಕೊಂಡು, ಕೂಡಲೇ ಇದನ್ನು adopt ಮಾಡಿಕೊಂಡರೆ ಚರ್ಚೆಯ ಅವಶ್ಯಕತೆ ಇಲ್ಲ, ಅದಕ್ಕಾಗಿ ಇದಕ್ಕೆ ತಾವು ಅವಕಾಶ ಮಾಡಿಕೊಡಬೇಕು

ಶ್ರೀ ಎಂ ಪಿ ಪ್ರಕಾಶ್ ಸನ್ಮಾನ್ಯ ಅಧ್ಯಕ್ಷರೆ, ಇದು ಬಹಳ ಮಹತ್ವವಾದ ವಿಷಯವೆಂಬುದರ ಬಗ್ಗೆ ಎರಡನೇ ಮಾತಿಲ್ಲ ಈ ತೀರ್ಪಿನಿಂದ ಇಡೀ ರಾಜ್ಯಕ್ಕಾದ ಅನ್ಯಾಯದ ವಿಚಾರದಲ್ಲಿ, ಇಡೀ ಕರ್ನಾಟಕದಾದ್ಯಂತ ಎಲ್ಲಾ ಸಂಘ ಸಂಸ್ಥೆಗಳು, ವ್ಯಕ್ತಿಗಳು ಈ ವಿಚಾರದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ ಎರಡು-ಮೂರು ಸಾರಿ ಸರ್ವಪಕ್ಷಗಳ ಮುಖಂಡರುಗಳ ಜೊತೆಯಲ್ಲಿ ಚರ್ಚೆ ಮಾಡಿದ ನಂತರ, ವಿಧಾನಮಂಡಲದ ಎಲ್ಲಾ ನಾಯಕರುಗಳ ಮತ್ತು ವಿರೋಧಪಕ್ಷಗಳ ನಾಯಕರುಗಳ ಜೊತೆಯಲ್ಲಿ ಸಮಾಲೋಚಿಸಿದ ನಂತರ, ಸಂಪೂರ್ಣವಾದ ಸಹಕಾರವನ್ನು ಎಲ್ಲರೂ ಕೂಡ ಕೊಟ್ಟಿದ್ದಾರೆ ಅದಕ್ಕೆ ನಾವು, ಎಲ್ಲಾ ವಿರೋಧಪಕ್ಷಗಳ ನಾಯಕರು ಮತ್ತು ಎಲ್ಲಾ ಪಕ್ಷಗಳ ಮುಖಂಡರುಗಳನ್ನು ಕೃತಜ್ಞತೆಯಿಂದ ಅಭಿನಂದಿಸುತ್ತೇವೆ ಮತ್ತೆ ಇಡೀ ಜನತೆ ಕಾನೂನುಬಾಹಿರವಾದ ಯಾವ ಚಟುವಟಿಕೆಯನ್ನೂ ಮಾಡದೇ ಅತ್ಯಂತ ಶಾಂತಿಯುತವಾಗಿ ತಮ್ಮ ಪ್ರತಿಭಟನೆಯನ್ನು ಮಾಡುತ್ತಿದ್ದಾರೆ ಅವತ್ತು ನಾವು ಸರ್ವಪಕ್ಷಗಳ ಮುಖಂಡರುಗಳ ಸಭೆಯನ್ನು ಕರೆದಾಗ, ಅಲ್ಲಿ ಒಂದು ಗೊತ್ತುವಳಿಯನ್ನು ಮಾಡಬೇಕೆಂದಾಗ ಕೂಡ ಎಲ್ಲರೂ ಸಹಕಾರವನ್ನು ಕೊಟ್ಟು, ಆ ಗೊತ್ತುವಳಿಯನ್ನು ಸರ್ವಾನುಮತದಿಂದ ತೆಗೆದುಕೊಂಡಾಗ, ಕೆಲವು ಸದಸ್ಯರುಗಳು, ಸದನದಲ್ಲಿ ಇಂತಹ ನಿರ್ಣಯ ಮಾಡುವುದು ಉಚಿತ, ಅದಕ್ಕೆ ಹೆಚ್ಚು ಘನತೆ ಬರುತ್ತದೆನ್ನುವ ಅಭಿಪ್ರಾಯವನ್ನು ಕೂಡ ಹೇಳಿದರು ಅದನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಪ್ರಸ್ತಾಪ ಮಾಡಿರುವುದು ಕೂಡ ಸರಿ ಇದೆ.

[illegible]

ಯಾವುದೇ ತರಹದ ರಕ್ಷಣೆಯನ್ನು ಪಡೆಯಲಿಕ್ಕೆ ತಯಾರಿಲ್ಲ ಎಂದು ನಿಯಮಾವಳಿಗಳು ಏನು ಹೇಳುತ್ತವೆ? ಯಾವುದೇ ಈ ತರಹದ ಖಾಸಗಿಯಾದ ಗೊತ್ತುವಳಿಯನ್ನು ಮಂಡಿಸಬೇಕಾದರೆ, ಏಳು ದಿವಸಗಳ ಅವಧಿ ಇರುತ್ತದೆ ಇದು ಒಂದು ಅಕಾಡೆಮಿಕ್ ಆಗಿ ಎಂದು ತಾವು ಬಾವಿಸಬೇಕು ನಮ್ಮ ನಿಯಮಾವಳಿಗಳು ಏನು ಹೇಳುತ್ತವೆ ಎನ್ನತಕ್ಕಂತಹ ವಿಚಾರದಲ್ಲಿ, 'A member, other than a Minister, who wishes to move a resolution to that effect shall give at least seven clear days before the date of ballot and shall, together with notice, submit the text of the resolution which he wishes to move' ಎನ್ನತಕ್ಕಂಥದ್ದು ಇದೆ ಅದಕ್ಕೆ ಖಾಸಗಿ ಸದಸ್ಯರುಗಳ ನಿರ್ಣಯಗಳನ್ನು ಯಾವ ಸಂದರ್ಭದಲ್ಲಿ ಮಂಡಿಸಬೇಕು ಎನ್ನತಕ್ಕಂಥದ್ದು ಮತ್ತೊಂದು ಇದೆ ಅದು ಎಲ್ಲರಿಗೂ ಕೂಡ ಗೊತ್ತಿರತಕ್ಕಂಥದ್ದು ಎಲ್ಲ ಹಿರಿಯರಿದ್ದೀರಿ ಈ ನಿಯಮಾವಳಿಗಳ ಕೆಳಗೆ ನಾನು ಇಂತಹ ಮಹತ್ವವಾದ ವಿಚಾರವನ್ನು ಅಧ್ಯಕ್ಷರಾದ ತಾವು ಅಭಿಪ್ರಾಯ ಪಡುವುದಾದರೆ, ಆ ನಿಯಮಾವಳಿಗಳಲ್ಲಿ ತಾವು ಸೇರಿಸಬಹುದು, ಅವಕಾಶವನ್ನು ಕಲ್ಪಿಸಿಕೊಡಬಹುದು ಆ ತರಹದ ಅಂತರ್ಗತ ಹಕ್ಕು ತಮಗೆ ಇದೆ ಈ ಹಿನ್ನೆಲೆಯಲ್ಲಿ ಅವತ್ತು ಪ್ರಶ್ನೆ ಮಾಡಿರತಕ್ಕಂಥದ್ದು ಸರ್ಕಾರ ಮಂಡಿಸಬೇಕೇ ಅಥವಾ ಬೇರೆಯವರು ಮಂಡಿಸಬೇಕೇ ಎನ್ನತಕ್ಕಂಥದ್ದು ಸರ್ಕಾರ ಈಗಾಗಲೇ ನಿರ್ಣಯ ತೆಗೆದುಕೊಂಡಿರತಕ್ಕಂಥದ್ದು, ಕಾನೂನು ತಜ್ಞರ ಮತ್ತು ನೀರಾವರಿ ತಜ್ಞರ ಅಭಿಪ್ರಾಯದ ಮೇರೆಗೆ ಸಂವಿಧಾನದ 131ನೇ ಕಲಂ ಮತ್ತು 136ನೇ ಕಲಂ ಹಾಗೂ ಈ ತೀರ್ಪಿನ ಸ್ಪಷ್ಟೀಕರಣ ಮತ್ತು ಮಾರ್ಗದರ್ಶನಕ್ಕೆ ಸಂಬಂಧಪಟ್ಟಂತೆ ಅಂತರ್‌ರಾಜ್ಯ ಜಲವಿವಾದ ಕಾಯಿದೆ 5(3) ರ ಕೆಳಗೆ ನಾವು ಅಲ್ಲಿ ವಿವಾದವನ್ನು ತೆಗೆದುಕೊಂದು ಹೋಗಬೇಕು ಎನ್ನತಕ್ಕಂದ್ದರ ಬಗ್ಗೆ ನಿರ್ಣಯ ಮಾಡಿದ್ದೇವೆ ಸರ್ಕಾರದ ನಿರ್ಣಯವನ್ನು ಈಗಾಗಲೇ ತಿಳಿಸಿದ್ದೇವೆ ಕಳೆದ ಹದಿನಾರು ವರ್ಷಗಳಿಂದ ಇಲ್ಲಿಯವರೆಗೆ ಕೂಡ ನಮ್ಮ ವಾದವನ್ನು ಸಮರ್ಥವಾಗಿ ಮಂಡಿಸಿರತಕ್ಕಂತಹ ಕಾನೂನು ತಜ್ಞರು, ಶ್ರೀ ನಾರಿಮನ್‌ರವರ ಅಧ್ಯಕ್ಷತೆಯಲ್ಲಿ ರಚನೆಯಾಗಿರತಕ್ಕಂತಹ ಆ ಒಂದು ಪೆನಲ್‌ನ್ನು ಹಾಗೆಯೇ ಮುಂದುವರೆಸಿಕೊಂಡು ಹೋಗಬೇಕೆಂದು ನಿರ್ಣಯವನ್ನು ಕೂಡ ನಾವು ಮಾಡಿದ್ದೇವೆ ಇದರ ಮೇಲೆ ಗೊತ್ತುವಳಿ ಆಗಬೇಕು ಎನ್ನತಕ್ಕಂಥದ್ದರ ಬಗ್ಗೆ ತಾವು ಎಲ್ಲ ಸದಸ್ಯರುಗಳು ಒಪ್ಪುವುದಾದರೆ

ನಿಯಮಾವಳಿಗಳನ್ನು ತಾವು ವಿವೇಚನೆ ಮಾಡಿ ತಮಗಿರತಕ್ಕಂತಹ ವಿವೇಚನೆ ಮೇಲೆ ಅದನ್ನು ಮಾಡಬಹುದು ಅಥವಾ ಇನ್ನು ಸ್ವಲ್ಪ ಕಾಲಾವಕಾಶವನ್ನು ತೆಗೆದುಕೊಂಡು ಅದಕ್ಕೆ ಅವಕಾಶವನ್ನು ಕೊಡಬಹುದು ಅಥವಾ ಸಮಯವನ್ನು ನಂತರವಾದರೂ ನಿರ್ಧಾರ ಮಾಡಬಹುದು ಅದು ತಮಗೆ ಬಿಟ್ಟಿರತಕ್ಕಂತಹ ವಿಚಾರ

ಶ್ರೀ ಜೆ ಸಿ ಮಾಧುಸ್ವಾಮಿ ತಾವೇ decision ತೆಗೆದುಕೊಂಡು introduce ಮಾಡಿಬಿಡಿ ಸರ್ ಬಹಳ ಪ್ರಮುಖವಾದ ವಿಷಯ ಇದೆ ಇನ್ನು ಯಾವ ಬೇರೆ ವಿಷಯಗಳು ಇಲ್ಲಿ ಚರ್ಚೆಯಾಗುವುದಿಲ್ಲ

ಅಧ್ಯಕ್ಷರು ಮಾನ್ಯ ಪ್ರಕಾಶ್‌ರವರೇ, ತಾವು floor leaders ಎಲ್ಲ BAC ಯಲ್ಲಿ ಕುಳಿತು ಚರ್ಚೆ ಮಾಡಿ ಪ್ರಾಸಂಗಿಕವಾಗಿ ಯಾವ ತರಹ ಇರಬೇಕೆಂಬ ಬಗ್ಗೆ ಮಾತನಾಡಿ ಒಂದು ಸರ್ವಾನುಮತದಿಂದ ನಿರ್ಣಯ ತೆಗೆದುಕೊಳ್ಳುವುದು ಒಳ್ಳೆಯದು

ಶ್ರೀ ಎಸ್ ಸಿದ್ದರಾಮಯ್ಯ ನೀವೇ ಮೂವ್ ಮಾಡುತ್ತೀರಾ ಹೇಳಿ

ಅಧ್ಯಕ್ಷರು ಅದನ್ನೇ ನಾನು ಸರ್ಕಾರಕ್ಕೆ ಕೇಳುತ್ತಿದ್ದೇನೆ ಸರ್ಕಾರ ಏನಾದರೂ ಒಂದು ನಿರ್ಧಾರ ತೆಗೆದುಕೊಳ್ಳಲಿ

ಶ್ರೀ ಜೆ ಸಿ ಮಾಧುಸ್ವಾಮಿ ಇದಕ್ಕೆ BAC ಅವಶ್ಯಕತೆ ಇಲ್ಲ ಸರ್ಕಾರದವರೇ ಮೂವ್ ಮಾಡಲಿ ಈ ಸಭೆಯಲ್ಲಿ ಯಾರು ಮೂವ್ ಮಾಡುತ್ತಾರೆ ಎನ್ನುವುದು ಪ್ರಶ್ನೆ ಅಲ್ಲ ನಿರ್ಣಯ ಆಗಬೇಕು

ಶ್ರೀ ಎಸ್ ಸಿದ್ದರಾಮಯ್ಯ ನೀವು ನಿಯಮಾವಳಿಗಳನ್ನು ಬದಿಗಿಡಬೇಕಾಗುತ್ತದೆ ನೀವು ನಿಯಮಾವಳಿಗಳನ್ನು ಕೋಟ್ ಮಾಡಿಕೊಂಡು ಕುಳಿತುಕೊಳ್ಳುವುದಕ್ಕಾಗುವುದಿಲ್ಲ

ಶ್ರೀ ಮಲ್ಲಿಕಾರ್ಜುನ ಎಂ ಖರ್ಗೆ ತಾವು ಈ ಸದನದಲ್ಲಿ ರೂಲ್ಸ್ ಬದಿಗಿಟ್ಟು ನಿರ್ಣಯ ಮಂಡಿಸಬೇಕು ಬೇಕಾದರೆ ನೀವು ಸದನವನ್ನು 10 ನಿಮಿಷಗಳ ಕಾಲ adjourn ಮಾಡಿ ಅವರೇ draft ಮಾಡಲಿ ಇಲ್ಲವೆಂದರೆ ಎಲ್ಲರೂ ಸೇರಿ ಮಾಡೋಣ

ಅಧ್ಯಕ್ಷರು ಎಲ್ಲರೂ ಸೇರಿ draft ಮಾಡಿ ಮೂವ್ ಮಾಡುವುದು ಒಳ್ಳೆಯದು

ಶ್ರೀ ಎಸ್ ಸಿದ್ದರಾಮಯ್ಯ ಅವರೇ ಮೂವ್ ಮಾಡಲಿ ನಮ್ಮದೇನೂ ತಕರಾರಿಲ್ಲ ಆದರೆ ಅವರು ರೂಲ್ ಹಿಡಿದುಕೊಂಡು

ಕುಳಿತುಕೊಳ್ಳುವುದಕ್ಕಾಗುವುದಿಲ್ಲ ನೀವು ರೂಲ್ಸ್‌ನ್ನು ಬದಿಗಿಡಬೇಕು Rules are irrelevant in a matter like this ಅದನ್ನು ಬದಿಗೊತ್ತಿ ಮಾಡಿಸಿ You have got all the discretion, all the powers

ಶ್ರೀ ಮಲ್ಲಿಕಾರ್ಜುನ ಎಂ ಖರ್ಗೆ ನೀವು ಅಷ್ಟು ಮಾಡಿ ನೀವು K.R. ಪೇಟೆಗೆ ಹೋದಾಗ ಹೋದಾಗ ಜನ ಎಲ್ಲ ನಿಮಗೆ ತೊಂದರೆ ಕೊಡುತ್ತಾರೆ ಆ ಬರಗಾಲ ಪದೇಶದವರು ಬಂದು ಒತ್ತಾಯ ಮಾಡಿದರೂ ಕೂಡ ನೀರಾವರಿ ಇರುವವರು ಹೀಗೆ ಮಾಡಿದರು ಎಂದು ನಿಮ್ಮ ಮೇಲೆ ಆರೋಪ ಬರುತ್ತದೆ ನಿಮ್ಮ drafting ಚೆನ್ನಾಗಿ ಇರುತ್ತದೆ, ನೀವೇ ಮಾಡಿ

ಶ್ರೀ ಎಂ ಪಿ ಪ್ರಕಾಶ್ ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಕೊಟ್ಟಿರತಕ್ಕಂತಹ ಗೊತ್ತುವಳಿಯಲ್ಲಿ ಬಹಳ ಚೆನ್ನಾಗಿ draft ಮಾಡಿದ್ದಾರೆ ಅದರ ಬಗ್ಗೆ ಯಾರದೇ ಆಕ್ಷೇಪಣೆಗಳು ಇಲ್ಲ

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಅಧ್ಯಕ್ಷರೆ, ಹೋದ ತಿಂಗಳು 5ನೇ ತಾರೀಖು ತೀರ್ಪು ಬಂದಿತು ಇವತ್ತು 14ನೇ ತಾರೀಖು ಈ ಸದನದಲ್ಲಿ ಒಂದೇ ಸಮನೆ ಹೇಳುತ್ತಿದ್ದರೂ, ಈ ನಿರ್ಣಯವನ್ನು ಯಾರು ಮಂಡಿಸಬೇಕೆನ್ನುವುದರಲ್ಲಿಯೇ ನಾವು ಇನ್ನು ಚರ್ಚೆ ಮಾಡುತ್ತಿದ್ದೇವೆ

ಅಧ್ಯಕ್ಷರು ಮಾನ್ಯ ವಾಟಾಳ್ ನಾಗರಾಜ್‌ರವರು ಎಲ್ಲಾ ತರಹದ ಚಳುವಳಿಗಳನ್ನು ಮಾಡಿದ ನಂತರ ನಿರ್ಣಯ ಮಾಡೋಣ ಎಂದು ಅವರು

ಶ್ರೀ ವಾಟಾಳ್ ನಾಗರಾಜ್ ನಾನು ಮತ್ತೊಮ್ಮೆ ತಮ್ಮ ಮೂಲಕ ಹೇಳುತ್ತಿದ್ದೇನೆ ಈ ನಿರ್ಣಯವನ್ನು ಅಧಿಕೃತವಾಗಿ ಸರ್ಕಾರವೇ ಮಂಡಿಸಲಿ ನಾವು ಅನುಮೋದಿಸುತ್ತೇವೆ ಅದನ್ನು ಯಾವ ರೀತಿ ಮಂಡಿಸಬೇಕು, ಏನು ಎನ್ನುವುದರ ಬಗ್ಗೆ ಹೇಳಿ ನೀವು ಏನೇ ಹೇಳಿ ನನ್ನ ಸ್ಪಷ್ಟವಾದ ಅಭಿಪ್ರಾಯ `ತಿರಸ್ಕರಿಸಿದ್ದೇವೆ`ಎನ್ನುವ ಪದವನ್ನು ಹಾಕಲೇ ಬೇಕು "ನ್ಯಾಯ ಮಂಡಲಿಯ ತೀರ್ಪನ್ನು ತಿರಸ್ಕರಿಸಿದ್ದೇವೆ", ಎನ್ನುವುದು ಸ್ಪಷ್ಟ ಮತ್ತು ನೇರವಾಗಿ ಇರಲೇಬೇಕು ಆದ್ದರಿಂದ ಸರ್ಕಾರವೇ ಮಂಡಿಸಲಿ ಎಂದು ನಾನು ಹೇಳುತ್ತಿದ್ದೇನೆ

[illegible]

ಶ್ರೀ ವಾಟಾಳ್ ನಾಗರಾಜ್ ನಿರ್ಣಯ ಹೀಗೆಯೇ ಇರಬೇಕೆಂದು ನಾವು ಹೇಳಬೇಕು

ಶ್ರೀ ಜೆ ಸಿ ಮಾಧುಸ್ವಾಮಿ ತಾವು ಏನು ನಿರ್ಣಯ ಮಂಡಿಸುತ್ತೀರೋ ಮಂಡಿಸಿ, ನಂತರ ನಾವು ನಮ್ಮ ಅಭಿಪ್ರಾಯಗಳನ್ನು ಹೇಳುತ್ತೇವೆ ತಿರಸ್ಕರಿಸುತ್ತೇವೆ ಎನ್ನುವುದು ನಾವು ವೈಯಕ್ತಿಕವಾಗಿ ಒಪ್ಪುವುದಿಲ್ಲ ನೀವು ಹೇಗೆ ಮಂಡಿಸುತ್ತೀರೋ ಮಂಡಿಸಿ

ಶ್ರೀ ಎಂ ಪಿ ಪ್ರಕಾಶ್ ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ನಿರ್ಣಯವನ್ನು ಮಂಡಿಸಿರತಕ್ಕಂಥದ್ದರ ಬಗ್ಗೆ, ಅಥವಾ ಅದರಲ್ಲಿರುವ ಪದಗಳ ಬಗ್ಗೆ ಯಾವುದೇ ತರಹದ ಆಕ್ಷೇಪಣೆ ತೆಗೆಯುವಂಥದ್ದು ಏನೂ ಇಲ್ಲ ಸರ್ವ ಪಕ್ಷಗಳ ಸಭೆಯಲ್ಲಿ ಹೇಳಿದಂತಹ ವಿಚಾರಗಳನ್ನೇ ಅವರು ಪ್ರಸ್ತಾಪ ಮಾಡಿದ್ದಾರೆ ಆದರೆ ಅದು ಸರ್ಕಾರ ಮಾಡಬೇಕೇ ಅಥವಾ ತಾವು ಮಾಡಬೇಕೇ ಎನ್ನುವುದರ ಬಗ್ಗೆ ಅಲ್ಲಿ ಚರ್ಚೆ ಆಯಿತು ಎಂದು ತಮ್ಮಲ್ಲಿ ಅನುಸಂಗಿಕವಾಗಿ ಪ್ರಸ್ತಾಪ ಮಾಡಿದೆ ತಾವು ಕೂಡ ಇದನ್ನು ಜ್ಞಾಪಕ ಮಾಡಿ, ನೀವು ಮಾಡಿದರೆ ಒಳ್ಳೆಯದು ಎನ್ನತಕ್ಕಂಥದ್ದು ಕೂಡ ನಾನು ಎಲ್ಲರ ಜೊತೆ ಮಾತನಾಡಬೇಕಾಗುತ್ತದೆ ತಮ್ಮ ಜೊತೆಯಲ್ಲಿ ಮಾತನಾಡಿ ಅದನ್ನು draft ಮಾಡಬೇಕಾದ ಅಗತ್ಯ ಏನೂ ಇಲ್ಲವೆಂದು ನಾನು ಅಂದುಕೊಂಡಿದ್ದೇನೆ ಆದ್ದರಿಂದ ದಯವಿಟ್ಟು ಒಂದು ಅರ್ಧ ಗಂಟೆಯೋ ಒಂದು ಗಂಟೆಯೋ ಸದನವನ್ನು ಮುಂದೂಡಿ, ಚರ್ಚೆ ಮಾಡಿದ ನಂತರ ಮಾಡಿ ಅಥವಾ ಊಟದ ವಿರಾಮದ ನಂತರವಾದರೂ ಮಾಡಿ

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ ಸದನವನ್ನು 10 ನಿಮಿಷಗಳ ಕಾಲ adjourn ಮಾಡಿ ಮತ್ತೆ ಸೇರೋಣ ಏನಾಗುತ್ತದೆ, the message will go that the Assembly is for that. That is our concern.

ಅಧ್ಯಕ್ಷರು ಈ ಸದನವನ್ನು 2 00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ

(ಸದನವು 12 00 ಗಂಟೆ 26 ನಿಮಿಷಕ್ಕೆ ಮುಕ್ತಾಯವಾಗಿ ಪುನ 2 00 ಗಂಟೆಗೆ ಸೇರುವಂತೆ ನಿರ್ಧರಿಸಿತು)

(ಮಧ್ಯಾಹ್ನ 3–00 ಗಂಟೆಗೆ ಸದನವು ಸಮಾವೇಶಗೊಂಡಾಗ ಸನ್ಮಾನ್ಯ ಸಭಾಧ್ಯಕ್ಷರು ಪೀಠವನ್ನಲಂಕರಿಸಿದ್ದರು)

ಅಧ್ಯಕ್ಷರು ಈಗ ಕಾವೇರಿ ಸಮಸ್ಯೆಯ ಬಗ್ಗೆ ಚರ್ಚೆ ಮಾನ್ಯ ವಿರೋಧ ಪಕ್ಷದ ನಾಯಕರು

ಶ್ರೀ ಎನ್ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) ಮಾನ್ಯ ಅಧ್ಯಕ್ಷರೇ, ರಾಜ್ಯದ ಅತೀ ಮುಖ್ಯವಾದ ನದಿ ಕಾವೇರಿ ಕಾವೇರಿ ತೀರ್ಪು ಬಂದ ನಂತರ ಕರ್ನಾಟಕ ರಾಜ್ಯದಲ್ಲಿ 38 ದಿವಸಗಳ ಕಾಲ ಸಾಕಷ್ಟು ಪ್ರತಿಭಟನೆಗಳಾಗಿವೆ ಈ ನಾಡಿನ ಜನತೆ ಕೂಡ ಮೊಟ್ಟಮೊದಲಿಗೆ ಒಕ್ಕೊರಲಿನಿಂದ ಕಾವೇರಿ ಜಲಾನಯನ ಪ್ರದೇಶಗಳಲ್ಲಿರತಕ್ಕಂಥ ಜನರಿಗೆ ತೀರ್ಪಿನಿಂದ ಏನು ತೊಂದರೆಯಾಗಿದೆ, ಅದರ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಮಾಡಿದ್ದಾರೆ ನಮ್ಮ ಹಿರಿಯ ನಾಯಕರಾದ ಶ್ರೀ ಸಿದ್ದರಾಮಯ್ಯನವರು ಕೂಡ ಮೈಸೂರು ಜಿಲ್ಲೆಗೆ ಸಂಬಂಧಪಟ್ಟವರು ತಾವು ಕೂಡ ಮಂಡ್ಯ ಜಿಲ್ಲೆಗೆ ಸಂಬಂಧಪಟ್ಟವರು ಆ ಭಾಗದಲ್ಲಿರತಕ್ಕಂಥ ಜನರ ಅಳಲು ಏನು ಇದೆ, ಅದರ ಬಗ್ಗೆ ಈ ನಾಡಿನ ರೈತರು ಸಾಕಷ್ಟು ಹೋರಾಟಗಳನ್ನು ಮಾಡಿದ್ದಾರೆ ವಿಶೇಷವಾಗಿ, ಈ ತೀರ್ಪು ಮರಣಶಾಸನ ಎಂದು ಅಭಿಪ್ರಾಯಪಟ್ಟಿರುತ್ತಾರೆ ಈಗ ಲೋಕಸಭೆ ನಡೆಯುತ್ತಿದೆ ಅಲ್ಲಿಯೂ ಕೂಡ ಎಲ್ಲಾ ಪಕ್ಷಕ್ಕೆ ಸೇರಿದಂಥ ಸಂಸದರು ಇದಕ್ಕೆ ಯಾವ ರೀತಿ ಪರಿಹಾರ ಕಂಡುಹಿಡಿಯಬೇಕೆಂದು ಮಾತನಾಡಿದ್ದಾರೆ ನಿನ್ನೆಯೂ ಕೂಡ ಕರ್ನಾಟಕಕ್ಕೆ ಸೇರಿದ ಸಂಸದರು ಮಾನ್ಯ ಪ್ರಧಾನ ಮಂತ್ರಿಗಳಿಗೆ ಮನವಿ ಮಾಡಿಕೊಂಡಿದ್ದಾರೆ ಒಂದು ಸಂತೋಷದ ವಿಷಯ ಏನೆಂದರೆ, ತೀರ್ಪು ಬಂದ ಮರುದಿವಸ ನೀರಾವರಿ ಇಲಾಖೆಗೆ ಸಂಬಂಧಪಟ್ಟಂತಹ ಕೇಂದ್ರದ ಮಾನ್ಯ ಮಂತ್ರಿಗಳಾದ ಸೋಜ್‌ರವರು ಮದ್ರಾಸ್‌ನಲ್ಲಿದ್ದರು ಅಲ್ಲಿ ಅವರು ಏನು ಹೇಳಿದರು ಎಂದರೆ, ಇನ್ನು ಒಂದು ವರ್ಷಗಳ ಕಾಲ ನಾವು ಇದರ ಬಗ್ಗೆ Gazette Notification ಮಾಡುವುದಿಲ್ಲವೆನ್ನುವ ಮಾತನ್ನು ಹೇಳಿದ್ದಾರೆ This is an emotional issue 1892, 1924 ರಿಂದ ಮತ್ತು ಸತತವಾಗಿ ನೂರಾರು ವರ್ಷಗಳಿಂದ ಕಾವೇರಿ ನೀರನ ಬಗ್ಗೆ ತಮಿಳುನಾಡು ಮತ್ತು ಕರ್ನಾಟಕ ರಾಜ್ಯಗಳ ನಡುವೆ ಏನು ವಿವಾದ ಇದೆ, ಇದರ ಬಗ್ಗೆ ನಮಗೆ ನ್ಯಾಯಬೇಕೆಂದು ಪ್ರತಿಪಾದನೆ ಮಾಡಿದ್ದೇವೆ ಎಲ್ಲಾ ಹಂತದಲ್ಲೂ ಕೂಡ ನಾವು ಚರ್ಚೆ ಮಾಡಿದ್ದೇವೆ ಒಂದು ಮಾತು ಹೇಳುವುದಾದರೆ, ನಾನು ಮುಖ್ಯಮಂತ್ರಿಯಾಗಿದ್ದಾಗ ಒಂದು ದಿನ ಪ್ರಧಾನ ಮಂತ್ರಿಗಳು ಫೋನು

ಮಾಡಿದರು ಅವತ್ತು ತಮಿಳು ನಾಡಿಗೆ ನೀರು ಬಿಡಬೇಕಾಗಿತ್ತು ಆ ದಿವಸ ನಾನು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮತ್ತು ಸಿದ್ದರಾಮಯ್ಯನವರು ಹಾಗೂ ತಾವು ಕೂಡ ಇದ್ದೀರಿ ಏನು ಮಾಡಬೇಕೆಂದು ಯೋಚಿಸುತ್ತಿರುವಂಥ ಸಂದರ್ಭದಲ್ಲಿ ಆ ದಿವಸ ಮಳೆ ಬಂತು, ವರುಣನ ಕೃಪೆಯಿಂದ ನಾವು ನೀರು ಬಿಡಲಾರದೇ ಹೋದರೂ ಕೂಡ ಕಬಿನಿಯಿಂದ ಹಾಗೂ ಕೆಆರ್‌ಎಸ್ ನಿಂದ ಸಾಕಷ್ಟು ನೀರು ಹರಿದು ಹೋಯಿತು ಆದು ಒಂದು ಸಂದರ್ಭದಲ್ಲಿ ಆಗತಕ್ಕಂಥ ವಿಷಯ ಆಗ ಯಾವ ತರಹದ ಅಹಿತಕರವಾದ ಘಟನೆ ನಡೆದಿಲ್ಲ ಇವತ್ತು ಏನಾಗಿದೆ, ಮೊನ್ನೆ ನಾನು ಬೇರೆ ಕಾರ್ಯಕ್ರಮ ನಿಮಿತ್ತ ಮದ್ರಾಸ್‌ಗೆ ಹೋಗಿದ್ದೆ ಆ ಸಂದರ್ಭದಲ್ಲಿ, ತಾವು ವಿರೋಧ ಪಕ್ಷದ ನಾಯಕರಿದ್ದೀರಿ, ಮುಖ್ಯಮಂತ್ರಿಗಳಾಗಿ ಕೆಲಸ ಮಾಡಿದ್ದೀರಿ, ಇದರ ಬಗ್ಗೆ ನಿಮ್ಮ ಅಭಿಪ್ರಾಯ ಏನೆಂದು ಕೇಳಿದಾಗ ನಾನು ಏನು ಹೇಳಿದೆ, "ಅದು verdict ಏನು ಇದೆ, it is against the wishes of the people of the State. In this issue we are one" ಏಕೆಂದರೆ, ಇದರಲ್ಲಿ ನಾವೆಂದು ರಾಜಕಾರಣ ಮಾಡತಕ್ಕಂಥದ್ದು ಕಲಿತಿಲ್ಲ ಹೀಗಾಗಿ ರಾಜಕಾರಣ ಮಾಡುವುದಕ್ಕೆ ಹೋಗುವುದಿಲ್ಲವೆಂದು ಹೇಳಿದೆ ಇವತ್ತು ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಒಂದು ಮಾತನ್ನು ಹೇಳುತ್ತಿದ್ದೇನೆ ನಿಮಗೆ ಎಲ್ಲಾ ರಾಜಕೀಯ ಪಕ್ಷಗಳ, ಸಂಘ ಸಂಸ್ಥೆಗಳ, ಕನ್ನಡ ನಾಡಿನ ಬಗ್ಗೆ ಗೌರವವಿರುವ ಸಂಘಟನೆಗಳು ಏನು ಇವೆ ಆ ಎಲ್ಲಾ ಸಂಘಟನೆಗಳು ಜೊತೆಗೆ ಮಾನ್ಯ ವಾಟಾಳ್ ನಾಗರಾಜ್ ರವರು ದೆಹಲಿಗೆ ಹೋಗಿ ಅಲ್ಲಿಯೂ ಕೂಡ ಕರ್ನಾಟಕದ ಕೂಗನ್ನು ತಲುಪಿಸತಕ್ಕಂಥ ಕೆಲಸವನ್ನು ಮಾಡಿ ಬಂದಿದ್ದಾರೆ ಬಹಳಷ್ಟು ವೇದಿಕೆಗಳು ಕೂಡ ದೆಹಲಿಗೆ ಹೋಗುತ್ತಿವೆ ನನಗೆ ಅನ್ನಿಸುತ್ತಿದೆ, ಕಾವೇರಿ ಸಮಸ್ಯೆ ಬಗ್ಗೆ ಮೊಟ್ಟಮೊದಲಬಾರಿಗೆ ರಾಷ್ಟ್ರಮಟ್ಟದಲ್ಲಿ ಅನ್ಯಾಯವಾಗಿದೆ ಎನ್ನತಕ್ಕಂಥ ಒಂದು ಅನಿಸಿಕೆ ಎಲ್ಲರ ಬಾಯಲ್ಲಿ ಬರುತ್ತಿದೆ ಮಾನ್ಯ ಮುಖ್ಯಮಂತ್ರಿಗಳು ಒಂದು ಸಾರಿ ಪೂರ್ವಭಾವಿಯಾಗಿ ಒಂದು ಸಭೆಯನ್ನು ಕರೆಸಿದ್ದರು "ತೀರ್ಪು ಬರುವುದಕ್ಕೆ ಎರಡು ದಿವಸ ಇದೆ ಈಗಲೇ ಏಕೆ ಕರೆಸುತ್ತಿದ್ದೀರಿ, ತಮಗೆ ಏನಾದರೂ ಸುಳಿವು ಸಿಕ್ಕಿದೆಯೇ" ಎಂದು ಕೇಳಿದೆವು ಈಗ ಅವರು ಮುಖ್ಯಮಂತ್ರಿಗಳು ಇದ್ದಾರೆ We are all public representatives ಜನಾಭಿಪ್ರಾಯವನ್ನು ಯಾವಾಗಲೂ ಕೂಡ ಬಹಳ

ಪ್ರಾಮಾಣೀಕತೆಯಿಂದ ಸ್ಪಷ್ಟತೆಯಿಂದ ಮಾಡಬೇಕಾಗುತ್ತದೆ ಇಲ್ಲಾ, we are anticipating the situation, ಏನಾಗುತ್ತದೆ ನೋಡೋಣ" ಎಂದರು ತೀರ್ಪು ಬಂದ ನಂತರ ಸಭೆಯಾಯಿತು ಅಗಲೂ ಕೂಡ ನಾವು ಆ ತೀರ್ಪಿನ ಪ್ರತಿಯನ್ನು ನಮಗೆ ಕೊಡಬೇಕು ಯಾವ್ಯಾವ ಹಂತದಲ್ಲಿ ಏನೇನು ಆಗಿದೆ ಎಂದು ಕೇಳಿದ್ದಕ್ಕೆ ಅವರು ಕೂಡ ಎಲ್ಲಾ, ರಾಜ್ಯದ ವಿರೋಧ ಪಕ್ಷದ ನಾಯಕರುಗಳಿಗೆ ಮತ್ತು ಸದಸ್ಯರುಗಳಿಗೆ, ವಿಶೇಷವಾಗಿ ಕಾವೇರಿ ಜಲಾನಯನ ಪ್ರದೇಶದ ಜನರಿಗೆ ಕೂಡ ತೀರ್ಪಿನ ಪ್ರತಿಗಳನ್ನು ಕೊಟ್ಟಿದ್ದಾರೆ ಮತ್ತೊಂದು ಸಭೆಯಾಯಿತು ಆ ಸಭೆಯಲ್ಲೂ ಕೂಡ ನ್ಯಾಯಂಗದವರು ಅಂದರೆ, ಜವಳಿಯವರು ಇದ್ದಾರೆ, ಕಾತರಕಿ ಯವರು ಇದ್ದಾರೆ, ನಾರಿಮನ್ ರವರು ಇದ್ದಾರೆ, ನಮ್ಮ Advocate General ರವರು ಕೂಡ ಇದ್ದಾರೆ, ಒಂದು ಅಭಿಪ್ರಾಯ ಬರುವ ರೀತಿಯಲ್ಲಿ ಮಾತನಾಡಿದ್ದಾರೆ ಈಗಾಗಲೇ ಒಂದು ಸಭೆಯಾಗಿದೆ ಅದರ ಬಗ್ಗೆ ನಾನು ಇವತ್ತಿನ ದಿವಸ ಕಾಮೆಂಟ್ ಮಾಡಲಿಕ್ಕೆ ಹೋಗುವುದಿಲ್ಲ ಇದರ ಆಗು–ಹೋಗುಗಳ ಬಗ್ಗೆ ನಮ್ಮ ಮೇಲೆ ಹೆಚ್ಚಿನ ಜವಾಬ್ದಾರಿ ಇದೆ You are the Chief Minister of this State You are answerable to the people of Karnataka State not the bureaucrats ಅದಕ್ಕೆ, ಅಧಿಕಾರಿಗಳು ಏಕೆ ಈ ರೀತಿಯ ಅಭಿಪ್ರಾಯ ವ್ಯಕ್ತ ಮಾಡುತ್ತಿದ್ದಾರೆ, ಎಂದು ನಾವು ಹೇಳಿದ್ದೇವೆ ಅದನ್ನು ತಾವು ಮೊದಲು ಹೇಳಬೇಕಾಗಿತ್ತು ಅದರೆ ಅವರು ತಮಗಿಂತಲೂ ಮೊದಲೇ ಹೇಳಿದ್ದಾರೆ, ಅವರು ಕೂಡ ವಕೀಲರು ಹೇಳಿರಬಹುದೆಂದು ಹೇಳಿದರು ನಾರಿಮನ್ ರವರು ಒಬ್ಬ international level ನಲ್ಲಿ ಕೆಲಸ ಮಾಡತಕ್ಕಂಥವರು, ಅವರ ಬಗ್ಗೆ ನಮಗೆ ಗೌರವ ಇದೆ ನಾವು ಕೂಡ ಗಾಂಧಿ ಫೌಂಡೇಷನ್ ನಲ್ಲಾಗಲಿ, ಕಾವೇರಿಯಲ್ಲಾಗಿರುವಂಥ ವಿಷಯಗಳಲ್ಲೇ ಆಗಲಿ, ನಾನು ಅವರನ್ನು ಭೇಟಿಯಾದಾಗ ಅವರು ಸ್ವಲ್ಪ ಸಂತೋಷದಲ್ಲಿದ್ದರು, ಆದರೂ ಕೂಡ I persuaded Nariman, ನೀವು ಇಲ್ಲಿಯವರೆಗೆ ಕರ್ನಾಟಕದ ಬಗ್ಗೆ ವಾದ ಮಾಡಿದ್ದೀರಿ ಎಂದು ಹೇಳಿದೆವು He is very prominent. ಅದರ ಬಗ್ಗೆ ನನ್ನದು ಏನು ಕಾಮೆಂಟ್ ಇಲ್ಲ ನನ್ನ ಕಾಮೆಂಟ್ ಏನು ಎಂದರೆ, ಶಾಸನ ಸಭೆ ನಡೆಯತಕ್ಕಂಥ ಕಾಲದಲ್ಲಿ ಇವತ್ತು ಏನೇನು ಅನ್ಯಾಯವಾಗುತ್ತಿದೆನ್ನುವ ಬಗ್ಗೆ ನಾವು ಹೇಳುವುದರ ಜೊತೆಗೆ ಮಾನ್ಯ ಮುಖ್ಯಮಂತ್ರಿಗಳು ಕೂಡ ನಮ್ಮ ರಾಜ್ಯದ ಐದು ಕೋಟಿ ನಲವತ್ತೆಂಟು ಲಕ್ಷ ಜನರ

ಪತಿನಿಧಿಗಳಾಗಿದ್ದಾರೆ ಕಾವೇರಿ ಜಲಾನಯನ ಪ್ರದೇಶದಲ್ಲಿ ಇದು ಮರಣಶಾಸನವಾಗಿದೆ ಎನ್ನುವ ರೀತಿಯಲ್ಲಿ ಅಲ್ಲಿ ಏನು ಪ್ರತಿಭಟನೆಗಳು ನಡೆಯುತ್ತಿವೆ, ಅದು ಬಹಳ ದೊಡ್ಡ ವಿಷಯ ಇದರಿಂದಾಗಿ ರೈತರಿಗೆ ಬಹಳ ತೊಂದರೆಯಾಗುತ್ತದೆ ಇದೇ ರೀತಿಯಾದರೆ ರೈತರು ತಮ್ಮ ಜೀವನವನ್ನು ಹೇಗೆ ಸಾಗಿಸಬೇಕೆಂದು ಅವರು ಯೋಚಿಸುತ್ತಿದ್ದಾರೆ ವಕೀಲರುಗಳು ಕೂಡ ಬೇರೆ ಕಡೆಗೆ ಅದರ ಬಗ್ಗೆ ಅಭಿಪ್ರಾಯ ವ್ಯಕ್ತ ಮಾಡಬಹುದು ಎನ್ನುವ ರೀತಿಯಲ್ಲಿ ಚರ್ಚೆ ಆಯಿತು ಆಗ ತಾವು ಹೇಳಿದಿರಿ, ಇದು ನಮ್ಮ ರಾಜ್ಯದ ಅಭಿಪ್ರಾಯವಲ್ಲ, ನಮ್ಮ ಸರಕಾರದ ಅಭಿಪ್ರಾಯ ಅಲ್ಲವೆಂದು ಹೇಳಿದ್ದಕ್ಕೆ ನಾವು ಕೂಡ ಆ ವಿಚಾರ ಅಷ್ಟಕ್ಕೆ ಬಿಟ್ಟಿದ್ದೇವೆ ಆದರೆ ಅವರೆಲ್ಲರಿಗೂ ಕೂಡ ತಿಳಿಯಬೇಕು ಬೇಕಾದಷ್ಟು ಕಾನೂನು ಪಂಡಿತರು ಇದ್ದರೂ ಕೂಡ democratic setup ನಲ್ಲಿ ಪ್ರಜಾಭುತ್ವದಲ್ಲಿ ಪ್ರಜಾಪ್ರತಿನಿಧಿಗಳ ಅನಿಸಿಕೆ ಏನು ಇದೆ, ನಾವೆಲ್ಲರೂ ಸುಮ್ಮನೆ ಪ್ರಸ್ತಾಪ ಮಾಡಲಿಕ್ಕೆ ನಿಂತಿಲ್ಲ ನಾವು ಯಾವಾಗಲೂ ಕೂಡ ಗಲಾಟೆಯ ಮೂಲಕ ಏನಾದರೂ ಸಾಧಿಸಬಹುದು ಎನ್ನುವುದರ ಬಗ್ಗೆ ಕೂಡ ನಮಗೆ ವಿಶ್ವಾಸವಿಲ್ಲ ಎಲ್ಲಿ ನಮಗೆ ಮೂಲಭೂತವಾಗಿ ತೊಂದರೆ ಬರುತ್ತದೆ ಎಲ್ಲಿ ನಮ್ಮ ರಕ್ಷಣೆಗೆ ಬರುವುದಿಲ್ಲ ಅಲ್ಲಿ ನಾವು ವಿರೋಧ ಮಾಡುತ್ತೇವೆ ನಿನ್ನೆ ಲೋಕಸಭೆಯಲ್ಲಿ ಏನಾಯಿತು? ನಿನ್ನೆ ಲೋಕಸಭೆಯಲ್ಲಿ ಯುಪಿಎ ದಲ್ಲಿ ಬೆಂಗಾಲ್ ಮತ್ತು ಡಿಎಂಕೆ ಯವರು ಯಾವ ರೀತಿಯಾಗಿ ವರ್ತಿಸಿದರು ಎಂಬುದು ಇದೆ ಅವರು ವರ್ತಿಸಿದ ರೀತಿಯಲ್ಲಿ They are all the stalwarts ಪಶ್ಚಿಮ ಬಂಗಾಳದಿಂದ ಬಂದಂಥ ಸಾಕಷ್ಟು ಜನರು ಆ ರಾಜ್ಯಕ್ಕೆ ಮನ ಪೂರ್ವಕವಾಗಿ ಕೆಲಸ ಮಾಡಿದ್ದಾರೆ ಡಿಎಂಕೆ ಯವರು ಕೂಡ ಕೆಲಸ ಮಾಡಿದ್ದಾರೆ ಅದರೆ ಯಾವಾಗ ಅವರ ಭಾವನೆಗಳಿಗೆ ವಿರುದ್ಧವಾಗುತ್ತದೆ ಆಗ that will force them to take a decision ಇವೆಲ್ಲಾ ಅಗುತ್ತದೆ ಏನೋ ಬಂದೆವು ನಿಮಗೆಲ್ಲ ಮಾಡಿದೆವು ಎನ್ನುವ ರೀತಿಯಲ್ಲಿ ಸದನದಲ್ಲಿ ಪ್ರಸ್ತಾಪವಾಗುತ್ತದೆ, ಇಂಥ ಘಟನೆಗಳು ಹಿಂದೆ ಯಾವ ರೀತಿಯಾಗಿದೆ ಅದನ್ನು ಕೂಡ ನಾವು ಹೇಳಿದ್ದೇವೆ ಈ ದಿನ ನಮಗೆ ಏನಾಗಿದೆ, ವಿಶೇಷ ಆಧಿವೇಶನ 16ನೇ ತಾರೀಖು ಬಜೆಟ್ ಮಂಡನೆ ಈಗಾಗಲೇ ಮಾನ್ಯ ಯಡಿಯೂರಪ್ಪನವರು ಪ್ರಿಂಟ್ ಮಾಡಿ ಆ ಪ್ರತಿಗಳನ್ನು ಯಾವಾಗ ಕೊಡಬೇಕೆಂದು ಬಹಳ ಆತುರದಲ್ಲಿದ್ದಾರೆ ಅವರು ಬರುತ್ತಾರೆ ಹೋಗುತ್ತಾರೆ ಅವರು ಬರಲಿ 16ನೇ

ತಾರೀಕು ಕೊಡಲಿ 16ನೇ ತಾರೀಕು ಬಜೆಟ್ ಮಂಡಣೆಯಾದ ಮೇಲೆ, ರಾಜ್ಯದ ಜನತೆಗೆ ಎಷ್ಟು ಕೊಡುತ್ತಾರೆ, ಹೇಗೆ ಅದು ಆಗುತ್ತದೆ ಎನ್ನತಕ್ಕಂಥದ್ದರ, ಬಗ್ಗೆ ನಂತರ ವಿಚಾರ ಮಾಡೋಣ ಇವತ್ತು ಎರಡು ದಿವಸಗಳ ಕಾಲ ವಿಶೇಷ ಅಧಿವೇಶನ ಕರೆದು, ತಾವು ಬಿಲ್‌ಗಳನ್ನು ಮಂಡಿಸಿ ಅದರ ಮೇಲೆ ಚರ್ಚೆ ಮಾಡತಕ್ಕಂಥದ್ದು ಸರಿಯಲ್ಲ ಅದಕ್ಕಾಗಿ ಸಂಸದೀಯ ವ್ಯವಹಾರಗಳ ಮಂತ್ರಿಗಳು ಇದ್ದಾರೆ, ನಾವು ಮತ್ತು ಮಾನ್ಯ ಸಿದ್ದರಾಮಯ್ಯನವರು ನಮ್ಮ ಎಲ್ಲಾ ನಾಯಕರುಗಳು ಹೇಳಿದ ಮೇಲೆ ಇವತ್ತು ತಾವು ಸಭೆಯನ್ನು ಕರೆದಿದ್ದೀರಿ, ಸಭೆಯನ್ನು ಕರೆದು ಬಿಲ್ಲುಗಳನ್ನು ತೆಗೆದುಕೊಳ್ಳುವ ಮೊದಲು ಕಾವೇರಿಯ ಬಗ್ಗೆ ಚರ್ಚೆಯಾಗಬೇಕು, ಇದರ ಬಗ್ಗೆ ಒಂದು ತೀರ್ಮಾನವಾಗಬೇಕು ನರಸಿಂಹರಾವ್‌ರವರು ಭಾರತದ ಪ್ರಧಾನ ಮಂತ್ರಿಗಳಾಗಿದ್ದರು ಮಾನ್ಯ ಬಂಗಾರಪ್ಪನವರು ರಾಜ್ಯದ ಮುಖ್ಯಮಂತ್ರಿಗಳಾಗಿದ್ದರು ಆಗ ನಾನು ಗೃಹಸಚಿವನಾಗಿದ್ದೆ, ನಮ್ಮ ಮಾನ್ಯ ವಾಟಾಳ್ ನಾಗರಾಜ್‌ರವರಿಗೆ ಗೊತ್ತಿರಬಹುದು, ಅಂತಹ ದಿವಸಗಳನ್ನು ಅವರು ಜೀವನದಲ್ಲಿ ನೋಡುವುದಕ್ಕಾಗುವುದಿಲ್ಲ ಇವತ್ತು ಎಲ್ಲರೂ ಒಗ್ಗಟ್ಟಾಗಿ, ಇವತ್ತು ತಮಿಳುನಾಡಿನಲ್ಲಿ ಯಾವ ತರಹ ಪ್ರತಿಭಟನೆಗಳು, ಆಕ್ರೋಶ, ಭಾವನೆಗಳನ್ನು ಯಾವ ರೀತಿಯಾಗಿ ವ್ಯಕ್ತ ಮಾಡುತ್ತಿದ್ದಾರೆ, ಅದೇ ಪ್ರಕಾರವಾಗಿ ಮೊಟ್ಟಮೊದಲನೆಯದಾಗಿ ಆ ಕಾಲದಲ್ಲಿ ನಾವು ಮಾಡಿದ್ದೆವು ಆಗ ಪ್ರಧಾನ ಮಂತ್ರಿಗಳಾದ ನರಸಿಂಹರಾವ್‌ರವರಿಗೆ ಹೇಳಿದ್ದೆವು, ರಾಜ್ಯದ ಮೇಲೆ ಇವತ್ತು ಅನ್ಯಾಯವಾದಂತಹ ಸಮಯದಲ್ಲಿ ನಾವು ಸುಮ್ಮನೆ ಕೂರುವುದಿಲ್ಲವೆನ್ನುವಂತಹ ಮಾತನ್ನು ಹೇಳಬೇಕಾಗುತ್ತದೆ ಮಾನ್ಯ ದೇವೇಗೌಡರು ಈ ದೇಶದ ಪ್ರಧಾನಮಂತ್ರಿಗಳು ಹಾಗೂ ಈ ರಾಜ್ಯದ ಮುಖ್ಯಮಂತ್ರಿಗಳಾಗಿದ್ದರು ಇವರು ಮುಖ್ಯಮಂತ್ರಿಗಳಾಗಿದ್ದಾಗ ನರಸಿಂಹರಾವ್‌ರವರು ಪ್ರಧಾನಮಂತ್ರಿಗಳಾಗಿದ್ದರು ಆಗಲೂ ಕೂಡ ನೀರು ಬಿಡುವ ರೀತಿಯಲ್ಲಿ, ಆಗ ಸದನವು ನಡೆಯುತ್ತಿತ್ತು ಸದನವು ನಡೆಯುವಂತಹ ಕಾಲದಲ್ಲಿ ಇವತ್ತು ನಾವು ನೀರನ್ನು ಬಿಡಬೇಕಾಗಿದೆ, ನೀರನ್ನು ಬಿಟ್ಟಿದ್ದೇವೆಂಬ ಮಾತನ್ನು ಹೇಳಿದರು ಇದು ಬಹಳಷ್ಟು ವರ್ಷಗಳ ಘಟನೆಗಳನ್ನು ಉದ್ದರಿಸಿ ಹೇಳಿದರೆ ಅದು ಬಹಳಷ್ಟಾಗುತ್ತದೆ ಇವತ್ತಿನ ತೀರ್ಪಿನಿಂದ ನಮಗೆ ಬಹಳ ಅನ್ಯಾಯವಾಗಿದೆ ಅನ್ಯಾಯವಾಗುವಂತಹ ತೀರ್ಪಿಗೆ ಸಾರ್ವಜನಿಕವಾಗಿ ಹೊರಗಡೆ ಪ್ರತಿಭಟನೆಯು ನಡೆಯುತ್ತಿರುವುದು ಇವತ್ತು ಸಂಘ ಸಂಸ್ಥೆಗಳು ಪ್ರತಿಭಟನೆಯನ್ನು ಮಾಡುತ್ತಿರುವುದು, ಅಖಿಲ

ಕರ್ನಾಟಕ ರಕ್ಷಣಾವೇದಿಕೆಯವರು ಮಾಡುತ್ತಿರುವುದು, ಅದು ಬೇರೆಯಾಗಿದೆ ಈ ಸದನ, ಈ ರಾಜ್ಯದ ಜನರ ಪ್ರತಿನಿಧಿಗಳ ಸಭೆಯಾಗಿದೆ ಈ ಸದನದಲ್ಲಿ ಇವತ್ತಿನ ದಿವಸ ನಮ್ಮ ಅಭಿಪ್ರಾಯಗಳು ಏನಿದೆ, ನಮಗೆ ಅನ್ಯಾಯವಾಗಿದೆ ಎಂಬ ರೀತಿಯಲ್ಲಿ ಇವತ್ತಿನ ದಿವಸ ನಾವು ಒಂದು ರೆಸ್ಯೂಲ್ಯೂಷನ್ ಆಗಲಿ, ಇದರ ಬಗ್ಗೆ ಅಭಿಪ್ರಾಯಗಳನ್ನು ಸಂಗಹಿಸಿ ಯಾವ ತರಹವಾಗಿ, ಕೊನೆಯದಾಗಿ ಒಂದು ರೆಸ್ಯೂಲ್ಯೂಷನ್ ಆಗಬೇಕು ಎಂದು ತೀರ್ಮಾನಿಸಬೇಕು ಮಾನ್ಯ ಮುಖ್ಯಮಂತ್ರಿಗಳು ಕೂಡ ಸದನದಲ್ಲಿದ್ದಾರೆ, ನಮ್ಮ ಮಾನ್ಯ ಎಂ ಪಿ ಪ್ರಕಾಶ್‌ರವರು ಸಂಸದೀಯ ಪಟುಗಳು ಹಾಗೂ ಹಿರಿಯರಾಗಿದ್ದಾರೆ, ಇದು ತಮ್ಮ ಅಧ್ಯಕ್ಷತೆಯಲ್ಲಿ ಆಗಬೇಕು ಏಕೆ ತಮ್ಮ ಅಧ್ಯಕ್ಷತೆಯಲ್ಲಿ ಆಗಬೇಕೆಂದರೆ, ತಾವು ಆ ಭಾಗದಿಂದ ಆರಿಸಿ ಬಂದಿದ್ದೀರಿ ಇವತ್ತು ಯಾವ ಭಾಗದಲ್ಲಿ ಉರಿಯುತ್ತಿದೆ, ಯಾವ ಭಾಗದಲ್ಲಿ ಮಾನ್ಯ ಮಾದೇಗೌಡರ ನೇತೃತ್ವದಲ್ಲಿ ಚಡ್ಡಿ ಚಳುವಳಿಯು ಕೂಡ ಅಯಿತು ಇವೆಲ್ಲವನ್ನು ಕೂಡ ನಾವು ಮಾಜಿ ಮುಖ್ಯಮಂತ್ರಿಗಳಾದ ಶ್ರೀ ದೇವರಾಜ ಅರಸರ ಕಾಲದಿಂದಲೂ ಕೂಡ ನಾವು ನೋಡಿಕೊಂಡು ಬಂದಿದ್ದೇವೆ ಆ ಒಂದು ಭಾಗದಿಂದ ರೈತರಿಗೆ ಏನು ಅನ್ಯಾಯವಾಗಿದೆ, ತಾವು ಆ ಭಾಗದಿಂದ ಬಂದವರಾಗಿದ್ದು ಇವತ್ತು ಅಧ್ಯಕ್ಷ ಪೀಠದಲ್ಲಿ ಕುಳಿತಿದ್ದೀರಿ ತಾವು ಈ ಸದನದ ಅಧ್ಯಕ್ಷರಾಗಿದ್ದೀರಿ ಅದಕ್ಕಾಗಿ ಇವತ್ತಿನ ದಿವಸ ಐತಿಹಾಸಿಕವಾದಂತಹ ನಿರ್ಣಯ ಆಗಬೇಕು, ಸರ್ವಪಕ್ಷಗಳ ಸಭೆಯಲ್ಲಿ Irrigation expert opinionಯನ್ನು ತೆಗೆದುಕೊಳ್ಳಬೇಕು Legal expert opinionನ್ನು ಸಹ ತೆಗೆದುಕೊಳ್ಳಬೇಕು ಅವರ ಮಾದರಿಯಲ್ಲಿ ಮಾಡಬೇಕೆಂದು ಅವತ್ತು ನಾವು ಎಲ್ಲಾ ಮತಬೇಧಗಳನ್ನು ಮರೆತು ಅಭಿಪ್ರಾಯ ವ್ಯಕ್ತಮಾಡಿದ್ದೇವೆ ಇವತ್ತಿನ ದಿವಸ, ನಮ್ಮ ಮಾನ್ಯ ಎಂ ಪಿ ಪ್ರಕಾಶ್ ರವರಿಗೆ ಗೊತ್ತು, ಅವರು ಮತ್ತು ಮುಖ್ಯಮಂತ್ರಿಗಳು ನಾವು ಒಂದಾಗಿ ಇವತ್ತು ನಿರ್ಣಯವನ್ನು ಮಾಡಬೇಕು ರಾಜ್ಯದ ಮುಖ್ಯಮಂತ್ರಿಗಳ ಈ ಒಂದು ವಿಷಯದಲ್ಲಿ ಕೈಬಲಪಡಿಸಬೇಕೆಂಬು ಸರ್ವಪಕ್ಷಗಳ ಸಭೆಯಲ್ಲಿ ತೀರ್ಮಾನವಾಗಿದೆ ಅದರಲ್ಲಿಯೂ ಕೂಡ ಈ ಮಾತು ಬಂತು, ಸದನದಲ್ಲಿ ಏಕೆ ಚರ್ಚೆಯನ್ನು ಮಾಡಲಿಲ್ಲ, ಸದನದಲ್ಲಿ ಈ ಮಾತುಗಳನ್ನು ಏತಕ್ಕಾಗಿ ಎತ್ತಲಿಲ್ಲ ಸದನದಲ್ಲಿ ಇವತ್ತು ಒಂದಾಗಿ ನೀವು ಕಾವೇರಿಯ ಬಗ್ಗೆ ಅನ್ಯಾಯವಾಗಿದೆ ಎಂಬುದು, ಇವತ್ತು ಪ್ರಧಾನ ಮಂತ್ರಿಗಳಿಗೆ ತಿಳಿಸುವಂತಹ ರೀತಿಯಲ್ಲಿ This is the resolution of our House We have

discussed this matter in length. I have taken all the leaders and other parties into confidence ಎನ್ನುವುದನ್ನು ಹೇಳುವುದಕ್ಕೆ ನಿಮಗೆ ಒಂದು ಶಕ್ತಿ ಬರುತ್ತದೆ ಶಕ್ತಿ ಬರುವಂತಹ ರೀತಿಯಲ್ಲಿ ಇದು ಬಹಳ ಜಟಿಲವಾದಂತಹ ಪ್ರಶ್ನೆಯಾಗಿದೆ ನಾಳೆ ಇದು ಆಗುತ್ತದೆಂದು ಹೇಳುವುದಕ್ಕಾಗುವುದಿಲ್ಲ, ಇವತ್ತು ಜನಾಭಿಪ್ರಾಯಗಳು ಪ್ರಜಾಪ್ರಭುತ್ವದಲ್ಲಿ ಬಹಳ ಮುಖ್ಯವಾದುದು ಈ ಒಂದು ರೆಸ್ಯೂಲ್ಯೂಷನನ್ನು ನಾವು ಮೂವ್ ಮಾಡಿದ್ದೇವೆ ಇದರ ಬಗ್ಗೆ ಚರ್ಚೆಯಾಗುತ್ತದೆ ಇದರ ಬಗ್ಗೆ ಸಾಕಷ್ಟು ನಮ್ಮ ಹಿರಿಯ ಸದಸ್ಯರುಗಳು ಕೂಡ ಇದರ ಬಗ್ಗೆ ಪ್ರಸ್ತಾಪಮಾಡುತ್ತಾರೆ ಕೊನೆಯದಾಗಿ ಒಂದು ತರಹದ ಅಭಿಪ್ರಾಯವನ್ನು ಮೂಡಿಸಿ ನಿರ್ಣಯವನ್ನು ಮಾಡಲೇಬೇಕು ಇದೊಂದು ಐತಿಹಾಸಿಕವಾದಂತಹ ನಿರ್ಣಯ, ಕಾವೇರಿ ತೀರ್ಪು ನಮ್ಮ ಕರ್ನಾಟಕ ಜನತೆಗೆ ಇವತ್ತಿನ ದಿವಸ ಧಕ್ಕೆಯನ್ನು ಕೊಟ್ಟಿದೆ ಇದು ಅರ್ಥಿಕವಾದಂತಹ ಪರಿಸ್ಥಿತಿ, ರೈತರ ಸಮಸ್ಯೆ, ಜನರ ಸಮಸ್ಯೆ, ಕುಡಿಯುವ ನೀರಿನ ಸಮಸ್ಯೆ 1940ರಲ್ಲಿ ಬೆಂಗಳೂರು population 3 ಲಕ್ಷ ಇತ್ತು ಇವತ್ತು ಒಂದು ಕೋಟಿಗೆ ಹೋಗಿದೆ ಇವತ್ತು ಜಪಾನ್‌ನ ನೆರವಿನಿಂದ ರೂ 3,384 ಕೋಟಿ ಹಣ ಬಂದಿದೆ, ನಾನು ರಾಜ್ಯದ ಮುಖ್ಯಮಂತ್ರಿಯಾದಾಗ ಶ್ರೀ ಗುಲಾಂ ನಬಿ ಅಜಾದ್‌ರವರನ್ನು ಕರೆಸಿ ಜಯನಗರದಲ್ಲಿ ಕೆಲಸವನ್ನು ಪ್ರಾರಂಭ ಮಾಡಿದ್ದೇವೆ ಅದು ಎಲ್ಲಿ ನಡೆಯುತ್ತಿದೆ ಎಂಬುದು ಗೊತ್ತಿಲ್ಲ ಇವತ್ತಿನ ದಿವಸ ಕುಡಿಯುವ ನೀರಿಗೆ ತೊಂದರೆಯಾಗಿದೆ ನಮಗೆ 46 ಟಿಎಂಸಿ ನೀರು ಬೇಕಾಗಿದ್ದಲ್ಲಿ, ಇವತ್ತು ನಮಗೆ ಕಡಿಮೆ ನೀರನ್ನು ಕೊಟ್ಟಿದ್ದಾರೆ ಕಾವೇರಿಯ ಭಾಗದಲ್ಲಿರುವವರು ಕೂಡ ನಮ್ಮನ್ನು ಕೇಳುತ್ತಾರೆ, "ಬೆಂಗಳೂರು ನಗರಕ್ಕೆ ಕುಡಿಯುವುದಕ್ಕೆ ನೀರನ್ನು ಕೊಡಬೇಕೆ"? ಎಂದು ಈಗಾಗಲೇ ಬೇಸಿಗೆ ಬರುತ್ತಿದೆ, ಕರ್ನಾಟಕ ರಾಜ್ಯದಲ್ಲಿ ಹೆಚ್ಚಿನ ಬಿಸಿಲು ಆಗುತ್ತಿದೆ, ಇವತ್ತು water table ಕೆಳಗಡೆ ಹೋಗುತ್ತಿದೆ ಇಂತಹ ಒಂದು ಪರಿಸ್ಥಿತಿಯಲ್ಲಿ ಬೆಂಗಳೂರು ನಗರ ಮುಂಬರುವ ದಿವಸಗಳಲ್ಲಿ ಐಟಿ/ಬಿಟಿ ಸೆಂಟರ್‌ಗಳು ಬಂದು ಇವತ್ತು international hub, ಆಗಿದೆ ಇವತ್ತಿನದಿವಸ ಎಲ್ಲಾಕಡೆಯಿಂದಲೂ ಜನರು ನಗರಕ್ಕೆ ಬರುತ್ತಿದ್ದಾರೆ ಇಂತಹ ಒಂದು ಪರಿಸ್ಥಿತಿ ಇದ್ದಾಗ ನಮಗೆ ಅನ್ಯಾಯವಾಗಿದೆ ಇದನ್ನು ಸರಿಯಾದ ರೀತಿಯಲ್ಲಿ ಅಂಕಿಅಂಶಗಳ ಮುಖಾಂತರ ನಾವು ಪ್ರತಿಪಾದನೆಯನ್ನು ಮಾಡಬೇಕಾಗುತ್ತದೆ ಒಂದು

ಮಾತನ್ನು ನಾವು ಹೇಳಿದರೆ ಯಾರೂ ಕೂಡ ಧಕ್ಕೆಯಾಗಿದೆ ಎಂದು ತಿಳಿದುಕೊಳ್ಳಬಾರದು ಇವತ್ತಿನ ದಿವಸ ನಾವು ಇಷ್ಟೊಂದು ಹಣವನ್ನು ವಕೀಲರಿಗಾಗಿ ಖರ್ಚು ಮಾಡುತ್ತೇವೆ ಅವರ ಮೇಲೆ ನಾವು ಜವಾಬ್ದಾರಿಯನ್ನು ಸಹ ಕೊಟ್ಟಿರುತ್ತೇವೆ ಅವರಿಗೆ ಅವಹೇಳನ ಮಾಡಬೇಕೆಂಬ ರೀತಿಯಲ್ಲಿ ನಾನು ಹೇಳುತ್ತಿಲ್ಲ ಇದು ನಮಗೆ ಪ್ರಜಾಪ್ರಭುತ್ವದಲ್ಲಿ ಜನರ ಪ್ರತಿನಿಧಿಗಳ ಹಕ್ಕು ಆಗುತ್ತದೆ ನೀವು ಏನು ಇಲ್ಲಿಯವರೆಗೆ ಪ್ರತಿಪಾದನೆಯನ್ನು ಮಾಡಿದ್ದೀರಿ? What is the result you have given? ಮಾಡಿದ್ದಾರೆನ್ನತಕ್ಕಂತಹದ್ದು ಅಲ್ಲ ಇವತ್ತು ಆವೇಶಭರಿತವಾಗಿ ಆ ಮಾತುಗಳು ಕೂಡ ನಮ್ಮ ಮನಸ್ಸಿನಲ್ಲಿ ಬರುತ್ತದೆ ಇಂತಹ ಎಲ್ಲಾ ವಿಷಯಗಳ ಬಗ್ಗೆ ತಾವು ಏನು irrigation expert ಮತ್ತು legal expert ರವರನ್ನು consult ಮಾಡಿ ಯಾವ ರೀತಿಯಾಗಿ ಹೋಗಬೇಕಾಗಿದೆ ಅದಕ್ಕಾಗಿ ಈ ಒಂದು ಗೊತ್ತುವಳಿಯ ಮುಖಾಂತರ, ಇವತ್ತು ನಿರ್ಣಯವನ್ನು ಪಾಸು ಮಾಡಬೇಕೆಂದು ಕೇಳಿಕೊಂಡು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ

ಶ್ರೀ ಜೆ ಸಿ ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) ಮಾನ್ಯ ಅಧ್ಯಕ್ಷರೆ, ಇವತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಕಾವೇರಿ ಜಲವಿವಾದದ ನ್ಯಾಯಾಧೀಕರಣದ ಬಗ್ಗೆ, ಈ ಸಭೆಯ ಒಮ್ಮತದ ಸಮ್ಮತಿಯ ಬಗ್ಗೆ ನಿರ್ಣಯವನ್ನು ತಂದು ಇಲ್ಲಿ ಚರ್ಚೆಗೆ ಕರೆದಿದ್ದಾರೆ ಆ ಚರ್ಚೆಯಲ್ಲಿ ಭಾಗವಹಿಸುವ ಬಗ್ಗೆ, ನನ್ನನ್ನು ಕರೆದಿರುವ ಬಗ್ಗೆ, ನಾನು ತಮಗೆ ಆಭಿನಂದಿಸಿ, ಇದೊಂದು ಬಹಳ ವ್ಯಾಪಕವಾದ ವಿಷಯವಾಗಿದೆ ಇಡೀ ರಾಜ್ಯದಲ್ಲಿ ಯಾವುದೇ ಪಕ್ಷವಿರಲಿ, ಯಾವುದೇ ರಾಜ್ಯದ ಭಾಗ ಇರಲಿ, ನಮ್ಮ ನಾಡಿನ ಜಲ ಮತ್ತು ನೆಲದ ವ್ಯವಹಾರದಲ್ಲಿ ರಾಜಿ ಮಾಡಿಕೊಳ್ಳುವುದಕ್ಕೆ ತಯಾರಿಲ್ಲವೆಂದು ನಾನು ಭಾವಿಸಿದ್ದೇನೆ ನಾನು ನಿನ್ನೆ ದಿವಸ ಸಾರ್ವಜನಿಕ ಸಭೆಯಲ್ಲಿ ಮಾತನಾಡುತ್ತಾ ಹೇಳಿದೆ 1974ರಿಂದ ಇಲ್ಲಿಯವರೆವಿಗೆ ಸರ್ಕಾರವನ್ನು ನಡೆಸಿರುವ ಯಾರು ಕೂಡ ಕಾವೇರಿ ಜಲವಿವಾದದ ಬಗ್ಗೆ ಬೇಜವಾಬ್ದಾರಿಯಾಗಿ ವರ್ತಿಸಿದ್ದಾರೆಂದು ಹೇಳಿ ನಾವು ಹೇಳುವುದಕ್ಕಾಗುವುದಿಲ್ಲ ಅಕಸ್ಮಾತ್ ಆಗಿ ನಮಗೆ ಇವತ್ತು ಅನ್ಯಾಯಗಳು ಆಗಿದ್ದರೆ ಅದು ನಮ್ಮ inevitable loss, ನಾವು ಸ್ವತಂತ್ರ್ಯ ಪೂರ್ವದಲ್ಲಿ

ಏನು, ಕಳೆದುಕೊಂಡಿದ್ದೇವೆ, ಅದಕ್ಕೆ ಇವತ್ತು ನಾವು ಪರಿತಪಿಸುವಂತಹ ಸ್ಥಿತಿ ನಮಗೆ ನಿರ್ಮಾಣವಾಗಿದೆ ಇದಕ್ಕೋಸ್ಕರ ರಾಜಕಾರಣವನ್ನು ಮಾಡುವುದು, ಪಕ್ಷಗಳನ್ನು ದೂಷಣೆ ಮಾಡುತ್ತಾ ಹೋಗುವುದು, ಅದು ನಮ್ಮ ಕರ್ತವ್ಯವಾಗಬಾರದು ಇವತ್ತು ಕೂಡ ನಾನು ಈ ಸದನದಲ್ಲಿ ಹೇಳುತ್ತಿದ್ದೇನೆ ರಾಜ್ಯದ ಹಿತಾಸಕ್ತಿಯನ್ನು ಕಾಪಾಡಬೇಕಾದರೆ ನಾವೆಲ್ಲರೂ ಒಂದೇ ಇದರಲ್ಲಿ ಎರಡು ಅಭಿಪ್ರಾಯಗಳನ್ನು ಬಹುಶ ಯಾರು ಇಟ್ಟುಕೊಳ್ಳಬಾರದು, ಇಟ್ಟುಕೊಂಡು ಇಲ್ಲವೆಂದು ಈ ನಾಡಿನ ಜನತೆ ಎಂದು ನಾವು ತಿಳಿದುಕೊಂಡಿದ್ದೇನೆ ನಮಗೆ ಎಲ್ಲೋ ಒಂದು ಕಡೆ ರಾಷ್ಟ್ರ ಮಟ್ಟದಲ್ಲಿ ನಾಯಕತ್ವದ ಕೊರತೆ ಇದೆಯೇ? ಅಥವಾ ರಾಜ್ಯವನ್ನು ಪ್ರತಿನಿಧಿಸುವ ಬಗ್ಗೆ ನಮಗೆ ನಮ್ಮದೇ ಆದ ತಾಪತ್ರಯಗಳು ಇದೆಯಾ? ಅಥವಾ ನಾವೇ ಬಹಳ dıspute ಮಾಡುವವರು, ತಕರಾರು ಮಾಡುವಂತಹ ಜನರು ಎಂದು ಹೇಳಿ, ನಮ್ಮ ಮೇಲೆ ದೊಡ್ಡ ಅಪಪ್ರಚಾರವನ್ನು ನಡೆಯುವುದನ್ನು ನಾವು ಸಮರ್ಥವಾಗಿ ಎದುರಿಸುವ ಕಡೆಯಲ್ಲಿ ನಾವು ವಿಫಲರಾದೆವಾ, ಎಂದು ನಾವು ನೋಡಬೇಕಾಗುತ್ತದೆ ಗಡಿಯ ಪ್ರಶ್ನೆ ಬರಲಿ, ನೀರಿನ ಬಗ್ಗೆ ಬರಲಿ, ಏನೋ ಕರ್ನಾಟಕದವರು ನಾವು ಯಾವ ತೀರ್ಪನ್ನು ಒಪ್ಪುವುದಿಲ್ಲ, ಯಾವ ತೀರ್ಪಿಗೂ ನಾವು ಸಹಮತಿಯನ್ನು ಸೂಚಿಸುವುದಿಲ್ಲ, ನಮಗೆ ಇವೆಲ್ಲಾ ಇತ್ಯರ್ಥ ಆಗುವುದು ಇಷ್ಟವಿಲ್ಲವೆನ್ನುವಂತಹ ಭಾವನೆ ನಮ್ಮ ರಾಜ್ಯದ ಮೇಲೆ ನಮಗೆ ಹೊರ ರಾಜ್ಯಗಳಲ್ಲಿ ಒಂದು ವ್ಯಾಪಕವಾದ ಪ್ರಚಾರವಾಗುವಂತಹ ಸ್ಥಿತಿಯನ್ನು ನಾವು ನಿರ್ಮಾಣ ಮಾಡಿಕೊಂಡು ಬಿಟ್ಟಿದ್ದೇವೆ ಇವತ್ತು ನಾವು ಕಾವೇರಿ ಬಗ್ಗೆ ಮಾತನಾಡಬೇಕಾಗಿದೆ ಕಾವೇರಿಯಿಂದ ನಮಗೆ ಏನಾಗಬೇಕಾಗಿದೆ? ಅದರ ಬಗ್ಗೆ ನಾನು ಬಹಳ ಸಲ ಒತ್ತಿ ಹೇಳುತ್ತಿದ್ದೇನೆ ಕಾವೇರಿಯಿಂದ ಬಹಳ ತೊಂದರೆಗೆ ಈಡಾಗುವವರಲ್ಲಿ, ಅದರಲ್ಲೂ ಹಳೆ ಮೈಸೂರು ಭಾಗದಲ್ಲಿ ಹೊಸದಾಗಿ ಆಗಿರುವ ಜಿಲ್ಲೆ, ಚಾಮರಾಜನಗರದವರು, ತುಮಕೂರು ಜಿಲ್ಲೆಯವರು ಮತ್ತು ಚಿಕ್ಕಮಗಳೂರು ಜಿಲ್ಲೆಯ ಕೆಲವು ಭಾಗ ಮತ್ತು ನಮ್ಮ ಆಜುಬಾಜಿನ ಕೆಲವು ಜಿಲ್ಲೆಗಳು ನಿಜವಾಗಲೂ ಬಹಳ ತೊಂದರೆಗೆ ಸಿಕ್ಕಿದ್ದೇವೆಂದು ನಾನು ಹೇಳಲೇ ಬೇಕಾಗುತ್ತದೆ ನಾನು ಸನ್ಮಾನ್ಯ ವಾಟಾಳ್ ನಾಗರಾಜ್‌ರವರನ್ನು ಅಭಿನಂದಿಸುತ್ತೇನೆ ನನ್ನ ಪಕ್ಕದಲ್ಲಿ ಕುಳಿತಿದ್ದಾರೆ ನಾವು ಯಾವಾಗಲೂ ಜೊತೆಯಲ್ಲಿ ಇರುತ್ತೇವೆಂದು ಅಲ್ಲ ಈ ಹೋರಾಟದಲ್ಲಿ ಈ ರಾಜ್ಯದಲ್ಲಿ ಬೆಳಕು ಚೆಲ್ಲುವ ಕಡೆ ಪಕ್ಷಾತೀತವಾಗಿ ಸಂಘಟಣೆ ಮಾಡುವ ಕಡೆ

ನಿಜವಾಗಲೂ ಒಂದು ಉತ್ತಮವಾದ ಕೆಲಸವನ್ನು ಅವರು ಮಾಡಿದರು ನಾವು ಅವರ ಮಟ್ಟಕ್ಕೆ ಮಾಡಲಿಕ್ಕೆ ಆಗಲಿಲ್ಲ ಎನ್ನುವ ನೋವು ನಮಗೆ ಇದೆ, ಅವರ ಜೊತೆಯಾದರೂ ಸೇರಿಕೊಳ್ಳುವುದಕ್ಕೆ ನಮ್ಮಿಂದ ಆಗಲಿಲ್ಲವೇನೋ ಎಂದು ನಾನು ಅಂದುಕೊಂಡಿದ್ದೇನೆ ಒಂದು ಮಾತು ಸತ್ಯ, ಆವತ್ತು ಆ ಕೆಲಸವನ್ನು ನಾವು ಮಾಡದೇ ಹೋಗಿದ್ದರೆ, ಮಾನ್ಯ ಕರುಣಾನಿಧಿಯವರು 10–15 ದಿವಸವಾದ ಮೇಲೆ ತೆಗೆದುಕೊಂಡ ನಿರ್ಣಯವನ್ನು ಅವರು ಮೊದಲೇ ತೆಗೆದುಕೊಂಡು ಬಿಟ್ಟಿದ್ದರೆ ಬಹುಶ ಇಡೀ ಇಂಡಿಯಾ ದೇಶದಲ್ಲಿ ನಾವು ತಪ್ಪಿತಸ್ಥರು ಎಂದು ಮತ್ತೆ ನಾವು ಪ್ರಚಾರಕ್ಕೆ ಬಂದು ಬಿಡುತ್ತಿದ್ದೆವು ಏನೋ ಆಗಬಾರದ್ದು ಆಗಿದೆ, ತಮಿಳುನಾಡಿಗೆ ನಾವು ಅನ್ಯಾಯವನ್ನು ಮಾಡಿದ್ದೇವೆಂದು, ನ್ಯಾಯಾಧಿಕರಣವನ್ನು ಟೀಕೆ ಮಾಡುವುದಕ್ಕೆ, ನ್ಯಾಯಾಧೀಶರನ್ನು ಟೀಕೆ ಮಾಡುವುದಕ್ಕೆ, ಇದು ವೇದಿಕೆ ಎಂದು ನಾನು ಭಾವಿಸಿಲ್ಲ ಆದರೆ ನಮ್ಮ ವಾದಗಳನ್ನು ಈ ರಾಜ್ಯದ ಪರವಾಗಿ ವಾದವನ್ನು ಮಾಡಿದಂಥ ವಕೀಲರುಗಳು ನಾವು ಏನು ಅಲ್ಪಸ್ವಲ್ಪ ಕಾನೂನಿನ ಅರಿವು ಇಟ್ಟುಕೊಂಡು ಸಣ್ಣಪುಟ್ಟ ಏನು ಲಾಯರ್‌ಗಿರಿಯನ್ನು ಮಾಡಿದವರು ಇದ್ದೇವೆ ಅದರ ಅನುಭವದ ಮೇಲೆ ಆ ತೀರ್ಮಾನ ಓದಿದಾಗ ನಿಜವಾಗಲೂ ಅವರು ವಾದವನ್ನು ಚೆನ್ನಾಗಿ ಮಾಡಿದ್ದಾರೆಂದು, ಮಾನ್ಯ ಪ್ರಕಾಶ್‌ರವರೆ ನಾನು ಅಂದುಕೊಂಡಿದ್ದೇನೆ ಇದು ನನ್ನ ವೈಯಕ್ತಿಕ ಅಭಿಪ್ರಾಯ ನಾರಿಮನ್‌ವರಾಗಲಿ, ಜವಳಿಯವರಾಗಲಿ ಅವರ ಟೀಮ್ ಆಗಲಿ, ಶಕ್ತಿಮೀರಿ ಈ ಕೆಲಸವನ್ನು ಮಾಡಿದ್ದಾರೆ ಆದರೂ ಎಲ್ಲೋ ಒಂದು ಕಡೆ ನಮಗೆ ನಾವು ನಿರೀಕ್ಷೆ ಮಾಡಿದಷ್ಟು ನ್ಯಾಯ ಸಿಕ್ಕಲಿಲ್ಲ ಕನಿಷ್ಟ ನಮ್ಮ ಮೂಲಭೂತ ಬೇಡಿಕೆ ಕೂಡ ಈಡೇರಲಿಲ್ಲ ಅದನ್ನು ಸನ್ಮಾನ್ಯ ಟ್ರಿಬ್ಯುನಲ್‌ನಲ್ಲಿ ಕುಳಿತಂಥ ಅಧ್ಯಕ್ಷರು ಕೆಲವು ಕಡೆ ಪರಾಮರ್ಶೆ ಮಾಡಬೇಕಾಗಿತ್ತು ಎನ್ನುವುದು ನನ್ನ ಅಭಿಪ್ರಾಯ 740 TMC ಯಲ್ಲಿ ನಮ್ಮ ಭಾಗ ಎಷ್ಟು, ತಮಿಳುನಾಡಿನ ಭಾಗ ಎಷ್ಟು, ಎಂದು ಲೆಕ್ಕವನ್ನು ಮಾಡಿ ಮಾನ್ಯ ಈಶ್ವರಪ್ಪನವರು ನಮಗೆ ಹಂಚಿದ್ದಾರೆ ಆದರೆ 18 ಲಕ್ಷ ಚಿಲ್ಲರೆ ಎಕರೆಗೆ ನೀವು ಹೋಗಬಹುದು ಎಂದು ಹೇಳಿ, ಅದಕ್ಕೆ ನೀರು ಎಲ್ಲಿ ಇದೆ ಎಂದು ಹೇಳುವ ಸ್ಥಿತಿಯನ್ನು ಅವರು ನಿರ್ಮಾಣ ಮಾಡಲಿಲ್ಲ ಅದರಲ್ಲಿ ಪ್ರಮುಖವಾಗಿ 6 55 ಲಕ್ಷ ಎಕರೆ ಜಮೀನಿಗೆ ಹೇಮಾವತಿ ಕೆಳಗಡೆ ಅಚ್ಚುಕಟ್ಟು ಬರಬೇಕಾಗಿತ್ತು ನಾವು ಆ ಪ್ರಾಜೆಕ್ಟ್‌ನ್ನು ಮಾಡಬೇಕಾದರೆ, ಸುಮಾರು 7 ಲಕ್ಷ ಎಕರೆಗೆ ಮಾನ್ಯ ಈಶ್ವರಪ್ಪನವರೆ, drought prone area programme–ಅಡಿಯಲ್ಲಿ ಒಂದು

semi dry crop ಗೆ ನೀರು ಸಿಗುತ್ತದೆ, ಹಾಸನ್, ಕೋಲಾರ್, ಮಂಡ್ಯ ಜಿಲ್ಲೆಗಳಿಗೆ ಎಂದು ಮಾಡಿತ್ತು 34 TMC ನೀರನ್ನು ನೀವು ಬಳಸಿಕೊಳ್ಳಬಹುದು ಹೇಮಾವತಿ ಡ್ಯಾಂ ನಲ್ಲಿ ಎಂದು ಅವರು ಹೇಳಿದರೂ ಕೂಡ, ಅಲ್ಲಿ ಕುಡಿಯುವ ನೀರಿಗೆ ಉಪಯೋಗಿಸುತ್ತಿರುವುದು ಅಲ್ಲಿ ಆಗುತ್ತಿರುವ evaporation, ಗೊರೂರಿನಿಂದ ಹಿಡಿದು ಹೆಬ್ಬೂರಿನವರೆಗೆ ನಾಲೆ ಬರುವ ಕಡೆ ನಾವು ಏನು ತೋಟ ಅಥವಾ semi dry crop ಗೆ ಕನಿಷ್ಟ ನೀರನ್ನು ಕೇಳಿದ್ದೆವು, ಆ ನೀರು ಸಾಕಾಗುತ್ತದೊ ಇಲ್ಲವೋ ಎಂದು ಹೇಳಿ, calculation ಮಾಡುವ ಕಡೆ ಸ್ವಲ್ಪ ಹೆಚ್ಚು ಕಡಿಮೆಯಾಗಿದೆ ಎಂದು ನಮ್ಮ ಭಾವನೆ ಏಕೆಂದರೆ ಟ್ರಿಬ್ಯುನಲ್ ಒಪ್ಪಿಕೊಂಡು appreciate ಮಾಡಿದೆ ಕರ್ನಾಟಕ ರಾಜ್ಯದವರ cropping pattern ನ್ನು ಒಪ್ಪುತ್ತೇನೆ ಅವರು distressನಲ್ಲಿ ಬೆಳೆದುಕೊಳ್ಳುವುದಕ್ಕೆ ಒಂದು ಬೆಳೆಗೆ semi dry ಬೆಳೆಗೆ ನೀರನ್ನು ಕೇಳುತ್ತಿರುವುದು ವಾಸ್ತವಾಂಶವಾಗಿದೆ ಎಂದು ಏನು ಒಪ್ಪಿಕೊಂಡಿದೆ, ಉಪವಾಸ ಇರುವವರಿಗೆ ಏನು ಉಪವಾಸ ಇದ್ದಿಯಾ, ಮನೆ ಕಡೆ ಎಲ್ಲರೂ ಚೆನ್ನಾಗಿದ್ದಾರಾ, ಎಂದು ಕೇಳಿದರೆ ಸಾಲದು ನಮಗೆ ಸ್ವಲ್ಪ ಊಟಕ್ಕೂ ಇಡಬೇಕಾಗಿತ್ತು ಉಪವಾಸ ಇದ್ದಾರೆ ಪಾಪ ಹೊಟ್ಟೆ ಹಸಿದುಕೊಂಡಿದ್ದಾರೆಂದು ಬಾಯಿತುಂಬಾ ಹೇಳಿ, ಊಟಕ್ಕೆ ನಮಗೆ ಇಡುವುದು ಬಿಟ್ಟು ಪಕ್ಕದವರಿಗೆ ಇಟ್ಟಿದ್ದಾರೆಂದು ನಮ್ಮ ಭಾವನೆ ಮಾತು ಒಳ್ಳೆಯದು ಆಡಿದ್ದಾರೆ, ನಾನು ಅದನ್ನು ಓದಿದ್ದೇನೆ ಆ ಭಾಗದವರ ಬಗ್ಗೆ ಎರಡು ಕೆಟ್ಟ ಮಾತನ್ನು ಆಡಲಿಲ್ಲ ಊಟ ಕೊಡುವಾಗ ಪಾಲು ಸ್ವಲ್ಪ ಹೆಚ್ಚು ಕಡಿಮೆಯಾಗಿದೆ ಇದನ್ನು ಇಲ್ಲಿ ಚರ್ಚೆ ಮಾಡಬೇಕಾಗುತ್ತದೆ ಏಕೆಂದರೆ, ಇದು ಟೀಕೆ ಮತ್ತು ನ್ಯಾಯಾಧೀಶರು ಕೊಟ್ಟಿರುವ ತೀರ್ಮಾನ ಸರಿ ತಪ್ಪು ಎನ್ನುವ ವಿಮರ್ಶೆಗಿಂತ ಹೆಚ್ಚಾಗಿ, ನಮಗೆ ಎಲ್ಲೆಲ್ಲಿ ಏನು ಆಗಬೇಕು ಎಂದು, ನಮಗೆಲ್ಲಾ ಅರ್ಥವಾಗುತ್ತದೆ ನಾನು ಮೊನ್ನೆ ಹೇಳುತ್ತಿದ್ದೆ, ಒಂದು ಮನೆಯ ಭಾಗಕ್ಕೆ ಹೋದರೆ, ನಾವೆಲ್ಲಾ ಇದನ್ನು ಎದುರಿಸುತ್ತೇವೆ ಮನೆಯ ಭಾಗವನ್ನು ಮಾಡಿಬಿಟ್ಟರೆ, ಅಣ್ಣ ಮತ್ತು ತಮ್ಮನಿಗೆ ಸಮಾಧಾನ ಇರುವುದಿಲ್ಲ ನನಗೂ ಕಡಿಮೆಯಾಯಿತು, ನನಗೂ ಕಡಿಮೆಯಾಯಿತು ಎಂದು ಇಬ್ಬರು ಹೇಳುತ್ತಾರೆ ನಮ್ಮ ಮನೆಯ ಆಸ್ತಿಯನ್ನು ತೆಗೆದುಕೊಂಡು ಹೋಗಿ ಅವರಿಗೆ ಭಾಗ ಕೊಡುವುದಕ್ಕಾಗುವುದಿಲ್ಲ ಟ್ರಿಬ್ಯುನಲ್‌ದವರು ಬೇರೆ ಯಾರ ನೀರನ್ನಾದರೂ ತಂದು ನಮಗೆ ಕೊಡುವುದಕ್ಕಾಗುತ್ತಿರಲಿಲ್ಲ ಅವರು

ಹೇಳುತ್ತಾರೆ, ನಿಮ್ಮ requirements 1200 TMC ಇದೆ ನಿಮಗೆ 50% dependability ಮೇಲೆ 740 TMC ಮೇಲೆ ನಾವು ಲೆಕ್ಕಾಚಾರವನ್ನು ಕೊಡುವುದಕ್ಕಾಗುವುದಿಲ್ಲ ಅದನ್ನು ಹೇಳಬೇಕಾದರೆ, ಒಂದು ಕಡೆ ಈಗಾಗಲೇ ಸಮೃದ್ಧಿಯಾಗಿ ಇರುವವರು ಇನ್ನೊಂದು ಕಡೆ ನಾವು ನಷ್ಟದಲ್ಲಿ ಮತ್ತು ಕಷ್ಟದಲ್ಲಿ ಇರುವವರನ್ನು ಪರಿಶೀಲನೆ ಮಾಡಬೇಕಾಗಿತ್ತು ಎಂಬುದು ನಮ್ಮ ಭಾವನೆ ಟ್ರಿಬ್ಯುನಲ್ ಏನು 3–4 ಅಂಶಗಳ ಬಗ್ಗೆ ತೀರ್ಮಾನವನ್ನು ಕೊಟ್ಟಿದೆ ನಾವು ಇಲ್ಲಿ ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕಾಗಿದೆ, ಅದಕ್ಕೆ ಬೆಳಕನ್ನು ಚೆಲ್ಲಬೇಕಾಗಿದೆ ನಮ್ಮ ವಕೀಲರುಗಳು ಆ ಬಗ್ಗೆ ಮತ್ತೊಮ್ಮೆ ಪುನರ್‌ಪರಿಶೀಲನಾ ಅರ್ಜಿಯನ್ನು ಕೊಡುತ್ತಾರೋ ಅಥವಾ supreme court ಮುಂದೆ appeal ಹೋಗುತ್ತಾರೋ, Schedule IX ಕೆಳಗಡೆ provision ಮಾಡಿ ಕೊಡಿ ಎಂದು ಕೇಳುತ್ತಾರೋ ಅದು ಅವರಿಗೆ ಬಿಟ್ಟಿದ್ದು ಏಕೆಂದರೆ they are the better judges ಈ ಕೇಸನ್ನು ಹೇಗೆ ನಡೆಸಬೇಕು, ಯಾವ ಮಿತಿಯಲ್ಲಿ ನಡೆಸಬೇಕು ಎಂದು ನಾವು ಮಾತನಾಡುವುದಕ್ಕಿಂತ ಹೆಚ್ಚಾಗಿ, ಈ ಕೇಸನ್ನು ನಡೆಸಿದಂಥ ಟೀಮ್‌ನವರಿಗೆ ಮಾಹಿತಿ ಜಾಸ್ತಿ ಇರುತ್ತದೆ, ನಮಗಿಂತ ಅವರಿಗೆ ಹೆಚ್ಚಿನ ತಂತ್ರಜ್ಞಾನ ಇರುತ್ತದೆಂದು ಹೇಳುತ್ತಾ, ಒಂದು ಮಾತನ್ನು ಹೇಳುತ್ತೇನೆ ನಮಗೇನು ಸ್ವತಂತ್ರ್ಯಪೂರ್ವ ಏನು agreement ಆಗಿತ್ತು, ಆ agreement ಅನ್ನು ಅವರು ಒಪ್ಪಿದ್ದಾರೋ ಅಥವಾ ಇಲ್ಲವೋ ಎನ್ನುವುದನ್ನು, ಅವರು ಸ್ಪಷ್ಟವಾಗಿ ಹೇಳಲಿಲ್ಲ I cannot call this as void. ಒಂದು ಕಡೆ ಹೇಳುತ್ತಾರೆ Independence ಬಂದ ಮೇಲೆ, Constitution ಹೊಸದಾಗಿ implement ಆದಮೇಲೆ ಹಿಂದೆ ಇದ್ದ agreement valid ಇಲ್ಲವಾ ಎನ್ನುವ ಬಗ್ಗೆ ಚರ್ಚೆ ಮಾಡಬೇಕಾಗುತ್ತದೆಂದು ಇನ್ನೊಂದು ಕಡೆ ಹೇಳುತ್ತಾರೆ ಅವರೂ ಗೊಂದಲದಲ್ಲಿದ್ದಾರೆ ಆ agreement void ಎಂದು ಕರೆಯುವುದಕ್ಕಾಗುವುದಿಲ್ಲವೆಂದು ಅನ್ನುತ್ತಾರೆ Perspective right of a State cannot be maintained just because you are enjoying some water, ಕೂಡ ಅವರು ಹೇಳುತ್ತಾರೆ ಅವರೇ ಹೇಳಿದ್ದು ನಾನು ಹೇಳಲಿಲ್ಲ Perspective right cannot be treated as the sole right of a State ಎಂದು ಹೇಳುತ್ತಾರೆ ಹಾಗೆ ಇರುವಾಗ water flow ಎಷ್ಟು ಇತ್ತು, ನಮ್ಮ contribution ಎಷ್ಟು ಇತ್ತು, ನಾವು ಎಷ್ಟು ಕಿ ಮೀ ಅನ್ನು contribute

ಮಾಡಿದೆವು, ಇದೆಲ್ಲವನ್ನು ನಾವು ಪರಿಗಣನೆಗೆ ತೆಗೆದುಕೊಳ್ಳುತ್ತೇವೆಂದು ಹೇಳಿ, judgment ಕೊಡಬೇಕಾದರೆ, ಸ್ವಲ್ಪ ಆ ಕಡೆ ಈ ಕಡೆ ಮಾಡಿಬಿಟ್ಟಿದ್ದರೆ ಅನುಕೂಲವಾಗುತ್ತಿತ್ತು ಅದನ್ನು ಮಾಡಲಿಲ್ಲ ಎನ್ನುವ ನೋವು ನಮಗೆ ಇದೆ ಇವತ್ತು 1924 ಕ್ಕಿಂತ ಹಿಂದೆ ಇದ್ದಂಥ ಆಣೆಕಟ್ಟಿನ ಕೆನಾಲ್ಸ್‌ನಲ್ಲಿ ಏನು ಎರಡು ಬೆಳೆ ಇತ್ತು ಆ ಎರಡು ಬೆಳೆಯನ್ನು ತಮಿಳುನಾಡಿಗೆ protect ಮಾಡಿದ್ದೇವೆಂದು ಹೇಳುತ್ತಾರೆ ನಮ್ಮ ರಾಜ್ಯಕ್ಕೆ ಬಂದಾಗ ಅವರು restriction ಮಾಡುತ್ತಾರೆ ಕರ್ನಾಟಕದ ವಿಷಯಕ್ಕೆ ಬಂದಾಗ ಅದನ್ನು 100% ಗ್ಯಾರಂಟಿ ಮಾಡುವುದಿಲ್ಲ ಅಲ್ಲಿ ಮೂರನೇ ಬೆಳೆ ಬೆಳೆಯಬೇಡಿ ಎಂದು ಹೇಳುತ್ತಾರೆ ಇಲ್ಲಿ ನಮಗೆ semi dry crop ಗೆ ಹೋಗಿ ಎಂದು ಹೇಳುತ್ತಾರೆ ನಾವು semi dry crop ನ್ನು ಇಟ್ಟುಕೊಂಡಿದ್ದೇವೆಂದು ಹೇಳಿದ್ದೇವೆ ಆದರೆ 5 ಸಾವಿರ ಎಕರೆಯನ್ನು ಒಂದು TMC ಯಲ್ಲಿ ಮಾಡಬಹುದೆಂದು ತಮಿಳುನಾಡಿಗೆ ತೆಗೆದುಕೊಳ್ಳುತ್ತಾರೆ, ಆದರೆ ಕರ್ನಾಟಕದಲ್ಲಿ 7 ಸಾವಿರ ಎಕರೆ ಒಂದು TMC ಗೆ ಮಾಡಬಹುದೆಂದು ಲೆಕ್ಕಾಚಾರವನ್ನು ತೆಗೆದುಕೊಳ್ಳುತ್ತಾರೆ ನಾವು ಭತ್ತವನ್ನು ಬೆಳೆಯುತ್ತಿದ್ದೆವು, ಮಂಡ್ಯ ಜಿಲ್ಲೆಯಲ್ಲಿ ಇವತ್ತು ಕಬ್ಬು ಹೋಗಿಬಿಟ್ಟಿತು 18 ಲಕ್ಷ ಎಕರೆ ಕಬ್ಬನ್ನು ಬೆಳೆಯುತ್ತೇವೆಂದು ಒಪ್ಪಿಕೊಂಡು 40 ಸಾವಿರಕ್ಕೆ ಮಿತಿ ಮಾಡುತ್ತೇವೆಂದು ಹೇಳುತ್ತಾರೆ 40 ಸಾವಿರಕ್ಕೆ ಮಿತಿ ಮಾಡುವುದು ಈಗ ಸಾಧ್ಯವೇ ಎಂದು ನಾವು ಈಗ ಕೇಳಬೇಕಾಗಿದೆ 18 ಲಕ್ಷಕ್ಕೆ ಬಂದು ಬಿಟ್ಟಿದೆ After the 1924 agreement, 50 ವರ್ಷವಾದ ಮೇಲೆ entire agreement ಅನ್ನು review ಮಾಡಬಹುದಾ? Or some clauses of the agreement review ಮಾಡಬಹುದಾ? ಅದಕ್ಕಾಗಿ ನಾನು ಒಂದು ಮಾತನ್ನು ಹೇಳಿದೆ 1974 ರಿಂದ ಈಚೆಗೆ ನಾವು ಯಾರನ್ನೂ ಏನು ಅನ್ನುವಂತಿಲ್ಲ ಏಕೆಂದರೆ, ದೇವರಾಜ ಅರಸರ ಆದಿಯಾಗಿ, ಆ ನಂತರ ಬಂದ ಎಲ್ಲಾ ಸರ್ಕಾರಗಳು, agreement 50 ವರ್ಷಕ್ಕೆ seize ಆಗಿದೆ, ನಾವು project ಮಾಡಿಕೊಳ್ಳುವುದಕ್ಕೆ ಏನೂ ತೊಂದರೆಯಿಲ್ಲ ನಾವು projectಗಳನ್ನು ಮಾಡಿಕೊಳ್ಳಬಹುದೆಂದು ನಾವು ಹೊಸ projectಗಳನ್ನು ಆರಂಭ ಮಾಡಿದ್ದರಿಂದ ಕನಿಷ್ಟ ಕರ್ನಾಟಕ ಇವತ್ತು ಒಂದು ಹಂತದಲ್ಲಿ ನಿಂತಿದೆ ನಾವು ಅವರ agreement valid ಇದೆ ಎಂದು ಅದನ್ನು ಪುಷ್ಟೀಕರಿಸಿ ಹೆದರಿಕೊಂಡು ಕುಳಿತುಕೊಂಡಿದ್ದರೆ, ಬಹುಶ ಜೂನ್ 1990 ರಲ್ಲಿ ಆದ ಟಿಬ್ಯುನಲ್‌ನಲ್ಲಿ ಇಷ್ಟರ ಮಟ್ಟಿಗೆ ನ್ಯಾಯವನ್ನು ತೆಗೆದುಕೊಳ್ಳುವುದಕ್ಕೆ

ಆಗುತ್ತಿರಲಿಲ್ಲವೇನೋ ಎನ್ನುವುದು ನನ್ನ ಭಾವನೆ ಆ ಭಾವನೆ ಬರುವಾಗ ನಾನು ಟ್ರಿಬ್ಯುನಲ್ ಬಗ್ಗೆ ಒಂದು ಒಳ್ಳೆಯ ಮಾತನ್ನು ಹೇಳುತ್ತೇನೆ ನನಗೆ 1990 ರ ನಂತರ ಏನು reference ಬಂತು, ಅಲ್ಲಿಂದ ಮುಂದೆ ನಾನು ಚರ್ಚೆಯನ್ನು ಮಾಡುತ್ತೇನೆ, ಅದರ ಬಗ್ಗೆ ನಾನು ಜವಾಬ್ದಾರಿ ತೆಗೆದುಕೊಳ್ಳುತ್ತೇನೆ ಎನ್ನುವ ಒಂದು ಒಳ್ಳೆಯ ಮಾತನ್ನು ಅವರು ಆಡಿದ್ದಾರೆ ಆದರೆ ಅವರು ಹಿಂದಿನ agreement void ಎಂದು ಹೇಳಲಿಲ್ಲ ಅದನ್ನೇನದರೂ ಅವರು null and void ಎಂದು ಹೇಳಿಬಿಟ್ಟಿದ್ದರೆ ನಮಗೆ ನಿಜವಾಗಲೂ ಒಂದು ಒಳ್ಳೆಯ ನ್ಯಾಯ ಸಿಗುತ್ತಿತ್ತು ಆದರೂ sharing of waters ಬಂದಾಗ ಕೆಲವು ಕಡೆ trans–basin, even if it is existing, ಅದನ್ನು allow ಮಾಡುವುದಿಲ್ಲ ಇದನ್ನು ಒಪ್ಪಿಕೊಳ್ಳುವುದಕ್ಕೆ ಸಾಧ್ಯವೇ ಇಲ್ಲ ಸನ್ಮಾನ್ಯ ಪ್ರಕಾಶ್‌ರವರೆ, ಕುಡಿಯುವ ನೀರಿನ ಬಗ್ಗೆ ಚಿಕ್ಕನಾಯಕನಹಳ್ಳಿಯು ಸಹ trans-basin ನಲ್ಲಿ ನಾವು ನೀರನ್ನು ತೆಗೆದುಕೊಂಡು ಹೋಗಿದ್ದೇವೆ ಅದನ್ನು ಕೂಡ ನಿಲ್ಲಿಸಿ ಎಂದು ಹೇಳುವುದು ಸರಿಯಲ್ಲಿ ಎಂದು ನನ್ನ ಭಾವನೆಯಾಗಿದೆ ಈಗಾಗಲೇ ನೀರನ್ನು ತೆಗೆದುಕೊಂಡು ಹೋಗಿದ್ದರೂ ಕೂಡ trans–basin water supplyಯನ್ನು allow ಮಾಡುವುದಿಲ್ಲ trans basin water for any purpose, domestic purpose ಆಗಲಿ, industrial purpose ಆಗಲಿ, irrigationಗೆ ಆಗಲಿ interim award ಆದ ಮೇಲೆ ನಾವು ಈ trans basin water ಅನ್ನು drinking waterಗೆ ತೆಗೆದುಕೊಂಡು ಹೋಗಬೇಕಾದರೆ, ಎಲ್ಲವನ್ನು ಅವರ ಮುಂದೆ ಕನ್‌ವಿನ್ಸ್ ಮಾಡಿಯೇ ತೆಗೆದುಕೊಂಡು ಹೋಗಿದ್ದೇವೆ ಇದರಲ್ಲಿ ಯಾವುದೇ hide and seek ಇಲ್ಲ ನಾವೇ projectsನ್ನು ಮಾಡಬೇಕಾದರೆ ಕುಡಿಯುವ ನೀರಿಗೆ ಇದು ಅಡ್ಡಿ ಬರಲಾರದು ಎಂದು ಹೇಳಿ ನಾವು clearanceನ್ನು ತೆಗೆದುಕೊಂಡೇ ಮಾಡಿಕೊಂಡಿದ್ದೇವೆ ಅದರೆ ಇವತ್ತಿನ ತೀರ್ಮಾನದ ಪ್ರಕಾರ ಏನಾಗುತ್ತದೆಂದರೆ, existing drinking water supply schemeನ್ನು ಕೂಡ ನಾವು ನಿಲ್ಲಿಸಬೇಕಾಗುತ್ತದೆ ನಾವು ಹೊಸದಾಗಿ ಕೊಡುವುದು ಹೋಗಲಿ, ಈಗಾಗಲೆ ಮಾಡಿರುವ ಸ್ಕೀಮ್‌ನ್ನು ನಿಲ್ಲಿಸಿ ಎಂದು ಹೇಳಿದರೆ, ನಮ್ಮ ಗತಿ ಏನು? ಇನ್ನು ಎರಡನೆಯದಾಗಿ ಹೇಳುವುದಾದರೆ Lift Irrigation, ನಾವು ಮತ್ತು ನೀವು Lift irrigation ಅದನ್ನು ಒಪ್ಪುತ್ತೀರೋ ಅಥವಾ

ಬಿಡುತ್ತೀರೋ tribunal ಅನ್ನು ನಾವು ಕೇಳಲಿಲ್ಲ Lift irrigation ಆಗಲಿಲ್ಲವೆಂದರೆ, ನಮ್ಮ ನವಿಲೆಯ ಹತ್ತಿರ ಆಗಿರುವಂತಹ Lift irrigation ಅನ್ನು ಏನು ಮಾಡುವುದು ಕಬಿನಿ ಹತ್ತಿರ ಆಗಿರುವಂತಹ lift irrigation ಅನ್ನು ಏನು ಮಾಡಬೇಕು? We have already established. ಅದನ್ನು ನಾವು ಒಪ್ಪುವುದಿಲ್ಲವೆಂದು ಹೇಳುವುದು, ಸಾರಾಸಗಟಾಗಿ ನಾನು ಯಾವುದೇ ಭಾಗದಲ್ಲಿ Lift irrigation scheme ಅನ್ನು ಒಪ್ಪುವುದಿಲ್ಲವೆಂಬ ನಿಲುವನ್ನು ತೆಗೆದುಕೊಳ್ಳುತ್ತಾರೆ ದಯಮಾಡಿ ತಾವು ಅದನ್ನು reconsider ಮಾಡಿ ಎಂದು ನಾವು ಅವರನ್ನು ಕೇಳಬೇಕಾಗುತ್ತದೆ ಏಕೆಂದರೆ ನಾವು ಅಲ್ಲಿ ಬಹಳ ಕಷ್ಟ ಇರುವ ಜಾಗಕ್ಕೆ ನೀರನ್ನು lift ಮಾಡಿಕೊಳ್ಳುತ್ತೇವೆ ಯಾವ Government ಗಳು ಸುಲಭವಾಗಿ ಅಥವಾ ಅಕಸ್ಮಿಕವಾಗಿ, ದಿಢೀರೆಂದು liftಗಳಿಗೆ ಒಪ್ಪಿಕೊಳ್ಳುವುದಿಲ್ಲ ಅನಿವಾರ್ಯ ಪ್ರಸಂಗಗಳು ಬಂದು, ಬೇರೆ ಏನು ಮಾಡುವುದಕ್ಕಾಗುವುದಿಲ್ಲವೆಂದಾಗ ಏನೂ ಪರಿಹಾರ ಇಲ್ಲವೆಂದಾಗ ಅದನ್ನು ಒಪ್ಪಿಕೊಳ್ಳಬೇಕಾಗುತ್ತದೆ, ಅಷ್ಟೊಂದು ಹಣವನ್ನು ಖರ್ಚುಮಾಡಿ ನೀರನ್ನು, ಯಾರದ್ದಾದರೂ ಜಮೀನಿಗೆ ಕೊಡುವುದು ಸರ್ಕಾರ ಒಪ್ಪುವುದಿಲ್ಲ ನಮ್ಮ ಮುಂದಿರುವಂತಹ ಪ್ರಶ್ನೆ, ಈಗಾಗಲೇ ಜಾರಿಯಲ್ಲಿರುವಂತಹ lift irrigationಗಳ ನೀರನ್ನು ನಾವು ಉಳಿಸಿಕೊಳ್ಳುತ್ತೇವೆಯೇ? ಈಗಾಗಲೇ Transbasinನಲ್ಲಿ drinking waterಗೆ ಕೊಡುತ್ತಿರುವಂತಹ ನೀರನ್ನು ಉಳಿಸಿಕೊಳ್ಳುತ್ತೇವೆಯೇ? ಇದು ಬಹಳ ದುರಂತದ ವಿಷಯವಾಗಿದೆ ಬೆಂಗಳೂರು ನಗರವನ್ನು 3 ಭಾಗ ಮಾಡಿ, 3 1 ಭಾಗ ಬೆಂಗಳೂರಿಗೆ ಮಾತ್ರ ಕಾವೇರಿ ವ್ಯಾಲಿಯಲ್ಲಿ ಬರುತ್ತವೆಂದು treat ಮಾಡಿ ನೀವು ಏನು 17 6 ಟಿಎಂಸಿ ನೀರನ್ನು ಇವತ್ತಿನ requirement 26 ಟಿಎಂಸಿ ಪ್ರಕಾರ 2025ನೇ ವರ್ಷಕ್ಕೆಂದು ಹೇಳಿದ್ದೀರಿ, ಅದನ್ನು 3 1 ಭಾಗಕ್ಕೆ ಇಳಿಸಿಬಿಟ್ಟು ಆ ಬಗ್ಗೆ ನೀವು ಬಹಳ technical ಆಗಿ ಒಂದು ಮಾತನ್ನು ಅಡಿದ್ದಾರೆ ಅಲ್ಲಿ ನೀವು domesticಗೆ ಬಳಸುವ ನೀರು, after the use, it will come back to the basin. ನೀವು ಅದನ್ನು ಬಳಸಿ ಆದಮೇಲೆ, ನಿಮ್ಮ riverಗೆ ವಾಪಸ್ಸು ಬರುವುದರಿಂದ ಅದರಲ್ಲಿ 20% ಮಾತ್ರ ನಾವು ನಿಮಗೆ ನೀರನ್ನು ಕೊಡುತ್ತೇವೆ ಹಾಗಾದರೆ ಕಾವೇರಿಗೆ ನೀವು I ರಿಂದ IVth stageಗೆ ನೀವು ಖರ್ಚು ಮಾಡಿರುವ ಹಣವನ್ನು ಏನು ಮಾಡುತ್ತೀರಿ? ಅದರಲ್ಲಿ ನೀವು

ಈಗಾಗಲೇ ಕೆಲಸವನ್ನು ಮಾಡಿಬಿಟ್ಟು ಬೆಂಗಳೂರು ನಗರಕ್ಕೆ ನೀವು ಶುದ್ದೀಕರಿಸಿದ ನೀರನ್ನು ಕೊಡುತ್ತಿರುವವರು, ನಾಳೆ ದಿವಸ ನೀವು ಗೆರೆ ಹಾಕಿಕೊಂಡು ಬರುತ್ತೀರಿ, ಬೆಂಗಳೂರಿಗೆ ಕಾವೇರಿ ವ್ಯಾಲಿ ಎಲ್ಲಿ ಬರುತ್ತದೆ, ಬೇರೆ ವ್ಯಾಲಿ ಎಲ್ಲಿ ಬರುತ್ತದೆ ಎಂದು ಹೇಳಿ ಇದು ನಿಜವಾಗಿ implement ಮಾಡುವುದಕ್ಕೆ ಸಾಧ್ಯವೇ ಇಲ್ಲವೆಂಬ ತೀರ್ಮಾನ ಎಂದು ನಮ್ಮ ಅಭಿಪ್ರಾಯವಾಗಿದೆ ಇದನ್ನು practical ಅಗಿ ಮಾಡುವುದಕ್ಕೆ ಸಾಧ್ಯವೇ ಇಲ್ಲ ನಾವು ಜಗಳಕ್ಕೆ ಆಡುವ ಮಾತಲ್ಲ, ಅಮೇಲೆ ನೀವು V stageಗೆ ಹೋಗಬೇಕಾಗುತ್ತದೆ ಬೆಂಗಳೂರು ನಗರ ಬೆಳೆಯುತ್ತಿರುವುದಕ್ಕೆ ನಾವು ಕರ್ನಾಟಕದವರು ಮಾತ್ರ ಕಾರಣರಲ್ಲ ಸಾರ್ ಇದು ಇಡೀ ಇಂಡಿಯಾ ದೇಶ ಕಾರಣ ನಮ್ಮದು ಸಿಲಿಕಾನ್ ಸಿಟಿಯಾಗಿದೆ ಐಟಿ ಸಿಟಿಯಾಗಿದೆ, ಇಡೀ ವಿಶ್ವವೇ ಈ ಕಡೆ ನೋಡುತ್ತಿದೆ ಅವರಿಗೆ ಏನಾದರೂ ಅಭಿಮಾನವಿದ್ದರೆ, ನಮಗೆ ಜಾಸ್ತಿ ಪುಷ್ ಮಾಡಿ ಬೆಂಗಳೂರನ್ನು ಇವತ್ತು ಬೆಳೆಸಬೇಕಾಗಿದೆ ಇಡೀ ಪ್ರಪಂಚದಲ್ಲಿ ಬೆಂಗಳೂರು ನಗರ ಇಷ್ಟೊಂದು ಹೆಸರನ್ನು ತೆಗೆದುಕೊಳ್ಳುತ್ತಿದೆ, ನಮಗೆ ಇಷ್ಟೊಂದು publicity ತರುತ್ತಿದೆ ಆದರೆ ಇವತ್ತು 31 ಭಾಗ ನಗರವನ್ನು identify ಮಾಡಿ ಅದರಲ್ಲಿ 86 ಟಿಎಂಸಿ ಗಣನೆಗೆ ತೆಗೆದುಕೊಳ್ಳುತ್ತೇನೆಂದು ಹೇಳಿ ಅದರಲ್ಲಿ again 1/5th will be allotted to the Bangalore city ಎನ್ನುವುದು ನಿಜವಾಗಿಯೂ ಕನಸಿನ ಮಾತಾಗಿದೆ ಅದರ ಜೊತೆಗೆ ಹಾಸನಕ್ಕೆ ಕುಡಿಯುವ ನೀರಿನ ಬಗ್ಗೆ ಏನು ಮಾಡುತ್ತೀರಿ? ತುಮಕೂರಿಗೆ ಕುಡಿಯುವ ನೀರಿನ ಬಗ್ಗೆ ಏನು ಮಾಡುತ್ತೀರಿ? ತಿಪಟೂರಿಗೆ ಕುಡಿಯುವ ನೀರಿನ ಬಗ್ಗೆ ಏನು ಮಾಡುತ್ತೀರಿ? ಇಡೀ ಆ ಭಾಗದಲ್ಲಿ ಬರುವಂತಹ ಎಲ್ಲಾ ಪಟ್ಟಣಗಳ ಬಗ್ಗೆ ಹೇಳುವುದಾದರೆ ಮಾನ್ಯ ಈಶ್ವರಪ್ಪನವರೆ, ನಾವು ಹೇಮಾವತಿಯಿಂದಲೇ ಕುಡಿಯುವ ನೀರನ್ನು ತೆಗೆದುಕೊಳ್ಳುತ್ತಿರುವುದು ಚಿಕ್ಕನಾಯಕನಹಳ್ಳಿ, ತುರುವೇಕೆರೆ, ಕುಣಿಗಲ್ ಎಲ್ಲವೂ ಸೇರಿಕೊಂಡಹಾಗೆ, ಇದು ಯಾವುದನ್ನು ನಾವು considerationನಲ್ಲಿ ತೆಗೆದುಕೊಳ್ಳದೇ ಹೋದರೆ, ನಮಗೆ 34 ಟಿಎಂಸಿ ನೀರು ಎಂದು ಹೇಮಾವತಿಯಲ್ಲಿ ಹೇಳುತ್ತಿದ್ದಾರೆ ಮಾನ್ಯ ಪ್ರಕಾಶ್ ರವರೆ, ಅದರಲ್ಲಿ 22 ರಿಂದ 23 ಟಿಎಂಸಿ ನೀರು ಮಾತ್ರ ಇರಿಗೇಷನ್‌ಗೆ ಸಿಗುತ್ತಿದೆ ಅದೂ ಕೂಡ ಹೇಮಾವತಿ ಡ್ಯಾಂ ತುಂಬಿದ ಮೇಲೆ 6,55,000 ನೀವು irrigate ಮಾಡಿಕೊಳ್ಳಬಹುದು, ನಮ್ಮ ತಕರಾರು ಇಲ್ಲವೆಂದು ಎಂದು ಅವರು ವರದಿ

ಸ್ವಲ್ಪ ಕೊಟ್ಟರೆ ಅವೈಜ್ಞಾನಿಕವಾಗಿ ಹೇಳಿದ ಹಾಗೆ ಅನಿಸುತ್ತದೆ ಇದನ್ನು ನಾವು ಪುನ ಪುನರ್ ಪರಿಶೀಲನೆಗೆ ತೊಡಗಿಸಿಕೊಳ್ಳಬೇಕಾಗುತ್ತದೆ ಇದರ ಜೊತೆಗೆ ಇವತ್ತು ಏನಾಗಿದೆ ಎಂದರೆ, ನಾವು ಇವತ್ತು ಬರ, ಬರ ಎಂದು ಒಂದೇ ಸಮನೆ ಬೊಬ್ಬೆ ಇಡುತ್ತಿದ್ದೇವೆ ಬರೀ ರಾಜ್ಯ ಸರ್ಕಾರಗಳೇ drought-prone area programmeಗಳಿಗೆ ಖರ್ಚುಮಾಡುತ್ತಿಲ್ಲ ಕೇಂದ್ರ ಸರ್ಕಾರವೂ ಕೂಡ ಸುಮ್ಮನೇ ಹಣವನ್ನು ಖರ್ಚು ಮಾಡುತ್ತಿದೆ ಅವರೆ ವರದಿಯನ್ನು ಕೊಡುತ್ತಾರೆ, ಚಿಕ್ಕನಾಯಕನಹಳ್ಳಿ, ಶಿರಾ, ಮಧುಗಿರಿಯ ಕೆಲವು ಭಾಗ 2020ನೇ ವರ್ಷಕ್ಕೆ ಮರಳುಗಾಡಾಗುತ್ತದೆ If surface water is not recharged they are going to be deserts ನಾವು ಇದನ್ನು ಯಾರಿಗೆ ಹೇಳಲಿ? ನಾವೆಲ್ಲರೂ ಇಲ್ಲಿ ನಿಂತುಕೊಂಡು ಚೆನ್ನಾಗಿ ಮಾತನಾಡುತ್ತೇವೆಂದು ಅನಿಸಬಹುದು ಚಿಕ್ಕನಾಯಕನಹಳ್ಳಿ 2020ನೇ ಇಸವಿಗೆ ಮರುಳುಗಾಡಾದರೆ ಅದರಿಂದ ಪ್ರಯೋಜನ ಏನಾಗುತ್ತದೆ? ನಾನು ನಿಮಗೆ ಅವತ್ತಿನಿಂದಲೇ ಹೇಳಿಕೊಂಡು ಬಂದಿದ್ದೇನೆ surface water ಅನ್ನು recharge ಮಾಡದೇಹೋದರೆ Tanks ಏನಾದರೂ ತುಂಬದೇ ಹೋದರೆ, 800 ರಿಂದ 1000 ಅಡಿಗೆ ಏನು ನೀರು ಹೋಗಿದೆ ಅದನ್ನು ಏನಾದರೂ ಮೇಲ್ಮಟ್ಟಕ್ಕೆ ಸ್ವಲ್ಪ ಭೂಮಿಯ ಮೇಲೆ 150 ರಿಂದ 200 ಅಡಿಗೆ ತೆಗೆದುಕೊಳ್ಳುವಂತಹ ಸ್ಥಿತಿಯನ್ನು ನೀವು ನಿರ್ಮಾಣ ಮಾಡದೇಹೋದರೆ ಮುಂದೆ 4-5 ಜಿಲ್ಲೆಗಳು, ಈ ರಾಜ್ಯದಲ್ಲಿ ರಾಜಾಸ್ಥಾನಕ್ಕಿಂತ ಭೀಕರವಾದ ಬರಗಾಡುಗಳು ಆಗುತ್ತದೆ

(ಈ ಹಂತದಲ್ಲಿ ಮಾನ್ಯ ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದ್ದರು)

ಮಾನ್ಯ ಈಶ್ವರಪ್ಪನವರೆ, ಇದರಲ್ಲಿ ಎರಡು ಮಾತಿಲ್ಲ ನಿಮಗೆ ಒಳ್ಳೆಯ ಅವಕಾಶವನ್ನು ಭಗವಂತನು ಕೊಟ್ಟಿದ್ದಾನೆ ಇದಕ್ಕೆ ನೀವು ಏನಾದರೂ ಮಾಡಿ ಕೆರೆಯನ್ನು ತುಂಬಿಸಿಬಿಡಿ ನಾವು ಇರಿಗೇಷನ್‌ಗೆ ನೀರನ್ನು ಕೇಳಿರಲಿಲ್ಲ ನಾವು ಇರಿಗೇಷನ್‌ಗೆ ನೀರನ್ನು ಕೊಡಿ ಎಂದು ಕೇಳುವುದಿಲ್ಲ ಕನಿಷ್ಟ Drinking water recharge ಆಗುವಷ್ಟಾದರೂ ಮಾಡಿ, ಹಾಗೂ borewell ಅನ್ನು recharge ಆದರೂ ಮಾಡಿ ಇದನ್ನು ತಾವು ಮಾಡಬೇಕಾದರೆ tribunal ಎಲ್ಲಿಯಾದರೂ ಒಂದು ಕಡೆ consideration ಕೊಡಬೇಕಾಗುತ್ತದೆ ನಾವು ಉದಾರವಾಗಿ 5 ಟಿಎಂಸಿ ನೀರನ್ನು ತೆಲುಗು ಗಂಗಾದಿಂದ ಚೆನ್ನೈ ಸಿಟಿಗೆ ಕೊಟ್ಟಿದ್ದೇವೆ ನಮ್ಮ ಕೃಷ್ಣಭಾಗದಲ್ಲಿ, ಕೃಷ್ಣ ಪಾಲಿನಲ್ಲಿ 5 ಟಿಎಂಸಿ ನೀರನ್ನು ಚೆನ್ನೈ ಸಿಟಿಗೆ ಕೊಟ್ಟಿದ್ದೇವೆ ಏಕೆ? humanitation grounds ಮೇಲೆ

ಕೊಟ್ಟಿದ್ದೇವೆ ಅಲ್ಲಿ ಕುಡಿಯುವುದಕ್ಕೆ ನೀರಿಲ್ಲವೆಂದಾಗ ನಾವು ಕೊಡುವುದಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ ಅದನ್ನು ಏನಾದರೂ ಈ tribunal considerationನಲ್ಲಿ ತೆಗೆದುಕೊಳ್ಳಬೇಕಾಗಿತ್ತು ಎಂದು ನನ್ನ ಭಾವನೆಯಾಗಿದೆ Judgmentನಲ್ಲಿ ಏನು ಕೊಟ್ಟಿದ್ದೆ ಅದನ್ನು ಬಹಳ ವ್ಯಾಪಕವಾಗಿ ನಾನು ಓದಿದ್ದೇನೆ ಹಾಗಾಗಿ ಹೇಳುತ್ತಿದ್ದೇನೆ ಅನೇಕ ಕಡೆಗಳಲ್ಲಿ tribunalನವರು ನಮಗೆ ನ್ಯಾಯವನ್ನು ಒದಗಿಸಬಹುದಾಗಿತ್ತು ಸನ್ಮಾನ್ಯ ಈಶ್ವರಪ್ಪನವರೆ, 129 ಟಿಎಂಸಿ underground water ತಮಿಳುನಾಡಿನಲ್ಲಿ upto the level of 3 to 4 mtrs availability ಇದೆ ಎಂದು ಹೇಳುತ್ತಿದ್ದಾರೆ ಅದಕ್ಕಿಂತ ಆಳವಾಗಿ ನಾನು ಮಾತನಾಡುವುದಿಲ್ಲ 3 ರಿಂದ 4 ಮೀಟರ್ ಬಾವಿಯನ್ನು ಮಾಡಿಕೊಂಡರೆ 129 ಟಿಎಂಸಿ ಸಿಗುತ್ತದೆ ಎಂದು United Nations Organisazation survey ಏನು ಹೇಳಿದೆ, ಅದರ ಮೇಲೆ ತಮಿಳುನಾಡು 47 ಟಿಎಂಸಿಯನ್ನು ತೆಗೆದುಕೊಳ್ಳುತ್ತೇವೆಂದು ಒಪ್ಪಿಕೊಂಡಿದ್ದಾರೆ ಅದನ್ನು ಅವರು ಎಲ್ಲಿಯಾದರೂ considerationಗೆ ತೆಗೆದುಕೊಳ್ಳಬಹುದಾಗಿತ್ತು ಬೇಡ 20 ಟಿಎಂಸಿಯನ್ನು ತೆಗೆದುಕೊಳ್ಳಬಹುದು ಎಂದು ಅವರೇ ಏನು ಒಂದು ಕಡೆಯಲ್ಲಿ, ನಮ್ಮ tribunal members ಮಾತನಾಡಿದ್ದಾರೆ Final decision ಗೆ ಬರಬೇಕಾದಾಗ, orderನ್ನು ಪಾಸ್ ಮಾಡಬೇಕಾದರೆ ಆ 20 ಟಿಎಂಸಿ ನೀರು ಅವರ ಷೇರು ಎಂದು ಒಪ್ಪಿಕೊಳ್ಳಬೇಕಾಗಿತ್ತು ಇದರ ಬಗ್ಗೆ ಅವರು ಮಾತನಾಡಿದ್ದಾರೆ. Operative portion ಅನ್ನು ನಾನು ಓದಿದ್ದೇನೆ Tamil Nadu can make use of 20 tmc feet of underground water ಅದರೆ ಅವರು ಏನು ಹೇಳುವುದು, ನನಗೆ ಎಲ್ಲೂ standard fix ಆಗಿರುವುದು ಗೊತ್ತಿಲ್ಲ ನನಗೆ ಎಲ್ಲೂ ಲಾಜಿಕ್ ಇಲ್ಲ, underground water ಅನ್ನು mention ಮಾಡಿ ಇಷ್ಟೇ ಸಿಗುತ್ತದೆ, ಅಷ್ಟೆ ಸಿಗುತ್ತದೆಂದು ಎಂದು ಹೇಳಲು ಗೊತ್ತಿಲ್ಲ ಹಾಗಾಗಿ ನಾವು underground water issue ಅನ್ನು complete ಆಗಿ drop ಮಾಡಿ and we are not going to dig this issue at all ಎಂದು ಹೇಳಿದ್ದಾರೆ ಇದು ನಮಗೆ ದುರ್ದೈವ ಅವರು ಏನಾದರೂ underground waterನ್ನು estimate ಮಾಡಿ ನೀರು ತೆಗೆದುಕೊಂಡಿದ್ದರೆ ಜೂನ್, ಜುಲೈ, ಆಗಸ್ಟ್, ಸೆಪ್ಟೆಂಬರ್ 4 ತಿಂಗಳಲ್ಲಿ ನೀವು ಏನು stagger ಮಾಡಿ ಕೆಆರ್ಎಸ್ ನಿಂದ ಅಥವಾ ನಮ್ಮ

ರಾಜ್ಯದಿಂದ ನೀರು ಬಿಡುತ್ತಿದ್ದೆವು, ಆ ತಿಂಗಳಲ್ಲಿ ಪಾಸು ಮಾಡುವುದಕ್ಕೆ ಆಗಿದ್ದರೆ, ನೀವು ಜೂನ್‌ನಲ್ಲಿ ಏನು, 10 ಟಿಎಂಸಿ ಕೊಡಿ, ಜುಲೈನಲ್ಲಿ 15–20 ಟಿಎಂಸಿ ನೀರು ಕೊಡಿ, ಸೆಪ್ಟೆಂಬರ್ ನಲ್ಲಿ 30–33 ಟಿಎಂಸಿ ನೀರನ್ನು ಕೊಡಿ ಎಂದು ಹೇಳಿದ್ದಾರೆ ಆ ಅವಧಿಯಲ್ಲಿ ನಮಗೆ ನೀವು ದಯಮಾಡಿ ನೀರನ್ನು ಉಳಿಸಿ ಬಿಟ್ಟಿದ್ದರೆ ಕರ್ನಾಟಕ್ಕೆ ಇಷ್ಟು ದೊಡ್ಡ ದುರಂತವಾಗುತ್ತಿರಲಿಲ್ಲ ಏಕೆ? ಜೂನ್ ತಿಂಗಳಲ್ಲಿ ಅವರು ಬೆಳೆಯನ್ನು ಹಾಕಿರುವುದಿಲ್ಲ ಅಲ್ಲಿ ಅವರು ನಾಟಿ ಅಥವಾ ಒಟ್ಟಲು ತುಂಬಿಸುತ್ತಿರುತ್ತಾರೆ ಅವರು actual ಆಗಿ ಅದನ್ನು ಹೊತ್ತುಕೊಂಡು ಬಂದು ಒಂದು ತಿಂಗಳಲ್ಲಿ ನಾಟಿಯನ್ನು ಹಾಕುತ್ತಾರೆ ಆ ಒಂದು–ಒಂದೂವರೆ ತಿಂಗಳಲ್ಲಿ ನಾವು ಏನು ನೀರನ್ನು ಬಿಡುತ್ತೇವೆ, ಆ ನೀರು ತಮಿಳುನಾಡಿಗೆ ಅಗತ್ಯವೇ ಇರಲಿಲ್ಲ ಆ underground water ಸಾಕಾಗುತ್ತಿತ್ತು ಅವರು ಅದನ್ನು ಬಳಸಿಕೊಳ್ಳಬಹುದಾಗಿತ್ತು ಅದನ್ನು ಅವರು tribunalನಲ್ಲಿ ಹೇಳಬಹುದಾಗಿತ್ತು ಹಾಗೇನಾದರೂ ಮಾಡಬಹುದಾಗಿತ್ತು ನಮ್ಮ ಮುಂದಿರುವ ಪ್ರಶ್ನೆ, ಈ ಮೂರು ತಿಂಗಳನ್ನು ಏನು ಫಿಕ್ಸ್ ಮಾಡಿದ್ದರೆ ನಿಮ್ಮದು stagger ಮಾಡಿ releases to Tamil Nadu water ಅನ್ನು, ಆ ಕಡೆ ತಾವು stress ಮಾಡಬೇಕಾಗಿದೆ ಆ ಕಡೆ ತಾವು ಏನಾದರೂ ಆ 3 ತಿಂಗಳಲ್ಲಿ ಒಂದು ಅರ್ಧಭಾಗ ನೀರನ್ನು ಕರ್ನಾಟಕದ ಡ್ಯಾಂಗಳಲ್ಲಿ ಉಳಿಸಿಕೊಳ್ಳುವಂತಹ ಸ್ಥಿತಿಯನ್ನು ನಿರ್ಮಾಣ ಮಾಡಬೇಕಾಗಿದೆ ಏಕೆ? ನಮ್ಮ ಮಳೆಗಾಲ ಜೂನ್‌ನಿಂದ ಸೆಪ್ಟೆಂಬರ್ ತಿಂಗಳಲ್ಲಿ ಮುಗಿದುಹೋಗುತ್ತದೆ ತಮಿಳುನಾಡಿನಲ್ಲಿ ಮಳೆಗಾಲ ಸೆಪ್ಟೆಂಬರ್‌ನಿಂದ ಆರಂಭವಾಗುತ್ತದೆ ನಮ್ಮ ಮಳೆಗಾಲ ಬಂದು, ನೀರು ತುಂಬಿ ಆದಮೇಲೆ ಏನು ನೀರು ಬರುತ್ತದೆ, ಆ ನೀರನ್ನು ನಾವು ಇಟ್ಟುಕೊಳ್ಳುವುದಕ್ಕಾಗುವುದಿಲ್ಲ ಆ ನೀರು ತಮಿಳುನಾಡಿಗೆ ಹರಿಯಲೇಬೇಕು, ಅದು ಹರಿದುಹೋಗಲೆ, ನಾವೇನು ಅಡ್ಡಿ ಮಾಡುವುದಕ್ಕೆ ಬರುವುದಿಲ್ಲ August–Septemberನಲ್ಲಿ ನೀರು ಹೋಗುತ್ತದೆ ಅದನ್ನು ಯಾರೂ ಕೂಡ ತಡೆಯುವುದಕ್ಕಾಗುವುದಿಲ್ಲ ನಾವು ನೀರನ್ನು ಕೊಡುವುದಕ್ಕಾಗುವುದಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ ಆ ನೀರು ಹೋಗಲೇಬೇಕು ತಾವು ಮಾಡಬೇಕಾಗಿರುವ ಕರ್ತವ್ಯ ಜೂನ್, ಜುಲೈ ತಿಂಗಳಲ್ಲಿ, ಹೇಗಾದರೂ ಮಾಡಿ ನಮ್ಮ ನೀರನ್ನು ಅವರು ಇಷ್ಟೆ ರಿಲೀಸ್ ಮಾಡಿ ಎಂದು ಅದೇಶವನ್ನು ಕೊಟ್ಟಿದ್ದಾರೆ, ಅದನ್ನು ತಾವು ಸ್ವಲ್ಪ ಮಟ್ಟಿಗೆ ಅಮೆಂಡ್ ಮಾಡಿಸಬೇಕಾಗುತ್ತದೆ ಅದರಲ್ಲಿ ಅರ್ಧವನ್ನಾದರೂ ಕೂಡ

ನಮಗೆ ಉಳಿಸಿಕೊಳ್ಳಬೇಕಾಗುತ್ತದೆ ಇನ್ನು ಎರಡನೆಯದಾಗಿ 10 ಟಿಎಂಸಿ ನೀರನ್ನು enviornmental & ecological balanceಗೆ ಇಡುತ್ತೇವೆಂದು ಏನು ಹೇಳಿದ್ದಾರೆ ನಮ್ಮ ನೀರನ್ನು ಸ್ವಲ್ಪ ತಮಿಳುನಾಡು enviornmentನಲ್ಲಿ balance ಮಾಡುತ್ತೇವೆಂದು ಹೇಳುವುದರಲ್ಲಿ ಅರ್ಥವಿಲ್ಲ ನೀರು ನಾವು ಕೊಡುವುದು, ಅವರ ರಿವರ್‌ನಲ್ಲಿ ನೀರು ಮೆಂಟೇನ್ ಮಾಡಿಬಿಟ್ಟು Ecological and Environmental balance ಮಾಡುತ್ತೇವೆಂದು ಹೇಳುವುದರಲ್ಲಿ ಅರ್ಥವಿಲ್ಲ, ಇಲ್ಲಿಯೂ ಹಕ್ಕಿ ಪಕ್ಷಿಗಳಿವೆ, ಇಲ್ಲಿಯೂ humidity maintain ಆಗಬೇಕಾಗಿದೆ, ಇಲ್ಲಿಯೂ ಸಹ ತಂಪಿರಬೇಕಾಗುತ್ತದೆ, ಅವರು ಭಾರಿ ತಂಪಾಗಿರಬೇಕೆಂದರೆ ಅವರ ಪಾತ್ರದಲ್ಲಿರುವ ಅವರ ಭಾಗದಲ್ಲಿರುವ ನೀರನ್ನು ಬಿಟ್ಟುಕೊಂಡು ಮಾಡಲಿ ಎಂದು ಹೇಳಬಹುದಾಗಿತ್ತು, ಮತ್ತು escapes ನ 4 ಟಿ ಎಂ ಸಿ ನೀರನ್ನು ನೀವು ಒಪ್ಪಿಕೊಂಡಿದ್ದೀರಿ, ಅದು ಸಮುದ್ರಕ್ಕೆ ಹೋಗಬಹುದು, ಆ ಕಡೆ ಈ ಕಡೆ ದಡ ಒಡೆದು ಹೋಗಬಹುದು ಎಂದು ಏನು ನೀವು ಒಪ್ಪಿಕೊಂಡಿದ್ದೀರಿ, ಆ 4 ಟಿ ಎಂ ಸಿ ನೀರನ್ನು ಅವರಿಗೆ ಕೊಟ್ಟುಬಿಟ್ಟು ನಮಗೆ ನೀರಿನ ಜವಾಬ್ದಾರಿಯನ್ನು ಕೊಡುವ ಅಗತ್ಯವಿರಲಿಲ್ಲ ನಾವೇ 4 ಟಿ ಎಂ ಸಿ ನೀರನ್ನು ಅವರಿಗೆ ಕೊಡಬೇಕು ಎಂದು ಹೇಳುವ ಅಗತ್ಯವಿರಲಿಲ್ಲ ಈ ಕಡೆ ಹೆಚ್ಚು ಒತ್ತನ್ನು ನಾವು ಕೊಡಬೇಕಾಗಿದೆ ಮತ್ತು ನಮ್ಮ ಮಾನ್ಯ ವಾಟಾಳ್ ನಾಗರಾಜ್‌ರವರ ಕ್ಷೇತ್ರದ ಕಬಿನಿಯದೇನು 21 ಟಿ ಎಂ ಸಿ ನೀರಿದೆ, ತಾವು ಅದಕ್ಕೆ fight ಮಾಡಲೇಬೇಕು ಕಬಿನಿ ಡ್ಯಾಂ ಕಟ್ಟಿರುವವರು ನಾವು ನೀರಿಗೆ ಯಜಮಾನರು ಕೇರಳದವರು, ಅವರಿಗೆ infrastructure ಇಲ್ಲ, ಪ್ರಾಜೆಕ್ಟ್‌ಗಳನ್ನಾಗಲಿ, ಗದ್ದೆಗಳನ್ನಾಗಲಿ ಮಾಡುವ ಹಾಗಿಲ್ಲ ಅಲ್ಲಿಯವರೆಗೆ ತಮಿಳುನಾಡಿನವರು ನೀರನ್ನು ತೆಗೆದುಕೊಳ್ಳಿ ಎನ್ನುವುದು ವೈಜ್ಞಾನಿಕವೆಂದು ನಮಗೆ ಅನ್ನಿಸುತ್ತಿಲ್ಲ

ಶೀ ವಾಟಾಳ್ ನಾಗರಾಜ್ – ಅದು ಯಾವ ನೀತಿಯೆಂದು ನಮಗೆ ಅರ್ಥವಾಗುತ್ತಿಲ್ಲ

ಶೀ ಜೆ ಸಿ ಮಾಧುಸ್ವಾಮಿ – ಇದು ಮಾತ್ರ ನಮಗೆ ವೈಜ್ಞಾನಿಕ ಎಂದು ಅನ್ನಿಸುವುದಿಲ್ಲ ಕೇರಳಕ್ಕೆ ನೀರು ಕೊಡಿ ಎಂದು ಹೇಳಲಿ, ಕೇರಳಕ್ಕೆ ಧರ್ಮವಾಗಿ ಕೊಡಬೇಕು ಏಕೆಂದರೆ ಅವರಿಗೆ ಅಲಾಟ್ ಆಗಿರುವುದೇ 30

ಟಿ ಎಂ ಸಿ ನೀರು 21 ಟಿ ಎಂ ಸಿ ಒಂದು ಕಡೆ, 6 ಟಿ ಎಂ ಸಿ ಒಂದು ಕಡೆ 3 ಟಿ ಎಂ ಸಿ ಒಂದು ಕಡೆ 21 ಟಿ ಎಂ ಸಿ ಕಬಿನಿಯಿಂದ, 6 ಟಿ ಎಂ ಸಿ ನೀರು ಭವಾನಿಯಿಂದ, 3 ಟಿ ಎಂ ಸಿ ಅಮರಾವತಿ ನದಿಯಿಂದ ಅವರಿಗೆ ಅಲಾಟ್ ಮಾಡಿದ್ದಾರೆ ಹಾಗಾಗಿ ಕೇರಳಕ್ಕೆ ತಕರಾರು ಮಾಡುವುದು ನಮಗೂ ಸಹ ಸರಿಯೆನ್ನಿಸುವುದಿಲ್ಲ ಆದರೆ ಇವರು ಒಪ್ಪುತ್ತಾರೆ, ಕೇರಳಕ್ಕೆ infrastructure ಇಲ್ಲ, ಕೇರಳದವರು ಡ್ಯಾಮ್ ಮಾಡಲಿಲ್ಲ, ಕೇರಳದಲ್ಲಿ ಇನ್ನೂ ಬಹಳ ವಿಷಯವೆಂದರೆ, ಕೇರಳದವರಿಗೆ ಇವರು ಅಫಿಡವಿಟ್ ಹಾಕಿಸಿಕೊಂಡಿದ್ದಾರೆ ನಿಮ್ಮ ಟ್ರಿಬ್ಯುನಲ್‌ನವರು ಕೇರಳ ಅಡ್ವೋಕೇಟ್ಸ್‌ಗೆ ಕೌಂಟರ್ ಮಾಡಿದ್ದಾರೆ ಏನು ಮಾಡಿದ್ದಾರೆಂದರೆ Since 20 years, paddy growing area in Kerala is reduced by 50% It is on the basis of socio-economic survey report of Kerala State ಕೇರಳ ರಾಜ್ಯದಲ್ಲಿ ಕಳೆದ 20 ವರ್ಷಗಳಲ್ಲಿ ಭತ್ತ ಬೆಳೆಯಲು ಇದ್ದ ಜಾಗ ಅರ್ಧದಷ್ಟು ಕಡಿಮೆಯಾಗಿದೆ ಸ್ಪೈಸಸ್ ಬೆಳೆಯುತ್ತಿದ್ದೀರಿ, ಅಡಿಕೆ ಬೆಳೆಯುತ್ತಿದ್ದೀರಿ, ಗಾರ್ಡನ್‌ಗೆ ಹೋಗಿದ್ದೀರಿ, ನಿಮಗೇತಕ್ಕೆ ಇಷ್ಟು ನೀರು ಎಂದು ಕೇಳಿದ್ದಾರೆ ಅವರು ಮಾತೆಲ್ಲಾ ಚೆನ್ನಾಗಿ ಆಡಿದ್ದಾರೆ ಅದರಲ್ಲಿ ಏನೂ ಮಾತಿಲ್ಲ, ರಬ್ಬರ್ ಬೆಳೆಯುತ್ತಿದ್ದೀರಿ, you yourself have admitted that Paddy ನಮಗೆ work out ಆಗುವುದಿಲ್ಲವೆಂದು, ಹಾಗಾಗಿ ಈಗ ಏತಕ್ಕೆ ಬಂದಿದ್ದೀರಿ ಎಂದು ಕೇಳಿದ್ದಾರೆ ಆದರೂ ನೀರನ್ನು allot ಮಾಡುತ್ತಾರೆ ಮತ್ತು ಅವರಿಗೆ ಹೇಳುತ್ತಾರೆ, ನಿಮಗೆ ಗೊತ್ತಿರುವ ಹಾಗೆ west coast flowing water ಅನ್ನು ನಾನು allot ಮಾಡುವುದಿಲ್ಲ ನಿಮ್ಮ Hydro electric project ಅನ್ನು allow ಮಾಡುವುದಿಲ್ಲವೆಂದು ಹೇಳುತ್ತಾರೆ ಕಾರಣ ಚೆನ್ನಾಗಿ ಕೊಡುತ್ತಾರೆ, "Electric generation of power can be made by many means, but Irrigation can be done only by water" ಇದೇ ಪದವನ್ನು ಅವರು ಬಳಸುತ್ತಾರೆ Irrigation can be done only by water Power generation ಅನ್ನು ನೀವು ಬೇಕು ಬೇಕಾದ ಮೂಲಗಳಿಂದ ಮಾಡಬಹುದು ಎಂದು ಹೇಳಿದ್ದಾರೆ ಅಷ್ಟೊಂದು ಒಳ್ಳೆಯ ಮಾತನ್ನಾಡಿ, ಕೇರಳಕ್ಕೆ ನೀರುಬಿಡುವುದು, ಡ್ಯಾಮ್ ನಾವು ಕಟ್ಟುವುದು, ಕೇರಳದವರು ಮಾಡುವವರೆಗೆ ತಮಿಳುನಾಡಿನವರು ಅಲ್ಲಿಯವರೆಗೆ ನೀರು ತೆಗೆದುಕೊಳ್ಳುತ್ತಿರಲಿ ಎಂದು ಹೇಳುವುದು ವಾಸ್ತವವಾದ ತೀರ್ಮಾನವಲ್ಲ

ಮೂರನೆಯದಾಗಿ ಡ್ಯಾಮ್ ಅನ್ನು ನಾವು ಕರ್ನಾಟಕದವರು ಕಟ್ಟಿರುವುದು, ಎಂಥಾ ದುಸ್ಥಿತಿಯಲ್ಲಿ ಕಟ್ಟಿದ್ದೇವೆಂದರೆ ಮಾನ್ಯ ಪ್ರಕಾಶ್‌ರವರೆ, ನಮಗೆ ಪ್ಲಾನಿಂಗ್ ಕಮಿಷನ್‌ನ ಅಪ್ರೂವಲ್ ಇಲ್ಲದಿದ್ದರೂ ಡ್ಯಾಮ್ ಮಾಡಿದ್ದೇವೆ ನಮ್ಮ ಡ್ಯಾಮ್ ಮೇಲೆ ಅಧಾರಿಟಿ ಮಾಡಿಬಿಟ್ಟು ಇವತ್ತು ನೀವು ಕುಳಿತುಕೊಳ್ಳಿ ಎಂದು ಹೇಳಲಿಕ್ಕೆ ಬಹುಶ ಯಾವುದೇ ರಾಜ್ಯಾಂಗ ದಲ್ಲಿ ಇವರಿಗೆ ಅವಕಾಶ ಇರಲಿಲ್ಲ Dams are built by Karnataka alone ನಮಗೆ ಯಾವುದೇ Central assistance ಸಿಗಲಿಲ್ಲ ಡ್ಯಾಮ್ ಮಾಡಲಿಕ್ಕೆ ಕ್ಲಿಯರೆನ್ಸ್ ಇರಲಿಲ್ಲ ಒರಟು ಆಟ ಆಡಿಕೊಂಡು ಕಟ್ಟಿ ಇವತ್ತು ನಾವು ಉಳಿಸಿಕೊಂಡಿದ್ದೇವೆ ಆ ಡ್ಯಾಮ್ ಮೇಲೆ ಇವತ್ತು ಅಧಾರಿಟಿ ಮಾಡುವುದಂತೆ ಆ ಅಧಾರಿಟಿಯಲ್ಲಿ ನಿಂತುಕೊಂಡು ರೆಗ್ಯುಲೇಟ್ ಮಾಡುವುದಂತೆ ಇದು ಸಾಧ್ಯವಿಲ್ಲದ ಮಾತು, ಇದನ್ನು ನಾವು ಒಪ್ಪಲಿಕ್ಕಾಗುವುದಿಲ್ಲ ಇದನ್ನು ನೀವು ನಿಮ್ಮ ವಕೀಲರ ಕಡೆಯಿಂದ ಹೇಳಿಸಬೇಕು ಈ ಬಿಳಿಗುಂಡ್ಲು, ಮೆಟ್ಟೂರು, ಇದರಲ್ಲಿ ನಮ್ಮ ಟ್ರಿಬ್ಯುನಲ್‌ನವರನ್ನು ದೂರಬೇಕೆಂದಿಲ್ಲ Of course, ನಮ್ಮ ಅಡ್ವೋಕೇಟ್ಸ್ ನಾವು ಮೆಟ್ಟೂರಿನಲ್ಲಿ water ಅನ್ನು measure ಮಾಡಿ ಕೊಡಲಿಕ್ಕೆ ಆಗುವುದಿಲ್ಲ ಬಿಳಿಗುಂಡ್ಲೂವಿನಲ್ಲಿ fix ಮಾಡಿ ಅಥವಾ ನಮ್ಮ border ನಲ್ಲಿ fix ಮಾಡಿ ಎಂದು ಮಾನ್ಯ ಈಶ್ವರಪ್ಪನವರು ಕೇಳಿಕೊಂಡು ಬಿಟ್ಟಿದ್ದಾರೆ So, on that case, ನಿಮಗೆ ಇಲ್ಲೇ fix ಮಾಡಿ ಎಂದು ಕೊಟ್ಟರು 205 ಟಿ ಎಂ ಸಿ ನೀರು ಏನು ಹೋಗುತ್ತಿತ್ತು, ಅದು ಇಡೀ ಟ್ರಿಬ್ಯುನಲ್‌ಗೆ, assessors ಗೆ ಗೊತ್ತಿತ್ತು ಎಲ್ಲರಿಗೂ ಗೊತ್ತಿತ್ತು, ಬಿಳಿಗುಂಡ್ಲುವಿನಿಂದ ಆಚೆ 19 ಕಿ ಮೀ ನಲ್ಲಿ 25 ಟಿ ಎಂ ಸಿ ನೀರು ತಮಿಳುನಾಡಿಗೆ ಅಲ್ಲಿಂದ ಹರಿದು ಹೋಗುವುದು ನಮಗೆ ಗೊತ್ತಿತ್ತು Another 25 T M.C is added ಎಂದು ನಮಗೆ ಗೊತ್ತಿತ್ತು ವಾಸ್ತವವಾಗಿ ನಾವು 180 ಟಿ ಎಂ ಸಿ ನೀರನ್ನು ಮಾತ್ರ ಬಿಡುತ್ತಿದ್ದುದು ಕರ್ನಾಟಕದವರು ಬಿಳಿಗುಂಡ್ಲುವಿನ ಹತ್ತಿರ measure ಮಾಡಿ ಬಿಟ್ಟಿರುವುದು 180 ಟಿ ಎಂ ಸಿ ನೀರು ಮಾತ್ರ ಆ 180 ಟಿ ಎಂ ಸಿ ನೀರನ್ನು ಇವತ್ತು 192 + 10=212 ಟಿ ಎಂ ಸಿ ಗೆ ತೆಗೆದುಕೊಂಡು ಹೋಗಿರುವುದು ಅವೈಜ್ಞಾನಿಕ Assessors ಹೇಳಿರುವುದಕ್ಕಿಂತ ಕಡಿಮೆ ಆಗಬಹುದು ಎಂದು ನಾವು ಆಸೆ ಇಟ್ಟುಕೊಂಡು, ಟ್ರಿಬ್ಯುನಲ್ ಒಳ್ಳೆಯ ಜಡ್ಜ್‌ಮೆಂಟ್ ಕೊಡುತ್ತದೆಂದರೆ ಅದಕ್ಕಿಂತ 12–13 ಟಿ ಎಂ ಸಿ ಜಾಸ್ತಿ ಕೊಡುವ ಸ್ಥಿತಿಯೇನು ನಿರ್ಮಾಣವಾಗಿದೆ, ಇದನ್ನು ತಾವು ಎಲ್ಲಾದರೂ ನಮ್ಮ ಲಾಯರ್‌ಗಳ

ಮೂಲಕ ಪ್ರತಿಭಟಿಸಲೇಬೇಕು ನನಗೆ ಅನ್ನಿಸುತ್ತದೆ ಅಧ್ಯಕ್ಷರೇ, We have a case for clarification and seeking guidance for implementation. ಇದರಲ್ಲಿ ಅನುಮಾನವೇ ಇಲ್ಲ ಮಾನ್ಯ ಪ್ರಕಾಶ್‌ರವರೇ ನೀವು ಸೆಕ್ಷನ್ 5(3)ರ ಕೆಳಗೆ ಹೋಗುತ್ತೀರಾ? IXth ಷೆಡ್ಯೂಲ್‌ನಲ್ಲಿ ರೆವ್ಯೂ ಕೇಳುವಿರಾ? ನಮಗಂತೂ ಅವಕಾಶವಿದೆ, ನಾವು ಅಂದು ಮಾತನಾಡುವಾಗ ಹೇಳಿದಿರಲ್ಲ, ನಿಮ್ಮ "Cauvery tribunal has taken a decision. The clarification is nothing but a review" ಎಂದು ಆ Tribunal decision ಕೂಡ ಇವತ್ತು ಆಗಿಬಿಟ್ಟಿದೆ ನಾವೇನು ರಿವ್ಯೂ ಮಾಡಲಿಕ್ಕಾಗುವುದಿಲ್ಲ ಕೇಳುವುದಕ್ಕಾಗುವುದಿಲ್ಲವೆಂದು ಅಂದುಕೊಂಡಿದ್ದೇವೆ, Krishna Tribunal has taken a decision that it can be reviewed ಎಂದು ಇಲ್ಲದಿದ್ದರೆ ಅಲ್ಲಿ ಕರ್ನಾಟಕಕ್ಕೆ 750 ಟಿ ಎಂ ಸಿ ನೀರು ಸಿಗುತ್ತಿರಲಿಲ್ಲ 500 ಚಿಲ್ಲರೆ ಟಿ ಎಂ ಸಿ ನೀರಿನಲ್ಲಿ ನಾವು ಕುಳಿತಿರಬೇಕಾಗಿತ್ತು ಕೃಷ್ಣಾದಲ್ಲೇನು ನಮಗೆ ನ್ಯಾಯಾಧಿಕರಣ ಮಾಡಿದವರು ನೀವು ರೆವ್ಯೂ ಮಾಡಬಹುದೆಂದು ಒಪ್ಪಿಕೊಂಡಿದ್ದಾರೆ, ಆ ಆಧಾರದ ಕೆಳಗೆ ತಾವು ಅಲ್ಲಿ ಇವತ್ತು ಹೋಗಬೇಕಾಗಿದೆ ನೀವು ನೀರನ್ನು ಕೇಳಬೇಕಾಗಿದೆ, ಇದರೊಂದಿಗೆ ನಮಗೆ ಇನ್ನೊಂದು 40, 50, 60 ಟಿ ಎಂ ಸಿ ನೀರನ್ನು ಹೆಚ್ಚಿಗೆ ಕೇಳಲಿಕ್ಕೆ ಎಲ್ಲಾ ರೀತಿಯ ಅರ್ಹತೆಯಿದೆ ನಾವು ಒಂದೇ ಬೆಳೆಗೆ ನೀರು ಕೇಳುತ್ತಿದ್ದೇವೆ, ನಾವು production of garden cropsಗಾಗಿ ನೀರು ಕೇಳುತ್ತಿದ್ದೇವೆ ನಾವು semi dry cropsಗಾಗಿ ನೀರು ಕೇಳುತ್ತಿದ್ದೇವೆ ಇಡೀ ಇಂಡಿಯಾ ದೇಶ federal set upನಲ್ಲಿ ಒಂದು ಎಂದು ತಿಳಿದುಕೊಂಡಾಗ, ಇಡೀ ಇಂಡಿಯಾ ದೇಶದ ರೈತರಿಗೆ ರಕ್ಷಣೆ ಕೊಡಲಿಕ್ಕೆ ಕೇಂದ್ರ ಸರ್ಕಾರ ಮತ್ತು ಅದರ ಕೆಳಗೆ ರಚಿತವಾದ ಟ್ರಿಬ್ಯುನಲ್, ಕೋರ್ಟ್ ಸಹಾಯ ಮಾಡಬೇಕಾಗುತ್ತದೆ ಕರ್ನಾಟಕಕ್ಕೆ ಇವತ್ತು protection ಕೊಡಿ ಎಂದರೆ, ಕನಿಷ್ಠ ಒಂದು ಬೆಳೆಯನ್ನು ನಾವು drought prone areaದಲ್ಲಿ ಬೆಳೆಯಲಿಕ್ಕೆ ಅವಕಾಶ ಕೊಡಬೇಕೆಂದಾಗ, ಅವರೇನು 18 ಚಿಲ್ಲರೆ ಲಕ್ಷದಷ್ಟು ಎಕರೆಯಷ್ಟು ಮಾಡಿಕೊಳ್ಳಬಹುದೆಂದು ಹೇಳಿದ್ದಾರೆ ಅದರ ಮೇಲೆ ಒಂದು ಮೂರ್ನಾಲ್ಕು ಲಕ್ಷ ಎಕರೆಯಷ್ಟು ಮಾಡಬಹುದಾಗಿತ್ತು ಅಷ್ಟೇ Maximum Karnataka can go up to 23 to 24 lakh acres ಅದಕ್ಕಿಂತ ಹೆಚ್ಚಿಗೆ ಮಾಡಲಿಕ್ಕೆ ನಮಗೆ ಕಾವೇರಿಯಲ್ಲಿ ಅವಕಾಶವಿರಲಿಲ್ಲ, ನಾವು ಎರಡನೇ ಬೆಳೆ, ಮೂರನೇ

ಬೆಳೆ ಕೇಳಲಿಕ್ಕೆ ಹೋದವರು ಅಲ್ಲ, ಎರಡನೇ ಬೆಳೆಯನ್ನು 1924ಕ್ಕಿಂತ ಹಿಂದುಗಡೆ ಅಚ್ಚುಕಟ್ಟನ್ನು ಡಿಸೈಡ್ ಮಾಡಿದಾಗ, ಬಹುಶ ನಮ್ಮದು ಒಂದು ಲಕ್ಷ ಅಥವಾ ಒಂದು ಲಕ್ಷ ಐದು ಸಾವಿರ ಎಕರೆ ನಮ್ಮದಿತ್ತು ಎಂದು ನಾವು ಒಪ್ಪಿಕೊಂಡಿರುತ್ತಿದ್ದೆವು ಕರ್ನಾಟಕ ಒಂದು ಲಕ್ಷ ಐದು ಸಾವಿರ ಎಕರೆಯಲ್ಲಿದೆ, ತಮಿಳುನಾಡು 15 50 ಲಕ್ಷ ಎಕರೆಯಲ್ಲಿದೆಯೆಂದು ವಿಶ್ವೇಶ್ವರಯ್ಯನವರು ಅವತ್ತು ಅಫಿಡವಿಟ್ ಹಾಕಿದ್ದಾರೆ, ಅದರ ಮೇಲೆ ಏನು 30% enhancement ಕೊಟ್ಟಿರಿ, ಅಲ್ಲಿಂದಲೇ ನಮಗೆ ಅನ್ಯಾಯವಾಗಿದೆ ಇವತ್ತು ನೀವು ಮಾಡಬೇಕಾಗಿರುವುದು, ಒಂದು, 21 ಟಿ ಎಂ ಸಿ ನೀರು ಕಬಿನಿಯಿಂದ ಬಿಡುವುದು ತಮಿಳುನಾಡಿನ underground water capability ಮತ್ತೆ 10+4 ಟಿ ಎಂ ಸಿ 10 ಟಿ ಎಂ ಸಿ Ecological and Environmental balanceಗೆ ಇಟ್ಟಿರುವುದು, 4 ಟಿ ಎಂ ಸಿ escapes ಎಂದು ಇಟ್ಟಿರುವುದು ಇದರ ಬಗ್ಗೆ ತಾವು ಮೊದಲೇ ಅಪೀಲ್ ಹಾಕಿ ಆ ನೀರು ನಮ್ಮದು, ಆ ನೀರಿನ ಮೇಲಿನ ಹಕ್ಕು ನಮ್ಮದು, ಆ ನೀರು ನಮಗೆ ಕೊಡಿ ಎಂದು ಕೇಳಬೇಕಾಗಿತ್ತು ಎರಡನೆಯದು, ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ, staggering ಅನ್ನು change ಮಾಡಿಸಬೇಕಾಗುತ್ತದೆ, ಜೂನ್, ಜುಲೈ, ಆಗಸ್ಟ್‌ನಲ್ಲಿ ನೀರು ಬಿಡಿ ಎಂದು ಅವರು ಹೇಳಿದ್ದಾರೆ, ಅದನ್ನು ಒಂದು, ಎರಡು ತಿಂಗಳು ಮುಂದಕ್ಕೆ ಹಾಕಿಸಿಕೊಂಡು ಹೋದರೆ Karnataka will be having some advantage ಮೂರನೆಯದು, ಚಾಮರಾಜನಗರ ಮತ್ತು ತುಮಕೂರು ಏನಿದೆ, ವರುಣಾ ನಾಲೆಯಿಂದ ಹಿಡಿದು ಕಬಿನಿ ನಾಲೆಯವರೆಗೆ ಆ ಭಾಗ, ಹೇಮಾವತಿ ನಾಲೆಯಿರುವ ಈ ಭಾಗ, ಇವು development ಮಾಡಬೇಕಾಗಿರುವ ಅಚ್ಚುಕಟ್ಟನ್ನು 100% ಟ್ರಿಬ್ಯುನಲ್ ಮುಂದೆ ಹೇಳಬೇಕಾಗಿದೆ 18 ಲಕ್ಷ ಚಿಲ್ಲರೆಯಲ್ಲಿ ನಮ್ಮ ತುಮಕೂರು ಜಿಲ್ಲೆಯ ಹೇಮಾವತಿಯದು 7 ಲಕ್ಷ, ಕಬಿನಿಯದು 1 ಚಿಲ್ಲರೆ ಲಕ್ಷ, ಎಕರೆ ಪ್ರಮುಖವಾಗಿ ಹಿಟ್ ಆಗುತ್ತಿರುವಂಥ ಏರಿಯಾ ಈ ಟ್ರಿಬ್ಯುನಲ್‌ನ ತೀರ್ಮಾನದಿಂದ ನಾವು permanent ಆಗಿ ಅವಕಾಶ ವಂಚಿತರಾಗಿಬಿಡುತ್ತೇವೆ ನಮಗೆ ನೀವು ರಕ್ಷಣೆ ಕೊಡಲಿಕ್ಕೆ ಮುಂದೆ ಬರಬೇಕು ಕೇಸನ್ನು ಹಾಕಲೇಬೇಕು ಟ್ರಿಬ್ಯುನಲ್ ಮುಂದೆ ನಾವು ವಾದ ಮಾಡಬೇಕಾಗಿದೆ ನಾವು ಇನ್ನೊಬ್ಬರನ್ನು ದೂಷಿಸುತ್ತಾ ಕುಳಿತುಕೊಳ್ಳುವುದು ನಮ್ಮ ಕರ್ತವ್ಯವಲ್ಲ ಅವರವರದ್ದು ಅವರು ಕೇಳಿಕೊಳ್ಳುತ್ತಾರೆ 555–566

ಟಿ ಎಂ ಸಿ ನೀರಿಗೆ 419+ ಇನ್ನೊಂದು 10, 20, ಹೆಚ್ಚು ಕಡಿಮೆ 420–430 ಟಿ ಎಂ ಸಿ ನೀರನ್ನು ತೆಗೆದುಕೊಂಡಿದ್ದಾರೆ ನಾವು 53% ನೀರನ್ನು ಕಾಂಟ್ರಿಬ್ಯೂಟ್ ಮಾಡುತ್ತಿದ್ದೇವೆ 33–34% ನಮಗೆ ಷೇರು ಕೊಟ್ಟಿದ್ದಾರೆ ಅವರು 30% ನೀರನ್ನು ಕಾಂಟ್ರಿಬ್ಯೂಟ್ ಮಾಡಿ more than 50% water share ತೆಗೆದುಕೊಂಡಿದ್ದಾರೆ ಹಾಗಾಗಿ ಇದು ವೈಜ್ಞಾನಿಕವೆಂದು ನಮಗೆ ಅನ್ನಿಸುವುದಿಲ್ಲ ಇದನ್ನು ನಾವೆಲ್ಲರೂ ಚರ್ಚೆ ಮಾಡಬೇಕು ನೀವು ಹೇಳಿದ್ದೀರಲ್ಲಾ, perspective right ಅನ್ನು maintain ಮಾಡುವುದಿಲ್ಲವೆಂದು ಈಗ ಏರಿಯಾದು ತೆಗೆದುಕೊಳ್ಳಿ, ಕಾಂಟ್ರಿಬ್ಯೂಷನ್ಸ್ ಎಷ್ಟಿದೆ, ತೆಗೆದುಕೊಳ್ಳಿ ಎಂದು ಹೇಳಿ, ಇದೆಲ್ಲಕ್ಕಿಂತ ಪ್ರಮುಖವಾದುದು ಅಧ್ಯಕ್ಷರೇ, ನಾನೊಂದು ತಿದ್ದುಪಡಿಯನ್ನು ಕಳುಹಿಸಿದ್ದೇನೆ ನಾವು ಅವರ ಚರ್ಚೆಯ ಜೊತೆಗೆ ನಾನು ಹಾಗೂ ಮಾನ್ಯ ಜಯಪ್ರಕಾಶ್ ಹೆಗ್ಡೆಯವರು ಒಂದು ತಿದ್ದುಪಡಿಯನ್ನು ಕಳುಹಿಸುತ್ತಿದ್ದೇವೆ ಇದರೊಂದಿಗೆ ಎಲ್ಲಿಯವರೆಗೆ ಈ ರಾಷ್ಟ್ರಕ್ಕೆ ಸಮಗ್ರ ಜಲ ನೀತಿಯ ಒಂದು ಕಾಯ್ದೆಯಾಗುವುದಿಲ್ಲ, ಎಲ್ಲಿಯವರೆಗೆ ಎಲ್ಲಾ ಕೊಳ್ಳಗಳ ನೀರನ್ನು ಹೇಗೆ ಹಂಚಿಕೊಳ್ಳಬೇಕೆಂದು ಹೇಳಿ ನಾವೊಂದು ಕಾನೂನು ಮಾಡುವುದಿಲ್ಲ, ಅಲ್ಲಿಯವರೆಗೆ ಈ Notification ಅನ್ನು stop ಮಾಡಿ ಎಂದು ಕೇಂದ್ರ ಸರ್ಕಾರವನ್ನು ನಾವು request ಮಾಡಿಕೊಳ್ಳಬೇಕಾಗುತ್ತದೆ ಒಂದು ಸಲ ಇದು ಗೆಜೆಟ್ ಆದರೆ, ನಮ್ಮ ಯಾರ ಕೈಯಲ್ಲಿಯೂ ಇದು ಇರುವುದಿಲ್ಲ ಗೆಜೆಟ್ ಆಗದಿರುವ ಹಾಗೆ ನೋಡಿಕೊಳ್ಳಬೇಕಾಗಿರುವ ಕೆಲಸವನ್ನು ನೀವು ಮಾಡಬೇಕಾಗಿದೆ ಇವತ್ತು ನಮ್ಮ ಸಂಸದರು ನಿನ್ನೆ ಹೋಗಿ ನಮ್ಮ ಪ್ರಧಾನಿಗಳನ್ನು ಭೇಟಿ ಮಾಡಿದಾಗ, ಪ್ರಧಾನಿಗಳು ಇದನ್ನು ಪರಿಶೀಲನೆ ಮಾಡುವುದಾಗಿ ಒಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆ ತಾವು ಕೂಡ ಇದರ ಬಗ್ಗೆ ಹೋರಾಟ ಮಾಡಬೇಕಾಗಿದೆ ನೀವು ಸಹ ಅಲ್ಲಿಗೆ ಹೋಗಿ ಕುಳಿತುಕೊಂಡು ನಮಗೆ ಏನು ಅನ್ಯಾಯವಾಗಿದೆಯೆಂಬುದರ ಬಗ್ಗೆ ಮನವರಿಕೆ ಮಾಡಿಕೊಡಬೇಕಾಗಿದೆ ಗೆಜೆಟ್ ನೋಟಿಫಿಕೇಷನ್ ಅನ್ನು ಹೇಗಾದರೂ ಮಾಡಿ ತಡೆಯುವ ಜವಾಬ್ದಾರಿಯನ್ನು ತಾವು ನಿರ್ವಹಣೆ ಮಾಡಲೇಬೇಕಾಗಿದೆ ರಾಜ್ಯವನ್ನು ನೀವು ನಡೆಸುತ್ತಿದ್ದೀರಿ, ಒಂದು ಸಲ ಗೆಜೆಟ್ ಆದರೆ, ಆ ನಂತರ ನಮಗ್ಯಾರಿಗೂ ಇದರ ಬಗ್ಗೆ ಅಧಿಕಾರ ಉಳಿಯುವುದಿಲ್ಲ ಗೆಜೆಟ್ ನೋಟಿಫಿಕೇಷನ್ ಅನ್ನು ಸ್ಟಾಪ್ ಮಾಡಬೇಕು ಆ ನಂತರ ರಾಜ್ಯದೊಳಗೆ

ಒಂದು cropping pattern ಅನ್ನು ತಾವು ಡೆವಲಪ್ ಮಾಡಲೇ ಬೇಕಾಗುತ್ತದೆ ಒಂದು ಕಡೆ ನಮಗೆ ಅಲ್ಲಿ ಅನ್ಯಾಯವಾಗಿದೆ ಎಂದು ಹೇಳುತ್ತೇವೆ ಇನ್ನೊಂದು ಕಡೆ ಈ ರಾಜ್ಯದಲ್ಲಿ available water ಅನ್ನು ಹೇಗೆ ಬಳಸಬೇಕೆಂಬ ಬಗ್ಗೆ ನಾವು ಕೂಡ ಕುಳಿತುಕೊಂಡು ಚರ್ಚೆ ಮಾಡುವ ಕಾಲಕ್ಕೂ ನಾವು ಈಗ ಬಂದು ಬಿಟ್ಟಿದ್ದೇವೆ ಅಕಸ್ಮಾತ್ ನಮಗೆ 10, 20, 40 ಟಿ ಎಂ ಸಿ ಜಾಸ್ತಿ ನೀರು ಸಿಗುವುದು ಒಂದಾದರೆ, ನೀರನ್ನು ಹೇಗೆ ಬಳಸಬೇಕು? ಇದಕ್ಕೆ ನಾವು ಕೂಡ ಮುಂದೆ ಒಂದು water policy ಅನ್ನು ಮಾಡಬೇಕಾಗುತ್ತದೆ, cropping pattern ಅನ್ನು ಇಲ್ಲಿ ಮಾಡಿಕೊಳ್ಳಬೇಕಾಗುತ್ತದೆ ಇಲ್ಲದೇ ಹೋದರೆ, ಈ ರಾಜ್ಯವನ್ನು ದಟ್ಟ ದರಿದ್ರ ರಾಜ್ಯವನ್ನಾಗಿ ನಾವು ಮಾಡುತ್ತೇವೆ ಒಂದು ಕಡೆ ಅನವಶ್ಯಕವಾಗಿ ನೀರನ್ನು waste ಮಾಡುವುದು, ಇನ್ನೊಂದು ಕಡೆ ನೀರೇ ಇಲ್ಲದೆ ನಾಶವಾಗುವುದು, ಮತ್ತೊಂದು ಕಡೆ ನಿಮ್ಮದೇನು ಪ್ರಮುಖವಾದ ಕಮರ್ಷಿಯಲ್ ಕ್ರಾಪ್ಸ್ ನೀರಿಲ್ಲದೇ ಹಾಳಾಗುವುದು, ನಿಮ್ಮ ರಾಜ್ಯಕ್ಕೆ ರೆವಿನ್ಯೂ ಬರುವುದು, ತಪ್ಪಿ ಹೋಗುತ್ತದೆ, ಇವೆಲ್ಲವನ್ನು ಗಮನದಲ್ಲಿಟ್ಟುಕೊಂಡು ಹೆಚ್ಚು ಆಸಕ್ತಿಯಿಂದ ಇದನ್ನು ನೋಡಬೇಕು ಇವತ್ತೇನು ನಿರ್ಣಯವನ್ನು ತಂದಿದ್ದಾರೆ ಬಹುಶ ಕೆಲವು ಕಡೆ, ನಾನು ಒಂದೊ ಎರಡೋ ಕಡೆ ಟ್ರಿಬ್ಯುನಲ್‌ನವರು ನಮಗೇನು advantage ಆಗಿ ಮಾತನಾಡಿದ್ದಾರೆ, ಅದನ್ನೂ ಕೂಡ ಒಪ್ಪಬೇಕಾಗುತ್ತದೆ ಇವತ್ತು ಅವರು 1990ನೇ ಇಸವಿಯಿಂದ ಈಚೆಗೆ ಮಾತ್ರ ನಾನು ತೆಗೆದುಕೊಳ್ಳುತ್ತೇನೆ 1974ರಿಂದ 1990 ರವರೆಗೆ ಏನು ಡ್ಯಾಮ್‌ಗಳಾಗಿತ್ತು, ಅದನ್ನು on going projects ಎಂದು consider ಮಾಡುತ್ತೇವೆಂದು ಹೇಳಿದ್ದಾರೆ, ಅದು ನಮಗೆ advantage ಆಗಿದೆ ಇಲ್ಲವೇ ಇಲ್ಲವೆಂದು ಅವರೇನು ಹೇಳಿಲ್ಲ, ನಿಮ್ಮದು 11 5 ಲಕ್ಷ ಎಕರೆಗೆ consideration ಕೊಡಬೇಕಾದರೆ ಅದಕ್ಕೆ 7 ಲಕ್ಷ ಎಕರೆ ಸೇರಿಸಿ ಕೊಡಬೇಕಾದರೆ 1974 ರಿಂದೀಚೆಗೆ ನಾವೇನು ಪ್ರಾಜೆಕ್ಟ್ಸ್ ಅನ್ನು ಶುರು ಮಾಡಿದ್ದೇವೆ, ನಾವು ಎಲ್ಲಿಯೂ distribution ಕೊಟ್ಟಿರಲಿಲ್ಲ ಕೊಡಲು ತಮಿಳುನಾಡಿನವರು ನಮಗೆ ಬಿಟ್ಟಿರಲಿಲ್ಲ, ಆದರೂ ನಾವು ಡ್ಯಾಂ ಮಾಡಿಕೊಂಡೆವು ಅದೆಲ್ಲಾ ನೀರಾವರಿಯಾಗಬೇಕಾಗಿರುವ ಪ್ರದೇಶವೆಂದು ನಮ್ಮ ಪುಣ್ಯಕ್ಕೆ ಅವರು ಇವತ್ತು ಒಪ್ಪಿಕೊಂಡಿದ್ದಾರೆ, ಅದನ್ನು ನಾವು ಅಲ್ಲಗಳೆಯಲಿಕ್ಕಾಗುವುದಿಲ್ಲ ಅದರ ಜೊತೆಗೆ ನಮ್ಮ ಆರು ಜಿಲ್ಲೆ severely drought hit area ಎಂದು

ಶ್ರೀ ವಾಟಾಳ್ ನಾಗರಾಜ್ – ಇಲ್ಲೇನಾಗಿದೆಯೆಂದರೆ, ಇವರಿಬ್ಬರೂ ಸೇರಿಕೊಂಡು ಕಿಂಗ್ ಫಿಶರ್‌ಗೆ ಒಳ್ಳೆಯ ಮಾರ್ಕೆಟ್ ಮಾಡಿಕೊಡುತ್ತಿದ್ದಾರೆ ನಾನು ರಾಜಸಭಾ ಸದಸ್ಯರ ಮೇಲೆ ವೈಯಕ್ತಿಕವಾಗಿ ಆರೋಪಣೆ ಮಾಡುವುದಾಗಲೀ ಅಥವಾ ದ್ವೇಷ ಮಾಡುವುದಾಗಲೀ ಮಾಡುತ್ತಿಲ್ಲ ನಮ್ಮ ರಾಜ್ಯದ ಈ ವಿಧಾನಸಭೆಯಿಂದ ಆಯ್ಕೆಯಾಗಿರತಕ್ಕಂಥ ವೆಂಕಯ್ಯನಾಯ್ಡುರವರು, ರಾಜೀವ್ ಚಂದ್ರಶೇಖರ್‌ರವರು, ಇವರೆಲ್ಲರೂ ಏನು ಮಾಡಬೇಕು, ಇವರ ಕರ್ತವ್ಯವೇನು? ಪ್ರಾಮಾಣಿಕವಾಗಿ ಇವರು ಈ ರಾಜ್ಯದ ಪರವಾಗಿ, ರಾಜ್ಯದ ಉಪ್ಪನ್ನು ತಿಂದಿದ್ದೇವೆ, ಈ ರಾಜ್ಯದ ಋಣದಲ್ಲಿದ್ದೇವೆ ಎನ್ನತಕ್ಕಂಥದ್ದನ್ನು ಅರಿತುಕೊಂಡು ಆ ಪ್ರಕಾರ ನಡೆಯಬೇಕಾಗಿತ್ತು ನಾನು ಇವೊತ್ತು ಹೇಳುತ್ತಿದ್ದೇನೆ ಕಾವೇರಿ ವಿಚಾರದಲ್ಲಿ ಈ ರಾಜ್ಯ ಸರ್ಕಾರ ದಿಟ್ಟ ನಿಲುವನ್ನು ಪ್ರದರ್ಶನ ಮಾಡುವುದರಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದಾರೆ ಇವೊತ್ತು ನಾನು ಹೇಳುತ್ತೇನೆ ಬಂಗಾರಪ್ಪನವರ ಬಗ್ಗೆ ನನಗೆ ನಿಜಕ್ಕೂ ಹೆಮ್ಮೆ ಇದೆ ಅಂದು ಮಾನ್ಯ ಧರ್ಮಸಿಂಗ್‌ರವರು ಗೃಹ ಮಂತ್ರಿಗಳಾಗಿದ್ದರು ಮುಂದೆ ಅದು ನಿಲ್ಲಲಿ ಅಥವಾ ಬಿಡಲಿ, ಮಾನ್ಯ ಬಂಗಾರಪ್ಪನವರು ಅಂದು ಸುಗ್ರೀವಾಜ್ಞೆಯನ್ನು ತರುವುದರ ಮೂಲಕ ನಮ್ಮ ರಾಜ್ಯದ ಜಲಾಶಯಗಳಿಂದ ಒಂದು ಹನಿ ನೀರನ್ನೂ ಬಿಟ್ಟುಕೊಡುವ ಪ್ರಶ್ನೆಯೇ ಇಲ್ಲವೆಂದು ಹೇಳಿದ್ದರು ಈ ರಾಜ್ಯದ ಸರ್ಕಾರವೇ ನೇರವಾಗಿ ಕರ್ನಾಟಕ ಬಂದ್‌ಗೆ ಅವಕಾಶ ಮಾಡಿಕೊಟ್ಟಿತು ನಾವು ಈ ಸಂದರ್ಭದಲ್ಲಿ ಅವರನ್ನು ನೆನೆಸಿಕೊಳ್ಳಬೇಕಾಗುತ್ತದೆ ಆ ನಿಲುವು ಇವೊತ್ತು ಬೇಕು ಸ್ಪಷ್ಟ ನಿಲುವು ಬೇಕು, ನೇರ ನಿಲುವು ಬೇಕು 5 ನೇಯ ತಾರೀಖು ತೀರ್ಪು ಬಂದರೆ ಮುಂದಿನ ತಿಂಗಳು 15ನೇಯ ತಾರೀಖು, ಆದರೂ ಕೂಡ ಇನ್ನೂ ತೂಕಡಿಸುತ್ತಾ, ನಿದ್ದೆ ಮಾಡುತ್ತಾ, ಕಿವಿ ಕೇಳಿಸಿದರೂ ಕೇಳಿಸದಂತೆ, ಕಣ್ಣಿದ್ದರೂ ಕಾಣದಂತೆ, ಹೃದಯವಿದ್ದರೂ ಇಲ್ಲದಂತೆ ನೋಡಿಕೊಂಡು ಕುಳಿತಿರುವುದು ಸರಿಯಾದ ಕ್ರಮವಲ್ಲ ನಿನ್ನೆ ಕೂಡ ಸೇರಿದ

ಸಭೆ ಕಾವೇರಿ ಚರ್ಚೆಗಾಗಿ ಸೇರಿದ ಸಭೆಯಲ್ಲ ಯಾವುದೋ ಈ ರಾಜ್ಯದ ಜನತೆಯ ಒತ್ತಡಕ್ಕಾಗಿ ಸೇರಿತ್ತು

ಶ್ರೀ ಜೆ ಸಿ ಮಾಧುಸ್ವಾಮಿ – ವಿಧಾನಪರಿಷತ್ತು ಛೇರ್ಮನ್ ಎಲೆಕ್ಷನ್‌ಗಾಗಿ ಸೇರಿತ್ತು

ಶ್ರೀ ವಾಟಾಳ್ ನಾಗರಾಜ್ – ವಿಧಾನ ಪರಿಷತ್ತಿನ ಸಭಾಪತಿಗಳ ಚುನಾವಣೆಗೆ, ರಾಜ್ಯಪಾಲರ ಪತ್ರಕ್ಕೆ ಸಂಬಂಧಪಟ್ಟಂತೆ ಸೇರಿದ ಸಭೆ ನನಗನ್ನಿಸುತ್ತಿದೆ, ಕಾವೇರಿ ವಿಷಯವಾಗಿ ಎಂದು ಸಭೆ ಸೇರಬೇಕಾಗಿತ್ತೋ ಅಂದು ಸಭೆ ಸೇರದೇ ಇಂದು ನಾವೇನು ಚರ್ಚೆ ಮಾಡುತ್ತಿದ್ದೇವೆ, ಇದು ಮೈಲಿಗೆ ಸಂತೆಯಲ್ಲಿ ವ್ಯಾಪಾರ ಮಾಡಿದಂತೆ ಮೈಲಿಗೆ ಸಂತೆ ಎಂದರೇನು? ಹಬ್ಬಕ್ಕಿಂತ ಮುಂಚೆ ಆಗತಕ್ಕಂಥ ಸಂತೆ ಬಹಳ ಶಕ್ತಿಯುತವಾದಂಥ ಸಂತೆ, ವ್ಯಾಪಾರ, ವ್ಯವಹಾರ, ಜನರು ಹಬ್ಬಕ್ಕಾಗಿ ಎಲ್ಲರೂ ವ್ಯಾಪಾರಕ್ಕಾಗಿ ಬಂದಿರುತ್ತಾರೆ ಮತ್ತು ಕೊಂಡುಕೊಳ್ಳುತ್ತಾರೆ ಹಬ್ಬ ಆದಮೇಲೆ ಆಗತಕ್ಕಂಥ ಸಂತೆ ಮೈಲಿಗೆ ಸಂತೆ ಅಂದರೆ ಜನಗಳ ಹತ್ತಿರ ದುಡ್ಡು ಇರುವುದಿಲ್ಲ, ಯಾರೂ ಬರುವುದಿಲ್ಲ ಆ ರೀತಿಯಲ್ಲಿ ಮೈಲಿಗೆ ಸಂತೆ, ತರಹ ಇದು ಆಗಿಹೋಗಿದೆ

ಶ್ರೀ ಜೆ ಸಿ ಮಾಧುಸ್ವಾಮಿ – ಉಳಿದುಕೊಂಡಿರುವುದನ್ನೇ ತೆಗೆದು ಕೊಳ್ಳಬೇಕು

ಶ್ರೀ ವಾಟಾಳ್ ನಾಗರಾಜ್ – ಉಳಿದುಕೊಂಡಿರುವುದನ್ನು, ಕೊಳೆತ ಮಾಲನ್ನು ಮತ್ತು ಅದು ಇದು ಉಳಿದುಕೊಂಡಿರುವುದರಲ್ಲಿಯೇ ತೆಗೆದುಕೊಳ್ಳಬೇಕು ಇಡೀ ರಾಜ್ಯವೇ, ಇಡೀ ದೇಶವೇ ಮುಗಿಲೆದ್ದು ಬೀದಿಗೆ ಬಂದು ಕೂಗಿ ತನ್ನ ಕೂಗನ್ನು ಕೂಗುತ್ತಾ ದೆಹಲಿಯವರೆಗೂ ನಮ್ಮ ಕನ್ನಡಿಗರು ಹೋಗಿದ್ದಾರೆ ದೆಹಲಿಯವರೆಗೂ ಹೋಗಿ ದೆಹಲಿಯಲ್ಲಿ ಕನ್ನಡಿಗರು ಕೂಗಿದ್ದಾರೆ ನಾನೇ ನ್ಯಾಯಾಧೀಕರಣದ ಮುಂದೆ ಹೋಗಿ ಆ ತೀರ್ಪನ್ನು ಸುಟ್ಟುಹಾಕಿದೆ ಇಷ್ಟಾದರೂ ಈ ಸರ್ಕಾರಕ್ಕೆ ಸತ್ಯವಾದಂಥ, ಪ್ರಾಮಾಣಿಕವಾದಂಥ ಬದ್ಧತೆ, ಶಕ್ತಿ ಇವೊತ್ತು ಈ ಸರ್ಕಾರದಲ್ಲಿದ್ದಂತೆ ನನಗೆ ಕಾಣುತ್ತಿಲ್ಲ ಇಲ್ಲಿ ಕಾವೇರಿ ಚರ್ಚೆ ನಡೆಯುತ್ತಿದೆ ನನಗೆ ಮುಖ್ಯ ಮಂತ್ರಿಗಳ ಬಗ್ಗೆ ಮತ್ತು ಉಪ ಮುಖ್ಯಮಂತ್ರಿಗಳ ಬಗ್ಗೆ ಗೌರವವಿದೆ ಇಂದು ಕಾವೇರಿ ಚರ್ಚೆ ನಡೆಯುತ್ತಿದ್ದರೂ ಕೂಡ ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಉಪ ಮುಖ್ಯಮಂತ್ರಿಗಳು ಇಲ್ಲಿ ಇಲ್ಲ ಅವರು ಈ ಸದನದಲ್ಲಿ ಈಗ ಇರಬೇಕಾಗಿತ್ತು ಆಯವ್ಯಯ ನಾಳೆ ಮಂಡನೆ ಮಾಡಲಿ ನನ್ನದೇನೂ

ತಕರಾರಿಲ್ಲ ಆಯವ್ಯಯಕ್ಕಿಂತಲೂ ಕಾವೇರಿ ಚರ್ಚೆ ಬಹಳ ಮುಖ್ಯ ಈ ರಾಜ್ಯದಲ್ಲಿ ಕಾವೇರಿ ಚರ್ಚೆ ಬಹಳ ಗಂಭೀರ ಪರಿಸ್ಥಿತಿಯನ್ನು ನಿರ್ಮಾಣ ಮಾಡಿದೆ ಈ ರಾಜ್ಯದ ಅಳಿವು ಉಳಿವಿನ ಪ್ರಶ್ನೆ ಕಾವೇರಿ ತೀರ್ಪು ಈ ರಾಜ್ಯದ ಜನತೆಗೆ ಮರಣ ಶಾಸನ ಅದಕ್ಕಾಗಿ ಇರಬೇಕಾಗಿತ್ತು ನಾನು ಅವರನ್ನು ಕಾರಣ ಏನು ಎಂದು ಕೇಳುವುದಿಲ್ಲ ಅದರ ಬಗ್ಗೆ ನನಗೆ ಬಹಳ ನೋವಾಗುತ್ತಿದೆ ನ್ಯಾಯಾಧೀಕರಣ, ಅದರ ಬಗ್ಗೆ ನಾನು ವಿರೋಧ ಮಾಡಿದ್ದೇನೆ ಅದಕ್ಕೆ ಹೋಗಬಾರದು ಎಂದು ಹೇಳಿದ್ದೇನೆ ಆದರೆ ನ್ಯಾಯ ಎಂದರೇನು ಸ್ಪಷ್ಟ, ನ್ಯಾಯಾಧೀಕರಣ, ನ್ಯಾಯಾಲಯವೇ ಬೇರೆ, ನ್ಯಾಯಾಧೀಕರಣವೇ ಬೇರೆ ನ್ಯಾಯಾಧೀಕರಣದಲ್ಲಿ ಎರಡೂ ರಾಜ್ಯಗಳಿಗೆ ಒಪ್ಪಿಗೆ ಆಗತಕ್ಕಂಥ ಒಂದು ವ್ಯವಸ್ಥೆಯನ್ನು ನಿರ್ಮಾಣ ಮಾಡತಕ್ಕಂಥದ್ದು ನ್ಯಾಯಾಧೀಕರಣ ನ್ಯಾಯಾಲಯ ಎಂದರೆ ಅವರು ಕೊಟ್ಟ ತೀರ್ಪೇ ಅಂತಿಮ ಆದರೆ ಸರ್ವೋಚ್ಚ ನ್ಯಾಯಾಲಯ ನೇಮಕ ಮಾಡಿದಂಥ ನ್ಯಾಯಾಧೀಕರಣ ಎರಡೂ ರಾಜ್ಯಗಳವರನ್ನೂ ಕರೆದು ನಮ್ಮ ಹಳ್ಳಿ ಕಡೆ ಏನು ನ್ಯಾಯ ಮಾಡುತ್ತಾರೆ, ಅರಳಿ ಮರದ ಕೆಳಗಡೆ ಇರಬಹುದು, ಕಟ್ಟಡದಲ್ಲಿರಬಹುದು, ಪಂಚಾಯತಿ ಕಟ್ಟೆಯಲ್ಲಿರಬಹುದು, ಇದೊಂದು ತರಹ ಪಂಚಾಯತಿ ಕಟ್ಟೆ, ಎರಡೂ ಕಡೆಯವರನ್ನು ಕರೆದು ಅವರ ವಾದವನ್ನು ಕೇಳಬೇಕಾಗಿತ್ತು ನಮ್ಮ ಸಮರ್ಥವಾದಂಥ ವಾದವನ್ನು ಮಂಡಿಸುವುದರಲ್ಲಿ ನಮ್ಮ ವಕೀಲರು ಸಮರ್ಥರಾಗಿದ್ದಾರೆ ನಾನು ವಕೀಲರ ಮೇಲೆ ಗೂಬೆ ಕೂರಿಸತಕ್ಕಂಥ ವ್ಯವಸ್ಥೆಗೆ ಹೋಗುವುದಿಲ್ಲ ಮಾನ್ಯ ನಾರಿಮನ್‌ರವರು ಇಡೀ ದೇಶದಲ್ಲಿಯೇ, ಪ್ರಪಂಚದಲ್ಲಿಯೇ ಒಬ್ಬ ಒಳ್ಳೆಯ ಅತ್ಯುನ್ನತವಾದಂಥ ವ್ಯಕ್ತಿ ಅದರ ಬಗ್ಗೆ ನನ್ನದೇನೂ ತಕರಾರಿಲ್ಲ ಕಕ್ಷಿದಾರ ವಕೀಲರಿಗೆ ನಮ್ಮ ಅಂಕಿ ಅಂಶಗಳನ್ನು ಸರಿಯಾಗಿ ಒದಗಿಸಬೇಕು ಆ ರೀತಿ ಒದಗಿಸ ಬೇಕಾಗಿರುವುದರಲ್ಲಿ ಬಂದಂತಹ ಸರ್ಕಾರಗಳು ಎಲ್ಲೋ ಒಂದು ಕಡೆ ವಿಫಲವಾಗಿವೆ ನಮ್ಮ ತಾಂತ್ರಿಕ ಇಲಾಖೆ, ವ್ಯವಸ್ಥೆ, ರಾಜ್ಯ ಎಲ್ಲೋ ಒಂದು ಕಡೆ ನ್ಯಾಯಾಧೀಕರಣಕ್ಕೆ ಒದಗಿಸತಕ್ಕಂಥ ವಸ್ತುಗಳಲ್ಲಿ ವಿಫಲವಾಗಿದೆ ಇದು ಒಂದು ವಾದ ಎರಡನೆಯದಾಗಿ, ಅವರು ಕೊಟ್ಟಿರುವ ತೀರ್ಪು ನ್ಯಾಯ ಮಾಡುವ ಬದಲು ಅನುಮಾನಗಳಿಗೆ ಎಡೆ ಮಾಡಿಕೊಡುತ್ತದೆ ಈ ನ್ಯಾಯಾಲಯ, ನ್ಯಾಯಮಂಡಳಿ ಅನುಮಾನಗಳಿಗೆ ಎಡೆ ಮಾಡಿಕೊಡುತ್ತದೆ, ನಾನು ಅನುಮಾನಗಳು ಪಡದೇ ಇದ್ದರೂ ಈ ದೇಶದ ಜನ ಈ ತೀರ್ಪಿನ ಬಗ್ಗೆ ಅನುಮಾನ ಪಡಲು ಅವರು ಕೊಟ್ಟಿರತಕ್ಕಂಥ ಅಸ್ಪಷ್ಟವಾದಂತಹ

ತೀರ್ಪು ಒಂದೇ ಒಂದು ಸಾಕು ಕೇರಳದವರಿಗೆ ನೀರನ್ನು ಇಟ್ಟುಕೊಳ್ಳುವುದಕ್ಕೆ ಜಲಾಶಯ ಇಲ್ಲದೆ ಇದ್ದರೂ ಆ ನೀರನ್ನು ನೀವು ಇಟ್ಟುಕೊಳ್ಳಿ ಹಾಗೂ ಅದನ್ನು ತಮಿಳುನಾಡಿನವರಿಗೆ ಬಳಸಿ ಎಂದು ಹೇಳಬೇಕಾದರೆ, ನಮ್ಮ ನೀರನ್ನು ತಮಿಳುನಾಡಿನವರಿಗೆ ಬಳಸಿ ಎಂದು ಹೇಳಿದ್ದಾರಲ್ಲ, ಇದು ನ್ಯಾಯಮಂಡಳಿ ಮೇಲೆ ಸಂಶಯಕ್ಕೆ ಎಡೆಮಾಡಿ ಕೊಡುವುದಕ್ಕೆ ಅದು ಒಂದೇ ಒಂದು ಸಾಕು ಜಲಾಶಯ ಯಾರದು? ಕಬಿನಿ ನಮ್ಮದು, ಕೃಷ್ಣರಾಜಸಾಗರ ನಮ್ಮದು ನಾವು ಜಲಾಶಯ ಕಟ್ಟಿ ಕೃಷ್ಣರಾಜಸಾಗರಕ್ಕೆ ಭಾಗಮಂಡಲದಿಂದ ಬರತಕ್ಕಂಥಾದ್ದು ತಮಿಳುನಾಡು ನೀರಲ್ಲ ಕಬಿನಿಗೆ ಕೇರಳದ ಕಡೆಯಿಂದ ಹಾಗೂ ನಮ್ಮ ಗಡಿ ಪ್ರದೇಶದಿಂದ ಬರತಕ್ಕಂಥಾದ್ದು ನೀರು ಬರುವುದು ತಮಿಳುನಾಡಿನಿಂದ ಅಲ್ಲ ನಾವು ಕಷ್ಟಪಟ್ಟು ಬೆವರು ಸುರಿಸಿ ಕಬಿನಿ ಕಟ್ಟಿದಂತಹ ಜನ, "ಆ ನೀರನ್ನು ನೀವು ಬಿಟ್ಟುಕೊಡಿ" ಎಂದರೆ ಯಾರ ನೀರನ್ನು ಯಾರಿಗೆ ಬಿಟ್ಟುಕೊಡುವುದು? ಯಾವ ರೀತಿಯ ನ್ಯಾಯ ನಿಮ್ಮದು? ಮಾನ್ಯ ಮಹದೇವ ಪ್ರಸಾದ್‌ರವರೇ, ಕಬಿನಿ ನೀರನ್ನು ಅವರು ಹೇಳಿದ ಪ್ರಕಾರ ಬಿಟ್ಟರೆ ನಮ್ಮ ರಾಜ್ಯದ ಅದರಲ್ಲೂ ಚಾಮರಾಜನಗರ, ಗುಂಡ್ಲುಪೇಟೆ, ಮೈಸೂರು ಮತ್ತು ತುಮಕೂರು ಸಂಪೂರ್ಣವಾಗಿ ನಾಶವಾಗುತ್ತದೆ ಬಿಡುವುದಿಲ್ಲ, ನಾನು ಹೇಳುತ್ತೇನೆ, ಸೈನ್ಯ ಬಂದರೂ ಬಿಡುವುದಿಲ್ಲ ನಿಮ್ಮ ನ್ಯಾಯಾಧೀಕರಣ, ಸರ್ವೋಚ್ಚ ನ್ಯಾಯಾಲಯ, ಯಾರು ಏನೇ ಹೇಳಲಿ ಬಿಡುವುದಿಲ್ಲ ಸೈನ್ಯ ತರುತ್ತೀರಾ? ತೆಗೆದುಕೊಂಡು ಬನ್ನಿ ನಾವು ಎದೆ ಕೊಡುವುದಕ್ಕೆ ತಯಾರಾಗಿದ್ದೇವೆ ನಾವು ಕಬಿನಿ ನೀರು ಬಿಡುವುದಿಲ್ಲ, ಕಾವೇರಿ ನೀರನ್ನು ಬಿಡುವುದಿಲ್ಲ ಗುಂಡು ಹೊಡೆಯುತ್ತೀರಾ? ಜನಗಳನ್ನು ಕೊಲ್ಲುತ್ತೀರಾ? ಮಾನ್ಯ ಅಧ್ಯಕ್ಷರೆ, ಇವತ್ತಲ್ಲ, ಮುಂದೆ ಆಗತಕ್ಕಂಥ ಪರಿಸ್ಥಿತಿ ಬಗ್ಗೆ ಹೇಳುತ್ತಿದ್ದೇನೆ, ಕೇಂದ್ರ ಸರ್ಕಾರ ಎಚ್ಚರ ವಹಿಸಬೇಕು ಇದು ಕನಸಲ್ಲ, ಮುಂದೆ ಆಗುತ್ತದೆ ನೀವು ಇದೇ ತೀರ್ಪನ್ನು ಒಪ್ಪಲೇಬೇಕೆಂದು Gazetteನಲ್ಲಿ ಪ್ರಕಟಣೆಯಾಗಿ, ನೀರು ಬಿಡಲೇಬೇಕೆಂದು ಕಬಿನಿ ಹತ್ತಿರ ಬಂದರೆ, ಕಾವೇರಿ ಹತ್ತಿರ ಬಂದರೆ ಹತ್ತಿರ ಸೇರಿಸುವುದಿಲ್ಲ ಸಮರ ಮಾಡುತ್ತೇವೆ ರಕ್ತಪಾತವಾದರೂ ಬಿಡುವುದಿಲ್ಲ ಎಚ್ಚರಿಕೆ ಕೊಡುತ್ತಿದ್ದೇನೆ, ಸಾಧ್ಯವಿಲ್ಲ ನಮಗೇ ನೀರಿಲ್ಲ, ಎಲ್ಲಿದೆ ನೀರು? ಕಬಿನಿ 2ನೇ ಹಂತಕ್ಕೆ ಮಾನ್ಯ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಯವರಾಗಿದ್ದಾಗ ಅಲ್ಲಿ ಅಡಿಗಲ್ಲು ಹಾಕಿದರು, ಮಾನ್ಯ ಈಶ್ವರಪ್ಪನವರಿಗೆ ಗೊತ್ತಿದೆ ಅಲ್ಲಿಂದ ಇಲ್ಲಿಯವರೆಗೂ ಅದರ ಕತೆ ಏನೆಂದರೆ ಅಲ್ಲಿ ಕಾಲುವೆ ಇಲ್ಲ ನಾನು ಹೇಳುತ್ತೇನೆ, ಸರ್ಕಾರ

ಧೈರ್ಯ ಮತ್ತು ಶಕ್ತಿ ತೆಗೆದುಕೊಂಡು, ಧೈರ್ಯವಿದ್ದರೆ, ಶಕ್ತಿಯಿದ್ದರೆ ಕಾಲುವೆ ಒಡೆಯಿರಿ, ನೀರು ಬಿಡಿ, ಕಬಿನಿ 2ನೇ ಹಂತ ಆರಂಭ ಮಾಡಿ ಮಾಡುತ್ತೀರಾ? ನೀವು ಜನಕ್ಕೆ ಹೇಳಿ ಇದು ನಿಮಗೆ ಇರತಕ್ಕಂಥ ಸವಾಲು ಈ ರಾಜ್ಯಕ್ಕೆ ಇರತಕ್ಕಂಥ ಸವಾಲು ಈ ಸವಾಲನ್ನು ನೀವು ಸ್ವೀಕರಿಸಲೇಬೇಕು ಸ್ವೀಕರಿಸಲ್ಲವೆಂದರೆ ಈ ನಾಡಿನ ಜನರಲ್ಲಿ ನೀವು ಉಳಿಯುವುದಿಲ್ಲ ಕೃಷ್ಣರಾಜಸಾಗರ, ಕಬಿನಿ, ತಮಿಳುನಾಡಿಗೆ ಬಿಡುವಂತಹ ನೀರಿನ ತೊಟ್ಟಿಗಳಲ್ಲ ಕಟ್ಟೆ ಕಟ್ಟಿ ನೀರನ್ನು ಹಾಕಿ ತಮಿಳುನಾಡಿಗೆ ಬಿಡುವುದಕ್ಕೆ ಅಲ್ಲ ಎಲ್ಲಾದರೂ ಉಂಟೇ ಇದು, ಇದು ಯಾವ ನ್ಯಾಯ? ಯಾವ ನ್ಯಾಯಾಧೀಕರಣ? ಏನು ಪರಿಸ್ಥಿತಿ? ನಾವು ಕೊಡಗಿಗೆ ನೀರು ಕೊಡುವುದಿಲ್ಲ ಈ ನೀರು ಎಲ್ಲಿ ಉದ್ಭವವಾಗುತ್ತದೆ ಅಲ್ಲಿಗೆ ನೀರು ಕೊಡುತ್ತಿಲ್ಲ ಆದರೆ ತಮಿಳುನಾಡಿಗೆ ನೀರು ಬೇಕು ಕಾರಣ ಏನು? ಯಾವ ಉದ್ದೇಶಕ್ಕೋಸ್ಕರಕ್ಕಾಗಿ? ಸಾಧ್ಯವಿಲ್ಲ ಇದು ನ್ಯಾಯಾಧಿಕರಣದ ಮೇಲೆ ನಮಗೆ ಎಲ್ಲೋ ಒಂದು ಕಡೆ ನೇರವಾದಂತಹ ಅನುಮಾನ ಬರುತ್ತದೆ ಆದುದರಿಂದ ನಾನು ಸ್ಪಷ್ಟವಾಗಿ ನೇರವಾಗಿ ಹೇಳುತ್ತೇನೆ, ಸರ್ಕಾರ ಭದ್ರವಾಗಿರಲೇಬೇಕು ನನಗೆ ಸರ್ವೋಚ್ಚ ನ್ಯಾಯಾಲಯದಲ್ಲೂ ನ್ಯಾಯ ದೊರಕುತ್ತದೆ, ಮುಂದೆ ಏನಾಗುತ್ತದೆ ಎನ್ನುವ ಅದರ ಭವಿಷ್ಯವನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ ನ್ಯಾಯಮಂಡಳಿಯವರು ನಮಗೆ ನ್ಯಾಯ ಕೊಡುತ್ತಾರೆ ಎನ್ನುವುದರ ಬಗ್ಗೆ ಕೂಡ ನಂಬಿಕೆ ಇದೆ ಎಂದು ನಾನು ಅಂದುಕೊಂಡಿಲ್ಲ, 16 ವರ್ಷದಿಂದ ನಾವೇನು ಕರ್ನಾಟಕಕ್ಕೆ ನ್ಯಾಯ ದೊರಕುತ್ತದೆ, ಕರ್ನಾಟಕಕ್ಕೆ ಒಳ್ಳೆಯದಾಗುತ್ತದೆ ಎಂದು ನಂಬಿಕೆ ಇಟ್ಟುಕೊಂಡಿದ್ದೆವು ಅದು ನೆರವೇರಲಿಲ್ಲ ಮಾನ್ಯ ಈಶ್ವರಪ್ಪನವರೇ, 205 TMC ನೀರು ಕೊಟ್ಟಾಗಲೇ ನಮಗೆ ಅನ್ಯಾಯವಾಗುತ್ತದೆ ಮುಂದೆ ಎಂದು ನನಗೆ ತಲೆಯಲ್ಲಿ ಇತ್ತು ಅದು ಸ್ಪಷ್ಟ ನಾನು ನ್ಯಾಯಮಂಡಳಿ ಪ್ರತಿಬಾರಿ ಸಭೆ ಕರೆದಾಗಲೂ ನ್ಯಾಯಮಂಡಳಿ ವಿರುದ್ಧ ನಾನು ನ್ಯಾಯಮಂಡಳಿ ಬೇಡ ಎಂದು ಎದ್ದು ಬಂದಿದ್ದೇನೆ ಇವತ್ತು ಉಳಿದಿರತಕ್ಕಂಥ ಮಾರ್ಗ, ಸಮರವನ್ನು ತಪ್ಪಿಸಬೇಕಾದರೆ, ಕರ್ನಾಟಕದ ರಕ್ತಪಾತವನ್ನು ತಪ್ಪಿಸಬೇಕಾದರೆ, ಕರ್ನಾಟಕದಲ್ಲಿ ದೊಡ್ಡ ಅಂದೋಲನವನ್ನು ತಪ್ಪಿಸಬೇಕಾದರೆ ಕೇಂದ್ರ ಸರ್ಕಾರ ನಮ್ಮ ಪರವಾಗಿ ಅನಿವಾರ್ಯವಾಗಿ ಬರಲೇಬೇಕಾಗಿದೆ Gazette ಪ್ರಕಟಣೆ ಆಯಿತು ಎಂದರೆ ಅವರು ಕಾರ್ಯಕ್ರಮಕ್ಕೆ ಹೊರಡುತ್ತಾರೆ Gazette ಪ್ರಕಟಣೆ ಆಗುವುದನ್ನು ತಡೆಯತಕ್ಕಂಥ ಶಕ್ತಿ ನಮ್ಮಲ್ಲಿ ಬರಬೇಕಾಗಿದೆ ಆದುದರಿಂದ ನಾನು ತಮ್ಮಲ್ಲಿ

ಅತ್ಯಂತ ಕಳಕಳಿಯಿಂದ ಅತ್ಯಂತ ಗಂಭೀರವಾಗಿ ಹೇಳುತ್ತಿದ್ದೇನೆ, ಪಕ್ಷವನ್ನು ಮರೆತು, ಈ ಕಡೆ Congress ಇರಬಹುದು, ಆ ಕಡೆ ಸಮ್ಮಿಶ್ರ ಸರ್ಕಾರದವರು ಎಲ್ಲರೂ ಒಟ್ಟಾಗಿ ಸೇರಿ, ಒಮ್ಮತದಿಂದ ಈ ದೇಶದ ಎಲ್ಲಾ ಮುಖಂಡರುಗಳಿಗೆ ಪರಿಚಯ ಮಾಡಿಸಬೇಕು ನನಗೆ ಅನಿಸುತ್ತದೆ, ಹಿಂದೆ ಮಹಾಜನ್ ವರದಿ ಬಂದಾಗ ದೆಹಲಿಗೆ 25 ನಿಯೋಗಗಳು ಹೋಗಿತ್ತು ತಮಗೆ ಗೊತ್ತಿದೆ ಮೊದಲನೇ ನಿಯೋಗ ಹೋಯಿತು, ಮಾನ್ಯ ಹೆಚ್ ಶಿವಪ್ಪನವರು ವಿರೋಧ ಪಕ್ಷದಲ್ಲಿದ್ದರು ಅದೇ ಪ್ರಕಾರ ಎಲ್ಲಾ ಪಕ್ಷದ ಮುಖಂಡರನ್ನು, ಮಾನ್ಯ ವಾಜಪೇಯಿರವರನ್ನು, ಮಾನ್ಯ ಅಡ್ವಾಣಿಯವರನ್ನು, ಶ್ರೀಮತಿ ಸೋನಿಯಾ ಗಾಂಧಿಯವರನ್ನು, ಮಾನ್ಯ ಲಾಲೂ ಪ್ರಸಾದ್ ಯಾದವ್‌ರವರನ್ನು, ಜಾರ್ಜ್ ಫರ್ನಾಂಡಿಸ್‌ರವರನ್ನು ಹೀಗೆ ಎಲ್ಲಾ ಮುಖಂಡರನ್ನು ಭೇಟಿ ಮಾಡಿ, ನಮ್ಮ ಪರಿಸ್ಥಿತಿ ಇದು, ನ್ಯಾಯಮಂಡಳಿ ನಮಗೆ ಅನ್ಯಾಯ ಮಾಡಿದ್ದಾರೆ ಎನ್ನುವ ಬಗ್ಗೆ ಮೂರು ಸಾವಿರ ಪುಟಗಳು ಬೇಡ, ಕನಿಷ್ಟ ನೂರು ಪುಟಗಳ ಒಂದು ಕೈಪಿಡಿ ಮಾಡಿ ನಿಮ್ಮ ನಿಮ್ಮ ದಿಕ್ಕಿನಲ್ಲಿ ಎಲ್ಲರನ್ನೂ ಭೇಟಿ ಮಾಡಿ, ನಮ್ಮ ರಾಜ್ಯ ಅತ್ಯಂತ ನೋವಿನಲ್ಲಿದೆ, ಈ ರಾಜ್ಯಕ್ಕೆ ಬೆಂಕಿ ಬಿದ್ದಿದೆ ನ್ಯಾಯಮಂಡಳಿ ಅನ್ಯಾಯ ಮಾಡಿದ್ದಾರೆ ಎಂದು ಈ ದೇಶದ ಎಲ್ಲಾ ಪಕ್ಷದ ಮುಖಂಡರು, ಲೋಕಸಭೆಯ ಸದನದ ಮುಖಂಡರುಗಳು ಅಲ್ಲದೇ ಲೋಕಸಭೆಯ ಮಾನ್ಯ ಅಧ್ಯಕ್ಷರಾದಂತಹ ಸೋಮನಾಥ ಚಟರ್ಜಿಯವರನ್ನು ಭೇಟಿ ಮಾಡಿ, ನಮ್ಮ ಪರಿಸ್ಥಿತಿ ಈ ರೀತಿ ಇದೆ ಎಂದು ತಿಳಿಸುವುದಕ್ಕೆ ಒಂದು ಕಾರ್ಯಕ್ರಮವನ್ನು ರೂಪಿಸಿ, ಈ ಕಾರ್ಯಕ್ರಮ ನೇರವಾಗಿ ಆಗಬೇಕಾಗಿದೆ ಇವತ್ತು ಬೆಂಗಳೂರು ಏನಾಗಿದೆ? ಕೆಂಪೇಗೌಡರು ಕಟ್ಟಿದಂತಹ ಬೆಂಗಳೂರು ಬೇರೆ ಈಗ ಹೊರಗಡೆ ಜನ ಬಂದು ಕಟ್ಟಿರತಕ್ಕಂಥ ಬೆಂಗಳೂರು ಬೇರೆ ಕೆಂಪೇಗೌಡರು ಕಟ್ಟರುವಂತಹ ಬೆಂಗಳೂರಿಗೆ ಅವರು ಗೋಪುರಗಳನ್ನು ಹಾಕಿ ಇಷ್ಟೇ ಸಾಕು ಎಂದು ಹೇಳಿ ನಿಲ್ಲಿಸಿದರು ಈಗ ನಮ್ಮ ಸ್ವಾರ್ಥಕ್ಕೋಸ್ಕರವಾಗಿ ಬೆಂಗಳೂರನ್ನು ದೊಡ್ಡ ಬೆಂಗಳೂರು ಮಾಡುವುದಕ್ಕೆ ಹೋಗಿದ್ದೇವೆ Greater Bangalore, ಏಕೆ ಸ್ವಾಮಿ? "ಹಸಿರು ವಲಯ", ಮಾನ್ಯ ವಿರೋಧ ಪಕ್ಷದ ನಾಯಕರಾದ ಧರ್ಮ್‌ಸಿಂಗ್‌ರವರೆ ಗಮನಿಸಬೇಕು ಮಾನ್ಯ ಮಾಧುಸ್ವಾಮಿಯವರೆ ತಮ್ಮ ಗಮನಕ್ಕೆ ತರುತ್ತಿದ್ದೇನೆ, ಮೊದಲು ಏನು ಹಸಿರು ವಲಯ ಅಥವಾ Green Belt ಎಂದು ಇತ್ತು, ಈಗ ಅದನ್ನು ಇನ್ನು ಮುಂದಕ್ಕೆ ಹಾಕುವುದಕ್ಕೆ

ಹೊರಟ್ಟಿದ್ದಾರೆ ಅದು ನಿಮಗೆ ಗೊತ್ತಾಗುತ್ತದೆ ನನಗೆ ಅನಿಸುತ್ತದೆ, ಹಸಿರು ವಲಯವಿಲ್ಲವೆಂದರೆ ಇದು ಮುಂದೆ ಬೆಂಗಳೂರಿಗೆ ಬಹಳ ದೊಡ್ಡ ಆಘಾತ ಇಲ್ಲಿ ಯಾರ್ಯಾರು ಬೇಕು ಎಲ್ಲಾ ಸಾವಿರಾರು ಎಕರೆ ಜಮೀನು ತೆಗೆದುಕೊಂಡಿದ್ದಾರೆ ಮಾನ್ಯ ವಿರೋಧ ಪಕ್ಷದ ನಾಯಕರ ಗಮನಕ್ಕೆ ತರುತ್ತಿದ್ದೇನೆ, ಈ ಹಸಿರು ವಲಯ ಇನ್ನು ಮುಂದಕ್ಕೆ ಹೋಗುತ್ತಿದೆ ಇಲ್ಲಿ ಭಾರೀ ಭಾರೀ ರಾಜಕಾರಣಿಗಳು, ವ್ಯಾಪಾರಸ್ಥರು ಎಲ್ಲರೂ ಲೂಟಿ ಮಾಡುತ್ತಿದ್ದಾರೆ ಹಾಗೂ ಇದೊಂದು ದರೋಡೆ

ಅಧ್ಯಕ್ಷರು ಹಸಿರು ವಲಯ ಮುಂದಕ್ಕೆ ಹೋಗುತ್ತಿದ್ದಯೋ? ಬಾಚಿರುವವರೇ ಮುಂದಕ್ಕೆ ಹೋಗುತ್ತಿದ್ದಾರೋ? ಹಸಿರು ವಲಯವನ್ನು ದೊಡ್ಡವರು ಎಲ್ಲರೂ ಬಾಚಿಕೊಂಡಿದ್ದಾರೆ ಎಂದು ಹೇಳಿದಿರಿ ಅವರೇ ಮುಂದು ಮುಂದಕ್ಕೆ ಹೋಗುತ್ತಿದ್ದಾರೋ?

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಅಧ್ಯಕ್ಷರೆ, ಖಂಡಿತವಾಗಿಯೂ ಅವರೇ, ತಾವು ಇದಕ್ಕೆ ಒಂದು ಸಮಿತಿಯನ್ನು ಮಾಡಿದ್ದೀರಿ ನಾವು ನಿಮಗೆ ಇಡೀ ನಾಡಿನ ಪರವಾಗಿ ಅಭಿನಂದಿಸುತ್ತೇವೆ ನಾವೆಲ್ಲರೂ ಸಿದ್ದರಿದ್ದೇವೆ, ಮಾನ್ಯ ಎ ಟಿ ರಾಮಸ್ವಾಮಿಯವರು ಸಮಿತಿಯ ಅಧ್ಯಕ್ಷರಾಗಿದ್ದಾರೆ ನಾವು ನಮ್ಮ ಕೈಗೆ ಸಿಕ್ಕಿದಂಥಾದ್ದು, ನಮ್ಮ ಕಣ್ಣಿಗೆ ಕಂಡಂಥ ವರದಿಯನ್ನು ಕೊಟ್ಟಿದ್ದೇವೆ ಇನ್ನು ಪಾತಾಳದೊಳಗೆ ಏಣಿ ಹಾಕಿ ನೀವು ಹುಡುಕಬೇಕು ಇನ್ನು ಎಂತೆಂಥವರು ಇದ್ದಾರೆ, ಎಷ್ಟು ಇದೆ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ಮಾನ್ಯ ಅಧ್ಯಕ್ಷರೆ, ಅದರೆ ಅದಕ್ಕೆ ಗೆರೆಯನ್ನು ಹಾಕಿದ್ದಾರೆ. ಕೆಲವು ಭಾಗವನ್ನು ಮಾತ್ರ ತನಿಖೆಗೆ ಕೊಟ್ಟಿದ್ದಾರೆ ಇಡೀ ಭಾಗವನ್ನು ಕೊಟ್ಟಿದ್ದರೆ ಇನ್ನು ಒಳ್ಳೆಯದಾಗುತ್ತಿತ್ತು ಇದನ್ನು ತನಿಖೆಗೆ ಕೊಟ್ಟುಬಿಡಿ

ಅಧ್ಯಕ್ಷರು ತಾವು ಹೇಳುತ್ತಿರುವುದನ್ನು ನೋಡಿದರೆ, ಪಾತಾಳವನ್ನು ಹೊಕ್ಕಿಬಿಟ್ಟಿದ್ದಾರೆಂದು ಕಾಣುತ್ತದೆ

ಶ್ರೀ ವಾಟಾಳ್ ನಾಗರಾಜ್ ಹೌದು, ಅವರನ್ನು ಪಾತಾಳದಲ್ಲಿ ಹೋಗಿ ಹಿಡಿಯಬೇಕು ಈಗಾಗಲೇ ಚಂದ್ರಲೋಕದಲ್ಲಿ ನಿವೇಶನವನ್ನು ಮಾಡುವುದಕ್ಕೆ ಹೊರಟಿದ್ದಾರೆ ಅಲ್ಲಿ ಸೈಟ್‌ಗಳನ್ನು ಯಾವ ರೀತಿಯಲ್ಲಿ ಮಾಡಬೇಕೆಂದು ಮಾಡುತ್ತಿದ್ದಾರೆ ಬೆಂಗಳೂರು ನಮ್ಮ ಕೈಯಲ್ಲಿ ಉಳಿದಿಲ್ಲ ನಮ್ಮ ರಾಜ್ಯದ ರಾಜಧಾನಿ ಎಂದು ಹೇಳುವುದಕ್ಕೆ ನಮಗೆ ನಾಚಿಕೆಯಾಗುತ್ತದೆ ಇವತ್ತು ಬೆಂಗಳೂರು ನಮ್ಮ ಕೈಯಲ್ಲಿ ಉಳಿದಿಲ್ಲ

7/19

ಬೆಂಗಳೂರಿನ ಗತಿ ಏನಾಗಿದೆ? ಈಗ ನಾವು ಹುಡುಕಿರುವಂಥ ಜಮೀನನ್ನು ಹರಾಜು ಹಾಕಬೇಕೆಂದು ಏನು ಹೊರಟಿದ್ದಾರೆ ಈ ಜಮೀನನ್ನು ಹರಾಜಿನಲ್ಲಿ ತೆಗೆದುಕೊಳ್ಳುವವರು ಯಾರು? ನಾವಲ್ಲ, ನಾವು ಇನ್ನು ನಾಗಮಂಗಲದಲ್ಲೇ ಇದ್ದೇವೆ, ನಾವು ಎಲ್ಲಿದ್ದೆವೆಂದರೆ, ಗುಟ್ಟಹಳ್ಳಿಯಲ್ಲೆ ಇದ್ದೇವೆ ಅದೇ ಕೊಟ್ಟಿಗೆ, ಅದೇ ವ್ಯವಸ್ಥೆಯಲ್ಲಿ ಇದ್ದೇವೆ ನಾವು ಆ ಜಮೀನನ್ನು ಕೊಂಡುಕೊಳ್ಳುವುದಕ್ಕೆ ನಮ್ಮ ಬಳಿ ದುಡ್ಡು ಇಲ್ಲ ಈಗ ಈ ಸಾವಿರಾರು ಎಕರೆ ಜಮೀನನ್ನು ತಮ್ಮ ಗಮನಕ್ಕೆ ತಂದಿದ್ದೇವಲ್ಲಾ, ಇದನ್ನು ಹರಾಜು ಹಾಕಿ, ಅದನ್ನು ರೈತರಿಗೆ ಕೊಡುತ್ತೇವೆಂದು ಹೇಳುತ್ತಿದ್ದಾರಲ್ಲಾ, ಇದನ್ನು ಕೊಂಡುಕೊಳ್ಳುವವರು ಯಾರು? ಅವರು ಕನ್ನಡಿಗರಲ್ಲಾ, ಅವರೆಲ್ಲಾ ಹೊರಗಿನವರಾಗಿದ್ದಾರೆ ಅದಕ್ಕೆ ನೀವು ಏನು ಮಾಡಬೇಕೆಂದರೆ, ಕನ್ನಡಿಗರೇ ಕನಿಷ್ಟ ಇಷ್ಟು ವರ್ಷ ಬೆಂಗಳೂರಿನಲ್ಲಿ ಇರುವವರಾಗಿರಬೇಕು ಬೆಂಗಳೂರಿನಲ್ಲಿ 40ವರ್ಷ ಕನಿಷ್ಠ ಇರುವವರು ಆಗಿರಬೇಕೆಂದು ಹಾಕಬೇಕು ಈ 'ರೀತಿಯಾಗಲಿಲ್ಲವೆಂದರೆ, ಸಂಪೂರ್ಣ ಹೊರಗಿನವರಿಗೆ ಈ ಜಮೀನು ಹೋಗಿ ಬಿಡುತ್ತದೆ ಈಗಾಗಲೇ ನಮ್ಮ ಬೆಂಗಳೂರಿನ ಮುಕ್ಕಾಲು ಭಾಗದಷ್ಟು ಜಾಗ ಹೊರಗಿನವರಿಗೆ ಹೋಗಿದೆ ಈಗ ಮಾನ್ಯ ಮುಖ್ಯಮಂತ್ರಿಯವರು ಸದನದಲ್ಲಿ ಇದ್ದಾರೆ ಅವರಿಗೆ ನಾನು ನೇರವಾಗಿ ಹೇಳುತ್ತೇನೆ ಈ ಹರಾಜು ಆಗುವಂಥ ಜಾಗ ಏನು ಇದೆ, ನಾನು ತಮ್ಮಲ್ಲಿ ಕಳಕಳಿಯಿಂದ ಮನವಿಯನ್ನು ಮಾಡಿಕೊಳ್ಳುತ್ತೇನೆ ಅದನ್ನು ಹೊರಗಡೆಯವರೇ ತೆಗೆದುಕೊಳ್ಳುತ್ತಾರೆ ಇವರು ಕೊಂಡುಕೊಳ್ಳುವುದಕ್ಕೆ ರೆಡಿಯಾಗಿ ಇದ್ದಾರೆ ನೀವು ಅವರಿಗೆ ಜಾಗವನ್ನು ಕೊಡಬೇಡಿ, ಆ ಜಾಗ ಹಾಗೆ ಇರಲಿ, ಬೇಕಾದರೆ ಅದನ್ನು ನಮ್ಮ ರೈತರಿಗೆ ಕೊಡಿ ನೀವು ರೈತರಿಗೆ ಸಾಲ ಮನ್ನಾ ಎಂದು ಹೇಳುವ ಬದಲು, ಈ ಜಾಗವನ್ನು ರೈತರಿಗೆ ಹಂಚಿಬಿಡಿ ನೀವು ಇಡೀ ರಾಜ್ಯದ ರೈತರಿಗೆ ನಿವೇಶನವನ್ನು ಕೊಟ್ಟಿದ್ದೇವೆಂದು ಮಾಡಿ ಈ ಬೆಂಗಳೂರು ಕರ್ನಾಟಕ ರಾಜ್ಯದ ರಾಜಧಾನಿ, ಇಲ್ಲಿ ಕನ್ನಡಿಗರು ಇರಬೇಕು ಈ ರಾಜಧಾನಿ ನಿಮ್ಮದೆಂದು ಅವರಿಗೆ ನಿವೇಶನಗಳನ್ನು ಹಂಚಿ, ಅದನ್ನು ಬಿಟ್ಟು ಬೇರೆಯವರಿಗೆ ಕೊಟ್ಟರೆ ಅದು ಒಳ್ಳೆಯ ಸೂಚನೆಯಾಗುವುದಿಲ್ಲ ಬೆಂಗಳೂರಿಗೆ ಕುಡಿಯುವ ನೀರನ್ನು ತಿಪ್ಪಗೊಂಡನ ಹಳ್ಳಿಯಿಂದ ತಂದವರು ಯಾರು? ಅವರು ಮಾನ್ಯ ನಿಜಲಿಂಗಪ್ಪನವರು ರಾಜ್ಯದ ಮುಖ್ಯಮಂತ್ರಿಯಾಗಿದ್ದಾಗ ತಂದರು ಇದಕ್ಕೆ ಇಂಜಿನಿಯರ್ ಶ್ರೀ ಐ ಎಂ ಮುಗ್ದಂರವರು ಒಬ್ಬ ದಕ್ಷ ಅಧಿಕಾರಿಯಾಗಿದ್ದರು ಅವರು ಇವತ್ತು

ನಮ್ಮೊಂದಿಗೆ ಇಲ್ಲ, ತೀರಿಕೊಂಡಿದ್ದಾರೆ ಆ ಕಾಲದಲ್ಲಿ ಬೆಂಗಳೂರಿಗೆ ಒಂದು ಶಕ್ತಿ ಇತ್ತು ಇವತ್ತು ನಾವು ಆನೇಕರನ್ನು ನೆನಪು ಮಾಡಿಕೊಳ್ಳಬೇಕು ಕಾವೇರಿ ನೀರಿಗಾಗಿ ಶ್ರೀ ಹೆಚ್ ಎಂ ಚನ್ನಬಸಪ್ಪನವರು, ಮಾನ್ಯ ನಂಜೇಗೌಡರು, ಮಾನ್ಯ ದೇವೇಗೌಡರು, ಮಾನ್ಯ ವೀರೇಂದ್ರ ಪಾಟೀಲ್‌ರವರು ಕೊನೆಯಗಳಿಗೆಯಲ್ಲಿ ಅವರಿಗೆ ಪಾರ್ಶ್ವವಾಯು ಆಗಿದ್ದರೂ ಕೂಡ, ಅವರು ಸದನಕ್ಕೆ ಬಂದು ಕಾವೇರಿ ವಿಷಯವನ್ನು ಮಾತನಾಡುತ್ತಿದ್ದರು ನಾನು ಈ ರಾಜ್ಯದ ಪರಿಸ್ಥಿತಿಯನ್ನು ತಮಗೆ ಮನವರಿಕೆಯನ್ನು ಮಾಡುತ್ತಿದ್ದೇನೆ ಇವತ್ತು ನಾನು ಅತ್ಯಂತ ಗಂಭೀರವಾಗಿ ತಮಗೆ ಈ ಮಾತನ್ನು ಹೇಳುತ್ತಿದ್ದೇನೆ ಬೆಂಗಳೂರು ಬೆಂಕಿಯಾಗುತ್ತದೆ, ಬೆಂಗಳೂರಿನಲ್ಲಿ ನಾವು ಇರುವುದಕ್ಕಾಗುವುದಿಲ್ಲ, ನೀವು ಇರುವುದಕ್ಕಾಗುವುದಿಲ್ಲ ಈಗ ದೇವನ ಹಳ್ಳಿಯ ರಸ್ತೆಯಲ್ಲಿ ಒಂದು ಸಾವಿರ ಅಡಿ. ಕೆಳಗೆ ಹೋದರೂ ನೀರು ಸಿಗುವುದಿಲ್ಲ, ವೈಟ್‌ಫೀಲ್ಡ್‌ನಲ್ಲಿ ಒಂದು ಸಾವಿರ ಅಡಿ ಕೆಳಗಡೆ ಹೋದರೂ ನೀರು ಸಿಗುವುದಿಲ್ಲ ನಾನು ಮಾನ್ಯ ಮುಖ್ಯಮಂತ್ರಿಯವರಿಗೆ ಹೇಳುವುದೇನೆಂದರೆ, ದೇವನ ಹಳ್ಳಿ ರಸ್ತೆಯಲ್ಲಿ 5ಲಕ್ಷ ರೂಪಾಯಿಗಳಿಗೆ ತೆಗೆದುಕೊಂಡಿರುವಂಥ ಜಮೀನನ್ನು ಇವತ್ತು 5ಕೋಟಿ, 6ಕೋಟಿ ರೂಪಾಯಿಗಳಿಗೆ ಮಾರುತ್ತಿದ್ದಾರೆ ಇದರ ಬಗ್ಗೆ ಸಮಗ್ರವಾದಂಥ ತನಿಖೆ ಆಗಲೇ ಬೇಕು ಯಾರ್‍ಯಾರು ತೆಗೆದುಕೊಂಡಿದ್ದಾರೆ, ಎಲ್ಲಿ ತೆಗೆದುಕೊಂಡಿದ್ದಾರೆ? ವಿಮಾನ ನಿಲ್ದಾಣಕ್ಕೆ ತೆಗೆದುಕೊಂಡಿರುವ ಜಮೀನು ಹರಾಜು ಹಾಕುವಂಥಾದ್ದು, ಇವೆಲ್ಲದರ ಬಗ್ಗೆ ತಾವು ಸಮರ್ಗವಾಗಿ ಚಿಂತನೆಯನ್ನು ಮಾಡಬೇಕೆಂದು, ಇಲ್ಲದಿದ್ದರೆ ಅತ್ಯಂತ ಅಪಾಯಕ್ಕೆ ಹೋಗುತ್ತೇವೆಂಬ ಮಾತನ್ನು ಹೇಳುತ್ತಿದ್ದೇನೆ

ಶ್ರೀ ಜಿ ಚಂದ್ರಣ್ಣ ಮಾನ್ಯ ಆಧ್ಯಕ್ಷರೆ, ಈಗ ಮಾತೆತ್ತಿದರೆ ದೇವನ ಹಳ್ಳಿಯಲ್ಲಿ 5ಲಕ್ಷ ರೂಪಾಯಿಗಳ ಜಮೀನು 5ಕೋಟಿ, 6ಕೋಟಿ, 8ಕೋಟಿ ರೂಪಾಯಿಗಳಾಗಿದೆಯೆಂದು ಹೇಳುತ್ತಿದ್ದಾರಲ್ಲಾ, ನಿಜವಾಗಿಯೂ ಇದೆಲ್ಲಾ ತಪ್ಪು ಗ್ರಹಿಕೆಯಾಗಿದೆ ಇದನ್ನು ಯಾರಾದರೂ ಹೇಳಲಿ, 5ಕೋಟಿ, 10ಕೋಟಿ ಅಗಿದೆಯೆಂದು ಹೇಳಲಿ ಅದು ಮಾನ್ಯ ವಾಟಾಳ್ ನಾಗರಾಜುರವರು ತೆಗೆದುಕೊಂಡಿದ್ದಾರೋ ಏನೋ ನನಗೆ ಗೊತ್ತಿಲ್ಲ ಆ ರೀತಿಯಂತೂ ಸಧ್ಯಕ್ಕೆ ಇಲ್ಲ, ಆ ಮಟ್ಟಕ್ಕೆ ಹೋಗಿಲ್ಲ ದಯವಿಟ್ಟು ಆ ರೀತಿಯ ತಪ್ಪು ಗ್ರಹಿಕೆ ಬೇಡವೆಂದು ಹೇಳುತ್ತೇನೆ

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಅಧ್ಯಕ್ಷರೆ, ಇಡೀ ಬೆಂಗಳೂರು ನಗರವೆಲ್ಲಾ ನನ್ನದೇ, ವಿಧಾನ ಸೌಧ ನನ್ನದೇ, ಜೂಜಿನ ಮೈದಾನ ನನ್ನದೇ, ಅಂಗಡಿ ಬೀದಿ ನನ್ನದೇ, ಅಯಿತು ಇನ್ನು ಏನು? ಅದುದರಿಂದ, ನಾನು ತಮಗೆ ಹೇಳುವುದೇನೆಂದರೆ, ಮಾನ್ಯ ಮುಖ್ಯಮಂತ್ರಿಯವರೆ, ತಾವು ದಯಮಾಡಿ ಅಲ್ಲಿಗೆ ಹೋಗಿ ಬನ್ನಿ ನನ್ನ ಮಾತಿನ ಬಗ್ಗೆ ಈ ಸದನದಲ್ಲಿ ಹೇಳಿದ್ದೇನೆ ದೇವನ ಹಳ್ಳಿ ರೋಡ್ ಏನು, ವೈಟ್‌ಫೀಲ್ಡ್ ರೋಡ್ ಏನು? ಎಂದು ನೋಡಿಕೊಂಡು ಬನ್ನಿ ಒಬ್ಬ ಆಂಧ್ರ ಪದೇಶದವರು 10ಸಾವಿರ ಕೋಟಿ ರೂಪಾಯಿಗಳ ಬಂಡವಾಳವನ್ನು ಒಬ್ಬರೇ ಹಾಕಿದ್ದಾರೆ ಇದು ಎಲ್ಲರಿಗೂ ಗೊತ್ತಿದೆ, ಅವರ ಹೆಸರನ್ನು ಈಗ ಹೇಳುವುದು, ಬೇಡ ಇಂಥವರು ಎಷ್ಟು ಜನರು ಬಂದಿರಬಹುದು? ಈ ರಾಜ್ಯಕ್ಕೆ ಎಷ್ಟು ಜನರು ಬಂದಿರಬಹುದು? ಬೆಂಗಳೂರು ಏನೇನು ಆಗಿರಬಹುದು? ತಮಗೆ ಗೊತ್ತಿದೆ ಇಲ್ಲಿ ಸುಮ್ಮನೆ ಮಾತನಾಡಿದರೆ ಅರ್ಥ ಏನು ಇದೆ? ಬೆಂಗಳೂರಿಗೆ ನೀರು ಬಹಳ ಪ್ರಾಮುಖ್ಯವಾಗಿದೆ ತಾವು ವಿಶಾಲವಾದಂಥ ದೊಡ್ಡ ಬೆಂಗಳೂರನ್ನು ಮಾಡುವುದಕ್ಕೆ ಹೊರಟಿದ್ದೀರಿ ಬೆಂಗಳೂರಿಗೆ ನೀರನ್ನು ಅತ್ಯಂತ ಗಂಭೀರವಾಗಿ ಕೊಡಲೇ ಬೇಕು ಬೆಂಗಳೂರಿಗೆ ನೀರನ್ನು ಕೊಡಲಿಲ್ಲವೆಂದರೆ, ಪರಿಸ್ಥಿತಿ ಗಂಭೀರವಾಗಿದ್ದು ಯಾವ ದಿಕ್ಕನ್ನು ತಲುಪುತ್ತದೋ, ಹೇಳುವುದಕ್ಕಾಗುವುದಿಲ್ಲ ಅದುದರಿಂದ ಮೊದಲನೆಯದಾಗಿ ಬೆಂಗಳೂರಿಗೆ ನೀರು, ಎರಡನೆಯದಾಗಿ ಕಬಿನಿ 2ನೇ ಹಂತ, ಮೂರನೇಯದಾಗಿ ನೀವು ಈ ಬಗ್ಗೆ ದಿಟ್ಟ ನಿಲುವನ್ನು ತೆಗೆದುಕೊಳ್ಳಬೇಕು ನಿಮಗೆ ಅಧಿಕಾರ ಬಂದಾಯಿತು, ರಾಜ್ಯದ ಮುಖ್ಯಮಂತ್ರಿಯಾಗಿದ್ದೀರಿ, ಮುಂದೆ ಆಗುವುದು, ಬಿಡುವುದು, ಭವಿಷ್ಯದ ನಿರ್ಧಾರ ತಾವು ಒಂದು ಗಟ್ಟಿ ನಿರ್ಧಾರಕ್ಕೆ ಬನ್ನಿ, ನಾವು ನೀರು ಬಿಡುವುದಿಲ್ಲ, ನಾವು ತೀರ್ಮಾನ ಮಾಡಿದ್ದೇವೆಂದು ಹೇಳಿ ಇತಿಹಾಸದಲ್ಲಿ ಏನಾಗುತ್ತದೆಂಬುದನ್ನು ನೋಡೋಣ ಆ ತೀರ್ಮಾನಕ್ಕೆ ಬನ್ನಿ, ನಾನು ಇದನ್ನು ನೇರವಾಗಿ ನಿಮಗೆ ಹೇಳುತ್ತಿದ್ದೇನೆ ಇದು ಇತಿಹಾಸಕ್ಕೆ ಹೋಗಬೇಕು, ಅಧಿಕಾರ ಬರುತ್ತದೆ, ಹೋಗುತ್ತದೆ ಅದು ಇತಿಹಾಸಕ್ಕೆ ಹೋಗುವಂಥಾದ್ದು ಇದೆಯಲ್ಲಾ, ಅದು ಸಿಗುವುದಿಲ್ಲ ಅದು ಇತಿಹಾಸಕ್ಕೆ ಹೋಗಬೇಕೆಂದರೆ, ನೀವು ಅಂತಹ ಕಾರ್ಯವನ್ನು ಮಾಡಬೇಕೆಂದರೆ, ನನ್ನ ನಿರ್ಧಾರ, ದಿಟ್ಟ ನಿಲುವು

ಶ್ರೀ ಜಿ ವಿ ಶ್ರೀರಾಮರೆಡ್ಡಿ ಅವರನ್ನು ಏನಾದರೂ ಮಾಡಿ ಇತಿಹಾಸದ ಪುಟಕ್ಕೆ ಕಳುಹಿಸಬೇಕೆಂದು ನೀವು ತೀರ್ಮಾನ ಮಾಡಿದ್ದೀರಿ

ಶ್ರೀ ಜೆ ಸಿ ಮಾಧುಸ್ವಾಮಿ ಮಾನ್ಯ ಅಧ್ಯಕ್ಷರೆ, ಈಗ ಅವರಿಬ್ಬರಲ್ಲಿ ಆಗಿರುವ ಒಪ್ಪಂದದಲ್ಲಿ ಆ ಪ್ರಶ್ನೆ ಬರುವ ಕಾಲ ಇರುವುದೇ ಇಲ್ಲ ನೀವು ಏಕೆ ಅವರಿಗೆ ಒತ್ತಾಯ ಮಾಡುತ್ತಿದ್ದೀರಿ

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಅಧ್ಯಕ್ಷರೆ, ಅವರಿಬ್ಬರ ಪ್ರಶ್ನೆಯೆಂದ ಮೇಲೆ, ಇಲ್ಲಿ ಈಗ ಮಾನ್ಯ ಬಿ ಎಸ್ ಯಡಿಯೂರಪ್ಪನವರು ಇಲ್ಲ ಅವರು ಇಲ್ಲಿ ಇದ್ದಿದ್ದರೆ ಹೇಳಬಹುದಾಗಿತ್ತು

ಶ್ರೀ ಜೆ ಸಿ ಮಾಧುಸ್ವಾಮಿ ಅವರಿಗೆ ಆ ಸ್ಥಿತಿ ನಿರ್ಮಾಣವೇ ಆಗಲಿಲ್ಲ

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ನಾನು ಮಾನ್ಯ ಮುಖ್ಯಮಂತ್ರಿಯವರಲ್ಲಿ ಕಳಕಳಿಯಿಂದ ಮನವಿಯನ್ನು ಮಾಡುತ್ತೇನೆ ನಿಮಗೆ ದೇವನ ಹಳ್ಳಿ ರೋಡು ಏನು, ಬೆಂಗಳೂರಿನ ರೋಡು ಏನು? ಬೆಂಗಳೂರಿನ ಪರಿಸ್ಥಿತಿ ಏನೆಂಬುದು ಗೊತ್ತಿದೆ ಇವತ್ತು ಆನೇಕ ಲೇಖನಗಳು ಪತ್ರಿಕೆಗಳಲ್ಲಿ ಬಂದಿದೆ ಮೊನ್ನೆ ಉದಯವಾಣಿ ಪತ್ರಿಕೆಯಲ್ಲಿ ಒಂದು ಲೇಖನ ಬಂತು ಅದನ್ನು ತಾವು ಓದಿರಬಹುದು ಎಲ್ಲಾ ಪತ್ರಿಕೆಗಳಲ್ಲೂ ದೇವನ ಹಳ್ಳಿಯ ಬಗ್ಗೆ ಬರುತ್ತಿದೆ, ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಬಗ್ಗೆ ಬರುತ್ತಿದೆ ಅದಕ್ಕೆ ಎಷ್ಟು ಎಕರೆಯನ್ನು ತೆಗೆದುಕೊಳ್ಳಲಾಗುತ್ತಿದೆ, ಎಷ್ಟು ಎಕರೆ ಬಿಡಲಾಗುತ್ತಿದೆಯೆಂಬುದು ಬರುತ್ತಿದೆ ಬಿಡದಿ ಪರಿಸ್ಥಿತಿ ಏನಾಗಿದೆಯೆಂಬುದು ಬರುತ್ತಿದೆ, ವೈಟ್ ಫೀಲ್ಡ್ ಪರಿಸ್ಥಿತಿ ಏನಾಗುತ್ತಿದೆಯೆಂಬುದು ಬರುತ್ತಿದೆ ಬೆಂಗಳೂರಿನಲ್ಲಿ ಜಮೀನುಗಳು ಚಿನ್ನದ ಗಣಿಗಿಂತ ಹೆಚ್ಚಿಗೆ ಆಗುವಂಥಾದ್ದು ಬರುತ್ತಿದೆ ಇವು ಯಾವುದು ಸುಳ್ಳು ಏನು ಅಲ್ಲವಲ್ಲಾ, ಸತ್ಯವೇ ತಾನೇ, ಇದು ನಿಮಗೂ ಗೊತ್ತಿದೆ ಅದುದರಿಂದ ಈ ಪರಿಸ್ಥಿತಿಯನ್ನು ಯಾವ ರೀತಿಯಲ್ಲಿ ಸರಿಪಡಿಸಬೇಕೆಂಬ ವಿಚಾರ ನಿಮಗೆ ಬಿಟ್ಟದ್ದು ಇದರ ಬಗ್ಗೆ ನನ್ನದು ಏನು ಅಭಿಪ್ರಾಯ ಇಲ್ಲ, ನಿಮಗೆ ಬಿಟ್ಟದ್ದು, ನೀವು ಮಾಡುವಂಥಾದ್ದು ನಿಮಗೆ ಸೇರಿದ್ದು ಆದರೆ ಒಂದು ಮಾತನ್ನು ತಮ್ಮಲ್ಲಿ ಅತ್ಯಂತ ಕಳಕಳಿ ಯಿಂದ

ಶ್ರೀ ಜೆ ಸಿ ಮಾಧುಸ್ವಾಮಿ ದೇವನಹಳ್ಳಿಗೆ ನೀರನ್ನು ಎಲ್ಲಿಂದ ತರುತ್ತಾರೆಂಬುದು ಈಗಲೇ ತೀರ್ಮಾನ ಆಗಬೇಕಲ್ಲಾ

ಶ್ರೀ ವಾಟಾಳ್ ನಾಗರಾಜು ತಾವು ದೇವನ ಹಳ್ಳಿಗೆ ಎಲ್ಲಿಂದ ನೀರು ತರುತ್ತೀರಿ? ಇದರ ಬಗ್ಗೆ ತೀರ್ಮಾನವಾಗಬೇಕಲ್ಲಾ ದೇವನ ಹಳ್ಳಿಗೆ ನೀರನ್ನು ಕೊಡಬೇಕಾದರೆ, ಕಾವೇರಿ ನೀರಿಗೆ ಇನ್ನೊಂದು ಕೊಳವೆಯನ್ನು ಹಾಕುತ್ತೀರಾ? ದೇವನ ಹಳ್ಳಿಯಲ್ಲಿ ಒಂದು ಸಾವಿರ ಅಡಿ ಕೆಳಕ್ಕೆ ಹೋಗಬೇಕು ನೀರು ಸಿಗುವುದಿಲ್ಲ, ಕಷ್ಟ ಇದೆ ನೀವು ಎಲ್ಲರಿಗೂ ಕಾವೇರಿ

ನದಿಯಿಂದಲೇ ನೀರು ಬೇಕೆಂದರೆ ನಾವು ಎಲ್ಲಿ ನಿಮಗೆ ಬಿಡುತ್ತೇವೆ? ನೀವು ಎಲ್ಲರಿಗೂ ಕಾವೇರಿ ನದಿಯಿಂದಲೇ ಕೊಡುತ್ತೇವೆಂದರೆ, ನಾವು ತೊರೆಕಾಡನಹಳ್ಳಿಗೆ ಹೋಗಿ, ನಿಲ್ಲುತ್ತೇವೆ ನಾವು ನೀರು ಕೊಡುವುದಿಲ್ಲವೆಂದು ಹೇಳುತ್ತೇವೆ ಆಗ ಏನು ಆಗುತ್ತದೆ? ನೀವು ವೈಟ್ ಫೀಲ್ಡ್‌ಗೆ ಎಲ್ಲಿಂದ ನೀರು ಕೊಡುತ್ತೀರಿ? ನೀವು ಅಲ್ಲಿಗೂ ನೀರು ಕೊಡುವುದಕ್ಕಾಗುವುದಿಲ್ಲ ಇನ್ನು ಕಬಿನಿಯಿಂದ ನೀರನ್ನು ಕೇರಳ ರಾಜ್ಯದವರಿಗೆ ಕೊಡುವುದಿಲ್ಲ ನಾವು ಏಕೆ ಬಿಡಬೇಕು? ಎಲ್ಲಿಂದ ನಾವು ಬಿಡಬೇಕು? ಬಿಡುವುದಿಲ್ಲ ನಾವು ಗಲಾಟೆ ಮಾಡುತ್ತೇವೆ ಕಬಿನಿ 2ನೇ ಹಂತ ಶುರು ಮಾಡಿಯೆಂದು ಹೇಳುತ್ತೇವೆ

ಕಾನೂನು ಭಂಗ ಚಳುವಳಿ ಮಾಡುತ್ತೇವೆ, ತೆರಿಗೆ ಚಳುವಳಿ ಮಾಡುತ್ತೇವೆ, ಹೋರಾಟ ಮಾಡುತ್ತೇವೆ ಕಾವೇರಿ ಬಗ್ಗೆ ಸರ್ಕಾರದವರಾದ ನೀವು ಏನಾದರೂ ತೀರ್ಮಾನ ತೆಗೆದುಕೊಳ್ಳಿ, ನೀವು ಏನು ಬೇಕಾದರೂ ಮಾಡಿ, ಸರ್ವೋಚ್ಚ ನ್ಯಾಯಾಲಯಕ್ಕಾದರೂ ಹೋಗಿ ಆದರೆ ನಾವಂತೂ ನಿದ್ರೆಯಿಲ್ಲದೇ ಹೋರಾಟವನ್ನು ಮಾಡುತ್ತೇವೆ ಲಕ್ಷಾಂತರ ಜನ ನಿರಂತರವಾಗಿ ರಾಜ್ಯದ ಉದ್ದಗಲಕ್ಕೂ ಅಖಿಲ ಕರ್ನಾಟಕ ಗಡಿ ಹೋರಾಟ ಸಮಿತಿಯ ಪರವಾಗಿ ನಿರಂತರವಾಗಿ ಹೋರಾಟ ಮಾಡುತ್ತೇವೆ ಜೈಲಿಗೆ ಹೋದರೂ ಪರವಾಗಿಲ್ಲ ನಾನು ತಮಗೆ ಹೇಳುತ್ತಿದ್ದೇನೆ, ಅಂತಿಮವಾಗಿ ನಾನು ರಾಜೀನಾಮೆ ಕೊಡಲೂ ಸಿದ್ಧ ನಾನು ಯಾವ ಫಳಿಗೆಯಲ್ಲಿ ಬೇಕಾದರೂ ಈ ಕಾವೇರಿಗೋಸ್ಕರವಾಗಿ, ಕೃಷ್ಣಾಗೋಸ್ಕರವಾಗಿ ರಾಜೀನಾಮೆ ಕೊಡಲು ಸಿದ್ಧ ಇದರಲ್ಲಿ ನನ್ನದೇನೂ ತಕರಾರಿಲ್ಲ ಆ ವಿಚಾರದಲ್ಲಿ ನಾನು ಸ್ಪಷ್ಟವಾಗಿದ್ದೇನೆ, ನೇರವಾಗಿ ಹೇಳುತ್ತಿದ್ದೇನೆ ನಂಜನಗೂಡಿನ ಜನ, ಗುಂಡ್ಲುಪೇಟೆಯ ಜನ, ಹಿಂದುಳಿದ ಜಿಲ್ಲೆಯಾದ ಚಾಮರಾಜನಗರದ ಜನರ ಗತಿಯೇನಾಗಬೇಕು? ತುಮಕೂರಿನವರ ಗತಿಯೇನಾಗಬೇಕು? ಕೋಲಾರದವರ ಗತಿಯೇನಾಗಬೇಕು? ಅವರು ಎಷ್ಟು ಕಾಲದಿಂದ ಕುಡಿಯುವ ನೀರಿಗಾಗಿ ಕಾಯುತ್ತಿದ್ದಾರೆ ನಾವು ಕೋಲಾರಕ್ಕೆ ನೀರು ಕೊಡುವುದಕ್ಕಾಗುವುದಿಲ್ಲ, ತುಮಕೂರಿಗೆ ನೀರು ಕೊಡುವುದಕ್ಕಾಗುವುದಿಲ್ಲ, ಚಾಮರಾಜನಗರಕ್ಕೆ ನೀರು ಕೊಡುವುದಕ್ಕಾಗುವುದಿಲ್ಲ ಆದರೆ ತಮಿಳುನಾಡಿಗೆ ನೀರು ಬಿಡಬೇಕು ಎಂದರೆ, ಇದನ್ನು ಯಾರೂ ಒಪ್ಪತಕ್ಕಂಥಾದ್ದಲ್ಲ, ಇದು ಸಾಧುವಲ್ಲ, ಇದು ಯಾವುದೇ ನ್ಯಾಯ ಮಂಡಳಿಯ ನ್ಯಾಯ ಅಲ್ಲ ಎನ್ನತಕ್ಕಂಥಾದ್ದನ್ನು, ಸ್ಪಷ್ಟಪಡಿಸುತ್ತೇನೆ ನಾನು ತಮಗೆ ಈಗಾಗಲೇ ಒಂದು ಪತ್ರವನ್ನು ಬರೆದಿದ್ದೇನೆ "ಕಾವೇರಿ ನ್ಯಾಯಾಧಿಕರಣ

ದಿನಾಂಕ 5–2–2007ರಂದು ತನ್ನ ಅಂತಿಮ ತೀರ್ಪನ್ನು ನೀಡಿರುವುದು ಕರ್ನಾಟಕ ರಾಜ್ಯದ ಪಾಲಿಗೆ "ಮರಣ ಶಾಸನ" ಬರೆದಂತಾಗಿದೆ ಈ ತೀರ್ಪಿನಿಂದ ರಾಜ್ಯಕ್ಕೆ ಅಪಾರ ಅನ್ಯಾಯವಾಗಿದೆ ವೈಜ್ಞಾನಿಕವಾಗಿ ಅಥವಾ ತಾರ್ಕಿಕವಾಗಿ ಸಮರ್ಥನೀಯವಲ್ಲದ ಕಾರಣ ಈ ತೀರ್ಪನ್ನು ಸರ್ವಾನುಮತದಿಂದ ತಿರಸ್ಕರಿಸಬೇಕು" ಎಂದು ಹೇಳಿದ್ದೇನೆ 'ತಿರಸ್ಕರಿಸಬೇಕು' ಎನ್ನುವ ಪದವನ್ನು ಉಪಯೋಗಿಸಿದ್ದೇನೆ ಇದನ್ನು ತಿರಸ್ಕರಿಸಬೇಕು ಎನ್ನುವ ನನ್ನ ನಿರ್ಣಯವನ್ನು ನಾನು ತಮಗೆ ಕೊಟ್ಟಿದ್ದೇನೆ ನನ್ನ ನಿರ್ಣಯದ ಬಗ್ಗೆ ತಾವು ಏನು ತೀರ್ಪು ಕೊಡುತ್ತೀರಿ, ನನ್ನ ನಿರ್ಣಯವನ್ನು ಮಂಡಿಸುವುದಕ್ಕೆ ತಾವು ಅವಕಾಶವನ್ನು ಕೊಡುತ್ತೀರಿ ಎಂದು ನಾನು ಅಂದುಕೊಂಡಿದ್ದೇನೆ ಮತ್ತೊಂದು ಬರಸಿಡಿಲು ಎಂದರೆ, ಮಹಾರಾಷ್ಟ್ರದ ಜಂಟಿ ಅಧಿವೇಶನದಲ್ಲಿ, ಮಾನ್ಯ ಮಹಾರಾಷ್ಟ್ರದ ರಾಜ್ಯಪಾಲರು, ಮಹಾಜನ್ ವರದಿಯ ಬಗ್ಗೆ ಅಲ್ಲಿನ ಸರ್ಕಾರದವರು ಸರ್ವೋಚ್ಚ ನ್ಯಾಯಾಲಯಕ್ಕೆ ಹೋಗಿದ್ದಾರೆ ಎಂದು ಹೇಳಿದ್ದಾರೆ ಅವರ ಬಗ್ಗೆ ನನಗೆ ಬಹಳ ಗೌರವವಿದೆ ಅವರು ಅಧ್ಯಕ್ಷರಾಗಿ ಇದೇ ಸ್ಥಳದಲ್ಲಿ ಕುಳಿತಿದ್ದಾಗ, ಮಹಾಜನ್ ವರದಿ ಅಂತಿಮ, ಅದನ್ನು ಬಿಟ್ಟು ಬೇರೆ ಏನೂ ಇಲ್ಲ ಎಂದು ಹೇಳಿದ್ದಾರೆ ಈಗ ಅಲ್ಲಿ, ಸರ್ವೋಚ್ಚ ನ್ಯಾಯಾಲಯಕ್ಕೆ ಹೋಗಿರುವುದನ್ನು ಸಮರ್ಥನೆ ಮಾಡಿದ್ದಾರೆ ಆದ್ದರಿಂದ ಕೂಡಲೇ ಅವರು ಅಲ್ಲಿ ರಾಜೀನಾಮೆ ಕೊಟ್ಟು, ಈ ರಾಜ್ಯದ ಹಿತದೃಷ್ಟಿಯಿಂದ ಕೂಡಲೇ ಈ ರಾಜ್ಯಕ್ಕೆ ಬರಬೇಕು ಈ ರಾಜ್ಯದ ಗೌರವವನ್ನು ಉಳಿಸುವುದಕ್ಕೋಸ್ಕರವಾಗಿ ಬರಬೇಕು

ಶ್ರೀ ಎಸ್ ಎಸ್ ಪಾಟೀಲ್ ರಾಜ್ಯಪಾಲರ ಮಾತು ಸರ್ಕಾರದ ಹೇಳಿಕೆಯಾಗುತ್ತದೆ ಅದಕ್ಕಾಗಿ ನೀವು ಅವರ ರಾಜೀನಾಮೆ ಕೇಳುವುದು ಸರಿಯಾಗುವುದಿಲ್ಲ ಇಲ್ಲಿ ನಮ್ಮ ರಾಜ್ಯಪಾಲರು ಹೇಳಿದರೂ ಕೂಡ ಅದು ನಮ್ಮ ಸರ್ಕಾರದ ಹೇಳಿಕೆಯಾಗುತ್ತದೆ

ಶ್ರೀ ವಾಟಾಳ್ ನಾಗರಾಜ್ ಈ ರಾಜ್ಯದ ಹಿತದ ಬಗ್ಗೆ ಅವರಿಗೆ ಚಿಂತನೆ ಇದ್ದರೆ, ಹಿಂದೆ ಅವರು ಈ ರಾಜ್ಯದಲ್ಲಿ ಅಧಿಕಾರದಲ್ಲಿದ್ದರು ಎನ್ನುವುದಾದರೆ, ಈ ರಾಜ್ಯದ ಜನತೆಯ ಋಣ ತೀರಿಸಬೇಕು ಎನ್ನುವುದಾದರೆ, ಈ ರಾಜ್ಯದ ಬಗ್ಗೆ ಪ್ರೀತಿ, ವಿಶ್ವಾಸ ಮತ್ತು ಬದ್ಧತೆ ಇದ್ದರೆ, ರಾಜ್ಯದಲ್ಲಿ ಅವರು ಕೈಗೊಂಡಂಥ ನಿರ್ಣಯಗಳ ಬಗ್ಗೆ ಪ್ರಾಮಾಣಿಕತೆ ಇದ್ದರೆ

ಅವರು ಈ ಕೂಡಲೇ ರಾಜೀನಾಮೆ ಕೊಡಬೇಕು ಎಂದು ಹೇಳಿ, ನನ್ನ ಮಾತುಗಳನ್ನು ಮುಗಿಸುತ್ತೇನೆ

ಶ್ರೀ ಪಿ ಜಿ ಆರ್ ಸಿಂಧ್ಯ (ಕನಕಪುರ) ಮಾನ್ಯ ಅಧ್ಯಕ್ಷರೇ, ಮೊದಲನೆಯದಾಗಿ, ಈ ಒಂದು ವಿಚಾರದಲ್ಲಿ ನಾನು ಮಾತನಾಡಲು ನನಗೆ ಅವಕಾಶ ಕೊಟ್ಟಿರುವುದಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ ಫೆಬವರಿ 5ನೇ ತಾರೀಖಿನಿಂದ ಈ ರಾಜ್ಯದಲ್ಲಿ ರಾಜ್ಯದ ಜನತೆಯ ನೆಮ್ಮದಿಗೆ ಭಂಗವನ್ನು ಉಂಟು ಮಾಡಿರತಕ್ಕಂಥ ಟ್ರಿಬ್ಯುನಲ್‌ನ ತೀರ್ಪಿನ ವಿಚಾರದಲ್ಲಿ ಇವತ್ತು ರಾಜ್ಯ ಸರ್ಕಾರದವರು ಈಗಾಗಲೇ ಒಂದು ನಿಲುವನ್ನು ತೆಗೆದುಕೊಂಡಿದ್ದಾರೆ ಈ ಸಂದರ್ಭದಲ್ಲಿ ನಾವು ಮಾಡತಕ್ಕಂಥ ಚರ್ಚೆ ರಾಜ್ಯದ ಹಿತವನ್ನು ಕಾಪಾಡತಕ್ಕಂಥ ದೃಷ್ಟಿಯಲ್ಲಿ ಇರಬೇಕು ಎನ್ನುವುದು ನನ್ನ ಅಭಿಪ್ರಾಯ ಈಗಾಗಲೇ ಈ ವಿಚಾರದಲ್ಲಿ ಮಾನ್ಯ ಧರಂಸಿಂಗ್‌ರವರು, ಮಾನ್ಯ ಸಿದ್ದರಾಮಯ್ಯನವರು, ಮಾನ್ಯ ವಾಟಾಳ್ ನಾಗರಾಜ್‌ರವರು ಮಾತನಾಡಿ ಅಂಕಿ ಅಂಶಗಳನ್ನು ಕೊಟ್ಟು, ಈ ಒಂದು ತೀರ್ಪಿನಿಂದಾಗಿ ರಾಜ್ಯಕ್ಕೆ ಆಗತಕ್ಕಂಥ ಅನ್ಯಾಯದ ಬಗ್ಗೆ ಮಾತನಾಡಿದ್ದಾರೆ ಆದ್ದರಿಂದ ನಾನು ಮತ್ತೆ ಈ ಅಂಕಿ ಅಂಶಗಳ ಬಗ್ಗೆ ಮಾತನಾಡಲಿಕ್ಕೆ ಹೋಗುವುದಿಲ್ಲ ಏಕೆಂದರೆ, ಬ್ರಿಟೀಷರ ಕಾಲದಿಂದ ಇದುವರೆಗೂ ಆಗಿರತಕ್ಕಂಥ ಎಲ್ಲ ವಿಚಾರಗಳನ್ನು ಬಹಳ ಸುಧೀರ್ಘವಾಗಿ ಮಾನ್ಯ ಸಿದ್ದರಾಮಯ್ಯನವರು ಹೇಳಿದ್ದಾರೆ ಅವರು ಹಿಂದೆ ಉಪ ಮುಖ್ಯಮಂತ್ರಿಗಳಾಗಿ, ಯೋಜನಾ ಮಂತ್ರಿಗಳಾಗಿ ಅನುಭವ ಇರತಕ್ಕಂಥವರು ಮತ್ತು ಅವರು ಅದೇ ಭಾಗದವರು ಅವರು ಆ ವಿಷಯವನ್ನು ಬಹಳ ಚೆನ್ನಾಗಿ ಪ್ರಸ್ತಾಪ ಮಾಡಿದ್ದಾರೆ ಅದನ್ನು ನಾನು ಮತ್ತೆ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ ನಾನು 2–3 ವಿಚಾರಗಳನ್ನು ಮಾತ್ರ 10–15 ನಿಮಿಷಗಳ ಅವಧಿಯಲ್ಲಿ ಮಾತನಾಡಿ, ರಾಜ್ಯದ ಗಮನಕ್ಕೆ ಮತ್ತು ಈ ಸಭೆಯಲ್ಲಿರುವ ನೀರಾವರಿ ಮಂತ್ರಿಗಳ ಗಮನಕ್ಕೆ ವಿಶೇಷವಾಗಿ 2–3 ವಿಚಾರಗಳನ್ನು ಹೇಳಿ, ಇದರ ಬಗ್ಗೆ ಸರ್ಕಾರ ಏನು ಮಾಡಬಹುದು ಎನ್ನುವುದರ ಬಗ್ಗೆ 2–3 ಸಲಹೆಗಳನ್ನು ಕೊಡಲಿಕ್ಕೆ ಬಯಸುತ್ತೇನೆ ಈ ಒಂದು ರಾಷ್ಟ್ರದಲ್ಲಿ ನಮ್ಮ ಎಲ್ಲ ರಾಷ್ಟ್ರೀಯ ಪಕ್ಷಗಳೂ ಸಹ ಈ ರಾಜ್ಯದ ಹಿತವನ್ನು ಕಾಪಾಡುವುದರಲ್ಲಿ ವಿಫಲವಾಗಿವೆ ಅದು ರಾಷ್ಟ್ರೀಯ ಪಕ್ಷವಾಗಿದ್ದಂಥ ಜನತಾ ಪಾರ್ಟಿಯಾಗಿರಬಹುದು ಅಥವಾ ಇವತ್ತು ರಾಷ್ಟ್ರೀಯ ಪಕ್ಷಗಳು ಎಂದು ಕರೆಸಿಕೊಳ್ಳತಕ್ಕಂಥ ಯಾವುದೇ ಪಕ್ಷವಾಗಿರಬಹುದು ಈ ರಾಷ್ಟ್ರೀಯ ಪಕ್ಷಗಳು ನಮ್ಮ ರಾಜ್ಯದ

ಹಿತವನ್ನು ಕಾಪಾಡಲಿಕ್ಕೆ ವಿಫಲವಾಗಿವೆ 1991ನೇ ಇಸವಿಯಲ್ಲಿ ತಮಿಳುನಾಡಿನ ರೈತರು ಟ್ರಿಬ್ಯುನಲ್ ಮಾಡಬೇಕೆಂದು ಸುಪ್ರೀಂ ಕೋರ್ಟಿಗೆ ಹೋದಂಥ ಹಿನ್ನಲೆಯಲ್ಲಿ, ಸುಪ್ರೀಂ ಕೋರ್ಟ್ ತೀರ್ಪನ್ನು ಕೊಟ್ಟಂಥ ಸಂದರ್ಭದಲ್ಲಿ ಮಾನ್ಯ ವಿ ಪಿ ಸಿಂಗ್‌ರವರು ಈ ರಾಷ್ಟ್ರದ ಪ್ರಧಾನಿಗಳಾಗಿದ್ದರು ಆ ಸಂದರ್ಭದಲ್ಲಿ ಮಾನ್ಯ ಡಿ ಬಿ ಚಂದ್ರೇಗೌಡರು ಇಲ್ಲಿ ವಿರೋಧ ಪಕ್ಷದ ಸ್ಥಾನದಲ್ಲಿ ಕುಳಿತಿದ್ದರು ಆಗ ನಾನು ಉಪ ನಾಯಕನಾಗಿದ್ದೆ ಆಗ ನಾವೆಲ್ಲರೂ ವಿ ಪಿ ಸಿಂಗ್‌ರವರ ಪಕ್ಷದಲ್ಲೇ ಇದ್ದೆವು ಆ ಸಂದರ್ಭದಲ್ಲಿ ವಿ ಪಿ ಸಿಂಗ್‌ರವರು ತರಾತುರಿಯಲ್ಲಿ ಟ್ರಿಬ್ಯುನಲ್ ಅನ್ನು ಮಾಡಬೇಕೆಂದು ತೀರ್ಮಾನಕ್ಕೆ ಬಂದಾಗ, ಆ ಪಕ್ಷದಲ್ಲೇ ಇದ್ದ ನಾವು, ಇದರಿಂದ ಕರ್ನಾಟಕಕ್ಕೆ ಅನ್ಯಾಯವಾಗಿದೆ, ಮಾತುಕತೆಯಿಂದ ಮಾತ್ರ ಈ ವಿಚಾರವನ್ನು ಬಗೆಹರಿಸಲಿಕ್ಕೆ ಸಾಧ್ಯವೇ ವಿನ ಟ್ರಿಬ್ಯುನಲ್ ಮಾಡುವುದರಿಂದ ಈ ವಿವಾದ ಪರಿಹಾರವಾಗುವುದಿಲ್ಲ ಎಂದು ಹೇಳಿದ್ದೆವು ಏಕೆಂದರೆ, ಅಂತರರಾಜ್ಯಗಳಲ್ಲಿ ಬರತಕ್ಕಂಥ ನೀರಿನ ವ್ಯತ್ಯಾಸಗಳನ್ನು ಬಗೆಹರಿಸಲಿಕ್ಕೆ ನಮ್ಮ ರಾಷ್ಟ್ರದಲ್ಲಿ ಯಾವುದೇ ಖಚಿತವಾದ ಒಂದು ಕಾನೂನು ಇಲ್ಲದೇ ಇರುವುದರಿಂದ ಟ್ರಿಬ್ಯುನಲ್ ಮಾಡತಕ್ಕಂಥಾದ್ದು ಸೂಕ್ತವಲ್ಲ ಎನ್ನತಕ್ಕಂಥ ಅಭಿಪ್ರಾಯವನ್ನು ನಾವು ಮಾನ್ಯ ವಿ ಪಿ ಸಿಂಗ್‌ರವರಿಗೆ ಸಹ ಹೇಳಿದ್ದೆವು ಆವತ್ತು ವಿ ಪಿ ಸಿಂಗ್‌ರವರಿಗೆ ಬೆಂಬಲವಾಗಿ ಡಿ ಎಂ ಕೆ ಯ ಕರುಣಾನಿಧಿಯವರು ಇದ್ದರು ಕರುಣಾನಿಧಿಯವರ ಒತ್ತಡದ ಮೇರೆಗೆ, ಆವತ್ತು ಮಾನ್ಯ ವಿ ಪಿ ಸಿಂಗ್‌ರವರು ಈ ಟ್ರಿಬ್ಯುನಲ್ ಅನ್ನು ರಚನೆ ಮಾಡಿದ್ದರು ನಮ್ಮ ಹಿರಿಯ ಸದಸ್ಯರು ಹೇಳಿದ ಹಾಗೆ, ಕಳೆದ 16 ವರ್ಷಗಳಿಂದ ನಿರಂತರ ಸಮರ ನಡೆದಿರತಕ್ಕಂಥಾದ್ದಾಗಿದೆ. ವಿ ಪಿ ಸಿಂಗ್‌ರವರಾದ ಮೇಲೆ ಮಾನ್ಯ ನರಸಿಂಹರಾಯರು ಪ್ರಧಾನಿಗಳಾದರು, ಶ್ರೀಮಾನ್ ದೇವೇಗೌಡರು ಪ್ರಧಾನಿಗಳಾದರು, ಶ್ರೀಮಾನ್ ವಾಜಪೇಯಿಯವರು ಪ್ರಧಾನಿಗಳಾಗಿದ್ದರು ಈಗ ಶ್ರೀಮಾನ್ ಮನಮೋಹನ್ ಸಿಂಗ್‌ರವರು ಪ್ರಧಾನಿಗಳಾಗಿದ್ದಾರೆ ಎಲ್ಲರೂ ಸಹ ಈ 16' ವರ್ಷಗಳಲ್ಲಿ, ಇದರ ಬಗ್ಗೆ ದೂರದೃಷ್ಟಿಯನ್ನಿಟ್ಟುಕೊಂಡು, ಆ ಟ್ರಿಬ್ಯುನಲ್ ಯಾವ ಆಧಾರದ ಮೇಲೆ ನೀರನ್ನು ಹಂಚಬೇಕು ಎನ್ನತಕ್ಕಂಥ ಒಂದು ರಾಷ್ಟ್ರೀಯ ಜಲ ನೀತಿಯನ್ನು ಮಾಡುವುದರಲ್ಲಿ ವಿಫಲರಾಗಿದ್ದಾರೆ ಇದು ವಾಸ್ತವಾಂಶ ಇದು ವಿ ಪಿ ಸಿಂಗ್‌ರವರು ರಚನೆ ಮಾಡಿದಂಥಾದ್ದಾದರೆ, ಇವತ್ತಿರತಕ್ಕಂಥ ಸರ್ಕಾರದವರಿಗೂ ಸಹ ಇದರ ಬಗ್ಗೆ ಬಹಳ ದೊಡ್ಡ ಜವಾಬ್ದಾರಿ ಇದೆ

7/20

ತಮಿಳುನಾಡಿನಲ್ಲಿ ಏನಾಗುತ್ತದೆ ಎಂದರೆ, ಅಲ್ಲಿ ಎರಡೂ ಪ್ರಾದೇಶಿಕ ಪಕ್ಷಗಳು ಬಹಳ ಪ್ರಬಲವಾಗಿರುವುದರಿಂದ, ಕೇಂದ್ರದಲ್ಲಿ ಯಾರೇ ಆಡಳಿತದಲ್ಲಿದ್ದರೂ ಆಡಳಿತ ಪಕ್ಷದ ಜೊತೆಯಲ್ಲಿ ಅವರು ಇರುತ್ತಾರೆ ನಾಳೆ ದಿನ ಕೇಂದ್ರದಲ್ಲಿ ಎನ್ ಡಿ ಎ ಸರ್ಕಾರ ಬಂದರೆ, ತಮಿಳುನಾಡಿನಲ್ಲಿ ಜಯಲಲಿತಾರವರು ಬಂದರೆ, ಅವರು ಎನ್ ಡಿ ಎ ಗೆ ಬೆಂಬಲವನ್ನು ಕೊಡುತ್ತಾರೆ ರಾಷ್ಟ್ರೀಯ ಪಕ್ಷಗಳು ಯಾವುದೇ. ರೀತಿಯಲ್ಲಿ ಈ ರಾಜ್ಯ ಹಿತವನ್ನು ಕಾಪಾಡತಕ್ಕಂಥಾದ್ದರಲ್ಲಿ ವಿಫಲವಾಗಿವೆ ಕಾಂಗೆಸ್ ಪಕ್ಷವೂ ಸಹ ವಿಫಲವಾಗಿದೆ, ಬಿ ಜೆ ಪಿ ಯೂ ಸಹ ವಿಫಲವಾಗಿದೆ, ಜನತಾದಳವೂ ಸಹ ಸಂಪೂರ್ಣವಾಗಿ ವಿಫಲವಾಗಿದೆ ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ, ತಮಗೆ ಜ್ಞಾಪಕವಿರಬಹುದು, ಮಾನ್ಯ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ತಾವು ಈ ವಿಧಾನಸಭೆಯ ಸದಸ್ಯರಾಗಿದ್ದಿರಿ ಆಗ ತಾವು ಇನ್ನೂ ಮಂತ್ರಿಗಳಾಗಿರಲಿಲ್ಲ ಆಗ ಪಕ್ಕದ ರಾಜ್ಯವಾದ ತಮಿಳುನಾಡಿನ ಮುಖ್ಯಮಂತ್ರಿಗಳಾಗಿ ಎಂ ಜಿ ಆರ್ ರವರಿದ್ದರು ನೀರಾವರಿ ಇಲಾಖೆಯ ಕಡತಗಳನ್ನು ತರಿಸಿ ಮಾನ್ಯ ಮಂತ್ರಿಗಳು, ಸಚಿವ ಸಂಪುಟದವರು, ಮಾನ್ಯ ಮುಖ್ಯಮಂತ್ರಿಗಳು ಗಮನಿಸಬೇಕು ಅನೇಕ ಸಂದರ್ಭಗಳಲ್ಲಿ ರಾಮಕೃಷ್ಣ ಹೆಗಡೆಯವರು ಮತ್ತು ಎಂ ಜಿ ಆರ್ ರವರು ಮಾತುಕತೆಗಳನ್ನು ಮಾಡಿದರು ಆ ಮಾತುಕತೆಯಲ್ಲಿ ಬೊಮ್ಮಾಯಿಯವರು, ದೇವೇಗೌಡರು, ನಜೀರ್ ಸಾಹೇಬರು, ರಾಚಯ್ಯನವರು ಎಲ್ಲರೂ ಸಹ ಭಾಗವಹಿಸುತ್ತಿದ್ದರು ಕಡತಗಳನ್ನು ತೆಗೆದು ನೋಡಿದರೆ ಗೊತ್ತಾಗುತ್ತದೆ, ಇವತ್ತು ಟ್ರಿಬ್ಯುನಲ್‌ನವರು ತಮಿಳುನಾಡಿಗೆ ಏನು ನೀರನ್ನು ಕೊಟ್ಟಿದ್ದಾರೆ, ಅದಕ್ಕಿಂತ ಕಡಿಮೆ ಪ್ರಮಾಣದ ನೀರಿಗೆ ಎಂ ಜಿ ಆರ್ ರವರು ಮಾತುಕತೆಯಲ್ಲಿ ಆ ಸಂದರ್ಭದಲ್ಲಿ ಒಪ್ಪಿಗೆಯನ್ನು ಕೊಟ್ಟಿದ್ದರು ಇನ್ನೊಂದು 60 ದಿನಗಳ ಕಾಲ ಎಂ ಜಿ ಆರ್ ರವರ ಆರೋಗ್ಯ ಚೆನ್ನಾಗಿದ್ದರೆ ಆವತ್ತೇ ಈ ಸಮಸ್ಯೆ ಬಗೆಹರಿಯುತ್ತಿತ್ತು ದೇವರಾಜ ಅರಸುರವರು ಮುಖ್ಯಮಂತ್ರಿಗಳಾಗಿದ್ದಂಥ ಸಂದರ್ಭದಲ್ಲೂ ಸಂಸ್ಥಾ ಕಾಂಗೆಸ್ಸಿನ ನಾಯಕರಾಗಿ ಶ್ರೀ ವಿರೇಂದ್ರ ಪಾಟೀಲ್‌ರವರಿದ್ದರು, ವಿರೋಧ ಪಕ್ಷದ ನಾಯಕರಾಗಿ ಶ್ರೀ ರಾಮಕೃಷ್ಣ ಹೆಗಡೆಯವರಿದ್ದರು, ಶ್ರೀ ದೇವೇಗೌಡರಿದ್ದರು ತಮಗೆ ಜ್ಞಾಪಕ ಇರಬಹುದು ಮಾತುಕತೆ ಮೂಲಕ ಇದು ಆಗಬೇಕೇ ಹೊರತು ಯಾವತ್ತೂ ಸಹಿತ ಇದು tribunal ನಿಂದ court ನಿಂದ ಆಗುತ್ತದೆಂದು ಆ ಸಂದರ್ಭದಲ್ಲೂ ಸಹಿತ ದೇವರಾಜು ಅರಸ್‌ರವರು ಸೇರಿದಂತೆ ಯಾರೂ ಸಹಿತ ಹೇಳಿರಲಿಲ್ಲ ನಾವು

ನೀರನ್ನು ಬಿಡುವುದಿಲ್ಲ, ಸೈನ್ಯ ತೆಗೆದುಕೊಂಡು ಬರಲಿ ಎಂದು ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿರುವುದನ್ನು ನಾನು ಒಪ್ಪುತ್ತೇನೆ ಈ ದೇಶದಲ್ಲಿ ಒಂದು ರಾಜ್ಯ ಸರ್ಕಾರದ ಮೇಲೆ ಯಾರೂ ಸಹ ಸೈನ್ಯವನ್ನು ತೆಗೆದುಕೊಂಡು ಬಂದು ಹೇರುವುದಕ್ಕೆ ಆಗುವುದಿಲ್ಲ ಆದರೆ, ಒಂದು ಅಂಶವನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ ನಮ್ಮ ಮೇಲುಗಡೆ ಇರುವ ರಾಜ್ಯದವರು ನಮಗೆ ನೀರನ್ನು ಬಿಡದಿದ್ದರೆ ನಮ್ಮ ಗತಿ ಏನಾಗುತ್ತದೆ ಎನ್ನುವುದನ್ನು ಸಹ ನಾವು ವಿಚಾರ ಮಾಡಬೇಕಾಗುತ್ತದೆ ಆವತ್ತು ಮಾತುಕತೆಯಲ್ಲಿ ಬಗೆಹರಿದಿದ್ದರೆ ಇವತ್ತು ಈ ಸಮಸ್ಯೆ ಬರುತ್ತಿರಲಿಲ್ಲ ಮಾತುಕತೆ ಮೂಲಕ ಆವತ್ತು ಬಗೆಹರಿಯದಿರುವುದು ನಮ್ಮ ದುರ್ದೈವ M G R. ರವರು ಆರೋಗ್ಯವಾಗಿದ್ದಿದ್ದರೆ, ನನಗೆ ಅನಿಸತಕ್ಕಂಥದ್ದು 170 ರಿಂದ 180 TMC ಗೆ ಅವರು ಒಪ್ಪಿಗೆಯನ್ನು ಕೊಟ್ಟಿದ್ದರು ಕಡತಗಳಲ್ಲಿ ಖಚಿತವಾಗಿರತಕ್ಕಂಥದ್ದು ಇರಬಹುದು, records ನಲ್ಲಿ ಇದೆಯೋ, ಇಲ್ಲವೋ ನನಗೆ ಗೊತ್ತಿಲ್ಲ ಆಗಿರತಕ್ಕಂತಹ ಒಂದು unofficial talks ನಲ್ಲಿ almost ಇದು settle ಆಗಿತ್ತು ಇದು ವಾಸ್ತವಾಂಶವಾಗಿದೆ ಇವತ್ತು ಪ್ರಾದೇಶಿಕ ಪಕ್ಷಗಳು ಇದಕ್ಕೆ ಉತ್ತರವನ್ನು ಕೊಡಬಲ್ಲದು ಎಂದು ನಾನು ಹೇಳುವುದಿಲ್ಲ ಆದರೆ, ಕೇಂದ್ರ ಸರ್ಕಾರ ಏಕೆ intervene ಆಗಬೇಕು? ಮಾನ್ಯ ಮನಮೋಹನ ಸಿಂಗ್‌ರವರು ಇದರಲ್ಲಿ ಏಕೆ intervene ಆಗಬೇಕು? ರಾಷ್ಟ್ರೀಯ ಪಕ್ಷಗಳ ಅಧ್ಯಕ್ಷರುಗಳು ಇದರಲ್ಲಿಏಕೆ intervene ಆಗಬೇಕೆಂದು ಹೇಳಿದರೆ, ಕರ್ನಾಟಕ ರಾಜ್ಯದ ಜನ ರಾಷ್ಟ್ರೀಯ ಪಕ್ಷಗಳಿಗೇ ಬೆಂಬಲವನ್ನು ಕೊಟ್ಟುಕೊಂಡು ಬಂದಿದ್ದಾರೆ ಬಿ ಜೆ ಪಿ ಪಕ್ಷದಿಂದ ಒಂದು ಸಲ ಈ ರಾಜ್ಯದಿಂದ Parliamentಗೆ 17–18 seat ಗಳನ್ನು ಗೆದ್ದಿದ್ದರು ಕಾಂಗೆಸ್‌ನವರು ಈ ರಾಜ್ಯದಿಂದ ಒಂದು ಸಲ 28 seat ಗಳಲ್ಲಿ 27 seatಗಳನ್ನು Parliamentಗೆ ಗೆದ್ದಿದ್ದಾರೆ ಕಾಂಗೆಸ್‌ನ ಅಧ್ಯಕ್ಷರಾಗಿದ್ದಂಥ ದಿವಂಗತ ಇಂದಿರಾಗಾಂಧಿಯವರನ್ನು ಅವರು ಲೋಕಸಭೆಯಲ್ಲಿ ಇಲ್ಲದಿರುವಾಗ ಇಲ್ಲಿಂದ ಆರಿಸಿ ಕಳುಹಿಸಿದಂಥ ಕೀರ್ತಿ ಕರ್ನಾಟಕದ ಜನತೆ, ಚಿಕ್ಕಮಗಳೂರು ಜನತೆಗೆ ಇದೆ ಬಳ್ಳಾರಿಯಿಂದ ಶ್ರೀಮತಿ ಸೋನಿಯಾ ಗಾಂಧಿಯವರು ಗೆದ್ದು ಹೋದರು ಇವತ್ತು ಪ್ರಮುಖವಾಗಿ ಆಗಬೇಕಾಗಿರುವ ಅಂಶವೇನೆಂದರೆ, ಈ ರಾಷ್ಟ್ರ, ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಮಧ್ಯೆ ಇರತಕ್ಕಂಥ ಸಂಬಂಧಕ್ಕೆ ಇದರಿಂದಾಗಿ ಧಕ್ಕೆ ಬರಬಾರದು ಕೇಂದ್ರ ಸರ್ಕಾರಕ್ಕೆ

ಮತ್ತು ರಾಜ್ಯ ಸರ್ಕಾರಗಳಿಗೆ ಸಂಘರ್ಷ ಆದಾಗ ನಮ್ಮ ಒಗ್ಗಟ್ಟಿನ ವ್ಯವಸ್ಥೆಗೆ ತೊಂದರೆ ಬರುತ್ತದೆನ್ನುವುದನ್ನು ನಾವು ಗಮನ ದಲ್ಲಿಟ್ಟುಕೊಳ್ಳಬೇಕಾಗುತ್ತದೆ ಅದರಿಂದಾಗಿ ಇವತ್ತು ಮಾನ್ಯ ಮುಖ್ಯಮಂತ್ರಿಗಳು ನಿರ್ಣಯವನ್ನು ಮಂಡಿಸತಕ್ಕಂಥ ಸಂದರ್ಭದಲ್ಲಿ, ಸರ್ಕಾರ ನಿರ್ಣಯವನ್ನು ಮಂಡಿಸತಕ್ಕಂಥ ಸಂದರ್ಭದಲ್ಲಿ ಈ ಸಭೆ ಒಂದು ವಾಕ್ಯವನ್ನು ಸೇರಿಸಬೇಕೆಂಬ ಒತ್ತಡವನ್ನು ನಾನು ಮಾಡುತ್ತಿದ್ದೇನೆ ಅದೇನೆಂದರೆ, 'ರಾಷ್ಟ್ರದ ಒಕ್ಕೂಟದ ವ್ಯವಸ್ಥೆಯನ್ನು ಕಾಪಾಡಿಕೊಂಡು ಹೋಗುವ ದೃಷ್ಟಿಯಿಂದಾಗಿ ಕೇಂದ್ರ ಸರ್ಕಾರ ಮಧ್ಯೆ ಪ್ರವೇಶಿಸಬೇಕು' ಮಾನ್ಯ ಮನಮೋಹನ ಸಿಂಗ್‌ರವರಿಗೆ ಅಷ್ಟೊಂದು ಸುಲಭವಿಲ್ಲ ನಾವೇ ಆ ಸ್ಥಿತಿಯಲ್ಲಿ ನಮ್ಮ ಪಕ್ಷಗಳಿದ್ದಿದ್ದರೆ ಏನು ಎನ್ನುವುದನ್ನು ಯೋಚನೆ ಮಾಡಬೇಕು 40 ಜನ ಲೋಕಸಭಾ ಸದಸ್ಯರುಗಳು ತಮಿಳುನಾಡಿನಲ್ಲಿದ್ದಾರೆ ಅವರೆಲ್ಲರೂ ಒಗ್ಗಟ್ಟಾಗಿ ಬಂದು "ನೀವ್ಯಾಕೆ intervene ಆಗುತ್ತೀರೆಂದು' ಹೇಳುತ್ತಾರೆ. ಈಗ ಕೇಂದ್ರ ಸರ್ಕಾರಕ್ಕೆ 310–315 seat ಗಳಷ್ಟೇ majority ಇರತಕ್ಕಂಥದ್ದು 40 ಜನ ಲೋಕಸಭಾ ಸದಸ್ಯರು ತಮ್ಮ ಬೆಂಬಲವನ್ನು ವಾಪಸ್ಸು ತೆಗೆದುಕೊಂಡು ರಾಜೀನಾಮೆ ಕೊಡುತ್ತೇವೆಂದು ಹೇಳಿದರೆ NDA ಸರ್ಕಾರ ಕೇಂದ್ರದಲ್ಲಿ ಆಡಳಿತಕ್ಕೆ ಬರಬೇಕಾಗುತ್ತದೆ ಆದ್ದರಿಂದ, ಮನಮೋಹನಸಿಂಗ್‌ರವರಿಗೆ ಅಧಿಕಾರ ಕಳೆದುಕೊಂಡು ಈ ಕೆಲಸವನ್ನು ಮಾಡುವುದಕ್ಕಾಗುವುದಿಲ್ಲ ಅವರು intervene ಆಗಬೇಕಾದರೆ, ಯಾವ ರೀತಿ intervene ಆಗಬೇಕು? ಎನ್ನುವ ಪ್ರಶ್ನೆ ಸಹಿತ ಬರುತ್ತದೆ ಈಗ ತಾವು ಒಂದು ತೀರ್ಮಾನಕ್ಕೆ ಬಂದಿದ್ದೀರಿ ನಮ್ಮ ರಾಜ್ಯದ ಕಾನೂನು ಪಂಡಿತರುಗಳು ತಮಗೆ 2–3 ಸಲಹೆಗಳನ್ನು ಕೊಟ್ಟಿದ್ದಾರೆ ಅದರಲ್ಲಿ ಒಂದನೆಯದಾಗಿ, original suit ಅನ್ನು ಹಾಕಿ ಎಂದು ಹೇಳಿದ್ದಾರೆ Original suit ಹಾಕಿ, tribunal ಮಾಡಿರತಕ್ಕಂಥದ್ದು ಸರಿಯೋ ಇಲ್ಲವೋ ಎನ್ನತಕ್ಕಂಥದ್ದು Supreme Court ನಲ್ಲಿ ತೀರ್ಮಾನ ಮಾಡತಕ್ಕಂಥದ್ದು ಒಂದು ಇನ್ನೊಂದು, Sectionನಲ್ಲಿರುವ provision ಪ್ರಕಾರವಾಗಿ tribunal ಗೇ ಹೋಗಿ clarification ಕೇಳತಕ್ಕಂಥದ್ದು ನೀವು original suit ಹಾಕಿದಾಗ 'ಇಷ್ಟು ದಿನ ಏಕಪ್ಪಾ ನೀವು ಹಾಕಿರಲಿಲ್ಲ?' ಎಂದು Supreme Court ನವರು ಹೇಳಬಹುದು ಇದನ್ನು ಸ್ವಾಭಾವಿಕವಾಗಿ ಹೇಳುತ್ತಾರೆ ಇದಕ್ಕೆ ಕುಮಾರಸ್ವಾಮಿಯವರು ಕಾರಣ, ಈಶ್ವರಪ್ಪನವರು ಕಾರಣ, ಎಂ ಪಿ ಪ್ರಕಾಶ್ ಕಾರಣ ಎಂದು ನಾನು ಹೇಳುತ್ತಿಲ್ಲ

16 ವರ್ಷಗಳಲ್ಲಿ ಕರ್ನಾಟಕದಲ್ಲಿ ನಾವೆಲ್ಲರೂ ಸಹಿತ ಸಂಪೂರ್ಣವಾಗಿ ದೆಹಲಿಯಲ್ಲಿ ಪ್ರಬಲವಾದ ಒಂದು ಲಾಬಿಯನ್ನು ನಿರ್ಮಾಣ ಮಾಡಲು ಆಗಿಲ್ಲ ನಿಮಗೇಗೊತ್ತಿದೆ, ಕರ್ನಾಟಕ cadre ಗೆ ಬಂದಿರತಕ್ಕಂಥ IAS, IPS officers ಗೆ ಕೇಂದ್ರ ಸರ್ಕಾರದಲ್ಲಿ ಒಂದು ಒಳ್ಳೆಯ posting ಸಿಗುವುದಿಲ್ಲ ಬೇರೆ ಬೇರೆ ರಾಜ್ಯದವರಿಗೆ ಎಷ್ಟು ಬೇಕಾದರೂ postings ಸಿಗುತ್ತವೆ ಇದೆಲ್ಲ soft attitude ಈಗ ಎಸ್ ಎಸ್ ಪಾಟೀಲರು ಬೇಜಾರು ಮಾಡಿಕೊಳ್ಳಬಾರದು ತಾವೇ ಎಸ್ ಎಂ ಕೃಷ್ಣರವರ ಸ್ಥಿತಿಯಲ್ಲಿದ್ದಿದ್ದರೆ ಆ ರಾಜ್ಯಪಾಲರ ಹುದ್ದೆಗೆ ರಾಜೀನಾಮೆ ಕೊಟ್ಟು ಬರುತ್ತಿದ್ದೀರಾ? ಅದು ಮಹಾರಾಷ್ಟ್ರ ಸರ್ಕಾರ, ಮಾನ್ಯ ವಿಲಾಸ್‌ರಾವ್‌ರವರ ತೀರ್ಮಾನ ಇರಬಹುದು ಅವರ ಸಚಿವ ಸಂಪುಟದ ತೀರ್ಮಾನ ಇರಬಹುದು ಆದರೆ, ಮಾನ್ಯ ಕೃಷ್ಣರವರು ಕನ್ನಡಿಗರು ನಮ್ಮ ರಾಜ್ಯದವರು, ಈ ಒಂದು ರಾಷ್ಟ್ರದ ನಾಯಕರಾಗಲಿಕ್ಕೆ ಈ ರಾಜ್ಯದ ಜನತೆ ಅವರಿಗೆ ಸಹಕಾರ ಕೊಟ್ಟಿದ್ದಾರೆನ್ನುವುದನ್ನು ಅವರು ಗಮನದಲ್ಲಿಟ್ಟುಕೊಳ್ಳಬೇಕು ನಾನು ಮಹಾರಾಷ್ಟ್ರ ರಾಜ್ಯದ ರಾಜ್ಯಪಾಲ ಆಗಲಾರೆ ಎಂದು ಹೇಳಿ ಬಿಟ್ಟುಬರಬಹುದಾಗಿತ್ತು ಆಗ ಅದು ಒಂದು issue ಆಗುತ್ತಿತ್ತು ಆದ್ದರಿಂದ, ನಮ್ಮ ಕನ್ನಡಿಗರ ಒಂದು weakness ಏನಿದೆಯೆಂದರೆ, ಇವರು ಸಂಭಾವಿತರು, ಏನು ಹೇಳಿದರೂ ನಡೆಯುತ್ತದೆ, ಏನು ಮಾಡಿದರೂ ನಡೆಯುತ್ತದೆನ್ನುವ ಒಂದು ಭಾವನೆ ನಮ್ಮ ಸ್ನೇಹಿತರನ್ನೂ ಸೇರಿಸಿಕೊಂಡು, ಆ ರೀತಿಯಾದ ಭಾವನೆ ನಮ್ಮ ಜನರಲ್ಲಿದೆ ಅದರಿಂದಾಗಿ, ಇವತ್ತು ನಾವೆಲ್ಲ ಈ ಸಭೆಯಲ್ಲಿ 'ಕೇಂದ್ರ ಸರ್ಕಾರ ಮಧ್ಯಸ್ಥಿಕೆ ವಹಿಸಬೇಕು, ತಮಿಳುನಾಡಿನ ಸರ್ಕಾರವನ್ನು ಮಾತುಕತೆಗೆ ಒಪ್ಪಿಸಬೇಕು,' ಎಂದು ಹೇಳುವುದು ಇದು ಒಂದು ಭಾಗ ಇದರ ಜೊತೆಗೆ, ಇನ್ನೊಂದು ಬಹಳ ಮುಖ್ಯವಾಗಿ ಆಗಬೇಕಾಗಿರುವ ಕೆಲಸವೇನೆಂದರೆ, ವಿಧಾನಸಭೆಯ ಹೊರಗಡೆ ಹೋರಾಟ ನಡೆಯಬೇಕು 1983ನೇ ಇಸವಿಯಲ್ಲಿ ಕನ್ನಡ ಭಾಷೆಗೆ ತೊಂದರೆ ಬಂದಂಥ ಸಂದರ್ಭದಲ್ಲಿ ಡಾ ರಾಜಕುಮಾರ್‌ರವರು ಇದ್ದರು ಮತ್ತು ಅವರು ಅದರ ನಾಯಕತ್ವ ವಹಿಸಿಕೊಂಡಿದ್ದರು ಇವತ್ತು ಆ ನಾಯಕತ್ವವನ್ನು ವಹಿಸಿಕೊಳ್ಳಲಿಕ್ಕೆ ರಾಜಕೀಯ ಆಸಕ್ತಿ ಇದ್ದಂಥವರು ವಹಿಸಿಕೊಂಡರೆ ಅದಕ್ಕೆ ಬೆಲೆ ಬರುವುದಿಲ್ಲ ಅದಕ್ಕೆ ನಾನು ಮಾನ್ಯ ಮುಖ್ಯಮಂತ್ರಿಗಳು ಕರೆದಂಥ ಸಭೆಯಲ್ಲಿ ಸಹ ಹೇಳಿದ್ದೇನೆಂದರೆ, ಮಾನ್ಯ ಜಿ ಮಾದೇಗೌಡರು ಪಕ್ಷ ರಾಜಕೀಯದಿಂದ

ಹೊರಗಡೆ ಇರತಕ್ಕಂಥವರು ಆ ಭಾಗದಿಂದ ಬಂದಿರತಕ್ಕಂಥವರು ಅವರು ಈ ಹೋರಾಟದ ನಾಯಕತ್ವವನ್ನು ತೆಗೆದುಕೊಳ್ಳಬೇಕು ಎನ್ನುವ ಮಾತನ್ನು ಹೇಳಿದ್ದೇನೆ ಮತ್ತು ಇದನ್ನು ರೈತರ ಹಂತಕ್ಕೆ ಬಿಡಬೇಕು ಮಾತುಕತೆ ರೈತರ ಹಂತದಲ್ಲಾಗಬೇಕಾಗುತ್ತದೆ ಇದು ಬಹಳ ಪ್ರಮುಖವಾಗಿ ಆಗಬೇಕಾಗಿರುವ ವಿಚಾರವಾಗಿದೆ ಈಗ ಏನಾಗುತ್ತಿದೆ ಎಂದರೆ, ಚಳುವಳಿಗೆ ನಿರ್ದಿಷ್ಟ ಸ್ವರೂಪ ಕೊಡತಕ್ಕಂಥದ್ದರಲ್ಲಿ ಈ ರಾಜ್ಯದಲ್ಲಿ ರಾಜಕೀಯ ನಾಯಕತ್ವದಲ್ಲಿ ಆಗಲಿಲ್ಲ We have failed. ನಿನ್ನೆಯ ದಿವಸ ನನಗೆ ಬಹಳ ಸಂತೋಷವಾಯಿತು ಅನೇಕ ಸಂಘಟನೆಗಳು, ಸಂಘಗಳು, ರೈತ ಸಂಘದ ಪ್ರತಿನಿಧಿಗಳೆಲ್ಲ ಸೇರಿ ಕೃಷ್ಣಾ ಮತ್ತು ಕಾವೇರಿಯ ನೀರಿಗೋಸ್ಕರ ಒಂದು ಹೋರಾಟದ ಸಮಿತಿಯನ್ನು ಮಾಡಿದ್ದಾರೆ ಅದು ಆಗಬೇಕಾಗಿರತಕ್ಕಂಥದ್ದು ಕಾವೇರಿ ನದಿ ನೀರಿನ ಬಗ್ಗೆ ಮಂಡ್ಯದಲ್ಲಿ ಮಾತ್ರ ಬಂದ್ ಆದರೆ ಉಪಯೋಗವಿಲ್ಲ ಬೆಳಗಾಂನಲ್ಲೂ ಆಗಬೇಕು, ರಾಯಚೂರಿನಲ್ಲೂ ಆಗಬೇಕು, ಬಿಜಾಪುರದಲ್ಲೂ ಆಗಬೇಕು, ಬೀದರ್‌ನಲ್ಲೂ ಆಗಬೇಕು, ಬಳ್ಳಾರಿಯಲ್ಲೂ ಆಗಬೇಕು ಆಗ ಕೇಂದ್ರ ಸರ್ಕಾರದಲ್ಲಿ ಯಾವುದೇ ಪಕ್ಷದವರು ಇದ್ದರೂ ಸಹಿತ ಅವರಿಗೆ ಕರ್ನಾಟಕದವರು ಎಂದು ಹೇಳಿದರೆ ಹೋರಾಟ ಇವರು ಮಾಡುತ್ತಾರೆನ್ನುವ ಭಾವನೆ ಬರುತ್ತದೆ ಆದ್ದರಿಂದ, ಸರ್ಕಾರದವರು ವಿಧಾನಸಭೆಯಲ್ಲಿ resolution ಮಾಡಿ ಮಾದೇಗೌಡರೇ, ನೀವು ನಾಯಕತ್ವ ವಹಿಸಿ ಎಂದು ಹೇಳುವುದಕ್ಕಾಗುವುದಿಲ್ಲ ಆದರೆ, ಅಪ್ರತ್ಯಕ್ಷವಾಗಿ ಅವರಿಗೆ ನಾವು ಬೆಂಬಲವನ್ನು ಕೊಡತಕ್ಕಂಥ ರೀತಿಯಲ್ಲಿ ನಡೆದುಕೊಳ್ಳಬೇಕಾಗುತ್ತದೆ

(ಈ ಹಂತದಲ್ಲಿ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಇದೇ ಸನ್ನಿವೇಶದಲ್ಲಿ ನಮ್ಮ ಲೋಕಸಭಾ ಸದಸ್ಯರಾಗಿರತಕ್ಕಂಥ ಮಾನ್ಯ ಅಂಬರೀಷ್‌ರವರು ರಾಜೀನಾಮೆ ಕೊಟ್ಟಿದ್ದಾರೆ ನನ್ನ ಅಭಿಪ್ರಾಯದಲ್ಲಿ ಅಂಬರೀಷ್‌ರವರು ಮಂಡ್ಯದ ಪ್ರತಿನಿಧಿಯಾಗಿ ರಾಜೀನಾಮೆಯನ್ನು ಕೊಟ್ಟು, ಆ ಜನರಿಗೆ ಆಗತಕ್ಕಂತ ಅನ್ಯಾಯವನ್ನು ಕೇಂದ್ರ ಸರ್ಕಾರದ ಗಮನಕ್ಕೆ ತರುವುದರಲ್ಲಿ ಯಶಸ್ವಿಯಾಗಿದ್ದಾರೆ ಆದರೆ, ಲೋಕಸಭೆಗೆ ಒಬ್ಬರು ರಾಜೀನಾಮೆ ಕೊಡುವುದರಿಂದ ಉಪಯೋಗವಾಗುವುದಿಲ್ಲ ಎಲ್ಲಾ 28 ಜನ ಲೋಕಸಭಾ ಸದಸ್ಯರು ರಾಜೀನಾಮೆ ಕೊಟ್ಟರೆ ಉಪಯೋಗವಾಗುತ್ತದೆ ಆದ್ದರಿಂದ, ತಮ್ಮ ಮತ್ತು ಈ ಸಭೆಯ ಮೂಲಕವಾಗಿ ನಾನು ಅಂಬರೀಷ್‌ರವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, 'ತಾವು ತಮ್ಮ

ರಾಜೀನಾಮೆಯನ್ನು ಒಪ್ಪಿಕೊಳ್ಳಿ ಎಂದು ಒತ್ತಾಯ ಮಾಡುವುದಕ್ಕೆ ಹೋಗಬೇಡಿ ಕೇಂದ್ರ ಸರ್ಕಾರದಲ್ಲಿ ನೀವು ಮುಂದುವರೆಯಿರಿ 'ಅವಶ್ಯಕತೆ ಬಿದ್ದಲ್ಲಿ, ಇಲ್ಲಿರತಕ್ಕಂಥ 224 ಜನ ಸದಸ್ಯರುಗಳು, ಲೋಕಸಭಾ, ರಾಜ್ಯಸಭಾ ಸದಸ್ಯರು ಎಲ್ಲರೂ ಒಟ್ಟಿಗೆ ರಾಜೀನಾಮೆ ಕೊಡೋಣ ಆಗ ಒಂದು ಸಂವಿಧಾನಾತ್ಮಕವಾದಂಥ ಬಿಕ್ಕಟ್ಟು ಸೃಷ್ಟಿಯಾಗುತ್ತದೆ There will be a Constitutional crisis ಕನ್ನಂಬಾಡಿ ಕಟ್ಟೆಯಲ್ಲಿ, ಕಬಿನಿಯಲ್ಲಿ ನೀರಿಲ್ಲದೇ ಹೋದರೆ ಅವರೇನು ಮಾಡುವುದಕ್ಕಾಗುತ್ತದೆ? ಆರ್ಮಿಯನ್ನಂತೂ ತೆಗೆದುಕೊಂಡು ಬರುವುದಕ್ಕಾಗುವುದಿಲ್ಲವೆನ್ನುವುದು ತಮಗೆಲ್ಲರಿಗೂ ಗೊತ್ತಿರುವ ವಿಚಾರವಾಗಿದೆ ಒಂದು ಸಂವಿಧಾನದ ಬಿಕ್ಕಟ್ಟನ್ನು, ರಾಜೀನಾಮೆ ನೀಡುವುದರ ಮೂಲಕ ನಿರ್ಮಾಣ ಮಾಡಿ ಶಾಂತಿಯುತವಾಗಿ ಹೋರಾಟ ಮಾಡಿದರೆ, ಆಗ ಅಂಬರೀಷ್‌ರವರು ಅದರ ನಾಯಕತ್ವವನ್ನು ವಹಿಸಿಕೊಳ್ಳಲಿ ಈಗ ಅವರು ರಾಜೀನಾಮೆಯನ್ನು ವಾಪಸ್ ತೆಗೆದುಕೊಳ್ಳಬೇಕೆನ್ನುವ ಒತ್ತಾಯವನ್ನು ಈ ಸಂದರ್ಭದಲ್ಲಿ ನಾನು ಮಾಡಲಿಕ್ಕೆ ಬಯಸಿ, ರಾಜ್ಯ ಸರ್ಕಾರ ಒಂದು ಕಡೆ ಕಾನೂನಿನ ಸಮರವನ್ನು ಮುಂದುವರೆಸಿಕೊಂಡು ಹೋಗಬೇಕು ತಾವು international jurists ರವರ opinion ತೆಗೆದುಕೊಳ್ಳಿ Original Suit ಹಾಕಿ ಈ ಕಡೆ clarification ಕೇಳಬಹುದೇ ಎನ್ನುವುದರ ಕಡೆಗೆ ಪರೀಶೀಲಿಸಬಹುದು 'ಏನು ನೀವು ಒಂದೇ ಶಿಕ್ಷೆಗೆ ಎರಡು Court ನಲ್ಲಿ ಕೇಳುತ್ತಿದ್ದೀರಲ್ಲ, ಹೇಗಪ್ಪ ಆಗುತ್ತದೆ, ಮೊದಲು ಆ Court ನಲ್ಲಿ ಮುಗಿಯಲಿ, ಆಮೇಲೆ ನಾವು ನೋಡುತ್ತೇವೆಂದು ಹೇಳಬಹುದು ಅಥವಾ 16 ವರ್ಷ ನೀವೇಕೆ ಕಾದಿದ್ದಿರಿ ಎಂದು ನಮಗೆ Supreme Court ನವರು ಕೇಳಬಹುದು ಅದು ನಿಮ್ಮ ತೀರ್ಮಾನವಲ್ಲವೆಂದು ನನಗೆ ಗೊತ್ತಿದೆ ಆದ್ದರಿಂದ, ಒಂದೊಂದಾಗಿ remedy ಗಳನ್ನು exhaust ಮಾಡಿಕೊಂಡು ಹೋಗುವ ಅವಶ್ಯಕತೆ ಇದೆ ಎಂದು ನಾನು ತಿಳಿದುಕೊಂಡಿದ್ದೇನೆ ಮಾನ್ಯ ಕರುಣಾನಿಧಿಯವರು ತಮಿಳುನಾಡಿನಲ್ಲಿ ಎಲ್ಲೋ ಒಂದು ಕಡೆ, 'ಮಾತುಕತೆಗೆ ಸಿದ್ಧವೆನ್ನುವ' ಒಂದು ಇಂಗಿತವನ್ನು ವ್ಯಕ್ತ ಮಾಡಿದ್ದಾರೆ ನಾನು ಮಾನ್ಯ ಕುಮಾರಸ್ವಾಮಿಯವರ ಸರ್ಕಾರಕ್ಕೆ ವಿರೋಧ ಮಾಡಿರುವವನು ಇವತ್ತೂ ಸಹ ನನ್ನ ವಿರೋಧ ಮುಂದುವರೆದುಕೊಂಡು ಹೋಗಿದೆ ಮತ್ತು ಅದು ಮುಂದುವರೆಯುತ್ತದೆ ಆದರೆ, ನಾನು ಒಂದು ವಿಚಾರವನ್ನು

ಮಾನ್ಯ ಕುಮಾರಸ್ವಾಮಿಯವರಿಗೆ ಹೇಳಬಯಸುವುದೇನೆಂದರೆ, ತಮಿಳುನಾಡಿಗೆ ಹೋದಂಥ ಸಂದರ್ಭದಲ್ಲಿ ಒಂದು ಒಳ್ಳೆಯ ಹೇಳಿಕೆಯನ್ನು ಕುಮಾರಸ್ವಾಮಿಯವರು ಕೊಟ್ಟಿದ್ದಾರೆ ಅವರ ಖಾಸಗಿ ಕೆಲಸಕ್ಕೆ ಹೋದಂಥ ಸಂದರ್ಭದಲ್ಲಿ ನಾವು ಮಾತುಕತೆಗೆ ಎಲ್ಲಾ ಸಿದ್ಧರಿದ್ದೇವೆ, ಮಾತುಕತೆ ಮೂಲಕ ಇದನ್ನು ಬಗೆಹರಿಸಿಕೊಳ್ಳಲಿಕ್ಕೆ ನಾವು ತಯಾರಿದ್ದೇವೆ ಎನ್ನತಕ್ಕಂಥ ಮಾತನ್ನು ಮಾನ್ಯ ಕುಮಾರಸ್ವಾಮಿಯವರು ಹೇಳಿದ್ದಾರೆ ಅದನ್ನು ನಾನು ಸ್ವಾಗತ ಮಾಡುತ್ತೇನೆ That is the right stand a Chief Minister should take ಕರ್ನಾಟಕದ ಗೌರವವನ್ನು ನೀವು ಎತ್ತಿ ಹಿಡಿದಿದ್ದೀರಿ, ಆ ದೃಷ್ಟಿಯಲ್ಲಿ ನಾನು ಅದನ್ನು ಮೆಚ್ಚುತ್ತೇನೆ ಇವತ್ತಿನ ಸಂದರ್ಭದಲ್ಲಿ ನಾವು ಅದರ ಮೂಲಕವೇ ಮಾಡಬೇಕಾಗುತ್ತದೆ Delhiಯಲ್ಲಿ ಒಂದು ಲಾಬಿ ಬೇಕು ತಮಿಳುನಾಡಿನಲ್ಲಿರುವವರಾರು? ನಾವಿಲ್ಲಿ ತಮಿಳರ ಮೇಲೆ ಗಲಾಟೆ ಮಾಡಿದರೆ ಅಲ್ಲಿ ಕನ್ನಡದವರ ಮೇಲೆ ಗಲಾಟೆ ಮಾಡುತ್ತಾರೆ ಇಲ್ಲಿ ಮರಾಠದವರ ಮೇಲೆ ಗಲಾಟೆ ಮಾಡಿದರೆ ಅಲ್ಲಿ ಕನ್ನಡಿಗರಿಗೆ ಮುಂಬೈನಲ್ಲಿ ಗಲಾಟೆ ಮಾಡುತ್ತಾರೆ ಇವೆಲ್ಲಾ ಆಗತಕ್ಕಂಥದ್ದು ಇದೆ ಒಕ್ಕೂಟದ ವ್ಯವಸ್ಥೆಯಲ್ಲಿ ಇದಕ್ಕೆಲ್ಲ ಅವಕಾಶ ಕೊಡುವುದಕ್ಕಾಗುವುದಿಲ್ಲ ಮತ್ತೆ, ಇದೇ ಸಂದರ್ಭದಲ್ಲಿ ಮತ್ತೊಂದು ಮಾತನ್ನು ಮಾನ್ಯ ರಾಜೇಂದ್ರನ್‌ರವರು ಎತ್ತಿದರು ಮೊದಲನೆಯ ಸಾರಿ ನಾವು ಜನವರಿಯಲ್ಲಿ ಸೇರಿದಂಥ ಸಂದರ್ಭದಲ್ಲಿ, ರಾಜ್ಯದ ತಮಿಳರು, ಅಲ್ಪಸಂಖ್ಯಾತರ ರಕ್ಷಣೆಯ ದೃಷ್ಟಿಯಿಂದಾಗಿ ಸರ್ಕಾರ ರಕ್ಷಣೆ ಕೊಡಬೇಕೆಂದು ಅವರು ಹೇಳಿದರು ನೀವು ಉದ್ದೇಶಪೂರ್ವಕವಾಗಿ ಅವರಿಗೆ ರಕ್ಷಣೆ ಕೊಟ್ಟಿದ್ದೀರೋ? ಏನು ಕೊಟ್ಟಿದ್ದೀರೋ? ನನಗೆ ಗೊತ್ತಿಲ್ಲ ಅಂತೂ ರಕ್ಷಣೆ ಸಿಕ್ಕಿರತಕ್ಕಂಥದ್ದು ನಿಜ ಕಾನೂನಿನ ವ್ಯವಸ್ಥೆಯನ್ನು ಈ ಸಂದರ್ಭದಲ್ಲಿ ಸರಿಯಾಗಿ ನೋಡಿಕೊಂಡು ಹೋಗಿದ್ದೀರಿ ಅದಕ್ಕೆ ನಾನು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಮೆಚ್ಚುಗೆಯನ್ನು ವ್ಯಕ್ತ ಮಾಡುತ್ತೇನೆ ಆದರೆ, ಈ ಹೋರಾಟ ನಿರಂತರವಾಗಿ ನಡೆಯಬೇಕಾಗುತ್ತದೆ ಆ ಹೋರಾಟ ನಿರಂತರವಾಗಿ ನಡೆಯಬೇಕು ಕಾಂಗ್ರೆಸ್‌ನವರು ಬಹಳ ಪ್ರಮುಖವಾದ ನಿರ್ಧಾರವನ್ನು ಈ ಸಂದರ್ಭದಲ್ಲಿ ತೆಗೆದುಕೊಳ್ಳಬೇಕಾಗುತ್ತದೆ ಮಾನ್ಯ ಧರ್ಮಸಿಂಗ್‌ರವರು ನಮ್ಮ ಈ ವಿಧಾನ ಸಭೆಯಲ್ಲಿ 8 ಸಾರಿ ಒಂದೇ ಕ್ಷೇತ್ರದಿಂದ ಗೆದ್ದು ಬಂದಿರತಕ್ಕಂಥ ಕೀರ್ತಿ

ಅವರಿಗೆ ಇದೆ ತಾವು ಎಲ್ಲಾ ಇಲಾಖೆಗಳನ್ನು ನೋಡಿದ್ದೀರಿ ಎಲ್ಲಾ ಸ್ಥಾನಗಳನ್ನೂ ಸಹ ಗಳಿಸಿದ್ದೀರಿ ನಿಮ್ಮ ದೈವ ಅಷ್ಟೇ ಇದ್ದದ್ದು ಅಂತ ಕಾಣಿಸುತ್ತದೆ, ಮುಂದೆ ಬರಲಿ ಎಂದು ನಾನು ಆಶಯ ಮಾಡುತ್ತೇನೆ ನಾನು ನಿಮ್ಮ ಅಭಿಮಾನಿ ಆದರೆ, ಒಂದು ಮಾತನ್ನು ನಾನು ಹೇಳಲಿಕ್ಕೆ ಬಯಸುತ್ತೇನೆ, as the opposition leader you have more responsibility than the Chief Minister Mr Kumaraswamy ಏಕೆಂದು ಹೇಳಿದರೆ, ನಿಮ್ಮದೊಂದು ಕಾಂಗ್ರೆಸ್ ಪಕ್ಷ ಕಾಂಗ್ರೆಸ್ ಪಕ್ಷ ಕರ್ನಾಟಕದಲ್ಲಿ ಬೆಳೆಯುತ್ತಿಲ್ಲ ಅದು ಏಕೆ ಎನ್ನುವುದನ್ನು ನಾನು ಇಲ್ಲಿ ವಿಶ್ಲೇಷಣೆ ಮಾಡುವುದಕ್ಕೆ ಹೋಗುವುದಿಲ್ಲ ನಿಮ್ಮ ನಿಮ್ಮ ಆತ್ಮಗಳನ್ನು ಪರಿಶೋಧನೆ ಮಾಡಿಕೊಳ್ಳಬೇಕು ನಿಮ್ಮ ಹುಟ್ಟುಹಬ್ಬದ ದಿನ ನಾನು ಈ ಮಾತುಗಳನ್ನು ಹೇಳಿದ್ದೇನೆ ನಾನು ಕಾಂಗ್ರೆಸ್ ಪಾರ್ಟಿ ಸೇರಿಲ್ಲ ಆದರೆ, ನಾನು ಕಾಂಗ್ರೆಸ್ ಇರಬೇಕೆಂದು ಹೇಳುವವನು ನೀವು secular leaders ಎಂದು ನಾನು ಹೇಳಿದ್ದೇನೆ ಕಾಂಗ್ರೆಸ್ ಬೆಳೆಯಬೇಕೆಂದು ಇದ್ದರೆ, ಕಾವೇರಿ ವಿಚಾರದಲ್ಲಿ ನೀವು ಯಶಸ್ವಿಯಾಗಬೇಕು ಆಗ ಮಾತ್ರ ಕಾಂಗ್ರೆಸ್‌ನ ಬೇರಿಗೆ ನೀರು, ಗೊಬ್ಬರ ಹಾಕಲಿಕ್ಕೆ ಸಾಧ್ಯವಿದೆ ಇಲ್ಲದೇ ಇದ್ದರೆ ಕರ್ನಾಟಕದಲ್ಲಿ ಕಾಂಗ್ರೆಸ್ ಬೇರು ಕಿತ್ತು ಹೋಗುತ್ತದೆ ತಮಿಳುನಾಡಿನಲ್ಲಿ ಕಿತ್ತು ಹೋಗಿದೆ ನೀವು ಏನು ಮಾಡಿದರೂ ತಮಿಳುನಾಡಿನಲ್ಲಿ ನೀವೇನೂ ಮಾಡುವುದಕ್ಕಾಗುವುದಿಲ್ಲ 5–6 ಸೀಟ್ ಅಷ್ಟೇ ನಿಮಗೆ ಬರತಕ್ಕಂಥದ್ದು ನೀವು ಇರುವುದೇ ಕರ್ನಾಟಕ, ಕೇರಳ, ಆಂಧ್ರಪ್ರದೇಶ ರಾಜ್ಯಗಳಲ್ಲಿ ಅಲ್ಲಿ ಮುಂದೆ ಏನೇನು ಆಗುತ್ತದೆಯೋ ನನಗೆ ಗೊತ್ತಿಲ್ಲ ಕರ್ನಾಟಕದಲ್ಲಿ ಯಾವತ್ತೂ ಸಹ ಕಾಂಗ್ರೆಸ್‌ಗೆ ಇದೊಂದು ತರಹ ಹುಲ್ಲುಗಾವಲು ನಾವು ಕಾಂಗ್ರೆಸ್ ವಿರೋಧಿಗಳು ನಾವು ನಾಳೆಯೂ ಕಾಂಗ್ರೆಸ್‌ಗೆ ವಿರೋಧಿಗಳೇ ನಾವು ನಿಮ್ಮ ಪಾರ್ಟಿಗೆ ಸೇರುವುದಿಲ್ಲ ಆದರೆ, ನೀವಿರಬೇಕು ಇವರಿಗಿಂತ, ಈಶ್ವರಪ್ಪನವರ ಹಿಂದೆ ಇರತಕ್ಕಂಥ ಸ್ನೇಹಿತರಿಗಿಂತ ನೀವು ಉತ್ತಮ ಅದರಿಂದಾಗಿ ನಾನು ಹೇಳುತ್ತಿದ್ದೇನೆ, ನೀವೊಂದು bold stand ತೆಗೆದುಕೊಳ್ಳಿ You must go to Madam, you must go to all the Congress leaders, convince them. "ನೋಡಿ, ಈ ತೀರ್ಪಿನಿಂದ ತೊಂದರೆಯಾಗುತ್ತದೆ ಎಂದು ಹೇಳದೇ ಹೋದರೆ ಬಹುಶ ನೀವು ಅಲ್ಲೇ,

7/21

ಇವರು ಇಲ್ಲೇ ಇನ್ನೂ ಜೋರಾಗಿ ಈ ಕಡೆ ಎಲ್ಲ ಇವರು ಬಂದುಬಿಡುತ್ತಾರೆ ಇದನ್ನು ತಾವು ಗಮನದಲ್ಲಿಟ್ಟುಕೊಂಡರೆ ಬಹಳ ಉಪಯೋಗವಾಗುತ್ತದೆ ಈಶ್ವರಪ್ಪನವರಿಗೆ ನಾನು ಸಲಹೆ ಮಾಡುವುದು, ನಮ್ಮಲ್ಲೇನಾಗಿದೆ ಎಂದು ಹೇಳಿದರೆ, ಈ tribunal ರಚನೆಯಾದ ಮೇಲೆ ನಾವು ಹೆಚ್ಚಿಗೆ cultivation ಮಾಡಬಾರದೆಂಬ ಒಂದು ಆಜ್ಞೆ ಮಾಡಿದರು ಈ ಆಜ್ಞೆಯಿಂದಾಗಿ ನಮ್ಮ ಬೆಂಗಳೂರಿನಿಂದ ಹಿಡಿದು ಚಾಮರಾಜನಗರದವರೆಗೆ ಎಲ್ಲೆಲ್ಲಿ ಕಾವೇರಿ ಅಚ್ಚುಕಟ್ಟು ಇದೆ ಅಲ್ಲಿರತಕ್ಕಂಥ ಕೆರೆಗಳಲ್ಲಿ ಹೂಳೆತ್ತುವಂಥ ಕೆಲಸಕ್ಕೆ ನಮ್ಮ ಹತ್ತಿರ ದುಡ್ಡಿರಲಿಲ್ಲ ಅದರ ಜೊತೆಗೆ, ನಾಲೆಗಳನ್ನು ರಿಪೇರಿ ಮಾಡಿಸಲಿಕ್ಕೂ ಸಹ ನಮಗೆ ದುಡ್ಡು ಕೊಡುತ್ತಿರಲಿಲ್ಲ ನಾನೂ ಹಣಕಾಸಿನ ಮಂತ್ರಿಯಾಗಿದ್ದೆ ನಮ್ಮ secretary ಯವರು ಬಹಳ ಸುಲಭವಾಗಿ ಬಂದು ಸಾರ್, tribunal award ಬರುವವರೆಗೂ ನೀವು ದುಡ್ಡು ಕೊಡುವುದಕ್ಕೆ ಆಗುವುದೇ ಇಲ್ಲ ಎಂದು ಹೇಳಿಬಿಡುತ್ತಿದ್ದರು ನಾವೂನು ಕೊನೇಗಳಿಗೆಯಲ್ಲಿ ಏನು ಮಾಡುವುದು, Secretary ಯವರ ಮಾತೇ ಕೇಳಬೇಕಲ್ಲ, ಆಯಿತಪ್ಪ, ಬಿಡು ಎಂದು ಹೇಳಿ Secretary ಯವರಿಗೇ yes ಎಂದು ಬಿಡುತ್ತಿದ್ದೆವು ತಮಗೆ ಈಗೊಂದು chance ಏನು ಮಾಡಬೇಕೆಂದು ಹೇಳಿದರೆ, World Bank ನಿಂದ ಸಾಲ ತೆಗೆದುಕೊಳ್ಳಿ ನಿಮ್ಮ Treasury ಯಲ್ಲಿ, ನಾನು correct figures ಹೇಳುತ್ತಿಲ್ಲ 7–8 ಸಾವಿರ ಕೋಟಿ additional ಆಗಿ ದುಡ್ಡಿದೆ Thanks to Mr S M Krishna. Financial Regularity Bill ಅನ್ನು ತೆಗೆದುಕೊಂಡು ಬಂದು discipline ಅನ್ನು ತಂದ ಮೇಲೆ, VAT system introduce ಆದಮೇಲೆ ಸರ್ಕಾರದಲ್ಲಿ ಹಣಕ್ಕೇನೂ ಕೊರತೆಯಿಲ್ಲ ಹಣವನ್ನು ಖರ್ಚು ಮಾಡುವುದು ಹೇಗೆಂದು ನಿಮಗೆ ಗೊತ್ತಾಗುತ್ತಿಲ್ಲ ನಾನು ಹೇಳುತ್ತಿದ್ದೇನೆ ನಾಳೆ budget ಮಂಡನೆ ಮಾಡುತ್ತಾರೆ ಇನ್ನೂ 2 budget ಮಂಡನೆ ಮಾಡುವಷ್ಟು ಸರ್ಕಾರದಲ್ಲಿ ದುಡ್ಡಿದೆ ನೀವೇನೂ ಸಾಲ ತೆಗೆದುಕೊಂಡು ಬರುವುದು ಬೇಕಾಗಿಲ್ಲ ಆ Small Savings ದುಡ್ಡು 6 ಸಾವಿರ ಕೋಟಿ ಇದೆ O and C ಅನ್ನುವುದು ಭಾರೀ ದೊಡ್ಡದಾಗಿ ಬೆಳೆಯುತ್ತಿದೆ ಅದರಿಂದಾಗಿ ಆ 6 ಸಾವಿರ ಕೋಟಿ ರೂಪಾಯಿಗಳಲ್ಲಿ 3–4 ಕೋಟಿ ರೂಪಾಯಿಗಳನ್ನು ಇಟ್ಟು ಆ ಕಡೆ ಕೃಷ್ಣ ನದಿ ಭಾಗದ ಪ್ರದೇಶಗಳನ್ನೂ ಅಭಿವೃದ್ಧಿ ಮಾಡಿಸಿ, ಹೇಳಬೇಕೆಂದರೆ, I am more

committed to Krishna. ಆ ಕಡೆ ಅಭಿವೃದ್ಧಿ ಆಗಬೇಕು ನಂಜುಂಡಪ್ಪ ವರದಿ ಅನುಷ್ಠಾನ ಆಗಬೇಕು ಆದರೆ, ಇದೊಂದು ನಮಗೆ ಯುದ್ಧದ ಸಮಯ ತಾವು ದಯವಿಟ್ಟು ನಮ್ಮ ಜೊತೆಯಲ್ಲಿದ್ದುಬಿಡಿ ಎಲ್ಲಾ ಕೆರೆಗಳಲ್ಲಿಯೂ ಹೂಳೆತ್ತಿಸಿಬಿಟ್ಟು ನಾಲೆ ಮಾಡಿಸಿಬಿಡಿ ನೀರೇ ಇರುವುದಿಲ್ಲ ಆಮೇಲೆ, ಬೇಕಾದರೆ ಅವರು ಬಂದು ತೆಗೆದುಕೊಂಡು ಹೋಗಲಿ ಎಲ್ಲಿಂದ ತೆಗೆದುಕೊಂಡು ಹೋಗುತ್ತಾರೆಯೋ ನೋಡೋಣ ದಯವಿಟ್ಟು ಆ ಕೆಲಸವನ್ನು ಮಾಡಿಸಿ ತೂಬುಗಳಲ್ಲಿ ಮತ್ತು ಕೆರೆಗಳಲ್ಲಿ ಹೂಳೆತ್ತಿಸುವುದು, concrete ಮಾಡಿಸತಕ್ಕಂಥದ್ದು, ನೀರಿನ ಸದುಪಯೋಗ ಆಗತಕ್ಕಂಥದ್ದು ಇದನ್ನು ಜನರ ಮೂಲಕವಾಗಿ ನೀವು ಮಾಡಿಸಬೇಕಾಗುತ್ತದೆ ಇದನ್ನು ತಾವು ಮಾಡಬೇಕೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ ಇವತ್ತು ದೆಹಲಿಯಲ್ಲಿ ನಮ್ಮ ಪಕ್ಷದ ಸಭೆ ಇದೆ, ಅದಕ್ಕೆ ನಾನು ಹೋಗಬೇಕಾಗಿದೆ ನಮ್ಮ ಪಕ್ಷದ ಸಭೆಯಲ್ಲಿಯೂ ನಾನು ಇದನ್ನೆಲ್ಲ ಪ್ರಸ್ತಾಪ ಮಾಡುತ್ತೇನೆ

ಶ್ರೀ ಕೆ ಶ್ರೀನಿವಾಸಗೌಡ ಉಳಿದವರನ್ನೆಲ್ಲ ಬಿಟ್ಟು ನೀವೊಬ್ಬರೇ ಹೋಗುತ್ತೀರಲ್ಲ ನಿಮ್ಮ ಪಕ್ಷದವರೇ ಮುಖ್ಯಮಂತ್ರಿ

ಶ್ರೀ ಪಿ ಜಿ ಆರ್ ಸಿಂಧ್ಯ. ಅವರದೇ ಬೇರೆ ಪಕ್ಷ, ನಮ್ಮದೇ ಬೇರೆ ಪಕ್ಷ

ಶ್ರೀ ಕೆ ಶ್ರೀನಿವಾಸಗೌಡ ಇಷ್ಟು ಜನ ಬಿಟ್ಟು ನೀವೊಬ್ಬರೇ ಹೇಗೆ party meeting ಗೆ ಹೋಗುತ್ತೀರಿ ಎಂದು

ಶ್ರೀ ಪಿ ಜಿ ಆರ್ ಸಿಂಧ್ಯ ಹೋಗುತ್ತಿರುವುದರಿಂದಾಗಿ ನಾನು ಸ್ವಲ್ಪ ಮುಂಚೆ ಮಾತನಾಡಬೇಕೆಂದು ಹೇಳಿ ಅಧ್ಯಕ್ಷರಲ್ಲಿ ಮನವಿ ಮಾಡಿಕೊಂಡೆ ನಾನೊಂದು ತರಹ ಎಡಬಿಡಂಗಿ ವ್ಯವಸ್ಥೆಯಲ್ಲಿದ್ದೇನೆ ಇವರು ನನ್ನನ್ನು suspend ಮಾಡಿಬಿಟ್ಟಿದ್ದೇವೆ ಎಂದು ಹೇಳುತ್ತಾರೆ ನಾನು, ನನ್ನದೇ ಪಾರ್ಟಿ, ನಿಮ್ಮದೇ suspension ಎಂದು ಹೇಳುತ್ತೇನೆ ನಿಮ್ಮ ಸ್ಥಾನದಿಂದ ಇನ್ನೂ ಏನೂ ತೀರ್ಮಾನ ಬರುತ್ತಲೇ ಇಲ್ಲ ನಿನ್ನೆ ನನ್ನನ್ನು ಕೇಳಿದರು, ಮುನಿಸ್ವಾಮಪ್ಪನವರು ಬಂದೇ ಇಲ್ಲ ಮುನಿಸ್ವಾಮಪ್ಪನವರು ಸಿಂಧ್ಯರವರನ್ನು disqualify ಮಾಡಬೇಕೆಂದು ನನ್ನ ಮೇಲೆ ಅರ್ಜಿ ಕೊಟ್ಟುಬಿಟ್ಟಿದ್ದಾರೆ ನಿನ್ನೆ last date ಇತ್ತು ನಾನು explanation ಎಲ್ಲ ಕೊಟ್ಟಿದ್ದೇನೆ ಮುನಿಸ್ವಾಮಪ್ಪನವರೇ suspended. ಆಮೇಲೆ, he has been removed.

ಏಕೆಂದರೆ, ಅವರೇ ರಾಜಭವನಕ್ಕೆ ಹೋಗಿದ್ದವರು ನಾನು, ಮಿರಾಜುದ್ದೀನ್, ಎಂ ಪಿ ಪ್ರಕಾಶ್ ಇಲ್ಲೇ ಆಂಟೋನಿ ಜೊತೆಯಲ್ಲಿ ಮಾತನಾಡುತ್ತಾ ಕುಳಿತಿದ್ದೆವು ಕುಮಾರಸ್ವಾಮಿಯವರ ಜೊತೆಯಲ್ಲಿ ರಾಜಭವನಕ್ಕೆ ಹೋದವರೇ ಮುನಿಸ್ವಾಮಪ್ಪನವರು ಮುನಿಸ್ವಾಮಪ್ಪನವರಿಗೆ ನಮ್ಮ ಪಕ್ಷದ ಅಧ್ಯಕ್ಷರಾದ ದೇವೇಗೌಡರು ಹೋಗಬೇಡ ಎಂದು ಹೇಳಿದ್ದರು ಏಕೆ ಹೋದರು? Anti Defection Bill ಪ್ರಕಾರ ಯಾರ ಸದಸ್ಯತ್ವ ಹೋಗುತ್ತದೆ? ಅವರ ಅರ್ಜಿಯನ್ನು ನಿಮ್ಮ ಪೀರದಿಂದ entertain ಮಾಡಿದ್ದೀರಿ ಅದರ ಬಗ್ಗೆ ನಾನು ಜಾಸ್ತಿ ಮಾತನಾಡಿದರೆ subjudice ಅಂತ ಏನೇನೋ ಶಬ್ದಗಳು ಉಪಯೋಗಿಸುತ್ತಿರಿ ಸಧ್ಯ ಪ್ರಕಾಶ್ ಇಲ್ಲ ಇಲ್ಲದೇ ಇದ್ದರೆ ಅವರು ಎದ್ದು ನಿಂತುಕೊಂಡು ಬಿಡುತ್ತಿದ್ದರು ವಿಷಯ deviate ಆಗುತ್ತದೆ ನನಗೆ ಅವಕಾಶ ಕೊಟ್ಟಿದ್ದೀರಿ ತುಂಬಾ thanks ನಮಸ್ಕಾರ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಮಾನ್ಯ ಉಪಾಧ್ಯಕ್ಷರೆ

ಶ್ರೀ ಕೆ ಶ್ರೀನಿವಾಸಗೌಡ ನಾನು ಆಗಲೇ ಹೇಳಿದೆ ನೀವು ನನಗೆ ಮಾತನಾಡಿ ಎಂದಿರಿ ಈಗ ಶ್ರೀರಾಮರೆಡ್ಡಿಯವರಿಗೆ ಹೇಳುತ್ತಿದ್ದೀರಿ

ಉಪಾಧ್ಯಕ್ಷರು ಅವರೇನೋ ಅವರಿಗೆ clarification ಕೊಡುತ್ತಿದ್ದಾರೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಕಾವೇರಿ ವಿಚಾರದ ಬಗ್ಗೆ ಚರ್ಚೆ ಪ್ರಾರಂಭವಾಗಿದೆ ಕಾವೇರಿ ವಿಚಾರ ಬಂದಂಧ

ಉಪಾಧ್ಯಕ್ಷರು ಈಗ ಸಮಯ ಒಂದೂ ಕಾಲು ಗಂಟೆಯಾಗಿದೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಏನು ಮಾಡಬೇಕೆಂದು ಹೇಳುತ್ತೀರಾ ಸಾರ್?

ಉಪಾಧ್ಯಕ್ಷರು ಈಗ ಹೇಗೆ ಮಾಡೋಣ? ಈಗ ಮಾತನಾಡಿ ಮುಗಿಸುತ್ತೀರಾ?

ಶ್ರೀ ಜಿ ವಿ ಶ್ರೀರಾಮರೆಡ್ಡಿ ನೀವೇನು ಆದೇಶ ಮಾಡುತ್ತೀರೋ ಹಾಗೆ ಮಾಡುತ್ತೇನೆ ಹೇಳಿ

ಉಪಾಧ್ಯಕ್ಷರು ಊಟ ಮಾಡಿಕೊಂಡು ಬಂದ ಮೇಲೆ ಮಾತನಾಡಿ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಆಯಿತು ಊಟ ಆದಮೇಲೆ ಮಾತನಾಡಿ ಎಂದರೆ ಆಮೇಲೇ ಮಾತನಾಡುತ್ತೇನೆ

ಉಪಾಧ್ಯಕ್ಷರು ಈಗ ಸದನವನ್ನು ಮಧ್ಯಾಹ್ನ 2 30 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ

(ಸದನವು ಮಧ್ಯಾಹ್ನ 1 ಗಂಟೆ 18 ನಿಮಿಷಕ್ಕೆ ಮುಕ್ತಾಯಗೊಂಡು, ಪುನ ಮಧ್ಯಾಹ್ನ 2 30 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

(ಸದನವು 2 ಗಂಟೆ 57 ನಿಮಿಷಕ್ಕೆ ಸಮಾವೇಶಗೊಂಡಾಗ ಸನ್ಮಾನ್ಯ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದ್ದರು)

ಆ) **ವಿಷಯ ನೆಫೆಡ್ ಕೇಂದ್ರಗಳ ಮೂಲಕ ಖರೀದಿ ಮಾಡುವ ಕೊಬ್ಬರಿಗೆ ಕೊಡುತ್ತಿದ್ದ ಸಬ್ಸಿಡಿಯನ್ನು ನಿಲ್ಲಿಸಿರುವ ಬಗ್ಗೆ**

ಅಧ್ಯಕ್ಷರು ಮಾಧುಸ್ವಾಮಿಯವರೆ, ತಾವು ಮಾತನಾಡಿ

ಶ್ರೀ ಜೆ ಸಿ ಮಾಧುಸ್ವಾಮಿ(ಚಿಕ್ಕನಾಯಕನಹಳ್ಳಿ) ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಕೊಬ್ಬರಿಯನ್ನು ಏನು ನೆಫೆಡ್ ಕೇಂದ್ರಗಳ ಮೂಲಕ ಖರೀದಿ ಮಾಡುತ್ತಿದ್ದರು, ಆ ಖರೀದಿ ಜೊತೆಗೆ 600 ರೂಗಳನ್ನು ಸರ್ಕಾರದಿಂದ ಸಬ್ಸಿಡಿಯನ್ನು ರೈತರಿಗೆ ಕೊಡುತ್ತಿದ್ದರು ಇವತ್ತಿಗೆ ಆ ಸಬ್ಸಿಡಿಯನ್ನು ನಿಲ್ಲಿಸಿಬಿಟ್ಟಿದ್ದೇವೆಂದು ಹೇಳಿ, ಸರ್ಕಾರದಿಂದ ಆದೇಶ ಇದೆ, ಇನ್ನು ಸಬ್ಸಿಡಿ ಸಿಗಲಾರದು ಎಂದು ತಿಳಿದುಕೊಂಡು ಬಿಟ್ಟು ಇವತ್ತು ಕೇಂದ್ರಗಳಲ್ಲಿ ಬಹಳ ಕೊಬ್ಬರಿ ಬಂದು ಬಿಟ್ಟಿದೆ ಜನ ತೀವ್ರವಾದ ಸಂಕಷ್ಟದಲ್ಲಿ ಸಿಕ್ಕಿಹಾಕಿಕೊಂಡು ಬಿಟ್ಟಿದ್ದಾರೆ ನಾಳೆಯಿಂದ ನಮಗೆ 600 ರೂಗಳ ಪರ್ ಕ್ವಿಂಟಲ್‌ಗೆ ಲಾಸ್ ಆಗಿ ಬಿಡುತ್ತದೆ ಹಾಗಾಗಿ ಏನಾದರೂ ಮಾಡಿ ಇವತ್ತು ಕೊಬ್ಬರಿ ತೆಗೆದುಕೊಳ್ಳಬೇಕು ನಮ್ಮಲ್ಲಿ purchase center ಗಳಲ್ಲಿ ಇವತ್ತು ಅಷ್ಟೊಂದು infrastructure ಗಳು ಇಲ್ಲ ಇದು ಸುಮಾರು ತುಮಕೂರು ಜಿಲ್ಲೆ, ಹಾಸನ್ ಜಿಲ್ಲೆ, ಚಿತದುರ್ಗ ಜಿಲ್ಲೆ ಈ ಕಡೆ ಎಲ್ಲಾ ಕೊಬ್ಬರಿಯನ್ನು ಕೊಂಡುಕೊಳ್ಳುತ್ತಾರೆ ಹೀಗೆ ಸಬ್ಸಿಡಿ ಕೊಡುವುದನ್ನು ಮುಂದುವರೆಸಬೇಕಾಗುತ್ತದೆ ನಮ್ಮ ಜಿಲ್ಲೆಗಳಿಗೆ ಕೊಟ್ಟಿರುವ ಸಬ್ಸಿಡಿ ಇನ್ನು ಕೂಡ ಪೂರ್ಣ ಖರ್ಚಾಗಿಲ್ಲ ಇಲ್ಲಿ ರೇಸ್ ಮಾಡುವುದಕ್ಕೆ ಮೊದಲೇ, ಇಲ್ಲಿಯವರೆಗೆ ತರಬಾರದೆಂದು ಹೇಳಿ ನಾನು ಸನ್ಮಾನ್ಯ ಜಿಲ್ಲಾಧಿಕಾರಿಯವರಿಗೆ ಮಾತನಾಡಿದೆ ನಮಗೆ 15ನೇ ತಾರೀಖಿನ ವರೆಗೆ ಮಾತ್ರ ಅವಕಾಶವಿದೆ ಎಂದು ಹೇಳಿ, ಸರ್ಕಾರದಿಂದ ಆದೇಶ ಇರುವುದರಿಂದ ನಾನು 15ನೇ ತಾರೀಖಿನವರೆಗೆ ಮಾತ್ರ ಅವಕಾಶ ಮಾಡಬಹುದು, ಮಿಕ್ಕಿದ್ದು ಅಲ್ಲಿಯೇ ಏನಾದರೂ ತೀರ್ಮಾನ ವಾಗಬೇಕೆಂದು ಹೇಳಿ ಅವರು ತಿಳಿಸಿದ್ದರ ಮೇರೆಗೆ ನಾನು ತಮ್ಮ

ಅನುಮತಿಯ ಮೇರೆಗೆ ವಿಷಯವನ್ನು ಇಲ್ಲಿ ರೈಸ್ ಮಾಡುತ್ತಿದ್ದೇನೆ ಯಾರಾದರೂ ಸರ್ಕಾರದ ಪರವಾಗಿ ರೈತರ ಈ ಕಷ್ಟ ನಿವಾರಣೆಗೆ ಬರಬೇಕು ಇದು ಏನು ನೆಫೆಡ್ ಸಪೋರ್ಟ್ ಪ್ರೈಸ್‌ನಲ್ಲಿ ಕೊಡುತ್ತಿತ್ತು, ಧಾರಣಿ ಬಿದ್ದುಹೋಗಿದೆ ಎಂದು ಹೇಳಿ, ನೆಫೆಡ್‌ನವರು purchase ಮಾಡುವುದರ ಜೊತೆಗೆ ನೀವು 600 ರೂಗಳ ಸಬ್ಸಿಡಿಯನ್ನು ರೈತರಿಗೆ ಕೊಟ್ಟಿರುವುದು ಸ್ವಲ್ಪ ರೈತರು ಉಸಿರಾಡುವಂತಾಗಿದೆ ಅದು ಇವತ್ತು ನಿಂತುಬಿಟ್ಟರೆ ಬಹಳ ತಾಪತ್ರಯಕ್ಕೆ ಸಿಕ್ಕಿಹಾಕಿಕೊಳ್ಳತ್ತಾರೆ ದಿಢೀರೆಂದು ಇವತ್ತು ನಿಲ್ಲಿಸುವುದನ್ನು ಇನ್ನು ಕೆಲವು ಕಾಲ ಕನಿಷ್ಟ ನಫೆಡ್‌ನವರು purchase ಮಾಡುವಷ್ಟು ದಿವಸವಾದರೂ ನೀವು ಅಂದರೆ minimum support price ಇರುವಷ್ಟು ದಿವಸವಾದರೂ ನೀವು ಮುಂದುವರೆಸಿ ಕೊಡಬೇಕೆಂದು ಹೇಳಿ ಇವತ್ತೇ ಇಲ್ಲಿ ಒಂದು ತೀರ್ಮಾನವಾಗಬೇಕಾಗಿದೆ ಸರ್ ಇವತ್ತು 5 ಗಂಟೆಗೆ ಕ್ಲೋಸ್ ಆಗಿ ಬಿಡುತ್ತದೆ ಅಲ್ಲಿಗೆ ಒಂದು ಮೆಸೇಜ್ ಹೋಗದಿದ್ದರೆ ರಾತ್ರಿ ಎಲ್ಲಾ ಆ ಕೊಬ್ಬರಿಯನ್ನು ತೆಗೆದುಕೊಂಡರೂ ಮುಗಿಯುವುದಿಲ್ಲ ಏಕೆಂದರೆ ಅಷ್ಟೊಂದು ಕೊಬ್ಬರಿ ಮಾರ್ಕೆಟ್‌ಗೆ ಬಂದು ಬಿಟ್ಟಿದೆ ಅದಕ್ಕೆ ಯಾರಾದರೂ ಸರ್ಕಾರದ ವತಿಯಿಂದ ತೀರ್ಮಾನ ತೆಗೆದುಕೊಂಡು ಉತ್ತರವನ್ನು ಕೊಡಲಿ ಎಂದು ನಾನು ತಮ್ಮ ಮೂಲಕ ಕೇಳುತ್ತೇನೆ

ಶ್ರೀ ಕೆ ಎಸ್ ಈಶ್ವರಪ್ಪ (ಜಲಸಂಪನ್ಮೂಲ ಸಚಿವರು) ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಜೆ ಸಿ ಮಾಧುಸ್ವಾಮಿಯವರು ಏನು ಪ್ರಸ್ತಾಪ ಮಾಡಿದ್ದಾರೆ, ಇದು ರೈತರಿಗೆ ತುಂಬಾ ಸಮಸ್ಯೆಯಾಗಿರತಕ್ಕಂಥ ಒಂದು ವಿಚಾರವಿದೆ ನಫೆಡ್‌ನಿಂದ ಏನು ಕೊಬ್ಬರಿಯನ್ನು ಖರೀದಿ ಮಾಡುತ್ತಿದ್ದರು, ಅದು ಇವತ್ತು ಮುಗಿದು ಹೋಗುತ್ತಿರುವ ಅಂಶವನ್ನು ಅವರು ಗಮನಕ್ಕೆ ತಂದಿದ್ದಾರೆ ಮಾನ್ಯ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಹಾಗೂ ಸಂಬಂಧಪಟ್ಟ ಮಂತ್ರಿಗಳ ಹತ್ತಿರ ಈ ಬಗ್ಗೆ ಚರ್ಚೆ ಮಾಡಿ ಇದಕ್ಕೆ ಏನು ಅನುಕೂಲವಾಗಬೇಕೋ ಆ ಪ್ರಯತ್ನವನ್ನು ಸರ್ಕಾರವು ಮಾಡುತ್ತದೆ ಈ ವಿಷಯವನ್ನು ತಾವು ಈಗ ನನ್ನ ಗಮನಕ್ಕೆ ತಂದಿದ್ದೀರಿ, ಅದಕ್ಕೆ ಏನು ಮಾಡಲು ಸಾಧ್ಯವೋ ಅದನ್ನು ಮಾಡುತ್ತೇನೆ

ಶ್ರೀ ಜೆ ಸಿ ಮಾಧುಸ್ವಾಮಿ ಇವತ್ತೆ ಮುಗಿದುಹೋಗುತ್ತದೆ ಮಾನ್ಯ ಅಧ್ಯಕ್ಷರೆ ನಾನು ಬೆಳಿಗ್ಗೆಯೇ ತಮ್ಮ ಅನುಮತಿಯನ್ನು ಕೇಳಬೇಕೆಂದು ಇದ್ದೆ 15 ನೇ ತಾರೀಖು ಕ್ಲೋಸ್ ಮಾಡುತ್ತಾರೆ ಇವತ್ತು ಏನಾದರೂ

ತೀರ್ಮಾನವನ್ನು ಹೇಳದೇ ಇದ್ದರೆ ಅಲ್ಲಿಯ ಜನರು ಕಂಗಾಲಾಗುತ್ತಾರೆ ತಾವು ಅವರನ್ನು ಕರೆಸಿ ಮಾತನಾಡಬೇಕು

ಅಧ್ಯಕ್ಷರು ಮಾನ್ಯ ಶ್ರೀರಾಮರೆಡ್ಡಿಯವರೆ, ತಾವು brief ಆಗಿ ಮಾತನಾಡಿ ಇವತ್ತು ಚರ್ಚೆಯು ಮುಕ್ತಾಯವಾಗಬೇಕು

ಶ್ರೀ ಜಿ ವಿ ಶ್ರೀರಾಮರೆಡ್ಡಿ ನಾನು ಅಂತು ಮುಕ್ತಾಯ ಮಾಡುತ್ತೇನೆ

ಅಧ್ಯಕ್ಷರು ಚರ್ಚೆಯಾದ ನಂತರ ಸರ್ಕಾರದಿಂದ ಉತ್ತರ ಇವೆಲ್ಲ ಆಗಬೇಕು

ಇ) ವಿಷಯ ಕಾವೇರಿ ನ್ಯಾಯ ಮಂಡಳಿ ತೀರ್ಪಿನ ಬಗ್ಗೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ (ಬಾಗೇಪಲ್ಲಿ) ಸನ್ಮಾನ್ಯ ಅಧ್ಯಕ್ಷರೇ, ಈ ಕಾವೇರಿಯ ವಿಚಾರ ನಮ್ಮ ಸದನದಲ್ಲಿ ಚರ್ಚೆಯಾಗತಕ್ಕಂಥದ್ದು, ನಮ್ಮ ಸದನ ಕಾವೇರಿ ವಿಚಾರದ ಬಗ್ಗೆ ಚರ್ಚೆ ಮಾಡುವುದಕ್ಕೆ ವ್ಯಯ ಮಾಡಿರುವಂತಹ ಸಮಯ ಬಹುಶ ನಮ್ಮ ರಾಜ್ಯದ ಯಾವುದೇ ವಿಚಾರದ ಬಗ್ಗೆ ಚರ್ಚೆ ಮಾಡುವುದಕ್ಕೆ ನಮ್ಮ ಸದನದಲ್ಲಿ ವಿನಿಯೋಗಿಸಿಲ್ಲ ಅದು ಇವತ್ತಿನದಲ್ಲ, ಪ್ರಾರಂಭದಿಂದಲೂ ಕಾವೇರಿ ವಿಚಾರ ಪ್ರಸ್ತಾಪ ಅಗಿರುವುದನ್ನು ತೆಗೆದುಕೊಂಡರೆ ಇಷ್ಟು ಸಮಯವನ್ನು ಬೇರೆ ಯಾವುದಕ್ಕೂ ನಾವು ವಿನಿಯೋಗಿಸಿಲ್ಲ ಅಷ್ಟು ಚರ್ಚೆಯಾಗಿದೆ, ಅಷ್ಟು ನಿರ್ಣಯಗಳು ಆಗಿದೆ ಅಷ್ಟೆಲ್ಲಾ ತೀರ್ಮಾನಗಳು ಆಗಿದೆ ಆದರೂ ಕೂಡ ಕಾವೇರಿ ವಿಚಾರ ಇನ್ನು ಮುಗಿದಿಲ್ಲ ಅದು ಮುಗಿಯುವುದಿಲ್ಲ, ಏಕೆಂದರೆ, ಅಂತರ್‌ರಾಜ್ಯ ನದಿನೀರಿನ ವಿವಾದಗಳು ಏನಿದೆ, ಇವು ಭಾರಿ ಸೂಕ್ಷ್ಮವಾದಂತಹ ವಿಚಾರಗಳು ವಾಸ್ತವಿಕ ನೆಲೆಗಟ್ಟಿನಲ್ಲಿ ಈ ಸಮಸ್ಯೆಗಳಿಗೆ ಪರಿಹಾರವನ್ನು ಹುಡುಕಬೇಕೇ ಹೊರತು, ಯಾವುದೇ ಒಂದು ರಾಜ್ಯ ನೀರಿನ ಹಾಗೂ ಗಡಿಯ ವಿಚಾರದಲ್ಲಿ ಭಾವನಾತ್ಮಕವಾದ ಭಾವನೆಗಳಿಗೆ ಒಳಗಾಗಬಾರದು ಭಾವನಾತ್ಮಕವಾದಂತಹ ವಿಚಾರಗಳನ್ನು ಚರ್ಚೆ ಮಾಡಬಾರದು ಏಕೆಂದರೆ, ನಾವು ಒಕ್ಕೂಟ ವ್ಯವಸ್ಥೆಯಲ್ಲಿರುವಂತಹ ಜನರಾಗಿದ್ದೇವೆ ನಮ್ಮದು ಒಕ್ಕೂಟ ವ್ಯವಸ್ಥೆಯಾಗಿದೆ ಈ ಒಕ್ಕೂಟ ವ್ಯವಸ್ಥೆ ಎಂದರೆ, ಮೊದಲು ಭಾರತದೇಶ ನಮ್ಮದು ಆಮೇಲೆ ಬೇರೆ ರಾಜ್ಯಗಳದು, ಈ ಒಕ್ಕೂಟ ವ್ಯವಸ್ಥೆಯನ್ನು ನಾವು ಎಲ್ಲಿಯವರೆಗೆ ಒಪ್ಪಿಕೊಂಡಿರುತ್ತೇವೆಯೋ ಅಲ್ಲಿಯವರೆವಿಗೂ ಯಾವುದೇ ಕಾರಣಕ್ಕೂ ಒಕ್ಕೂಟ ವ್ಯವಸ್ಥೆಗೆ ಧಕ್ಕೆ ಬರದಂತಹ ರೀತಿಯಲ್ಲಿ ನೋಡಿಕೊಳ್ಳಬೇಕಾಗಿರುವಂಥದ್ದು ನಮ್ಮೆಲ್ಲರ ಪ್ರಥಮ ಜವಾಬ್ದಾರಿಯಾಗಿದೆ ಇನ್ನು ಎರಡನೆಯದಾಗಿ ಹೇಳುವುದಾದರೆ, ಯಾವುದೇ ಒಂದು ಸಮಸ್ಯೆಯ

ಬಗ್ಗೆ ಎರಡು ರಾಜ್ಯಗಳ ಮಧ್ಯೆ ಸಮಸ್ಯೆಯು ಉದ್ಭವವಾಗುವಂತಹ ಸಂದರ್ಭದಲ್ಲಿ ನಾವು ಆ ಸಮಸ್ಯೆಯನ್ನು ಪರಿಹಾರ ಮಾಡಿಕೊಳ್ಳುವುದಕ್ಕೆ, ಒಂದು ಮಾತುಕತೆಗಳ ಮೂಲಕ ಸಮಸ್ಯೆಯನ್ನು ಪರಿಹಾರ ಮಾಡಿಕೊಳ್ಳಬೇಕು ಅದೇ ಬಹಳ ಒಳ್ಳೆಯ ವಿಧಾನ ಮತ್ತು ಸಾಧ್ಯವಾದಷ್ಟು ಅದರ ಮೇಲೆ ಅವಲಂಬಿತರಾಗಬೇಕಾಗುತ್ತದೆ ಅದು ಆಗುವುದೇ ಇಲ್ಲವೆಂಬ ಪರಿಸ್ಥಿತಿ ಬಂದಾಗ ನಾವು ಯಾವುದಾದರೂ ಕಾನೂನಿನ ಮೊರೆಯನ್ನು ಹೋಗಬೇಕಾಗುತ್ತದೆ ಇದನ್ನು ಬಿಟ್ಟು ಬೇರೆ ದಾರಿಯಿಲ್ಲ, ದಾರಿ ಇದ್ದರೆ ಅದರ ಬಗ್ಗೆ ತಜ್ಞರು ಯಾರಾದರೂ ಇದ್ದರೆ ದಯವಿಟ್ಟು ಹೇಳಲಿ ಎರಡೇ ದಾರಿಗಳು ಇರುವುದು, ಒಂದು ದಾರಿಯನ್ನು ನಾವು ಮುಚ್ಚಿಹಾಕಿಬಿಟ್ಟಿದ್ದೇವೆ, ಒಂದು ಬಾಗಿಲನ್ನು ಮುಚ್ಚಿಹಾಕಿದ್ದೇವೆ ನಮಗೆ ಇದ್ದದ್ದು ಒಂದೇ ಬಾಗಿಲು ಅದು ಕಾನೂನಿನ ಬಾಗಿಲು, ಈ ಕಾನೂನು ಸರಿಯೋ, ತಪ್ಪೋ, ತೀರ್ಪನ್ನು ಕೊಟ್ಟಿದೆ ಅದರ ಬಗ್ಗೆ ಮತ್ತೆ ಮಾತನಾಡೋಣ ಅದು ಸರಿಯೋ, ತಪ್ಪೋ, ಕೊಟ್ಟಿರುವಂತಹ ತೀರ್ಪಿನ ಬಗ್ಗೆ ಆ ಮೇಲೆ ಹೇಳೋಣ ತೀರ್ಪು ಕೊಟ್ಟಮೇಲೆ ಅ ತೀರ್ಪಿನ ಬಗ್ಗೆ ನಮ್ಮ ವ್ಯಾಖ್ಯಾನಗಳು ಯಾವ ರೀತಿಯಲ್ಲಿ ಬರುತ್ತದೆ ಎಂದರೆ, ಆ ತೀರ್ಪುಗಳನ್ನು ನಾವು ಜಾರಿ ಮಾಡುವುದಿಲ್ಲವೇನೋ ಎನ್ನುವಂತಹ ಪರಿಸ್ಥಿತಿಯು ನಿರ್ಮಾಣವಾಗುತ್ತದೆನ್ನುವಂತಹ ರೀತಿಯಲ್ಲಿ ವ್ಯಾಖ್ಯಾನಗಳು ಆಗುತ್ತದೆ ಮೊನ್ನೆ ಸರ್ವಪಕ್ಷಗಳ ಸಭೆಯು ನಡೆದಂತಹ ಸಂದರ್ಭದಲ್ಲಿ ನಮ್ಮ ಪರವಾಗಿ ವಾದ ಮಾಡಿರುವಂತಹ ವಕೀಲರುಗಳು ಒಂದು ಅಭಿಪ್ರಾಯವನ್ನು ಹೇಳಿದರು ಅಗ ನಾವೆಲ್ಲರೂ ಅಲ್ಲಿ ಇದ್ದೆವು ಅವರು ವಾದ ಮಾಡುವಾಗ ಸುಪ್ರೀಂಕೋರ್ಟಿನವರು ಕೇಳಿದರಂತೆ, ಕರ್ನಾಟಕದವರಿಗೆ ಯಾವ ತೀರ್ಪನ್ನು ಕೊಟ್ಟರೆ ನೀವು ಪಾಲಿಸುತ್ತೀರಿ, ಅದರ ಬಗ್ಗೆ ಹೇಳಿ ಎಂದು ಹೇಳಿದರಂತೆ The Supreme Court has asked directly in the Court Hall which judgment you will follow? ನಮ್ಮ ಬಗ್ಗೆ ಯಾವ ರೀತಿಯಾದ ಅಭಿಪ್ರಾಯ ಬಂದಿದೆ ಎಂದರೆ ಅದನ್ನು ತಾವು ಗಮನಿಸಬೇಕಾಗುತ್ತದೆ ಏಕೆ ನಾವು ಇಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡಿಕೊಂಡಿದ್ದೇವೆ ಇವತ್ತು ಕಾವೇರಿ ವಿಚಾರವನ್ನು ತೆಗೆದುಕೊಂಡರೆ ಇದರಲ್ಲಿ ನಮ್ಮದು ಸ್ವಯಂಕೃತ ಅಪರಾಧವು ಕೂಡ ಇದೆ ಈ ಕಾವೇರಿ ವಿವಾದ ಈ ಸ್ಥಿತಿಗೆ ಬರುವುದಕ್ಕೆ ನಮ್ಮ ಸ್ವಯಂಕೃತ ಅಪರಾಧ ಇದೆ ಎಂಬುದನ್ನು ನಾವು ಬಚ್ಚಿಡಬಾರದು ಇದು ನನ್ನ ಸ್ಪಷ್ಟವಾದ ಅಭಿಪ್ರಾಯವಾಗಿದೆ ಏನು ಸ್ವಯಂಕೃತವಾದ ಅಪರಾಧ? ಅದು ಇವತ್ತು

ನಡೆಯುವಂತಹ ಸ್ವಯಂಕೃತವಾದ ಅಪರಾಧವಲ್ಲ, ನಾವು ಪ್ರಾರಂಭದಿಂದಲೂ ಕಾವೇರಿ ನದಿಯ ನೀರನ್ನು ಬಳಸಿಕೊಳ್ಳುವುದರಲ್ಲಿ ಅತೀವ ನಿರ್ಲಕ್ಷ್ಯವನ್ನು ತೋರಿದ್ದೇವೆ ನಾವು ಕಾವೇರಿ ನೀರನ್ನು ಹೇಗೆ ಬಳಸಿಕೊಳ್ಳಬೇಕಾಗಿತ್ತೋ, ಅದನ್ನು ಬಳಸಿಕೊಳ್ಳುವುದರಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದೇವೆ 1924ನೇ ಇಸವಿಯವರೆವಿಗೂ ಕಾವೇರಿ ನದಿಗೆ ಅಣೆಕಟ್ಟನ್ನು ಕಟ್ಟಿ ನಾವು ನೀರಾವರಿಯನ್ನು ಮಾಡಬೇಕೆಂಬ ಅಲೋಚನೆಯು ಬರಲೇ ಇಲ್ಲ ಆದರೆ ಅದಕ್ಕೆ ತದ್ವವಿದ್ದವಾಗಿ ಶ್ರೀ ಕರಿಕಾಳಚೋಳನ್ 600 ವರ್ಷಗಳ ಹಿಂದೆ ಕಾವೇರಿ ನದಿಗೆ ಅಡ್ಡಲಾಗಿ ಅಣೆಕಟ್ಟೆಯನ್ನು ಕಟ್ಟಿ ನೀರಾವರಿಯನ್ನು ಪ್ರಾರಂಭ ಮಾಡಿದ್ದ ಈ ಬಗ್ಗೆ ನೀವು ಇತಿಹಾಸವನ್ನು ತೆಗೆದು ನೋಡಬೇಕು ಆದರೆ ನಮ್ಮಲ್ಲಿ ಶ್ರೀ ವಿಶ್ವೇಶ್ವರಯ್ಯನವರು 1924ನೇ ಇಸವಿಯವರೆಗೆ ಕನ್ನಂಬಾಡಿ ಕಟ್ಟೆಯವರೆಗೂ ನಾವು ಆಲೋಚನೆಯನ್ನು ಮಾಡಲೇ ಇಲ್ಲ ಆಮೇಲೆ ನಾವು ಏನು ಮಾಡಿದೆವು? ನಮಗೆ ವಾಸ್ತವವಾಗಿ ಕಾವೇರಿ ನದಿ ಪಾತ್ರದಲ್ಲಿರತಕ್ಕಂತಹ ನೀರನ್ನು ಉಪಯೋಗಿಸಿಕೊಳ್ಳತಕ್ಕಂತಹ ರೀತಿಯಲ್ಲಿ ಕರ್ನಾಟಕ ರಾಜ್ಯ ಯಾವುದೇ ಯೋಜನೆಗಳನ್ನು ರೂಪಿಸಲೇ ಇಲ್ಲ ಯೋಜನಾ ಆಯೋಗದ ಮುಂದೆ ಹೋಗಿ ಅನುಮತಿಯನ್ನು ಪಡೆದುಕೊಳ್ಳುವುದಕ್ಕೆ ಅಗಲಿಲ್ಲ ಅಣೆಕಟ್ಟೆಯನ್ನು ಕಟ್ಟುವುದಕ್ಕೆ ಪ್ರಾರಂಭ ಮಾಡಲಿಲ್ಲ ಹಾಗಾಗಿ ಏನಾಯಿತು? ನಮ್ಮ ನೀರು ಎಲ್ಲವೂ ಹರಿದುಹೊಯಿತು ನಾವು ಕನ್ನಂಬಾಡಿ ಕಟ್ಟಿಯನ್ನು ಕಟ್ಟುವ ಹೊತ್ತಿಗೆ ತಮಿಳುನಾಡಿನವರು ಅವರ ಭಾಗದ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಬೇಕಾಗಿರುವಂತಹ ಎಲ್ಲಾ ಅಣೆಕಟ್ಟುಗಳನ್ನು ಕಟ್ಟಿಬಿಟ್ಟಿದ್ದರು ಹಾಗಾಗಿ ನಾವು ಇವತ್ತು ಕಷ್ಟಕ್ಕೆ ಸಿಕ್ಕಿಹಾಕಿಕೊಂಡಿದ್ದೇವೆ, ಅದು ಒಂದನೇ ಪಾಯಿಂಟ್ ತಾವು ಇದನ್ನು ಗಮನದಲ್ಲಿಡಬೇಕು, ಅಮೇಲೆ ನಾವು ಈ ಬಗ್ಗೆ ಎಚ್ಚೆತ್ತುಕೊಂಡಿದ್ದು, ಎಚ್ಚೆತ್ತುಕೊಂಡು ಕಟ್ಟುವುದಕ್ಕೆ ಪ್ರಾರಂಭ ಮಾಡಿದೆವು, ಕಬಿನಿ, ಹೇಮಾವತಿ, ಹಾರಂಗಿ ಇವುಗಳನ್ನು ಕಟ್ಟಿದೆವು, ಅದರ ಬಗ್ಗೆ ಯಾವ Planning Commission permission ಇಲ್ಲ CWC permisson ಇಲ್ಲ ಅಣೆಕಟ್ಟನ್ನು ಕಟ್ಟಿದೆವು ಅದನ್ನು ಕಟ್ಟಿದ ಮೇಲೂ ನಾವು ಏನು ಮಾಡಿದ್ದೇವೆಂದರೆ, ಅದನ್ನು ಕಟ್ಟಿದ ಮೇಲೆಯೂ ಕೂಡ ಅದಕ್ಕೆ ನ್ಯಾಯವನ್ನು ಒದಗಿಸಲಿಲ್ಲ ಇವತ್ತು ಇರುವಂತಹ ಕಬಿನಿ ನದಿ ಏನಿದೆ, ಡ್ಯಾಂ, ಎಲ್ಲಿ ಅದನ್ನು ಓರಿಜಿನಲ್ ಆಗಿ ಕಟ್ಟಬೇಕಾಗಿತ್ತು, ಅದರ ಬಗ್ಗೆ ಪ್ಲಾನ್ ಮಾಡಿದ್ದು ಎಲ್ಲಿ, ಸರಗೂರು ಹತ್ತಿರ ಸರಗೂರು ಹತ್ತಿರ ಆ ಬಗ್ಗೆ ಪ್ಲಾನ್ ಮಾಡಿ ಆ ಪ್ಲಾನ್ ಪ್ರಕಾರ ಅಲ್ಲಿ

ಕಟ್ಟಿದ್ದರೆ 59 ಟಿಎಂಸಿ ನೀರು ಅಲ್ಲಿ ಶೇಖರಣೆಯಾಗುತ್ತಿತ್ತು ಆದರೆ ಯಾವುದೋ ಒಂದು ಕ್ಷುಲ್ಲಕ ಕಾರಣಕೋಸ್ಕರ ಅದರ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ ಅದನ್ನು ಹೇಳುವುದಕ್ಕೆ ಹೋದರೆ ಇಲ್ಲಿ ಗದ್ದಲಗಳು ನಡೆದುಹೋಗುತ್ತದೆ ಅದರ ಬಗ್ಗೆ ಸತ್ಯವೇನೆಂದು ನನಗೆ ಗೊತ್ತಿದೆ ಯಾವುದೋ ಒಂದು ಕ್ಷುಲ್ಲಕ ಕಾರಣಕೋಸ್ಕರ, ಯಾರದೋ ಒಂದು ಹಿತವನ್ನು ರಕ್ಷಣೆ ಮಾಡುವುದಕ್ಕೋಸ್ಕರ ಸರಗೂರಿನಿಂದ ಬದಲಾವಣೆ ಮಾಡಿ ಅಣೆಕಟ್ಟನ್ನು ಹೆಚ್ ಡಿ ಕೋಟೆಗೆ ತಂದರು ಅದರ ಪರಿಣಾಮವೇನಾಯಿತು? 59 ಟಿಎಂಸಿ ನೀರು ಹಿಡಿಸಬಹುದಾದಂತಹ ಪಾಜೆಕ್ಟ್‌ನ್ನು 19 ಟಿಎಂಸಿಗೆ ಇಳಿಸಿದ್ದೀರಿ ಅವತ್ತು 59 ಟಎಂಸಿಗೆ ಅಣೆಕಟ್ಟು ಕಟ್ಟಿದ್ದರೆ, ಇವತ್ತು ಅಂತರ್‌ರಾಷ್ಟ್ರೀಯ ನದಿ ನೀರು ಹಂಚಿಕೆಯ ವಿವಾದದ ಕಾನೂನು ನಮಗೆ ರಕ್ಷಣೆಗೆ ಬರುತ್ತಿತ್ತು ಆ ಕಾನೂನು ಏನು ಹೇಳುತ್ತದೆ, existing cropನ್ನು ನೀವು ರಕ್ಷಣೆ ಮಾಡಲೇಬೇಕು It is your bounden duty That is the principle the tribunal has adopted. ಹೇಮಾವತಿಯನ್ನು ಎಲ್ಲಿ ಕಟ್ಟಬೇಕಾಗಿತ್ತು? ನಮ್ಮ ರಾಮಸ್ವಾಮಿಯವರು ಇದ್ದಾರೆ, ಅವರಿಗೆ ಗೊತ್ತಿರಬಹುದು ಎಂದು ಕಾಣುತ್ತದೆ ಗೊರೂರು ಮುಳುಗುತ್ತದೆ ಎಂದು ಒಂದೇ ಒಂದು ಕಾರಣಕೋಸ್ಕರ ಅದನ್ನು ತಪ್ಪಿಸಬೇಕೆಂದು ಅಲ್ಲಿಂದ ತೆಗೆದುಕೊಂಡು ಹೋಗಿ ಅರಕಲಗೂಡಿನ ಹತ್ತಿರ ಹಾಕಿದರು ಇದರ ಪರಿಣಾಮವೇನಾಯಿತು? 50 % ನೀರನ್ನು ಅದರಲ್ಲಿ store ಮಾಡುವುದಕ್ಕೆ ಆಗಲಿಲ್ಲ ಗೊರೂರು ಮುಳುಗಬಾರದು ಎಂದು ಹೇಳಿ, ಅದರ ಗಾತ್ರವನ್ನು ಕಡಿಮೆ ಮಾಡಿದರು ಅದನ್ನು ಸರಿಯಾದ ರೀತಿಯಲ್ಲಿ ಕಟ್ಟಿದ್ದರೆ ಇವತ್ತು ಇಡೀ ತುಮಕೂರು ಜಿಲ್ಲೆ ಮತ್ತು ಕೋಲಾರ ಜಿಲ್ಲೆಗೆ ಹೇಮಾವತಿ ನದಿಯಿಂದ ನೀರನ್ನು ಕೊಡಬಹುದಾಗಿತ್ತು ಹಾರಂಗಿ ನೀವು ಏನು ಮಾಡಿದ್ದೀರಿ? ಅದಕ್ಕೂ ಅದೇ ಪರಿಸ್ಥಿತಿಯನ್ನು ಮಾಡಿದ್ದೀರಿ, ಇದರ ಪರಿಣಾಮವೇನಾಯಿತು, ನಮ್ಮ ಅಚ್ಚುಕಟ್ಟು ಪ್ರದೇಶ ವಿಸ್ತಾರವಾಗಲಿಲ್ಲ ಯಾವಾಗ ಇದು ವಿಸ್ತಾರವಾಗಲಿಲ್ಲವೋ ನಾವು ಲೆಕ್ಕವನ್ನು ಎಲ್ಲಿ ತೋರಿಸಬೇಕಾಗಿತ್ತು? ವಾಸ್ತವವಾಗಿ, ನಿಜವಾಗಿಯೂ ಕೂಡ ಇವತ್ತು ನಾವು 6 ಲಕ್ಷ ಎಕರೆ ಲೆಕ್ಕವನ್ನು ತೋರಿಸಿದರೆ ಅದರಲ್ಲಿಯೇ ಇರುತ್ತದೆ ಅಲ್ಲಿ ವಾಸ್ತವಾಗಿರುವಂತಹದ್ದು ಅಷ್ಟು ಅದರೂ ಮತ್ತೆ ಹೇಮಾವತಿ, ಕಬಿನಿ, ಹಾರಂಗಿ ಅಣೆಕಟ್ಟುಗಳನ್ನು ಕಟ್ಟುವಾಗ ನಾವು ಏನು ಮಾಹಿತಿಯನ್ನು

ಕೊಟ್ಟೆವು? Semi–dry crops ಎಂದು ಕೊಟ್ಟಿದ್ದೇವೆ Semi –dry crops ಎಂದು ಕೊಟ್ಟಾಗ ನೀರು ಹಂಚಿಕೆ pattern ಹೇಗೆ change ಆಗುತ್ತದೆ? Dry crop, semi dry crop ಮತ್ತೆ wet crop ಎಂದು ಕೊಟ್ಟಾಗ ನೀರು ಹಂಚಿಕೆಯ ಪ್ರಮಾಣದಲ್ಲಿ ವ್ಯತ್ಯಾಸಗಳು ಆಗುತ್ತದೆ ನಾವು semi dry crop ಎಂದು ಲೆಕ್ಕವನ್ನು ಕೊಟ್ಟಿದ್ದೇವೆ ಆದರೆ semi dry crop ಗೆ ಎಷ್ಟು ನೀರು ಬೇಕೆಂಬುದರ ಬಗ್ಗೆ ಅವರು ಲೆಕ್ಕವನ್ನು ಹಾಕಿಕೊಂಡಿದ್ದಾರೆ ನಮ್ಮ ತಲೆಯ ಮೇಲೆ ನಾವು ಕಲ್ಲನ್ನು ಹಾಕಿಕೊಂಡಿದ್ದೇವೆ ಅಂದರೆ ನಾವು ಯಾವ ಯಾವ ರೀತಿಯಾಗಿ ಕಲ್ಲನ್ನು ಹಾಕಿಕೊಂಡಿದ್ದೇವೆಂದರೆ, ನಾವು ಮೊದಲು ಪ್ಲಾನ್ ಮಾಡಿದ ರೀತಿಯಲ್ಲಿ ಅಣೆಕಟ್ಟುಗಳನ್ನು ಕಟ್ಟಿದ್ದರೆ ಹೆಚ್ಚು ನೀರನ್ನು store ಮಾಡಿಕೊಳ್ಳುವುದಕ್ಕೆ ಸಾಧ್ಯತೆ ಇತ್ತು ನಾವು ಆ ಅವಕಾಶಗಳನ್ನು ಕಳೆದುಕೊಂಡು ಬಿಟ್ಟೆವು ನಾವು ಹೇಗೋ ಯಾರ permission ಇಲ್ಲದೇ ಕಟ್ಟಿಬಿಟ್ಟೆವು ಅಣೆಕಟ್ಟನ್ನು ಕಟ್ಟುವಾಗ ಸರಿಯಾದ ಪ್ಲಾನ್ ಮಾಡಿ ಕಟ್ಟಿದ್ದರೆ ಹೆಚ್ಚು ಅಚ್ಚುಕಟ್ಟು ಪ್ರದೇಶ ವಿಸ್ತಾರ ಆಗುತ್ತಿತ್ತು ಅದು ವಿಸ್ತಾರವಾಗಿದ್ದರೆ ಇವತ್ತು tribunalನಲ್ಲಿ ಅ ರೀತಿಯಾದ ತೀರ್ಪು ಬರುವುದಕ್ಕೆ ಸಾಧ್ಯವಿರಲಿಲ್ಲ ಆದರೆ ಅಂತರ್‌ರಾಷ್ಟ್ರೀಯ ಕಾನೂನು ಆ ರೀತಿಯಾಗಿ ಹೇಳುತ್ತದೆ ಆ ಕಾನೂನು ತಮಿಳುನಾಡಿನವರ ರಕ್ಷಣೆಗೆ ಬಂತು, ನಮ್ಮ ರಕ್ಷಣೆಗೆ ಇವತ್ತು ಬರಲಿಲ್ಲ ಇದನ್ನು ನಾವು ಅರ್ಥ ಮಾಡಿಕೊಳ್ಳಬೇಕು ಮೂರನೆಯ ಅಂಶವೇನೆಂದರೆ, ಇವತ್ತು ಏನು ಕಾವೇರಿ ಸಮಸ್ಯೆ ಇಷ್ಟು ಗಂಭೀರವಾಗಿ ಬಂದಿದೆ, ಇಷ್ಟು ಗಂಭೀರವಾದ ಸಮಸ್ಯೆಯಾದ ಮೇಲೆ ನಾವು ಕೂಡ ಅದರ ಬಗ್ಗೆ ಆಲೋಚನೆ ಮಾಡಬೇಕು ನಾವು ಕೂಡ ನಮ್ಮ ಸ್ವಯಂ ವಿಮರ್ಶೆಯನ್ನು ಮಾಡಿಕೊಳ್ಳಬೇಕಾಗುತ್ತದೆ 1924ನೇ ಇಸವಿಯಲ್ಲಿ ಆದಂಥ ಒಪ್ಪಂದ 1974ಕ್ಕೆ ಅವಧಿ ಮುಗಿಯಿತು 50 ವರ್ಷದ ಅವಧಿಯದು 1974ಕ್ಕೆ ಮುಗಿದ ಮೇಲೆ ಇಷ್ಟು ವರ್ಷಗಳ ಕಾಲ ನಾವು ಸಮಯವನ್ನು ವ್ಯರ್ಥ ಮಾಡಿದ್ದೇವೆಯೇ ಹೊರತು ಆ ನದಿ ನೀರಿನ ವಿವಾದವನ್ನು ಪರಿಹಾರ ಮಾಡಿಕೊಳ್ಳಲಿಕ್ಕೆ ಇದ್ದಂಥ ಎಲ್ಲಾ ಅವಕಾಶಗಳನ್ನು ನಾವು ಉಪಯೋಗಿಸಿಕೊಳ್ಳಲಿಕ್ಕೆ ಸಾಧ್ಯವಾಗಲಿಲ್ಲ ಯಾವುದೇ ಅವಕಾಶಗಳನ್ನು ಉಪಯೋಗಿಸಿಕೊಳ್ಳಲಿಕ್ಕೆ ಸಾಧ್ಯವಾಗಲಿಲ್ಲ ಇವತ್ತು records straight ಆಗಿ ಇರಬೇಕಾಗುತ್ತದೆ ಕೆಲವರು ಅಲ್ಲಿ ಏನು ಹೇಳುತ್ತಿದ್ದಾರೆ, ವಿ ಪಿ ಸಿಂಗ್ ನಮಗೆ ಅನ್ಯಾಯ ಮಾಡಿ, ಟ್ರಿಬ್ಯುನಲ್ ರಚನೆ ಮಾಡಿದರು ಎಂದು

ಹೇಳಿದರೆ ದಾಖಲೆಗಳು ಸರಿಯಾಗಿರಬೇಕು, ವಿ ಪಿ ಸಿಂಗ್ ಟ್ರಿಬ್ಯುನಲ್ ರಚನೆ ಮಾಡಿದ್ದಲ್ಲ ತಮಿಳುನಾಡಿನವರು ಸುಪ್ರೀಂಕೋರ್ಟ್‌ಗೆ ಅರ್ಜಿ ಹಾಕಿದ್ದರು ಮಾತುಕತೆಗಳ ಮುಖಾಂತರ, ಬೇರೆ ಇನ್ನಾವುದೇ ಮೂಲಕವಾಗಲಿ ಕಾವೇರಿ ನದಿ ನೀರಿನ ವಿವಾದ ಬಗೆಹರಿಯುತ್ತಿಲ್ಲ, ಈ ಸಮಸ್ಯೆಗೆ ಪರಿಹಾರ ಕೊಡಿ ಎಂದು ಕೇಳಿದಾಗ ಸುಪ್ರೀಂಕೋರ್ಟ್ ಟ್ರಿಬ್ಯುನಲ್ ರಚನೆ ಮಾಡಲಿಕ್ಕೆ ಡೈರೆಕ್ಷನ್ ಕೊಟ್ಟಿತು ಸುಪ್ರೀಂಕೋರ್ಟ್ ಡೈರೆಕ್ಷನ್ ಕೊಟ್ಟಾಗ ವಿ ಪಿ ಸಿಂಗ್‌ರವರ ಜಾಗದಲ್ಲಿ ಬೇರೆ ಯಾರೇ ಇದ್ದರೂ ಕೂಡ ಏನು ಮಾಡುತ್ತಿದ್ದರು? ಟ್ರಿಬ್ಯುನಲ್ ರಚನೆ ಮಾಡಲೇಬೇಕಾಯಿತು ಆ ರೀತಿ ಟಿಬ್ಯುನಲ್ ರಚನೆ ಮಾಡಿದಾಗ ನಾವು ಟ್ರಿಬ್ಯುನಲ್ ರಚನೆಯಾದ 16 ವರ್ಷಗಳಿಂದ ನಾವು ಯಾವ ರೀತಿಯಾಗಿ ದಾಖಲೆಗಳನ್ನು ಒದಗಿಸಿದ್ದೇವೆ? ಯಾವ್ಯಾವ ದಾಖಲೆಗಳನ್ನು ಒದಗಿಸಿದ್ದೇವೆ? ವಾದ ಹೇಗೆ ಮಾಡಿದ್ದೇವೆ? ನಮ್ಮ ವಾಸ್ತವ ಪರಿಸ್ಥಿತಿಯನ್ನು ಏನು ಹೇಳಿದ್ದೇವೆ? ಇವೆಲ್ಲವುಗಳ ಬಗ್ಗೆ ನಾನು ವಿವರವಾಗಿ ಹೇಳಲಿಕ್ಕೆ ಹೋಗುವುದಿಲ್ಲ, ಆದರೆ ನಮ್ಮ ಲಾಯರ್‌ಗಳು ಏನು ವಾದ ಮಾಡಿದ್ದಾರೆ, really they did a marvelous job ನಮ್ಮ ಲಾಯರ್‌ಗಳು ಸರಿಯಾಗಿ ವಾದ ಮಾಡಿಲ್ಲವೆಂದು ಯಾರೂ ಸಹ ಅನುಮಾನ ವ್ಯಕ್ತಪಡಿಸುವಂಥ ಅವಶ್ಯಕತೆಯಿಲ್ಲ ಇಡೀ ಜಡ್ಜ್‌ಮೆಂಟ್ ಅನ್ನು ನಾನು ಓದಿದ್ದೇನೆ ಅದರಲ್ಲಿ ಕೆಲವು synopsis ಅಷ್ಟನ್ನೇ ಮಾಡಿದ್ದೇನೆ ಪೂರ್ಣವಾದ ಜಡ್ಜಮೆಂಟ್ ತಂದಿಲ್ಲ ಅದಕ್ಕಿಂತ ಒಳ್ಳೆಯ ವಾದವನ್ನು ಟಿಬ್ಯುನಲ್ ಮುಂದೆ ಯಾರೂ ಮಂಡಿಸಲಿಕ್ಕೆ ಸಾಧ್ಯವಿಲ್ಲ ತೀರ್ಪು ಅವರು ಕೊಟ್ಟಿದ್ದಾರೆ ಅದು ಬೇರೆ ವಿಚಾರ, ಅವರು ಯಾವ ಕಾರಣಕ್ಕೆ ಆ ರೀತಿ ತೀರ್ಪು ಕೊಟ್ಟಿದ್ದಾರೆ ಅದು ಬೇರೆ ವಿಚಾರ ಆದರೆ ನಮ್ಮ ಲಾಯರುಗಳ ಟೀಮ್ ಏನಿದೆ ನಮ್ಮ ಕರ್ನಾಟಕವನ್ನು ಪ್ರತಿನಿಧಿಸಿದಂಥ ಟೀಮ್ they did an excellent job ಅದಕ್ಕಿಂತ ಒಳ್ಳೆಯ ಕೆಲಸವನ್ನು ಯಾವ ಲಾಯರ್ ಮಾಡಲಿಕ್ಕೆ ಸಾಧ್ಯವಿಲ್ಲ In spite of it we lost the case, because of the ground realities What are the ground realities? ಅದರ ಬಗ್ಗೆ ಈಗ ನಾನು ವಿವರವಾಗಿ ಹೇಳಲಿಕ್ಕೆ ಹೋಗುವುದಿಲ್ಲ ಎರಡನೆಯದು ಈಗಲೂ ಕೂಡ ನಮಗೆ ಟಿಬ್ಯುನಲ್‌ನಲ್ಲಿ ಕರ್ನಾಟಕಕ್ಕೆ ಏನು ನ್ಯಾಯವಾಗಿ ಸಿಗಬೇಕಾಗಿತ್ತು ಅದು ಸಿಕ್ಕಿಲ್ಲವೆಂದು ನಮ್ಮೆಲ್ಲರ ಭಾವನೆ ಇದೆ ನಿಜ ಅದು, ಅದರಲ್ಲಿ ಏನು ತಪ್ಪಿಲ್ಲ ಟ್ರಿಬ್ಯುನಲ್‌ನವರು ಮನಸ್ಸು ಮಾಡಿದ್ದರೆ, ಅವರು

ಕಾನೂನಿನ ಪ್ರಕಾರ ಹೋಗಿಬಿಟ್ಟಿದ್ದಾರೆ ಅವರೇನಾದರೂ liberal view ತೆಗೆದುಕೊಂಡಿದ್ದಿದ್ದರೆ ನಮಗೆ ಸಹಾಯ ಮಾಡಬಹುದಾಗಿತ್ತು ಮಾಡಲಿಕ್ಕೆ ಸಾಧ್ಯತೆ ಇತ್ತು, ಆದರೆ ಹಾಗೆ ಮಾಡಲಿಲ್ಲ ಏಕೆ ಮಾಡಲಿಲ್ಲವೆಂದರೆ ದಿನ ಬೆಳಗಾದರೆ ನಾವು ಅವರ ವಿರುದ್ಧ ಧಿಕ್ಕಾರ ಮಾಡುತ್ತಿದ್ದೆವು ಈಗ ಮಾನ್ಯ ಅಧ್ಯಕ್ಷರೇ, ನಾನು ತಮ್ಮಲ್ಲಿ ವಿನಂತಿಸುತ್ತೇನೆ, ಟಿಬ್ಯುನಲ್ ತೀರ್ಮಾನ ನಮಗೆ ಬೇಡ, ಧಿಕ್ಕಾರ ಮಾಡೋಣ ಸುಪ್ರೀಂ ಕೋರ್ಟ್ ತೀರ್ಮಾನವನ್ನು ಧಿಕ್ಕಾರ ಮಾಡೋಣ, ಇನ್ನೆಲ್ಲಿ? ಯಾವುದಾದರೂ ಒಂದು ಅಧಾರಿಟಿ ಬೇಕಲ್ಲವೇ, ಇದನ್ನು ತೀರ್ಮಾನ ಮಾಡಲಿಕ್ಕೆ ಸುಪ್ರೀಂಕೋರ್ಟ್ ಟ್ರಿಬ್ಯುನಲ್ ಮಾಡಬೇಕೆಂದು ಡೈರೆಕ್ಷನ್ ಕೊಟ್ಟ ನಂತರವೂ ಬೆಳಿಗ್ಗೆ ನಮ್ಮ ಮಾನ್ಯ ಸದಸ್ಯರು ಮಾತನಾಡುವಂಥ ಸಂದರ್ಭದಲ್ಲಿ ನಮ್ಮ ಹೆಗ್ಡೆಯವರು ಅದಕ್ಕೆ ದಾಖಲೆ ಬೇಕು ಎಂದು ಕೇಳಿದರು ಕರೆದು ಮಾತನಾಡಬಹುದಿತ್ತು, ಕರೆದು ಮಾತನಾಡಿದರು, ಮಾತುಕತೆಗೆ ಒಪ್ಪಲಿಲ್ಲ, ಆದ್ದರಿಂದ ಅವರು ಟ್ರಿಬ್ಯುನಲ್ ಅನ್ನು ನೇಮಕ ಮಾಡುವ ಅನಿವಾರ್ಯ ಪರಿಸ್ಥಿತಿ ನಿರ್ಮಾಣವಾಯಿತು ಅಂದಿನ ತಮಿಳುನಾಡಿನ ಮುಖ್ಯಮಂತ್ರಿಗಳನ್ನು ಕರೆದರು, ಅಂದಿನ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳನ್ನು ಮಾತುಕತೆಗೆ ಕರೆದರು, ಮಾತನಾಡಿದರು, ಆದರೆ ಅದರಿಂದ ಏನು ಪ್ರಯೋಜನವಾಗುವುದಿಲ್ಲವೆಂಬ ಪರಿಸ್ಥಿತಿ ನಿರ್ಮಾಣವಾದಾಗಷ್ಟೇ ಅವರು ಟ್ರಿಬ್ಯುನಲ್ ಅನ್ನು ರಚನೆ ಮಾಡುವಂಥ ಅನಿವಾರ್ಯ ಪರಿಸ್ಥಿತಿ ಬಂತು ಸರಿ, ನಾವು ಇವತ್ತು ಒಕ್ಕೂಟದ ವ್ಯವಸ್ಥೆಯಲ್ಲಿದ್ದೇವೆ ನಾವು ಒಂದು ನ್ಯಾಯಾಂಗವನ್ನು ಒಪ್ಪಿದ್ದೇವೆ ನಾವು ಯಾವುದಾದರೂ ಒಂದು ನ್ಯಾಯಾಂಗದ ತೀರ್ಪನ್ನು ಒಪ್ಪಬೇಕಲ್ಲವೇ? ನಾವಾಗಬಹುದು, ತಮಿಳುನಾಡಿನವರಾಗಬಹುದು, ಮತ್ತೊಂದು ರಾಜ್ಯದವರಾಗಬಹುದು Why we are having the Supreme Court? We are all bound by it. ಆ ಸುಪ್ರೀಂಕೋರ್ಟ್‌ನ ಆದೇಶದ ಮೇಲೆ ಟ್ರಿಬ್ಯುನಲ್ ರಚನೆ ಮಾಡಿತು ಯಾವುದಾದರೂ ಒಂದು ಅಧಾರಿಟಿ, some authority must be there, to decide when we fail to settle our issues through the dialogue Which is that authority? Which authority we are going to accept? ನಾವಾಗಬಹುದು, ತಮಿಳುನಾಡಿನವರಾಗಬಹುದು ಬೇರೆ ಯಾವುದೇ ರಾಜ್ಯದವರಾಗಬಹುದು, ಏನಾದರೂ ಒಂದು ಅಧಾರಿಟಿ ಇರಬೇಕಲ್ಲವೇ

ತೀರ್ಮಾನ ಮಾಡಲಿಕ್ಕೆ Then only this federal system will be saved. Otherwise how? ಆಗ ನಾವು ಏನು ಮಾಡಬೇಕು? ಸುಪ್ರಿಂಕೋರ್ಟ್ ತೀರ್ಮಾನ ಬೇಡ, ಟ್ರಿಬ್ಯುನಲ್ ತೀರ್ಮಾನ ಬೇಡ, ಅದನ್ನು ತಿರಸ್ಕಾರ ಮಾಡಿ, ರಾಜ್ಯದ ಹಿತದೃಷ್ಟಿಯಿಂದ ಈ ತೀರ್ಪನ್ನು ತಿರಸ್ಕಾರ ಮಾಡೋಣವೆಂದು, ನಾವು ತೀರ್ಮಾನಿಸೋಣ Then what? what next? ಅವರ ಅಪೀಲ್ ಬೇಡವೆನ್ನುತ್ತೇವೆ ಅವರದ್ದು ತೀರ್ಮಾನ ಆಗುವುದಿಲ್ಲವೆನ್ನುತ್ತೇವೆ ಸುಪ್ರೀಂಕೋರ್ಟ್ ತೀರ್ಮಾನವನ್ನು ನಾವು ವಿರೋಧ ಮಾಡಲಿಲ್ಲವೇ? ವಿರೋಧಿಸಿದ್ದೇವೆ ಇದರ ಪರಿಣಾಮಗಳೇನಾಗುತ್ತದೆಂಬುದನ್ನು ಆಲೋಚನೆ ಮಾಡಬೇಕು ಈ ಎಲ್ಲಾ ಹಿನ್ನೆಲೆಯಲ್ಲಿ ಅವರು ಟ್ರಿಬ್ಯುನಲ್‌ನಲ್ಲಿ ನಮಗೆ ಸಹಾಯ ಮಾಡಬಹುದಾಗಿತ್ತು ಅವರು ಸಹಾಯ ಮಾಡಿದ್ದರೆ ನಮಗೆ ಇಷ್ಟು ಅನ್ಯಾಯವಾಗುತ್ತಿರಲಿಲ್ಲ ಎಲ್ಲಿ ಅವರು ಸಹಾಯ ಮಾಡಬಹುದಾಗಿತ್ತು ಎಂಬುದನ್ನು ನಾಲ್ಕು ವಿಚಾರಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ ಒಂದನೆಯದು, ಕೇರಳದ ಭಾಗವಾಗಿರುವ 30 ಟಿ ಎಂ ಸಿ ನೀರೇನಿದೆ, ಅದರಲ್ಲಿ ಅವರು ಈಗ ಕೇವಲ 9 ಟಿ ಎಂ ಸಿ ನೀರನ್ನು ಮಾತ್ರ ಉಪಯೋಗಿಸಿಕೊಳ್ಳುತ್ತಿದ್ದಾರೆ 21 ಟಿ ಎಂ ಸಿ ನೀರು ಅವರು ಉಪಯೋಗ ಮಾಡುತ್ತಿಲ್ಲ ಹಾಗೆ ಉಪಯೋಗವಾಗದ ನೀರು ಸ್ಟೋರ್ ಆಗುವುದು ಎಲ್ಲಿ? ಕಬಿನಿಯಲ್ಲಿ ಕಬಿನಿಯಲ್ಲಿ ಸ್ಟೋರ್ ಆಗತಕ್ಕಂಥ ನೀರನ್ನು ಸರಾಸರಿಯಾಗಿ ತಮಿಳುನಾಡಿಗೆ ಕೊಟ್ಟುಬಿಡಿ ಎಂದು ಹೇಳುವುದು ಸರಿಯಲ್ಲ ಅವರು ಏನು ಹೇಳಿದ್ದಾರೆ, ಕೇರಳದವರು ನೀರು ಉಪಯೋಗಿಸುವವರೆಗೂ ತಮಿಳುನಾಡಿನವರು ಉಪಯೋಗಿಸಬಹುದೆಂದು ಹೇಳಿದ್ದಾರೆ ಅದೇ ಮಾತನ್ನು ನಮಗೆ ಹೇಳಬಹುದಾಗಿತ್ತಲ್ಲವೇ? ಏತಕ್ಕೆ ಹೇಳಬಾರದಾಗಿತ್ತು? ಏತಕ್ಕೆ ಅವರು ಹೇಳಲಿಲ್ಲ? ಅವರು ಇಲ್ಲಿ ನಮಗೆ ಸಹಾಯ ಮಾಡಬಹುದಿತ್ತು ಅಲ್ಲಿಯೂ ಸಹಾಯ ಮಾಡಲಿಲ್ಲ, ಏಕೆ ಮಾಡಲಿಲ್ಲವೆಂದು ನಾನು ಈಗಾಗಲೇ ಹೇಳಿದ್ದೇನೆ, ಮತ್ತೆ ನಾನು ಹೇಳಲಿಕ್ಕೆ ಹೋಗುವುದಿಲ್ಲ ಸಹಾಯ ಮಾಡಬಹುದಾಗಿತ್ತು ಮಾಡಲಿಲ್ಲ, 14 ಟಿ ಎಂ ಸಿ 10+4 Environmental protection ಬಗ್ಗೆ ಏನು ಅವರು ಹೇಳಿದ್ದಾರೆ Evaporation loss + Environmental protection, escapes, ಅದರಲ್ಲಿ ನಮಗೆ ಕೊಡಬಹುದಾಗಿತ್ತು, ಅದನ್ನು ನಮಗೆ ಕೊಡಲಿಕ್ಕಾಗಲಿಲ್ಲ ನಮ್ಮ

ನೀರನ್ನೇ ಅವರಿಗೆ ಕೊಡಿ ಎಂದು ಹೇಳಿದ್ದಾರೆ ಮತ್ತೆ ನೀವು ಮಧ್ಯಂತರ ತೀರ್ಪಿನಲ್ಲಿ ಏನು ಹೇಳಿದ್ದೀರಿ, 205 ಟಿ ಎಂ ಸಿ ನೀರನ್ನು ಬಿಡುಗಡೆ ಮಾಡಬೇಕೆಂದು ಹೇಳಿದ್ದೀರಿ ಅಂದು ಯಾವ ರೀತಿಯಲ್ಲಿ ಲೆಕ್ಕ ಹಾಕಿದಿರಿ ನೀವು? ಮೆಟ್ಟೂರು ಡ್ಯಾಂನಿಂದ ನೀವು 192 ಟಿ ಎಂ ಸಿ ನೀರು ಕೊಟ್ಟರೆ, 205 ಟಿ ಎಂ ಸಿ ನೀರು ಕೊಡುತ್ತದೆ, ಮೆಟ್ಟೂರು ಮತ್ತು ಬಿಳಿಗುಂಡ್ಲೂ ಮಧ್ಯೆ 70 ಕಿ ಮೀ ನಲ್ಲಿ ನಮಗೆ ಅಥವಾ 70 ಕಿ ಮೀ ನಲ್ಲಿ 25 ಟಿ ಎಂ ಸಿ ನೀರು ಇದೆ 25 ಟಿ ಎಂ ಸಿ ನೀರು ಸಹ ತಮಿಳುನಾಡಿನವರಿಗೆ ಹೋಗುತ್ತಿದೆ 192 ಟಿ ಎಂ ಸಿ ನೀರನ್ನು ಬಿಳಿಗುಂಡ್ಲುವಿನಿಂದ ಕೊಡಿ ಎನ್ನುವುದರ ಬದಲಿಗೆ, 180 ಟಿ ಎಂ ಸಿ ನೀರನ್ನು ಮೆಟ್ಟೂರಿನಿಂದ ಕೊಡಿ ಎಂದು ಹೇಳಿದರೆ 182 + 25, ನಮಗೆ 12 ಟಿ ಎಂ ಸಿ ನೀರು save ಆಗುತ್ತಿತ್ತು We would have saved that 12 T M C That could have been done by the Tribunal. ಅಲ್ಲಿಯೂ ಅವರು ನಮಗೆ ಸಹಾಯ ಮಾಡಲಿಕ್ಕೆ ಹೋಗಲಿಲ್ಲ ಮತ್ತೆ more strangely, ground water ಅನ್ನು ಲೆಕ್ಕ ಹಾಕಲಿಲ್ಲ Ground water availability ಏನಿದೆ ಆ ground water ಅನ್ನು ಲೆಕ್ಕ ಹಾಕಲಿಲ್ಲ ಇದಕ್ಕೆ ತಮಿಳುನಾಡಿನವರೇ ಒಪ್ಪಿದ್ದಾರೆ ಟ್ರಿಬ್ಯುನಲ್ ಮುಂದೆ ವಾದ ಮಾಡತಕ್ಕಂಥ ಸಂದರ್ಭದಲ್ಲಿ ತಮಿಳುನಾಡಿನವರೇ ಒಪ್ಪಿರತಕ್ಕಂಥ ವಿಚಾರವೇನೆಂದರೆ ನಾವು ಈಗ ಸಧ್ಯಕ್ಕೆ 47 ಟಿ ಎಂ ಸಿ ನೀರನ್ನು ಉಪಯೋಗಿಸಿಕೊಳ್ಳುತ್ತಿದ್ದೇವೆಂದು ಅವರೇ ಅಫಿಡವಿಟ್ ಹಾಕಿದ್ದಾರೆ, ವಾದ ಮಾಡಿದ್ದಾರೆ ತಮಿಳುನಾಡಿನವರೇ 47 ಟಿ ಎಂ ಸಿ ನೀರನ್ನು ಉಪಯೋಗಿಸಿಕೊಳ್ಳುತ್ತಿದ್ದೇವೆಂದು ಹೇಳಿದಾಗ ನೀವು ಅದನ್ನು ಪರಿಗಣನೆ ಮಾಡಲಿಲ್ಲವೆಂದರೆ ಏನಿದರ ಅರ್ಥ? ತಮಿಳುನಾಡಿನವರು ಒಪ್ಪಿದ್ದಾರೆ You have not agreed. Tribunal has not agreed. That is where you could have helped Karnataka. ಅಲ್ಲಿಯೂ ಕರ್ನಾಟಕಕ್ಕೆ ನೀವು ಸಹಾಯ ಮಾಡಬಹುದಾಗಿತ್ತು

ಶ್ರೀ ಸಿದ್ದರಾಮಯ್ಯ – ನ್ಯಾಯ ಕೊಡಬೇಕಾಗಿತ್ತು, ಸಹಾಯ ಎಂದು ಹೇಳುವುದು ಬೇಡ We are not asking help from the Tribunal We are asking justice

ಶ್ರೀ ಜಿ ವಿ ಶ್ರೀರಾಮರೆಡ್ಡಿ – ಹೌದು, ನ್ಯಾಯ ಒದಗಿಸಬೇಕಾಗಿತ್ತು, ಸಹಾಯ ಎಂದು ಹೇಳುವುದು ಬೇಡ ನ್ಯಾಯ ಒದಗಿಸಬಹುದಾಗಿತ್ತು,

ಅದನ್ನು ಒದಗಿಸಲಿಲ್ಲ ನೀವು ಮತ್ತೆ crop pattern ಬಗ್ಗೆ ನೀವು ಹೇಳುವಂಥ ಸಂದರ್ಭದಲ್ಲಿ ನಮಗೆ ಮಾತ್ರ stringent ಆಗಿ ಇರಿ ಎಂದು ಹೇಳುತ್ತೀರಿ ಭಾರಿ strict ಆಗಿ ನೀವು ಫಾಲೋ ಮಾಡಬೇಕೆಂದು ನಮಗೆ ಹೇಳುತ್ತೀರಿ ಅದೇ ಮಾತನ್ನು ಅವರಿಗೇಕೆ ಹೇಳಬಾರದು? ಹಾಗಾಗಿ ಈ ನಾಲ್ಕೈದು ವಿಚಾರಗಳಲ್ಲಿ ಬೆಂಗಳೂರಿಗೆ ಕುಡಿಯುವ ನೀರಿನ ಪ್ರಶ್ನೆ ಟ್ರಿಬ್ಯುನಲ್‌ನವರು ಬೆಂಗಳೂರಿನ ಕುಡಿಯುವ ನೀರಿನ ಬಗ್ಗೆ ತೆಗೆದುಕೊಂಡಿರುವ view ಏನು? ಕಾವೇರಿ ಬೇಸಿನ್‌ಗೆ ಸೇರತಕ್ಕಂಥ ಪ್ರದೇಶ ಕಾವೇರಿ ಬೇಸಿನ್‌ಗೆ ಬೆಂಗಳೂರಿನ ಯಾವ್ಯಾವ ಪ್ರದೇಶ ಸೇರುತ್ತದೆ ನಾವೆಲ್ಲಾ ಅಂದುಕೊಂಡಿದ್ದುದು ಇಡೀ ಬೆಂಗಳೂರು ನಗರ ಕಾವೇರಿ ಬೇಸಿನ್‌ಗೆ ಸೇರುತ್ತದೆಂದು ಇಲ್ಲಾ, ಇಡೀ ಬೆಂಗಳೂರು ನಗರ ಕಾವೇರಿ ಬೇಸಿನ್‌ಗೆ ಸೇರುವುದಿಲ್ಲ 1/3 ಏರಿಯಾದಲ್ಲಿ ಇರತಕ್ಕಂಥ population ಅನ್ನು ಈಗಿರತಕ್ಕಂಥ populationಗೆ ಲೆಕ್ಕ ಹಾಕಿ 2011ನೇ ಇಸವಿಗೆ ಈ percentageನಲ್ಲಿ ಎಷ್ಟು population ಬೆಳೆಯಬಹುದು ಎನ್ನತಕ್ಕಂಥ ಅಂದಾಜಿನಲ್ಲಿ ಅವರು ಜಡ್ಜ್‌ಮೆಂಟ್ ಕೊಟ್ಟಿದ್ದಾರೆ ಹಾಗಾಗಿ ನಮಗೆ ಸಮಸ್ಯೆಯಾಗಿರತಕ್ಕಂಥಾದ್ದು ಮತ್ತು ಕೈಗಾರಿಕಾ ಉಪಯೋಗಕ್ಕೋಸ್ಕರ ನೀರು ಬೇಕು ಎನ್ನುವುದನ್ನು ನೀವು ಅಂದಾಜು ಮಾಡುವಂತಹ ಸಂದರ್ಭದಲ್ಲಿ, ಟ್ರಿಬ್ಯುನಲ್‌ನವರು ನೀವು ಯಾವುದನ್ನು ಪರಿಗಣನೆ ಮಾಡಬೇಕಾಗಿತ್ತು? What is the growth rate of industry in Bangalore? You should consider it ಅದನ್ನು ಪರಿಗಣನೆಗೆ ತೆಗೆದುಕೊಳ್ಳಲೇ ಬೇಕಾಗುತ್ತದೆ ನೀವು ಅದನ್ನು ಪರಿಗಣನೆಗೆ ತೆಗೆದುಕೊಳ್ಳಲಿಲ್ಲ, ಬೆಂಗಳೂರಿನ ಕುಡಿಯುವ ನೀರಿನ ಸಮಸ್ಯೆ ಬಗ್ಗೆ scientific ಆದಂತಹ realistic ಆದಂತಹ approach ಅನ್ನು ತೆಗೆದುಕೊಳ್ಳಲಿಕ್ಕಾಗಲಿಲ್ಲ ಈ ಕಾರಣಗಳಿಂದ ಇವತ್ತು ಆ ರೀತಿಯಾದಂಥ ತೀರ್ಪು ಬರಲಿಕ್ಕೆ ಸಾಧ್ಯವಾಗಿದೆ ಆ ರೀತಿಯಾದಂಥ ತೀರ್ಪು ಇವತ್ತು ನಮ್ಮ ಕರ್ನಾಟಕಕ್ಕೆ ನ್ಯಾಯ ಒದಗಿಸಿಲ್ಲ ಬೇರೆ ದಾರಿಯೇನು? ಈಗ ಅದಕ್ಕೆ ದಾರಿಯೇನು ಎಂದು ಹುಡುಕಬೇಕಲ್ಲವೇ? ಹೋಗಲಿ, ನಾವೆಲ್ಲಾ ಒಂದು ನಿರ್ಣಯ ಮಾಡೋಣ, ಅಸೆಂಬ್ಲಿ ರದ್ದು ಮಾಡೋಣ ಆಗ ನಮ್ಮ ಸಮಸ್ಯೆ ಪರಿಹಾರವಾಗುತ್ತದೆಯೇ? ಸರ್ಕಾರವನ್ನು ಉರುಳಿಸೋಣ, ನೀವು ಸರಿಯಿಲ್ಲ, ನಿಮ್ಮಿಂದಾಗಿಯೇ ಅನ್ಯಾಯವಾಗಿಬಿಟ್ಟಿದೆ, ಈ ರೀತಿ ತಾನೇ ನಾವು ವಾದ ಮಾಡುವುದು? ನಿಮ್ಮ ಸರ್ಕಾರವನ್ನು ಉರುಳಿಸಿಬಿಡೋಣ ಈಶ್ವರಪ್ಪನವರೇ

ನೀರು ಬಂದುಬಿಡುತ್ತದೆಯೇ? ಸರ್ಕಾರಗಳು ಬೇಜವಾಬ್ದಾರಿತನ, ಬೇಜವಾಬ್ದಾರಿತನ ಎಂದು ಎಲ್ಲರೂ ಅವರು ಹೇಳಿದ್ದಾರೆ, ಇವರು ಹೇಳುತ್ತಿದ್ದಾರೆ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ – ಎಲ್ಲರೂ Co–operation ಕೊಡುತ್ತೇವೆಂದು ಹೇಳಿದ್ದು ಬಿಟ್ಟರೆ, ನೀವು ಮಾಡಿಲ್ಲವೆಂದು ಯಾವ ಸರ್ಕಾರದ ಮೇಲೆ ಯಾರೂ ಈ ಸಲ ದೂಷಣೆಯನ್ನು ಮಾಡಿಲ್ಲ Loyal concern ಅಷ್ಟೇ

ಶ್ರೀ ಜಿ ವಿ ಶ್ರೀರಾಮರೆಡ್ಡಿ – ಹಾಗಾಗಿ ನಾವು ಇವತ್ತು ಇದಕ್ಕೆ ಪರಿಹಾರ ಮಾರ್ಗವೇನು ಎನ್ನತಕ್ಕಂಥದ್ದನ್ನು ಆಲೋಚನೆ ಮಾಡಬೇಕಾಗುತ್ತದೆ ಪರಿಹಾರ ಮಾರ್ಗ ಯಾವುದು ಸರಿಯಿದೆ, ಅದನ್ನು ಹುಡುಕಬೇಕಾಗುತ್ತದೆ ಹೊರತು ಅದನ್ನು ಬಿಟ್ಟು ಬೇರೆ ಮಾರ್ಗಗಳಿಂದ ನಾವು ಈ ಸಮಸ್ಯೆಗೆ ಪರಿಹಾರ ಹುಡುಕಲಿಕ್ಕೆ ಸಾಧ್ಯವಿಲ್ಲ ಬಂದ್‌ಗಳಿಂದ, ಸ್ಟ್ರೈಕ್‌ಗಳಿಂದ ಈ ಸಮಸ್ಯೆ ಪರಿಹಾರವಾಗುತ್ತದೆಂದು ನಾವು ಏನಾದರೂ ಭಾವಿಸಿದ್ದರೆ ಖಂಡಿತ ಅದು ಸಾಧ್ಯವಿಲ್ಲ ಕಾನೂನು ಮೂಲಕವೇ ನಮಗೆ ಸಾಧ್ಯವಿರುವುದು, ಅದು ಬಿಟ್ಟರೆ ಇನ್ನೊಂದು ಮಾರ್ಗವಿದೆ It is a political solution. ಏನು political solution? ನಮಗೇನಾದರೂ ಶಕ್ತಿಯಿದ್ದರೆ ಕೇಂದ್ರ ಸರ್ಕಾರದ ಮೇಲೆ ಸಿಂಧ್ಯಾರವರು ಕಾಂಗ್ರೆಸ್ ಸ್ನೇಹಿತರಿಗೆ ಒಂದು ಒಳ್ಳೆಯ ಸಲಹೆಯನ್ನು ಕೊಟ್ಟರು ನಿಜವಾಗಿಯೂ it is a good suggestion. ಏನದು? ನಿಮ್ಮ ಹಿತಾಸಕ್ತಿಯ ಕಾರಣಕ್ಕೋಸ್ಕರವಾದರೂ ಕೇಂದ್ರ ಸರ್ಕಾರದ ಮೇಲೆ ಒತ್ತಾಯ ತಂದು ತಮಿಳುನಾಡನ್ನು ಮಾತುಕತೆಗೆ ಕರೆಯತಕ್ಕಂಥ ರೀತಿಯಲ್ಲಿ ಪರಿಸ್ಥಿತಿ ನಿರ್ಮಾಣ ಮಾಡಿ, ಪ್ರಧಾನ ಮಂತ್ರಿಗಳು ಮಧ್ಯ ಪ್ರವೇಶ ಮಾಡಿ, ಏನಾದರೂ ಮಾಡಿ through dialogue, ಮಾತುಕತೆ ಮೂಲಕ ಈ ಸಮಸ್ಯೆಯನ್ನು ಪರಿಹಾರ ಮಾಡಲಿಕ್ಕೆ ಪ್ರಯತ್ನ ಮಾಡಿ ಇದೂ ಕೂಡ ಒಂದು ದಾರಿ ಇದೆ There are only two ways ಒಂದು legal, ಕಾನೂನು ಪ್ರಕಾರ ಸಾಧ್ಯವಿದ್ದರೆ, ಆದರೆ ನನಗೆ ಗೊತ್ತಿರತಕ್ಕಂಥ ಸಣ್ಣ ಪ್ರಮಾಣದ ಕಾನೂನಿನಿಂದ ಹೆಚ್ಚು ಬದಲಾವಣೆ ಮಾಡಲಿಕ್ಕೆ ಸಾಧ್ಯವಿದೆಯೆಂದು ನಾನೇನು ನಿರೀಕ್ಷೆ ಮಾಡುತ್ತಿಲ್ಲ ನನ್ನ ತಿಳುವಳಿಕೆಗೊಳಪಟ್ಟು ನಾನು ನಿರೀಕ್ಷೆ ಮಾಡಲಿಕ್ಕಾಗುವುದಿಲ್ಲ ಇನ್ನು ಎರಡನೆಯ ದಾರಿ, ಪ್ರಧಾನ ಮಂತ್ರಿಗಳು ಮತ್ತು ಕೇಂದ್ರ ಸರ್ಕಾರ ಮಧ್ಯೆ

ಪವೇಶ ಮಾಡಿ ನಮಗೆ ಆಗಿರತಕ್ಕಂಥ ಅನ್ಯಾಯವನ್ನು ಸರಿಪಡಿಸಲಿಕ್ಕೆ ಪ್ರಯತ್ನ ಮಾಡಬಹುದು ಈ ಎರಡೂ ಪ್ರಯತ್ನಗಳನ್ನು ನಮ್ಮ ಸರ್ಕಾರ, ನಾವೆಲ್ಲರೂ ಸೇರಿ ಮಾಡಬೇಕು ಅಂದರೆ ಬರೀ ಸರ್ಕಾರವೇ ಅಲ್ಲ ಇಡೀ ಎಲ್ಲಾ ರಾಜಕೀಯ ಪಕ್ಷಗಳು ಒಟ್ಟಾಗಿ ಪ್ರಯತ್ನ ಮಾಡಬೇಕು

ಶ್ರೀ ಜೆ ಸಿ ಮಾಧುಸ್ವಾಮಿ – ನೀವು ಕಮ್ಯುನಿಸ್ಟ್‌ರವರು ಮನಸ್ಸು ಮಾಡಿದರೆ ಏನಾದರೂ ಸಾಧ್ಯವಾಗುತ್ತದೆ ಇವರೇನಾದರೂ ನಮ್ಮ ಪರವಾಗಿ ನಿಂತುಕೊಂಡು ಬಿಟ್ಟರೆ, ಆ ಸರ್ಕಾರವೇ ಹೊರಟು ಹೋಗಿಬಿಡುತ್ತದೆ ಏನಾದರೂ ಮಾಡಿ ಶ್ರೀರಾಮರೆಡ್ಡಿಯವರು ಈಗ ಆ ಪಕ್ಷವನ್ನು ಬಳಸಿಕೊಳ್ಳಬೇಕು

ಶ್ರೀ ಜಿ ವಿ ಶ್ರೀರಾಮರೆಡ್ಡಿ – ಈಗ ಸರ್ಕಾರ ಹೊರಟು ಹೋಗಿ ಬಿಡುತ್ತದೆಂದು ನೀವು ಹೇಳಿದರೆ, ಈಗಿನ ಪರಿಸ್ಥಿತಿಯಲ್ಲಿ ಸರ್ಕಾರವನ್ನು ಉರುಳಿಸಲಿಕ್ಕೆ ಸಧ್ಯಕ್ಕೆ ನಾವು ತಯಾರಿಲ್ಲ ಏಕೆಂದರೆ ಈಗಿನ ಪರಿಸ್ಥಿತಿಯಲ್ಲಿ ಆ ಸರ್ಕಾರವನ್ನು ಉರುಳಿಸಿದರೆ ಇನ್ಯಾರು ಬರಬೇಕು ಎನ್ನುವ ಪ್ರಶ್ನೆ ನಮ್ಮ ಮುಂದೆ ಕಾಡುತ್ತದೆ ಪಾಪ, ಈಶ್ವರಪ್ಪನವರನ್ನು ನಾವು ಏಕೆ ದೂಷಿಸಬೇಕು ಈಗಾಗಲೇ ಪರಿಸ್ಥಿತಿ ತೀರ ಗಂಭೀರವಾಗಿದೆ ನಾವೆಲ್ಲರೂ ಸೇರಿ, ಅವರು, ಇವರು ಎಂದು ಅಲ್ಲ, ನಾವೆಲ್ಲರೂ ಸೇರಿ ವಾಜಪೇಯಿ, ಅದ್ವಾನಿಯವರು, ಎಡಪಕ್ಷಗಳು, ಕಾಂಗ್ರೆಸ್ ಇದರಲ್ಲಿ ಎಲ್ಲರೂ ಒಟ್ಟಾಗಿ, ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದು ಮಾತುಕತೆ ಮುಖಾಂತರ ರಾಜಕೀಯ ಪರಿಹಾರವನ್ನೇನಾದರೂ ಮಾಡಲಿಕ್ಕೆ ಪ್ರಯತ್ನವನ್ನು ಮಾಡಬೇಕು ಈ ಎರಡೇ ದಾರಿಗಳಿರತಕ್ಕಂಥಾದ್ದು ಈ ಎರಡು ದಾರಿಗಳನ್ನು ಬಿಟ್ಟು ಯಾವುದರಿಂದಲೂ ನಮ್ಮ ಸಮಸ್ಯೆ ಪರಿಹಾರ ಆಗಲಿಕ್ಕೆ ಸಾಧ್ಯವಿಲ್ಲ ಕಡೆಯದಾಗಿ, ನಾನು ಹೇಳುವುದೇನೆಂದರೆ, ನಮ್ಮದು federal structure ನಾನು ಪ್ರಾರಂಭದಲ್ಲೇ ಹೇಳಿದೆ, we are living in a federal structure We should not damage that structure Our first commitment is to our nation and our federal system, ಹಾಗಾಗಿ federal systemಗೆ ಧಕ್ಕೆ ತರದ ರೀತಿಯಲ್ಲಿ ನಮ್ಮ ರಾಜ್ಯದ ಹಿತಾಸಕ್ತಿಯನ್ನು ಕಾಪಾಡಲಿಕ್ಕೆ ಯಾವ್ಯಾವ ಮಾರ್ಗಗಳಿವೆ, ಅವನ್ನೆಲ್ಲಾ ಹುಡುಕಿ ಈ ಎರಡೂ ಮಾರ್ಗಗಳಲ್ಲಿ ಯಾವುದಾದರೂ ಒಂದು ಮಾರ್ಗದ ಮೂಲಕ ನಾವು ನಮಗೆ ನ್ಯಾಯವನ್ನು

ಒದಗಿಸಿಕೊಳ್ಳಬೇಕೆಂಬ ಪ್ರಯತ್ನವನ್ನು ಮಾಡಬೇಕೆಂದು ತಮ್ಮ ಮುಖಾಂತರ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ

ಅಧ್ಯಕ್ಷರು – ಆರಗ ಜ್ಞಾನೇಂದ್ರರವರು ಮಾತನಾಡಿ

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) – ಮಾನ್ಯ ಅಧ್ಯಕ್ಷರೇ, ಕಾವೇರಿ ನ್ಯಾಯಾಧೀಕರಣದ ತೀರ್ಪಿನ ನಂತರ ಶಾಸನಸಭೆಯಲ್ಲಿ ಪ್ರಸ್ತಾಪವಾಗಿರತಕ್ಕಂಥ ವಿಚಾರದ ಬಗ್ಗೆ ನನಗೂ ಕೂಡ ಮಾತನಾಡಲಿಕ್ಕೆ ಅವಕಾಶ ಮಾಡಿಕೊಟ್ಟಿರತಕ್ಕಂಥ ತಮಗೆ ವಂದಿಸುತ್ತಾ, ನಾನು ವಿಶೇಷವಾಗಿ ಕೃಷ್ಣಾ ಬೇಸಿನ್‌ನಿಂದ ಬಂದಿರತಕ್ಕಂಥವನು ಫೆಬ್ರವರಿ 5ನೇ ತಾರೀಖು ಬಂದಂಥ ಈ ತೀರ್ಪಿನಿಂದ ಈ ರಾಜ್ಯದ ಜನ ಒಗ್ಗಟ್ಟಾಗಿ ನೆಲ, ಜಲದ ಪ್ರಶ್ನೆ ಬಂದಾಗ ನಮ್ಮ ರಾಜಕೀಯವನ್ನು, ಮತ್ತು ಬೇರೆ ಬೇರೆ ವಿಷಯಗಳನ್ನು ಮರೆತು ಒಂದಾಗಿ ನಿಲ್ಲುತ್ತೇವೆನ್ನುವುದಕ್ಕೆ ಈ ಒಂದು ಶಾಸನಸಭೆಯಲ್ಲಿ ನಡೆಯುತ್ತಿರುವ ಈ ಚರ್ಚೆಯಾಗಲಿ, ತೀರ್ಪಿನ ನಂತರ ಈ ರಾಜ್ಯದ ವ್ಯಾಪ್ತಿಯಲ್ಲಿ ನಡೆದಿರತಕ್ಕಂಥ ಹೋರಾಟಗಳಾಗಲೀ ಬಹಳ ದೊಡ್ಡ ಸಾಕ್ಷಿಯಾಗಿವೆ ವಿಶೇಷವಾಗಿ, ತೀರ್ಪು ಆಗಿದೆ ನಾವು ಒಂದು ರೀತಿಯ ಶವದ ಮನೆಯಲ್ಲಿ ಕುಳಿತುಕೊಂಡು ಕಣ್ಣೀರು ಸುರಿಸುವಂಥ ಪರಿಸ್ಥಿತಿಯಲ್ಲಿ ಇವತ್ತು ನಾವು ಇದ್ದೇವೆ ತೀರ್ಪಿನ ನಂತರ ಈಗೇನಾಗಬೇಕು ಎನ್ನುವ ಬಗ್ಗೆ ಈಗಾಗಲೇ ಅನೇಕರು ಹೇಳಿದ್ದಾರೆ ತೀರ್ಪು ಹೇಗೆ ಬಂದಿದೆ, ಈಗಾಗಲೇ ವೈಜ್ಞಾನಿಕ ದೃಷ್ಟಿಯಿಂದ ಎಷ್ಟರ ಮಟ್ಟಿಗೆ ಸಮಂಜಸವಾಗಿದೆ, ಇದರ ಬಗ್ಗೆ ಈಗಾಗಲೇ ಬೆಳಕು ಚೆಲ್ಲುವಂಥ ಪ್ರಯತ್ನವನ್ನು ನನಗಿಂತ ಮೊದಲು ಮಾತನಾಡಿರತಕ್ಕಂಥ ಎಲ್ಲಾ ನಾಯಕರುಗಳು ಕೂಡ ಈ ಶಾಸನಸಭೆಯಲ್ಲಿ ಮಾಡಿದ್ದಾರೆ ಈ ತೀರ್ಪಿಗೆ ಮೂಲ 1892 ಮತ್ತು 1924ನೇ ಇಸವಿಯಲ್ಲಿ ಬಿಟಿಷ್ ಆಡಳಿತದಲ್ಲಿ ಮೈಸೂರು ರಾಜ್ಯ ಹಾಗು ಮದ್ರಾಸ್ ಪ್ರೆಸಿಡೆನ್ಸಿ ನಡುವೆ ಆದಂಥ ಒಪ್ಪಂದವನ್ನು ಮೂಲವಾಗಿ ಮಾಡಿಕೊಂಡಿರುವಂಥ ಬಹಳ ದೊಡ್ಡ ತಪ್ಪು ಎಂದು ನಮ್ಮ ಮೇಲ್ನೋಟಕ್ಕೆ ಗೊತ್ತಾಗುತ್ತದೆ, ಏಕೆಂದರೆ ಪ್ರಜಾ ತಂತ್ರ ವ್ಯವಸ್ಥೆಯಲ್ಲಿ ಬಿಟಿಷರನ್ನು ಓಡಿಸಿ ನಮ್ಮನ್ನು ನಾವೇ ಆಳಿಕೊಳ್ಳಲಿಕ್ಕೆ ಪ್ರಾರಂಭ ಮಾಡಿದ ನಂತರ, ನಮ್ಮದೇ ಸಂವಿಧಾನ, ನಮ್ಮ ಕಾನೂನು ರಚನೆ ಮಾಡಿದ ನಂತರ ಅವೆಲ್ಲವೂ ಕೂಡ ಹೋಗಬೇಕಾಗಿತ್ತು ಸ್ವಾತಂತ್ರ್ಯಾನಂತರ ಇದರದೇ ಆದ ವಿವೇಚನೆಯಡಿಯಲ್ಲಿ ಬೇರೆ ಬೇರೆ ರಾಜ್ಯಗಳು, ರಾಜ್ಯಗಳ ನಡುವಿನ ಜಲದ ನೆಲದ ಪ್ರಶ್ನೆಗಳನ್ನು ಕೂತು ಚರ್ಚೆ ಮಾಡಬೇಕಾಗಿತ್ತು ಅದನ್ನು ಬಿಟ್ಟು ಇವತ್ತು ತೀರ್ಪು

ನೀಡಿರುವುದು ಎಷ್ಟು ಸಮಂಜಸವೆಂದು ನಾವೀಗ ಚರ್ಚೆ ಮಾಡ ಬೇಕಾಗುತ್ತದೆ ಇದು ಒಕ್ಕೂಟದ ಬಗ್ಗೆ ನಮ್ಮಲ್ಲಿರುವ ಸಾಮಾನ್ಯ ನಂಬಿಕೆಯನ್ನೇ ಕಲುಕುತ್ತಿರುವ ಒಂದು ಪ್ರಶ್ನೆ ಆದ್ದರಿಂದ ಇಂತಹ ತೀರ್ಪು ಕೊಡುವಾಗ ತೀರ್ಪು ಕೊಡುವವರು ವಿಶೇಷವಾಗಿ ಗಮನಿಸಬೇಕಾಗಿತ್ತು ಇದೆಲ್ಲದರ ಹಿನ್ನೆಲೆಯಲ್ಲಿ ತೀರ್ಪು ಕೊಡಬೇಕಾಗಿತ್ತು ದುರ್ದೈವದ ಸಂಗತಿಯೆಂದರೆ ನಮ್ಮ ರಾಜ್ಯದ ರಾಜಕಾರಣಿಗಳ ಲಾಬಿಯಾಗಲಿ ಅಧಿಕಾರಿಗಳ ಲಾಬಿಯಾಗಲಿ ಪ್ರಭಾವಶಾಲಿಯಾಗಿ ಇದುವರೆಗೂ ಕಾರ್ಯನಿರ್ವಹಿಸಿಲ್ಲ ಇವತ್ತಿನ UPA ಸರ್ಕಾರದಲ್ಲಿ ನಮ್ಮ ಪಾಲು ಏನೂ ಇಲ್ಲವೆಂಬುದು ಗೊತ್ತಿದೆ ಇವತ್ತು ತಮಿಳುನಾಡು ಹೇಳಿದಂತೆ ಕೇಳುವುದು ನಡೆದಿದೆ ಇಂಥಾದ್ದರಲ್ಲಿ ತಮಿಳುನಾಡಿನವರು ಬಹಳ ನಿಸ್ಸೀಮರು ಎಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕಾಗಿದೆ ನೆನ್ನೆ ದಿನ ನೋಡಿದೆವು ತಮಿಳುನಾಡು ಎಷ್ಟು ಪ್ರಭಾವಿಯಾಗಿದೆ ಎಂದರೆ ಸಂಸತ್ತಿನಲ್ಲಿ ಪಶ್ಚಿಮ ಬಂಗಾಳದಲ್ಲಿರುವ ಸಮುದ್ರ ಅಧ್ಯಯನದ ವಿಶ್ವವಿದ್ಯಾಲಯವನ್ನು ತಮಿಳುನಾಡಿಗೆ ವರ್ಗ ಮಾಡುವ ಬಿಲ್ ತಂದುಬಿಟ್ಟಿದ್ದಾರೆ ಅದು UPA ನಲ್ಲಿರುವ ಅಂಗಪಕ್ಷಗಳ ಗಮನಕ್ಕೆ ತಂದಿಲ್ಲ ಇದು ಪಶ್ಚಿಮ ಬಂಗಾಳದ ಸಂಸತ್ಸದಸ್ಯರಿಗೇ ಗೊತ್ತಿಲ್ಲ, ಇದರಿಂದ ಅಲ್ಲಿ ತುಂಬ ಗಲಭೆಯಾಗಿದೆ ಈ ರೀತಿ ತಮಿಳುನಾಡು ಬಹಳ ವ್ಯವಸ್ಥಿತವಾಗಿ ತನ್ನ ರಾಜ್ಯದ ಹಿತಕ್ಕಾಗಿ ಸೌಲಭ್ಯ ಪಡೆಯುವುದಕ್ಕಾಗಿ, ಕುಳಿತು ಚಿಂತನೆ ಮಾಡುತ್ತಾ ಬಂದಿದೆ 1974ರ ಮಧ್ಯಂತರ ತೀರ್ಪೂ ಕರ್ನಾಟಕಕ್ಕೆ ನ್ಯಾಯ ಒದಗಿಸಿತು ಎಂದು ಹೇಳಲು ಆಗುವುದಿಲ್ಲ ತಮಿಳುನಾಡಿಗೆ ನೀರು ಬಿಡುವುದಕ್ಕೇ ಕರ್ನಾಟಕದ ಅಣೆಕಟ್ಟುಗಳಿರುವುದು ಎಂದು ಅದರಲ್ಲಿ ಹೇಳಿದ್ದಾರೆ ನೀರು ಮನುಷ್ಯ ನಿರ್ಮಿತವೇನಲ್ಲ, ಪ್ರಕೃತಿ ನಿರ್ಮಿತವಾದದ್ದು ಒಂದೊಂದ್ಸಾರಿ ಮಳೆನೇ ಬರದಿದ್ದರೆ ಏನು ಮಾಡುವುದು? ಎಷ್ಟು ನೀರು ಬಿಡಬೇಕು ಎಂಬ ಪೂರ್ವ ಅಂದಾಜಿಲ್ಲದೇ ತೀರ್ಪು ಕೊಟ್ಟಿದ್ದಾರೆ ಸಂಕಷ್ಟ ಸಂದರ್ಭವನ್ನು ನಾವೆಲ್ಲರೂ ಹಂಚಿಕೊಳ್ಳಬೇಕಾಗಿತ್ತು Interim orderನಲ್ಲಿ ತಮಿಳುನಾಡಿಗೆ 205 TMC ನೀರು ಮೆಟ್ಟೂರಿಗೆ ಬಿಡಲು ತಿಳಿಸಿದರು ಆಗ ಷರತ್ತು 11 20 ಲಕ್ಷ ಎಕರೆ ನಮಗೆ ಅಚ್ಚುಕಟ್ಟು ಮಾಡಿಕೊಳ್ಳುವಂತೆ ತಿಳಿಸಿದ್ದರು ಅಂತ ಕಾಣುತ್ತದೆ

ಶ್ರೀ ಸಿದ್ದರಾಮಯ್ಯ- Interim orderನಲ್ಲಿ ನಮಗೆ 18 85 ಲಕ್ಷ ಎಕರೆಯನ್ನು ಲೆಕ್ಕಕ್ಕೆ ತೆಗೆದುಕೊಂಡಿದ್ದಾರೆ ತಮಿಳುನಾಡಿಗೆ 24 71 ಲಕ್ಷ ಎಕರೆ ಲೆಕ್ಕಕ್ಕೆ ತಗೊಂಡಿದ್ದಾರೆ

ಶ್ರೀ ಆರಗ ಜ್ಞಾನೇಂದ್ರ ನಮಗೆ ನೀರು ಅಲಾಟ್ ಮಾಡುವಾಗ ಇಂಥದೇ ಬೆಳೆ ಬೆಳೆಯಿರಿ ಎಂದು ನಿರ್ದೇಶನ ಕೊಟ್ಟಿದ್ದಾರೆ ತಮಿಳುನಾಡಿಗೆ ಇಂಥದ್ಯಾವುದನ್ನೂ ಕೊಟ್ಟಿಲ್ಲ ಈ ತೀರ್ಪು ಹೇಗೆ ಅವೈಜ್ಞಾನಿಕ ಎಂದರೆ 30 TMC ನೀರು ಕೇರಳಕ್ಕೆ ಕೊಡಬೇಕಾಗಿತ್ತು, ಅವರು ಅಣೆಕಟ್ಟು ಕಟ್ಟುವವರೆಗೆ ಕರ್ನಾಟಕ ಉಪಯೋಗಿಸಿಕೊಳ್ಳಿ ಎಂದು ಹೇಳಬಹುದಾಗಿತ್ತು ಆದರೆ ಅದನ್ನು ತಮಿಳುನಾಡಿಗೆ ಬಿಡಿ ಎಂದಿರುವುದು ಎಷ್ಟು ಸಮಂಜಸ? ಹೀಗಾಗಿ ಈ ತೀರ್ಪು ಏಕಪಕ್ಷೀಯವಾದದ್ದು ಎಂಬುದು ನಮಗೆಲ್ಲ ಗೊತ್ತಿದೆ ಬೆಂಗಳೂರು ನಗರಕ್ಕೆ ಕಾವೇರಿ ವರದಾನ, ಬೆಳೆಯುತ್ತಿರುವ ನಗರ, ಇನ್ನು ಅನೇಕ ವರ್ಷಗಳಲ್ಲಿ ಅದ್ಭುತ ಜನಸಂಖ್ಯೆ ಹೊಂದಲಿದೆ ಬೆಂಗಳೂರಿನಲ್ಲಿ ಈಗ ಸರ್ವೆ ಮಾಡಿದರೆ 30–40% ತಮಿಳರೇ ಇಲ್ಲಿ ವಾಸಿಸುತ್ತಾರೆ

ಶ್ರೀ ಸಿದ್ದರಾಮಯ್ಯ :– ಮನುಷ್ಯರು ಎಂದರೆ ಎಲ್ಲರೂ ಒಂದೇ

ಶ್ರೀ ವಿ ಸೋಮಣ್ಣ ಬೆಂಗಳೂರಿನಲ್ಲಿ 80 ಲಕ್ಷ ಜನಸಂಖ್ಯೆ ಇದೆ, ಅದರಲ್ಲಿ ಒಂದನೇ ಮೂರು ಭಾಗ ಮಾತ್ರ ಪರಿಗಣನೆಗೆ ತಗೊಂಡು ಬಾಕಿ, ಬೆಂಗಳೂರಿನಲ್ಲಿರುವ ಜನಸಂಖ್ಯೆಯನ್ನು ಅವರು ಗಣನೆಗೆ ತಗೊಂಡಿಲ್ಲ, ಬೆಂಗಳೂರಿಗೆ ಬೇರೆ ಯಾವುದೇ ನೀರಿನ ಸೋರ್ಸಸ್ ಇಲ್ಲ, ಆದ್ದರಿಂದ ತಪ್ಪು ಗ್ರಹಿಕೆಯಿಂದ ಅವೈಜ್ಞಾನಿಕವಾಗಿ ನೀಡಿದ್ದಾರೆಂದು ಹೇಳೋಣ ಬೆಂಗಳೂರಿನಲ್ಲಿ ವಿಶ್ವದೆಲ್ಲ ಜನ ವಾಸಿಸುತ್ತಿದ್ದಾರೆ

ಶ್ರೀ ಆರಗ ಜ್ಞಾನೇಂದ್ರ ನಾನು ಹೇಳಿದ್ದು, ನಮ್ಮ ಜತೆಯಲ್ಲೇ ವಾಸಮಾಡುತ್ತಿರುವ ಆ ಜನರನ್ನೂ ಸೇರಿಸಿ ನಮಗೆ ಕುಡಿಯಲು ನೀರಿಲ್ಲ, ಅನ್ನವಿಲ್ಲದೇ ಎರಡು ದಿನ ಬದುಕಿಬಿಡಬಹುದು, ನೀರು ಗಾಳಿಯಿಲ್ಲದೆ ಬದುಕಲು ಸಾಧ್ಯವಿಲ್ಲ ಮೂಲಭೂತ ಅವಶ್ಯಕತೆಯಾದ ನೀರನ್ನು ಹಂಚಿಕೆ ಮಾಡುವುದರಲ್ಲಿ ಇದನ್ನೆಲ್ಲ ಪರಿಗಣಿಸಬೇಕಾದ ಅವಶ್ಯಕತೆಯಿತ್ತು ಆದರೆ ಯಾವುದನ್ನೂ ಆಲೋಚನೆ ಮಾಡದೇ ಒಂದು ರೀತಿಯ ಪಕ್ಷಪಾತ ಧೋರಣೆ ಅನುಸರಿಸಿರುವುದು ಕಾಣುತ್ತೇವೆ 1974ರಲ್ಲಿ ಕೇಂದ್ರ ಜಲಸಂಪನ್ಮೂಲ ಕಾರ್ಯದರ್ಶಿ ತಮಿಳುನಾಡು ಸುಮಾರು 100 TMC ನೀರು ಪೋಲು ಮಾಡುತ್ತಿದೆ ಎಂದು ವರದಿ ಕೊಟ್ಟಿದ್ದರು ನಮ್ಮ ನ್ಯಾಯವಾದಿಗಳು ಅದನ್ನು ಉಲ್ಲೇಖಿಸಿದಾಗಲೂ ಅದನ್ನು ಪರಿಗಣಿಸಲಿಲ್ಲ

ಮೊದ ಮೊದಲಿಗೆ ತೀರ್ಪು ಬಂದಾಗ ನಮ್ಮ ವಕೀಲರು ಚೆನ್ನಾಗಿ ವಾದ ಮಂಡಿಸಿಲ್ಲವೆಂಬ ಅಭಿಪ್ರಾಯ ನಮ್ಮಲ್ಲಿತ್ತು ಆದರೆ ಅವರು ಸಮಂಜಸವಾಗಿ ಕರ್ನಾಟಕದ ಪರ ವಾದವಿದ್ದರೂ ಅನೇಕ ಕಡೆ ನ್ಯಾಯಮಂಡಳಿ ಅದನ್ನು ಒಪ್ಪಿದರೂ ತೀರ್ಪು ಬರೆಯುವಾಗ, ಪರಿಗಣಿಸಿಲ್ಲದಿರುವುದು ನೋಡುತ್ತೇವೆ ಇವತ್ತು ತಮಿಳುನಾಡಿನಲ್ಲಿ ಕುರುವಾಯಿ ಸಾಂಬ ಮತ್ತೊಂದು, ಹೀಗೆ ಮೂರು ಬೆಳೆ ಬೆಳೆಯುತ್ತಾರೆ, ಈ ತೀರ್ಪು ಅನುಷ್ಠಾನಕ್ಕೆ ಬಂದರೆ ಕಾವೇರಿ ಕೊಳ್ಳದ ರೈತರು ಒಂದಾದರೂ ಬೆಳೆ ಬೆಳೆಯಲು ಆಗುವುದಿಲ್ಲ ಎಂಬ ಭಯ ಇವತ್ತು ಮೂಡಿದೆ ತೀರ್ಪಿನ ಹಿನ್ನೆಲೆಯಲ್ಲಿ ಇವತ್ತು ಚರ್ಚೆ ನಡೆಯುತ್ತಿದೆ ಕರ್ನಾಟದಕವರ ಶಾಂತ ಸ್ವಭಾವವನ್ನು ಯಾರೂ ಕೂಡ ದುರ್ಬಳಕೆ ಮಾಡಿಕೊಳ್ಳಬಾರದು ಒಕ್ಕೂಟ ವ್ಯವಸ್ಥೆಯಲ್ಲಿ ನಾವು ಈ ದೇಶವನ್ನು ಪ್ರೀತಿಸುವ ಜನ, ನೆಲ ಜಲಗಳ ಪ್ರಶ್ನೆ ಬಂದಾಗ ನಮ್ಮನ್ನು ವಿಶೇಷವಾಗಿ ಪರಿಗಣಿಸಬೇಕಾದ ಅವಶ್ಯಕತೆಯಿದೆ ಹೀಗಾಗಿ ಕೇಂದ್ರ ಸರ್ಕಾರ ಮಧ್ಯಪ್ರವೇಶ ಮಾಡಿ ಮೂರ್ನಾಲ್ಕು ರಾಜ್ಯಗಳನ್ನು ಸೇರಿಸಿ ತೀರ್ಮಾನ ಮಾಡಬೇಕಾಗುತ್ತದೆ ಹಿಂದಿನ ವಾಜಪೇಯಿ ಸರ್ಕಾರ ಈ ಬಗ್ಗೆ ಪರಿಗಣಿಸಲಿಲ್ಲ ಎಂದು ಹೇಳಿದರು ಆ ಸರ್ಕಾರ ದೇಶದ ಜಲನೀತಿ ರೂಪಿಸುವ ಸನ್ನಾಹದಲ್ಲಿತ್ತು ಗಂಗಾನದಿಯನ್ನು ಕಾವೇರಿಗೆ ಜೋಡಿಸುವ ಬಹಳ ದೊಡ್ಡ ಯೋಜನೆ ಇನ್ನೇನು ಕಾರ್ಯಗತವಾಗುತ್ತದೆ ಅನ್ನುವುದರೊಳಗೆ ಅವರ ಸರ್ಕಾರ ಹೋಯಿತು ಈ ಹಿನ್ನೆಲೆಯಲ್ಲಿ, ಅಂದು ವಾಜಪೇಯಿ ಸರ್ಕಾರ ಆಲೋಚನೆ ಮಾಡಿತ್ತು ಆದರೆ ಅದನ್ನು ಜಾರಿಗೆ ತರಲು ಸಾಧ್ಯವಾಗಲಿಲ್ಲ, ಅದಕ್ಕೆ ಇತಿಮಿತಿಗಳಿದ್ದವು, ಜನತಂತ್ರ ವ್ಯವಸ್ಥೆಯಡಿ ಚುನಾವಣೆಯಲ್ಲಿ ಅಧಿಕಾರಕ್ಕೆ ಬರಬಹುದು ಇಲ್ಲದಿರಬಹುದು, ಆದರೆ ಈ ದೇಶದ ಸರ್ಕಾರ ವಿವೇಚನೆಯಿಂದ ಯೋಚನೆ ಮಾಡುವ ಅವಶ್ಯಕತೆ ಇದೆ ಎಂಬುದು ನನ್ನ ಅಭಿಪ್ರಾಯ ಹಾಗಾಗಿ 5 2 2007 ರ ಕಾವೇರಿ ನ್ಯಾಯಾಧೀಕರಣದ ತೀರ್ಮಾನದ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಇಡೀ ದೇಶಕ್ಕೆ ಜಲ ನೀತಿ ರೂಪಿಸಿ ಅಂತರ್ ರಾಜ್ಯ ನದಿ ವಿವಾದಗಳನ್ನು ಆ ನೀತಿಯ ಕೆಳಗೆ ಅಥವಾ ಪರಸ್ಪರ ಸಹಕಾರದೊಡನೆ ಇತ್ಯರ್ಥ ಮಾಡುವವರೆಗೆ ಖಂಡಿತವಾಗಿಯೂ ಈ ಆದೇಶವನ್ನು ಜಾರಿಗೆ ಕೊಡುವಂಥದ್ದನ್ನು ತಡೆಹಿಡಿಯಬೇಕಾಗುತ್ತದೆ ಈ ರೀತಿಯ ಒಂದು ನಿರ್ಣಯವನ್ನು ನಾವು ಕರ್ನಾಟಕ ರಾಜ್ಯದ ಶಾಸನಸಭೆಯಲ್ಲಿ ತೆಗೆದುಕೊಳ್ಳತಕ್ಕ ಅವಶ್ಯಕತೆ ಇದೆ ಅದುದರಿಂದ ಕೇಂದ್ರದ ಮೇಲೆ ಕೂಡ

ಇದರ ಒಂದು ಒತ್ತಡವನ್ನು ಎಲ್ಲ ರೀತಿಯಿಂದ ತರತಕ್ಕ ಅವಶ್ಯಕತೆ ಇದೆ ಒಟ್ಟಾರೆ ನಮ್ಮ ಚರ್ಚೆ ಬಹಳ ಆರೋಗ್ಯಪೂರ್ಣವಾಗಿ ನಡೆದಿದೆ ಎಂದು ನಾನು ಭಾವಿಸುತ್ತೇನೆ ಇವತ್ತು ಕರ್ನಾಟಕ ರಾಜ್ಯದಲ್ಲಿ ಎಲ್ಲೂ ಕೂಡ ಒಂದು ಅಪಸ್ವರವೂ ಕೂಡ ಬಾರದೇ ಇದ್ದಂಥ ರೀತಿಯಲ್ಲಿ ನಮ್ಮ ಎಲ್ಲ ಪಕ್ಷಗಳೂ ಒಂದೇ ರೀತಿಯಿಂದ ನಾವು ವಿಚಾರವನ್ನು ತೆಗೆದುಕೊಂಡು ಹೋಗಿದ್ದೇವೆ ಕರ್ನಾಟಕ ರಾಜ್ಯಕ್ಕೆ ಅನ್ಯಾಯವಾಗುವಂಥದ್ದನ್ನು ನಾವು ಎಲ್ಲಿಯೂ ಕೂಡ ಸಹಿಸುವುದಿಲ್ಲ ಇದು ಕೇವಲ ರೈತರ ಮಾತಲ್ಲ ರೈತರಿಗೆ ಬೆಳೆ ಹಾನಿಯಾಗುತ್ತದೆ, ಎಂಬ ವಿಚಾರ ಮಾತ್ರವಲ್ಲ ಕುಡಿಯುವ ನೀರಿನಿಂದ ಹಿಡಿದು ಇಲ್ಲಿಯ ಅಭಿವೃದ್ಧಿಯ ದೃಷ್ಟಿಯಿಂದ ಎಲ್ಲ ದೃಷ್ಟಿಯಿಂದಲೂ ಕೂಡ ವ್ಯಾಪಕವಾಗಿ ಕರ್ನಾಟಕದ ಅಭಿವೃದ್ಧಿಯ ದೃಷ್ಟಿಯಿಂದ ನಾವು ಆಲೋಚನೆಯನ್ನು ಮಾಡಬೇಕಾಗುತ್ತದೆ ಈ ಹಿನ್ನೆಲೆಯಲ್ಲಿ ಬಹುಶ ಕೇಂದ್ರ ಸರ್ಕಾರ ಇದನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ ಪಾರ್ಲಿಮೆಂಟಿನ ನಮ್ಮ ಸದಸ್ಯರುಗಳು ಕೂಡ ಅಲ್ಲಿ ಪ್ರತಿಭಟನೆ ಮಾಡಿದ್ದಾರೆ, ಧರಣಿ ಮಾಡಿದ್ದಾರೆ ಪಾರ್ಲಿಮೆಂಟಿನಲ್ಲಿ ಕೂಡ ಸಾಕಷ್ಟು ದೊಡ್ಡ ರೀತಿಯಿಂದ ಪ್ರತಿಭಟನೆ ಮಾಡಿದ್ದಾರೆ ಈ ಎಲ್ಲದರ ಹಿನ್ನೆಲೆಯಲ್ಲಿ ವರದಿ ತರಿಸಿ ನಮಗೆ ನ್ಯಾಯ ದೊರಕುವವರೆಗೆ ಈ ಆದೇಶವನ್ನು ಯಾವುದೇ ಕಾರಣಕ್ಕಾಗಿ ಜಾರಿಗೆ ಕೊಡಬಾರದು ಮತ್ತು ಅದನ್ನು ಜಾರಿಗೆ ಕೊಟ್ಟಾಗ ನಾವು ಅದು ಜಾರಿಯಾಗಲಿಕ್ಕೆ ಖಂಡಿತವಾಗಿಯೂ ಒಪ್ಪುವುದಿಲ್ಲ ಎನ್ನುವಂಥ ಒಕ್ಕೊರಲಿನ ನಿರ್ಣಯ ಶಾಸನಸಭೆಯಲ್ಲಿ ಆಗಬೇಕೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ ರಾಜ್ಯದ ಮಹಾ ಜನತೆಗೆ ನಾನು ಶಾಸಕನಾಗಿ ಅಭಿನಂದಿಸುತ್ತೇನೆ ಏಕೆಂದರೆ ಇಷ್ಟೆಲ್ಲ ಆದಾಗಲೂ ಕೂಡ ಯಾವುದೇ ಪ್ರಾಣ ಹಾನಿ, ಆಸ್ತಿ ಹಾನಿ ಯಾವುದೂ ಕೂಡ ಆಗದೇ ಇರುವ ರೀತಿಯಲ್ಲಿ ಜನತಂತ್ರ ವ್ಯವಸ್ಥೆಯಲ್ಲಿ ಪ್ರತಿಭಟನೆಯನ್ನು ಜನ ಜೀವನ ತೀರಾ ಅಸ್ತವ್ಯಸ್ತ ಆಗದೇ ಇದ್ದ ರೀತಿಯಲ್ಲಿ ನಮ್ಮ ಭಾವನೆಗಳನ್ನು ವ್ಯಕ್ತಮಾಡುತ್ತಿದ್ದೇವೆ ಇವತ್ತು ಕೂಡ ಅದು ನಡೆಯುತ್ತಿದೆ ಬೇರೆ ಬೇರೆ ವರ್ಗದ ಎಲ್ಲ ಸ್ತರದ ಜನರು ಕೂಡ ಎದ್ದು ನಿಂತು ಈ ಹೋರಾಟಕ್ಕೆ ಬೆಂಬಲವನ್ನು ವ್ಯಕ್ತಪಡಿಸುತ್ತಿದ್ದಾರೆ ಹಳ್ಳಿಯಿಂದ ದೆಹಲಿಯವರೆಗೆ ಈ ಹೋರಾಟ ಅವ್ಯಾಹತವಾಗಿ ನಡೆಯುತ್ತಿದೆ ಹೀಗಾಗಿ ಈ ಒಕ್ಕೂಟದ ವ್ಯವಸ್ಥೆಗೆ ಭಂಗ ಬರದೇ ಇದ್ದ ರೀತಿಯಲ್ಲಿ ಈ ದೇಶವನ್ನು ಪ್ರೀತಿಸತಕ್ಕ ಕರ್ನಾಟಕ ರಾಜ್ಯದ ಜನರ ಮನಸ್ಸಿನಲ್ಲಿ ಒಂದು ಕಳಂಕ ಬೇರೂರುವಂಥ ರೀತಿಯಲ್ಲಿ ಆಗದೇ ಒಂದು ಸಮಂಜಸವಾಗಿ ಇದು

ಇತ್ಯರ್ಥ ಆಗಬೇಕೆನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ ಒಂದು ಒಳ್ಳೆಯ ನಿರ್ಣಯವನ್ನು ಈ ಶಾಸನಸಭೆ ತೆಗೆದುಕೊಂಡು ಇವತ್ತು ಆದ ಚರ್ಚೆಯನ್ನು ಕೇಂದ್ರ ಸರ್ಕಾರ ಗಮನಿಸಬೇಕು ತಮಿಳುನಾಡಿನ ಸರ್ಕಾರವೂ ಕೂಡ ಇದನ್ನು ಗಮನಿಸಿ ಯಾವುದಾದರೂ ಒಂದು ಕಡೆ ರಾಜಿ ಪ್ರಯತ್ನಕ್ಕೆ ಅದು ಕೂಡ ಬರುವಂಥ ವ್ಯವಸ್ಥೆಯಾಗಬೇಕು ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ ನದಿ ಹುಟ್ಟುವಂಥ ಭೂ ಭಾಗದಲ್ಲಿ ನಾವಿದ್ದೇವೆ ಹಾಗಾಗಿ ಈ ಭಾಗಕ್ಕೆ ಅನ್ಯಾಯವನ್ನು ಮಾಡಿ ಇನ್ಯಾವುದೋ ಒಂದು ಭಾಗಕ್ಕೆ ನ್ಯಾಯ ದೊರಕಿಸುತ್ತೇವೆನ್ನುವುದು ಖಂಡಿತವಾಗಿಯೂ ಸಲ್ಲದು ವಿಶೇಷವಾಗಿ ನಮ್ಮ ಹಿಂದಿನ ಎಲ್ಲ ಸರ್ಕಾರಗಳೂ ಕೂಡ ಇದರ ಬಗ್ಗೆ ಕಾಳಜಿಯನ್ನು ವಹಿಸಲಿಲ್ಲ ಎನ್ನುವಂಥದ್ದನ್ನು ಅನೇಕ ಸಾರಿ ಹೇಳಿದೆ ಏಕೆಂದರೆ ಅಣೆಕಟ್ಟನ್ನು ಕಟ್ಟಿದ್ದೇವ ಅಚ್ಚುಕಟ್ಟನ್ನು ನಿರ್ಮಾಣ ಮಾಡಿಕೊಳ್ಳಲಿಲ್ಲ ಇವತ್ತು ಸಾಕಷ್ಟು ಅಚ್ಚುಕಟ್ಟನ್ನು ನಿರ್ಮಾಣ ಮಾಡಿಕೊಂಡಿದ್ದರೆ ಆ ಅಚ್ಚುಕಟ್ಟನ್ನು ಪರಿಗಣನೆಗೆ ತೆಗೆದುಕೊಳ್ಳದೇ ತೀರ್ಪನ್ನು ಕೊಡಲಿಕ್ಕೆ ಸಾಧ್ಯವಾಗುತ್ತಿರಲಿಲ್ಲ ಆದರೆ ನಾವು ಒಂದೊಂದು ನದಿಯ ಡ್ಯಾಮನ್ನು ಕಟ್ಟುವಾಗಲೂ ಕೂಡ 15–20 ವರ್ಷಗಳನ್ನು ಕಳೆದಿದ್ದೇವೆ ಇವತ್ತು ಕೃಷ್ಣಾ ಬೇಸಿನ್‌ನಲ್ಲಿ ನಾವು ಎಷ್ಟು ವರ್ಷದಿಂದ ಕೆಲಸ ಮಾಡುತ್ತಿದ್ದೇವೆಂದು ನೋಡುತ್ತಿದ್ದೇವೆ ಯಾವುದೋ ಒಂದು ಬದ್ಧತೆ ಇಲ್ಲದೇ ಇದ್ದ ರೀತಿಯಲ್ಲಿ ನಾವೆಲದಲೋ ಒಂದು ಕಡೆ ಹೋಗುತ್ತಿದ್ದೇವೆಂದು ಹೇಳಿ ನಮಗೆ ನಾವೇ ಆತ್ಮಾವಲೋಕನ ಮಾಡಿಕೊಳ್ಳತಕ್ಕ ಸಂದರ್ಭವೂ ಕೂಡ ಇದು ಆಗಿದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಅಭಿನಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ

ಶ್ರೀ ಎಸ್ ಎಸ್ ಪಾಟೀಲ್ (ಮುಂಡರಗಿ) ಮಾನ್ಯ ಅಧ್ಯಕ್ಷರೇ, "ಕಾಗೆ ಒಂದು ಅಗುಳ ಕಂಡರೆ ಕರೆಯದೆ ತನ್ನ ಬಳಗವನ್ನೆಲ್ಲ, ಕೋಳಿ ಒಂದು ಗುಟುಕ ಕಂಡರೆ ಕರೆಯದೆ ತನ್ನ ಕುಲವನ್ನೆಲ್ಲವ, ಶಿವಭಕ್ತನಾಗಿ ಭಕ್ತಿ ಪಕ್ಷವಲ್ಲದಿದ್ದರೆ ಆ ಕಾಗೆ ಕೋಳಿಗಳಿಗಿಂತ ಕರ ಕಷ್ಟ ಕೂಡಲ ಸಂಗಮದೇವ" ಬಸವಣ್ಣನವರು ಹೇಳಿದ ಈ ಮಾತನ್ನು ಇವತ್ತು ನಾವೆಲ್ಲ ನೆನೆಸಿಕೊಳ್ಳಬೇಕಾಗಿದೆ ನಮ್ಮದು ಒಕ್ಕೂಟ ವ್ಯವಸ್ಥೆ ಈ ದೇಶದಲ್ಲಿರುವ ಎಲ್ಲ ಸ್ವತ್ತು ನಾವು ಸಮನಾಗಿ ಹಂಚಿಕೊಂಡು ಉಣ್ಣಬೇಕು ಅದನ್ನೇ ಶರಣರು ಹೇಳುತ್ತಾರೆ ಆ ಕಾಗೆ ಕೋಳಿಗಳಿಗಿಂತ ನಾವು ಈಗ ಕೆಟ್ಟವರಾಗಿದ್ದೇವೆ

ಒಂದು ಕಾಗೆ ನಾವ್ಯಾರೂ, ಅದರತ್ತ ಲಕ್ಷ್ಯ ಹಾಕುತ್ತಿಲ್ಲ ಶರಣರು ಅದನ್ನು ಕಂಡುಕೊಂಡಿದ್ದಾರೆ ಒಂದು ಕಾಗೆಗೆ ಒಂದು ಸಣ್ಣ ಆಹಾರ ಎಲ್ಲಿಯಾದರೂ ಸಿಕ್ಕಿದರೆ ಕಾ ಕಾ ಎಂದು ಕರೆದು ಎಲ್ಲರನ್ನೂ ಕೂಡಿಕೊಂಡು ಉಣ್ಣುತ್ತದೆ ನೋಡಿ, ಹೇಗೆ ಉದಾ ಗೆ ಹೇಳುತ್ತಾರೆ ಅದೇ ರೀತಿ ಒಂದು ಕೋಳಿ ಎಂದೂ ತಾನೊಂದೇ ತಿನ್ನುವುದಿಲ್ಲ ಎಲ್ಲಿಯಾದರೂ ಆಹಾರ ಸಿಕ್ಕಿದರೆ ಕೊ ಕೊ ಎಂದು ಎಲ್ಲರನ್ನು ಕರೆದು ಎಲ್ಲ ಕೋಳಿಗಳನ್ನು ಕೂಡಿಸಿಕೊಂಡು, ಅದು ಊಟವನ್ನು ಮಾಡುತ್ತದೆ ಆದರೆ ಅದು ಮಾನವರಲ್ಲಿ ಹೋಗಿದೆ ಅದಕ್ಕೆ ಈ ನ್ಯಾಯ ನನಗೆ ಸಿಕ್ಕಿದ್ದು ಸಿಕ್ಕಿತು, ನಾನು ಹೊಡೆದುಕೊಂಡರೆ ಆಯಿತು, ಇನ್ಯಾರೋ ಹಾಳಾದರೇನು, ಸತ್ತರೇನು ಎನ್ನುವ ಲೆಕ್ಕ ಇವತ್ತು ಈ ಒಂದು ತೀರ್ಪಿನಿಂದ ನಮಗೆ ಕಾಣುತ್ತದೆ ಬಸವಣ್ಣನವರು ಒಂದು ಕಡೆ ಹೇಳುತ್ತಾರೆ 'ನ್ಯಾಯ ನಿಷ್ಠುರ ದಾಕ್ಷಿಣ್ಯ ಪರ ನಾನಲ್ಲಯ್ಯ' ಎಂದು ಹೇಳುತ್ತಾರೆ Judgment ಕೊಡುವವರು ಯಾವುದೇ ದಾಕ್ಷಿಣ್ಯಕ್ಕೆ ಒಳಗಾಗಬಾರದು Judgment ಬರೆಯತಕ್ಕ Judgesಗಳು ಯಾವುದೇ ದಾಕ್ಷಿಣ್ಯಕ್ಕೆ ಒಳಗಾಗಬಾರದು ಯಾವುದೇ ರಾಗ ದ್ವೇಷಗಳು ಅವರ ತಲೆಯಲ್ಲಿರಬಾರದು ಬಹುಶ ಹಾಗೆ ಇರುತ್ತಾರೆ ಎಂದು ತಿಳಿದುಕೊಂಡು ಈ ನ್ಯಾಯ ಮಂಡಳಿಯನ್ನು ನಾವು ನಂಬಿದ್ದೇವೆ ಇವರಿಗೆ ಯಾವ ರಾಗ ದ್ವೇಷವಿಲ್ಲ ಇವರೆಲ್ಲ ದಾಕ್ಷಿಣ್ಯ ಪರ ಅಲ್ಲ, ನ್ಯಾಯವಾಗಿ judgment ಅನ್ನು ಬರೆಯುತ್ತಾರೆಂದು ತಿಳಿದುಕೊಂಡು ನಾವೆಲ್ಲ ಒಪ್ಪಿದ್ದೇವೆ ಆದರೆ ಈ judgment ಅನ್ನು ಅವರು ಬರೆದಿರುವುದು ನೋಡಿದರೆ ನಮ್ಮ ನಿರೀಕ್ಷೆ ತಪ್ಪಾಗಿದೆ ಎಂದು ಅನಿಸುತ್ತದೆ ಬಹುಶ, ಪ್ರಜಾವಾಣಿ ಪತ್ರಿಕೆಯಲ್ಲಿ ನಮ್ಮ ಜಗದೀಶ್ ಅವರು ಬಹಳ ಚೆನ್ನಾಗಿ ಬರೆದಿದ್ದಾರೆ ಇದನ್ನು ಓದಿದರೆ ನಿಜವಾಗಿ ಅವರು ಸಂಪೂರ್ಣವಾಗಿ ಎಲ್ಲ ತರಹದ ದಾಕ್ಷಿಣ್ಯಕ್ಕೆ ಒಳಗಾಗಿದ್ದಾರೆಂದು ಅನಿಸುತ್ತದೆ 'ಕಾವೇರಿ ನ್ಯಾಯ ಮಂಡಳಿ ಸದಸ್ಯರ ನಡವಳಿಕೆ ಆಕ್ಷೇಪಾರ್ಹ ಎನ್ನುವಂತಿದೆ ಉದಾ ಗೆ ವಾದ ಪ್ರತಿವಾದ ಮುಗಿದು ಇನ್ನೇನು ತೀರ್ಪು ನೀಡಬೇಕೆನ್ನುವ ಹಂತದಲ್ಲಿ ಇಬ್ಬರು ಸದಸ್ಯರು ಮತ್ತೆ ಪ್ರವಾಸ ಮಾಡಬೇಕೆಂದು ವ್ಯರ್ಥ ಪ್ರಯತ್ನ ಮಾಡಿದ್ದೂ ಕೂಡ ತಮಿಳುನಾಡಿನಲ್ಲಿ ಅವರಿಗೆ ಹಿಂದೆ ದೊರೆತ ಸ್ವಾಗತ ಹಾಗೂ ಅವರು ಪಡೆದ ಉಡುಗೊರೆ ಅವರನ್ನು ಸಂಶಯದಿಂದ ನೋಡುವಂತೆ ಮಾಡಿದೆ ಹಿಂದೆ ನಮ್ಮ ಸರ್ಕಾರವಿದ್ದಾಗ ನಾನು ಮಂತ್ರಿಮಂಡಲದಲ್ಲಿದ್ದಾಗ ಇಲ್ಲಿ ನಾವು

7/24

ಅವರಿಗೆ ವ್ಯವಸ್ಥೆಯನ್ನು ಸರಿಯಾಗಿ ಮಾಡಲಿಲ್ಲ ಇಲ್ಲಿ ಈ ಕಡೆ ವಿರೋಧ ಪಕ್ಷದವರಿದ್ದಾಗ ನಮ್ಮನ್ನು ಬಯ್ದಾಡಿದ್ದರು ಅವರಿಗೆ ಸರಿಯಾಗಿ ವ್ಯವಸ್ಥೆಯನ್ನು ಮಾಡದೇ ಇದ್ದುದರಿಂದ ಆ interim ನೀರು ಬಿಡುವುದರಲ್ಲೇ, ಆಗಲೇ ನಮ್ಮ ವಿರುದ್ಧ ತೀರ್ಪು ಆಯಿತು ತಮಿಳುನಾಡಿನವರು ಅದನ್ನು ಸ್ವಾಗತ ಮಾಡಿದರು ಅವರಿಗೆಲ್ಲ ಉಡುಗೊರೆಯನ್ನು ಕೊಟ್ಟರು ಇದರ ಮಧ್ಯೆ ಏನೇನೊ ವಿಚಾರ ಬಂದಿತ್ತು ಆ ಒಂದು ದೃಷ್ಟಿಯಿಂದ ಇದೆಲ್ಲ ಉಡುಗೊರೆ ತೆಗೆದುಕೊಂಡಿದ್ದು, ನೋಡಿದರೆ ಖಂಡಿತವಾಗಿಯೂ ಅವರು ರಾಗ ದ್ವೇಷ ಇಲ್ಲದಂತೆ ಅವರು ಇದ್ದಿಲ್ಲ ಎನ್ನುವುದೂ ಕೂಡ ಈ judgment ಅನ್ನು ಓದಿದರೆ ನಮಗೆ ಕಾಣಿಸುತ್ತದೆ ಇಲ್ಲಿ ಬಹುಶ ಆ ವೇಳೆಯಲ್ಲಿ ಒಂದು ಮಾತು ನಮಗೆ ದೇವೇಗೌಡರು ಹೇಳಿದ್ದರು 'ಕೋರ್ಟಿಗೆ ಹೋಗಿದ್ದರು, ಮಂಡಳಿಯ ಸದಸ್ಯರ ಈ ವರ್ತನೆಯನ್ನು ಪ್ರಶ್ನಿಸಿ ನ್ಯಾಯಾಲಯದ ಮೆಟ್ಟಿಲೇರಿದ್ದು ಕೂಡ ಕರ್ನಾಟಕ ಅವರ ಕೆಂಗಣ್ಣಿಗೆ ಗುರಿಯಾಗಲು ಕಾರಣ ತಪ್ಪು ಮಾಡಿದ್ದಾರೆ ಎಂದು ಇದನ್ನು ತೆಗೆದುಕೊಂಡು ಕೋರ್ಟಿಗೆ ಹೋದರೆ ಅದರಿಂದ ಕೂಡ ಅವರಿಗೆ ದ್ವೇಷ ಹುಟ್ಟಿತು ಎನ್ನುವುದು ಇಲ್ಲಿ ಬರೆಯುತ್ತಿದ್ದಾರೆ ಈ ರೀತಿ ಅವರು ಮಾಡಿದ್ದರೆ ಖಂಡಿತವಾಗಿಯೂ ಆ ನ್ಯಾಯ ಮಂಡಳಿಯವರದು ಬಹಳ ದೊಡ್ಡ ತಪ್ಪು ಆ ರೀತಿಯಾಗಿ ಅವರು ಮಾಡಿದ್ದರೆ ನಿಜವಾಗಿ ಅದು ತಪ್ಪು ವಾಟಾಳರೇ, ಇಲ್ಲಿ ಸ್ವಲ್ಪ ಕೇಳಿ ನಾವು ಕಾಗೆ ಗುಬ್ಬಿಗಿಂತ ಕಡೆಯಾಗಿದ್ದೇವೆ ಇದು ಏನಾಗಿದೆ ಮೊದಲಿನಿಂದ ಬಹುಶ ಇಲ್ಲಿ ನಾನು ನೋಡುತ್ತಿದ್ದೇನೆ, ಇಲ್ಲಿ ನಮ್ಮ ಕರ್ನಾಟಕ ಸರ್ಕಾರದವರು ನೀರಾವರಿ ಇಲಾಖೆಯವರು ಇದನ್ನು ನೋಡಿದ್ದೀರೊ ಇಲ್ಲವೋ ಗೊತ್ತಿಲ್ಲ ತಾವು ಇದನ್ನು ನೋಡಿರಬೇಕು ನಿಮ್ಮ ಇಲಾಖೆಯವರೇ ಇದೊಂದು ಜಲ ವಿವಾದ 'ನೀರಿಗೆ ಶತಮಾನದ ತೀರದ ಬವಣೆ' ಎನ್ನುವ ಒಂದು ಪುಸ್ತಕವನ್ನು ಹಿಂದೆ ಹೊರಡಿಸಿದ್ದಾರೆ ತಾವು ಇದನ್ನು ನೋಡಿರಬೇಕು ಇದು ತಮ್ಮ ಕಡೆಗೆ ಬಂದೇ ಇರುತ್ತೆ

ಶ್ರೀ ಜೆ ಸಿ ಮಾಧುಸ್ವಾಮಿ ಮಾನ್ಯ ಅಧ್ಯಕ್ಷರೇ, ಇವೆಲ್ಲವನ್ನೂ ನಾವು ಒಳಗಡೆ ಕೂತು ಮಾತನಾಡಿ confrontation ಆಗುವಂಥ ಚರ್ಚೆಯನ್ನು ಮಾಡಬಾರದು ಎಂದು ನಾವು ಸುಮ್ಮನೆ ಇದ್ದುದು ನಿಮ್ಮ ಮಾತನ್ನು ನಾವು ಕೇಳುತ್ತಿದ್ದೇವೆ ನೀವು ಅದನ್ನು ಕೇಳುತ್ತಿಲ್ಲ ಅಂದುಕೊಳ್ಳಬಾರದು ಅಧ್ಯಕ್ಷರು

ತಾವು ನಮಗೆ ಆದೇಶವನ್ನು ಕೊಟ್ಟಿರಿ ಟೀಕೆ ಮಾಡುವುದು, confront ಮಾಡುವುದನ್ನು ಕಡಿಮೆ ಮಾಡಿ ಎಂದು ಹೇಳಿದ್ದಕ್ಕೆ ನಾವು ಆ chapter ಅನ್ನು ಬಿಟ್ಟು ಮುಂದಕ್ಕೆ ಹೋದೆವು ಅಷ್ಟೆ

ಶ್ರೀ ಎಸ್ ಎಸ್ ಪಾಟೀಲ್ – ನಾನು ಮಾಡುತ್ತಿರುವುದು ಪೇಪರಿನಲ್ಲಿ ಬಂದಿದ್ದು ಇದೇನು ಟೀಕೆ, ಅಂಜಿಕೊಂಡು ಹೋಗೇ ನಮ್ಮ ಸ್ಥಿತಿ ಇಲ್ಲಗೆ ಬಂದಿದೆ ಪ್ರಸಂಗ ಬಂದರೆ ಇಲ್ಲಿ ಇನ್ನೂ ಒಂದು ವಿಚಾರವನ್ನು ಹೇಳಿ ಬಿಡುತ್ತೇನೆ ಕಡೆಗೆ ಇದನ್ನೂ ಓದಿ ಬಿಡುತ್ತೇನೆ ಆಮೇಲೆ ಓದ ಬೇಕು ಎಂದು ಅಂದುಕೊಂಡಿದ್ದೆ ಈಗಲೇ ಓದಿ ಬಿಡುತ್ತೇನೆ ಇಲ್ಲಿ ಒಬ್ಬ ಕವಿ ಬರೆಯುತ್ತಾರೆ "ಬೆಂಕಿ ಬಿದ್ದಿದೆ ಮನೆಗೆ, ಓ ಬೇಗ ಬನ್ನಿ, ಎದ್ದೋಡಿ ಬನ್ನಿ, ಎದ್ದೋಡಿ ಬನ್ನಿ ಕನ್ನಡ ಗಡಿ ಕಾಯೆ, ಜಲ ಕಾಯೆ, ನುಡಿ ಕಾಯೆ, ಕಾಯಲಾರೆನೋ, ತಾಯೇ ಬನ್ನಿ, ಬನ್ನಿ, ಎದ್ದೋಡಿ ಬನ್ನಿ, ಕನ್ನಡದ ಜಲ ಒಂದೇ, ನೆಲ ಒಂದೇ, ಬಲ ಒಂದೇ, ಜಯ ಒಂದೇ, ಛಲ ಒಂದೇ, ನಾಡನುಳಿಸುವದೊಂದೇ ಓಡಿ ಬನ್ನಿ, ಓ ಬೆಂಕಿ ಬಿದ್ದಿದೆ ಮನೆಗೆ, ಓಡಿ ಬನ್ನಿ" ಎಂದು ಒಬ್ಬ ಕವಿ ಹೇಳುತ್ತಾರೆ ಆ ಮಟ್ಟಕ್ಕೆ ಹೋಗುವಂತಹ ಪ್ರಸಂಗ ಬರುವುದು ಬಹುಶ ಬಹಳ ದೂರ ಇಲ್ಲ ಎಂದು ನನಗನ್ನಿಸುತ್ತದೆ ಆದ ಕಾರಣ ಇದು ಯಾವುದಕ್ಕೂ ನಾವು ಅಂಜಬೇಕಾಗಿಲ್ಲ ಇದರಲ್ಲಿ ಏನೂ ಟೀಕೆ ಮಾಡಬಾರದು, ಅವರಿಗೆ ಹೇಳಬಾರದು ಆ ಜಡ್ಜ್ ಮೆಂಟ್ ಓದಿದರೆ ಅನಿಸುತ್ತದೆ ಬಹುಶ ತಮಗೆ ಇದರಲ್ಲಿ ಅನಿಸಬಹುದು ತಾವು ನೋಡಿರಬೇಕು ಇದನ್ನೆಲ್ಲಾ ತಾವು ಓದಿರಬೇಕು ನಮ್ಮ ಶ್ರೀರಾಮ ರೆಡ್ಡಿಯವರು ಹೇಳಿದ ಹಾಗೆ ನಮ್ಮ ವಕೀಲರು ಚೆನ್ನಾಗಿ ವಾದವನ್ನು ಮಾಡಿದ್ದಾರೆ ಅದರಲ್ಲೇನೂ ಸಂಶಯವಿಲ್ಲ ವಕೀಲರು ಮಾಡಬೇಕಾದಂತಹ ಕೆಲಸವನ್ನೆಲ್ಲಾ ಮಾಡಿದರು ಸುಮ್ಮನೇ ನಾವು ವಕೀಲರ ಮೇಲೆ ಏನಾದರೂ ಒಂದು ಅನ್ನುವುದು ಆ ವಕೀಲರು ಹಾಗೆ ಮಾಡಿದರು, ಹೀಗೆ ಮಾಡಿದರು ಎನ್ನುವುದು ತಪ್ಪಾಗುತ್ತದೆ ಆದರೆ ಅವರು ರಾಗ ದ್ವೇಷಗಳನ್ನು ಇಟ್ಟುಕೊಂಡು ಕುಳಿತಿರುವವನು, ಜಡ್ಜ್‌ಮೆಂಟ್ ಹೀಗೆಯೇ ಬರೆಯಬೇಕೆಂದು ಕುಳಿತುಕೊಂಡಿರುವವನನ್ನು ನೀವು ಏನು ಮಾಡಬಹುದು? ಏನೂ ಮಾಡುವುದಕ್ಕೆ ಆಗುವುದಿಲ್ಲ ಯಾವ ಕಾಲಕ್ಕೂ ಏನೂ ಮಾಡುವುದಕ್ಕೆ ಆಗುವುದಿಲ್ಲ ಇಲ್ಲಿ ತಮಿಳುನಾಡು ಪೋಲು ಮಾಡುತ್ತಿರುವ ನೀರಿನ ವಿಚಾರವನ್ನು ಮಾನ್ಯ ಈಶ್ವರಪ್ಪನವರೇ ಪುಸ್ತಕದಲ್ಲಿ ಬರೆಯುತ್ತಾರೆ 340 ಟಿ ಎಂ ಸಿ ನೀರನ್ನು ತಮಿಳುನಾಡಿನವರು ಈಗ ಪೋಲು ಮಾಡುತ್ತಿದ್ದಾರಂತೆ

340 ಟಿಎಂಸಿ ನೀರು ಪೋಲಾಗುತ್ತದೆ ಅದು ಯಾರೂ ಹೇಳಿದ್ದಲ್ಲ ಕಾವೇರಿ ಸತ್ಯ ಶೋಧನಾ ಸಮಿತಿ ಹಾಗೂ ವಿಶ್ವ ಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮದ ವರದಿ ನೀಡಿರುವ ಮಾಹಿತಿಯ ಪ್ರಕಾರ, ತಮಿಳುನಾಡಿನಲ್ಲಿ 340 ಟಿಎಂಸಿ ನೀರು ವ್ಯರ್ಥವಾಗಿ ಸಮುದ್ರಕ್ಕೆ ಸೇರುತ್ತಿದೆ ವಿಶ್ವ ಸಂಸ್ಥೆಯವರು ಬಂದು ಅಧ್ಯಯನ ಮಾಡಿ ಹೇಳಿದಂತಹ ವರದಿ ಇದು ನೀರು ಎಲ್ಲೆಲ್ಲಿ ಹೋಗುತ್ತದೆ ಎಂದು ಕೂಡ ಅವರು ಹೇಳಿದ್ದಾರೆ ಕೊಲೆರೋಂ ಕೆಳ ಅಣೆಕಟ್ಟಿನಿಂದ ಹರಿದು ಹೋಗುವ ಹೆಚ್ಚುವರಿ ನೀರು 102 ಟಿಎಂಸಿ ಟೈಲ್ ಅಂಡ್ ರೆಗ್ಯುಲೇಟರ್ ಗಳಿಂದ ಆಗುವ ಸೋರಿಕೆ 88 ಟಿಎಂಸಿ ನದಿ ಮುಖದ ಭೂಮಿಯ ಅಂತರ್ಜಲ 150 ಟಿಎಂಸಿ ಇಷ್ಟು ನೀರು ಸೋರಿ ಹೋಗುತ್ತದಂತೆ ಇದನ್ನು ಉಳಿಸಿಕೊಳ್ಳಿ ಎಂದು ಅವರು ಹೇಳಿ ಹೋಗಿದ್ದಾರೆ ಇದನ್ನು ಉಳಿಸಿಕೊಳ್ಳಲು ಅವರು ಏಕೆ ಬೇಡ ಎನ್ನುತ್ತಾರೆ ಎನ್ನುವುದನ್ನು ಕೂಡ ಇದರಲ್ಲಿ ಹೇಳುತ್ತಿದ್ದಾರೆ "ಇದುವರೆಗೆ ಬಳಸಿಕೊಳ್ಳದಿದ್ದ ಈ ಜಲ ಸಂಪಲನ್ಮೂಲವನ್ನು ಸತತವಾಗಿ ಬಳಸಿಕೊಂಡಲ್ಲಿ ತಮಿಳುನಾಡು ಪೋಲು ಮಾಡಿಕೊಳ್ಳುತ್ತಿರುವ ಪ್ರಮಾಣವನ್ನು ಕಡಿಮೆ ಮಾಡುವುದು ಅಷ್ಟೇ ಅಲ್ಲದೇ, ಮಳೆ ನೀರನ್ನು ಜಲಾಶಯಗಳಿಗೆ ಸೇರಿಸುವುದರ ಮೂಲಕ ಪ್ರತಿ ವರ್ಷ ಮಳೆಯ ನೀರಿನ ಪ್ರಮಾಣವನ್ನು ಅವರು ಪೂರ್ಣವಾಗಿ ಬಳಸಿಕೊಳ್ಳಬಹುದು ಹಾಗೆ ಉಳಿಸಿದ ನೀರು ಮೇಲ್ಭಾಗದ ರಾಜ್ಯಗಳ ರೈತರ ಸಹಾಯಕ್ಕೆ ಒದಗಿದಂತಾಗುತ್ತದೆ ಆದರೆ ಇಂತಹ ಯೋಜನೆಯ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಳ್ಳಲು ಅಪಾರ ಹಣ ವ್ಯಯ ಆಗುತ್ತದೆ ಎಂಬ ನೆವದಿಂದ ತಮಿಳುನಾಡು ಈ ಜಲ ಸಂಪನ್ಮೂಲವನ್ನು ಬಳಸಿಕೊಳ್ಳಲು ತಯಾರಿಲ್ಲ" ಇದಕ್ಕೆ ಹೆಚ್ಚು ಖರ್ಚು ಬರುತ್ತದೆಂದು ಅವರು ಮಾಡಲಿಕ್ಕೆ ತಯಾರಿಲ್ಲ ಈ ರೀತಿಯಾಗಿ ಸುಮಾರು 340 ಟಿಎಂಸಿ ನೀರು ಇವತ್ತು ಸೋರಿ ಹೋಗುತ್ತಿದೆ ಎನ್ನುವ ಮಾತನ್ನು ಕೂಡ ಇದರಲ್ಲಿ ಬರೆಯುತ್ತಿದ್ದಾರೆ ಆಮೇಲೆ ಒಂದು ಮಾಹಿತಿಯ ಪ್ರಕಾರ 129 ಟಿಎಂಸಿ ಅಂತರ್ಜಲ ನೀರು ಇದೆ ಎಂದು ಹೇಳುತ್ತಿದ್ದಾರೆ ತಮಿಳುನಾಡಿನವರು ಇದನ್ನು ಈಗ 47 ಟಿಎಂಸಿ ಎಂದು ಒಪ್ಪಿಕೊಳ್ಳುತ್ತಿದ್ದಾರೆ ಆದರೆ ಈ ಅಧ್ಯಯನ ಹೇಳುತ್ತಿದೆ 129 ಟಿಎಂಸಿ ಅಂತರ್ಜಲ ನೀರು ತಮಿಳುನಾಡಿನಲ್ಲಿದೆ ಎಂದು ಇಲ್ಲಿ ಹೇಳುತ್ತಿದ್ದಾರೆ ಇದೆಲ್ಲವನ್ನೂ ಲೆಕ್ಕ ಹಾಕಿದರೆ ನಮ್ಮ ರಾಜ್ಯಕ್ಕೆ ಇಲ್ಲದ ಅನ್ಯಾಯ ಆಗಿದೆ ಆ ಕಾರಣದಿಂದ ನನಗೆ ಅನಿಸುತ್ತದೆ ಉಳಿದ ಎಲ್ಲ ವಿಚಾರವನ್ನು ಹೇಳಿದ್ದಾರೆ

ಸುಮ್ಮನೇ ಅದನ್ನೇ ನಾವು ತಿರುಗಾ ಮುರಗಾ ಹೇಳಿಕೊಳ್ಳುತ್ತಾ ಹೋದರೆ ಪ್ರಯೋಜನ ಇಲ್ಲ ನಾನು ಅದು ಯಾವುದನ್ನೂ ಹೇಳುವುದಕ್ಕೆ ಹೋಗುವುದಿಲ್ಲ ಎಲ್ಲರೂ ಕೂಡ ಹೋರಾಟ ಮಾಡಿದ್ದಾರೆ, ಬಹುಶ ಮಾನ್ಯ ವಾಟಾಳ್ ನಾಗರಾಜ್ ಅವರು ಅವತ್ತು ಹೋರಾಟ ಮಾಡಿದ ದಿವಸ ಇದನ್ನು ತರಬೇಕಾಗಿತ್ತು ಸರ್ಕಾರದವರು ನಿರ್ಣಯವನ್ನು ತರಬೇಕಾಗಿತ್ತು ಇವತ್ತು ನಾವು ವಿರೋಧ ಪಕ್ಷದವರು ಕೊಟ್ಟ ಮೇಲೆ, ಅದೂ ಬಹಳ ಗುದ್ದಾಡಿ, ಎಲ್ಲರೂ ಕೂಡಿ ಬಡಿದಾಡುವಂತಹ ಸ್ಥಿತಿ ಬಂತು ಆದರೆ ಇದನ್ನು ಮೊದಲನೆಯ ದಿವಸ ಮಾಡಬೇಕಾಗಿತ್ತು ಇದು ನೀವೇನೋ ಆಲ್ ಪಾರ್ಟಿ ಮೀಟಿಂಗ್ ನಲ್ಲಿ ಮಾಡಿ, ಎಲ್ಲೇ ಮಾಡಿ, ಆದರೆ ಅಧಿವೇಶನದಲ್ಲಿ ಆದ ತೀರ್ಮಾನಕ್ಕೆ ಇರುವ ಬೆಲೆ ಇನ್ನು ಯಾವುದಕ್ಕೂ ಬರಲಿಕ್ಕೆ ಸಾಧ್ಯವಿಲ್ಲ ಆ ಕಾರಣದಿಂದ ಇವತ್ತಾದರೂ ಸರ್ಕಾರದವರು ಒಪ್ಪಿ, ಈ ಒಂದು ನಿರ್ಣಯವನ್ನು ಒಪ್ಪಿಕೊಂಡಿದ್ದಕ್ಕೆ ಅಭಿನಂದನೆಗಳು ತಾವು ಸಹ ಆ ಭಾಗದಿಂದ ಬಂದವರು ತಮಗೆ ಏನೇ ಮನಸ್ಸಿದ್ದರೂ ಕೂಡ ಎಲ್ಲರನ್ನೂ ಕೇಳಿ ಮಾಡಬೇಕಲ್ಲ ತಮಗೆ ಮನಸ್ಸು ಇದ್ದರೂ ಅನಿವಾರ್ಯ ನೀವೇ ನೇರವಾಗಿ ನಿರ್ಣಯವನ್ನು ತೆಗೆದುಕೊಳ್ಳುವುದಕ್ಕೆ ಕಷ್ಟ ಆಗುತ್ತಿತ್ತು ತಮಗೆ ತೆಗೆದುಕೊಳ್ಳುವುದಕ್ಕೆ ಬರುತ್ತದೆ ಬರುವುದಿಲ್ಲವೆಂದಲ್ಲ ಮಾನ್ಯ ಈಶ್ವರಪ್ಪನವರು ಮನಸ್ಸು ಮಾಡಿ ನಿಜವಾಗಿ ಇವತ್ತಾದರೂ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದಾರೆ ಇದೆಲ್ಲಾ ವಿವರವಾಗಿ ಚರ್ಚೆ ಆಗಿದೆ ಆ ಕಾರಣದಿಂದ ಈ ಅನ್ಯಾಯ ಎಲ್ಲಿಂದ ಆಗಿದೆ ಎಂದು ಕೂಡ ಹೇಳುತ್ತಿದ್ದಾರೆ ಇದರಲ್ಲಿ ಅವು ಎಷ್ಟು ಕೆಟ್ಟಿದ್ದೇವೆ ಎಂದರೆ ಆ ಬ್ರಿಟಿಷರು ಕೂಡ ಹೋಗುವ ಮುಂದೆ ಈ ಮಹಾರಾಜರು ಸಾಮಂತ ಅರಸರ ಮೇಲೆ ವಿರೋಧ ಮಾಡಲಿಕ್ಕೆ ಈ ಮದ್ರಾಸನ್ನು ಹಿಡಿದುಕೊಂಡರು ಎಂದು ಬರೆಯುತ್ತಾರೆ ಆಮೇಲೆ ಮದ್ರಾಸ್ ಏನಾಗಿದೆ ಎಂದರೆ ಮೊದಲಿನಿಂದ ಅದಕ್ಕೆ ಮನ್ನಣೆ ಸಿಕ್ಕಿದೆ ಮಾನ್ಯ ನಿಜಲಿಂಗಪ್ಪನವರು A I C C President ಆದ ಮೇಲೆ, ಮಾನ್ಯ ದೇವೇಗೌಡರು ಪ್ರಧಾನ ಮಂತ್ರಿಗಳಾದ ಮೇಲೆ ದಕ್ಷಿಣ ಭಾರತದಲ್ಲಿ ಕರ್ನಾಟಕ ಇದೆ ಎಂದು ಗೊತ್ತಾಗಿದೆ ಇಲ್ಲದೇ ಇದ್ದರೆ, ನಾವು ಮೊದಲು ಸಣ್ಣವರಿದ್ದಾಗ ಅಲ್ಲಿಗೆ ಹೋದಾಗ ಬಹುಶ ದಕ್ಷಿಣ ಭಾರತ ಎಂದರೆ ಮದ್ರಾಸ್ ಎಂದು ಕೇಳುತ್ತಿದ್ದರು ನೀವೆಲ್ಲಿಂದ ಬಂದಿರಿ ಎಂದರೆ ಮದ್ರಾಸ್‌ನವರಾ ಎಂದು ಕೇಳುತ್ತಿದ್ದರು ಕರ್ನಾಟಕದ ಗುರುತೇ ಇರಲಿಲ್ಲ ತಮಗೆ ಗೊತ್ತಿದೆ ಮಾನ್ಯ ಈಶ್ವರಪ್ಪನವರೇ ಈ ಪರಿಸ್ಥಿತಿಯಲ್ಲಿ ಅವರದ್ದು

ಕೇಂದ್ರ ಸರ್ಕಾರದ ಮೇಲೆ ಯಾವಾಗಲೂ ಒತ್ತಡ ಇದ್ದೇ ಇದೆ ಮೊದಲಿನಿಂದಲೂ ಕೂಡ ಇದೆ ಹೀಗಾಗಿ ಇವತ್ತುಅವರ ಒಂದು ಹಿಡಿತ ಕೇಂದ್ರ ಸರ್ಕಾರದ ಮೇಲೆ ಇದೆ ಈಗಲೂ ಕೂಡ ಹಿಡಿತದಲ್ಲಿ ಜಾಸ್ತಿ ಇದ್ದಾರೆ ನಾವು ಏನು ಮಾತನಾಡಿದರೂ ಅಷ್ಟೇ ಇದ್ದುದರಲ್ಲಿ, ಮೊನ್ನೆ ನಮ್ಮವರು ಹೋದಾಗ ಮಾನ್ಯ ಪ್ರಧಾನ ಮಂತ್ರಿಗಳು ಖಂಡಿತವಾಗಿ ನಾನು ಅದನ್ನು ನೋಡುತ್ತೇನೆಂದು ಹೇಳಿದ್ದಾರೆ ಕನಿಷ್ಟ ಪಕ್ಷ ನಾವೆಲ್ಲರೂ ಹೋರಾಟ ಮಾಡಬೇಕು ಇದೀಗ ಎಲ್ಲರೂ ರಾಜೀನಾಮೆ ಕೊಡಬೇಕೆಂದು ಹೇಳಿದರು ನಾನು ರಾಜೀನಾಮೆ ಕೊಡುತ್ತೇನೆ, ನೀವು ಕೊಡಿ ಎನ್ನುವ ವಿಚಾರ ಬಂತು ಯಾರೂ ರಾಜೀನಾಮೆ ಕೊಡಬೇಕಾಗಿಲ್ಲ ಪ್ರಸಂಗ ಬಂದರೆ ನಾವು ಕೌನ್ಸಿಲ್ ಮೆಂಬರ್ಸ್ ಎಲ್ಲರೂ ಕೂಡಿ ದೆಹಲಿಯ ಪಾರ್ಲಿಮೆಂಟಿಗೆ ಹೋಗಿ ಕೂಡೋಣ ಏನೇ ಆಗುವುದು ಆಗಲಿ ಕೊನೆಯದಾಗಿ ನಾವು ಹೋರಾಟಕ್ಕೆ ನಿಲ್ಲುವವರೆಗೆ ಇದು ಆಗುವುದಿಲ್ಲ ಮತ್ತು ನನ್ನ ವೈಯಕ್ತಿಕ ಅಭಿಪ್ರಾಯ ಪ್ರಕಾರ ನ್ಯಾಯ ಮಂಡಲಿಯ ಮುಂದೆ ಅರ್ಜಿ ಹಾಕುವುದರಲ್ಲಿ ಯಾವ ಅರ್ಥ ಇದೆ? ಏನಾದರೂ ಮಾಡಿ ವಿಚಾರ ಮಾಡಿ ದಯವಿಟ್ಟು ಸುಪ್ರೀಂ ಕೋರ್ಟಿಗೆ ಹೋಗಿ ಕೊನೆಯದಾಗಿ ನಾವು ಮಾಡಿಕೊಳ್ಳುವುದು ಸರಿಯಾದೀತು ಎಂದು ನನ್ನ ಕೆಲವು ಅಭಿಪ್ರಾಯದ ಪ್ರಕಾರ ನಾನು ಮಾತನಾಡುವುದು ಆ ಕಾರಣದಿಂದ ನಾನು ಇದರ ಬಗ್ಗೆ ಹೆಚ್ಚು ಏನು ಮಾತನಾಡದೇ, ಇದರಲ್ಲಿ ಆಗತಕ್ಕ ಅನ್ಯಾಯದ ಬಗ್ಗೆ ಮಾತನಾಡುತ್ತಾ ಹೋದರೆ ಬಹುಶ ಮೂರು ದಿವಸ ಮಾತನಾಡಬಹುದು, ಅಷ್ಟು ಇದೆ ಮೊದಲಿನಿಂದಲೂ, ಮಹಾರಾಜರ ಕಾಲದಿಂದಲೂ ಅನ್ಯಾಯ ಮಾಡುತ್ತಾ ಹೋಗಿದ್ದಾರೆ ಮದ್ರಾಸ್ ನವರನ್ನು ಕೇಳಿಯೇ ನಾವು ಆಣೆಕಟ್ಟು ಕಟ್ಟಬೇಕು ಮದ್ರಾಸ್ ನವರನ್ನು ಕೇಳಿಯೇ ನಾವು ಎಷ್ಟು ನೀರು ಹೆಚ್ಚಿಗೆ ಮಾಡಬೇಕೋ, ಅಷ್ಟು ಹೆಚ್ಚಿಗೆ ಮಾಡಬೇಕು ಎಂದು ಬರೆದಿದ್ದಾರೆ ಇದೆಲ್ಲಾ 1894 ಮತ್ತು 1924ರ ಒಪ್ಪಂದ ಇದನ್ನು ನೋಡಿದರೆ ನಿಜವಾಗಿ ಬಹಳ ನೋವು ಎನಿಸುತ್ತದೆ ಆ ಒಪ್ಪಂದವೇ ನಮಗೆ ಇಲ್ಲಿಯವರೆಗೆ ಹೊಡೆತ ಕೊಟ್ಟಿದೆ ಆದರೆ ದುರ್ದೈವದಿಂದ ಈ ನ್ಯಾಯ ಮಂಡಳಿ ಆದರೆ ಅದೆಲ್ಲಾ ಹೋಗಿ ನಮಗೆ ನ್ಯಾಯ ಸಿಗುತ್ತದೆ ಎನ್ನುವ ದೃಷ್ಟಿಯಿಂದ ನಾವು ಪ್ರಯತ್ನ ಮಾಡಿದರೂ ಕೂಡ ಇಲ್ಲಿಯವರೆಗೂ ನಮಗೆ ನ್ಯಾಯ ಸಿಗಲಿಲ್ಲ ಆ ಕಾರಣದಿಂದ ನ್ಯಾಯದ ದೃಷ್ಟಿಯಿಂದ ಒಕ್ಕೊರಲಿನಿಂದ ರರಾವು ಮಾಡೋಣ ಅದು ಯಾವುದೇ ಹೋರಾಟಕ್ಕೆ ಕೂಡ ನಾವು

ಇಳಿಯಬೇಕಾಗಿದ್ದರೆ, ಅಂಧ ಹೋರಾಟ ಮಾಡೋಣ ಆ ರೀತಿಯಾಗಿ ಮಾಡೋಣ ಎಂದು ಹೇಳಿ ಬಹುಶ ರಾಜ್ಯದ ಜನತೆ, ಬಹುಶ ನಮ್ಮ ವಾಟಾಳ್ ನಾಗರಾಜ್ ಅವರು ಹೇಳಿದರು ಉತ್ತರ ಕರ್ನಾಟಕದವರು ಬೆಂಬಲ ನೀಡಿದರು ಎಂದು ಹೇಳಿದರು ಇಲ್ಲಿ ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕದ ಪ್ರಶ್ನೆ ಅಲ್ಲ ಇಲ್ಲಿ ಬಹುಶ ಇರುವುದು ಕರ್ನಾಟಕದ ನಮ್ಮೆಲ್ಲ ರೈತರ ಸಮಸ್ಯೆ ಬರೇ ಒಂದು ಕಾವೇರಿಯದಷ್ಟೇ ಅಲ್ಲ ಸಮಸ್ಯೆ ಬಹಳ ಗೊಂದಲದಲ್ಲಿದ್ದೇವೆ ಒಂದು ಕಡೆ ತುಂಗಭದ್ರಾ ಇನ್ನೊಂದು ಕಡೆ ಕೃಷ್ಣಾ, ಮಲಪ್ರಭಾ, ಮಹದಾಯಿ ಯಾವುದನ್ನೂ ಸರಳವಾಗಿ ಮಾಡಲು ನಮಗೆ ಬಿಡುತ್ತಿಲ್ಲ ಎಲ್ಲಾ ಸಂಪತ್ತು ಇದ್ದಂತಹ ರಾಜ್ಯ ಇದು ಆದರೆ ದುರ್ದೈವದಿಂದ ಅದನ್ನು ಬಳಕೆ ಮಾಡಿ ನಾವು ಉಣ್ಣುತ್ತೇವೆ ಎಂದರೆ ಅದನ್ನು ಉಣ್ಣುಗೊಡದ ಸ್ಥಿತಿ ನಮ್ಮ ಸುತ್ತಲಿನ ರಾಜ್ಯಗಳಿಂದ ಆಗುತ್ತಿದೆ ಸುತ್ತಲಿನ ರಾಜ್ಯಗಳು ಬಹಳ ತೊಂದರೆ ಕೊಡುತ್ತಿವೆ ಆ ಕಾರಣದಿಂದ ನಾವೆಲ್ಲರೂ ಹೋರಾಟ ಮಾಡಿ, ಇದಕ್ಕೆ ನ್ಯಾಯ ದೊರಕಿಸುವಂತಹ ಪ್ರಯತ್ನ ಮಾಡೋಣ ಎಂದು ಹೇಳಿ ತಮಗೆಲ್ಲಾ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ

2 ಮಂತ್ರಿಗಳ ಹೇಳಿಕೆ

ವಿಷಯ ಕೊಬ್ಬರಿಗೆ ನೀಡುತ್ತಿರುವ ಸಬ್ಸಿಡಿಯನ್ನು ಇನ್ನೂ 15 ದಿವಸ ಮುಂದುವರಿಸುವ ಬಗ್ಗೆ ಹೇಳಿಕೆ

ಶ್ರೀ ಕೆ ಎಸ್ ಈಶ್ವರಪ್ಪ (ಜಲಸಂಪನ್ಮೂಲಸಚಿವರು) ಮಾನ್ಯ ಅಧ್ಯಕ್ಷರೆ, ಈಗ ತಾನೇ ಮಾನ್ಯ ಮಾಧುಸ್ವಾಮಿಯವರು ಈ ಬೆಂಬಲ ಬೆಲೆಯ ಆಧಾರದ ಮೇಲೆ Nafed ಕೊಳ್ಳುತ್ತಿದ್ದ ಕೊಬ್ಬರಿಯ ಮೇಲೆ ರಾಜ್ಯ ಸರ್ಕಾರ ನೀಡುತ್ತಿರುವ ಪ್ರತಿ ಕ್ವಿಂಟಾಲ್‌ಗೆ 600 ರೂಪಾಯಿ ಸಬ್ಸಿಡಿ ಯೋಜನೆ ಇಂದಿಗೆ ಮುಗಿಯುವುದೆಂಬ ಆಧಾರದ ಮೇಲೆ ತುಂಬಾ ಪ್ರಮಾಣದಲ್ಲಿ ಕೊಬ್ಬರಿ ಮಾರುಕಟ್ಟಿಗೆ ಬರುತ್ತಿದೆ ಬಹಳ ಗಂಭೀರವಾದ ಪರಿಸ್ಥಿತಿಯಾಗಿದೆ ಎಂದು ಸಹ ಹೇಳಿದ್ದಾರೆ ಈ ಸಬ್ಸಿಡಿಯನ್ನು ಇನ್ನೂ 15 ದಿವಸ ಮುಂದುವರಿಸಬೇಕೆಂಬ ತೀರ್ಮಾನವನ್ನು ಸರ್ಕಾರ ತೆಗೆದುಕೊಂಡಿದೆ ಮುಂದಿನ ಅಂಶವನ್ನು ಗಮನಿಸಿ ಸಂಬಂಧಪಟ್ಟ ಮಂತ್ರಿಗಳು, ಉಪ ಮುಖ್ಯಮಂತ್ರಿಯವರ ಜೊತೆ ಚರ್ಚೆ ಮಾಡಿ ಮುಂದಿನ ತೀರ್ಮಾನವನ್ನು ತಿಳಿಸುತ್ತೇವೆ

3 ಅಧ್ಯಕ್ಷರ ಅಪ್ಪಣೆಯ ಮೇರೆಗೆ
ವಿಷಯ ಕಾವೇರಿ ನ್ಯಾಯ ಮಂಡಳಿಯ ತೀರ್ಪಿನ ಬಗ್ಗೆ
(ಮುಂದುವರಿದ ಚರ್ಚೆ)

ಶ್ರೀ ಹೆಚ್ ಸಿ ಮಹದೇವಪ್ಪ (ಟಿ ನರಸೀಪುರ) ಮಾನ್ಯ ಅಧ್ಯಕ್ಷರೆ, ನನಗೆ ಕಾವೇರಿ ವಿಚಾರದಲ್ಲಿ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನು ಸಲ್ಲಿಸಲು ಬಯಸುತ್ತೇನೆ ನಮ್ಮ ದೇಶ ಪರಕೀಯರ ಆಡಳಿತದಲ್ಲಿ ಇದ್ದಾಗ ಗಾಂಧೀಜಿಯವರ ನೇತೃತ್ವದಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಮೂಲಕ ತ್ಯಾಗ ಬಲಿದಾನಗಳನ್ನು ಮಾಡಿ ದೇಶಕ್ಕೆ ಸ್ವಾತಂತ್ರ್ಯವನ್ನು ತಂದುಕೊಟ್ಟರು ಸ್ವಾತಂತ್ರ್ಯದ ಮೂಲ ಉದ್ದೇಶ ದೇಶದಲ್ಲಿ ಕೋಮು ಸೌಹಾರ್ದತೆಯನ್ನು ಕಾಪಾಡಬೇಕು ಅಸ್ಪೃಶ್ಯತೆಯನ್ನು ನಿವಾರಿಸಬೇಕು ಮತ್ತು ದೇಶೀಯ ಪದ್ಧತಿಯ ಆಡಳಿತದ ಮೂಲಕ ದೇಶದ ಜನರು ಸಮೃದ್ಧತೆಯಿಂದ ಬದುಕುವುದಕ್ಕೆ ನಾವೆಲ್ಲರೂ ಕೂಡ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ಸ್ವಾತಂತ್ರ್ಯದ ಉದ್ದೇಶಗಳನ್ನು ಗಾಂಧೀಜಿಯವರು ನಮಗೆ ಹೇಳಿ ಹೋಗಿದ್ದಾರೆ ನೀರು ಒಂದು ರಾಷ್ಟ್ರೀಯ ಸ್ವತ್ತು ವ್ಯವಸಾಯ ಅಥವಾ ಕೃಷಿ, ಅದು ರಾಷ್ಟ್ರೀಯ ಕಸುಬು ರಾಷ್ಟ್ರೀಯ ಸ್ವತ್ತು ಮತ್ತು ರಾಷ್ಟ್ರೀಯ ಕಸುಬನ್ನು ಇಡೀ ದೇಶದ ಉದ್ದಗಲಕ್ಕೂ ಸಮಾನವಾಗಿ, ನ್ಯಾಯಸಮ್ಮತವಾಗಿ, ಹಂಚುವುದರ ಮುಖಾಂತರ ನಮ್ಮ ದೇಶೀಯ ಕಸುಬಾದ ವ್ಯವಸಾಯವನ್ನು ಎದುರಿಸುತ್ತಿರತಕ್ಕಂಥ ಕೃಷಿ ಕಾರ್ಮಿಕರ ಬದುಕನ್ನು ಹಸನುಗೊಳಿಸುವಂಥಾದ್ದು ದೇಶದ ಗಣತಂತ್ರದ ವ್ಯವಸ್ಥೆಯ ಮೂಲ ಉದ್ದೇಶ ಮತ್ತು ಕರ್ತವ್ಯವಾಗಿರಬೇಕು ಆ ಒಂದು ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಮಾಡುವುದರ ಮುಖಾಂತರ ನಾವು ಒಂದು ಬಲಿಷ್ಠ ರಾಷ್ಟ್ರದ ನಿರ್ಮಾಣಕ್ಕೆ ಕಾರಣೀಭೂತರಾಗಬೇಕು ರಾಜಕೀಯ ಪಕ್ಷಗಳು ಮತ್ತು ರಾಜಕಾರಣಿಗಳು ದೂರದೃಷ್ಟಿ ಇಟ್ಟುಕೊಂಡು ನಾವು ಇಡೀ ದೇಶದ ಕಸುಬನ್ನು ಮತ್ತು ರಾಷ್ಟ್ರೀಯ ಸ್ವತ್ತನ್ನು ಬಳಕೆ ಮಾಡುವಾಗ ಅದರ ಉಪಯೋಗ ಮಾಡುವಾಗ, ಬೆಳವಣಿಗೆ ಮಾಡುವಾಗ ಸಮತೋಲನದ ದೃಷ್ಟಿಕೋನ ಹೊಂದಿರಲೇಬೇಕಾಗುತ್ತದೆ ನಮ್ಮ ಸಂವಿಧಾನದ ಮೊದಲನೇ ಪುಟ ತೆಗೆದಾಗ ಅದರಲ್ಲಿ ಕಂಡಂಥ ಮೊದಲನೇ ವಾಕ್ಯ Justice ಅಂದರೆ, ನ್ಯಾಯ ಎಂತಹ ನ್ಯಾಯವೆಂದರೆ, ಸಾಮಾಜಿಕ ನ್ಯಾಯ ಇವತ್ತು ನಮ್ಮ ದೇಶದ ನ್ಯಾಯ ವ್ಯವಸ್ಥೆ ಬಗ್ಗೆ ನಾವೆಲ್ಲರೂ ನಂಬಿಕೆ, ಭರವಸೆ ಇಟ್ಟುಕೊಳ್ಳಬೇಕಾಗುತ್ತದೆ ಅದರ ಪ್ರಕಾರ ನಾವು

ನಡೆದುಕೊಳ್ಳಬೇಕಾಗುತ್ತದೆ ಸಂವಿಧಾನದ ಮೊದಲನೇ ಪುಟದ ಮೊದಲನೇ ವಾಕ್ಯ Justice ಎಂದು ಬರೆದ ನಂತರ, ಇವತ್ತಿನ ದಿವಸ ಕಾವೇರಿ ನ್ಯಾಯ ಮಂಡಳಿಯ ತೀರ್ಪು ನಮಗೆ ನ್ಯಾಯಸಮ್ಮತವಾಗದಿರುವುದರಿಂದ ಆ ನ್ಯಾಯವನ್ನು ನಾವು ಒಪ್ಪಿ ಗೌರವಿಸತಕ್ಕಂಥ ಪ್ರಜಾಪ್ರಭುತ್ವದ ಒಂದು ಪರಿಪಾಠ ಹೊಂದಿದ್ದರೂ, ನಮಗೆ ಅನ್ಯಾಯವಾದಾಗ ನಮ್ಮ ರಾಜ್ಯಕ್ಕೆ ಸಮತೋಲನವಾಗಿ ಹಂಚಿಕೆಯಾಗಬೇಕಾದಂಥ ರಾಷ್ಟ್ರೀಯ ಸ್ವತ್ತು ನೀರು ರಾಷ್ಟ್ರೀಯ ಕಸುಬಾದ ಕೃಷಿ ಬೆಳವಣಿಗೆ ಕುಂಠಿತವಾದಾಗ ನಮ್ಮ ಗಣತಂತ್ರದ ವ್ಯವಸ್ಥೆಯನ್ನು ಸಮಾನವಾಗಿ ಕಟ್ಟತಕ್ಕಂಥಾದ್ದಕ್ಕೆ ಒಂದು ದೊಡ್ಡ ಪೆಟ್ಟು ಕೊಟ್ಟಿದ್ದಾರೆ ಆ ಪೆಟ್ಟು ನಮ್ಮ ರಾಜ್ಯದ ಕಾವೇರಿ ನೀರಾವರಿ ಪ್ರದೇಶದ ಜನರಿಗೆ ನುಂಗಲಾರದ ತುತ್ತಾಗಿದೆ ಈ ನ್ಯಾಯವನ್ನು ಅನುಷ್ಠಾನಗೊಳಿಸುವುದಕ್ಕೆ ಅಥವಾ ಅದನ್ನು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಾಗದಿರುವಂಥ ಪರಿಸ್ಥಿತಿ ಮತ್ತು ಇದನ್ನು ಅನುಷ್ಠಾನಗೊಳಿಸುವುದಕ್ಕೆ ಕಷ್ಟವಾಗಿರುವ ಪರಿಸ್ಥಿತಿ ರಾಜ್ಯದ ಎಲ್ಲಾ ಜನರಿಗೂ ಕೂಡ ಮನವರಿಕೆಯಾಗಿರುವುದರಿಂದ ಇವತ್ತು ನಾವೆಲ್ಲರೂ ಸೇರಿ ಈ ತೀರ್ಪಿನ ಪ್ರಮುಖ ಅಂಶಗಳೇನಿವೆ, ಅಂದರೆ ಸುಮಾರು 740 tmcಯಷ್ಟು ನೀರು ನಮ್ಮ ರಾಜ್ಯದಿಂದ ಉತ್ಪಾದನೆಯಾಗುತ್ತದೆ Total availability 740 tmcಯಷ್ಟು ಸಿಕ್ಕಿದರೆ, ಅದರಲ್ಲಿ ಸುಮಾರು 392 tmcಯಷ್ಟು ನೀರು ನಮ್ಮ ರಾಜ್ಯದಿಂದ ಸಿಗುತ್ತದೆ ನಮಗೆ ಕೊಟ್ಟಿರತಕ್ಕಂಥಾದ್ದು 270 tmc ತಮಿಳುನಾಡಿನಲ್ಲಿ ಸಿಗುತ್ತಿರತಕ್ಕಂಥಾದ್ದು 232 tmc ಅವರಿಗೆ ಕೊಟ್ಟಿರುವುದು 419 tmc ಅಲ್ಲಿರತಕ್ಕಂಥ ಅಂತರ್ಜಲ ನೀರು 72 tmc, environment ಮತ್ತು ಸಮುದ್ರಕ್ಕೆ 14 tmc, ಕೇರಳಕ್ಕೆ ಕೊಟ್ಟಂಥ 21 tmc, ಒಟ್ಟಾರೆ ಸುಮಾರು 526 tmc ಈ ಅಂಶಗಳನ್ನು ನೋಡಿದಾಗ ನಮಗೆ ಸ್ಪಷ್ಟವಾಗಿ ಗೊತ್ತಾಗುವುದೇನೆಂದರೆ, ನ್ಯಾಯಮಂಡಳಿ ಈ ರಾಷ್ಟ್ರೀಯ ಸ್ವತ್ತಾದ ನೀರನ್ನು, ರಾಷ್ಟ್ರೀಯ ಕಸುಬಾದ ವ್ಯವಸಾಯವನ್ನು ಸಮಾನ ದೃಷ್ಟಿಕೋನದಿಂದ, ನ್ಯಾಯಸಮ್ಮತವಾಗಿ ವಿತರಿಸಬೇಕೆಂದು ಅವರ ಗಮನಕ್ಕೆ ಬಂದಿದ್ದೇ ಆಗಿದ್ದರೆ, ಈ ತರಹದ ತೀರ್ಮಾನಕ್ಕೆ, ನಿರ್ಧಾರಕ್ಕೆ ಅವರು ಬರುತ್ತಿದ್ದರೆಂದು ನನಗಂತೂ ಅನಿಸುವುದಿಲ್ಲ ಅದರ ಜೊತೆಗೆ, 22 ಲಕ್ಷ ಎಕರೆಯಲ್ಲಿ ನೀವು ಭತ್ತ ಬೆಳೆಯಬೇಕೆಂದು ತಮಿಳುನಾಡಿಗೆ ಹೇಳಿದ್ದಾರೆ ನಮಗೆ 7 ಲಕ್ಷಕ್ಕೆ ಅಲ್ಲಿಗೇ ನಿಲ್ಲಿಸಿದ್ದಾರೆ ಅವರನ್ನು ಸುಮಾರು 7 ಲಕ್ಷ

ಎಕರೆಯಲ್ಲಿ ಕಬ್ಬು ಬೆಳೆಯುವುದಕ್ಕೆ ಹೇಳಿದ್ದಾರೆ ನಮಗೆ 40 ಸಾವಿರಕ್ಕೆ ನಿಲ್ಲಿಸಿದ್ದಾರೆ ನಮ್ಮಲ್ಲಿ ಬೆಳೆದು ನಿಂತಿರುವ ಕಬ್ಬು ಸುಮಾರು ಒಂದು ಲಕ್ಷಕ್ಕೂ ಹೆಚ್ಚು ಎಕರೆಯಲ್ಲಿದೆ ಈ ಎಲ್ಲಾ ವಿಚಾರಗಳನ್ನೂ ಒಮ್ಮೆ ನೋಡಿದಾಗ, ಎಲ್ಲಾ ಹಿರಿಯ ಮಾನ್ಯ ಹಿರಿಯ ಸದಸ್ಯರು ಎಲ್ಲಾ ವಿಚಾರಗಳನ್ನು ಪ್ರಸ್ತಾಪಿಸಿದ್ದಾರೆ ನ್ಯಾಯಮಂಡಳಿಯ ಇಂತಹ ಒಂದು ತೀರ್ಪು ಸ್ವಾತಂತ್ರ್ಯದ ಉದ್ದೇಶಕ್ಕೆ ವಿರುದ್ಧವಾದುದಷ್ಟೇ ರಾಜ್ಯಾಂಗದ ಮೂಲ ಆಶಯ, ನ್ಯಾಯಕ್ಕೇ ವಿರುದ್ಧವಾಗಿರತಕ್ಕಂಥಾದ್ದು ಇವತ್ತು ರಷ್ಯಾ ಒಂದು mighty country ಗಣತಂತ್ರದ 'ಪೆರಸ್ಟ್ರೋಯ್ಕ' ಎಂಬ ಪದ್ಧತಿಯನ್ನು ಅಳವಡಿಸಿಕೊಂಡು ಇವತ್ತು ಒಂದು ಕಿಲೋಮೀಟರ್ ದೂರದಿಂದ ಬೆಡ್ ಕೊಂಡುಕೊಳ್ಳುವ ಪರಿಸ್ಥಿತಿ, ಬಂದು a mighty country like Russia has dis-integrated today ಗಣತಂತ್ರದ ವ್ಯವಸ್ಥೆಯಲ್ಲಿ ಎಲ್ಲಾ ರಾಜ್ಯಗಳೂ ಸರ್ವತೋಮುಖ ಸಮೃದ್ಧಿಯ ಬೆಳವಣಿಗೆ ಮಾಡತಕ್ಕಂಥ ತೀರ್ಮಾನವನ್ನು ನಮ್ಮ ರಾಜ್ಯಾಂಗದ ಎಲ್ಲಾ ವಿಭಾಗಗಳನ್ನೂ ಸರಿಯಾಗಿ ನೋಡಿಕೊಳ್ಳದೇ ಹೋದರೆ, ಈ ದೇಶದಲ್ಲಿ ಈಗಾಗಲೇ ಅಸಮಾನತೆಯ ಸಮಾಜ ಇದೆ ದೊಡ್ಡ ಪ್ರಜಾಪ್ರಭುತ್ವದ ದೇಶದಲ್ಲಿ ಅಸಮಾನತೆಯ ಸಮಾಜವನ್ನು ಈಗ ನೋಡುತ್ತಿದ್ದೇವೆ ಇಂತಹ ಅಸಮಾನತೆಯ ಸಮಾಜವನ್ನು ಸಮಾನತೆಯ ಸಮಾಜದ ಕಡೆಗೆ ಕೊಂಡೊಯ್ಯಬೇಕಾದರೆ, ರಾಜಕೀಯ ಪಕ್ಷಗಳ ದೃಷ್ಟಿಕೋನ ಸ್ಪಷ್ಟವಾಗಿ ಇರಬೇಕಾಗುತ್ತದೆ ನ್ಯಾಯಾಂಗದ ದೃಷ್ಟಿಕೋನ ಸಂವಿಧಾನದ ಮೊದಲನೇ ಪುಟದ ಕಡೆಗೆ ಹೋಗಬೇಕಾಗುತ್ತದೆ ಈ ತೀರ್ಮಾನ ಇವತ್ತು ನಮ್ಮ ರಾಜ್ಯಕ್ಕೆ ಮಾರಕವಾಗಿರತಕ್ಕಂಥ ತೀರ್ಮಾನವನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲದೇ ಇರತಕ್ಕಂಥ ಪರಿಸ್ಥಿತಿಯನ್ನು ಈ ನ್ಯಾಯಮಂಡಳಿ ಇವತ್ತು ದೇಶದಲ್ಲಿ ಸೃಷ್ಟಿಸಿರುವುದರಿಂದ ಕೇಂದ್ರ ಸರ್ಕಾರ ಮಧ್ಯೆ ಪ್ರವೇಶಿಸಲೇಬೇಕಾಗುತ್ತದೆ ನಾವೆಲ್ಲರೂ ಕೂಡ ಒಗ್ಗಟ್ಟಾಗಿ ನಿಂತು ನಮಗೆ ಆಗಿರತಕ್ಕಂಥ ಅನ್ಯಾಯವನ್ನು ಸರಿಪಡಿಸುವುದಕ್ಕೆ ಕೇಂದ್ರದ ಮೇಲೆ ಒತ್ತಾಯವನ್ನು ರಾಜಕೀಯವಾಗಿ ಮಾಡತಕ್ಕಂಥ ಪ್ರಯತ್ನ ಒಂದು ಕಡೆಯಾದರೆ, ನ್ಯಾಯದ ಸಮರವನ್ನು ಮತ್ತೊಂದು ಕಡೆ ಮಾಡಲೇಬೇಕಾಗುತ್ತದೆ ಇವತ್ತು ಕಬಿನಿಯಲ್ಲಿ backward classess, SC ಜನರೆಲ್ಲರೂ ಹೆಚ್ಚು ಸಂಖ್ಯೆಯಲ್ಲಿ ವಾಸಿಸುತ್ತಿದ್ದಾರೆ ನಾವು ಕೇಳಿದ್ದು ಸುಮಾರು 59 tmc, ಕೊಟ್ಟಿರುವುದು 12 tmc ವರುಣಾ ನಾಲೆಗೆ 10 tmc

ಕೇಳಿದ್ದರೆ, 59 tmc ಕೊಟ್ಟಿದ್ದಾರೆ ಬೆಂಗಳೂರಿಗೆ ಕುಡಿಯುವ ನೀರಿಗೆಂದು 30 tmc ಯಷ್ಟು ಅತ್ಯಂತ ಕಡಿಮೆ ಪ್ರಮಾಣದ ನೀರು ಕೊಟ್ಟಿದ್ದಾರೆ ಇಂತಹ ಅವೈಜ್ಞಾನಿಕ ತೀರ್ಮಾನಗಳು ಗಣತಂತ್ರದ ವ್ಯವಸ್ಥೆಗೆ ಮಾರಕವಾಗಿವೆ ಇವತ್ತು ದೇಶ ಕಂಡಂಥ ಕೋಲಾರ ಜಿಲ್ಲೆಯ ಕಂಬಾಲಪಲ್ಲಿಯಲ್ಲಿ 6 ಜನರನ್ನು ಜೀವಂತವಾಗಿ ಸುಟ್ಟಿರತಕ್ಕಂಥ ಘಟನೆ ಬಗ್ಗೆ ನ್ಯಾಯಾಲಯ ಖುಲ್ಲಾ ಮಾಡಿದೆಯೆಂದರೆ, ಈ ಸಂವಿಧಾನದ ಮೊದಲನೇ ಪುಟ ಯಾವ ರೀತಿ ಇದೆ ಎಂಬುದು ಗೊತ್ತಾಗುತ್ತದೆ ಈ ಸದನ ಕೂಡ ಅಂತಹ ವಿಚಾರಗಳನ್ನು ಎತ್ತಿಕೊಳ್ಳಬೇಕಾಗುತ್ತದೆ ಇದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ ಇವತ್ತು ನ್ಯಾಯಾಲಯದ ತೀರ್ಪಿನಿಂದ ರಾಜ್ಯದ ಅಭಿವೃದ್ಧಿಗೆ ಮಾರಕವಾಗಿದೆ, ಸ್ವಾತಂತ್ರ್ಯದ ಉದ್ದೇಶಕ್ಕೆ ವಿರುದ್ಧವಾಗಿದೆ ಇವತ್ತು ದೇಶದ ಮೂಲ ಕಸುಬಾದ ಕೃಷಿಯ ಸರ್ವತೋಮುಖ ಬೆಳವಣಿಗೆಗೆ ಮಾರಕವಾದ, ಕೃಷಿ ಮತ್ತು ಕೃಷಿ ಆಧಾರಿತ ಕೈಗಾರಿಕೆಗಳು ಮತ್ತು ಉದ್ಯೋಗ ನಶಿಸಿ ಹೋಗತಕ್ಕಂಥ ಪರಿಸ್ಥಿತಿಯಿಂದಾಗಿ ಇವತ್ತು ದೇಶದಲ್ಲಿರುವ ನಕ್ಸಲೀಯ ಚಳವಳಿ ಸಾಮಾಜಿಕ ಮತ್ತು ಆರ್ಥಿಕ ಬೆಳವಣಿಗೆಯ ಹಿನ್ನೆಲೆ ಹೊಂದಿವೆ ಸಾಮಾಜಿಕ, ಆರ್ಥಿಕ ಮತ್ತು ಔದ್ಯೋಗಿಕ ಬೆಳವಣಿಗೆಯಾಗಬೇಕಾದರೆ, ದೇಶೀಯ ಪದ್ಧತಿಗಳು ಬೆಳವಣಿಗೆ ಆಗಲೇಬೇಕಾಗುತ್ತದೆ ಅದಕ್ಕೋಸ್ಕರ, ಇವತ್ತು ನ್ಯಾಯಾಲಯ ಕೊಟ್ಟಿರುವ ತೀರ್ಪು ರಾಜ್ಯಕ್ಕೆ ಮಾರಕವಾಗಿದೆ ಇದನ್ನು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ, ಅನುಷ್ಠಾನಗೊಳಿಸುವುದಕ್ಕೆ ಸಾಧ್ಯವಿಲ್ಲ ನ್ಯಾಯಮಂಡಳಿಯು ಇದನ್ನು ಪುನರ್ ಪರಿಶೀಲಿಸುವುದಕ್ಕೆ ರಾಜ್ಯ ಸರ್ಕಾರ ಒತ್ತಾಯವನ್ನು ತಂದು ಈಗಾಗಲೇ ಕೇಂದ್ರದ ಮುಂದೆ ನಮ್ಮ ರಾಜ್ಯದ ಎಲ್ಲಾ ಲೋಕಸಭಾ ಸದಸ್ಯರು ಮತ್ತು ರಾಜ್ಯಸಭಾ ಸದಸ್ಯರುಗಳು ಪ್ರಧಾನಮಂತ್ರಿಗಳನ್ನು ಭೇಟಿ ಮಾಡಿದ್ದಾರೆ, ವಿಷಯ ಮನವರಿಕೆ ಮಾಡಿದ್ದಾರೆ ಕೇಂದ್ರದ ಜಲ ಸಂಪನ್ಮೂಲ ಖಾತೆ ಸಚಿವರು ಒಂದು ವರ್ಷ Notification ಮಾಡುವುದಿಲ್ಲವೆಂದು ಪತ್ರಿಕೆಗಳ ಮೂಲಕ ತಿಳಿಸಿದ್ದಾರೆ ಅನೇಕ ರಾಜ್ಯಗಳಲ್ಲಿ ಇಂತಹುದೇ ತೀರ್ಮಾನಗಳು ಬಂದು ಹತ್ತು ವರ್ಷಗಳಾದರೂ ಅನುಷ್ಠಾನಗೊಳಿಸುವುದಕ್ಕಾಗಿಲ್ಲ ಪಂಜಾಬ್ ಮತ್ತು ಹರಿಯಾಣದಲ್ಲಿ ಇಂತಹ ದೊಡ್ಡ ಹೋರಾಟಗಳು ನಡೆದವು 10 ವರ್ಷಗಳಲ್ಲಿ ಆರ್ಥಿಕ ಬೆಳವಣಿಗೆ ಏನು ಆಗಬೇಕಾಗಿತ್ತೋ, ಅದು ಕುಂಠಿತವಾಯಿತು, ಉದ್ಯೋಗ ನಷ್ಟವಾಯಿತು ಮತ್ತು ಜನಜೀವನ ಹಾಳಾಯಿತು ಇಂತಹ ಪರಿಸ್ಥಿತಿಗೆ ಅವಕಾಶ ಕೊಡದೇ, ಸಾಮಾಜಿಕ

ಬದಲಾವಣೆ ಮತ್ತು ಭಾರತದ ಪುನರ್ ನಿರ್ಮಾಣ ಅತ್ಯಂತ ಪ್ರಾಮುಖ್ಯವಾದ ಸಂಗತಿಯಾಗಿರುವುದರಿಂದ ದೇಶದ ಅಭಿವೃದ್ಧಿ ಬಹಳ ಮುಖ್ಯವಾಗಿ ರಾಷ್ಟ್ರೀಯ ಸಂಪತ್ತಾದ ಕೃಷಿಯ ಉತ್ಪಾದನೆಯು ರಾಷ್ಟ್ರೀಯ ಸಂಪನ್ಮೂಲವಾಗಿರುವುದರಿಂದ ದೇಶದ ಸ್ವಾವಲಂಬನೆ ಕೂಡ ಇಲ್ಲಿ ಅಡಕವಾಗಿರುವುದರಿಂದ ಇವತ್ತು ಕಾವೇರಿ ತೀರ್ಪಿನಿಂದ ಕರ್ನಾಟಕಕ್ಕೆ ಅನ್ಯಾಯವಾಗಿರುವುದರಿಂದ, ತೀರ್ಪನ್ನು ಪುನರ್ ಪರಿಶೀಲನೆ ಮಾಡಿ, ಕೇಂದ್ರ ಸರ್ಕಾರ 4 ರಾಜ್ಯಗಳ ಸಭೆ ಕರೆದು ಮಧ್ಯಸ್ಥಿಕೆ ವಹಿಸಿ, ಇದನ್ನು ಮಾತುಕತೆಗಳ ಮೂಲಕ ಇತ್ಯರ್ಥಗೊಳಿಸಬೇಕು 16 ವರ್ಷಗಳಲ್ಲಿ ನಡೆದ ವಿದ್ಯಮಾನಗಳನ್ನು ನೋಡಿದಾಗ, Tribunalನವರು ಹೇಳಿದ್ದಾರೆ, 12 ವರ್ಷಗಳಲ್ಲಿ ಯಾವುದೇ ವಿವಾದ ಇಲ್ಲದೇ ಅವರಿಗೆ ಬೇಕಾದಷ್ಟು ನೀರು ಹರಿದು ಹೋಗಿದೆ 4 ವರ್ಷಗಳಲ್ಲಿ ಮಳೆ ಇಲ್ಲದಿದ್ದಾಗ ಮಾತ್ರ ಅವರಿಗೆ ಬೇಕಾದಷ್ಟು ನೀರು ಕೊಡುವುದಕ್ಕಾಗಲಿಲ್ಲ ನಮಗೆ ಮಳೆ ಇಲ್ಲದಿದ್ದರೆ, ಅವರಿಗೆ ನೀರು ಕೊಡತಕ್ಕಂಥ ಪ್ರಶ್ನೆಯೇ ಬರುವುದಿಲ್ಲ 16 ವರ್ಷಗಳಲ್ಲಿ 12 ವರ್ಷಗಳು ಸಮರ್ಪಕವಾಗಿ ನೀರು ಹರಿದು ಹೋದನಂತರ, ಇಂತಹ ತೀರ್ಪು ರಾಜ್ಯದ ಮತ್ತು ದೇಶದ ಅಭಿವೃದ್ಧಿಗೆ ಮಾರಕವಾಗಿದೆ ಇದನ್ನು ನಾವು ವಿರೋಧಿಸುತ್ತೇವೆ ಇದನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ ರಾಜ್ಯ ಸರ್ಕಾರ ಉಗ್ರವಾಗಿ ಹೋರಾಟ ಮಾಡಿ ನಮ್ಮ ಹಕ್ಕನ್ನು ಉಳಿಸಿಕೊಳ್ಳುವುದಕ್ಕೆ ನಾವೆಲ್ಲರೂ ಕೂಡ ಪ್ರಯತ್ನ ಮಾಡಲೇಬೇಕಾಗಿದೆಯೆಂದು ನಾನು ಈ ಸಭೆಯ ಮೂಲಕ ಒತ್ತಾಯ ಮಾಡುತ್ತೇನೆ ಕಂಬಾಲಪಲ್ಲಿಗೆ ಸಂಬಂಧಿಸಿದಂತೆ ನ್ಯಾಯಾಲಯದ ತೀರ್ಪನ್ನು ಕೂಡ ಇವತ್ತು ಈ ಸಭೆ ಖಂಡಿಸಬೇಕಾಗುತ್ತದೆ ಅಥವಾ ಅದನ್ನು ವಿರೋಧಿಸಿ, ಸರ್ಕಾರ ಮತ್ತೆ ಅದನ್ನು ಪುನರ್ ಪರಿಶೀಲಿಸಿ, ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ ಇಷ್ಟು ಹೇಳಿ ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ

ಶ್ರೀ ಆರ್ ಧ್ರುವನಾರಾಯಣ್ (ಸಂತೇಮರಳ್ಳಿ) ಮಾನ್ಯ ಅಧ್ಯಕ್ಷರೆ, ಈಗಾಗಲೇ ಕಾವೇರಿ ನ್ಯಾಯಾಧಿಕರಣದ ತೀರ್ಪಿನ ಬಗ್ಗೆ ಹಿರಿಯ ಸದಸ್ಯರೆಲ್ಲರೂ ಸಲಹೆ, ಬೆಳಕನ್ನು ಚೆಲ್ಲಿದ್ದಾರೆ ನಿಜವಾಗಿಯೂ ಕಾವೇರಿ ನ್ಯಾಯಾಧಿಕರಣದ ತೀರ್ಪಿನ ಬಲಿಪಶುಗಳೆಂದರೆ ನಾವೇ ನಮ್ಮ ರೈತರೇ ಚಾಮರಾಜನಗರ, ಮೈಸೂರು, ಮಂಡ್ಯ ಜಿಲ್ಲೆಯ ಭಾಗದ ರೈತರು ಅದರಲ್ಲೂ ವಿಶೇಷವಾಗಿ ಚಾಮರಾಜನಗರ ಜಿಲ್ಲೆಯ ರೈತರು ನಿಜವಾದ

ಪಲಿಪಶುಗಳು ಏಕೆಂದರೆ, ನಾವು ಬಹಳ ಆಸೆಯನ್ನಿಟ್ಟುಕೊಂಡಿದ್ದೆವು ನಮಗಂತೂ ಇದುವರೆಗೆ ನೀರು ಸಿಕ್ಕಿಲ್ಲ ಈ ತೀರ್ಪಿನಿಂದ ಕಬಿನಿ 2ನೇ ಹಂತ ಜಾರಿಗೆ ಬರುತ್ತದೆ, ನಮ್ಮ ಪಾಲಿಗೆ ಇದು ವರದಾನವಾಗುತ್ತದೆ, ನಾವೆಲ್ಲರೂ ಕುಡಿಯುವ ನೀರಿನ ಸಮಸ್ಯೆಯಿಂದ ಇನ್ನಿತರೆ ಸಮಸ್ಯೆಗಳು ಬಗೆಹರಿಯುತ್ತದೆಂದು ಆಸೆಯನ್ನಿಟ್ಟುಕೊಂಡಿದ್ದೆವು ಆದರೆ, ಈ ಕಾವೇರಿ ನ್ಯಾಯಾಧಿಕರಣದ ತೀರ್ಪಿನಿಂದ ನಮಗೆ ನಿಜವಾಗಿಯೂ ಬಹಳ ಅನ್ಯಾಯವಾಗಿದೆ ನಮ್ಮೆಲ್ಲರ ಬದುಕು ಕಂಗಾಲಾಗತಕ್ಕ ಒಂದು ತೀರ್ಪಾಗಿದೆ ಆ ನಿಟ್ಟಿನಲ್ಲಿ ಸರ್ಕಾರ ಬಹಳ ಗಂಭೀರವಾಗಿ ಚಿಂತನೆ ಮಾಡಬೇಕಾಗಿದೆ ತೀರ್ಪು ಹೊರಗಡೆ ಬಂದು ಈಗಾಗಲೇ 38 ದಿವಸಗಳು ಕಳೆದಿದೆ ಎರಡು ಸಲ ಬಂದ್ ಆಗಿದೆ ಎರಡು ಸಲ ಸರ್ವಪಕ್ಷದ ಸಭೆಯಾಗಿದೆ ಪಕ್ಷಾತೀತವಾಗಿ ಎಲ್ಲರೂ ಕೂಡ ಈ ತೀರ್ಪಿನ ಬಗ್ಗೆ ಖಂಡಿಸಿದ್ದಾರೆ ಇದರ ಬಗ್ಗೆ ಕಳೆದ ಸದನದಲ್ಲೇ ನಾವೆಲ್ಲರೂ, ವಾಟಾಳ್‌ನಾಗರಾಜ್‌ರವರು ಮಾತನಾಡುತ್ತಾ ಸದನದಲ್ಲಿ ಒಂದು ನಿರ್ಣಯವಾಗಬೇಕು, ಖಂಡನೆಯಾಗಬೇಕು, ಈ ತೀರ್ಪು ಅವೈಜ್ಞಾನಿಕವಾಗಿದೆ ಎಂದು ತಿಳಿಸಿದ್ದೇವೆ ಆದ್ದರಿಂದ ಇದರ ಬಗ್ಗೆ ಈ ಸದನದಲ್ಲಿ ಒಂದು ನಿರ್ಣಯವಾಗಬೇಕು ಖಂಡನೆಯಾಗಬೇಕು ಇದು ಅವೈಜ್ಞಾನಿಕವಾಗಿದೆಯೆಂದು ನಾವೆಲ್ಲರೂ ಖಂಡನಾ ನಿರ್ಣಯವನ್ನು ತೆಗೆದುಕೊಳ್ಳಬೇಕೆಂದು ಅಧ್ಯಕ್ಷರ ಮೂಲಕ ಸರ್ಕಾರದ ಗಮನಸೆಳೆಯಲು ಇಚ್ಛೆಪಡುತ್ತೇನೆ ಈ ತೀರ್ಪು ಬರುವುದಕ್ಕೂ 15 ದಿವಸ ಮೊದಲು ಮಾನ್ಯ ಈಶ್ವರಪ್ಪನವರು ನಮ್ಮ ಭಾಗಕ್ಕೆ ಬಂದಿದ್ದರು ಕಬಿನಿ 2ನೇ ಹಂತವನ್ನು ನಾವು ಜಾರಿಗೆ ತಂದೇ ತರುತ್ತೇವೆ ಎಂಬ ಮಾತನ್ನು ಹೇಳಿದ್ದರು ಈಗಲೂ ಅವರು ಇದರ ಬಗ್ಗೆ ಮುಂದೆ ಹೇಗೆ ಹೇಳುತ್ತಾರೋ ಎಂಬ ಬಗ್ಗೆ ಕಾದು ನೋಡಬೇಕಾಗಿದೆ ಏಕೆಂದರೆ, ನನ್ನ ತಿಳುವಳಿಕೆಯ ಪ್ರಕಾರ ನಾವು ಮೊದಲಿನಿಂದಲೂ expand ಮಾಡಲಿಲ್ಲ 16 ವರ್ಷಗಳ ಕಾಲ ಈ ತೀರ್ಪೇನು ಹೊರಗಡೆ ಬರುವುದಕ್ಕೆ ಮೊದಲು ಮಾನ್ಯ ದಿವಂಗತ ದೇವರಾಜ ಅರಸುರವರು ವರುಣಾ ನಾಲೆಗೆ ಬಹಳ ವಿರೋಧವಿದ್ದರೂ expand ಮಾಡಿದರು ಮಾನ್ಯ ಸಿದ್ದರಾಮಯ್ಯನವರೂ ಅದಕ್ಕೆ ಹಣವನ್ನು ಒದಗಿಸಿ ಅದನ್ನು ಕಾರ್ಯಗತ ಮಾಡಿದರು ಅದೇ ರೀತಿ ನಮ್ಮಲ್ಲಿ expansion ಮಾಡಿದ್ದರೆ, ಕಬಿನಿ 2ನೇ ಹಂತವನ್ನು ಆಗಲೇ ಪೂರ್ಣಮಾಡಿಕೊಂಡು ಹೋಗಬಹುದಾಗಿತ್ತು ಆದರೆ, ನಾವು ಆ ತೀರ್ಪಿಗೆ

ಹೆದರಿಕೊಂಡು ನಮ್ಮ area ವನ್ನು expand ಮಾಡಲಿಲ್ಲ ಆದರೆ, ತಮಿಳುನಾಡಿನವರು ಯಾವುದೇ ಅಡೆತಡೆ ಇಲ್ಲದೇ area ವನ್ನು expand ಮಾಡಿಕೊಂಡು ಹೋದರು ಈಗ ಬಂದಂತಹ ಸಲಹೆಗಾರರಿಗೆ ಆ expand ಮಾಡಿದಂತಹ areaವನ್ನೇ ತೋರಿಸಿ ನಮಗೆ ಇಷ್ಟು ನೀರು ಬೇಕು ಎಂದು ತೋರ್ಪಡಿಸಿದರು ನಾವು 16 ವರ್ಷಗಳಿಂದ ಒಂದು ಎಕರೆ ಸಹ expand ಮಾಡಲಿಲ್ಲ ಜೊತೆಗೆ ನಮ್ಮ ಕೆರೆಕಟ್ಟೆಗಳಿಗೆ ನೀರನ್ನು ತುಂಬಿಸತಕ್ಕ ಕೆಲಸವನ್ನೂ ನಾವು ಮಾಡಲಿಲ್ಲ World bank ನಿಂದ ಹಣವನ್ನು ಕೊಡಲು ಸಹ ಈ ತೀರ್ಪು ಅಡ್ಡಗಾಲಾಗಿತ್ತು ಆದ್ದರಿಂದ ಇದರ ಬಗ್ಗೆ ಸರ್ಕಾರದವರು ಬಹಳ ಗಂಭೀರವಾಗಿ ಚಿಂತನೆ ಮಾಡಬೇಕಾಗಿದೆ ಕಾಳಜಿ ವಹಿಸಬೇಕಾಗಿದೆ ಕರ್ನಾಟಕದಲ್ಲಿ ಶಾಂತಿಯುತವಾಗಿ ಚಳುವಳಿಗಳು ನಡೆಯುತ್ತಿದೆ ಎಲ್ಲಾ ಪಕ್ಷದವರೂ ಸಹಕಾರವನ್ನು ನೀಡುತ್ತಿದ್ದಾರೆ ಆ ಹಿನ್ನೆಲೆಯಲ್ಲಿ ಸರ್ಕಾರ ಗಂಭೀರವಾದ ಚಿಂತನೆ ಮಾಡಿ, ಈ ಸದನದಲ್ಲಿ ಖಂಡನಾ ನಿರ್ಣಯವನ್ನು ಮಾಡಿ, ಕಾನೂನಿನ ಚೌಕಟ್ಟಿನಲ್ಲಿ ತೀರ್ಪುಗಾರರ ಸಲಹೆ ಪಡೆದು ನ್ಯಾಯವನ್ನೊದಗಿಸುವ ಕೆಲಸ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯವನ್ನು ಮಾಡಿ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ

ಶ್ರೀ ಹೆಚ್ ಡಿ ಬಸವರಾಜ್ (ವೀರಾಜಪೇಟೆ) ಮಾನ್ಯ ಅಧ್ಯಕ್ಷರೆ, ನಿನ್ನೆಯಿಂದಲೂ ಕಾವೇರಿ ನೀರಿನ ವಿವಾದವನ್ನು ಪರಿಹರಿಸುವಂತಹ ನಿಟ್ಟಿನಲ್ಲಿ ಯಾವ ರೀತಿ ಯೋಚನೆ ಮಾಡಬೇಕು ಎಂಬ ವಿಚಾರದಲ್ಲಿ ನಮ್ಮ ಎಲ್ಲಾ ನಾಯಕರು ಸಮಗ್ರವಾಗಿ, ಚರ್ಚೆಯಲ್ಲಿ ಭಾಗವಹಿಸಿದ್ದಾರೆ ಬಹಶ ಈ ಒಂದು ವಿಚಾರದಲ್ಲಿ ಬಹಳ ಸಂತೋಷಪಡಬೇಕಾಗಿದೆ ಕೆಲವು ನಾಯಕರು ಈ ಸದನದ ಮುಂದೆ ಅಂಕಿ ಅಂಶದ ಸಹಿತ ಬಿಡಿಬಿಡಿಯಾಗಿ ಹೇಳಿಕೆಯನ್ನು ಕೊಟ್ಟಿದ್ದಾರೆ ಕಾವೇರಿ ವಿವಾದದಲ್ಲಿ ಬಂದಿರುವ ತೀರ್ಪು ನಮ್ಮ ಕರ್ನಾಟಕಕ್ಕೇನು ಅನ್ಯಾಯ ಮಾಡಿದೆ, ಅದನ್ನು ಯಾವ ರೀತಿಯಾಗಿ ಸರಿಪಡಿಸಲು ನಾವೆಲ್ಲರು ಒಗ್ಗೂಡಬೇಕು ಎಂಬ ವಿಚಾರದಲ್ಲಿ ನಿನ್ನೆಯಿಂದ ಚರ್ಚೆಯಾಗುತ್ತಿದೆ ಬಹಳಷ್ಟು ಒಳ್ಳೆಯ ವಿಚಾರಗಳನ್ನು ತಮಗೆ ತಿಳಿಸುವಂಧದ್ದು ಮತ್ತು ಸರ್ಕಾರದ ಗಮನಕ್ಕೆ ತರತಕ್ಕದನ್ನು ನಾವು ಮಾಡಿದ್ದೇವೆ ಇದರಲ್ಲಿ ನನ್ನ ಒಂದೇ ಒಂದು ಅನಿಸಿಕೆ ಏನೆಂದರೆ, ಇವತ್ತೇನು ಅವೈಜ್ಞಾನಿಕವಾಗಿ ತೀರ್ಮಾನವಾಗಿದೆಯೋ ಆ ತೀರ್ಮಾನಕ್ಕೆ ಯಾರು

ಬದ್ಧರು? ಯಾರು ಕಾರಣಕರ್ತರು ಎಂಬುದು ನನಗೆ ಅರ್ಥವಾಗುತ್ತಿಲ್ಲ ವಾದಮಂಡನೆಯಲ್ಲಿ ನಮ್ಮ ಪರವಾಗಿ ವಾದಮಂಡನೆ ಮಾಡಿದಂತಹ ಎಲ್ಲಾ ವಕೀಲರು ಒಳ್ಳೆಯ ಕೆಲಸ ಮಾಡಿದ್ದಾರೆ ಎಂಬ ಪ್ರಶಂಸೆಯ ಮಾತುಗಳನ್ನು ನಾನು ಕೇಳಿದ್ದೇನೆ ಆದರೂ ಕೂಡ ನಮಗೇನು ತೀರ್ಪಿನ ಫಲಿತಾಂಶ ಬಂದಿದೆ, ಅದು ನಮಗೆ ಪೂರಕವಿಲ್ಲದಿರುವುದು ಬಹಳ ನೋವಿನ ಸಂಗತಿಯಾಗಿದೆ ಸ್ವಾತಂತ್ರ್ಯ ಪೂರ್ವದಲ್ಲೇನು ಒಪ್ಪಂದವಿತ್ತೋ ಅದು ಈಗಲೂ ಮುಂದುವರೆಯುವಂತಹ ಕೆಟ್ಟ ಪರಿಸ್ಥಿತಿಗೆ ಈ ತೀರ್ಪು ಒಳಪಡುತ್ತದೆ ಎಂದರೆ ನಾವು ನಿಜವಾಗಿಯೂ ಯೋಚನೆ ಮಾಡಬೇಕಾಗಿದೆ ಹಿಂದೆ ಬ್ರಿಟೀಷರ ಕಾಲದಲ್ಲಿ ಯಾವುದೋ ಒತ್ತಡಕ್ಕೆ, ಆಮಿಷಕ್ಕೆ ಒಳಗಾಗಿ ನಾವು ಆ ಒಪ್ಪಂದದ ಕರಾರಿಗೆ ಸಹಿ ಮಾಡಿದ್ದೇವೆ ಆದರೆ, ಈಗಲೂ ಅದೇ ರೀತಿಯಲ್ಲಿ ಮುಂದುವರೆಯಬೇಕೆಂದರೆ ಕರ್ನಾಟಕಕ್ಕೆ ಇನ್ಯಾವಾಗ ನ್ಯಾಯ ಸಿಗುತ್ತದೆ? ಆ ನ್ಯಾಯದ ಬಗ್ಗೆ ನಾವು ಇವತ್ತು ಬಹಳಷ್ಟು ಚರ್ಚೆ ಮಾಡಿದ್ದೇವೆ ಇವತ್ತು ಸೂತ್ರಗಳನ್ನು ಬಹಳ ಆಳವಾಗಿ ಚಿಂತನೆ ಮಾಡಬೇಕು, ಅಧ್ಯಯನವನ್ನು ಮಾಡಬೇಕು, ಆ ಮೂಲಕ ಕೇಂದ್ರ ಸರ್ಕಾರ ಮಧ್ಯಸ್ತಿಕೆ ವಹಿಸಿಕೊಂಡು, ಈಗ ಬಂದಿರುವ ತೀರ್ಪಿಗೆ ಸರಿಯಾದ ಪರಿಹಾರ ಕೊಡಬೇಕು ಎನ್ನುವ ವಿಚಾರವನ್ನು ಹಿರಿಯರು ಇಲ್ಲಿ ತಿಳಿಸಿದ್ದಾರೆ ನಾನು ಇವತ್ತು ತಮ್ಮಲ್ಲೊಂದು ಮನವಿಯನ್ನು ಮಾಡಿಕೊಳ್ಳುತ್ತಿದ್ದೇನೆ, ಈ ಅವೈಜ್ಞಾನಿಕ ತೀರ್ಪು ಯಾವ ರೀತಿ ಇದೆ ಎಂದರೆ, ಇವತ್ತು ನಾವು ಕೇರಳ ರಾಜ್ಯಕ್ಕೆ ನೀರನ್ನು ಬಿಡಬೇಕು ಎಂಬ ತೀರ್ಮಾನವನ್ನು ತಮ್ಮ ತೀರ್ಪಿನಲ್ಲಿ ತಿಳಿಸಿದ್ದಾರೆ ಎಷ್ಟು ಬಿಡಬೇಕು ಎಂಬುದನ್ನೂ ತಿಳಿಸಿದ್ದಾರೆ ಅದರ ಬಗ್ಗೆ ಅಂಕಿ ಅಂಶವನ್ನು ಈಗಾಗಲೇ ಇಲ್ಲಿ ತಿಳಿಸಿರುವುದರಿಂದ ಅದರ ಬಗ್ಗೆ ಮತ್ತೆ ಮತ್ತೆ ಹೇಳಲು ನಾನು ಇಚ್ಛೆಪಡುತ್ತಿಲ್ಲ ಆದರೆ, ಈ ಅನ್ಯಾಯ ಎಷ್ಟರಮಟ್ಟಿಗೆ ಇದೆಯೆಂದರೆ ಕೇರಳದವರಿಗೆ ಬಿಡಬೇಕಾದ ನೀರನ್ನು ಅವರು ಉಪಯೋಗ ಮಾಡಿಕೊಳ್ಳಲಿಲ್ಲವೆಂದರೆ ಅದನ್ನು ಅಲ್ಲಿಯವರೆಗೆ, ತಮಿಳುನಾಡಿನವರಿಗೆ ಬಿಡಬೇಕು ಎಂಬ ತೀರ್ಪನ್ನು ಇವರು ಕೊಟ್ಟಿದ್ದಾರೆಂದರೆ, ಇದರ ಬಗ್ಗೆ ನಾವು ಯೋಚನೆ ಮಾಡಬೇಕಾಗುತ್ತದೆ ಏಕೆ ಈ ರೀತಿ ತೀರ್ಪು ಕೊಟ್ಟರು? ಕೇರಳದವರಿಗೆ ನಾವು ಬಿಡಬೇಕಾದ ನೀರನ್ನು ಬಿಡಬೇಕು ಮತ್ತು ಅವರು ಸಮಯೋಚಿತವಾದ ಅಣೆಕಟ್ಟೆಗಳನ್ನು ಮತ್ತು ಅದಕ್ಕೆ ವ್ಯವಸ್ಥೆಯನ್ನು ಮಾಡಿಕೊಳ್ಳುವವರೆಗೆ ಕರ್ನಾಟಕ - ಅದನ್ನು ಉಪಯೋಗ ಮಾಡಿಕೊಳ್ಳಬಾರದು ಎನ್ನುವಂತಹ ಭಾವನೆ ಆ ತೀರ್ಪಿನ ಅಂಶದಲ್ಲಿ ಹೇಗೆ

ಬಂತು ಎಂಬುದೇ ನನಗೆ ಅರ್ಥವಾಗುತ್ತಿಲ್ಲ ಅವರೂ ಕೂಡ ಸ್ವಲ್ಪ ಯೋಚನೆ ಮಾಡಬಹುದಾಗಿತ್ತು ಕೇರಳಕ್ಕೆ ನೀರನ್ನು ಬಿಡಬೇಕು, ಅವರು ಉಪಯೋಗ ಮಾಡಿಕೊಳ್ಳಲಿಲ್ಲವೆಂದರೆ ಅದನ್ನು ತಮಿಳುನಾಡಿಗೆ ಬಿಡಿ ಎಂದರೆ, ಇವತ್ತು ಕರ್ನಾಟಕದಲ್ಲಿ ಅಂಥ ಹೆಚ್ಚುವರಿ excess ನೀರು ಇದೆಯೇ? ಅದರ ಬಗ್ಗೆ ಅವರೇಕೆ ಯೋಚನೆ ಮಾಡಲಿಲ್ಲ ಎಂಬುದು ನನಗೆ ಅರ್ಥವಾಗುತ್ತಿಲ್ಲ ಪರಿಸರ ಸಮತೋಲನ ಮತ್ತು ಸಂರಕ್ಷಣೆಗೆ ಪ್ರತ್ಯೇಕವಾಗಿ ಕರ್ನಾಟಕದವರು ತಮಿಳುನಾಡಿಗೆ ನೀರನ್ನು ಒದಗಿಸಬೇಕೆಂಬ ಸಲಹೆಯನ್ನು, ತೀರ್ಪನ್ನು ಅವರು ಕೊಟ್ಟಿದ್ದಾರೆಂದರೆ ಇದು ಯಾವ ರೀತಿಯಾಗಿ ವೈಜ್ಞಾನಿಕ? ಯಾವ ರೀತಿಯಾಗಿ ತೀರ್ಪು ಬಂದಿದೆ ಎಂಬ ಬಗ್ಗೆ ಯೋಚನೆ ಮಾಡಬೇಕಾಗಿದೆ ಆದ್ದರಿಂದ ಈ ರೀತಿ ಅವೈಜ್ಞಾನಿಕವಾದ ವಿಧಾನದಲ್ಲಿ ಹೇಗೆ ತೀರ್ಪನ್ನು ಅವರು ಪ್ರಕಟ ಮಾಡಿದರೆಂಬುದು ನನಗೆ ಅರ್ಥವಾಗುತ್ತಿಲ್ಲ ಅದರ ಜೊತೆಗೆ ಬರಗಾಲ ಏನಾದರೂ ಬಂದರೆ, ಆ ವರ್ಷವೇನಾದರು ಮಳೆ ಬರಲಿಲ್ಲವೆಂದರೆ ಆ ವರ್ಷದಲ್ಲಿ ಹರಿಸಬೇಕಾಗಿದ್ದ, ಕೊಡಬೇಕಾಗಿದ್ದ ನೀರನ್ನು ಮರುವರ್ಷ ಸೇರಿಸಿ ಹರಿಸಬೇಕೆಂಬುದು ಎಂತಹ ನ್ಯಾಯ? ಇದರ ಬಗ್ಗೆ ನಾವು ಯೋಚನೆ ಮಾಡಿದರೆ ಕರ್ನಾಟಕದ ಬಗ್ಗೆ ಏಕೆ ಈ ರೀತಿಯ ಧೋರಣೆ ತಾಳಿದರು ಅನ್ಯಾಯವನ್ನು ಹೊರಿಸುವಂತಹ, ಪಕ್ಷಪಾತ ಮಾಡಿದ್ದಾರೆಂದು ನೋವಿನಿಂದ ಹೇಳಬೇಕಾಗುತ್ತದೆ ಇವತ್ತು ಈ ಒಂದು ವಿಚಾರದಲ್ಲಿ ಕರ್ನಾಟಕದ ಜನತೆ, ಬಹುಶ ಮೈಸೂರು, ಮಂಡ್ಯ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಲ್ಲಿ ವಿಶೇಷವಾಗಿ ಶಾಂತಿಯುತವಾಗಿ ಪ್ರತಿಭಟನೆಯನ್ನು ಮಾಡುತ್ತಿದ್ದಾರೆ ಇದಕ್ಕೆ ನಾವು ನಿಜವಾಗಿಯೂ ಮೆಚ್ಚುಗೆಯನ್ನು ವ್ಯಕ್ತಪಡಿಸಬೇಕಾಗಿದೆ ಆದರೆ, ಆ ಪ್ರತಿಭಟನೆ ಒಂದು ಹಂತ ಮೀರಿ ಇನ್ನೊಂದು ಕೆಟ್ಟ ಹಂತ ಬರುವುದಕ್ಕು ಮೊದಲೇ ಇದಕ್ಕೆ ಪರಹಾರ ಸೂತ್ರವನ್ನು ನಮ್ಮ ಸರ್ಕಾರ ಕಂಡುಹಿಡಿಯಬೇಕೆಂದು ನನ್ನ ಸಲಹೆ ಇವತ್ತು ನಮ್ಮ ಸರ್ಕಾರ ಈ ಬಗ್ಗೆ ಹೆಚ್ಚಿನ ರೀತಿಯಲ್ಲಿ ಮುತುವರ್ಜಿ ವಹಿಸುತ್ತದೆ ಎಂದು ನಾನು ಭಾವಿಸುತ್ತೇನೆ ಎಲ್ಲಕ್ಕಿಂತ ಹೆಚ್ಚಾಗಿ ಇವತ್ತು ಕೇಂದ್ರ ಸರ್ಕಾರ ಇದರಲ್ಲಿ ಮಧ್ಯಪ್ರವೇಶ ಮಾಡಬೇಕಾಗಿದೆ ಮಾನ್ಯ ಪ್ರಧಾನ ಮಂತ್ರಿಗಳು ನೇರವಾಗಿ ಈ ಒಂದು ವಿಚಾರದಲ್ಲಿ ಮಧ್ಯಸ್ಥಿಕೆ ವಹಿಸಬೇಕು ಕರ್ನಾಟಕ, ತಮಿಳುನಾಡು ಮತ್ತು ಕೇರಳ ರಾಜ್ಯಗಳೊಂದಿಗೆ ಸಮಾಲೋಚನೆ ಮಾಡಬೇಕು ಆಗಲಾದರೂ ನಮಗೆ ನ್ಯಾಯ ದೊರಕಬಹುದು ಎಂಬ ಆಶೆಯನ್ನು ನಾನು ಇಟ್ಟುಕೊಂಡಿದ್ದೇನೆ ಬೇರೆ ಯಾವ ರೀತಿಯಿಂದಲೂ ಈ

ಸಮಸ್ಯೆಗೆ ಪರಿಹಾರ ಸಿಗುವುದಿಲ್ಲ ನಾವೇನು ಮುಷ್ಕರಗಳನ್ನು ಮಾಡುತ್ತಿದ್ದೇವೆ, ಧರಣಿಗಳನ್ನು ಮಾಡುತ್ತಿದ್ದೇವೆ, ಏನೊಂದು ಪ್ರತಿಭಟನೆಗಳನ್ನು ಮಾಡುತ್ತಿದ್ದೇವೆ ಅವುಗಳನ್ನು ಶಾಂತಿಯುತವಾಗಿ ಮುಂದುವರೆಸಬೇಕಾಗಿದೆ ಮಾನ್ಯ ಪ್ರಧಾನ ಮಂತ್ರಿಗಳು ಮಧ್ಯಸ್ಥಿಕೆ ವಹಿಸಿಕೊಂಡು ಈ ಒಂದು ವಿಚಾರದಲ್ಲಿ ಮೂರೂ ರಾಜ್ಯಗಳಿಗೆ ಯಾವುದೇ ರೀತಿಯಲ್ಲಿ ಅನ್ಯಾಯವಾಗದಂತಹ ರೀತಿಯಲ್ಲಿ ತೀರ್ಮಾನವನ್ನು ಕೊಡುವುದಕ್ಕೆ ಪ್ರಯತ್ನ ಮಾಡಬೇಕು ಈ ಒಂದು ನಿಟ್ಟಿನಲ್ಲಿ ಇವತ್ತು ನಮ್ಮ ಪ್ರತಿಪಕ್ಷದಲ್ಲಿ ಇರತಕ್ಕಂಥ ಎಲ್ಲಾ ನಾಯಕರು ಮಾನ್ಯ ಪ್ರಧಾನ ಮಂತ್ರಿಗಳ ಮನವೊಲಿಸಬೇಕಾಗುತ್ತದೆ ಏಕೆಂದರೆ, ಯಾವ ಸಂದರ್ಭದಲ್ಲಿ, ಯಾವ ಸನ್ನಿವೇಶದಲ್ಲಿ ಈ ತೀರ್ಪು ಬಂದಿದೆ ಎಂಬುದು ನನಗೆ ಗೊತ್ತಿಲ್ಲ ಪ್ರತಿಪಕ್ಷದ ಎಲ್ಲಾ ನಾಯಕರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ ಇವತ್ತು ನಾವೆಲ್ಲರೂ ಒಗ್ಗಟ್ಟಾಗಿ ನಮ್ಮ ರಾಜ್ಯದ ರೈತರ ಹಿತರಕ್ಷಣೆಗೆ ಮಧ್ಯಸ್ಥಿಕೆ ವಹಿಸುವಂತೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ತರಲಿಲ್ಲವೆಂದರೆ ನಾವು ಬಹಳಷ್ಟು ಕಷ್ಟವನ್ನು ಎದುರಿಸಬೇಕಾಗುತ್ತದೆ ಕರಿಣ ರೀತಿಯಾದ ಪ್ರತಿಭಟನೆಗಳು ನಡೆಯುವಂತಹ ಸಂಭವಗಳು ಕೂಡ ಇದೆ ಈ ಒಂದು ವಿಚಾರದಲ್ಲಿ ಸಮಗ್ರವಾಗಿ ನಾವೆಲ್ಲರೂ ಹೋರಾಟದಲ್ಲಿ ಭಾಗಿಗಳಾಗಬೇಕು ಹೋರಾಟ ನಿರಂತರವಾಗಿ ಇರಬೇಕು ಎಂದು ಬಯಸುವ ವ್ಯಕ್ತಿ ನಾನಲ್ಲ ಹೋರಾಟಗಳು ಶಾಂತಿಯುತವಾಗಿ ನಡೆಯಬೇಕು ಎಂದು ನಾನು ಮನವಿ ಮಾಡಿಕೊಳ್ಳುತ್ತೇನೆ ಇದಕ್ಕೆ ಪರಿಹಾರವನ್ನು ಒದಗಿಸುವುದಕ್ಕೆ ಕೇಂದ್ರ ಸರ್ಕಾರ ಅದರಲ್ಲೂ ಮಾನ್ಯ ಪ್ರಧಾನ ಮಂತ್ರಿಗಳು ಮಧ್ಯಸ್ಥಿಕೆ ವಹಿಸಬೇಕು ಇದರಿಂದ ಉತ್ತಮ ಫಲಿತಾಂಶ ಬರುತ್ತದೆ ಎಂದು ಈ ಸಂದರ್ಭದಲ್ಲಿ ನನಗನಿಸುತ್ತಿದೆ ಈ ದಿಸೆಯಲ್ಲಿ ಕೇಂದ್ರದ ಮೇಲೆ ಒತ್ತಡ ಹೇರಬೇಕೆಂದು ನಾನು ತಮ್ಮ ಮೂಲಕ ನಮ್ಮ ಸರ್ಕಾರವನ್ನು ಒತ್ತಾಯಿಸುತ್ತೇನೆ ಇಷ್ಟು ಹೊತ್ತು ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ [ಬ್ರಹ್ಮಾವರ] – ಮಾನ್ಯ ಅಧ್ಯಕ್ಷರೆ, ಇದರಲ್ಲಿ ಹೆಚ್ಚೇನು ನಾನು ಮಾತನಾಡಲಿಕ್ಕೆ ಉಳಿದಿಲ್ಲ Award ಬಂದ ತಕ್ಷಣದಲ್ಲಿ ತೀರ್ಪಿನ ಬಗ್ಗೆ ಚರ್ಚೆ ಮಾಡಿದ್ದರೆ, ಅನೇಕ ವಿಷಯಗಳ ಬಗ್ಗೆ ತೀರ್ಮಾನ ತೆಗೆದುಕೊಳ್ಳಬಹುದಾಗಿತ್ತು ಆದರೆ ಈಗಾಗಲೇ ತೀರ್ಮಾನ ತೆಗೆದುಕೊಂಡಾಗಿದೆ ಟ್ರಿಬ್ಯೂನಲ್ ಮುಂದೆ Review Petition ಹಾಕಲು

7/24

ಮತ್ತು ಸುಪ್ರೀಂ ಕೋರ್ಟ್‌ನಲ್ಲಿ SLP ಅಥವಾ Original suit ಹಾಕಲು ಈಗಾಗಲೇ ಸರ್ಕಾರ ತೀರ್ಮಾನ ತೆಗೆದುಕೊಂಡಾಗಿದೆ ಈಗ ನಾವು ಚರ್ಚೆಯನ್ನು ಮಾಡುತ್ತಿದ್ದೇವೆ ಈಗ ಸರ್ಕಾರದಿಂದ ಕೆಲವೊಂದು ಸಂಶಯಗಳಿಗೆ clarification ಅನ್ನು ಮಾತ್ರ ನಾವು ಕೇಳಬಹುದಾಗಿದೆ ನಿನ್ನೆ ಮಾನ್ಯ ಸಿದ್ದರಾಮಯ್ಯನವರು ಮತ್ತು ಮಾನ್ಯ ಮಾಧುಸ್ವಾಮಿಯವರು ಮಾತನಾಡುತ್ತಾ ಅನೇಕ ವಿಷಯಗಳನ್ನು ಸದನದ ಮುಂದಿಟ್ಟಿರು ಮಾನ್ಯ ಸದಸ್ಯರಿಗೆ ಮತ್ತು ರಾಜ್ಯದ ಜನತೆಗೆ ಈ ಸದನದ ಮುಖಾಂತರ ಎಲ್ಲಾ ಮಾಹಿತಿಗಳೂ ಗೊತ್ತಾಗುವಂತೆ ಆಗಬೇಕೆಂಬುದು ನಮ್ಮ ಅಭಿಲಾಷೆಯಾಗಿತ್ತು ಆದರೆ ಸದನದಲ್ಲಿ ಇಂದು ಸದಸ್ಯರೇ ಇಲ್ಲ ಇನ್ನು ರಾಜ್ಯದ ಜನತೆಗೆ ಮಾತ್ರ ತಿಳಿಸುವಂತಹ ಪರಿಸ್ಥಿತಿ ಉಂಟಾಗಿದೆ ಒಟ್ಟಾರೆಯಾಗಿ ಕರ್ನಾಟಕ, ತಮಿಳುನಾಡು, ಕೇರಳ ಮತ್ತು ಪಾಂಡಿಚೇರಿ, ಈ ನಾಲ್ಕೂ ರಾಜ್ಯಗಳು ತಮಗೆ 1314 ಟಿಎಂಸಿ ವಾಟರ್ ಬೇಕೆಂದು ಕೋರಿದ್ದವು ಆದರೆ ಒಟ್ಟಾರೆಯಾಗಿ ಲಭ್ಯವಿದ್ದ ನೀರು 740 ಟಿಎಂಸಿ ಮಾತ್ರ ಅದನ್ನು ವಿತರಣೆ ಮಾಡುವುದು ಹೇಗೆ ಎಂಬ ಬಗ್ಗೆ ಟ್ರಿಬ್ಯೂನಲ್ ಮುಂದೆ ವಕೀಲರುಗಳು ವಾದಗಳನ್ನು ಮಂಡಿಸಿದರು ಅವರ ವಾದವನ್ನು ಕೇಳಿ ನ್ಯಾಯ ಮಂಡಳಿ ತನ್ನ ತೀರ್ಮಾನವನ್ನು ನೀಡಿದೆ ಟಿಬ್ಯೂನಲ್ ತೀರ್ಪಿನ ಬಗ್ಗೆ ಚರ್ಚೆ ಮಾಡಲಿಕ್ಕೆ ನಾನು ಹೋಗುವುದಿಲ್ಲ ಏಕೆಂದರೆ, ಅದು ಸರಿಯೂ ಅಲ್ಲ ಈಗಾಗಲೇ ಟಿಬ್ಯೂನಲ್ ಮುಂದೆ ಸ್ಪಷ್ಟೀಕರಣ ಕೋರಿ ಅರ್ಜಿ ಹಾಕಲು ತೀರ್ಮಾನಿಸಲಾಗಿದೆ ಆದ್ದರಿಂದ ಅದರ ಬಗ್ಗೆ ಪುನ ಚರ್ಚೆ ಮಾಡಬೇಕಾದ ಅವಶ್ಯಕತೆ ಇಲ್ಲ ತೀರ್ಪು ನೀಡಿದ ರೀತಿ ಸರಿಯಿಲ್ಲ ಎಂಬ ಬಗ್ಗೆ ಅನೇಕ ಸಾರಿ ಇಲ್ಲಿ ಹೇಳಲಾಗಿದೆ ಪುನ ಟಿಬ್ಯೂನಲ್ ಮುಂದೆ ಹೋದರೆ ನಮಗೆ ಲಾಭವಾಗುತ್ತದೆಯೇ ಎಂಬ ಬಗ್ಗೆ ಇಲ್ಲಿ ಚರ್ಚೆಯಾಗುತ್ತಿದೆ ಕೃಷ್ಣಾ ಟಿಬ್ಯೂನಲ್ ಮುಂದೆ ಹೋದಾಗ ನಮಗೆ ಲಾಭ ಸಿಕ್ಕಿದೆ ಆದ್ದರಿಂದ ಪುನ ನಾವು ಕಾವೇರಿ ನ್ಯಾಯ ಮಂಡಳಿ ಮುಂದೆ ಹೋದಾಗ ನಮಗೆ ಲಾಭ ಸಿಗುವುದಿಲ್ಲ ಎನ್ನುವಂತಿಲ್ಲ ನಮ್ಮ ವಕೀಲರು ಸಮರ್ಥರಿದ್ದರೂ ನಮಗೆ ತೀರ್ಪು ಸಿಗುವಲ್ಲಿ ಅನ್ಯಾಯವಾಗಿದೆ ಎಂದು ಆಗಲೇ ಮಾನ್ಯ ಬಸವರಾಜ್‌ರವರು ಮಾತನಾಡುತ್ತಾ ಹೇಳಿದರು ಸಮರ್ಥವಾಗಿ ವಾದವನ್ನು ಮಂಡಿಸುವುದು ಮಾತ್ರ ವಕೀಲರುಗಳ ಕರ್ತವ್ಯವಾಗಿರುತ್ತದೆ ತೀರ್ಮಾನವನ್ನು ಕೊಡುವುದು ಟಿಬ್ಯೂನಲ್‌ಗೆ ಬಿಟ್ಟಿದ್ದು ಇಂತಹದ್ದೇ ತೀರ್ಮಾನವನ್ನು ಕೊಡಿ ಎಂದು ವಕೀಲರು ಹೇಳಲಿಕ್ಕೆ ಸಾಧ್ಯವಿಲ್ಲ ಎಲ್ಲರ

ವಾದವನ್ನು ಆಲಿಸಿ ತೀರ್ಮಾನವನ್ನು ಕೊಟ್ಟಿರುತ್ತಾರೆ ಟ್ರಿಬ್ಯೂನಲ್ 1924ರ ಅಗ್ರಿಮೆಂಟ್ ಅನ್ನು ಬೇಸ್ ಆಗಿಟ್ಟುಕೊಂಡು ತೀರ್ಮಾನ ಮಾಡಿದೆ ಅದು ಸರಿಯಲ್ಲ ಆ ಅಗ್ರಿಮೆಂಟ್ ಆದ ನಂತರ ಕರ್ನಾಟಕದವರಿಗೆ ಏನೂ ಪ್ರಾಜೆಕ್ಟ್‌ಗಳನ್ನು ಮಾಡಲಿಕ್ಕೆ ಅವರು ಬಿಟ್ಟಿಲ್ಲ ಕಬಿನಿ ವ್ಯಾಪ್ತಿಯಲ್ಲಿ lift irrigation schemes ಮಾಡಿದರೆ ಮಾತ್ರ ನೀರಿನ ಉಪಯೋಗವನ್ನು ಮಾಡಲಿಕ್ಕೆ ಸಾಧ್ಯವಾಗುತ್ತದೆ ಇಲ್ಲದಿದ್ದರೆ ಅದರ ಉಪಯೋಗ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ ಅದರ ಬಗ್ಗೆ ಟ್ರಿಬ್ಯೂನಲ್ ಮುಂದೆ ಹೇಳಬೇಕಾದ ಪರಿಸ್ಥಿತಿ ನಮ್ಮ ವಕೀಲರಿಗೆ ಇದೆ ಎಂದು ಹೇಳುತ್ತೇನೆ ಕೇಂದ್ರ ಸರ್ಕಾರದ ಮೇಲೆ ಅಪವಾದ ಹೊರಿಸಲು ನಾವು ಹೋಗಬಾರದು ಏಕೆಂದರೆ, ಕೇಂದ್ರ ಸರ್ಕಾರದಲ್ಲಿ ಪ್ರಧಾನ ಮಂತ್ರಿಗಳಾಗಿರುವವರು ಯಾವುದೇ ಒಂದು ರಾಜ್ಯಕ್ಕೆ ಮಾತ್ರ ಸಹಾಯವನ್ನು ಮಾಡಲಿಕ್ಕೆ ಆಗುವುದಿಲ್ಲ ಮಾನ್ಯ ವಿ ಪಿ ಸಿಂಗ್‌ರವರು ಪ್ರಧಾನ ಮಂತ್ರಿಗಳಾಗಿದ್ದಾಗ ಈ ಒಂದು ಟ್ರಿಬ್ಯೂನಲ್ constitute ಮಾಡಿದರು ಸುಪ್ರೀಂ ಕೋರ್ಟ್ ಆದೇಶವಿದ್ದಾಗ, ಎಲ್ಲಾ ರಾಜ್ಯಗಳವರನ್ನು ಕರೆದು ಮಾತನಾಡಿದಾಗ ಯಾರೂ ಮಾತುಕತೆ ಮೂಲಕ ನೀರಿನ ಹಂಚಿಕೆಗೆ ಒಪ್ಪದಿದ್ದಾಗ, ಕೇಂದ್ರ ಸರ್ಕಾರದ ಮುಂದೆ ಯಾವುದೂ ಆಯ್ಕೆ ಇರದಿದ್ದಾಗ, ಈ ಟ್ರಿಬ್ಯೂನಲ್ constitute ಆಯಿತು ನೀರಿನ ಹಂಚಿಕೆ ಬಗ್ಗೆ ಅನೇಕ ಅಂಶಗಳ ಬಗ್ಗೆ ಟ್ರಿಬ್ಯೂನಲ್ ಮುಂದೆ ವಾದವಿವಾದಗಳನ್ನು ಮಂಡಿಸಲಾಯಿತು ಟ್ರಿಬ್ಯೂನಲ್ ಪ್ರತಿಯೊಂದು ಅಂಶವನ್ನು ಗಮನಿಸಿ ತನ್ನ ಆದೇಶವನ್ನು ನೀಡಿದೆ ಇನ್ನೂ ಕೆಲವೊಂದು ಅಂಶಗಳ ಬಗ್ಗೆ ಟ್ರಿಬ್ಯೂನಲ್ ಮುಂದೆ ಹೇಳಬೇಕಾದ ಅವಶ್ಯಕತೆ ಇದೆ ಪರಿಸರದ ಬಗ್ಗೆ 10 ಟಿಎಂಸಿ ನೀರನ್ನು ಟ್ರಿಬ್ಯೂನಲ್ ಹಂಚಿಕೆ ಮಾಡಿದೆ ಒಟ್ಟು ನೀರಿನಲ್ಲಿ ಅಷ್ಟು ನೀರನ್ನು ಕರ್ನಾಟಕ ತಮಿಳುನಾಡಿಗೆ ಬಿಡುಗಡೆ ಮಾಡಬೇಕಾಗಿದೆ ಆದರೆ ಕರ್ನಾಟಕದಲ್ಲೂ ಪರಿಸರ ಸಮಸ್ಯೆ ಇದೆ ಇದಲ್ಲದೇ 192 ಟಿಎಂಸಿ ನೀರನ್ನು ಕರ್ನಾಟಕ ತಮಿಳುನಾಡಿಗೆ ಬಿಡಬೇಕಾಗಿದೆ ಅಲ್ಲದೇ ಸಮುದ್ರಕ್ಕೆ ಹರಿದು ಹೋಗಲು 4 ಟಿಎಂಸಿ ನೀರನ್ನು ಲೆಕ್ಕ ಹಾಕಲಾಗಿದೆ ಅದಕ್ಕಾಗಿ ಪ್ರತ್ಯೇಕವಾಗಿ ಕೊಡಬೇಕಾದ ಅವಶ್ಯಕತೆ ಇರಲಿಲ್ಲ ಕೇರಳದ ಪಾಲಾದ 21 ಟಿಎಂಸಿ ನೀರನ್ನೂ ಸಹ ನಾವು ಸಂಗ್ರಹಿಸಿ ತಮಿಳುನಾಡಿಗೆ ಬಿಡಬೇಕಾಗಿದೆ Clause 18 of the reference ನಲ್ಲಿ States are free to use allotted water ಎಂದು ಹೇಳಲಾಗಿದೆ ರಾಜ್ಯಗಳಿಗೆ ಅಲಾಟ್ ಮಾಡಿರುವ ನೀರನ್ನು

ನಿರ್ದಿಷ್ಟವಾಗಿ ಈ ಉದ್ದೇಶಕ್ಕಾಗಿಯೇ ಉಪಯೋಗ ಮಾಡಿ ಎಂದು ಟ್ರಿಬ್ಯೂನಲ್ ಹೇಳಲಿಕ್ಕೆ ಅವಕಾಶವಿಲ್ಲ ಟ್ರಿಬ್ಯೂನಲ್‌ಗೆ ರೆಫರ್ ಮಾಡಿದಾಗ ಈ ಅಂಶವನ್ನು ಸೇರಿಸಿಲ್ಲ ಇಂತಹ ಉದ್ದೇಶಕ್ಕೆ ಇಷ್ಟು ಟಿಎಂಸಿ ನೀರನ್ನು ಬಳಸಿ ಎಂದು ಹೇಳುವಂತಹ ಅಧಿಕಾರ ಟ್ರಿಬ್ಯೂನಲ್‌ಗೆ ಇದೆಯೇ ಎಂಬುದನ್ನು ಪ್ರಶ್ನಿಸಬೇಕಾಗುತ್ತದೆ ಅದನ್ನು ಸರಿಪಡಿಸುವ ಬಗ್ಗೆ ನಾವು ಟ್ರಿಬ್ಯೂನಲ್ ಮುಂದೆ ವಾದವನ್ನು ಮಂಡಿಸಬೇಕಾಗುತ್ತದೆ ನೀರು ಇರುವ ಸಂದರ್ಭದಲ್ಲಿ ಅದನ್ನು ಬಿಡಬಹುದು ಆದರೆ ನಮಗೆ ಸಮಸ್ಯೆ ಇದ್ದಾಗ ನೀರನ್ನು ಯಾವ ರೀತಿ ಬಿಡಲಿಕ್ಕಾಗುತ್ತದೆ? ಆ ಸಂದರ್ಭದಲ್ಲಿ ಏನು ಮಾಡಬೇಕು ಎಂಬ ಬಗ್ಗೆ ಹೆಚ್ಚು ಒತ್ತನ್ನು ಕೊಡಬೇಕು ಈ ಸರ್ಕಾರ ಪುಣ್ಯ ಮಾಡಿದೆ ಏಕೆಂದರೆ, ಎಲ್ಲಾ ಪಕ್ಷಗಳೂ ಸರ್ಕಾರಕ್ಕೆ ಈ ವಿಚಾರದಲ್ಲಿ ಬೆಂಬಲವನ್ನು ಕೊಟ್ಟಿವೆ, ಸರ್ಕಾರದ ಬೆನ್ನ ಹಿಂದೆ ಇವೆ ಇದರ ಬಗ್ಗೆ ಎರಡು ಮಾತಿಲ್ಲ ವಿರೋಧ ಪಕ್ಷದವರು ಸಂಪೂರ್ಣವಾದ ಬೆಂಬಲವನ್ನು ಕೊಟ್ಟಿದ್ದಾರೆ ಸರ್ಕಾರ ಇದರಲ್ಲಿ ತಪ್ಪು ಮಾಡಿದೆ ಎಂಬ ಮಾತನ್ನೂ ಯಾರೂ ಕೂಡ ಆಡಿಲ್ಲ ಆದರೆ ತಮಿಳುನಾಡಿನಲ್ಲಿ ಈ ಪರಿಸ್ಥಿತಿ ಇಲ್ಲ ಅಲ್ಲಿ ಕರುಣಾನಿಧಿಯವರು ಹೇಳಿದ್ದಕ್ಕೆ ಜಯಲಲಿತಾ ಪಕ್ಷದವರು ಸಹಮತ ವ್ಯಕ್ತಪಡಿಸಿಲ್ಲ ನಮ್ಮಲ್ಲಿ ನಡೆಯುತ್ತಿರುವಂತೆ ಒಮ್ಮತದ ಹೋರಾಟ ಅಲ್ಲಿ ನಡೆಯುತ್ತಿಲ್ಲ ಅಂತಹ ಪರಿಸ್ಥಿತಿ ಅಲ್ಲಿ ನಿರ್ಮಾಣವಾಗಿದೆ ಆದರೆ ನಮ್ಮ ಬೇಡಿಕೆ ಇಷ್ಟೇ ಈ ಬಗ್ಗೆ ನಿನ್ನೆ ಮಾನ್ಯ ಮಾಧುಸ್ವಾಮಿಯವರು ಮಾತನಾಡುತ್ತಾ ಹೇಳಿದ್ದಾರೆ ಕೇಂದ್ರ ಸರ್ಕಾರದವರು ರಾಷ್ಟ್ರೀಯ ಜಲನೀತಿಯನ್ನು ರೂಪಿಸುವವರೆಗೆ ಟ್ರಿಬ್ಯೂನಲ್ ಅವಾರ್ಡ್ ಅನ್ನು ನೋಟಿಫಿಕೇಷನ್ ಮೂಲಕ ಪ್ರಕಟಿಸಬಾರದು ಎಂಬುದೇ ನಮ್ಮ ಬೇಡಿಕೆಯಾಗಬೇಕು ಸದನ ಈಗ ಅಂಗೀಕರಿಸಲಿರುವ ನಿರ್ಣಯದಲ್ಲಿ ಈ ಅಂಶವನ್ನೂ ಸಹ ಸೇರಿಸಿಕೊಳ್ಳಬೇಕು ಎಂದು ನಾನು ಕೇಳಿಕೊಳ್ಳುತ್ತಿದ್ದೇನೆ ಕಾವೇರಿ ಬೇಸಿನ್‌ನಲ್ಲಿ ಹೆಚ್ಚಾಗಿ ಕೈಗಾರಿಕೆಗಳನ್ನು ಅಭಿವೃದ್ಧಿ ಪಡಿಸಲು ಅವಕಾಶವಿದೆ ಆದರೆ ಕೈಗಾರಿಕೆಗಳಿಗೆಂದು ಟಿಬ್ಯೂನಲ್ ಕಡಿಮೆ ನೀರನ್ನು ಹಂಚಿಕೆ ಮಾಡಿದೆ ಅದು ಮುಂದಿನ ದಿನಗಳಲ್ಲಿ ಕೈಗಾರಿಕಾಭಿವೃದ್ಧಿ ಮಾಡಲು ಸಾಕಾಗುವುದಿಲ್ಲ - ಸರ್ಕಾರ ಅದರ ಬಗ್ಗೆ ಆಲೋಚನೆಯನ್ನು ಮಾಡಬೇಕು ಮಾನ್ಯ ವಿರೋಧ ಪಕ್ಷದ ನಾಯಕರು ಮಂಡಿಸಿರತಕ್ಕ ನಿರ್ಣಯಕ್ಕೆ ಈ ಅಂಶವನ್ನು ತಿದ್ದುಪಡಿ ಮೂಲಕ ಸೇರಿಸಿ ಅಂಗೀಕರಿಸಬೇಕೆಂದು ಕೋರುತ್ತೇನೆ ಇದಕ್ಕೆ ಎಲ್ಲರೂ ಒಮ್ಮತದಿಂದ ತಮ್ಮ ಒಪ್ಪಿಗೆ ಕೊಡಬೇಕೆಂದು

ಕೇಳಿಕೊಳ್ಳುತ್ತಾ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ

ಅಧ್ಯಕ್ಷರು ಮಾನ್ಯ ಆಂಜನೇಯರವರೆ, ಈಗ ತಾವು ಮಾತನಾಡಿ ಕೇವಲ ಐದು ನಿಮಿಷಗಳಲ್ಲಿ ತಮ್ಮ ಭಾಷಣವನ್ನು ಮುಗಿಸಬೇಕು

ಶ್ರೀ ಹೆಚ್ ಆಂಜನೇಯ [ಭರಮಸಾಗರ] – ಆಯಿತು ಮಾನ್ಯ ಅಧ್ಯಕ್ಷರೇ, ಕಾವೇರಿ ವಿಷಯವಾಗಿ ಬಹಳಷ್ಟು ತಿಳಿದುಕೊಂಡಿರತಕ್ಕಂಥ ನಮ್ಮ ನಾಯಕರುಗಳು ಅಂಕಿ ಅಂಶಗಳ ಸಮೇತ ನ್ಯಾಯ ಮಂಡಳಿ ತೀರ್ಪಿನಿಂದ ನಮಗೆ ಆಗಿರತಕ್ಕ ಅನ್ಯಾಯವನ್ನು ಎಳೆಎಳೆಯಾಗಿ ಬಿಡಿಸಿ ಹೇಳಿದ್ದಾರೆ ನಮಗೆಲ್ಲರಿಗೂ ಕೂಡ ಬಹಳ ಆಶ್ಚರ್ಯ, ಗಾಬರಿಗೊಳ್ಳುವ ಮತ್ತು ರಾಜಕೀಯ ಪ್ರೇರಿತವಾದ ತೀರ್ಪು ಬಂದಿದೆ ಎಂದು ಅನಿಸುತ್ತದೆ ಇದು ತುಂಬಾ ದುರಾದೃಷ್ಟಕರ ಯಾವ ಸಂದರ್ಭದಲ್ಲಿ ನೋಡಿದರೂ ಕೂಡ ಎಲ್ಲಾ ಸಂದರ್ಭದಲ್ಲೂ ಕರ್ನಾಟಕಕ್ಕೆ ಅನ್ಯಾಯವಾಗಿದೆ ಕೇಂದ್ರದಲ್ಲಿ ಯಾವುದೇ ಸರ್ಕಾರಗಳಿರಲಿ, ನಮ್ಮ ರಾಜ್ಯದ ಅಭಿವೃದ್ಧಿಯನ್ನು ಕಡೆಗಣಿಸುತ್ತಾ ಬಂದಿವೆ ಬೆಂಗಳೂರು ಎಲ್ಲರಿಗೂ ಇಷ್ಟವಾಗುತ್ತದೆ ಲ್ಯಾಂಡ್ ಖರೀದಿ ಮಾಡುತ್ತಾರೆ, ಇಲ್ಲಿಯ ಜನರು ಒಳ್ಳೆಯವರೆಂದು ಹೇಳುತ್ತಾರೆ, ಇಲ್ಲೇ ವಾಸ ಮಾಡಲು ಇಷ್ಟಪಡುತ್ತಾರೆ ಆದರೆ ಇಲ್ಲಿಯ ಅಭಿವೃದ್ಧಿ ವಿಷಯ ನೋಡಿದಾಗ ಕಡೆಗಣ್ಣಿನಿಂದ ನೋಡುತ್ತಿದ್ದಾರೆ ಕಾವೇರಿ ಹುಟ್ಟು, ಕಾವೇರಿಯ ಹರಿವು ಎಲ್ಲಾ ಕರ್ನಾಟಕದಲ್ಲಾದರೂ, ಹೆಚ್ಚಿನ ಪ್ರಮಾಣದಲ್ಲಿ ಅದನ್ನು ಬಳಸಿಕೊಳ್ಳುತ್ತಿರುವವರು ಬೇರೆ ರಾಜ್ಯದವರು ಕಷ್ಟಪಟ್ಟು ಕನ್ನಂಬಾಡಿ ಕಟ್ಟೆಯನ್ನು ಕಟ್ಟಿ, ಅಲ್ಲಿ ನೀರನ್ನು ನಿಲ್ಲಿಸಿ, ನಮ್ಮಲ್ಲಿ ಬರಗಾಲ ಬಂದರೂ, ಭತ್ತ ಒಣಗಿ ಹೋದರೂ ತಮಿಳುನಾಡಿಗೆ ನೀರು ಬಿಡಬೇಕೆಂದು ತೀರ್ಪು ನೀಡಿರುವುದು, ಜನವಿರೋಧಿ ತೀರ್ಪಾಗಿದೆ ಈ ತೀರ್ಪಿನಿಂದ ನಮಗೆ ಅನ್ಯಾಯವಾಗುತ್ತದೆ ಈ ಕಾರಣದಿಂದ ಈ ನ್ಯಾಯಾಧೀಕರಣದ ತೀರ್ಪನ್ನು ಎಲ್ಲಾ ಪಕ್ಷದವರು ಒಕ್ಕೊರಲಿನಿಂದ ಪ್ರತಿಭಟಿಸಿ ಒಗ್ಗಟ್ಟಿನಿಂದ ಇರುವ ಅಗತ್ಯವಿದೆ ಮಾನ್ಯ ಸದಸ್ಯರಾದ ಜಯಪ್ರಕಾಶ ಹೆಗ್ಡೆಯವರು ಆಗಲೇ ಹೇಳಿದರು, ಕಳೆದ ಸಾರಿ ಅಧಿವೇಶನ ಸೇರಿದಾಗ ಕಾವೇರಿ ವಿಷಯವನ್ನು ಚರ್ಚೆ ಮಾಡಬೇಕಾಗಿತ್ತು ಆಗ ವಿರೋಧಪಕ್ಷದ ನಾಯಕರು ಆ ವಿಷಯವನ್ನು ಗಂಭೀರವಾಗಿ ತೆಗೆದುಕೊಂಡು ಚರ್ಚೆ ಮಾಡಬೇಕಾಗಿತ್ತು ಕಾವೇರಿ ವಿಷಯವನ್ನು ರಾಜಕಾರಣಿಗಳು ಬಹಳ ಸಿರಿಯಸ್ ಆಗಿ ತೆಗೆದುಕೊಳ್ಳುತ್ತಿಲ್ಲ, ಗಂಭೀರವಾಗಿ ಪರಿಗಣಿಸುತ್ತಿಲ್ಲವೆಂಬ ಜನರ

ಆಪಾದನೆಯನ್ನು ನಿಜ ಮಾಡಲು ಆ ರೀತಿ ವಿಳಂಬ ಮಾಡಿದ್ದು ನಿಜವೆನಿಸುತ್ತದೆ

[ಈ ಸಂದರ್ಭದಲ್ಲಿ ಮಾನ್ಯ ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು]

ನಮ್ಮ ಮುಖ್ಯಮಂತ್ರಿಗಳಾದ ಮಾನ್ಯ ಕುಮಾರಸ್ವಾಮಿಯವರ ನೇತೃತ್ವದಲ್ಲಿ, ಎಲ್ಲಾ ವಿಧಾನ ಸಭೆಯ ಸದಸ್ಯರು ಹಾಗು ವಿಧಾನ ಪರಿಷತ್ತಿನ ಸದಸ್ಯರುಗಳು ದೆಹಲಿಯ ಪಾರ್ಲಿಮೆಂಟ್ ಭವನದ ಮುಂದಿರುವ ರಾಷ್ಟ್ರಪಿತ ಮಹಾತ್ಮ ಗಾಂಧಿಜಿಯವರ ಪ್ರತಿಮೆ ಮುಂದೆ ಸತ್ಯಾಗ್ರಹ ಮಾಡುವುದರ ಮುಖಾಂತರ ನಮ್ಮ ನೋವನ್ನು, ನಮಗಾಗಿರುವ ಅನ್ಯಾಯವನ್ನು ಪ್ರತಿಭಟಿಸಿ ಗಮನ ಸೆಳೆಯುವಂತೆ ಮಾಡಬೇಕು ಈ ರೀತಿ ಮಾಡುವುದರಿಂದ ನೀರನ್ನು ಬಳಸಿಕೊಳ್ಳತಕ್ಕಂತಹ ರೈತರಲ್ಲಿ ಒಂದು ರೀತಿಯ ಆತ್ಮವಿಶ್ವಾಸ ಮೂಡಿಸತಕ್ಕಂತಹ ಅಗತ್ಯವಿದೆ ರಾಜ್ಯದಲ್ಲಿನ ನಮ್ಮ ಜನರನ್ನು ನೋಡಿದರೆ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಅಹಿಂಸ ಮಾರ್ಗವನ್ನು ಅನುಸರಿಸಿ ಚಳುವಳಿಗೆ ಇಳಿದಿದ್ದಾರೆ ಇದರಲ್ಲಿ ಕಲಾವಿದರು, ಚಲನ ಚಿತ್ರನಟರು ಸೇರಿದ್ದಾರೆ ದುರಾದೃಷ್ಟವಶಾತ್ ಡಾ ರಾಜ್‌ಕುಮಾರ್‌ರವರು ಇಂದು ಇಲ್ಲ, ಅವರು ಇದ್ದಿದ್ದರೆ, ಚಳುವಳಿಯಲ್ಲಿ ಧುಮುಕಿದ್ದರೆ 1980–81ರಲ್ಲಿ ನಡೆದ ಗೋಕಾಕ್ ಚಳುವಳಿಯ ಮಾದರಿಯಲ್ಲಿ ಚಳುವಳಿ ನಡೆಯುತ್ತಿತ್ತು ದುರ್ದೈವ ಅವರು ಈಗ ಇಲ್ಲ ಅವರ ಕುಟುಂಬದ ಎಲ್ಲಾ ಸದಸ್ಯರು ಇದಕ್ಕೆ ಬೆಂಬಲವನ್ನು ಸೂಚಿಸಿ ಚಳುವಳಿಯಲ್ಲಿ ಪಾಲ್ಗೊಂಡು ರಾಜ್ಯಕ್ಕಾಗಿರುವ ಅನ್ಯಾಯವನ್ನು ಪ್ರತಿಭಟಿಸುತ್ತಿದ್ದಾರೆ ಕಾವೇರಿಗೆ ಸಂಬಂಧಿಸಿದ ತೀರ್ಪಿನ ವಿರೋಧವಾಗಿ ರಾಜ್ಯದ ರೈತರು, ಜನರು ಅಲ್ಲಲ್ಲಿ ಜಿಲ್ಲಾ ಕಚೇರಿ, ತಾಲ್ಲೂಕು ಕಚೇರಿಗಳಲ್ಲಿ ತಮ್ಮ ಪ್ರತಿಭಟನೆ ಮಾಡಿ ತಮ್ಮ ಆಕ್ರೋಶವನ್ನು ವ್ಯಕ್ತಪಡಿಸುತ್ತಿದ್ದಾರೆ ನನ್ನ ಅಭಿಪ್ರಾಯವೆನೇಂದರೆ, ಒಂದು ದಿನಾಂಕವನ್ನು ನಿಗದಿ ಮಾಡಿ, ಅಂದು ನಾವೆಲ್ಲರೂ, ಅಂದರೆ ವಿಧಾನ ಸಭೆಯ ಸದಸ್ಯರು, ವಿಧಾನಪರಿಷತ್ತಿನ ಸದಸ್ಯರು ಹಾಗೂ ಸಂಸತ್ ಸದಸ್ಯರೆಲ್ಲರೂ ದೆಹಲಿಯ ಪಾರ್ಲಿಮೆಂಟ್ ಭವನದ ಮುಂದಿರುವ ಮಹಾತ್ಮ ಗಾಂಧೀಜಿಯವರ ಪತಿಮೆ ಮುಂದೆ ಸತ್ಯಾಗ್ರಹ ಮಾಡತಕ್ಕಂತಹ ನಿರ್ಣಯ ಮಾಡಿದರೆ ಸೂಕ್ತವಾಗಿರುತ್ತದೆ ಅದರ ಜೋತೆಗೆ ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಹೇಳಿದಂತೆ ರಾಷ್ಟ್ರಪತಿ ಸೇರಿದಂತೆ ಪ್ರಧಾನ ಮಂತ್ರಿಗಳಿಗೆ, ಈ ತೀರ್ಪಿನಿಂದ ರಾಜ್ಯಕ್ಕಾಗಿರುವ ಅನ್ಯಾಯ ಕುರಿತು ಅಲ್ಲಿರುವ ರಾಷ್ಟ್ರೀಯ ನಾಯಕರಿಗೆ ಮನವರಿಕೆ ಮಾಡುವ ಕೆಲಸವನ್ನು ಆ ದಿವಸ ಮಾಡಬೇಕು

ನಮ್ಮ ನೀರಾವರಿ ಮಂತ್ರಿಗಳಾದ ಮಾನ್ಯ ಈಶ್ವರಪ್ಪನವರನ್ನು ಅಭಿನಂದಿಸಬೇಕು ಎಲ್ಲೆಲ್ಲಿ ನೀರನ್ನು ಬಳಸಿಕೊಳ್ಳುವುದಕ್ಕೆ ಸಾಧ್ಯವಿದೆಯೋ ಅಲ್ಲಿಗೆ ಆದ್ಯತೆಯನ್ನು ಕೊಟ್ಟು ನೀರಾವರಿ ಕೆಲಸವಾಗುವಂತೆ ನೋಡಿಕೊಂಡಿದ್ದಾರೆ ಹಿಂದಿನ ನೀರಾವರಿ ಮಂತ್ರಿಗಳಿಗಿಂತ ಹೆಚ್ಚು ಒತ್ತು ಕೊಟ್ಟು ಈ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದಾರೆಂದರೆ ತಪ್ಪಾಗಲಾರದು ಈ ಬಗ್ಗೆ ಒಂದು ಉದಾಹರಣೆಯನ್ನು ಕೊಡುವುದಾದರೆ, ಹುಬ್ಬಳ್ಳಿ ನಗರಕ್ಕೆ ನೀರು ಒದಗಿಸುವ ಯೋಜನೆಯಾದ ಕಾರಂಜ ಯೋಜನೆಗೆ ಗುದ್ದಲಿ ಪೂಜೆ ಮಾಡಿದ್ದು ಈ ವಿಷಯ ಸುಪ್ರೀಂ ಕೋರ್ಟ್ ಮುಂದಿದೆ ಎಂದು ಹಲವರು ಹೇಳಿದರೂ ಕೂಡ, ನಾವು ಸುಪ್ರೀಂ ಕೋರ್ಟ್‌ಗೆ ಮನವಿ ಮಾಡುತ್ತೇವೆ ಎಂದು ಹೇಳಿದ್ದಾರೆ ಕುಡಿಯುವ ನೀರಿನ ಈ ಯೋಜನೆ ಆರಂಭವಾಗಬೇಕೆಂಬ ನಿಟ್ಟಿನಲ್ಲಿ ಮುಖ್ಯಮಂತ್ರಿಗಳು ಬರದಿದ್ದರೂ ಅನೇಕ ಮಂತ್ರಿಗಳು ಬರದಿದ್ದರೂ ಅವರೊಬ್ಬರೇ ಆ ಯೋಜನೆಗೆ ಗುದ್ದಲಿ ಪೂಜೆ ಮೂಲಕ ಚಾಲನೆ ನೀಡಿದರು ಇನ್ನು ನಮ್ಮ ರಾಜ್ಯದಲ್ಲಿ ಕುಡಿಯುವ ನೀರಿಗೆ ಅಪಾರ ಅಭಾವವಿದೆ ಮಾನ್ಯ ಉಪಾಧ್ಯಕ್ಷರೆ, ನಮ್ಮ ಜಿಲ್ಲೆಯ ಅಪ್ಪರ್ ಭದ್ರ ಯೋಜನೆ ಮುಗಿಯಬೇಕು, ಈ ಬಗ್ಗೆ ಒತ್ತು ನೀಡಬೇಕು ನನ್ನ ಕ್ಷೇತ್ರದಲ್ಲಿ 19 ಕೆರೆಗಳನ್ನು ತೆಗೆದುಕೊಂಡು ಆ ಕೆರೆಗಳಿಗೆ ಕಾಯಕಲ್ಪವನ್ನು ಮಾನ್ಯ ಈಶ್ವರಪ್ಪನವರು ಮಾಡಿದ್ದಾರೆ ಇನ್ನು ಹೆಚ್ಚಾಗಿ ನಮಗೆ ಲಭ್ಯವಿರುವ ನೀರನ್ನು ಬಳಸಿಕೊಳ್ಳುವಲ್ಲಿ ಕೆಲಸ ಮಾಡಲಿದ್ದಾರೆಂದು ಭಾವಿಸುತ್ತೇನೆ ಮಾಜಿ ಪ್ರಧಾನ ಮಂತ್ರಿಗಳಾದ ಮಾನ್ಯ ವಾಜಪೇಯಿಯವರ ಕನಸಿನ ಕೂಸಾದ ಗಂಗಾ–ಕಾವೇರಿ ನದಿಗಳ ಜೋಡಣೆ ಯೋಜನೆಯ ಸರ್ವೆ ಮಾಡುವ ಕೆಲಸ ನಡೆದಿತ್ತು, ಅದು ಎಲ್ಲಿಯವರೆಗೆ ಬಂದಿದೆಯೋ ಗೊತ್ತಿಲ್ಲ ಕಳೆದ 6 ತಿಂಗಳ ಹಿಂದೆ ನಾನು ಉತ್ತರ ಭಾರತದಲ್ಲಿ ಪ್ರವಾಸ ಮಾಡಿದಾಗ, ಗಂಗಾ ನದಿ ಹರಿಯುವ ವೇಗವನ್ನು ನೋಡಿದೆ, 100 ಕಿಮೀ ವೇಗದಲ್ಲಿ ನೀರು ಹರಿಯುತ್ತದೆ ಈ ನದಿ ಜೋಡಣೆ ಮಾಡಿದಲ್ಲಿ ನಮ್ಮಲ್ಲಿರುವ ಈ ಬಂಜರು ಭೂಮಿಗೆಲ್ಲಾ ಆ ನೀರಿನ ಉಪಯೋಗವಾಗುತ್ತದೆ ಇದರಿಂದಾಗಿ ಭಯೋತ್ಪಾದನೆ, ನಕ್ಸಲ್ ಚಟುವಟಿಕೆಗಳಲ್ಲಿ ತೊಡಗಿರುವ ಯುವಕರಿಗೆ, ಉದ್ಯೋಗವಿಲ್ಲದ ಯುವಕರ ಕೈಗಳಿಗೆ ಕೆಲಸ ಸಿಗುತ್ತದೆ ದೇಶದಲ್ಲಿರುವ ಇಂತಹ ಸಮಸ್ಯೆಗಳಿಗೆ ಪರೋಕ್ಷವಾಗಿ ಪರಿಹಾರ ದೊರಕಿದಂತಾಗುತ್ತದೆ ಇದು ಅನುಷ್ಠಾನಗೊಳ್ಳಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕೂಡಿ ಸಕ್ರಿಯವಾಗಿ ಆಲೋಚನೆ ಮಾಡಿ ಆದಷ್ಟು ಬೇಗ ಕಾರ್ಯಪ್ರವೃತ್ತರಾಗಬೇಕು

ಎಂದು ಹೇಳುವುದರ ಜೊತೆಗೆ ಈಗೇನು ಕಾವೇರಿ ಸಂಬಂಧವಾಗಿ ತೀರ್ಪು ಬಂದಿದೆ ಅದು ರಾಜ್ಯ ವಿರೋಧಿ ತೀರ್ಪು, ಅದನ್ನು ವಿರೋಧಿಸುತ್ತೇನೆ ಇದರ ವಿರುದ್ಧ ಒಗ್ಗಟ್ಟಾಗಿ ಚಳುವಳಿಯನ್ನು ಮಾಡೋಣವೆಂದು ಹೇಳಿ ನನಗೆ ಮಾತನಾಡಲು ಅವಕಾಶ ಮಾಡಿ ಕೊಟ್ಟ ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೆನೆ

ಶ್ರೀ ದಿನೇಶ್ ಗುಂಡೂರಾವ್(ಗಾಂಧಿನಗರ) ಮಾನ್ಯ ಉಪಾಧ್ಯಕ್ಷರೆ, ಕಾವೇರಿ ಮಂಡಳಿಯ ವಿಚಾರದಲ್ಲಿ ಇವತ್ತು ಬಹಳಷ್ಟು ಚರ್ಚೆಗಳು ಆಗಿವೆ ಎಲ್ಲಾ ವಿಷಯಗಳು ಇವತ್ತು ಪ್ರಸ್ತಾಪ ಆಗಿವೆ ತಾವು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನು ಹೇಳುತ್ತಾ, ಬೆಂಗಳೂರು ನಗರದ ವಿಚಾರದಲ್ಲಿ ಕಾವೇರಿ ನ್ಯಾಯ ಮಂಡಳಿ ತೀರ್ಪು ಏನು ಬಂದಿದೆ ಅದರಿಂದ ನಮಗೂ ಕೂಡ ಬಹಳ ಆಶ್ಚರ್ಯ ಆಗುವಂತಹ ಪರಿಸ್ಥಿತಿ ಉದ್ಭವವಾಗಿದೆ ಇಷ್ಟೊಂದು ಅವೈಜ್ಞಾನಿಕವಾಗಿ ಚಿಂತನೆ ಆಗುತ್ತದೆ ಎಂದು ಯಾರೂ ಕೂಡ ಅಂದುಕೊಂಡಿರಲಿಲ್ಲ ಉನ್ನತ ಮಟ್ಟದಲ್ಲಿ ಎಲ್ಲ ವಿಷಯಗಳನ್ನು ಅರ್ಧ ಮಾಡಿಕೊಳ್ಳತಕ್ಕಂತಹ ವಿಚಾರ ಇರತಕ್ಕಂತಹ ಸಂದರ್ಭದಲ್ಲಿ ಈ ರೀತಿಯ ತೀರ್ಪು ಬರುತ್ತದೆ ಎಂದು ನಾವು ಯಾರೂ ಕೂಡ ಅಂದುಕೊಂಡಿರಲಿಲ್ಲ ಇದನ್ನು "ಮರಣ ಶಾಸನ" ಎಂದು ಕರೆದಿರುವುದು ನಿಜ ನಮ್ಮ Inter State Water Dispute Act ಏನಿದೆ ಅದರ ಪ್ರಕಾರ ನಾವೇ ಕೊಟ್ಟಿರತಕ್ಕಂತಹ ಕಾನೂನು ರಚನೆ ಮುಖಾಂತರ ಈ ನ್ಯಾಯ ಮಂಡಳಿಯ ನಿರ್ಣಯಕ್ಕೆ ಯಾವುದೇ ರೀತಿಯ ಮೇಲ್ಮನವಿ ಸಲ್ಲಿಸುವುದಕ್ಕಾಗುವುದಿಲ್ಲವೆಂದು ನಾವೇ ಕಾನೂನು ಮಾಡಿಕೊಂಡಿದ್ದೇವೆ ಇದು ಕೂಡ ಸರಿಯೋ ತಪ್ಪೋ ಎಂದು ನಾವು ಚಿಂತನೆ ಮಾಡಬೇಕಾಗಿದೆ ಈ ರೀತಿಯ ನಿರ್ಣಯಗಳು ಆಚೆ ಬಂದಾಗ ನಾವು ಏನು ಮಾಡಬೇಕು, ಒಂದು ಕಡೆ ಸಂವಿಧಾನ ರಚನೆ ಮಾಡತಕ್ಕಂತಹ ಕಾರ್ಯ ಕೂಡ ನಮ್ಮದೇ ಆಗುತ್ತದೆ ಅದರ ಜೊತೆಯಲ್ಲಿ ನ್ಯಾಯ ಕೊಡತಕ್ಕಂಧದ್ದು ಮತ್ತು ಜನ ಸಾಮಾನ್ಯರ ಜೀವನ ಉತ್ತಮ ರೀತಿಯಲ್ಲಿ ನಡೆಸಿಕೊಂಡು ಹೋಗುವ ಜವಾಬ್ದಾರಿ ನಮ್ಮ ಮೇಲೆ ಬರುತ್ತದೆ ಇದರಲ್ಲಿ ವ್ಯತ್ಯಾಸ ಕಂಡುಬಂದಾಗ ನಮ್ಮ ಕರ್ತವ್ಯ ಏನು, ನಾವು ಹೇಗೆ ಹೋರಾಟ ಮಾಡಬಹುದು ಎಂದು ದೊಡ್ಡ ಪ್ರಶ್ನೆ ನಮ್ಮ ಮುಂದೆ ಬರುತ್ತದೆ ನ್ಯಾಯ ಮಂಡಳಿ ಮುಂದೆ ಪುನ ಪರಿಶೀಲನಾ ಅರ್ಜಿ ಹಾಕುತ್ತೇವೆಂದು ಇಟ್ಟುಕೊಳ್ಳಿ ನಮ್ಮಲ್ಲಿ 70–90 % ಜನರಿಗೂ ಅದರ ಬಗ್ಗೆ ಭರವಸೆ ಇಲ್ಲ ನ್ಯಾಯ ಮಂಡಳಿ ಮುಂದೆ ಹೋಗಿ

ನ್ಯಾಯ ಸಿಗುತ್ತದೆ ಎಂದು ನಾವು ಯಾರೇ ಆಗಲಿ, ಆತ್ಮಾವಲೋಕನ ಮಾಡಿಕೊಂಡರೆ ಯಾರಿಗೂ ಆ ವಿಚಾರದಲ್ಲಿ ವಿಶ್ವಾಸ ಇಲ್ಲ ಇಷ್ಟೆಲ್ಲಾ ಹೋರಾಟ ಮಾಡಿ ವಾದ ವಿವಾದ ಆಗಿ ಗಂಭೀರವಾದ ಚರ್ಚೆ ಮಾಡಿ ಆದ ಮೇಲೆ, ಕೂಡ ಈ ರೀತಿಯಾದ ತೀರ್ಪು ಬಂದಾಗ ಅದೇ ಜಡ್ಜಸ್ ಮುಂದೆ ನಾವು ಹೋದಾಗ ಎಷ್ಟರ ಮಟ್ಟಿಗೆ ನ್ಯಾಯ ಸಿಗಬಹುದು? ಇನ್ನೊಂಡು ಕಡೆ, ಆ ತೀರ್ಪು Supreme Court ಗೆ ಹೋಗುವುದಿಲ್ಲ ಇದರಿಂದ ನಮ್ಮ ಹಕ್ಕಿನ ಉಲ್ಲಂಘನೆ ಆಗುತ್ತದೆ ಇದು ಕೂಡ ನಾವು ಚರ್ಚೆ ಮಾಡಬೇಕು ಒಬ್ಬ ವ್ಯಕ್ತಿಗೆ ಮರಣ ದಂಡನೆ ಶಿಕ್ಷೆ ಆಗುತ್ತದೆ, ಗಲ್ಲಿಗೆ ಏರಿಸತಕ್ಕಂತಹ ಶಿಕ್ಷೆ ಆಗುತ್ತದೆ Supreme Court ನಿಂದ ಆದೇಶ ಬಂದರೂ ಕೂಡ ಅವನಿಗೆ ಒಂದು ಅವಕಾಶ ಸಿಗುತ್ತದೆ ರಾಷ್ಟ್ರಪತಿಗಳ ಮುಂದೆ ಅವನು ಮನವಿ ಮಾಡಬಹುದು ನ್ಯಾಯ ಮಂಡಳಿಯ ತೀರ್ಪಿನಿಂದ ಒಬ್ಬರಿಗೆ ಅಲ್ಲ ಲಕ್ಷಾಂತರ ಜನರಿಗೆ ಅನ್ಯಾಯ ಆಗಿದೆ ಎಲ್ಲೋ ಒಂದು ಕಡೆ Supreme Court ಗೆ ಮೇಲ್ಮನವಿ ಸಲ್ಲಿಸುವ ಪ್ರಯತ್ನ ನಾವು ಮಾಡಬೇಕಾಗಿದೆ ಈ ವಿಚಾರದಲ್ಲಿ ಅಂತಿಮವಾಗಿ Supreme Court ಮುಂದೆ ಹೋಗತಕ್ಕಂತಹ ಹಕ್ಕು ನಮಗೆ ಸಿಗಬೇಕು Inter State Water Dispute Act ನಲ್ಲಿ ನಾವು ಬದಲಾವಣೆ ಮಾಡಬೇಕಾಗುತ್ತದೆ ಇಲ್ಲದಿದ್ದರೆ, ಈ Act ಪ್ರಕಾರ ನೋಡಿದರೆ ಅದಕ್ಕೆ ಬೇಕಾದ ಪ್ರತ್ಯೇಕವಾದ ಪ್ರಾಧಿಕಾರ ರಚನೆ ಮಾಡಿ, ಅವರು ನಿಭಾಯಿಸುತ್ತಾರೆಯೇ ಹೊರತು ನಮ್ಮ ಸರ್ಕಾರದ ಅಧವಾ ಕೇಂದ್ರ ಸರ್ಕಾರದ ಪಾತ್ರ ಇರುವುದಿಲ್ಲ ಕಷ್ಟ ಕಾಲ ಬಂದಾಗ ಏನು ಮಾಡುವುದು, ಬೆಂಗಳೂರು ನಗರದಲ್ಲಿ ಇವತ್ತು ಕೂಡ ನೀರಿನ ಸಮಸ್ಯೆ ಎಷ್ಟಾಗಿದೆ ಎಂದರೆ ಬೆಳಿಗ್ಗೆ ನನ್ನ ಕ್ಷೇತ್ರದಲ್ಲಿ ಜನರು ನೀರಿನ ಹಾಹಾಕಾರದಿಂದ ಪ್ರತಿಭಟನೆ ಹಾಗೂ ಧರಣಿಗಳನ್ನು ಮಾಡಿಕೊಂಡು ಕುಳಿತಿದ್ದಾರೆ ನಾಳೆ ಈ ತೀರ್ಪು ಅನುಷ್ಠಾನ ಆದರೆ, ನಾವು ಬೃಹತ್ ಬೆಂಗಳೂರು ಎಂದು ಮಾತನಾಡುತ್ತೇವೆ, ಬಿಡದಿಯನ್ನು ಉಪನಗರ ಮಾಡಬಹುದು ಇನ್ನೊಂಡು ಕಡೆ ಉಪನಗರ ಮಾಡಬಹುದು, ಬೃಹತ್ BDA layout ಮಾಡಬೇಕೆಂದು ಹೊರಟಿದ್ದೇವೆ, ಬೆಂಗಳೂರು ನಗರವನ್ನು ಇನ್ನು ಬಹಳ ದೊಡ್ಡದಾಗಿ ವಿಸ್ತರಣೆ ಮಾಡಬೇಕೆಂದು ಹೊರಟಿದ್ದೇವೆ, ನಮಗೆ ಮೂಲಭೂತವಾಗಿ ಅವಶ್ಯವಿರುವ ನೀರು ಸಿಗದೇ ಹೋದರೆ ಹೇಗೆ? ನಗರ ಬೆಳೆಯಬೇಕು ಬೆಂಗಳೂರು ನಗರದ ಬಗ್ಗೆ ರಾಷ್ಟ್ರಮಟ್ಟದಲ್ಲಿ ಮತ್ತು ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ

7/27

ಬೆಂಗಳೂರು, ಬೆಂಗಳೂರು ಎಂದು ಮಾತನಾಡುತ್ತೇವೆ ಇದರ ಭವಿಷ್ಯ ಏನಾಗಬಹುದು? ಇದು ಬಹಳ ಸಾಮಾನ್ಯ ಜ್ಞಾನ ಇರತಕ್ಕಂತಹ ವಿಚಾರ ನಾವು ಇವತ್ತು ಕಾನೂನಿನ ಪ್ರಕಾರ ಹೋರಾಟ ಮಾಡಬೇಕಾದರೂ ಕೂಡ ನ್ಯಾಯ ಮಂಡಳಿ ಮುಂದೆ ಎಷ್ಟರ ಮಟ್ಟಿಗೆ ನ್ಯಾಯ ಸಿಗುತ್ತದೆ ನಮಗೆ ಗೊತ್ತಿಲ್ಲ Inter State Water Dıspute Act ನಲ್ಲಿ ಇರತಕ್ಕಂತಹ ಕಾನೂನುಗಳು ಮಾರ್ಪಾಟಾಗಬೇಕು ರಾಷ್ಟ್ರೀಯ ಜಲ ನೀತಿ ಬಗ್ಗೆ ಏನು ಮಾತನಾಡುತ್ತಿದ್ದೀರಿ, Tribunal ತೀರ್ಪಿನಲ್ಲಿ ಕೂಡ ಆ ಬಗ್ಗೆ ಯಾವುದೇ ರೀತಿಯ ಮಾರ್ಗದರ್ಶನ ಇಲ್ಲ ಯಾವ ಮಾರ್ಗಸೂಚಿ ಅನುಸರಿಸಬೇಕೆಂದು ನಿಯಮ ಮಾಡಿಲ್ಲ ಯಾವ ಮಾರ್ಗಸೂಚಿ ಮೇಲೆ ಕೆಲಸ ಮಾಡಬೇಕೆಂದು ರಾಷ್ಟ್ರೀಯ ಜಲ ನೀತಿಯಲ್ಲಿ ನಿಯಮ ರೂಪಿಸಬೇಕಾಗಿದೆ ಇಂತಹ ಗಂಭೀರವಾದ ವಿಚಾರಗಳು ನಮ್ಮ ಮುಂದಿವೆ ಮಂಡ್ಯ ಮತ್ತು ಮೈಸೂರಿನ ರೈತರ ಸಮಸ್ಯೆ ಇದೆ ಕರ್ನಾಟಕ ರಾಜ್ಯವನ್ನು ತಮಿಳುನಾಡಿಗೆ ಹೋಲಿಸಿದಾಗ ನಮ್ಮಲ್ಲಿ ಹೆಚ್ಚಿನ ಪ್ರದೇಶಗಳು ಬರಪೀಡಿತವಾಗಿವೆ ಕಾವೇರಿ ಬೇಸಿನ್‌ನಲ್ಲಿ ಅವರ ಕ್ಷೇತ್ರ ಬಹಳ ಕಡಿಮೆ ಪ್ರಮಾಣದಲ್ಲಿದೆ ನಾವು ಮೈಸೂರಿನವರು ಮಳೆ ಮೇಲೆ ಹೆಚ್ಚು ಅವಲಂಬಿತರಾಗಿದ್ದೇವೆ ಅವರಿಗೆ North East monsoon ಕೂಡ ಹೆಚ್ಚಿಗೆ ಬರುತ್ತದೆ ಅವರ ಬರ ಪ್ರದೇಶ ನನಗೆ ಇರತಕ್ಕಂತಹ ಮಾಹಿತಿ ಪ್ರಕಾರ 8,000 ಚದುರ ಮೀಟರ್‌ಗಿಂತ ಕಡಿಮೆ ನಾವು ಹೆಚ್ಚಿನ ಪ್ರಮಾಣದ ನೀರನ್ನು ಶೇಖರಣೆ ಮಾಡುತ್ತೇವೆ ನಮ್ಮ contribution ಜಾಸ್ತಿ ಇದೆ ಅವರ contribution ಕಡಿಮೆ ಇದೆ ಅವರ ಬರ ಪೀಡಿತ ಪ್ರದೇಶ ಕೂಡ ಕಡಿಮೆ ಇದೆ ನಮ್ಮ ರಾಜ್ಯಕ್ಕೆ ಇಷ್ಟೊಂದು ಅಸಮತೋಲನವಾದರೆ ನಾವು ಹೇಗೆ ನ್ಯಾಯ ಕೇಳುವುದು, ಎಲ್ಲಿ ನ್ಯಾಯ ಕೇಳುವುದು? ಕರ್ನಾಟಕದ ಜನತೆಗೆ ಏನಾಗಿದೆ ಎಂದರೆ ಇಷ್ಟೊಂದು ಅನ್ಯಾಯವಾಗುತ್ತಿದೆ ಎಂದರೆ ಯಾವ ಕಾರಣಕ್ಕಾಗಿ ಆಗುತ್ತಿದೆ, ಇದರ ಹಿನ್ನೆಲೆ ಏನೆಂದು ಜನ ಪ್ರಶ್ನೆ ಮಾಡುತ್ತಾರೆ ತಮಿಳುನಾಡಿನವರಿಗೆ ಅಂತರ್ಜಲ ಕೂಡ ಜಾಸ್ತಿ ಇದೆ ಬರ ಪ್ರದೇಶ ಕೂಡ ಕಡಿಮೆ ಇದೆ ಅವರು ನೀರು ಶೇಖರಣೆ ಮಾಡುವುದು ಕೂಡ ಕಡಿಮೆ ಅವರಲ್ಲಿ ಅಂತರ್ಜಲ ಜಾಸ್ತಿ ಇದೆ, ಮಳೆ ಜಾಸ್ತಿ ಇದೆ, ಈ ಎಲ್ಲ ವಿಚಾರಗಳು ನೋಡಿದಾಗ ಇವತ್ತು ನಮ್ಮ ರಾಜ್ಯದಲ್ಲಿ ಬಹಳ ಶಾಂತಿಯುತವಾಗಿ ಹೋರಾಟ ನಡೆಯುತ್ತಿದೆ ನಾಳೆ ಬಹುಶ ನಮಗೆ ಅನ್ಯಾಯ ಆದರೆ ಪರಿಸ್ಥಿತಿ

ಯಾವ ಮಟ್ಟಕ್ಕೆ ಹೋಗಬಹುದು ಎಂದು ನಾವು ಊಹೆ ಮಾಡುವುದು ಕಷ್ಟವಾಗುತ್ತದೆ ನೀರು ಸಿಗದೇ ಹೋದರೆ ಜನ ಧರಣಿಗಳನ್ನು ಪ್ರಾರಂಭಿಸುತ್ತಾರೆ ನಾನು ಮೊನ್ನೆ ರಾತ್ರಿ 12 00 ಗಂಟೆಗೆ ನನ್ನ ಕ್ಷೇತ್ರಕ್ಕೆ ಹೋಗಿದ್ದೇನೆ ಇಂದು ಬೆಳಿಗ್ಗೆ ಕೂಡ ಆಶ್ವಾಸನೆ ಕೊಟ್ಟು ಬಂದಿದ್ದೇನೆ ನಾಳೆ ನಮ್ಮ ರೈತರಿಗೆ ಮತ್ತು ನಮ್ಮ ಜನರಿಗೆ ಕುಡಿಯುವ ನೀರು ಸಿಗದೇ ಹೋದರೆ ಸರ್ಕಾರ ಮತ್ತು ಅಧಿಕಾರಿಗಳು ಬಿಡಿ, ನಾವೂ ಕೂಡ ಇಲ್ಲಿ ಕುಳಿತುಕೊಳ್ಳುವುದಕ್ಕಾಗುವುದಿಲ್ಲ ಇಂತಹ ಒಂದು ವಾತಾವರಣ ರಾಜ್ಯದಲ್ಲಿ ನಿರ್ಮಾಣವಾಗುತ್ತದೆ ಯಾರೂ ಕೂಡ ರಾಜಕಾರಣಿಗಳಾಗಿ ಮತ್ತು ಮಂತ್ರಿಗಳಾಗಿ ಇಲ್ಲಿ ಬಂದು ಕುಳಿತು ಚರ್ಚೆ ಮಾಡುವುದಕ್ಕಾಗುವುದಿಲ್ಲ, ಕೆಲಸ ಮಾಡುವುದಕ್ಕಾಗುವುದಿಲ್ಲ ಇಷ್ಟೊಂದು ಗಂಭೀರ ಪರಿಸ್ಥಿತಿಗೆ ಹೋದರೂ ಹೋಗಬಹುದು ನಾವು ಈ ಎಲ್ಲ ವಿಷಯಗಳ ಬಗ್ಗೆ ಚಿಂತನೆಗಳನ್ನು ಮಾಡಿ ನ್ಯಾಯಬದ್ಧವಾಗಿ ತೀರ್ಮಾನಗಳನ್ನು ತೆಗೆದುಕೊಳ್ಳಬೇಕಾಗಿದೆ ರಾಜ್ಯ ಸರ್ಕಾರ ಕೂಡ Supreme Court ಮುಂದೆ ಹೋಗುತ್ತಿದೆ ನಮ್ಮ ಸಂವಿಧಾನದಲ್ಲಿ ಇರತಕ್ಕಂತಹ ಕಾನೂನಿನ ಅಡಿಯಲ್ಲಿ ನಾವು ಎಲ್ಲ ಪ್ರಯತ್ನಗಳನ್ನು ಇವತ್ತಿನ ದಿವಸ ಮಾಡಬೇಕಾಗುತ್ತದೆ ಅದರ ಜೊತೆಯಲ್ಲಿ ನಾವು ಚಿಂತನೆ ಮಾಡಬೇಕಾಗಿರುವ ವಿಚಾರ ನಮ್ಮ ರಾಜ್ಯದಲ್ಲಿ ರಾಜಸ್ಥಾನ ಬಿಟ್ಟರೆ ಹೆಚ್ಚಿನ ಒಣ ಭೂಮಿ ಇರಕ್ಕಂತಹ ರಾಜ್ಯ ಕರ್ನಾಟಕ ರಾಜ್ಯ ಇಂತಹ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಹೋರಾಟ ಮಾಡೋಣ ಇದರ ಜೊತೆಯಲ್ಲಿ ನಾವು ನಮ್ಮ ನೀರನ್ನು ಉಳಿತಾಯ ಮಾಡುವುದು ಮತ್ತು ಮಳೆ ನೀರಿನ ಉಳಿತಾಯ ಮಾಡುವುದು, ಕೆರೆಕಟ್ಟೆಗಳು ಹಾಗೂ ಬೇರೆ ಬೇರೆ ರೀತಿಯ ಅಂತರ್ಜಲ ಮಟ್ಟ ಏರಿಸುವುದು ಕೂಡ ನಾವು ಮಾಡಬೇಕಾಗಿದೆ ಅದರ ಜೊತೆಯಲ್ಲಿ ಕೃಷಿ ಕ್ಷೇತ್ರದಲ್ಲಿ ಹೇಗೆ ಮಾರ್ಪಾಟು ಮಾಡಿಕೊಳ್ಳಬೇಕು, ಬೆಳೆಯುವಂತಹ ಬೆಳೆಗಳಲ್ಲಿ ನಾವು ಹೇಗೆ ಮಾರ್ಪಾಟು ಮಾಡಿಕೊಳ್ಳಬೇಕೆಂಬ ಬಗ್ಗೆ ಚಿಂತನೆ ಮಾಡಬೇಕಾಗಿದೆ ನೀರನ್ನು ಎಲ್ಲೆಲ್ಲಿ ಉಳಿತಾಯ ಮಾಡುವುದಕ್ಕಾಗುತ್ತದೆ ಎಂಬ ಬಗ್ಗೆ ನಾವು ವಿಚಾರ ಮಾಡಬೇಕಾಗಿದೆ ಇಲ್ಲಿ ನೀರು ಸಿಕ್ಕ ತಕ್ಷಣ ನಮ್ಮ ಸಮಸ್ಯೆ ಬಗೆಹರಿಯುವುದಿಲ್ಲ, ನೀರಿನ ಸಮಸ್ಯೆ ಇನ್ನು ಉಲ್ಬಣ ಆಗುತ್ತಾ ಹೋಗುತ್ತದೆ ಅದು ಕಡಿಮೆ ಆಗುವುದಿಲ್ಲ ಈ ಎಲ್ಲ ವಿಷಯಗಳನ್ನು ನಾವು ಕಾವೇರಿ ವಿವಾದದ ಬಗ್ಗೆ ಚರ್ಚೆ ಮಾಡುವಂತಹ ಸಂದರ್ಭದಲ್ಲಿ ಚಿಂತನೆ ಮಾಡಬೇಕು ಯಾವ ಯಾವ ಕ್ಷೇತ್ರದಲ್ಲಿ ಹೆಚ್ಚು ನೀರು ಇವತ್ತಿನ ದಿವಸ

ಪೋಲಾಗಿ ಹೋಗುತ್ತಿದೆ, ಅದನ್ನು ಎಲ್ಲಿ ಉಳಿಸಬಹುದು ಎಂಬ ಬಗ್ಗೆ ಕೂಡ ನಾವು ಸಮಗ್ರವಾಗಿ ಚಿಂತನೆ ಮಾಡಬೇಕು ದೂರದೃಷ್ಟಿ ಇಟ್ಟುಕೊಂಡು ನಾವು ವಿಚಾರ ಮಾಡಬೇಕಾಗಿದೆ ಕೃಷ್ಣರಾಜಸಾಗರ ಅಣೆಕಟ್ಟು ಅಂದು ಕಟ್ಟಿದ್ದರಿಂದ ಇವತ್ತು ಅನುಕೂಲವಾಗುತ್ತಿದೆ ಹಿಂದಿನ ಯೋಜನೆಗಳಿಂದ ಇವತ್ತು ಅನುಕೂಲವಾಗುತ್ತಿದೆ ಕೇವಲ ಮುಂದಿನ 10–15 ವರ್ಷಗಳಲ್ಲಿ ಏನಾಗಬಹುದು ಎಂದು ನಾವು ಯೋಚನೆ ಮಾಡುವುದಲ್ಲ ಮುಂದಿನ ಪೀಳಿಗೆಗೆ ಅನುಕೂಲವಾಗಬೇಕಾಗಿದೆ ಬೆಂಗಳೂರಿನಲ್ಲಿ ನಾವು ಕೊಳವೆಬಾವಿ ಹಾಕಿದರೆ ನೀರು ಸಿಗುತ್ತಿಲ್ಲ ಒಂದು ನಗರದಲ್ಲಿ ಈ ಪರಿಸ್ಥಿತಿ ಬಂದರೆ ಅದೇ ರೀತಿಯಲ್ಲಿ ಬೇರೆ ಬೇರೆ ಕಡೆಗಳಲ್ಲೂ ಕೂಡ ಇದೇ ಪರಿಸ್ಥಿತಿ ಬಂದರೆ ಏನಾಗಬಹುದು ಎಂಬ ಬಗ್ಗೆ ನಾವು ಸ್ವಲ್ಪ ಆಲೋಚನೆಯನ್ನು, ಚಿಂತನೆಯನ್ನು ಮಾಡೋಣ ಈಗಿನ ಪರಿಸ್ಥಿತಿಯಲ್ಲಿ ನಮ್ಮ ನಮ್ಮ ಮನೆಗಳಲ್ಲಿಯೇ ನಾವು ಬೋರ್‌ವೆಲ್‌ಗಳನ್ನು ಹಾಕಿಕೊಂಡಿದ್ದೇವೆ ಈ ಬೋರ್‌ವೆಲ್‌ಗಳಲ್ಲೂ ನೀರು ನಿಂತುಹೋಗಿ, ಕಾವೇರಿ ನೀರು ಬರುವುದೂ ಕೂಡ ನಿಂತು ಹೋದರೆ ಜನ ಏನು ಮಾಡುತ್ತಾರೆ? ಇದರ ಬಗ್ಗೆ ದೀರ್ಘವಾಗಿ ಮುಂದಾಲೋಚನೆ ಮಾಡಬೇಕಾದಂಥ ವಿಚಾರವಾಗಿದೆ ಖಂಡಿತವಾಗಿ ಸರ್ಕಾರ ಇದರ ಬಗ್ಗೆ ಆಲೋಚನೆಯನ್ನು ಮಾಡಿ ಕ್ರಿಯಾತ್ಮಕವಾದಂಥ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ ಇದರ ಜೊತೆಯಲ್ಲಿ ಸರ್ಕಾರ ಕಾವೇರಿ ನೀರಿನ ತೀರ್ಪಿನ ಬಗ್ಗೆ ಕಾನೂನು ಮೂಲಕ ಹೋರಾಟವನ್ನು ಮಾಡಬೇಕಾಗುತ್ತದೆ ಈಗಾಗಲೇ ನಾವೂ ಕೂಡ ಬೆಂಗಳೂರು ನಗರದಲ್ಲಿ ಒಂದು ಬಳಕೆದಾರರ ಸಂಘ ಎಂದು ಮಾಡಿ ಸುಪ್ರೀಂ ಕೋರ್ಟ್‌ಗೆ ಒಂದು ಮೇಲ್ಮನವಿಯನ್ನು ಸಲ್ಲಿಸಿದ್ದೇವೆ ಅದರಲ್ಲಿ ನಾವು ಇದು ನಮ್ಮ ಮೂಲಭೂತ ಹಕ್ಕಿನ ಉಲ್ಲಂಘನೆ, constitution ನಲ್ಲಿ right to livelihood ಎಂದು ಏನು ಬರುತ್ತದೆ right to life ಎಂದು ಏನು ಬರುತ್ತದೆ, ಅದರ ಉಲ್ಲಂಘನೆ ಆಗುತ್ತದೆ ಎಂದು ಹೇಳಿ ಮತ್ತು ಇದರ ಪೂರಕವಾಗಿಯೇ ಬೇರೆ ಬೇರೆ ವಿಚಾರಗಳನ್ನೂ ಸೇರಿಸಿದ್ದೇವೆ ಇದರಲ್ಲಿ Inter– State Water Disputes Actನ ವಿಚಾರವಿರಬಹುದು, ನಮ್ಮ ಸಂವಿಧಾನದಲ್ಲಿರತಕ್ಕಂಥ Directive Principles of State Policy ಇರಬಹುದು, ಈ ರೀತಿಯ ವಿಚಾರಗಳನ್ನು ತೆಗೆದುಕೊಂಡು ಈಗಾಗಲೇ ನಾವು ಮೇಲ್ಮನವಿಯನ್ನು ಸಲ್ಲಿಸಿದ್ದೇವೆ

ಮುಂದಿನ ವಾರದಲ್ಲಿ ಅದರ ಅಡ್ಮಿಶನ್‌ಗೆ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ ಇದನ್ನು ನೀರು ಬಳಕೆದಾರರ ಸಂಘದ ಮೂಲಕ ಮಾಡುತ್ತಿದ್ದೇವೆ ಇದು ನಮ್ಮ ಕಡೆಯಿಂದ ಮಾಡುತ್ತಿರುವ ಪ್ರಯತ್ನ ಆದರೆ ಇದರ ಬಗ್ಗೆ ಸರ್ಕಾರ ಇವತ್ತು ಎಲ್ಲಾ ರೀತಿಯ ಪ್ರಯತ್ನವನ್ನು ಮಾಡಬೇಕು ಇವತ್ತು ಯಾವ ಯಾವ ರೀತಿಯಲ್ಲಿ ಎಷ್ಟು ಅವಕಾಶಗಳು ಸಿಗುತ್ತದೋ ಅವೆಲ್ಲವನ್ನೂ ಸೇರಿಸಿಕೊಂಡು ಒಗ್ಗಟ್ಟಿನಿಂದ ಹೋರಾಟವನ್ನು ನಾವೇನು ಮಾಡುತ್ತಿದ್ದೇವೆ ಅದೇ ಪ್ರಕಾರ ಮುಂದುವರಿಸಿಕೊಂಡು ಹೋಗಬೇಕೆಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ

ಶ್ರೀ ನೆ ಲ ನರೇಂದ್ರಬಾಬು (ರಾಜಾಜಿನಗರ) – ಮಾನ್ಯ ಉಪಾಧ್ಯಕ್ಷರೆ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಕೃತಜ್ಞತೆಗಳನ್ನು ಹೇಳುತ್ತಾ ಕುಡಿಯುವ ನೀರು, ಗಾಳಿ, ಬೆಳಕು, ಬಹುಶ ಆ ಪ್ರದೇಶಗಳಲ್ಲಿ ಬರತಕ್ಕಂಥ ಗಾಳಿ, ನೀರು, ಬೆಳಕು ಇವುಗಳನ್ನು ಬಳಸತಕ್ಕಂಥ ಸಂಪೂರ್ಣ ಹಕ್ಕು ಪ್ರತಿಯೊಬ್ಬ ಜೀವಿಗೂ ಇದೆಯೆಂದು ನಾನು ಈ ಸಂದರ್ಭದಲ್ಲಿ ಹೇಳ ಬಯಸುತ್ತೇನೆ ಇವತ್ತು ನ್ಯಾಯ ಮಂಡಳಿ ತೀರ್ಪಿನಿಂದ ರಾಜ್ಯದಲ್ಲಿ ಮತ್ತು ರಾಷ್ಟ್ರದ ಒಕ್ಕೂಟದ ವ್ಯವಸ್ಥೆಯಲ್ಲಿ ಕ್ಲಿಷ್ಟವಾಗುತ್ತಿರತಕ್ಕಂಥ ಪರಿಸ್ಥಿತಿ ನಿರ್ಮಾಣವಾಗಿ, ಕಾವೇರಿ ನೀರಿನ ಈ ಒಂದು ತೀರ್ಪು ಮತ್ತು ಜಲವಿಭಜನೆ ಖಂಡತವಾಗಿಯೂ ಬಹುಶ ಎಲ್ಲೋ ಒಂದು ಕಡೆ ಎಲ್ಲರೂ ಪ್ರತಿಪಾದಿಸಿದಂತೆ ಕರ್ನಾಟಕಕ್ಕೆ ಇದು ಒಂದು "ಮರಣ ಶಾಸನ" ಈ ಒಕ್ಕೂಟ ವ್ಯವಸ್ಥೆಯ ವಿಶ್ವಾಸಕ್ಕೆ ಒಂದು ರೀತಿಯಾಗಿ ಮರಣ ದಂಡನೆ ವಿಧಿಸಿದಂತೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಬಯಸುತ್ತೇನೆ ಶತಮಾನಕ್ಕೂ ಹಳೆಯದಾಗಿರತಕ್ಕಂಥ ಕಾವೇರಿ ವಿವಾದದ ಬಗ್ಗೆ ನಿಜವಾಗಿ ನ್ಯಾಯಮಂಡಳಿ ನ್ಯಾಯಬದ್ಧವಾಗಿ ಸಮಾನವಾಗಿ ಸಮಾನತೆಯಿಂದ ಪರಸ್ಪರ ರಾಜ್ಯಗಳ ಫೀಲ್ಡ್ ರಿಯಾಲಿಟಿಯನ್ನು ಅವಲೋಕಿಸುತ್ತದೆ ಮತ್ತು ಆ ಬಗ್ಗೆ ಮಾಹಿತಿಗಳನ್ನು ಸಂಗ್ರಹಿಸುತ್ತದೆ ಮತ್ತು ಆ ರೀತಿ ಸಂಗಹಿಸಿ ಅವಲೋಕಿಸಿ ನ್ಯಾಯಯುತವಾದ ತೀರ್ಪನ್ನು ಕೊಡುತ್ತದೆ ಎನ್ನತಕ್ಕಂಥ ನಂಬಿಕೆ ನಮಗಿತ್ತು ಬಹುಶ ಈ ತೀರ್ಪು ಬಂದಾದ ಮೇಲೆ ಎಲ್ಲೋ ಒಂದು ಕಡೆ ಈ ತೀರ್ಪು ವಿಕಮುಖವಾಗಿದೆ ಮತ್ತು ಪೂರ್ವಾಗ್ರಹದಿಂದ ಕೂಡಿದೆಯೆಂದು ಬಹಳ ಸ್ಪಷ್ಟವಾಗಿ ನಮಗೆ ಗೋಚರವಾಗುತ್ತದೆ ಈ ಹಿಂದೆ ಮಾತನಾಡಿದಂಥ ಎಲ್ಲ ನಾಯಕರುಗಳು

ಮತ್ತು ಹಿರಿಯ ಸದಸ್ಯರುಗಳು ಬಹಳ ಸ್ಪಷ್ಟವಾದಂಥ ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ ಇವತ್ತು ಕರ್ನಾಟಕದಿಂದ ಕಾವೇರಿ ಬೇಸಿನ್‌ಗೆ ಕೊಡುಗೆಯಾಗಿರತಕ್ಕಂಥ ನೀರಿನ ಅಂಶದಲ್ಲಿ ಬಹುಶ ಸಂಪೂರ್ಣವಾಗಿ ಅದನ್ನು ಮರೆಮಾಚಿ ಸಿಂಹಪಾಲನ್ನು ಒಂದು ಕಡೆ ಕೊಟ್ಟು ಮೃಷ್ಟಾನ್ನ ಭೋಜನವನ್ನು ಒಂದು ಕಡೆ ಉಣಿಸಿ ಇನ್ನೊಂದು ಕಡೆ ಎಲ್ಲೋ ಒಂದು ಕಡೆ ಉಪವಾಸ ಹಾಕತಕ್ಕಂತಹ ದಿಕ್ಕಿನಲ್ಲಿ ತೀರ್ಪನ್ನು ಕೊಟ್ಟಿರತಕ್ಕಂಥದ್ದು, ನಿಜವಾಗಿಯೂ ಇದರಿಂದ ಅನ್ಯಾಯವಾಗಿದೆ ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಮತ್ತೆ ಹೇಳುವುದಕ್ಕೆ ಬಯಸುತ್ತೇನೆ ಈಗಾಗಲೇ ತೀರ್ಪು ಬಂದು 32 ದಿವಸಗಳಾಗುತ್ತಾ ಬಂತು ಈ 32 ದಿವಸಗಳಲ್ಲಿ ಇಡೀ ರಾಜ್ಯದಲ್ಲಿ, ರಾಷ್ಟ್ರದಲ್ಲಿ ಹಳ್ಳಿಯಿಂದ ದಿಲ್ಲಿಯವರೆಗೂ ತೀರ್ಪಿನ ವಿರುದ್ಧ ಪ್ರತಿಭಟನೆಯನ್ನು ಮಾಡುತ್ತಿದ್ದರೂ ಕೂಡ ಸರ್ಕಾರದಲ್ಲಿರುವವರು ತಾವು ಅಧಿಕಾರಕ್ಕೆ ಅಂಟಿಕೊಂಡಿದ್ದೇವೆ ಎನ್ನತಕ್ಕಂಥ ಭಾವನೆಯನ್ನು ತೋರಿಸದೇ ಜನಹಿತವನ್ನು ಮತ್ತು ಸ್ಪಷ್ಟವಾಗಿ ಆಗಿರತಕ್ಕಂಥ ಅನ್ಯಾಯವನ್ನು ರಾಜಕೀಯವಾಗಿ ಮತ್ತು ಕಾನೂನುಬದ್ಧವಾಗಿ ಹೇಳತಕ್ಕಂಥ ಒಂದು ಧೈರ್ಯವನ್ನು ಮತ್ತು ಎದೆಗಾರಿಕೆಯನ್ನು ತೋರಿಸಬೇಕು ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ ಬಹುಶ 07 02 2007 ರಂದು ನಡೆದಂಥ ಸರ್ವಪಕ್ಷಗಳ ಸಭೆಯ ತೀರ್ಮಾನದ ಒಂದು ಪ್ರತಿ ಸಹ ಇಲ್ಲಿ ಬರುತ್ತದೆ, ಆ ಮೂಲಕ ಅಲ್ಲಿ ಚರ್ಚೆಯಾದಂಥ ವಿಷಯಗಳು ಬರುತ್ತದೆ ಎಂದು ನಾವು ನಿರೀಕ್ಷೆ ಮಾಡಿದ್ದೆವು ಆ ಪ್ರತಿಯನ್ನೂ ಕೂಡ ನಮಗೆ ಒದಗಿಸಿಕೊಡಲಿಲ್ಲ ನಾನು ಈ ಸಂದರ್ಭದಲ್ಲಿ ಒಂದು ವಿಷಯವನ್ನು ಸರಿಯೋ ತಪ್ಪೋ ಹೇಳ ಬಯಸುತ್ತೇನೆ ನಮ್ಮ ಪರವಾದಂಥ ವಕೀಲರು ಈ ತೀರ್ಪು ಫೇರ್ ಎಂದು ಹೇಳಿದಂಥ ಒಂದು ಮಾತು ಬಹುಶ ನಮ್ಮ ವಿಶ್ವಾಸವನ್ನು ಎಷ್ಟರ ಮಟ್ಟಿಗೆ ಕುಂದಿಸಿತು ಎಂದರೆ ಎಲ್ಲೋ ಒಂದು ಕಡೆ, ಏನಿದು ಈ ರೀತಿಯಾಯಿತು, ನಮ್ಮ ಕರ್ನಾಟಕಕ್ಕೆ ಆಗಿರತಕ್ಕಂಥ ಅನ್ಯಾಯವನ್ನು ಸರಿಪಡಿಸುತ್ತಾರೆ, ಅದರ ಪರವಾಗಿರುತ್ತಾರೆ ಎಂದುಕೊಂಡಿದ್ದರೆ, ಆ ರೀತಿಯಾಗದೇ ಬಹಳ ನೋವಾಗತಕ್ಕಂಥ ಒಂದು ಸ್ಥಿತಿ ಆಯಿತು ಕರುಣಾನಿಧಿಯವರು ನೀಡಿದಂಥ ಹೇಳಿಕೆಯನ್ನು ನಾನು ಓದಿದೆ ಕರುಣಾನಿಧಿಯವರು ಹೇಳಿದ್ದೇನೆಂದರೆ ಕರ್ನಾಟಕ ಮತ್ತು ತಮಿಳುನಾಡು ಎರಡೂ ರಾಜ್ಯಗಳು ಒಪ್ಪಿಕೊಂಡಾಗ ಮಾತ್ರ ನನಗೆ ಸಮಾಧಾನವಾಗುತ್ತದೆ ಎನ್ನತಕ್ಕಂಥ ಮಾತನ್ನು ಹೇಳಿದರು ಬಹುಶ ಇದು

ಬಹಳ ಮುಖ್ಯವಾಗಿರತಕ್ಕಂಥ ವಿಷಯ ನಾನು ಒಂದು ಮೂಲಭೂತವಾದ ಪ್ರಶ್ನೆಯನ್ನು ಕೇಳಬಯಸುತ್ತೇನೆ ಈ ರಾಜ್ಯದಲ್ಲಿ ಇವತ್ತು ಒಂದು ಅಣೆಕಟ್ಟನ್ನು ಕಟ್ಟಬೇಕಾದರೆ ಬಹಳಷ್ಟು ಹಳ್ಳಿಗಳನ್ನು ನಾವು ತ್ಯಾಗ ಮಾಡಿದ್ದೇವೆ, ಇದಕ್ಕೆ ಬದಲಾಗಿ ಪರ್ಯಾಯ ವ್ಯವಸ್ಥೆಗಳನ್ನು ಮಾಡಿದ್ದೇವೆ ಈ ರೀತಿಯಲ್ಲಿ ಅಲ್ಲಿ ಅಣೆಕಟ್ಟನ್ನು ಕಟ್ಟಿ ಅಲ್ಲಿ ನೀರನ್ನು ಶೇಖರಣೆ ಮಾಡಿ ಮತ್ತೊಂದು ರಾಜ್ಯಕ್ಕೆ ಕೊಡುವಾಗ ಪರ್ಯಾಯವಾಗಿ ಅವರು ವಿದ್ಯುತ್ ಅಥವಾ ಬೇರೊಂದನ್ನು ಕೊಡುವ ವ್ಯವಸ್ಥೆ ಇದೆಯೆ? ಆ ರೀತಿ ಇರುವ ಬಗ್ಗೆ ಖಂಡಿತವಾಗಿಯೂ ಇದುವರೆಗೂ ನನ್ನ ಗಮನಕ್ಕಂತೂ ಬಂದಿಲ್ಲ ಈ ಸಂದರ್ಭದಲ್ಲಿ ನಾವು ಬಹಳ ಗಂಭೀರವಾಗಿ ಯೋಚನೆಯನ್ನು ಮಾಡಬೇಕಾಗುತ್ತದೆ ಈ ಹಿಂದೆಯೇ ಕಾವೇರಿ ನೀರಿನ ಬಗ್ಗೆ ಇಂಟಿರೀಮ್ ಆರ್ಡರ್ ಬಂದಾಗಲೇ ನಾವು ಎಚ್ಚೆತ್ತುಕೊಳ್ಳಬೇಕಾಗಿತ್ತು, ಎಲ್ಲೋ ಒಂದು ಕಡೆ ಕರ್ನಾಟಕ ರಾಜ್ಯಕ್ಕೆ ಅನ್ಯಾಯವಾಗುತ್ತದೆ ಎನ್ನತಕ್ಕಂಥ ವಾಸನೆ ಅವೊತ್ತೇ ಬಂದಿತ್ತು ಆದರೆ ಎಲ್ಲಿ ನಾವು ಎಡವಿದ್ದೇವೆ, ಏಕೆ ಎಡವಿದ್ದೇವೆ, ಇಷ್ಟು ದಿವಸ ಕುಂಭಕರ್ಣ ನಿದ್ದೆಯಲ್ಲಿ ಏಕಿದ್ದೆವು ಎಂಬ ಬಗ್ಗೆ ಬಹಳ ಎಚ್ಚರಿಕೆಯಿಂದ ನಮಗೆ ನಾವೇ ಪ್ರಶ್ನೆಯನ್ನು ಹಾಕಿಕೊಂಡು ಆತ್ಮವಿಮರ್ಶೆಯನ್ನು ಮಾಡಿಕೊಳ್ಳಬೇಕಾಗುತ್ತದೆ ಹಲವಾರು ನೀರಾವರಿ ಯೋಜನೆಗಳನ್ನು ಜಾರಿ ಮಾಡುವುದರಲ್ಲಿಯೂ ಸಹ ನಾವು ವಿಳಂಬ ಮಾಡಿದ್ದೇವೆ ಇವೊತ್ತಿನ ಈ ವ್ಯವಸ್ಥೆಯನ್ನು ನೋಡಿದಾಗ, ಕನ್ನಡದಲ್ಲಿ ಒಂದು ಗಾದೆ ನನ್ನ ನೆನಪಿಗೆ ಬರುತ್ತಿದೆ "ಯಾರದೋ ದುಡ್ಡು ಎಲ್ಲಮ್ಮನ ಜಾತ್ರೆ" ಎಂದು ಇದೆ ಯಾರದ್ದೋ ದುಡಿಮೆ, ನಾವೇ ಶೇಖರಣೆ ಮಾಡಿರತಕ್ಕಂಥದ್ದು, ಇವೊತ್ತು ಹೊರ ರಾಜ್ಯಕ್ಕೆ ಅದನ್ನು ಕೊಡಬೇಕು ಎನ್ನುವ ರೀತಿಯಲ್ಲಿ ಹೇಳಿರುವುದು ಅನ್ಯಾಯ ನಿಜವಾಗಿಯೂ ನ್ಯಾಯ ಮಂಡಳಿ ನ್ಯಾಯವಾಗಿ ವರ್ತಿಸಿದೆಯೇ ಎನ್ನತಕ್ಕಂಥ ಪ್ರಶ್ನೆಯನ್ನು ನಾನು ಈ ಸಂದರ್ಭದಲ್ಲಿ ಎತ್ತುತ್ತೇನೆ ಈಗಾಗಲೇ ಈ ತೀರ್ಪಿನ ಬಗ್ಗೆ ಕೇಂದ್ರದಲ್ಲಿರುವ ಪ್ರಧಾನಮಂತ್ರಿಗಳು ಮಧ್ಯೆ ಪ್ರವೇಶ ಮಾಡಬೇಕೆಂದು ನಮ್ಮ ರಾಜ್ಯದ ಎಂ ಪಿ ಗಳು ಪ್ರಧಾನಮಂತ್ರಿಗಳನ್ನು ಭೇಟಿ ಮಾಡಿ ಕೇಳಿಕೊಂಡಿದ್ದಾರೆ ಕೇಂದ್ರ ಸರ್ಕಾರದಲ್ಲಿ ಪ್ರಧಾನ ಮಂತ್ರಿಗಳ ಹೊಣೆಗಾರಿಕೆಯೂ ಕೂಡ ಈ ವಿಷಯದಲ್ಲಿ ಇರುತ್ತದೆ ಕಾವೇರಿ ನ್ಯಾಯಮಂಡಳಿ ಕೊಟ್ಟಿರತಕ್ಕಂಥ ತಳಹದಿಯನ್ನು ನೋಡಿದಾಗ ಸ್ವಾತಂತ್ರ್ಯಪೂರ್ವವಾಗಿರತಕ್ಕಂಥ ಮಾಹಿತಿಯಲ್ಲಿ, ಅಂದರೆ 1894 ಮತ್ತು 1924 ರ ತಳಹದಿಯ ಮೇಲೆ ತೀರ್ಮ ಕೊಟ್ಟಂತಿದೆ 1892 ಮತ್ತು 1924ರ

ಒಪ್ಪಂದದ ಪ್ರತಿಯಲ್ಲೇನಿದೆ ಅದರ ಆಧಾರದ ಮೇಲೆ ಹೋಗಿ ಕರ್ನಾಟಕವನ್ನು ಬ್ಲಾಕ್‌ಮೇಲ್ ಮಾಡುತ್ತಾ ಮಾಡುತ್ತಾ ಕೊನೆಗೆ ಈ ಸ್ಥಿತಿಗೆ ತಂದಿರುವ ಬಗ್ಗೆ ನಿಜವಾಗಿ ನಾನು ಹೇಳುತ್ತೇನೆ, ಇದು ಸರಿಯಲ್ಲ, ಈ ಧಿಕ್ಕಿನಲ್ಲಿ ನಾವು ಕಾರ್ಯೋನ್ಮುಖರಾಗಬೇಕು ಈಗಷ್ಟೇ ದಿನೇಶ್ ಗುಂಡೂರಾವ್‌ರವರು ಹೇಳಿದ ಹಾಗೆ ಖಂಡಿತವಾಗಿ ನಾನು ಹೇಳುತ್ತೇನೆ, ಬೆಂಗಳೂರು ನಗರದಲ್ಲಿ ಕಳೆದ 15 ದಿವಸಗಳಿಂದ ನೀರು ಸರಿಯಾಗಿ ಬರುತ್ತಿಲ್ಲ ರಾಜಾಜಿನಗರದ ಶಾಸಕನಾಗಿ ಹೇಳುತ್ತಿದ್ದೇನೆ, ಅಲ್ಲಿ ಯಾವ ರೀತಿಯಾಗಿ ನೀರಿನ ಯಾತನೆಯನ್ನು ಜನರು ಅನುಭವಿಸುತ್ತಿದ್ದಾರೆಂದರೆ, ಈಗಲೇ ಹೀಗಾದರೆ ಮುಂದಿನ ದಿನಗಳಲ್ಲಿ ಯಾವ ಸ್ಥಿತಿಯಾಗಬಹುದು ತಿಪ್ಪಗೊಂಡನಹಳ್ಳಿ ಕೆರೆಯಲ್ಲೂ ಕೂಡ ಸಂಪೂರ್ಣ ನೀರು ಇಲ್ಲದೇ ಈಗ ಒಂದು Pump ಮಾತ್ರ ವರ್ಕ್ ಆಗುತ್ತಿದೆ ಕಳೆದ 15, 20 ದಿವಸಗಳಿಂದ ಸಂಪೂರ್ಣವಾಗಿ ನೀರು ನಮಗೆ ನಿಂತುಹೋಗಿದೆ ಕಳೆದ ಹತ್ತು, ಹನ್ನೆರಡು ದಿವಸಗಳಿಂದ ನೀರು ಬಂದಿಲ್ಲ ಬೆಳಗ್ಗೆ ನಾನು ಈ ಸಮಸ್ಯೆಯನ್ನು ಕೇಳುವುದಕ್ಕೆ ಹೋದಾಗ verbally, physically I was tortured, handled. ಈ ರೀತಿಯ ಒಂದು ಸ್ಥಿತಿಗೆ ನಮ್ಮ ಬೆಂಗಳೂರು ನಗರದ ಶಾಸಕರು ತಲುಪುತ್ತಿದ್ದರೆ, ಇನ್ನು ಬೃಹತ್ ಬೆಂಗಳೂರನ್ನು ಮಾಡುವುದಕ್ಕೆ ಹೊರಟಾಗ ಕಾವೇರಿ ನೀರನ್ನೇ ಅವಲಂಬಿತವಾಗಿ ನಾವು ನಗರವನ್ನು ಬೆಳೆಸುವುದಕ್ಕೆ, ಕಟ್ಟುವುದಕ್ಕೆ, ಇವೊತ್ತು ಬೆಂಗಳೂರಿನಿಂದ ಮೈಸೂರಿನವರೆಗೂ ಕಾವೇರಿ ನೀರನ್ನೇ ಅವಲಂಬಿತವಾಗಿ ನಗರವನ್ನು, ಕಾರ್ಖಾನೆ ವಲಯಗಳನ್ನು ಮತ್ತು ಸ್ಯಾಟಲೈಟ್ ಟೌನ್‌ಶಿಪ್‌ಗಳನ್ನು ನಾವು ಬೆಳೆಸುತ್ತೇವೆ ಎನ್ನುವುದಾದರೆ ಮುಂದೆ ಎಂಥ ಕ್ಲಿಷ್ಟ ಸ್ಥಿತಿ ಬರುತ್ತದೆ ಈ ನ್ಯಾಯ ಮಂಡಳಿ ತೀರ್ಪನ್ನು ಕೊಡುವಾಗ ಬಹುಶ ಈ ಎಲ್ಲ ಅಂಶಗಳನ್ನು ಪರಿಗಣನೆಗೆ ಏಕೆ ತೆಗೆದುಕೊಳ್ಳಲಿಲ್ಲ ಕೇವಲ ಪೇಪರ್ ಡಾಕ್ಯುಮೆಂಟ್ಸ್‌ಗಳ ಮೇಲೆ ಹೋಗಿರತಕ್ಕಂಥದ್ದನ್ನು ನೋಡಿದಾಗ ಬಹುಶ ಇದರಿಂದ ನಮಗೆ ಸಂಪೂರ್ಣ ನ್ಯಾಯ ಒದಗಿಸಿಕೊಟ್ಟಿಲ್ಲವೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ ಗಂಗಾ–ಕಾವೇರಿ ಎನ್ನತಕ್ಕಂಥ ಯೋಜನೆಯನ್ನು ಈ ದೇಶದಲ್ಲಿ ಮಾಡಬೇಕಾಗಿತ್ತು ಎಂದು ಹಲವಾರು ಜನರು ಹೇಳುತ್ತಿದ್ದರು ರಾಷ್ಟ್ರೀಯ ಜಲನೀತಿಯನ್ನು ತರದೆಹೋದರು ನಾನು ಇತ್ತೀಚೆಗೆ ಒಂದು ಸಭೆಗೆ ಹೋಗಿದ್ದಾಗ ಡಿಬೇಟ್‌ನಲ್ಲಿ ಕೆಲವು ಹೋರಾಟಗಾರರರು ಮಾತನಾಡುತ್ತಾ ಮುಂದೆ ಬ್ರಹ್ಮಪುತ್ರ ನದಿಯನ್ನು

ಚೈನಾ ಕಡೆಗೆ ತಿರುಗಿಸತಕ್ಕಂಥ ಪ್ರಯತ್ನ ಆಗುತ್ತಿದೆ ಎಂದು ಹೇಳುತ್ತಿದ್ದರು ಬಹುಶ ಈ ನಿಟ್ಟಿನಲ್ಲಿ ನಾವು ರಾಷ್ಟ್ರೀಯ ಜಲನೀತಿಯನ್ನು ಮಾಡದೇ ಹೋದರೆ ಯಾರೋ ಹೇಳಿದ ಹಾಗೆ ಮುಂದಿನ ದಿನಗಳಲ್ಲಿ ಕುಡಿಯುವ ನೀರಿಗೆ ಯುದ್ಧಗಳು ಸಂಭವಿಸುತ್ತವೆ ಎನ್ನತಕ್ಕಂಥ ದಿನಗಳು ದೂರವಾಗುವುದಿಲ್ಲವೇನೋ ಎನ್ನತಕ್ಕಂಥ ಆತಂಕ ಬರುತ್ತದೆ ಇವತ್ತು ಬಹಳ ಗಂಭೀರವಾಗಿ ಯೋಚನೆಯನ್ನು ಮಾಡಬೇಕಾಗುತ್ತದೆ ನಮ್ಮ ದೇಶದಲ್ಲಿಯೇ ನಮ್ಮ ಆಂಜನೇಯರವರು ಹೇಳಿದಂತೆ ಒಂದು ಕಡೆ ಅತೀವೃಷ್ಟಿ, ಮತ್ತೊಂದು ಕಡೆ ಅನಾವೃಷ್ಟಿ ಅತೀವೃಷ್ಟಿಯಿಂದ ಒಂದು ಕಡೆ ಕೋಡಿ ಹೊಡೆಯುತ್ತದೆ, ಇನ್ನೊಂದು ಕಡೆ ಪ್ರವಾಹ ಹರಿಯುತ್ತದೆ ಈ ಗಂಗಾ–ಕಾವೇರಿ ಯೋಜನೆಯನ್ನು ಪಂಚವಾರ್ಷಿಕ ಯೋಜನೆಯಲ್ಲಿ ಹಂತ ಹಂತವಾಗಿ ತೆಗೆದುಕೊಳ್ಳಬೇಕೆಂದು ರಾಜ್ಯ ಸರ್ಕಾರ ಒತ್ತಾಯವನ್ನು ಮಾಡಬೇಕು ಕೇಂದ್ರ ಸರ್ಕಾರ ಕೂಡ ದೂರದೃಷ್ಟಿಯನ್ನು ಇಟ್ಟುಕೊಂಡು ಕೆಲಸವನ್ನು ಮಾಡಬೇಕಾಗುತ್ತದೆ ಈ ರೀತಿ ಮಾಡದಿದ್ದರೆ ದಕ್ಷಿಣ ಭಾಗದ ರಾಜ್ಯಗಳಲ್ಲಿ ಕುಡಿಯುವ ನೀರಿಗೋಸ್ಕರ, ಬೆಳೆಗಾಗಿ, ರೈತರಿಗಾಗಿ ಯುದ್ಧಗಳು, ರಾಜ್ಯ ರಾಜ್ಯಗಳ ನಡುವೆ ಅಸೂಯೆ, ದ್ವೇಷಗಳು ಬಂದು ಇರತಕ್ಕಂಥ ಪ್ರೀತಿಯನ್ನು ಕಳೆದುಕೊಳ್ಳತಕ್ಕಂಥ ಭಾವನೆಗಳು ಬರುವುದನ್ನು ತಡೆಗಟ್ಟಬೇಕು ಎಂದು ನಾನು ಈ ಸಂಧರ್ಬದಲ್ಲಿ ಹೇಳಿದರೆ ತಪ್ಪಾಗಲಾರದು ಬೆಂಗಳೂರು ನಗರದಲ್ಲಿ underground water table ಎಷ್ಟು ಕುಸಿದಿದೆ ಎಂದರೆ ಬಹಳ ಕಷ್ಟವಾಗಿದೆ ಮಾನ್ಯ ದಿನೇಶ್‌ರವರ ಕ್ಷೇತ್ರದಲ್ಲಿ ಇವತ್ತು ಬೆಳಿಗ್ಗೆ ಗೊತ್ತಾಯಿತು ಬೆಂಗಳೂರು ನಗರದಲ್ಲಿ ಒಂದು ಕಡೆ apartmentಗಳನ್ನು ಕಟ್ಟುವುದಕ್ಕೆ ಅನುಮತಿಯನ್ನು ಕೊಡುತ್ತಿದ್ದೇವೆ ಒಂದು Manthri Apartment ಎಂದು ಹೇಳಿ ಸವಿತ ಸಂಪಿಗೆ talkiesನಲ್ಲಿ 21 bore well ಗಳನ್ನು 500 ರಿಂದ 700 ಅಡಿಯವರೆಗೂ ತೋಡಿದ್ದಾರೆ ಸುತ್ತಮುತ್ತ ಇರುವ ಎಲ್ಲಾ ಕೊಳವೆ ಬಾವಿಗಳು ಬತ್ತಿಹೋಗಿವೆ ನಮ್ಮ ಸ್ಥಿತಿ ಏನಾಗಬೇಕು ಹೇಳಿ? ಕಾವೇರಿ ನೀರು ಬರುವುದಿಲ್ಲ ತಿಪ್ಪಗೊಂಡನಹಳ್ಳಿ ನೀರು ಕಡಿಮೆಯಾಗಿದೆ ನಮ್ಮ ಸ್ಥಿತಿ ಏನಾಗಬೇಕು? ಬಹುಶ ಮುಂದಿನ ದಿನಗಳಲ್ಲಿ ಅಂತರ್ಜಲ ಸಂಪೂರ್ಣವಾಗಿ ವಿಫಲವಾದರೆ ಈ ನಗರದಲ್ಲೂ Bangalore is going to be a dying city ಎನ್ನುವಂತಹ prediction ಏನಿದೆ ಆ ಪರಿಸ್ಥಿತಿಗೆ ತೆಗೆದುಕೊಂಡು ಹೋಗುತ್ತಿದ್ದೇವೇನೋ ಎನ್ನುವಂತಹ ಆತಂಕವನ್ನು

ಹೊಂದಿದವನಾಗಿ ನಾನು ಈ ರಾಜ್ಯದ ಹಾಗೂ ಈ ನಗರದ ಶಾಸಕನಾಗಿ ಮುನ್ನೆಚ್ಚರಿಕೆಯನ್ನು ರಾಜ್ಯ ಸರ್ಕಾರಕ್ಕೆ ಮತ್ತು ಸಂಬಂಧಪಟ್ಟವರಿಗೆ ಈ ಸಂದರ್ಭದಲ್ಲಿ ಕೊಡುವುದಕ್ಕೆ ಬಯಸುತ್ತೇನೆ ಈ ಒಂದು ಒಪ್ಪಂದದಲ್ಲಿ ನಾನು ನೋಡಿದಾಗ ಗೊತ್ತಾಗುತ್ತದೆ, 65 ಲಕ್ಷ ಜನಸಂಖ್ಯೆ ಇದ್ದಂತಹ ರಾಜಾಶ್ರಯದ ಆಶ್ರಿತ ಸಂಸ್ಥಾನದ ವ್ಯವಸ್ಥೆಯಲ್ಲಿ ಆದಂತಹ ಒಂದು ಒಪ್ಪಂದ ಏನಿದೆ, ಇವತ್ತು ಅದರ basis ಮೇಲೆ ನಾವು ಒಪ್ಪಿಗೆಯನ್ನು ಕೊಡಬೇಕು ಎನ್ನುವುದಾದರೆ ಇದು ಖಂಡಿತವಾಗಿ ಸರಿಯಲ್ಲ ಇದರಿಂದ ಒಗ್ಗಟ್ಟಿಗೆ ಧಕ್ಕೆ ಬರುತ್ತದೆ ರಾಜ್ಯದ ಜನರು ಪರಸ್ಪರ ನಂಬಿಕೆ ಕಳೆದುಕೊಂಡು ಇನ್ನು ಮುಂದಿನ ದಿನಗಳಲ್ಲಿ ಇದರಿಂದ ಬಹಳ ಕಷ್ಟವಾಗುತ್ತದೆ ಒಬ್ಬರು ಬರ್ಬರ್ ಎನ್ನುವ ಪ್ರೊಫೆಸರ್ ಅವರು ಬಹಳ ಚೆನ್ನಾಗಿ ಹೇಳುತ್ತಾರೆ "A Judgment which cannot be implemented, cannot be a Judgment" ಎನ್ನುವಂತಹ ಮಾತನ್ನು ಹೇಳುತ್ತಾರೆ ಖಂಡಿತವಾಗಿ ಕೂಡ ಇದು ಅನುಷ್ಠಾನಕ್ಕೆ ತರಲಿಕ್ಕೆ ಆಗದೇ ಇರುವಂತಹ ಒಂದು ವ್ಯವಸ್ಥೆ ಪಂಜಾಬ್‌ನಲ್ಲಿ ಇವತ್ತು ತೀರ್ಪು ಬಂದಿದ್ದರೂ ಕೂಡ ಇನ್ನೂ Gazette Notification ಆಗಿಲ್ಲ Gazette Notification ಅನ್ನು ರಾಜಕೀಯವಾಗಿ ತಡೆಯ ಬೇಕಾಗುತ್ತದೆ ಬಹುಶ ಇದನ್ನೆಲ್ಲಾ Court ಗಳಲ್ಲೇ ಬಗೆಹರಿಸತಕ್ಕಂಥಾದ್ದಲ್ಲ ಅದಕ್ಕೆ ರಾಜಕೀಯವಾಗಿ ನಾವು ಒತ್ತಡ ತರಬೇಕಾಗುತ್ತದೆ ನಾನು ಹೇಳುತ್ತೇನೆ, ಮಾನ್ಯ ರಾಷ್ಟ್ರಪತಿಗಳಿಗೆ ಹಾಗೂ ಮಾನ್ಯ ಪ್ರಧಾನ ಮಂತ್ರಿಗಳಿಗೆ, ಮನವಿಯನ್ನು ಸಲ್ಲಿಸಿ ಈ ವ್ಯವಸ್ಥೆಯನ್ನು ಸರಿಪಡಿಸಬೇಕಾದರೆ ನಾವು ಇಡೀ ನಮ್ಮ ಶಾಸನಸಭೆ ಸದಸ್ಯರ ನಿಯೋಗ ದೆಹಲಿಗೆ ಹೋಗಿ ಸಂಪೂರ್ಣವಾಗಿ ಒತ್ತಾಯವನ್ನು ತರಬೇಕಾಗುತ್ತದೆ ಆ ದಿಕ್ಕಿನಲ್ಲೂ ಪ್ರಯತ್ನವನ್ನು ಮಾಡಬೇಕಾಗುತ್ತದೆ ಜನಸಾಮಾನ್ಯರು ಮಾತನಾಡಿಕೊಳ್ಳುವುದೇನೆಂದರೆ ನೀವು ಗಂಭೀರವಾದಂತಹ ವಿಚಾರವನ್ನು ವಿಧಾನಸಭೆಯಲ್ಲಿ ಚರ್ಚೆ ಮಾಡಲಿಲ್ಲ ಏಕೆ ನೀವು ಹಗುರವಾಗಿ ತೆಗೆದುಕೊಳ್ಳುತ್ತಿದ್ದೀರಾ? ನಿಮಗೆ ಅಧಿಕಾರವೇ ಮುಖ್ಯ ಎನ್ನುವಂತಹ ಭಾವನೆಯಲ್ಲಿ ರಸ್ತೆ ರಸ್ತೆಗಳಲ್ಲಿ ಮಾತನಾಡುತ್ತಿರುವುದರ ಬಗ್ಗೆ ನೋಡಿದಾಗ ಎಲ್ಲೋ ಒಂದು ಕಡೆ ನಾವು ಸ್ಪಷ್ಟ ನಿಲುವನ್ನು ತಳೆದು ದಿಟ್ಟ ಹೆಜ್ಜೆಯನ್ನು ಇಡುವಂಥದ್ದು ತೀರಾ ಅವಶ್ಯಕವಾಗಿದೆ ಈ ನಿಟ್ಟಿನಲ್ಲಿ ನಾವು ಕೇಂದ್ರಕ್ಕೆ ಮತ್ತು ರಾಷ್ಟ್ರಪತಿಯವರಿಗೆ ಮನವರಿಕೆ ಮಾಡಬೇಕು ನಾವು ಸಹ ನಾಗರೀಕರು,

ನೀರು ಬಳಕೆದಾರರ ಸಂಘ, ಎಲ್ಲಾ ಸೇರಿ ಕಾವೇರಿ ಪ್ರತಿಪಾದನಾ ಸಮಿತಿ ಎಂದು ಹೇಳಿ ಒಂದು ಕೋಟಿ ಸಹಿ ಸಂಗ್ರಹ ಚಳುವಳಿಯನ್ನು ಮಾಡುತ್ತಾ ರಾಷ್ಟ್ರಪತಿಯವರಿಗೆ ರವಾನಿಸುವಂತಹ ಕಾರ್ಯದಲ್ಲೂ ಕೂಡ ಮಗ್ನರಾಗಿದ್ದೇವೆ ಇಂತಹ ರಾಷ್ಟ್ರಗಳಲ್ಲಿ ಇವತ್ತು ರಾಷ್ಟ್ರೀಯ ಜಲನೀತಿ ತರಲೇಬೇಕಾಗುತ್ತದೆ, ಇಲ್ಲದೇ ಇದ್ದರೆ ಬಹಳ ಕಷ್ಟವಾಗುತ್ತದೆ ಅಲ್ಲಿಯವರೆಗೂ ಕಾವೇರಿ ನ್ಯಾಯ ಮಂಡಳಿಯ ತೀರ್ಪನ್ನು ಅನುಷ್ಠಾನ ಮಾಡಬಾರದು ಎಂದು ರಾಜಕೀಯ ಒತ್ತಡವನ್ನು ತಂದು ಇದನ್ನು ನಿಲ್ಲಿಸಬೇಕಾಗುತ್ತದೆ ಈ ನಿರ್ಣಯದಲ್ಲಿ ಸಂಪೂರ್ಣವಾಗಿ ಈಗಾಗಲೇ ಕೊಟ್ಟಿರುವಂತಹ ತೀರ್ಪನ್ನು ತಿರಸ್ಕಾರ ಮಾಡುವುದರ ಮುಖೇನ ಇವತ್ತು ಆಗಿರುವಂತಹ ಅನ್ಯಾಯವನ್ನು ಸರಿಪಡಿಸುವುದಕ್ಕೆ ಸಂಬಂಧಪಟ್ಟವರು ಮಧ್ಯಪ್ರವೇಶಕ್ಕೆ ಅವಕಾಶವನ್ನು ಕಲ್ಪಿಸಿಕೊಡಬೇಕು, ರಾಜ್ಯಕ್ಕೆ ಆಗಿರುವಂತಹ ಅನ್ಯಾಯವನ್ನು ಸರಿಪಡಿಸುವುದಕ್ಕೆ ನಾವು ಸ್ಪಷ್ಟ ನಿಲುವನ್ನು ತಾಳಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗುರುಮಿರಕಲ್) – ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರು ಒಂದು resolution ಅನ್ನು ಈ ಸದನದ ಮುಂದೆ ಮಂಡಿಸಿದ್ದಾರೆ ಇದರಲ್ಲಿ ಏನಾದರೂ ಕೆಲವು ಬದಲಾವಣೆಗಳು ಇದ್ದರೆ ಅಥವಾ ಹೊಸ ವಿಷಯ ಗಳನ್ನು ಪ್ರಸ್ತಾಪ ಮಾಡಬೇಕಾಗಿದ್ದರೆ ಸರ್ಕಾರ ಮತ್ತು ವಿರೋಧ ಪಕ್ಷದ ನಾಯಕರುಗಳು ಸಲಹೆ ಮಾಡಬಹುದು ಎಂದು ನಾನು ತಿಳಿದುಕೊಂಡಿದ್ದೆ ಆದರೆ ಇನ್ನು ಹೊಸ resolution ಅನ್ನು ಯಾವರೀತಿಯಾಗಿ ತರಬೇಕು ಎನ್ನುವುದರ ಬಗ್ಗೆ ಇನ್ನು ಒಪ್ಪಂದಕ್ಕೆ ಬಂದಿಲ್ಲ ಎನ್ನುವುದು ಕಾಣುತ್ತದೆ ಅಥವಾ ಈಗ ತಯಾರು ಮಾಡುತ್ತಿರಬೇಕು ಎಂದು ನನಗೆ ಅನಿಸುತ್ತಿದೆ ಏಕೆಂದರೆ ಇಲ್ಲಿ ನಾವು ಈ ಸದನದಲ್ಲಿ ಏನು ಒಪ್ಪುತ್ತೇವೆ, ಅದೇ resolution ಅನ್ನು ಮೇಲ್ಮನೆಯಲ್ಲಿ ಕೂಡ ಒಪ್ಪಬೇಕು ಎರಡು ಮನೆಯಲ್ಲಿ ಒಂದೇ resolution ಇದ್ದರೆ ಒಳ್ಳೆಯದಾಗುತ್ತದೆ ಅದಕ್ಕೆ ಇಲ್ಲಿ ತಯಾರು ಮಾಡಿದಂತಹ resolution copy ಯನ್ನು ಮೇಲ್ಮನೆಯಲ್ಲಿ ಕಳುಹಿಸಿಕೊಡುವಂಥದ್ದು ಹಾಗೂ ಅಲ್ಲೂ ಕೂಡ ಒಪ್ಪಿಗೆ ಪಡೆಯುವಂಥದ್ದು ಆದಾಗ ಎರಡೂ ಸದನದಲ್ಲಿ ಒಮ್ಮತದ ಅಭಿಪ್ರಾಯ ಮತ್ತು resolution ಅನ್ನು ನಾವು ಸ್ವೀಕಾರ ಮಾಡಿದ ಹಾಗೆ ಆಗುತ್ತದೆ ಅದಕ್ಕೆ ಇದು ಬಹಳ

ಮಹತ್ವವಾದುದು ಇದರ ಬಗ್ಗೆ ಆಳವಾಗಿ ಅಭ್ಯಾಸ ಮಾಡಿ ನಾವು ಹೆಜ್ಜೆಯನ್ನು ಇಡಬೇಕಾದಂತಹ ವಿಚಾರ ಇದೆ ಇದರಲ್ಲಿ ಒಬ್ಬರ ಮೇಲೆ ಒಬ್ಬರು ಹೇಳಿಕೊಂಡು, ಯಾರದು ತಪ್ಪಾಯಿತು, ಏನು ತಪ್ಪಾಯಿತು, ಎಲ್ಲಿ ಆಯಿತು, ಎಂದು ಹಿಯಾಳಿಸುವುದರಲ್ಲಿ ಏನೂ ಪ್ರಯೋಜನವಿಲ್ಲ ಈಗಾಗಲೇ ಅಂತಿಮ ತೀರ್ಪು ಬಂದಿದೆ ಈ ತೀರ್ಪನ್ನು implement ಮಾಡಬೇಕು ಎಂದು ತಮಿಳುನಾಡಿನವರು ಸಹಜವಾಗಿ ಹರ ಹಿಡಿಯಬಹುದು ನಾವು ಪತ್ರಿಕೆಯಲ್ಲಿ ನೋಡುತ್ತಿದ್ದೇವೆ, ಕರುಣಾನಿಧಿ ಮತ್ತು ಮಿಸ್ ಜಯಲಲಿತಾರವರು ಜಗಳವಾಡುತ್ತಿದ್ದಾರೆ ಅದು ಮೇಲ್ನೋಟಕ್ಕೆ ಜಗಳವೆಂದು ನನಗೆ ಅನಿಸುತ್ತದೆ ಏಕೆಂದರೆ ನಮ್ಮಲ್ಲಿ ಒಂದು ಗಾದೆ ಇದೆ ಉಪ್ಪಿನವ ಅತ್ತನು ಎಂದು ತೆಂಗಿನವ ಅತ್ತನಂತೆ ಹಾಗೆ ನಮಗೆ ಅನ್ಯಾಯವಾಗಿದೆ ಎಂದು ನಾವು ಅಳುತ್ತಿದ್ದೇವೆ ಆದರೆ ಅಲ್ಲಿ ಅವರಿಗೆ ನ್ಯಾಯ ಸಿಕ್ಕು ಅವರಿಗೆ ನೀರು ಎಷ್ಟು ಬೇಕು ಎಷ್ಟು ಕೇಳುತ್ತಿದ್ದರು ಅದೇ ರೀತಿ ಅವರಿಗೆ ಸಮಾಧಾನ ಆಗುವಂತಹ ರೀತಿಯಲ್ಲಿ ತೀರ್ಪು ಸಿಕ್ಕಿದರೂ ಕೂಡ ಇನ್ನು ಅವರು ಅಲ್ಲಿ ವ್ಯಾಜ್ಯ ಇಟ್ಟುಕೊಂಡು, ಇದು ಸರಿಯಿಲ್ಲ ನಾವು ಮುಂದೆ Courtಗೆ ಹೋಗುತ್ತೇವೆ ಎನ್ನುವ ಮಾತನ್ನು ಅವರು ಕೂಡ ಹೇಳುತ್ತಿದ್ದಾರೆ ಅದಕ್ಕೆ ನಾವು ಬಹಳ ಹುಷಾರಾಗಿ ಈ ಕೆಲಸವನ್ನು ಕೊನೆಪಕ್ಷ ಈಗಲಾದರೂ ಮಾಡಿಕೊಳ್ಳಬೇಕು ನಮ್ಮ ದುರ್ದೈವ ಏನೆಂದರೆ ಈಗ ಅನೇಕ ನಾಯಕರು ಮಾತನಾಡಿದರು ಹಿಂದೆ ಕೂಡ ಎಲ್ಲರೂ Tribunal Awardನಲ್ಲಿ ಬಂದಂತಹ ಎಲ್ಲಾ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ ಇದರಲ್ಲಿ ಒಂದು ವಿಚಾರ ಏನು ಗಣನೆಗೆ ತೆಗೆದುಕೊಂಡಿಲ್ಲವೆಂದರೆ ಬೆಂಗಳೂರು ಕುಡಿಯುವ ನೀರಿನ ಬಗ್ಗೆ ಅವರು ಲೆಕ್ಕವೇ ಮಾಡಿಲ್ಲ ನಾವು ಕೇಳಿದ್ದು, ಸುಮಾರು 30 TMC ನೀರು Bangalore Water Supply and Sewerage Boardಗೆ ಬೇಕು ಕನಿಷ್ಠ 1990ರ census ಪ್ರಕಾರ 30 TMC ನೀರನ್ನು ಆದರೂ ಕೊಡಿ ಎಂದರೆ, ಅವರು ಕೊಟ್ಟದ್ದು 2 5 TMC ಅಷ್ಟು ನೀರನ್ನು ಇದರಲ್ಲಿ allocation ಮಾಡಿದ್ದಾರೆ ಅಂದರೆ ಇಲ್ಲಿಯೇ ನಮಗೆ ಸುಮಾರು ಹೆಚ್ಚು ಕಡಿಮೆ 27 5 TMC ನೀರಿನ ಕೊರತೆ ಆಗುತ್ತದೆ ಅದರಲ್ಲಿ ಅವರು ಇನ್ನು ಒಂದು ಏನು ಹೇಳುತ್ತಿದ್ದಾರೆ ಎಂದರೆ, only 1/3 of this is considered on the ground that 2/3 of Bangalore is outside the Cauvery Basin. ನನಗೆ ಅನಿಸಿದಂತೆ ಈ ವಿಧಾನಸೌಧ

ಕಾವೇರಿ ಬೇಸಿನ್‌ನಲ್ಲಿ ಬರುತ್ತದೋ ಇಲ್ಲವೋ ಗೊತ್ತಿಲ್ಲ ವಿಧಾನಸೌಧದಲ್ಲಿ ಬಿದ್ದಂತಹ ನೀರು ಅಥವಾ ಇಲ್ಲಿ ಬಿದ್ದಂತಹ ಮಳೆ ಇದು ಕಾವೇರಿ ಬೇಸಿನ್‌ಗೆ ಹೋಗುವುದಿಲ್ಲ, ಇದು ಕಾವೇರಿ ಬೇಸಿನ್ ಹೊರಗಡೆ ಎಂದು ಹೇಳುತ್ತಾರೆ ಎಂದರೆ ವಿಧಾನಸೌಧದ ಈ ಕಡೆ ಇರುವಂತಹ ಜನ ಎಂದರೆ right from International Air Portವರೆಗೆ ಮತ್ತು ಈ ಕಡೆ ಕೋಲಾರದವರೆಗೆ ಇವರೆಲ್ಲರೂ ಕೂಡ outside the purview of Cauvery Basin ಗೆ ಬರುತ್ತಾರೆ ಎಂದರೆ ಇವರಿಗೆ ನಾವು ಕಾವೇರಿ ನೀರು ಕೊಡುವುದಿಲ್ಲ ಅಥವಾ ಅವರಿಗೆ ನೀರು ಕುಡಿಯುವ ಹಕ್ಕಿಲ್ಲ ಈಗಾಗಲೇ ನಮ್ಮ ಶಾಸಕರುಗಳಾದ ದಿನೇಶ್ ಗುಂಡೂರಾವ್‌ರವರು ಹಾಗೂ ರಾಜಾಜಿನಗರದ ಶಾಸಕರಾದ ನರೇಂದ್ರಬಾಬು ಅವರು ಹೇಳಿದರು ಏನೆಂದರೆ ಮನುಷ್ಯನಿಗೆ ಮೂಲಭೂತವಾಗಿ ಬೇಕಾಗಿರುವಂತಹ ಹಾಗೂ ಜೀವಂತವಾಗಿರಬೇಕಾದರೆ, ಅವಶ್ಯಕವಾಗಿರುವಂತಾದ್ದು ಅನ್ನ, ಕುಡಿಯುವ ನೀರು, ಗಾಳಿ, ಬಟ್ಟೆ ಇಂತಹ ಕನಿಷ್ಠ ಸೌಲಭ್ಯಗಳನ್ನಾದರೂ ಕೊಡಲೇಬೇಕು ಇದು human rights ಅನೇಕ ಸಾರಿ ಯಾವುದೋ ಒಂದು ರಾಷ್ಟ್ರ ಅತ್ಯಂತ ಬಡತನದಲ್ಲಿದ್ದರೆ ಅದಕ್ಕೆ ಸಹಾಯ ಮಾಡುವುದಕ್ಕೆ ಮುಂದುವರೆದಂತಹ ಬೇರೆ ದೇಶಗಳು ಬರುತ್ತವೆ Developed Countries ಅತ್ಯಂತ ಕೆಳಮಟ್ಟದಲ್ಲಿ ಇರುವಂತಹ ದೇಶಗಳಿಗೆ ಸಹಾಯ ಮಾಡುತ್ತವೆ ಆದರೆ ಈ ದೇಶದಲ್ಲಿ ಕುಡಿಯುವ ನೀರಿಗೆ objection ಮಾಡಿದರೆ ನಾವು ಎಲ್ಲಿಗೆ ಹೋಗುವುದು? ಎಲ್ಲಿ ಕೇಳುವುದು? ಯಾವ ದೇಶದಿಂದ ನೀರು ತರಬೇಕು? ಈಗ petrol ಖರೀದಿ ಮಾಡುತ್ತಿರುವ ಹಾಗೆ ಇಲ್ಲೂ ಕೂಡ ನೀರು ಖರೀದಿ ಮಾಡುವಂತಹ ಪರಿಸ್ಥಿತಿ ಬರಬಹುದು Diesel ಮತ್ತು Petrol ಅನ್ನು ಹೊರದೇಶದಿಂದ ಹೇಗೆ ತರುತ್ತಾರೋ ಹಾಗೆ ಕುಡಿಯುವ ನೀರನ್ನು ಬೆಂಗಳೂರಿಗೆ ಆಗಲಿ ಅಥವಾ ಸುತ್ತಮುತ್ತ ಇರುವಂತಹ ಪಟ್ಟಣಗಳು ಏನಿವೆ ಅವುಗಳಿಗೆ ನೀರನ್ನು purchase ಮಾಡಿ ತರುವಂತಹ ಪರಿಸ್ಥಿತಿ ಬರುತ್ತದೆ ಅಷ್ಟೊಂದು capacity ಯಾವುದೇ Corporation ಗಾಗಲಿ, Municipality ಗಾಗಲಿ, ಪಂಚಾಯಿತಿಗಾಗಲಿ, ಹಳ್ಳಿಗಳಿಗಾಗಲಿ ಸಾಧ್ಯವೇ? ಇಂತಹ ಕೆಲವು major mistake, lapses ಆ Judgmentನಲ್ಲಿ ಇವೆ ಅದನ್ನು ಮುಂದೆ appeal ಮಾಡುವಾಗ, original suit ಹಾಕುವಾಗ ಯಾವ ರೀತಿಯಾಗಿ ತೆಗೆದುಕೊಳ್ಳುತ್ತಾರೋ ಅದನ್ನು ನೋಡೋಣ ಆದರೆ ನಾನು ಏಕೆ ಈ

ಮಾತುಗಳನ್ನು ಸದನದ ಮುಂದೆ ತರುತ್ತಿದ್ದೇನೆಂದರೆ, ಇದು ಎಲ್ಲರಿಗೂ ಗೊತ್ತಿದೆ ಆದರೂ ಕೂಡ ಈ ಜಡ್ಜ್‌ಮೆಂಟ್ ಅನ್ನು ಕೊಡುವಾಗ, ಸದ್ಯದ ಪರಿಸ್ಥಿತಿ ಬೆಂಗಳೂರಿನಲ್ಲಿ ಏನಿದೆ ಅದನ್ನು ತಿಳಿದುಕೊಂಡಾದರೂ, ಟ್ರಿಬ್ಯುನಲ್ ಈ ಕಡೆ ಲಕ್ಷ್ಯವನ್ನು ಕೊಡಬಹುದಾಗಿತ್ತು, ಏಕೆಂದರೆ 1991ರ ಜನಸಂಖ್ಯೆಯನ್ನು ನೀವು ಗಣನೆಗೆ ಇಟ್ಟುಕೊಂಡು ಇವತ್ತು 2007ರಲ್ಲಿ ಎಷ್ಟು ಜನಸಂಖ್ಯೆ ಇದೆ, ಅಧವಾ ಅವಶ್ಯಕತೆ ಇದೆ, ಇಂಡಸ್ಟ್ರಿಯಲ್ ಬೇಡಿಕೆ ಏನು ಇದೆ, ಅಧವಾ ಈ ಬೆಂಗಳೂರು ನಗರಕ್ಕೆ ಏನು ಅವಶ್ಯಕತೆ ಇದೆ, ಇವೆಲ್ಲವನ್ನು ಗಣನೆಗೆ ತೆಗೆದುಕೊಂಡು ಮಾಡುವಂತಹ ಅವಶ್ಯಕತೆ ಇತ್ತೆ ಹೊರತಾಗಿ, ಇದು ಹಿಂದಿನ interim award 1991ರಲ್ಲಿ ಬಂದಿದೆಯೆಂದು ತಿಳಿದುಕೊಂಡು, ಅದನ್ನೇ base ಆಗಿ ಇಟ್ಟುಕೊಂಡು ಇವತ್ತು ಜಡ್ಜ್‌ಮೆಂಟ್ ಕೊಟ್ಟರೆ, ಇವತ್ತು naturally urban population ದಿನೇ ದಿನೇ ಹೆಚ್ಚು ಆಗುತ್ತಿದೆ ಇದು ಅಲ್ಲದೇ, ಇದು ಸಾಕಾಗುವುದಿಲ್ಲವೆಂದು ಹೇಳಿ, ಮಾನ್ಯ ಎಂ ಪಿ ಪ್ರಕಾಶ್‌ರವರು, ಮಾನ್ಯ ಚಲುವರಾಯಸ್ವಾಮಿಯವರು ಎಲ್ಲಾ ಸೇರಿ ಏನು ಮಾಡುತ್ತಿದ್ದಾರೆಂದರೆ, ರಾಮನಗರವನ್ನು ಒಂದು ಜಿಲ್ಲೆಯನ್ನಾಗಿ ಮಾಡಬೇಕೆಂದು ಹೊರಟಿದ್ದಾರೆ ಅಲ್ಲಿ ಜನಸಂಖ್ಯೆ ಇನ್ನು ಬೆಳೆದು, ಸುತ್ತ ಮುತ್ತ ಇರುವ ಹಳ್ಳಿಗಳ ಜನರು ಅಲ್ಲೇ ಒಂದು ಕಡೆ ಸೇರುತ್ತಾರೆ ಈಗ ಇದಕ್ಕೆ ಸುಮಾರು 10,12 TMC ನೀರು ಕುಡಿಯುವ ನೀರಿಗೆ ಹೋಗುತ್ತಾ ಇದೆ ನಾವು 30 TMC ನೀರು ಕೇಳಿದ್ದು ಈಗ ರಾಮನಗರಕ್ಕೆ ನೀರು ತರಬೇಕೆಂದರೆ ಬರುಬರುತ್ತಾ pipe line ಹಾಕಿರುವಂಥಾದ್ದನ್ನು ಹೆಚ್ಚು ಕಡಿಮೆ ಅದನ್ನೇ ಕತ್ತರಿಸಿ ತೆಗೆದುಕೊಳ್ಳಬೇಕಾಗುತ್ತದೆ ನಮಗೆ ಬೇರೆ ನೀರಂತೂ ಬರುವುದಿಲ್ಲ ಅದಕ್ಕೆ ಇವೆಲ್ಲವನ್ನು ನೋಡಿದಾಗ ನಾವು ಮುಂದಾಲೋಚನೆ ಇಲ್ಲದೇ ಅನೇಕ ಕೆಲಸಗಳನ್ನು ಘೋಷಣೆ ಮಾಡುತ್ತೇವೆ ಹೊಸ ಜಿಲ್ಲೆಗಳನ್ನು ಮಾಡುವಂಥಾದ್ದನ್ನು ಮಾಡಿದ್ದೇವೆ ಚಿಕ್ಕಬಳ್ಳಾಪುರ ಮಾಡಬೇಕೆಂದು ಮನಸ್ಸಿನಲ್ಲಿದೆ ರಾಮನಗರ ಮಾಡಬೇಕೆಂದು ಮನಸ್ಸಿನಲ್ಲಿ ಇಟ್ಟುಕೊಂಡು Re-organization Committeeಯನ್ನು ಈಗ announce ಮಾಡಿದ್ದಾರೆ De-Limitation Committee ರಾಜ್ಯದಲ್ಲಿ, ರಾಷ್ಟ್ರದಲ್ಲಿ ಇದ್ದಾಗ, ಹೊಸ ಜಿಲ್ಲೆಗಳನ್ನು ಮಾಡಬಾರದು, ಹೊಸ ಹಳ್ಳಿಗಳನ್ನು ನಿರ್ಮಾಣ ಮಾಡಬಾರದು, ಹೊಸ ತಾಲ್ಲೂಕುಗಳನ್ನು ಮಾಡಬಾರದೆಂದು ಇದೆ ಆದರೆ ಇವರು ಒಂದು ಸಣ್ಣ Notification ಅನ್ನು ಕೊಟ್ಟು 11ನೇ

ತಾರೀಖಿನ ಪತಿಕೆಯಲ್ಲಿ ಬರುವ ಹಾಗೆ ಮಾಡಿದ್ದಾರೆ ಈ ರೀತಿಯಾದರೆ ಏನಾಗುತ್ತದೆಂದರೆ, ನಾವು ಈ ವಿಷಯವನ್ನು ಏನಾದರೂ ಕೇಳುವುದಕ್ಕೆ ಹೋದರೆ, ಅದು ನಮಗೆ ಗೊತ್ತಿರಲಿಲ್ಲ, ಸಂಬಂಧವಿರಲಿಲ್ಲ, ಎಂದು ಹೇಳುತ್ತಾರೆ ಅಂದರೆ ಆಲೋಚನೆಯನ್ನು ಮಾಡದೇ, ಅದರ ಬಗ್ಗೆ ಚಿಂತನೆಯನ್ನು ಮಾಡದೇ, decision ತೆಗೆದುಕೊಳ್ಳುವುದು, announce ಮಾಡುವುದು ಆನಂತರ practically ಅನುಷ್ಠಾನದಲ್ಲಿ ತರಬೇಕಾದಾಗ, ನಾವು ಇದು ಈ ರೀತಿಯಾಗುತ್ತದೆಂದು ಮೊದಲು ಆಲೋಚನೆ ಮಾಡಿರಲಿಲ್ಲವೆಂದು ಹೇಳುವುದು ಇಂತಹ ಕೆಲಸಗಳನ್ನು ಮಾಡಿಕೊಂಡು ಎಷ್ಟು ತಪ್ಪುಗಳನ್ನು ಮಾಡುತ್ತಾರೋ, ಜನರು ಇವರನ್ನು ಎಷ್ಟು ಕ್ಷಮಿಸುತ್ತಾರೋ, ಅದು ನನಗೆ ಗೊತ್ತಿಲ್ಲ ನಾಳೆ ದಿವಸ ನೀರಿನದ್ದು ಕೂಡ ಇದೇ ರೀತಿಯಾಗಿ ಆಗುತ್ತಿದೆ ಅವರು ತಮ್ಮ ಸ್ಪಷ್ಟವಾದ ನಿಲುವನ್ನು awardನಲ್ಲೆ ಹೇಳಿದ್ದಾರೆ ಆ awardನಲ್ಲಿ ಏನು ಹೇಳಿದ್ದಾರೆಂದರೆ, 'Only 1/3 of this is considered on the ground that 2/3 of Bangalore is outside the Cauvery basin.' ಅಂದರೆ 2/3 city ಗೆ ಕಾವೇರಿ ನೀರನ್ನು ನೀವು ಕೊಡುವ ಹಾಗೆ ಇಲ್ಲ ನೀವು ಬೋರ್‌ವೆಲ್‌ನ ನೀರನ್ನು ಕುಡಿಯಿರಿ, ಟ್ಯಾಂಕ್‌ಗಳ ನೀರನ್ನು ಕುಡಿಯಿರಿ, ಅಥವಾ ಮಳೆನೀರನ್ನು ಸಂಗ್ರಹಿಸಿ, ನೀವು ಅದರಿಂದ ಏನಾದರೂ ಮಾಡಿಕೊಳ್ಳಿ, ಇದಕ್ಕೆ ಸಂಬಂಧವಿಲ್ಲವೆನ್ನುವ ಮಾತನ್ನು ಅವರು ಹೇಳಿರಬೇಕಾದರೆ, ಮುಂದಿನ ಪರಿಸ್ಥಿತಿಯನ್ನು ನಾವು ಊಹಿಸಬಹುದು ನಾಳೆ ಈ ಸಿಟಿ ಬೆಳೆದಂತೆ, ನಾವು ಇದನ್ನು Special Economic Zone ಮಾಡುತ್ತೇವೆ International Airport ಮಾಡುತ್ತೇವೆ, ಬೇರೆ ಬೇರೆ investors ಅನ್ನು ಇಲ್ಲಿಗೆ ತರುತ್ತೇವೆ, ಅವರನ್ನು attract ಮಾಡುತ್ತೇವೆ, ಮತ್ತೆ ಬೆಂಗಳೂರು ನಗರ ವಿಶೇಷವಾದಂಥ Electronic City ಆಗಿ ಪರಿವರ್ತನೆಯಾಗುವಂಥಾದ್ದು, ಇವೆಲ್ಲವೂ ಇದ್ದಾಗ, ನಿಜವಾಗಿಯೂ ಈ ತೀರ್ಪಿನಿಂದ ಒಂದು ದೊಡ್ಡ ಅನ್ಯಾಯ ನಮಗೆ ಆಗಿದೆ ಇದರ ಜೊತೆಗೆ ಇನ್ನೊಂದು ವಿಚಾರವನ್ನು ತಮ್ಮ ಗಮನಕ್ಕೆ ತರುವುದೇನೆಂದರೆ, ನಮಗೆ ನೀರು 30 TMC expectation ಇದ್ದರೂ ಕೂಡ, ಅವರು ಕೊಟ್ಟಿದ್ದು ಕೇವಲ 1 75 TMC ನೀರನ್ನು ಬೆಂಗಳೂರಿಗೆ ಕೊಟ್ಟಿರುವಂಥಾದ್ದು ಅಂದರೆ 0 5 TMC ಹೆಚ್ಚು ಕಡಿಮೆ ಇದನ್ನು ಒಪ್ಪಿಕೊಂಡ ಹಾಗೆ ಆಗುತ್ತದೆ ಇದನ್ನು ಒಟ್ಟಾರೆ ಹಾಕಿದರೆ, ಎಷ್ಟು

ವಿಸ್ತೀರ್ಣದಲ್ಲಿ ಎಷ್ಟು ನೀರನ್ನು ನಾವು ಸಂಗ್ರಹಣೆ ಮಾಡಬಹುದು, ಅಥವಾ ನಮಗೆ ಬರುತ್ತದೆಂಬುದಕ್ಕೆ ಮಾನ್ಯ ದಿನೇಶ್ ಗುಂಡೂರಾವ್‌ರವರು figures ಕೊಟ್ಟರು ಮಾನ್ಯ ಸಿದ್ದರಾಮಯ್ಯನವರು ಕೂಡ ಹೇಳಿದ್ದಾರೆ ಮಾನ್ಯ ಜೆ ಸಿ ಮಾಧುಸ್ವಾಮಿಯವರು ಕೂಡ ಹೇಳಿದ್ದಾರೆ ಇದರಲ್ಲಿ, 'Though the yield contribution of Karnataka to the system is 392 TMC or 53% assessed yield of 740 TMC' ಅಂದರೆ 740 TMC ನೀರಿನಲ್ಲಿ 392 TMC ನೀರು ಕರ್ನಾಟಕ ರಾಜ್ಯದಿಂದ ಹೋಗುತ್ತದೆನ್ನುವ ಮಾತನ್ನು ಅವರೇ ಒಪ್ಪಿಕೊಂಡಿದ್ದಾರೆ ಆದರೆ ನಮಗೆ ಸಿಕ್ಕ ನೀರು ಎಷ್ಟೆಂದರೆ, 270 TMC, ಅಂದರೆ ಕೇವಲ 36% ಆಗುತ್ತದೆ, ನಮ್ಮ contribution 53% ಇದ್ದರೂ ಕೂಡ, ನಮಗೆ ಈಗ allocation ಆಗಿದ್ದು ಕೇವಲ 36% ಮಾತ್ರ ಆಗಿದೆ ಅಂದರೆ ಇದರಿಂದ ಮೇಲ್ನೋಟಕ್ಕೆ ಅನ್ಯಾಯವೆಂದು figuresನಲ್ಲಿ ಗೊತ್ತಿದ್ದರೂ, ಕೂಡ ಯಾವ ಕಾರಣಕ್ಕಾಗಿ ಇಂಥ judgment ಬಂದಿದೆಯೆಂಬುದು ನಮಗೆ ಅರ್ಥವಾಗುತ್ತಿಲ್ಲ ಇನ್ನೊಂದು ವಿಚಾರವೇನೆಂದರೆ ತಮಿಳುನಾಡಿನವರ contribution '30% to the yield or 220 TMC, gets a share of 433 TMC or 58%' ಅಂದರೆ ಅವರು contribute ಮಾಡುವಂಥಾದ್ದು 740 TMC ಗೆ ಕೇವಲ 222 TMCಗೆ ಮಾತ್ರ ಅವರು contribute ಮಾಡುತ್ತಾರೆ ಆದರೆ ಅವರು ತೆಗೆದುಕೊಳ್ಳುವಂಥಾದ್ದು ಎಷ್ಟೆಂದರೆ, 433 TMC ನೀರನ್ನು ತೆಗೆದು ಕೊಳ್ಳುತ್ತಾರೆ ಅಂದರೆ ಹೆಚ್ಚು ಕಡಿಮೆ 58% ಆಗುತ್ತದೆ, ನಮಗೆ 36% ಇದೆ ಈ ರೀತಿಯಾಗಿ ಇವತ್ತು ಮೇಲ್ನೋಟಕ್ಕೆ ಇದೆಲ್ಲವನ್ನು ನೋಡಿದಾಗ ಎಲ್ಲೊ ಒಂದು ಕಡೆ ತಪ್ಪಾಗಿದೆ ಇದನ್ನು ಸರಿಪಡಿಸುವಂಥಾದ್ದು ಹೇಗೆ? ಒಂದು suggestion ಅನ್ನು ಎಲ್ಲರೂ ಹೇಳಿದ್ದಾರೆ ನಾನು ಕೂಡ ಒಂದು ಸಲಹೆಯನ್ನು ಕೊಡುವುದೇನೆಂದರೆ, ಎಲ್ಲಿಯವರೆಗೆ National Water Policy ಆಗುವುದಿಲ್ಲವೊ, ಅಲ್ಲಿಯವರೆಗೂ ಇಂತಹ ಸಮಸ್ಯೆಗಳು ಬಗೆ ಹರಿಯುವುದಿಲ್ಲ ಇದು ನಮ್ಮದೊಂದೇ ಪ್ರಶ್ನೆಯಲ್ಲ ಇವತ್ತು ಪಂಜಾಬ್ – ಹರಿಯಾಣದ ಪ್ರಶ್ನೆ ಇರಬಹುದು, ಮಧ್ಯಪ್ರದೇಶ – ಮಹಾರಾಷ್ಟ್ರದ ಪ್ರಶ್ನೆ ಇರಬಹುದು ಅಥವಾ ಬಿಹಾರ–ಉತ್ತರಪ್ರದೇಶದ ಪ್ರಶ್ನೆ ಇರಬಹುದು, ಉತ್ತರಪ್ರದೇಶ–ದೆಹಲಿಯ ಪ್ರಶ್ನೆ ಇರಬಹುದು, ಮಹಾರಾಷ್ಟ್ರ–ಕರ್ನಾಟಕದ್ದು

ಇದೆ, ಕರ್ನಾಟಕ–ಆಂಧ್ರಪ್ರದೇಶದ್ದು ಇದೆ, ತಮಿಳುನಾಡಿನದ್ದು ಇದೆ ಈ ರೀತಿ inter–state water dispute ಎಲ್ಲಾ ಕಡೆಗಳಲ್ಲೂ ಇದೆ ಅದಕ್ಕಾಗಿ ನಾವು ಒಂದು ಜಲ ನೀತಿಯನ್ನು ಮಾಡುವಂಥಾದ್ದು ಬಹಳ ಪ್ರಮುಖವಾಗಿದೆ ಇದಕ್ಕೆ ಒತ್ತಡ ತರುವಂತಹ ಕೆಲಸವನ್ನು ಎಲ್ಲಾ ರಾಜ್ಯಗಳು ಮಾಡಬೇಕಾಗುತ್ತದೆ ನಮ್ಮ ರಾಜ್ಯದ ಅಸೆಂಬ್ಲಿಯೊಂದೇ ಅಲ್ಲ ನಾವು ಕೇಳಿಕೊಳ್ಳಬಹುದು, ಈ ಸಂದರ್ಭದಲ್ಲಿ ನಮಗೆ ಅನ್ಯಾಯವಾಗಿದೆಯೆಂದು ಈ ಮಾತನ್ನು ಹೇಳುತ್ತಿದ್ದೇವೆ ಆದರೆ ನಿಜವಾಗಿಯೂ ನ್ಯಾಯ ಸಿಗಬೇಕಾದರೆ, ನಾವು ಕೂಲಂಕಷವಾಗಿ ಇದಕ್ಕೆ ಒಂದು basic structures ಏನು ಇವೆ, ಅಥವಾ ಯಾವ ನೀತಿ ಮೇಲೆ ನಾವು ನಿರ್ಣಯವನ್ನು ತೆಗೆದುಕೊಳ್ಳಬಹುದು, ಯಾವ ನೀತಿಯ ಮೇಲೆ ನಾವು ನೀರನ್ನು ಹಂಚಬಹುದು, ಎಂದು ಯೋಚನೆ ಮಾಡಿದಾಗ, ಯಾವುದಾದರೂ ಒಂದು ನೀತಿಯನ್ನು ನಾವು ಮಾಡಲೇ ಬೇಕು ಅದಕ್ಕೆ Nation Water Policy ಇಡೀ ದೇಶಕ್ಕೆ ಒಂದೇ ಇದ್ದರೆ, ಖಂಡಿತವಾಗಿ ನ್ಯಾಯ ಸಿಗುತ್ತದೆ ನೀರು ಹೆಚ್ಚಿಗೆ, ಇದ್ದರೂ ಕೂಡ, ಇಷ್ಟು percentage ನಾವು ನೀರು ಇಲ್ಲದೇ ಇರುವವರಿಗೆ ಕೊಡುತ್ತೇವೆ, ಅಥವಾ ಯಾವ area ದಲ್ಲಿ, ಯಾವ stateನಲ್ಲಿ, ಹೆಚ್ಚಿನ ಬರಗಾಲದ ಪ್ರದೇಶವಿದೆ ಅಥವಾ ಹೆಚ್ಚಿನ ನೀರಾವರಿ ಇಲ್ಲ, ಅಂಥಾದ್ದಕ್ಕೆ ಈ percentage ಅನ್ನು fix ಮಾಡಿದ್ದೇವೆ, ಅಥವಾ ಮಳೆ ಬೀಳುವಂಥಾದ್ದು ಯಾವ ರಾಜ್ಯದಲ್ಲಿ ಹೆಚ್ಚಾಗಿದೆ, ಅದರ ಪ್ರಮಾಣವನ್ನು ನೋಡಿದ್ದೇವೆ, ಅಥವಾ catchment area ವನ್ನು ನೋಡಿ ನಾವು ಮಾಡಿದ್ದೇವೆ ಈ ರೀತಿಯಾಗಿ ಏನಾದರೂ ಒಂದು criteria ಬೇಕಲ್ಲಾ ಈ criteria ಇಲ್ಲದೇ, ಇವತ್ತು ಅವರು ಅನೇಕ ಸಾರಿ ಸುಮ್ಮನೆ ಬಂದರು, ಹೋದರು, ಅವರು ಒತ್ತಡಕ್ಕೆ ಮಣಿದಿದ್ದಾರೆಂಬುದನ್ನು ನಾವು ಹೇಳುವುದಿಲ್ಲ ನಾವು ಮಾತನಾಡಿಕೊಂಡಿದ್ದೇವೆ, Tribunal Members ಮೇಲೆ, ಅಥವಾ Supreme Court Judges ಮೇಲೆ ನಾವು ಅನಾವಶ್ಯಕವಾಗಿ allegation ಮಾಡಬಾರದೆಂದು ನಾವೇ ನಿರ್ಬಂಧವನ್ನು ಹಾಕಿಕೊಂಡಿದ್ದೇವೆ ಅದಕ್ಕೆ ನಾನು ಹಾಗೆ ಹೇಳುವುದಿಲ್ಲ, ಆದರೆ ಇಲ್ಲಿ ಮೇಲ್ನೋಟಕ್ಕೆ ಕಾಣುವಂಥ ಅನ್ಯಾಯವನ್ನು ಸರಿಪಡಿಸುವುದಕ್ಕೆ ಕೇಂದ್ರ ಸರ್ಕಾರ ಕೂಡ ಒಂದು ಜಲನೀತಿಯನ್ನು ಮಾಡಲೇ ಬೇಕಾದ್ದು, ಅದು ಇವತ್ತು ಇಲ್ಲವೆಂದರೆ ನಾಳೆ ದಿವಸ ಮಾಡಬೇಕಾಗುತ್ತದೆ ಇದು ಒಂದು compulsion. ಇಲ್ಲವೆಂದರೆ

ರಾಜ್ಯ ರಾಜ್ಯಗಳ ಮಧ್ಯೆ ಒಡಕುಗಳು, ಜಗಳಗಳು ಆಗುತ್ತವೆ ನಾವು ಮೊನ್ನೆ ನೋಡಿದ ಹಾಗೆ, ಕೇವಲ ಒಂದು Head Office ಅನ್ನು shift ಮಾಡುವುದಕ್ಕೆ West Begal v/s Tamil Nadu ಗಳ ನಡುವೆ ಜಗಳ ಆಯಿತು ಅಂದರೆ offices ಅನ್ನು shift ಮಾಡುವುದಕ್ಕೆ, Head Quarters ಅನ್ನು shift ಮಾಡುವುದಕ್ಕೆ ಇಂತಹ ಹೊಡೆತಗಳು ನಡೆಯುವಂಥಾದ್ದು ಆದರೆ, ಇಲ್ಲಿ ಇದು ಜೀವನ್ಮರಣದ ಪ್ರಶ್ನೆ ಇದೆ ಮನುಷ್ಯ ಬದುಕುವ ಪ್ರಶ್ನೆ ಇದೆ ಇಂಥ ಪ್ರಶ್ನೆಗಳು ಬಂದಾಗ naturally ಇವತ್ತಲ್ಲ ನಾಳೆ ಪ್ರತಿಯೊಂದು ರಾಜ್ಯಗಳ ಮಧ್ಯದಲ್ಲಿ ಘರ್ಷಣೆಯಾಗುವ ಸಾಧ್ಯತೆಗಳಿವೆ ಇದನ್ನು avoid ಮಾಡಬೇಕೆಂದರೆ ಒಂದು ರಾಷ್ಟ್ರೀಯ ಜಲನೀತಿ ಬೇಕು ಇದಕ್ಕೆ ಎಲ್ಲರೂ ಕೂಡ ಒತ್ತಾಯ ಮಾಡಬೇಕು ನಾವೂ ಕೂಡ ಒತ್ತಾಯ ಮಾಡುತ್ತೇವೆ ಬಹುಶ resolution ನಲ್ಲೂ ಕೂಡ ಆ ಒತ್ತಾಯ ಬರುತ್ತದೆ ಎಂದು ನಾನು ಭಾವಿಸಿದ್ದೇನೆ ಅದಕ್ಕೆ, ರಾಷ್ಟ್ರೀಯ ಜಲನೀತಿಯ ಜೊತೆಯಲ್ಲಿ ಏನು available facts ಇವೆ ಅದನ್ನು ನೋಡಿ ಮಾಡಿ ಮತ್ತು need based ತೀರ್ಮಾನ ಮಾಡಿ ಬರಗಾಲ ಯಾವ ಪ್ರದೇಶದಲ್ಲಿ ಹೆಚ್ಚಿಗೆ ಇದೆ ಅದನ್ನು ಗಣನೆಗೆ ತೆಗೆದುಕೊಳ್ಳಲಿಲ್ಲ ತಮಿಳುನಾಡಿನಲ್ಲಿ ಹೆಚ್ಚಿನ ನೀರನ್ನು ತೆಗೆದುಕೊಳ್ಳುತ್ತಿದ್ದಾರೆ ಹೆಚ್ಚಿನ area ಸಹ ಅವರ ಅಚ್ಚುಕಟ್ಟಿನಲ್ಲಿದೆ, ಅದಲ್ಲದೇ, underground water ಅವರಿಗೆ ಜಾಸ್ತಿ ಇದೆ ನನಗೆ ನಗು ಬರುತ್ತದೆ ಮೊನ್ನೆ ನಾನು ಒಂದು ಪ್ರಶ್ನೋತ್ತರ ನೋಡಿದೆ BPL card ಕೊಡುತ್ತಾರಲ್ಲಾ ಅದರಲ್ಲಿ ಹಾಸನ ಅತ್ಯಂತ ಹೆಚ್ಚಿನ ನೀರಾವರಿ ಪ್ರದೇಶದಲ್ಲಿದೆ ಎಂದು ಇದೆ ಗುಲ್ಬರ್ಗಾ, ಬಿಜಾಪುರ, ಕೋಲಾರಕ್ಕೆ ಹೋಲಿಸಿದರೆ ಅಲ್ಲಿ BPL cards 80% ಇದೆ BPL card ಗಳಲ್ಲಿ ಸ್ವಲ್ಪ expect ಮಾಡುವುದೇನೆಂದರೆ, ಯಾವ ಪ್ರದೇಶದಲ್ಲಿ ನೀರಾವರಿ ಇಲ್ಲ, income ಕಡಿಮೆ ಇದೆ, ಆದಾಯ ಇಲ್ಲ, unemployment ಇದೆ ಅದರ ಆಧಾರದ ಮೇಲೆ survey ಮಾಡಿ ಹೆಚ್ಚು ಕಡಿಮೆ BPL cards ಕೊಡುತ್ತೇವೆ ಆದರೆ, ಹಾಸನದಲ್ಲಿ 80% ಅಂದರೆ ಮಾಧುಸ್ವಾಮಿಯವರು ಹೇಳಿದ ಹಾಗೆ 93% ಆಗಿದೆ ಅಂದರೆ ನೀರಾವರಿ ಪ್ರದೇಶ ಹೆಚ್ಚಾಗಿರತಕ್ಕಂಥ ಜಾಗದಲ್ಲಿ ಬಡವರು ಹೆಚ್ಚಾಗಿದ್ದಾರೆ, ಗುಲ್ಬರ್ಗಾ, ತುಮಕೂರು, ಕೋಲಾರ, Bangalore(Rural)ನಂಥ district ಗಳಲ್ಲಿ ಕಡಿಮೆ ಇದ್ದಾರೆ ಇದು ನಮ್ಮ tribunal ನವರು ತೀರ್ಪು ಕೊಟ್ಟ ಹಾಗಿದೆ ಅಂದರೆ,

ಎಲ್ಲಿ catchment ಜಾಸ್ತಿ ಇದೆ, ಎಲ್ಲಿ ನಮ್ಮ contribution ಜಾಸ್ತಿ ಇದೆ, ನಮಗೆ consumption ಬೇಕು, ಬೆಳೆಯತಕ್ಕಂಥ city, ಇಲ್ಲಿ nearly 30–35% Tamilians ನೀರು ಕುಡಿಯುವುದು, education ತೆಗೆದುಕೊಳ್ಳುವುದು, industry ಗಳು ಇಡೀ ದೇಶದ ಜನರೇ ಇಲ್ಲಿ ಬರುತ್ತಿದ್ದಾರೆ ನಮ್ಮವರದಂತು ಒಂದೂ industry ಇಲ್ಲ ಜಮೀನು ನಮ್ಮದು, ನೀರು ನಮ್ಮದು, electricity ನಮ್ಮದು ಎಲ್ಲ ನಮ್ಮದು ಕೊಟ್ಟು ದೇಶ ಎಲ್ಲ ಒಂದೇ ಎಂದು ತಿಳಿದುಕೊಂಡು ನಾವು ಉದಾರ ಭಾವನೆಯಿಂದ ಎಲ್ಲರಿಗೂ ಸಹಾಯ ಮಾಡುತ್ತಿದ್ದೇವೆ ನಮ್ಮ city ಬೆಳೆಯಬೇಕು, ನಮ್ಮದು domestic production ಹೆಚ್ಚಾಗಬೇಕು ಎಂದು ಹೇಳಿ ನಾವು ಉದಾರವಾಗಿ ಎಲ್ಲರಿಗೂ ಕೊಡುತ್ತಲೇ ಇದ್ದೇವೆ ಅದಕ್ಕೆ ಇಲ್ಲಿ ನಾವು ಹೆಚ್ಚಿಗೆ ನೀರು contribute ಮಾಡಿದರೂ ಕೂಡ ನಮ್ಮ catchment area ಹೆಚ್ಚಿಗೆ ಇದ್ದರೂ ಕೂಡ ನಮಗೆ 36% allocation ಇದೆ ಅವರ contribution ಕಡಿಮೆ ಇದ್ದರೂ ಕೂಡ ಅವರಿಗೆ 58% allocation ಇದೆ ಹಾಗೆ, ನೀರಾವರಿ ಜಾಸ್ತಿ ಇದ್ದರೂ ಕೂಡ BPL card ಗಳು ಜಾಸ್ತಿ ಇದು ಹೀಗೇ ನಡೆದಿದೆ 'ಅಂಧೇರಿ ನಗರಿ ಚೌಪಟ್ ರಾಜ', 'ಟಕೇಶರ್ ಬಾಜೀ ಟಕೇಶರ್ ಕಾಯರ' ಎಂದ ಹಾಗೆ ಕುರುಡರ ರಾಜ್ಯದಲ್ಲಿ ಇದು ನಡೆದಿದೆ ಅದಕ್ಕೆ ದಯವಿಟ್ಟು ಇದನ್ನು set right ಮಾಡಿ ಇದು ಸರಿಯಾಗಿಲ್ಲ ಇವತ್ತಲ್ಲ, ನಾಳೆ, ಪ್ರಕಾಶ್‌ರವರು Home Minister ಇದ್ದಾಗ ಏನಾಯಿತೆಂದು ಮುಂದೆ ಬರುವವರು ಕೇಳುವವರಿದ್ದಾರೆ ಇಂಥ ಒಂದು ಪ್ರಮುಖವಾದಂಥ resolution ನಾವು ತರುವಾಗ ನಾವೆಲ್ಲರೂ ಇಲ್ಲಿದ್ದೇವೆ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳೂ ಇರಬೇಕು ಏಕೆಂದರೆ, ಇದಕ್ಕೊಂದು ಗಂಭೀರತೆ ಬರಬೇಕಾದರೆ ಎಲ್ಲರೂ ಕೇಳಬೇಕು ಆದರೆ, ದುರ್ದೈವ ಎಂದರೆ, ಹೊಸದಾಗಿ ಚುನಾಯಿತರಾಗಿ ಬಂದ ಸದಸ್ಯರೂ ಕಡಿಮೆ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿಗಳಂತೂ ಇರುವುದೇ ಇಲ್ಲ ಇದೇನೋ ನನಗರ್ಥವಾಗುತ್ತಿಲ್ಲ ಏಕೆ ಹೀಗೆ? ಏನಾದರೂ ಬಹಳ urgent ಕೆಲಸ ಇದ್ದರೆ ಆಯಿತು ಎನ್ನಬಹುದು Urgent ಕೆಲಸ ಏನಿದೆ? ಇದೇ important ಕೆಲಸವೆಂದೇ Session ಕರೆಸಿದ್ದೀರಿ

ಶ್ರೀ ಜೆ ಸಿ ಮಾಧುಸ್ವಾಮಿ ಪ್ರಕಾಶ್‌ರವರಿಗೆ GPA ಮಾಡಿ ಕೊಟ್ಟುಬಿಟ್ಟಿದ್ದಾರೆ

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ General Power of Attorney can be withdrawn at anytime ತಮಗೆ General Power of Attorney ಕೊಟ್ಟಿದ್ದಾರೆಂದು ನೀವು ಹಾಗೆ ತಿಳಿದುಕೊಂಡಿದ್ದೀರಿ ನಿಮಗೆ ಗೊತ್ತಿಲ್ಲ ಯಾವಾಗ, ಯಾವ ಗಂಟೆಯಲ್ಲಿ, ಯಾವ minute ನಲ್ಲಿ, ಯಾವ ಕ್ಷಣದಲ್ಲಿ

ಶ್ರೀ ಜಯಪ್ರಕಾಶ್ ಹೆಗ್ಡೆ ಕೆ Irrevocable ಕೊಟ್ಟಿದ್ದರೆ?

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ ಇಲ್ಲ Irrevocable ಇಲ್ಲವೇ ಇಲ್ಲ ನಾನು ಎರಡೇ ವರ್ಷ practice ಮಾಡಿದ್ದು ಗೊತ್ತಿದ್ದದ್ದು ಇಷ್ಟೇ ಅದಕ್ಕಾಗಿ ಅದನ್ನು ಯಾವಾಗ ಬೇಕೋ ಆಗ ವಾಪಸ್ಸು ತೆಗೆದುಕೊಳ್ಳುತ್ತಾರೆ ಅದಕ್ಕೆ ನೀವು ಪ್ರತಿ ಸಲ ಅದನ್ನೇ ನಮ್ಮಲ್ಲಿ Power of Attorney ಇದೆ ಎಂದು ತಿಳಿದುಕೊಂಡು ನಮಗೆ cool down ಮಾಡುವುದಕ್ಕೆ ಬರಬೇಡಿ

ಶ್ರೀ ಎಂ ಪಿ ಪ್ರಕಾಶ್ (ಗೃಹ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳ ಸಚಿವರು) ನೀವೆಲ್ಲ 8–8 ಸಲ ಗೆದ್ದು ಬಂದಿದ್ದೀರಿ ತಾವೇ ಬೆಳಗ್ಗೆ ಬಂದವರು ಸಾಯಂಕಾಲದವರೆಗೂ ಕುಳಿತಿರುತ್ತೀರಿ ಆ ರೀತಿಯಾಗಿ ನಾವು ಕಲಿಯಬೇಕು ನಿಮ್ಮನ್ನು ನೋಡಿ ನಾವು ಕಲಿತು ಸುಮ್ಮನೆ ಕುಳಿತಿದ್ದೇವೆಯೇ ವಿನ Power of Attorney ನನಗಿಲ್ಲ ಏಕೆಂದರೆ, ಕಲಿಯಬೇಕು ಎನ್ನುವ ಆಸಕ್ತಿ ಇರುವುದರಿಂದ ನಾವು ಕುಳಿತು ಕೇಳುತ್ತಿದ್ದೇವೆ ನಮಗೆ ಬೇಸರವಿಲ್ಲ

ಶ್ರೀ ಬಿ ಶಿವರಾಂ ಹಾಗಾದರೆ, ಬೇರೆಯವರಿಗೆ ಕಲಿಯುವ ಆಸಕ್ತಿ ಇಲ್ಲ

ಶ್ರೀ ಎಂ ಪಿ ಪ್ರಕಾಶ್ ಬಹಳ ಜನರಿಗೆ ಆಸಕ್ತಿ ಇಲ್ಲವೆಂದು ಹೇಳಿದರು

ಶ್ರೀ ಜೆ ಸಿ ಮಾಧುಸ್ವಾಮಿ ನಿಮ್ಮಿಂದಲೇ ಅಲ್ಲಿರುವವರೆಲ್ಲ ಕಲಿಯ ಬೇಕು, ಅಷ್ಟು senior ನೀವು, ಅಷ್ಟು ಹೊತ್ತು ನೀವು ಇಲ್ಲಿ ಕುಳಿತುಕೊಳ್ಳುತ್ತೀರಿ ಅವರಿಗೂ ಸಹ ಸ್ವಲ್ಪ ನಿಮ್ಮ ಪಾರ ಹೇಳಿ ಸಾರ್

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ ಇವೆಲ್ಲ serious matter, ಇಡೀ ರಾಜ್ಯಕ್ಕೆ effect ಆಗುವಂಥದ್ದು ಇದೆ ಇದೇನೋ routine ಇರುತ್ತದೆ, paper

ನಲ್ಲಿ ಬರುತ್ತದೆ, ಓದಿಕೊಳ್ಳೋಣ ಎಂದು ಈ ರೀತಿಯಾಗಿ ಹೋದರೆ ಅವರಿಗೂ ಒಳ್ಳೆಯದಲ್ಲ, ಸದನಕ್ಕೂ ಗೌರವ ಕೊಟ್ಟ ಹಾಗೂ ಆಗುವುದಿಲ್ಲ ಏಕೆಂದರೆ, ನಾವು special session ಇದಕ್ಕಾಗಿ ಕರೆಸಿದ್ದೇವೆ ನಾವೆಲ್ಲರೂ ಚರ್ಚೆ ಮಾಡಬೇಕು, ಭಾಗವಹಿಸಬೇಕು, ಒಬ್ಬರಿಗೊಬ್ಬರು ತಿಳಿದುಕೊಳ್ಳಬೇಕು, ಒಮ್ಮತದ ಪ್ರದರ್ಶನ ಮಾಡಬೇಕು ಎನ್ನತಕ್ಕಂಥ ದೃಷ್ಟಿಯಿಂದ ನಾವು ಮಾಡಿದ್ದೇವೆ ಅದಕ್ಕೆ ಎಲ್ಲರೂ ಇದ್ದರೆ ಒಳ್ಳೆಯದಾಗುತ್ತದೆ ಎನ್ನತಕ್ಕಂಥದ್ದು ನಮ್ಮ ವಾದವಿದೆ ಇಲ್ಲ, ನಾನಿರಲಿಲ್ಲವೆಂದರೆ ಏನು, ಹಿಂದೆ ಇರಲಿಲ್ಲವೇನು, ಎಂಬಂತಹ ನಿಮ್ಮ ವಾದಗಳಿವೆಯಲ್ಲ, ಇಂಥ ಎಷ್ಟೋ ಉದಾಹರಣೆಗಳಿವೆ ಅನ್ನುವುದು, ನಿಮಗೆ ರೆಡಿ ಮಾಡಿರುತ್ತಾರೆ, ನೀವು ಓದಿಕೊಂಡು ಆ ಪುಸ್ತಕಗಳನ್ನೇ ತಂದೇ ಬಿಡುತ್ತೀರಿ ಯಾವುದು precedents, ದೇವರಾಜ ಅರಸರ ಕಾಲದಲ್ಲಿ ಹೀಗಾಯಿತು, ಗುಂಡೂರಾವ್‌ರವರ ಕಾಲದಲ್ಲಿ ಹೀಗಾಯಿತು, ಪಟೇಲರ ಕಾಲದಲ್ಲಿ ಹೀಗಾಯಿತು ಎಂದು ಹೇಳಿ ready made reference ಸಿಕ್ಕುತ್ತದೆ, ತಂದು ನಮ್ಮ ಮುಂದಿಟ್ಟು ಹೇಳಿಬಿಡುತ್ತೀರಿ ಇನ್ನು ನಾವೇನು ಹೇಳುವುದು? ಆದರೆ, ಅದಕ್ಕೆ compare ಮಾಡಿಕೊಳ್ಳತಕ್ಕಂಥದ್ದು ಆಗಬಾರದು ನಾವು ಕಲಿಯಬೇಕು Inevitable ಇದ್ದರೆ ಮಾಡಿ ಇವತ್ತು ಯಾವುದೋ ಒಂದು ಕೆಲಸವಿದೆ, ಅದಕ್ಕೆ ಅವರು ಬರಲಿಕ್ಕೆ ಸಾಧ್ಯವೇ ಇಲ್ಲವೆಂದರೆ ಆಗಲಿ ಆದರೆ, special ಆಗಿ ಸದನವನ್ನು ಕರೆಸಿದಾಗ ಇದ್ದು ನೋಡತಕ್ಕಂಥದ್ದು, ಬಹಳ ಮುಖ್ಯ ಅದಕ್ಕೆ ಕೊನೆಯದಾಗಿ ನಾನು ಇಷ್ಟೇ insist ಮಾಡುವುದು, ನಾವೆಲ್ಲರೂ ಸೇರಿ National Water Policy ಮಾಡುವುದಕ್ಕೆ ಪ್ರಯತ್ನ ಮಾಡಬೇಕು ಎಲ್ಲರೂ ಕೂಡ ಇದರ ಬಗ್ಗೆ ಒತ್ತಾಯವನ್ನು ಮಾಡತಕ್ಕಂಥದ್ದು ಅವಶ್ಯಕತೆ ಇದೆ ಅದಕ್ಕೆ ಸುಮ್ಮನೆ ಒಬ್ಬರಿಗೊಬ್ಬರು ನಾನು ಕೇಂದ್ರ ಸರ್ಕಾರಕ್ಕೆ ಹೇಳಬೇಕು, ಕೇಂದ್ರ ಸರ್ಕಾರದ ಮೇಲೆ ನಾವು ಒತ್ತಾಯ ಮಾಡುತ್ತಿದ್ದೇವೆ ಎಂದು ಒಬ್ಬರು ಹೇಳುವುದು, ಅವರ್ಯಾಕೆ ಮಾಡಿಲ್ಲ ಎಂದು ಇನ್ನೊಬ್ಬರು ಕೇಳುವುದು, ಇದು ಅವರ ಕರ್ತವ್ಯ ಎಂದು ಹೇಳುವುದು, ಇದರಲ್ಲಿ ಯಾವ ಪ್ರಯೋಜನ ಕೂಡ ಆಗುವುದಿಲ್ಲ ಇನ್ನು Supreme Court ಗಿಂತಲೂ, Prime Minister is not above the Supreme Court. ಆ Tribunal ಗಿಂತಲೂ he is not above the Supreme Court ಎಲ್ಲ ಕಾನೂನುಗಳು, ನಾವೆಲ್ಲರೂ ಕೂಡ ಸಂವಿಧಾನದ ಚೌಕಟ್ಟಿನಲ್ಲಿ ನಡೆದುಕೊಳ್ಳತಕ್ಕಂಥದ್ದು ಇದೆ ಏನೋ ವಾಟಾಳ್

ನಾಗರಾಜ್ ಸಾಹೇಬರಿಗೆ ಸ್ವಲ್ಪ ಬಿಟ್ಟಿದ್ದೇವೆ ಅವರು ಒಂದೊಂದು ಸಾರಿ ತಮ್ಮ ವ್ಯಾಖ್ಯಾನದಲ್ಲಿ ಹೇಳುತ್ತಾರೆ ಅದು ಅವರಿಗೆ ಬಿಟ್ಟಿದ್ದೇವೆ ಏಕೆಂದರೆ, ಅವರು ಸ್ವತಂತ್ರವಾಗಿದ್ದಾರೆ ಆದರೆ, ನಾವೆಲ್ಲ ಸಂವಿಧಾನದಡಿಯಲ್ಲಿದ್ದೇವೆ ಈ ಒಂದು ಕೆಲಸವನ್ನು ನಾವು ಮಾಡಬೇಕು ಮತ್ತು National Water Policy ಚೌಕಟ್ಟಿನಲ್ಲಿ ಇದರಲ್ಲಿ ನಮಗೆ ನ್ಯಾಯ ಸಿಕ್ಕರೆ ಖಂಡಿತವಾಗಿ ಇದರ ಬಗ್ಗೆ review ಮಾಡತಕ್ಕಂಥದ್ದು ಒಳ್ಳೆಯದು ಅಥವಾ Article 131ರ ಪ್ರಕಾರ Original Suit ಹಾಕಬೇಕೆಂಬುದೇ ಆಗಲಿ ಅಥವಾ Article 132ರ ಪ್ರಕಾರವೇ Special Leave Petition ಹಾಕತಕ್ಕಂಥದ್ದಾಗಲಿ ಆಗಬೇಕು ನಮ್ಮ ದಿನೇಶ್ ಗುಂಡೂರಾವ್‌ರವರು ಹೇಳಿದರು ಅನೇಕ ಸಾರಿ capital punishment ಆದರೂ ಕೂಡ ಅವನಿಗೆ ಫಾಸಿ ಶಿಕ್ಷೆಯಾದರೂ ಕೂಡ ಅಂತಿಮವಾಗಿ President of India ಹತ್ತಿರ ಹೋಗಿ mercy petition ಕೇಳಿಕೊಳ್ಳುತ್ತಾರೆ ಅನೇಕ ಸಾರಿ ಸಾವಿರಾರು ಕೇಸ್‌ಗಳಲ್ಲಿ ಒಂದಾದರೂ ಇದರ ಪ್ರಕಾರ consider ಮಾಡಿ ಎಂದು ಬರುತ್ತದೆ ಹಾಗೆ ಏನಾದರೂ ಆದರೆ ನಾವೆಲ್ಲರೂ ಕೂಡ ಪ್ರಯತ್ನ ಮಾಡಲೇಬೇಕು Mercy petition ಎಂದಾದರೂ ಅನ್ನಿ, mercy petition ಎಂದು ಬೇರೆಯವರು ತಿಳಿದುಕೊಂಡರೂ ಕೂಡ ಇದು ನಮ್ಮ ಹಕ್ಕಿನ ಪ್ರಶ್ನೆ, ಅವರು ಕೊಟ್ಟಂಥ judgment ನಲ್ಲಿ ಕೂಡ ಎಷ್ಟೋ lapses ಅವರ ಕಣ್ಣಿಗೆ ಬೀಳದೇ ಅಥವಾ practically ನೋಡದೇ ಬಂದಿದ್ದಾರೇನೋ ಎನ್ನುವ ಹಾಗೆ facts ನೋಡಿದಾಗ ನಮಗೆ ಕಾಣಿಸುತ್ತಿದೆ ಅದಕ್ಕಾಗಿ, ದಯವಿಟ್ಟು ಇದರ ಬಗ್ಗೆ ಒಂದು ಒಮ್ಮತದ resolution ಅನ್ನು ತಂದು pass ಮಾಡಿ ಅದರ ಬಗ್ಗೆ ನಾವೆಲ್ಲರೂ ಕೂಡ pursue ಮಾಡೋಣವೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ

ಶ್ರೀ ಕೆ ಶ್ರೀನಿವಾಸಗೌಡ (ಕೋಲಾರ) ಮಾನ್ಯ ಉಪಾಧ್ಯಕ್ಷರೆ, ಈ Cauvery final award ಫೆಬ್ರವರಿ 5ನೇ ತಾರೀಖು ಬಂದಿದ್ದು, ಇವತ್ತಿಗೆ 39 ದಿವಸಗಳಾಯಿತು ಇಡೀ ರಾಜ್ಯದಲ್ಲಿ ಸುಮಾರು 39 ದಿವಸಗಳಿಂದಲೂ ಕೂಡ ಮುಖ್ಯವಾಗಿ ಮಾನ್ಯ ವಾಟಾಳ್ ನಾಗರಾಜ್‌ರವರ ನೇತೃತ್ವದಲ್ಲಿ ಎಲ್ಲ ಸಂಘಟನೆಗಳು strike ಅನ್ನು ಮಾಡುತ್ತಿವೆ ಆದರೆ, ಸರ್ಕಾರ ಅದರ ಮೇಲೆ ಹೆಚ್ಚಿಗೆ ಆದ್ಯತೆಗಳನ್ನು ಕೊಡಲಿಲ್ಲವೆನ್ನುವ ಭಾವನೆ ಸಾಮಾನ್ಯ ಮನುಷ್ಯನ

ಮನಸ್ಸಿನಲ್ಲಿಯೂ ಮೂಡಿದೆ ಎನ್ನುವುದು ನನ್ನ ಅನಿಸಿಕೆಯಾಗಿದೆ ಏಕೆಂದರೆ, Award ಬಂದಾಗ "ನಾವೆಲ್ಲರೂ ಸೇರಿ ವಿರೋಧ ಪಕ್ಷಗಳ ಜೊತೆ ಚರ್ಚೆ ಮಾಡಿ ಒಂದು ತೀರ್ಮಾನಕ್ಕೆ ಬರುತ್ತೇವೆನ್ನುವ' ಮಾತನ್ನು ಮಾನ್ಯ ಮುಖ್ಯ ಮಂತ್ರಿಗಳು ಹೇಳುತ್ತಿದ್ದರು ಅದಾದ ಮೇಲೆ ಇನ್ನೊಂದು ಸಲ ಮಾನ್ಯ ಕಾನೂನು ಮಂತ್ರಿಗಳು 'ನಾವು Supreme Court ಗೆ ಹೋಗುತ್ತೇವೆಂದು' ಹೇಳುತ್ತಿದ್ದರು ಹೀಗೆ ಸ್ವಲ್ಪ ಗೊಂದಲಮಯ statementಗಳು ಬಂದಿದ್ದರಿಂದ, ಇದಕ್ಕೆ ಸರ್ಕಾರ ಹೆಚ್ಚಿನ ಆದ್ಯತೆಗಳನ್ನು ಕೊಡಲಿಲ್ಲವೇನೋ ಎನ್ನುವ ಅನಿಸಿಕೆ ನಮ್ಮ ರಾಜ್ಯದ ಜನತೆಗೆ ಬಂದಿದೆ ಎಂದು ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ ಇವತ್ತು ನನಗೆ 1991ನೇ ಇಸವಿಯ ಸಂಗತಿ ಜ್ಞಾಪಕಕ್ಕೆ ಬರುತ್ತಿದೆ ಆಗ ದಿವಂಗತ ಪುಟ್ಟಸ್ವಾಮಿಗೌಡರು ನೀರಾವರಿ ಮತ್ತು PWD Minister ಆಗಿದ್ದರು ದೆಹಲಿಯಿಂದ ನನ್ನ ಯಾರೋ guests ಬಂದಿದ್ದು ಅವರು Ashok Hotel ನಲ್ಲಿ ತಂಗಿದ್ದರು ಆವತ್ತು ಒಂಭತ್ತೂವರೆಗೆ ನಾನು ಅವರನ್ನು ನೋಡಲಿಕ್ಕೆ ಹೋದೆ ಅವರನ್ನು ನೋಡಲಿಕ್ಕೆ ಹೋದಾಗ 'ತಮಿಳುನಾಡಿನವರು ಆ Tribunal ನ Members ಗೆ ಕಾಶ್ಮೀರದಿಂದ ಶಾಲುಗಳನ್ನು ಒಂದೊಂದಕ್ಕೆ ಒಂದರಿಂದ ಒಂದೂವರೆ ಲಕ್ಷ ರೂಪಾಯಿಗಳ ಬೆಲೆಯುಳ್ಳ ಶಾಲುಗಳನ್ನು ತಂದು ಹೊದಿಸಿದರೆಂದು ಆವತ್ತಿನ ಪತ್ರಿಕೆಗಳ ಮುಖಪುಟದಲ್ಲಿ ಬಂದಿತ್ತು ಮಾನ್ಯ ಪುಟ್ಟಸ್ವಾಮಿಗೌಡರು ಇವತ್ತು ನಮ್ಮ ಜೊತೆಯಲ್ಲಿಲ್ಲ ಮಾನ್ಯ ಪುಟ್ಟಸ್ವಾಮಿಗೌಡರು ಈ flower ಬೊಕ್ಕೆಗಳನ್ನು ಆ Tribunal Members ಗೆ ಕೊಡಲು ಅವರ PA ಹಿಡಿದುಕೊಂಡು ಅವರ ಹಿಂದೆ ಹೋದರು ನಾನು ಮಾನ್ಯ ಪುಟ್ಟಸ್ವಾಮಿಗೌಡರಿಗೆ, 'ಏನು ಸ್ವಾಮಿ? ಈ ತರಹ ಪತ್ರಿಕೆಗಳಲ್ಲಿ ಬಂದಿದೆ, ನೀವೊಬ್ಬರೇ ಇಲ್ಲಿ ಓಡಾಡುತ್ತಿದ್ದೀರಿ, ತಮಿಳುನಾಡಿನವರು ಈ ರೀತಿ ಕೊಟ್ಟಿದ್ದಾರೆಂದು ಪತ್ರಿಕೆಗಳಲ್ಲಿ ಬರುತ್ತಿದೆ, ನೀವು ಕೇವಲ ಈ ಬೊಕ್ಕೆಗಳನ್ನು ಎತ್ತಿಕೊಂಡು ಹೋಗಿ ಆ Tribunal Members ಗೆ ಕೊಡುತ್ತಿದ್ದೀರಿ, ಇದು ಸರಿಯಾಗುತ್ತದೆಯೇ, ಸ್ವಲ್ಪ ಯೋಚನೆ ಮಾಡಿ ಎನ್ನುವ ಮಾತನ್ನು ನಾನು ಅವರಿಗೆ ಹೇಳಿದ್ದೆ ಇಲ್ಲ, ಇದು Tribunal Membersಗೆ, ಆ ತರಹ ಏನೂ ಆಗುವುದಿಲ್ಲ, ಎಲ್ಲ ಬಹಳ ಒಳ್ಳೆಯದು ಮಾಡುತ್ತಾರೆನ್ನುವ ಭಾವನೆಯನ್ನು ಅವರು ವ್ಯಕ್ತಪಡಿಸಿದರು ಆದರೆ, ಕಡೆಗೆ ಏನಾಯಿತು? ಇಷ್ಟು ವರ್ಷಗಳು ನಡೆದಂಥ Tribunal ನಲ್ಲಿ ನಮ್ಮ ರಾಜ್ಯಕ್ಕೆ ಎಷ್ಟು ಅನ್ಯಾಯವಾಗಬೇಕೋ ಅಷ್ಟು ಅನ್ಯಾಯವಾಗಿಯೇ

ತೀರಿತು ಈ ತೀರ್ಪು ಹೊರಬಿದ್ದಾಗ ನಮ್ಮ ಹಿರಿಯ ವಕೀಲರು ಇದು fare ಎನ್ನುವ ಉದ್ಘಾರ ಮಾಡಿದರು ಅದರ ಜೊತೆಗೆ ರಾಜ್ಯದ ವಾರ್ತಾ ಇಲಾಖೆಯ ಅಧಿಕಾರಿಗಳು ಕಾವೇರಿ ತೀರ್ಪು ಕರ್ನಾಟಕ್ಕೆ ವರದಾನವೆಂದು ಹೇಳಿದರು ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ರಾಜ್ಯದ ವಾರ್ತಾ ಇಲಾಖೆಯ ಅಧಿಕಾರಿಗಳು ಯಾವುದನ್ನು ಹೇಳಬೇಕಾಗಿತ್ತೋ ಅದನ್ನು ಬಿಟ್ಟು ಇದು ವರದಾನವೆಂದು ಹೇಳಿದರು ಆ ಕಡೆ ತಮಿಳುನಾಡಿನವರು ಅವರಿಗೆ ಹೆಚ್ಚಿಗೆ ನೀರು ಬಂದಿದ್ದರೂ ಕೂಡ ಕರುಣಾನಿಧಿ, ಜಯಲಲಿತಾರವರು– ನಮಗೆ ನೀರು ಸಾಕಾಗಲಿಲ್ಲ, ಕರ್ನಾಟಕದಿಂದ ಇನ್ನೂ ಹೆಚ್ಚಿಗೆ ಬರಬೇಕೆಂದು ಅವರುಗಳಿಂದ statement ಗಳು ಬಂದರೆ ನಮ್ಮ ರಾಜ್ಯದ ವಾರ್ತಾ ಇಲಾಖೆಯ ಅಧಿಕಾರಿ ಆ ತೀರ್ಪು ಕರ್ನಾಟಕಕ್ಕೆ ವರದಾನವೆನ್ನುವ ಮಾತನ್ನು ಹೇಳಿದರೆ, ನಮ್ಮ ರಾಜ್ಯದ ಅಧಿಕಾರಿಗಳು ಇದರ ವಿಷಯದಲ್ಲಿ ಯಾವ ತರಹ ಗೊಂದಲಮಯ ಚಿಂತನೆಯನ್ನಿಟ್ಟುಕೊಂಡಿದ್ದರು, ಇವರು ಏಕೆ ಈ ತರಹ ಹೇಳಿದರು, ಎನ್ನುವುದನ್ನು ಕೂಡ ಮಾನ್ಯ ನೀರಾವರಿ ಮಂತ್ರಿಗಳು ಗಮನಿಸಿ ಸಂಬಂಧಪಟ್ಟ ಅಧಿಕಾರಿಗಳನ್ನು ಸ್ವಲ್ಪ ತರಾಟೆಗೆ ತೆಗೆದುಕೊಳ್ಳಬೇಕು ಏಕೆಂದರೆ ಇವರಿಗೆ ಯಾರು ಹೇಳಿದರು, ಸರ್ಕಾರ ಹೇಳಬೇಕು ಇದು ವರದಾನ ಎಂದು ಹೇಳಲಿಕ್ಕೆ ವಾರ್ತಾ ಇಲಾಖೆಯವರಿಗೆ ಏನು ಅಧಿಕಾರ? Commission ನ ಆವತ್ತಿನ judgement paper ಗಳು ನಮ್ಮ ಕೈಯಿಗೆ ಸಿಕ್ಕಿಲ್ಲ ಅಷ್ಟರೊಳಗಾಗಿ ಇವರು ಅದರ ಬಗ್ಗೆ statement ಮಾಡುವಂಥ ಅವಶ್ಯಕತೆ ಏನಿತ್ತು, ಎನ್ನುವುದನ್ನು ನಾನು ಈ ಸಮಯದಲ್ಲಿ ಕೇಳಲಿಕ್ಕೆ ಇಚ್ಛೆಪಡುತ್ತೇನೆ ಜವಾಬ್ದಾರಿಯುತವಾದ ಈ ಸರ್ಕಾರ 'ನಾವು Supreme Court ಗೆ ಹೋಗಿ ದಾವೆ ಹಾಕುತ್ತೇವೆಂದು' ಒಂದು ಕಡೆ ಹೇಳುತ್ತಾರೆ ಇನ್ನೊಂದು ಕಡೆ ಬೇರೆ ರೀತಿಯಲ್ಲಿ ಪ್ರಸ್ತಾವವನ್ನು ಮಾಡುತ್ತಾರೆ ತಮಿಳುನಾಡಿಗೆ ಅಷ್ಟು ನೀರು ಬಿಟ್ಟಿದ್ದರೂ ಕೂಡ ನಮ್ಮ ಕಡೆ ಒಂದು ಗಾದೆ ಇದೆ ಅದೇನೆಂದರೆ, 'ಸಂತೆಯಲ್ಲಿ ಸಾಮಾನ್ಯವಾಗಿ ಯಾವತ್ತೂ ಮೇಲೆ ಕಟ್ಟಡ ಇರುವುದಿಲ್ಲ ಅಲ್ಲಿ ಉಪ್ಪು ಮಾರುವವನು ಉಪ್ಪು ಇಟ್ಟಿರುತ್ತಾನೆ, ಈ ಕಡೆ ತೆಂಗಿನ ಕಾಯಿ ಮಾರುವವನು ತೆಂಗಿನ ಕಾಯಿ ಇಟ್ಟಿರುತ್ತಾನೆ ಮಳೆ ಬಂದರೆ ಉಪ್ಪು ಮಾರುವವನು ಅಳುತ್ತಿದ್ದರೆ ತೆಂಗಿನ ಕಾಯಿಯವನು ಅಳಲಿಕ್ಕೆ ಪ್ರಾರಂಭ ಮಾಡುತ್ತಾನಂತೆ ಆ ರೀತಿ ತಮಿಳುನಾಡು ರಾಜ್ಯದವರಿಗೆ ಇಷ್ಟೊಂದು ನೀರು ಕೊಟ್ಟಿದ್ದರೂ ಕೂಡ, ಅವರು ಈ ನೀರಿನ ಬಗ್ಗೆ

ಚಕಾರವನ್ನು ಎತ್ತಿದರು ಇಲ್ಲಿ ಬಹಳ ಜನ ಮಾತನಾಡಿದ ಹಾಗೆ, ಕೇಂದ್ರ ಸರ್ಕಾರದ ಮೇಲೆ ತಮಿಳುನಾಡಿನವರಿಗೆ ಹಿಡಿತ ಇರುವುದರಿಂದ ಇದಕ್ಕೆ ಹೆಚ್ಚಿಗೆ ಆದ್ಯತೆಯನ್ನು ಕೊಡುವ ಕೆಲಸ ಆಗಿದೆ ಯಾವುದೇ ಸಮ್ಮಿಶ್ರ ಸರ್ಕಾರಗಳು ಅಧಿಕಾರಕ್ಕೆ ಬಂದಾಗ ತಮಿಳುನಾಡಿನ ಎರಡೂ ಪಕ್ಷಗಳು ಅದು ಡಿಎಂಕೆ ಇರಬಹುದು ಅಥವಾ ಎಡಿಎಂಕೆ ಇರಬಹುದು, ಇವೆರಡೂ ಪಕ್ಷಗಳು ಅವರದೇ ಆದಂಥ ಹಿಡಿತವನ್ನು ಕೇಂದ್ರ ಸರ್ಕಾರದ ಮೇಲೆ ಸುಮಾರು 9 ವರ್ಷಗಳಿಂದ ಇಟ್ಟುಕೊಂಡು ಸಾಧನೆ ಮಾಡಿರುವುದು ಕೂಡ ಈ tribunal ನಲ್ಲಿ ಈ ರೀತಿ order ಬರಲಿಕ್ಕೆ ಕಾರಣವೆಂದು ನನ್ನ ಅನಿಸಿಕೆಯಾಗಿದೆ ಇದು ಬಹಳ ಮುಖ್ಯ ಇದರಲ್ಲಿ ಅಲ್ಲಿ ಆ ಮುಖ್ಯ ಮಂತ್ರಿಗಳು ಇದ್ದಾಗ ಮಾಡಿದರು, ಈ ಮುಖ್ಯಮಂತ್ರಿಗಳು ಇದ್ದಾಗ ಮಾಡಿದರೆಂದು ನಾನು ಹೇಳಲಿಕ್ಕೆ ಇಚ್ಛೆಪಡುವುದಿಲ್ಲ 1994–95ರಲ್ಲಿ ಮಾನ್ಯ ದೇವೇಗೌಡರು ಮುಖ್ಯಮಂತ್ರಿಗಳಾಗಿದ್ದರು ಆವತ್ತು ನಮ್ಮ JLP meeting ಅನ್ನು ಕರೆದಿದ್ದರು ಏಕೆಂದರೆ, ನಾನು ಆಗ ಜನತಾ ಪಾರ್ಟಿಯವನಾಗಿದ್ದೆ ಆ JLP meeting ನಲ್ಲಿ ಮಾನ್ಯ ದೇವೇಗೌಡರು ಆವತ್ತು ನಮ್ಮನ್ನೆಲ್ಲ ಸೇರಿಸಿ ಚರ್ಚೆ ಮಾಡುವಾಗ, ಆ ಕಾವೇರಿ ಕಣಿವೆಯ ಶಾಸಕರೊಬ್ಬರು ಎದ್ದು ಮಾತನಾಡಲಿಕ್ಕೆ ಮುಂದಾದಾಗ ನಾನು ಸಹ ಎದ್ದು ನಿಂತು ಮಾತನಾಡುವುದಕ್ಕೆ ಮುಂದಾದೆ ಅಷ್ಟರೊಳಗಾಗಿ ಅವರನ್ನು ಕುಳಿತುಕೊಳ್ಳುವುದಕ್ಕೆ ಹೇಳಿ, ನನಗೆ ಮಾತನಾಡಲು ಹೇಳಿದರು 'ಇಂಥ ಕ್ಲಿಷ್ಟ ಪರಿಸ್ಥಿತಿ ಇದೆ, ತಮಿಳುನಾಡಿಗೆ ನೀರು ಬಿಡಬೇಕೆಂದು ಮಾನ್ಯ ನರಸಿಂಹರಾಯರು ನಿಮ್ಮ ಮೇಲೆ ಒತ್ತಡ ಹೇರುತ್ತಿದ್ದಾರೆ ಇಂಥ ಪರಿಸ್ಥಿತಿಯಲ್ಲಿ ನೀವು ಏನು ತೀರ್ಮಾನ ತೆಗೆದುಕೊಳ್ಳಬೇಕೆನ್ನುವಂಥದ್ದನ್ನು ಕೂಡ ನೀವು ಚಿಂತನೆ ಮಾಡಿದ್ದೀರಿ' ಎಂದು ಹೇಳಿದೆ ಅವರು ಆವತ್ತು ಯಾವ ಮಟ್ಟಕ್ಕೆ ಹೇಳಿದರೆಂದರೆ, ನಾಳೆ ಏನಾಗುತ್ತದೆಂದು ನನಗೆ ಗೊತ್ತಿಲ್ಲ ರಾಜೀನಾಮೆ ಕೊಟ್ಟು ನಾನು ಮನೆಗೆ ಹೋದರೂ ಹೋಗಬಹುದು, ಸರ್ಕಾರವನ್ನು ಬಿಡಬಹುದೆನ್ನುವ ಮಾತನ್ನು ಸಹ ನಮ್ಮ JLP meeting ನಲ್ಲಿ ಹೇಳಿದ್ದರು ಆವತ್ತು ಮಾನ್ಯ ಹೆಗಡೆಯವರು ನಮ್ಮ ಜೊತೆಯಲ್ಲಿದ್ದರು ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಆ ತರಹದ ಪರಿಸ್ಥಿತಿ ಆವತ್ತು ಅಲ್ಲಿ ನಿರ್ಮಾಣವಾಗಿದ್ದಾಗಲೂ ಕೂಡ ಆವತ್ತು ನಾವೆಲ್ಲರು ಕೂಡ ಒಕ್ಕೊರಲಿನಿಂದ – ನೀವು ತೆಗೆದುಕೊಂಡ ತೀರ್ಮಾನವನ್ನು ನಾವು ಒಪ್ಪುತ್ತೇವೆಂದಾಗ, ಕಡೆಗೆ

ನೀರು ಬಿಡುವುದನ್ನು ಬಿಡುತ್ತಲೇ ಇದ್ದೆವು ಇದು ನನ್ನ ಪ್ರಕಾರ Supreme Court ನ order ಪ್ರಕಾರ ಈ Commission ಅನ್ನು order ಮಾಡಿದರೋ ಅದರಿಂದ ನಿಜವಾಗಿಯೂ ಬಹಳ ದೊಡ್ಡ ಪೆಟ್ಟು ಬಿದ್ದಿದ್ದು ಕರ್ನಾಟಕಕ್ಕೆ ಇದನ್ನು ರಾಜಕೀಯ ಇಚ್ಛಾಶಕ್ತಿಯಿಂದಲೇ ತೀರ್ಮಾನ ಮಾಡಿದ್ದರೆ ಇಷ್ಟೊಂದು ನಮ್ಮ ರಾಜ್ಯಕ್ಕೆ ತೊಂದರೆ ಆಗುತ್ತಿರಲಿಲ್ಲವೆನ್ನುವಂಥದ್ದು ನನ್ನ ವೈಯಕ್ತಿಕ ನಂಬಿಕೆಯಾಗಿದೆ ಇವತ್ತು ಇಂಥ ಪರಿಸ್ಥಿತಿಯಲ್ಲಿ ನಾವೇನು ಮಾಡಬೇಕು? 192 TMC ನೀರನ್ನು ಬಿಡಬೇಕು ಮತ್ತು ಅದನ್ನು ಬಿಳಿಗೊಂಡ್ಲುವಿನಲ್ಲಿ ಲೆಕ್ಕ ಹಾಕಬೇಕೆಂದು ಹೇಳುವಂಥ ಈ Commission ನ order ಏನಿದೆ, ಇವತ್ತು 64 ಕಿ ಮೀ ನಲ್ಲಿ ಬೀಳುವ ಮಳೆ ನೀರು ಸುಮಾರು 25 TMC ಮೆಟ್ಟೂರಿಗೆ ಹೋಗುತ್ತದೆ ಅದನ್ನು ಅವರು ಗಣನೆಗೆ ತೆಗೆದುಕೊಂಡಿಲ್ಲ ನಾವು ಇದನ್ನು ಏಕೆ ಹೇಳುತ್ತಿದ್ದೇವೆಂದರೆ, ಎಲ್ಲೋ ಒಂದು ಕಡೆ ಆ Tribunal Members ಅವರ ಕಡೆ ವಾಲಿದ್ದಾರೆ ಎನ್ನುವಂಥದ್ದು ಸ್ಪಷ್ಟ ಚಿತ್ರಣ ಇಲ್ಲಿ ಕಾಣುತ್ತದೆ ಅದರಲ್ಲಿ 30 ಟಿ ಎಂ ಸಿ ನೀರನ್ನು ನಾವು ಕುಡಿಯುವ ನೀರಿಗಾಗಿ ಕೇಳಿದ್ದೆವು ಅದಕ್ಕೆ ಕೂಡ ನೀರು ಕೊಡಲಿಲ್ಲ ಕೇರಳಕ್ಕೆ ಕೊಟ್ಟಿದ್ದ ನೀರನ್ನು ಅವರು Dam ಕಟ್ಟುವವರೆಗೂ ಕೂಡ ಆ ನೀರು ತಮಿಳುನಾಡಿಗೇ ಉಪಯೋಗವಾಗುತ್ತದೆಂದು ಹೇಳುತ್ತಾರೆ ಇವತ್ತು environment ಗೆ 10 TMC ನೀರು, ಮತ್ತು sea ಗಾಗಿ 4 TMC ನೀರು, ಹೀಗೆ ಈ ಎಲ್ಲಾ ನೀರು ಸಹ ತಮಿಳುನಾಡಿಗೇ ಹೋಗುವಂಥದ್ದು ಆಮೇಲೆ 40 TMC underground ನೀರನ್ನು ಕೂಡ ಲೆಕ್ಕಕ್ಕೆ ತೆಗೆದುಕೊಂಡಿಲ್ಲ ಇಂಥ ಪರಿಸ್ಥಿತಿಯಲ್ಲಿ Tribunal ಈ ತರಹ ನಿಲುವು ಏನು ತೆಗೆದುಕೊಂಡಿದೆ, ನಮ್ಮ ಸರ್ಕಾರ ಬಹಳ ಹಿಂದೆಯೇ ಇದರ ಮೇಲೆ ಬೆಳಕು ಚೆಲ್ಲಬೇಕಾಗಿತ್ತು ನಾವು Tribunal ನ Section 5(3) ರ ಪ್ರಕಾರ ನ್ಯಾಯಮಂಡಳಿ ಗಮನಕ್ಕೆ ಇಲ್ಲಿಯವರೆಗೆ ತರದಿರುವುದು ಏಕೆ, ಎಂದು ಕೇಳುತ್ತಿದ್ದೇನೆ ನಮ್ಮ ಎಂ ಪಿ ಪ್ರಕಾಶ್‌ರವರು ಈಗ ಸದನದಲ್ಲಿ ಇಲ್ಲ ಅದನ್ನು ಕೇಳಬಹುದಾಗಿತ್ತು ಆದರೆ, ಅದನ್ನು ಕೇಳಲಿಲ್ಲ ಈಗ Article 131 ರ ಪ್ರಕಾರ 'ನಾವು Supreme Court ಗೆ ದಾವೆ ಮಾಡುತ್ತೇವೆಂದು' ಒಂದು ಕಡೆ ಹೇಳುತ್ತಿದ್ದೀರಿ ಈ ಗೊಂದಲಮಯ ವಿಷಯದಲ್ಲಿ ಕೂಡ ಸರ್ಕಾರ ಒಂದು ದೃಢವಾದ ನಿಲುವನ್ನು ತೆಗೆದುಕೊಳ್ಳಲಿಲ್ಲ, ಏಕೆ? ಅಥವಾ ನಮ್ಮ ವಕೀಲರುಗಳು ಸರ್ಕಾರಕ್ಕೆ ಸರಿಯಾದ ಮಾಹಿತಿ ಕೊಡಲಿಲ್ಲವೇ? ಇದು

ಬಹಳ ಮುಖ್ಯವಾದ ವಿಷಯ ವಕೀಲರು ಸರಿಯಾದ ಮಾಹಿತಿ ಕೊಡದೆ ಸರ್ಕಾರವನ್ನು ತಪ್ಪು ದಾರಿಗೆ ಎಳೆದರೇ ಎನ್ನುವಂಥದ್ದನ್ನು ಕೂಡ ನಾವು ಇಲ್ಲಿ ಚಿಂತನೆ ಮಾಡಬೇಕು ಮಾನ್ಯ ಅಂಬರೀಷ್‌ರವರು ರಾಜೀನಾಮೆ ಕೊಟ್ಟಿದ್ದಾರೆ ಅದನ್ನು accept ಮಾಡುವುದು ಬಿಡುವುದು ಅವರಿಗೆ ಬಿಟ್ಟಿದ್ದು ಕೇಂದ್ರ ಸರ್ಕಾರಕ್ಕೆ ಮತ್ತು Parliament ನಲ್ಲಿ Speakerರವರಿಗೆ ಕೊಟ್ಟಿದ್ದಾರೆ ಅದನ್ನು ನೀವು ಮಾತನಾಡುವಾಗ ಹೇಳಿ ನಾನು ಹೇಳುವುದನ್ನು ನಾನು ಹೇಳುತ್ತೇನೆ ನೀವು ಪುನ ಹಾಗೆಯೇ ಮಾತನಾಡುತ್ತೀರಲ್ಲ? ಮಾನ್ಯ ಅಧ್ಯಕ್ಷರೆ, ಮುಂದೆ ಇರುವ ಈ ಮೂರು ಜನರಿಗೆ ಮಾತನಾಡದೆ ಸುಮ್ಮನೆ ಇರಲಿಕ್ಕೆ ಹೇಳಿ ಈ ಮಾಧುಸ್ವಾಮಿ ಮತ್ತು ಶ್ರೀರಾಮರೆಡ್ಡಿಯವರು ಬಹಳ disturb ಮಾಡುತ್ತಾರೆ

ಶ್ರೀ ಜೆ ಸಿ ಮಾಧುಸ್ವಾಮಿ ಹಾಗಾದರೆ ಇವತ್ತು ಅಂಬರೀಷ್‌ರವರು ರಾಜೀನಾಮೆ ಕೊಟ್ಟಿದ್ದಾರೆಯೇ? ಇವತ್ತು ಕೊಟ್ಟಿದ್ದಾರೆ, ಇವತ್ತು ಪೇಪರ್‌ನಲ್ಲಿ ಬಂದಿದೆ ಎಂದು ಹೇಳಿದರೆ ಹೇಗೆ?

ಶ್ರೀ ಕೆ ಶ್ರೀನಿವಾಸ ಗೌಡ ನಾನು ಈ ದಿನ ಮಾತನಾಡುತ್ತಿದ್ದೇನೆ ನೀವು ಕುಳಿತುಕೊಳ್ಳಿ ಇದರ ಬಗ್ಗೆ ಇನ್ನು ಹೇಳುವುದು ಜಾಸ್ತಿ ಇದೆ ಮಾನ್ಯ ಅಂಬರೀಷ್‌ರವರು ರಾಜೀನಾಮೆ ಕೊಟ್ಟಿರುವುದನ್ನು ನಾವು ಇವತ್ತು ಸ್ವಾಗತ ಮಾಡಲೇಬೇಕು ಏಕೆಂದರೆ, ನಮ್ಮ ರಾಜ್ಯದಲ್ಲಿ at least ಒಬ್ಬ ಲೋಕಸಭಾ ಸದಸ್ಯರಾಗಿದ್ದವರು ಮಂತ್ರಿಯಾಗಿದ್ದವರು ರಾಜೀನಾಮೆ ಕೊಟ್ಟು ರೈತರ ಸಂಕಷ್ಟಕ್ಕೆ ಸ್ಪಂದಿಸಿದ್ದಾರೆಂದು ಹೇಳಿದರೆ ನಿಜವಾಗಲೂ ಕೂಡ ಸಂತೋಷಪಡುವಂಥ ವಿಷಯ ಅವರ ರಾಜೀನಾಮೆ ಒಪ್ಪಿಗೆ ಆಗಿರಬಹುದು ಆಗಿಲ್ಲದಿರಬಹುದು ಆದರೆ ಉಳಿದ 27 ಜನ ಸಂಸದರು ತಮ್ಮ ರಾಜೀನಾಮೆಯನ್ನು ಕೊಡಬಹುದಾಗಿತ್ತು ಅದು ಒಪ್ಪಿಗೆ ಯಾಗುತ್ತದೆಯೋ ಬಿಡುತ್ತದೆಯೋ ಅದು ಬೇರೆ ವಿಷಯ ನಾಳೆ ನಾವು 224 ಜನ ಸದಸ್ಯರು ಕೂಡ ರಾಜೀನಾಮೆ ಕೊಡಬೇಕು ಎನ್ನುವ ತೀರ್ಮಾನಕ್ಕೆ ಬರಬಹುದು

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ನಾನು ಏನು ಹೇಳುವುದು ಏನೆಂದರೆ, ಮಾನ್ಯ ಅಂಬರೀಷ್‌ರವರು ರಾಜೀನಾಮೆ ಕೊಡಬಾರದಾಗಿತ್ತು ಲೋಕಸಭೆಗೆ ಹೋಗಿ ಇದರ ಬಗ್ಗೆ ಹೋರಾಟ ಅಲ್ಲಿ ಮಾಡಬೇಕಾಗಿತ್ತು

ಶ್ರೀ ಕೆ ಶ್ರೀನಿವಾಸ ಗೌಡ ನಾನು ಏನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆಂದರೆ, 28 ಲೋಕಸಭಾ ಸದಸ್ಯರಲ್ಲಿ ಒಬ್ಬ ಸದಸ್ಯರು ಒಂದು ಕೂಗನ್ನು ನಮ್ಮ ರಾಜ್ಯದ ಪರವಾಗಿ ಹಾಕಿದ್ದಾರೆ ಎನ್ನುವುದರ ಬಗ್ಗೆ ನಾವೆಲ್ಲರೂ ಬಹಳ ಮುಖ್ಯವಾಗಿ ಯೋಚನೆ ಮಾಡಬೇಕಾಗಿರುವುದು ಬೇರೆ ಬೇರೆ ಹಂತದಲ್ಲಿ ನಾವು ಯೋಚನೆ ಮಾಡಬಹುದು ಅವರ ರಾಜೀನಾಮೆ accept ಆಗಬಹುದು, ಆಗದಿರಬಹುದು ಇವತ್ತು ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಖಾಸಗಿ ಕಾರ್‌ನಲ್ಲಿ ಮನೆಗೆ ಹೋದರು ಇವತ್ತಿನ ಪರಿಸ್ಥಿತಿಯಲ್ಲಿ ನಾವು ಯೋಚನೆ ಮಾಡಬೇಕು ಎನ್ನುವಂಥದ್ದನ್ನು ನಾನು ಈ ಸಮಯದಲ್ಲಿ ಹೇಳಬಯಸುತ್ತೇನೆ ಇದರ ಜೊತೆಗೆ Parliament ಸದಸ್ಯರು ಕೂಡ Parliament ನಲ್ಲಿ ಕಾವೇರಿ ತೀರ್ಪನ್ನು ವಿರೋಧಿಸಿದ್ದಾರೆ ಅವತ್ತು ವಿರೋಧ ಮಾಡಿದಾಗ ಇಡೀ ತಮಿಳುನಾಡಿನ ಎಲ್ಲಾ ಸದಸ್ಯರು ಅದರ ಜೊತೆಗೆ ಆ ಮಂತ್ರಿಗಳು ಕೂಡ ಬಾವಿಗೆ ಹೋಗುತ್ತಾರೆ ಇದು ಬಹಳ ವಿಚಿತ್ರ ತಮಿಳುನಾಡಿನ ಎಲ್ಲಾ ಸಂಸದರಿಗೆ ಎಷ್ಟು ಒಗ್ಗಟ್ಟು ಇದೆ ಎಂದರೆ, ಡಿಎಂಕೆ, ಎಡಿಎಂಕೆ, ಹತ್ತಾರು ಪಾರ್ಟಿಯ ಸದಸ್ಯರು ಜೊತೆಗೆ ಮಂತ್ರಿಗಳು ಕೂಡ ಬಾವಿಗೆ ಹೋಗಿ ಅವರ ರಾಜ್ಯದ ಹಿತವನ್ನು ಕಾಪಾಡುತ್ತಾರೆಂದರೆ ಎಷ್ಟು ಒಗ್ಗಟ್ಟು ಇದೆ ಎನ್ನುವುದು ಗೊತ್ತಾಗುತ್ತದೆ ನಮ್ಮ ರಾಜ್ಯದ ಕೆಲವು ರಾಜ್ಯಸಭೆಯ ಸದಸ್ಯರು ಇದರ ಬಗ್ಗೆ ಚಿಂತನೆಯನ್ನು ಮಾಡಲಿಲ್ಲ

ಶ್ರೀ ಹೆಚ್ ಸಿ ಮಹಾದೇವಪ್ರಸಾದ್ (ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರು) ಮಾನ್ಯ ಶ್ರೀನಿವಾಸಗೌಡರವರು, ತಮಿಳುನಾಡಿನ ರಾಜಕೀಯ ಪಕ್ಷಗಳ ಸದಸ್ಯರು, ರಾಜ್ಯದ issue ಬಂದಾಗ ಹೇಗೆ ಒಗ್ಗಟ್ಟಾಗಿರುತ್ತಾರೆಂದು ಹೇಳುತ್ತಿದ್ದಾರೆ ಇದಕ್ಕೆ ಸ್ವಲ್ಪ ಹಿಂದೆಯೇ ಮಾನ್ಯ ಅಂಬರೀಷ್‌ರವರ ಬಗ್ಗೆ ಮಾತನಾಡುತ್ತಾ ಇಲ್ಲಿಯೇ distinguish ಮಾಡುವ ಪ್ರಯತ್ನ ಮಾಡಿದರು ಇವರಲ್ಲಿಯೇ ಸ್ಪಷ್ಟವಾದ ಒಂದು ನಿಲುವು ಇಲ್ಲ ರಾಜ್ಯದ ಬಗ್ಗೆ ಕಳಕಳಿಯ ಮಾತುಗಳನ್ನು ಅವರು ಇಲ್ಲಿ ಪ್ರತಿಬಿಂಬಿಸಬೇಕು ಅದು ಬಿಟ್ಟು ನಮ್ಮ ರಾಜ್ಯದಲ್ಲಿ ಒಬ್ಬ M.P ರಾಜೀನಾಮೆ ಕೊಟ್ಟರು ಅದು ಒಪ್ಪಿಗೆಯಾಯಿತೋ ಇಲ್ಲವೋ ಇನ್ನೊಬ್ಬರು ಹಾಗೆ ಹೇಳಿದರು, ಹೀಗೆ ಹೇಳಿದರು ಎಂದು ನೀವೇ ಅದನ್ನು ಬಹಿರಂಗಪಡಿಸಿ ಇದನ್ನು weak ಮಾಡುವ ಪ್ರಯತ್ನಕ್ಕೆ ಅವಕಾಶವಾಗುತ್ತದೆ

ಶ್ರೀ ಕೆ ಶ್ರೀನಿವಾಸ ಗೌಡ ಆ ಒಗ್ಗಟ್ಟನ್ನು ನಾವು ತೋರಿಸ ಬೇಕೆನ್ನುವುದೇ ನನ್ನ ಇಚ್ಛೆ ಈ ಒಗ್ಗಟ್ಟು ನಮ್ಮಲಿಲ್ಲ ಇದನ್ನು ನಾವು ನೇರವಾಗಿ ಒಪ್ಪಿಕೊಳ್ಳಬೇಕಾಗುತ್ತದೆ ಒಪ್ಪಿಕೊಳ್ಳಲೇಬೇಕು ತಮಿಳುನಾಡಿನವರು ಏನು ಒಂದು ಒಗ್ಗಟ್ಟನ್ನು ತೋರಿಸುತ್ತಿದ್ದಾರೆ ಆ ಒಗ್ಗಟ್ಟು ನಮ್ಮಲಿಲ್ಲ ಈ ಒಗ್ಗಟ್ಟನ್ನು ತೋರಿಸುವಂಥ ಕೆಲಸ ನಮ್ಮ ರಾಜ್ಯ ಸರಕಾರದ ವತಿಯಿಂದ ನಮ್ಮ Parliament ಸದಸ್ಯರು ಹಾಗೂ ನಮ್ಮ ವಿಧಾನಸಭೆಯ ಸದಸ್ಯರೆಲ್ಲರೂ ಕೂಡ ಒಗ್ಗಟ್ಟಾಗಿ ಇಲ್ಲಿ ನಮ್ಮ ಒಂದು ಹಾಹಾಕಾರವನ್ನು ಎತ್ತಿದರೂ ಕೂಡ ಎಲ್ಲೋ ತೊಡಕು ಇದೆ ಎಂದು ನನ್ನ ಭಾವನೆಯನ್ನು ನಾನು ವ್ಯಕ್ತಪಡಿಸುತ್ತೇನೆ ನಿನ್ನೆ ಪತ್ರಿಕೆಗಳಲ್ಲಿ ಜಯಲಲಿತಾರವರು ಉಪವಾಸ ಕುಳಿತುಕೊಳ್ಳಲಿದ್ದಾರೆನ್ನುವ ವಿಚಾರ ನೋಡಿದೆ ನಾನು ನಮ್ಮ ಎಲ್ಲಾ ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ ಅಲ್ಲಿ ಅವರು ಉಪವಾಸ ಕುಳಿತುಕೊಳ್ಳುವ ದಿವಸ ನಾವು 224 ಜನ ಸದಸ್ಯರು ಕೂಡ ಉಪವಾಸ ಕುಳಿತುಕೊಳ್ಳೋಣ ಇನ್ನು ವಿಧಾನ ಸಭೆ ನಡೆಯುತ್ತಿದೆ ನಾವು ವಿಧಾನ ಸಭೆಯಲ್ಲಿ ಉಪವಾಸ ಕುಳಿತುಕೊಂಡು ನಮ್ಮ ಒಗ್ಗಟ್ಟನ್ನು ಪ್ರದರ್ಶನ ಮಾಡೋಣ ಎನ್ನತಕ್ಕಂಥ ಮಾತನ್ನು ಈ ಸಮಯದಲ್ಲಿ ಹೇಳಿ, ಇನ್ನು ಹೆಚ್ಚಿಗೆ ಹೇಳದೇ, ತಾವು ಏಕೋ ಆ ಕಡೆನೇ ಇನ್ನು ಹೆಚ್ಚಿಗೆ ಮಾಡಬೇಕೆಂದು ಹೇಳುವುದರಿಂದ, 'ನಮಗೆ ಇವತ್ತು ಬಹಳ ಮುಖ್ಯವಾಗಿ ಬೇಕಾಗಿರುವುದು, ರಾಷ್ಟ್ರೀಯ ಜಲನೀತಿ ರಾಷ್ಟ್ರೀಯ ಜಲನೀತಿಯನ್ನು ತರದೇ ಇದ್ದರೆ ಪರಿಸ್ಥಿತಿ ಕಷ್ಟವಾಗುತ್ತದೆ ಹಿಂದೆ ಇದ್ದಂಥ ವಾಜಪೇಯಿ ಸರ್ಕಾರದಲ್ಲಿ linking water ಬಗ್ಗೆ ಮಾಡಿದರು ಆದರೆ ಅದು ಏಕೆ ಎಲ್ಲಿ ಬಿತ್ತೊ ಏನು ಎಂಬುದು ಗೊತ್ತಾಗಲಿಲ್ಲ ಸುರೇಶ್ ಬಾಬುರವರನ್ನು ಅದರ ಅಧ್ಯಕ್ಷರನ್ನಾಗಿ ಮಾಡಿ, ಅವರು ಅದನ್ನು ಕೊಡುವಂಥ ಪರಿಸ್ಥಿತಿ ಬಂದಾಗಲೂ ಕೂಡ ಅದು final ಆಗಲಿಲ್ಲವೆನ್ನುವಂಥ ನೋವು ನಮಗಿದೆ Linking water ಕೂಡ ನಾವು ಮಾಡಬೇಕಾಗುತ್ತದೆ ಕುಡಿಯುವ ನೀರಿಗೆ ಅದರಲ್ಲೂ ಬೆಳೆಯುತ್ತಿರುವ ಬೆಂಗಳೂರು geometrically growth ಆಗುತ್ತಿದೆ ಬೆಂಗಳೂರು ಗ್ರಾಮಾಂತರ ಇರಬಹುದು, ನಗರ ಇರಬಹುದು ಇಂಥ ಪರಿಸ್ಥಿತಿಯಲ್ಲಿ ಕುಡಿಯುವ ನೀರು ಕೂಡ ಕೊಡಲಿಕ್ಕೆ ಆಗದಿರುವಂಥ ಪರಿಸ್ಥಿತಿ ನಮಗೆ ಬಂದು ಕಷ್ಟವಾಗುತ್ತದೆ ಕಾವೇರಿ ಕಣಿವೆಯಿಂದ ನೀರು ಕೊಡದೇ ಬಹಳ ಕಷ್ಟವಾಗುತ್ತದೆ ಇಲ್ಲಿಂದ ಕೋಲಾರಕ್ಕೆ ಕೇವಲ 70 ಕೀಲೋ ಮೀಟರ್ ದೂರ

ಇದೆ ಇಷ್ಟಿದ್ದರೂ ಕೂಡ ಇವತ್ತಿಗೂ ಕೋಲಾರಕ್ಕೆ ಕುಡಿಯುವ ನೀರು ಕೊಡಲಿಕ್ಕೆ ಆಗಿಲ್ಲ ಆದರೆ ಗುಜರಾತ್‌ನಲ್ಲಿ ನರ್ಮದಾ ನದಿಯಿಂದ ಸುಮಾರು 780 ಕೀಲೋಮೀಟರ್ ದೂರವಿರುವ ಗಾಂಧಿದಾಮಕ್ಕೆ ಕುಡಿಯುವುದಕ್ಕೆ ನೀರು ಹಾಗೂ industries ಗಳಿಗೆ ನೀರನ್ನು ಕೊಟ್ಟಿದ್ದಾರೆ ಅಲ್ಲಿ eco ಸಂಸ್ಥೆಯ ಒಂದು industries ಇದೆ ಇಂಥ ಪರಿಸ್ಥಿತಿ ಇದ್ದಾಗಲೂ ಕೂಡ ನಮ್ಮ ಹಿಂದಿನ ರಾಜ್ಯ ಸರಕಾರಗಳು ಇದರ ಮೇಲೆ ಹೆಚ್ಚಿನ ಬೆಳಕನ್ನು ಚೆಲ್ಲಲಿಲ್ಲ, ಆದ್ಯತೆಗಳನ್ನು ಕೊಡಲಿಲ್ಲ ಕನಿಷ್ಠ ಕುಡಿಯುವ ನೀರಿಗಾದರೂ ಇಡೀ ರಾಜ್ಯಕ್ಕೆ ನೀರು ಕೊಡಬಹುದಾಗಿತ್ತು ಇವತ್ತು ಒಂದೊಂದು ಭಾಗದಲ್ಲಿ ಹಳ್ಳಿಗಳಲ್ಲಿ tanker ಗಳ ಮುಖಾಂತರ ಏನು ಕುಡಿಯುವ ನೀರನ್ನು ಕೊಡುವಂಥ ಪರಿಸ್ಥಿತಿಗೆ ನಾವು ಏನು ತಲುಪಿದ್ದೇವೆ ಇದನ್ನು ನೀಗಿಸುವಂಥ ಅವಕಾಶ ಇದ್ದರೂ ಕೂಡ ಹಿಂದಿನ ಎಲ್ಲಾ ಸ್ವತಂತ್ರ ಬಂದಾಗಿನಿಂದ ಕೂಡ ಇದಕ್ಕೆ ಆದ್ಯತೆಗಳನ್ನು ಕೊಡಲಿಲ್ಲ ಎನ್ನುವಂಥ ನೋವನ್ನು ವ್ಯಕ್ತಪಡಿಸಿ, ಇವತ್ತು ನಾವೇನು ಕುಡಿಯುವ ನೀರಿಗೂ ಕೂಡ ಕಷ್ಟದಲ್ಲಿದ್ದೇವೆ ಹೀಗಿರುವಾಗ ಇಂಥದ್ದೆಕ್ಕೆಲ್ಲಾ ನಾವು ಹೆಚ್ಚಿನ ಆದ್ಯತೆಗಳನ್ನು ಕೊಡಬೇಕು ಇವತ್ತು ಇದನ್ನು ನಾವು ಸಾರಾಸಗಟಾಗಿ ತಿರಸ್ಕರಿಸಬೇಕು tribunal order ಅನ್ನು ಸಾರಾಸಗಟಾಗಿ ತಿರಸ್ಕರಿಸಿ ಅದನ್ನು resolution ಮೂಲಕ ಒಕ್ಕೋರಲಿನಿಂದ ಅಂಗೀಕರಿಸಬೇಕು ಎಂದು ಹೇಳುತ್ತಾ ಮಾತನಾಡಲು ಅವಕಾಶ ಕೊಟ್ಟಂತಹ ಮಾನ್ಯ ಸಭಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ

ಉಪಾಧ್ಯಕ್ಷರು ಈಗ ಮಾನ್ಯ ವಿರೋಧ ಪಕ್ಷದ ನಾಯಕರು ನಿರ್ಣಯವನ್ನು ಮಂಡಿಸುವುದು

ಶ್ರೀ ಎನ್ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) ನಾಳೆ ಬಜೆಟ್ ಮಂಡನೆ ಇದೆ 14ನೇ ತಾರೀಖು ಸಭೆ ಏಕೆ ಕರೆಸಿದಿರೆಂದು ಪ್ರಸ್ತಾಪ ಮಾಡಿದ್ದಕ್ಕೆ, ನಾವೆಲ್ಲರೂ ಕೂಡ ರಾಜ್ಯದ ಮುಂದೆ ಇರತಕ್ಕಂಥ ಕಾವೇರಿಯ ಪ್ರಶ್ನೆ ಏನು ಎಂಬುದು ನಮ್ಮೆಲ್ಲರನ್ನು ಕಾಡುತ್ತಿದೆ ಸದನದಲ್ಲಿ ಕಾವೇರಿಯ ಬಗ್ಗೆ ಇನ್ನೂ ಕೂಡ ತೀರ್ಮಾನವಾಗಿಲ್ಲ ಕಾವೇರಿಯ ಬಗ್ಗೆ ಎಲ್ಲಾ ಸದನದ ಹಿರಿಯ ಸದಸ್ಯರ ಅಭಿಪ್ರಾಯಗಳನ್ನು ತೆಗೆದುಕೊಳ್ಳಬೇಕು ಇದರ ಪ್ರತಿ ಕೊಟ್ಟಿಲ್ಲವೆ? ಪ್ರತಿ ಕೊಡಿ ಇದರ ಬಗ್ಗೆ ಚರ್ಚೆಯಾಗಬೇಕೆಂದು ನಾವು ಪಟ್ಟು ಹಿಡಿದಾಗ ಸರ್ಕಾರವೂ ಕೂಡ ಇದನ್ನು prestige ಆಗಿ ತೆಗೆದುಕೊಳ್ಳದೇ,

ಮಾನ್ಯ ಸಭಾಧ್ಯಕ್ಷರ ಕೋಣೆಯಲ್ಲಿ ಒಂದು ಸಭೆಯಾಯಿತು ಇದರ ಬಗ್ಗೆ ಚರ್ಚೆ ಪ್ರಾರಂಭ ಮಾಡಬೇಕು ಎಂಬ ಬಗ್ಗೆ ಅನುಮತಿ ಪಡೆದು ಎರಡು ದಿನಗಳ ಕಾಲ ಇಲ್ಲಿ ಚರ್ಚೆಯಾಯಿತು

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಇದು ಸರಿಯಾಗುವುದಿಲ್ಲ ಕೊನೆಯಲ್ಲಿ "ತಿರಸ್ಕರಿಸಿದ್ದೇವೆ" ಎನ್ನುವುದನ್ನು ನೀವು ಸ್ಪಷ್ಟವಾಗಿ ಹೇಳಬೇಕು ಇಲ್ಲದಿದ್ದರೆ ಅದಕ್ಕೆ ಶಕ್ತಿ ಬರುವುದಿಲ್ಲ ಈ ಶಾಸನ ಸಭೆಯಲ್ಲಿ ಸುಮ್ಮನೆ ನಾವು ಸತ್ತ ಕುದುರೆ ಹಿಡಿದುಕೊಂಡು ಹೊಡೆದ ಹಾಗೆ ಆಗುತ್ತದೆ ಅದಕ್ಕೆ ಶಕ್ತಿ ಬರುವುದಿಲ್ಲ ಆದುದರಿಂದ ದಯವಿಟ್ಟು ತಾವು ಅದನ್ನು ಸೇರಿಸಿದರೆ ನನ್ನ ಸಂಪೂರ್ಣ ಬೆಂಬಲವೂ ಅದಕ್ಕೆ ಇರುತ್ತದೆ ಇಲ್ಲದಿದ್ದರೆ ಅದು ಸರಿಯಾದ ನಿರ್ಣಯ ಆಗುವುದಿಲ್ಲ ಆದುದರಿಂದ ನೀವು "ತಿರಸ್ಕರಿಸಿದ್ದೇವೆ" ಎಂದು ಹೇಳಿದರೆ ಅದಕ್ಕೆ ಶಕ್ತಿ ಬರುತ್ತದೆ ಸುಮ್ಮನೆ ಅದು ಬಿಟ್ಟು ಸುತ್ತಿ ಬಳಸಿ ಏನೋ ಹೇಳಿಕೊಂಡು ಹೋದರೆ ಆ ನಿರ್ಣಯಕ್ಕೆ ಬೆಲೆ ಬರುವುದಿಲ್ಲ ಚರ್ಚೆಗೂ ಬೆಲೆ ಬರುವುದಿಲ್ಲ, ನಿರ್ಣಯಕ್ಕೂ ಬೆಲೆ ಬರುವುದಿಲ್ಲ ಹೀಗಾಗಿ ತಾವು ತಿರಸ್ಕರಿಸಿದ್ದೇವೆ ಎಂದು ಹೇಳಬೇಕು

ಶ್ರೀ ಎನ್ ಧರ್ಮಸಿಂಗ್ ಎಲ್ಲಾ ದೃಷ್ಟಿಯಲ್ಲೇ ಇಟ್ಟುಕೊಂಡೇ ಇದನ್ನು ಮಾಡಿರುವುದು

ಶ್ರೀ ಹೆಚ್ ನಿಂಗಪ್ಪ "ತಿರಸ್ಕರಿಸಿದ್ದೇವೆ" ಎಂದ ಮೇಲೆ ನಾವು appeal ಹೋಗುವ ಅವಶ್ಯಕತೆ ಇಲ್ಲ

ಶ್ರೀ ಜೆ ಸಿ ಮಾಧುಸ್ವಾಮಿ ಅವರಿನ್ನು ಮಂಡಿಸಿಲ್ಲ ಅವರೇನು ಮಂಡಿಸಿದ್ದಾರೆಂದು ನಿಮಗೆ ಏನು ಗೊತ್ತು?

ಶ್ರೀ ಎನ್ ಧರ್ಮಸಿಂಗ್ ಎರಡು ದಿನಗಳ ಕಾಲ ವಿವರವಾದ ಚರ್ಚೆಯಾಗಿದೆ ಕರ್ನಾಟಕ ವಿಧಾನ ಸಭೆಯನ್ನು ಇವತ್ತು ರಾಜ್ಯದ ಜನರೆಲ್ಲರೂ ನೋಡುತ್ತಿದ್ದಾರೆ ನನಗೆ ಅನ್ನಿಸುತ್ತಿದೆ 13 ತಿಂಗಳ ಹಿಂದೆ ಈ ಸರ್ಕಾರ ಏನು ಅಸ್ತಿತ್ವಕ್ಕೆ ಬಂದಿದೆ, ಅದರ ಹಿನ್ನೆಲೆಯಲ್ಲಿ ಈ ಒಂದು ನಿರ್ಣಯ ಬಹಳ ಪ್ರಮುಖವಾಗಿ ರಾಜ್ಯದ ಹಿತದೃಷ್ಟಿಯಿಂದ ನಾವೆಲ್ಲರೂ ಕೂಡಿ ತೆಗೆದುಕೊಂಡಿದ್ದೇವೆ ಇವತ್ತು ಮುಖ್ಯಮಂತ್ರಿಗಳು ಹಾಗೂ ಉಪ ಮುಖ್ಯಮಂತ್ರಿಗಳು ಕೂಡ ಇಂಥ ಐತಿಹಾಸಿಕವಾದಂಥ ನಿರ್ಣಯವನ್ನು ಸದನದಲ್ಲಿ ಮಂಡಿಸತಕ್ಕಂಥ ರೀತಿಯಲ್ಲಿ ಇದಕ್ಕೆ ಗೌರವ ಕೊಡತಕ್ಕಂಥ ರೀತಿಯಲ್ಲಿ ಈ ಸಂದರ್ಭದಲ್ಲಿ ಸದನದಲ್ಲಿ ಇರಬೇಕಾಗಿತ್ತು ಅವರು ಏಕೋ

ಇಲ್ಲ ಅದು ಅವರಿಗೆ ಬಿಟ್ಟಿದ್ದು ಈಗ ಇದರ ಬಗ್ಗೆ ಸುದೀರ್ಘವಾದಂಥ ಚರ್ಚೆಯಾಗಿದೆ ಇದರ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ನಾನು ನಿಂತಿಲ್ಲ ನಮ್ಮ ಎಲ್ಲಾ ಹಿರಿಯ ಸದಸ್ಯರು ಕೂಡ ಬಹಳಷ್ಟು ವಿಚಾರಗಳನ್ನು ಕೂಡ ಪ್ರಸ್ತಾಪ ಮಾಡಿದ್ದಾರೆ ಅದರ ಹಿನ್ನೆಲೆಯಲ್ಲಿ ಇವತ್ತು ನಾನು ನಿನ್ನೆ ನಾವು ಏನು resolutionನ್ನು move ಮಾಡಿದ್ದೇವೆ ಇವತ್ತು ಅದೇ ರೀತಿಯಾಗಿ ಅಂತಿಮವಾಗಿ ಎಲ್ಲರನ್ನೂ ಕೂಡ ಸಂಪರ್ಕ ಮಾಡಿದ್ದೇವೆ ಇವತ್ತು ನಮ್ಮ ಪ್ರಕಾಶ್‌ರವರು, ಖರ್ಗೆಯವರ ಜೊತೆಯಲ್ಲಿ ಶ್ರೀ ಸಿದ್ದರಾಮಯ್ಯ, ಶ್ರೀ ಮಾಧುಸ್ವಾಮಿ ಮತ್ತು ಶ್ರೀ ವಾಟಾಳ್ ನಾಗರಾಜ್‌ರವರ ಜೊತೆಯಲ್ಲಿಯೂ ಕೂಡ ಇದರ ಬಗ್ಗೆ ಚರ್ಚೆ ಮಾಡಿದ್ದಾರೆ ಕೊನೆಯದಾಗಿ ಸದ್ಯದಲ್ಲಿ ಹೆಚ್ಚು ಕಡಿಮೆ ಅದೇ ಅರ್ಧ ಬರುವಂತಹ ರೀತಿಯಲ್ಲಿ ಮಾಡಿದ್ದಾರೆ

ಶ್ರೀ ವಾಟಾಳ್ ನಾಗರಾಜ್ ತಾವು ದಯವಿಟ್ಟು ನಿರ್ಣಯವನ್ನು ಮಂಡಿಸಿ ಈ ನಿರ್ಣಯಕ್ಕೆ ನಮ್ಮ ಒಪ್ಪಿಗೆ ಇಲ್ಲ ತಿರಸ್ಕರಿಸಿದ್ದೇವೆಂದು ಸ್ಪಷ್ಟವಾಗಿ ಹೇಳಬೇಕು ಇಲ್ಲದೇ ಇದ್ದರೆ ರಾಜ್ಯದ ಜನರು ಅದನ್ನು ಬಯಸುತ್ತಿದ್ದಾರೆ ಶಾಸನಸಭೆಯಲ್ಲಿ ಈ ನ್ಯಾಯಮಂಡಳಿಯ ತೀರ್ಪು ರಾಜ್ಯದ ಜನತೆಗೆ "ಮರಣ ಶಾಸನ"ವಾಗಿದೆ ಅದಕ್ಕಾಗಿ ತಿರಸ್ಕರಿಸಿದ್ದೇವೆಂದು ದಯವಿಟ್ಟು ಹೇಳಬೇಕು

ಶ್ರೀ ಧರ್ಮಸಿಂಗ್ ಈ ಬಗ್ಗೆ ಸಭಾಧ್ಯಕ್ಷರ ಕೊರಡಿಯಲ್ಲಿ ತೀರ್ಮಾನ ಮಾಡಿದ್ದೇವೆ ಯಾರಿಗೂ ಕೂಡ ನೋವಾಗುವಂತಹ ರೀತಿಯಲ್ಲಿ ಅಭಿಪ್ರಾಯಗಳನ್ನು ವ್ಯಕ್ತ ಮಾಡತಕ್ಕಂತಹ ರೀತಿಯಲ್ಲಿ, ಇದನ್ನು ಅಂಗೀಕರಿಸಬೇಕು

2 ನಿರ್ಣಯ

ವಿಷಯ – ಕಾವೇರಿ ನ್ಯಾಯಮಂಡಳಿ ತೀರ್ಪಿನ ಬಗ್ಗೆ – ನಿರ್ಣಯ

ಶ್ರೀ ಎನ್ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) – ಮಾನ್ಯ ಉಪಾಧ್ಯಕ್ಷರೇ, ನಾನು ಈ ಕೆಳಕಂಡ ನಿರ್ಣಯವನ್ನು ತಮ್ಮ ಅನುಮತಿ ಕೋರಿ ಸಭೆಯ ಮುಂದೆ ಮಂಡಿಸುತ್ತೇನೆ

"ಕಾವೇರಿ ನ್ಯಾಯಾಧೀಕರಣದ ದಿನಾಂಕ 5 2 2007ರಂದು ತನ್ನ ಅಂತಿಮ ತೀರ್ಪನ್ನು ನೀಡಿದೆ ಈ ಐತೀರ್ಪಿನಿಂದ ರಾಜ್ಯದ ಹಾಗೂ ರೈತರ ಹಿತಾಸಕ್ತಿಗೆ ಬಾಧಕವಾಗಿದೆ ಕಾವೇರಿ ಕಣಿವೆಯ ಜಲಾನಯನದ ನೈಜ ಸ್ಥಿತಿಯ ಹಿನ್ನೆಲೆಯಲ್ಲಿ ಐತೀರ್ಪನ್ನು ಕಾರ್ಯಗತಗೊಳಿಸುವುದು, ಸಾಧ್ಯವಾಗದಿರುವ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಇಡೀ ದೇಶಕ್ಕೆ ರಾಷ್ಟ್ರೀಯ

ಜಲನೀತಿಯನ್ನು ರೂಪಿಸಿ, ಅಂತರ್‌ರಾಜ್ಯ ನದಿವಿವಾದಗಳನ್ನು ಆ ನೀತಿಯ ಕೆಳಗೆ ಮತ್ತು ಪರಸ್ಪರ ಸಹಕಾರದೊಡನೆ ಇತ್ಯರ್ಥ ಮಾಡುವವರೆಗೆ ಅಂತಿಮವಾಗಿ ಪ್ರಕಟಣೆಯನ್ನು ಹೊರಡಿಸಬಾರದೆಂದು ಹಾಗೂ ರೈತರ ಹಿತಾಸಕ್ತಿ ಮತ್ತು ಬೆಂಗಳೂರು ಹಾಗೂ ಇತರ ನಗರಗಳಿಗೆ ಕುಡಿಯುವ ನೀರಿನ ಅವಶ್ಯಕತೆಯನ್ನು ಗಮನದಲ್ಲಿಟ್ಟುಕೊಂಡು ಸಂವಿಧಾನಾತ್ಮಕ ಹಾಗೂ ಕಾನೂನಾತ್ಮಕ ಹೋರಾಟಗಳನ್ನು ರಾಜ್ಯವು ಮುಂದುವರಿಸಿಕೊಂಡು ಹೋಗಬೇಕೆಂದು ಮತ್ತು ಕೇಂದ್ರ ಸರ್ಕಾರ ಪರಿಣಾಮಕಾರಿಯಾಗಿ ಸಹಕಾರವನ್ನು ಬರಗಾಲಕ್ಕೆ ಪದೇ ಪದೇ ತುತ್ತಾಗುವ ಕರ್ನಾಟಕ ರಾಜ್ಯಕ್ಕೆ ಕೊಡಬೇಕೆಂದು ಈ ಸದನವು ಸರ್ವಾನುಮತದಿಂದ ನಿರ್ಣಯಿಸುತ್ತದೆ"

ಉಪಾಧ್ಯಕ್ಷರು – ಪ್ರಸ್ತಾವ ಏನೆಂದರೆ,

"ಕಾವೇರಿ ನ್ಯಾಯಾಧೀಕರಣದ ದಿನಾಂಕ 5 2 2007ರಂದು ತನ್ನ ಅಂತಿಮ ತೀರ್ಪನ್ನು ನೀಡಿದೆ ಈ ಐತೀರ್ಪಿನಿಂದ ರಾಜ್ಯದ ಹಾಗೂ ರೈತರ ಹಿತಾಸಕ್ತಿಗೆ ಬಾಧಕವಾಗಿದೆ ಕಾವೇರಿ ಕಣಿವೆಯ ಜಲಾನಯನದ ನೈಜ ಸ್ಥಿತಿಯ ಹಿನ್ನೆಲೆಯಲ್ಲಿ ಐತೀರ್ಪನ್ನು ಕಾರ್ಯಗತಗೊಳಿಸುವುದು, ಸಾಧ್ಯವಾಗದಿರುವ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಇಡೀ ದೇಶಕ್ಕೆ ರಾಷ್ಟ್ರೀಯ ಜಲನೀತಿಯನ್ನು ರೂಪಿಸಿ, ಅಂತರ್‌ರಾಜ್ಯ ನದಿವಿವಾದಗಳನ್ನು ಆ ನೀತಿಯ ಕೆಳಗೆ ಮತ್ತು ಪರಸ್ಪರ ಸಹಕಾರದೊಡನೆ ಇತ್ಯರ್ಥ ಮಾಡುವವರೆಗೆ ಅಂತಿಮವಾಗಿ ಪ್ರಕಟಣೆಯನ್ನು ಹೊರಡಿಸಬಾರದೆಂದು ಹಾಗೂ ರೈತರ ಹಿತಾಸಕ್ತಿ ಮತ್ತು ಬೆಂಗಳೂರು ಹಾಗೂ ಇತರ ನಗರಗಳಿಗೆ ಕುಡಿಯುವ ನೀರಿನ ಅವಶ್ಯಕತೆಯನ್ನು ಗಮನದಲ್ಲಿಟ್ಟುಕೊಂಡು ಸಂವಿಧಾನಾತ್ಮಕ ಹಾಗೂ ಕಾನೂನಾತ್ಮಕ ಹೋರಾಟಗಳನ್ನು ರಾಜ್ಯವು ಮುಂದುವರಿಸಿಕೊಂಡು ಹೋಗಬೇಕೆಂದು ಮತ್ತು ಕೇಂದ್ರ ಸರ್ಕಾರ ಪರಿಣಾಮಕಾರಿಯಾಗಿ ಸಹಕಾರವನ್ನು ಬರಗಾಲಕ್ಕೆ ಪದೇ ಪದೇ ತುತ್ತಾಗುವ ಕರ್ನಾಟಕ ರಾಜ್ಯಕ್ಕೆ ಕೊಡಬೇಕೆಂದು ಈ ಸದನವು ಸರ್ವಾನುಮತದಿಂದ ನಿರ್ಣಯಿಸುತ್ತದೆ"

(ನಿರ್ಣಯವನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು)

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ ಮಾನ್ಯ ಉಪಾಧ್ಯಕ್ಷರೆ, ಇಂತಹ ಮಹತ್ವದ ನಿರ್ಣಯವನ್ನು ಮಂಡಿಸುವಾಗ atleast ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೆ ಬರಬೇಕಾಗಿತ್ತು ಇದನ್ನು ನಾವು ಯಾರ ಮುಂದೆ ಮಂಡಿಸುವುದು? ಸುಮ್ಮನೆ ಇದೊಂದು question hour ಅಥವಾ deputation ಏನಿದೆ, they are not serious ನಿಜವಾಗಿಯೂ ನೋಡಿದರೆ

7/31

ಇಡೀ ಹೌಸ್ present ಇರಬೇಕು ನಾನೆಲ್ಲೋ ಹೊರಗಡೆ ಹೋಗಿದ್ದೇವೆ, ಇವರು ಓದುತ್ತಿದ್ದಾರೆಂದು ಮತ್ತೇ ನಾನು ಒಳಗಡೆ ಬಂದೆ ನಮಗೆ ಏನೂ seriousness ಇಲ್ಲವೆಂದರೆ, ಸುಮ್ಮನೆ ಏನೂ ಕಾಟಾಚಾರಕ್ಕೆ ಮಾಡಿದ ಹಾಗೆ ಆಗುತ್ತದೆ ಸುಮ್ಮನೆ ಬಂದು ಇಲ್ಲಿ ಓದುವುದು, ಎಲ್ಲರೂ unanimous ಒಪ್ಪಿರುವುದು, ಆದರೆ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು, ಮಂತ್ರಿಗಳು ಸದನದಲ್ಲಿ ಯಾರು ಇಲ್ಲವೆಂದರೆ ಇದಕ್ಕೆ ನಾವು ಏನು ಹೇಳಬೇಕು Are you serious ಅಂದರೆ ನಾವು ಏನಾದರೂ ಪದೇಪದೇ ಮಾಡಿದರೆ ನಮ್ಮ ಮೇಲೆಯೇ ಹೇಳುವುದು

ಶ್ರೀ ಜೆವಿ ಶ್ರೀರಾಮರೆಡ್ಡಿ ಇಂತಹ ನಿರ್ಣಯವನ್ನು ಮಂಡಿಸುವಾಗ, ಅವತ್ತು ಎಲ್ಲರೂ ಹೇಳಿದರು, ಸದನದಲ್ಲಿ ನಿರ್ಣಯ ಮಂಡಿಸುವಾಗ ಎಲ್ಲರೂ ಇರಬೇಕು ಸರ್ವಾನುಮತದಿಂದ ಮಂಡಿಸಬೇಕು ಎಂದು ಹೇಳಿದರು ಆದರೆ ಈಗ ಸದನದಲ್ಲಿ ಮುಖ್ಯಮಂತ್ರಿಗಳು ಇಲ್ಲ, ಉಪ ಮುಖ್ಯಮಂತ್ರಿಗಳು ಇಲ್ಲ

(ಗೊಂದಲ)

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ ಇದರಿಂದ ಈ ಮನೆಗೆ ಗೌರವ ತರುತ್ತದೆಯೇ?

ಶ್ರೀ ಜೆವಿ ಶ್ರೀರಾಮರೆಡ್ಡಿ ಇದರ ಬಗ್ಗೆ ಮಾನ್ಯ ಕಾನೂನು ಮಂತ್ರಿಗಳು ಹೇಳಬೇಕು

ಶ್ರೀ ಎಂಪಿ ಪ್ರಕಾಶ್ ಮಾನ್ಯ ಉಪಾಧ್ಯಕ್ಷರೆ,

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ ನಿರ್ಣಯ ಇದೆ ಎಂದು ಇದ್ದಾಗ

ಶ್ರೀ ಎಂಪಿ ಪ್ರಕಾಶ್ ಬಿಡಿಎ ಸಭೆ ಇತ್ತು, ಈಗ ಅದನ್ನು ಮುಗಿಸಿಕೊಂಡು ಬರುತ್ತೇನೆಂದು ಹೇಳಿದ್ದಾರೆ ಈಗ ಅವರು ಬರುತ್ತಾರೆ

ಶ್ರೀ ಜೆಸಿ ಮಾಧುಸ್ವಾಮಿ ಈ ನಿರ್ಣಯವೇನು, ವಿರೋಧಪಕ್ಷದ ನಾಯಕರು ತಂದಿದ್ದಾರೆ, ಅದು ಸರ್ವಾನುಮತದ ನಿರ್ಣಯ ಆಗಬೇಕು ಇದರಲ್ಲಿ ಯಾವುದೇ ಭಿನ್ನಾಭಿಪ್ರಾಯಗಳು ಬರಬಾರದು ಎಂದು ಹೇಳಿ, ಈ ಬಗ್ಗೆ ನಿರ್ಣಯವನ್ನು ಮಾಡಿ ಈ ಸದನದಲ್ಲಿ ಚರ್ಚೆ ಮಾಡಿದ್ದೇವೆ, ಈ ಚರ್ಚೆಗೆ ಗೌರವ ಬರಬೇಕಾಗಿದೆ ಎಂದರೆ ಸನ್ಮಾನ್ಯ ಮುಖ್ಯಮಂತ್ರಿಗಳಿಂದ ಹಿಡಿದು ಎಲ್ಲರೂ ಈ ಸಭೆಯೊಳಗೆ ಇರಬೇಕಾಗಿತ್ತು ಇದು ಒಂದು ರಾಜ್ಯದ

ಪ್ರಮುಖವಾದ ನಿರ್ಣಯ ಮತ್ತು ನಾವೆಲ್ಲರೂ ಕುಳಿತು ಮಾತನಾಡಿ ಸಾಧಕಬಾಧಕಗಳ ಬಗ್ಗೆ ಚರ್ಚೆ ಮಾಡಿ ಇದು ಬಹಳ ಕಟುವಾಗಿರುವುದರ ಬಗ್ಗೆ ಅಭಿಪ್ರಾಯಗಳು ಇದ್ದರೂ ಕೂಡ ಸರ್ಕಾರಕ್ಕೆ ಇರಸುಮುರಸು ಆಗಬಾರದೆಂದು ಅಥವಾ ವಿಧಾನಸಭೆಗೆ ಇರಸು ಮುರುಸಾಗಬಾರದೆಂದು ಏನು ಈ ಒಂದು ನಿರ್ಣಯವನ್ನು ತಂದಿದ್ದೇವೆ ಇವತ್ತು ಅಭಿಪ್ರಾಯಗಳು ಬಹಳಷ್ಟು ಇದೆ ಎಲ್ಲರ ಅಭಿಪ್ರಾಯ ಇದರಲ್ಲಿ ಒಳಗೊಂಡಿದೆ ಎಂದು ನಾನು ಭಾವಿಸುತ್ತೇನೆ ನಾವೇನೂ ಒರಟಾಗಿ ಹೇಳಬೇಕಾಗಿತ್ತು, ಅದನ್ನು ನಯವಾಗಿ ನಿರ್ಣಯದಲ್ಲಿ ಹೇಳಿದ್ದೇವೆಂದು ಹೇಳುತ್ತಾ ಇದನ್ನು ಕೇಂದ್ರ ಸರ್ಕಾರದವರು ಮತ್ತು ನ್ಯಾಯಾಧೀಕರಣದವರು ಪರಿಗಣಿಸಬೇಕೆಂದು ಹೇಳಿ ಸನ್ಮಾನ್ಯ ಧರ್ಮಸಿಂಗ್‌ರವರು ನಿರ್ಣಯವನ್ನು ಇಲ್ಲಿಟ್ಟಿದ್ದಾರೆ, ನಾನು ಅದನ್ನು ಅನುಮೋದನೆಯನ್ನು ಮಾಡುತ್ತಿದ್ದೇನೆ

ಉಪಾಧ್ಯಕ್ಷರು ಈಗ ನಿರ್ಣಯವನ್ನು ಮಂಡಿಸಲಾಗಿದೆ

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಉಪಾಧ್ಯಕ್ಷರೆ, ಈ ನಿರ್ಣಯ ಸ್ಪಷ್ಟವಾಗಿರಬೇಕಾಗಿತ್ತು ಈ ನಿರ್ಣಯ ನಮ್ಮ ರಾಜ್ಯದ ಸಮಗ್ರ ಜನತೆಯ ಮನಸ್ಸಿನಲ್ಲಿ ಏನಿದೆ, ಅದನ್ನು ಹೇಳಿದರೆ, ಕಾವೇರಿ ನ್ಯಾಯ ಮಂಡಳಿಯ ತೀರ್ಪು- ಈ ರಾಜ್ಯದ ಜನತೆಯ " ಮರಣ ಶಾಸನ " ಈ ತೀರ್ಪನ್ನು ಈ ಸದನ ಒಕ್ಕೋರಲಿನಿಂದ ತಿರಸ್ಕರಿಸಿದೆ ಎಂದು ಹೇಳಬೇಕಾಗಿತ್ತು, ಅದನ್ನು ಹೇಳಿಲ್ಲ ಇದಕ್ಕೆ ನನ್ನ ಒಪ್ಪಿಗೆ ಇಲ್ಲ ಇದನ್ನು ನಾನು ಸ್ಪಷ್ಟವಾಗಿ ನೇರವಾಗಿ ಹೇಳುತ್ತಿದ್ದೇನೆ ಇದನ್ನು "ತಿರಸ್ಕರಿಸಬೇಕು" ಎಂಬ ಪದವನ್ನು ಸೇರಿಸುವುದಾದರೆ ಒಪ್ಪುತ್ತೇನೆ ಇದನ್ನು ತಿರಸ್ಕರಿಸುವುದಿಲ್ಲವೆಂದರೆ ಇದಕ್ಕೆ ಶಕ್ತಿ ಬರುವುದಿಲ್ಲ, ಗೌರವ ಬರುವುದಿಲ್ಲ, ಮತ್ತು ಇಡೀ ರಾಜ್ಯದ ಜನತೆ ಎಷ್ಟು ಶಕ್ತಿಯುತವಾಗಿ ಹೋರಾಟವನ್ನು ಮಾಡುತ್ತಿದ್ದಾರೆ ಇಡೀ ರಾಜ್ಯದ ಜನತೆಯ ಎಷ್ಟು ಕೂಗಿದೆ, ಇಡೀ ರಾಜ್ಯದ ಜನತೆ ಇದರ ಬಗ್ಗೆ ಎಷ್ಟು ನೋವನ್ನು ಅನುಭವಿಸುತ್ತಿದ್ದಾರೆ, ಇಡೀ ರಾಜ್ಯದ ಪರವಾಗಿ ಸದನದಿಂದ ತಾವು ಏನು ನಿರ್ಣಯವನ್ನು ಮಾಡುವುದಕ್ಕೆ ಹೊರಟ್ಟಿದ್ದೀರಿ, ಈ ನಿರ್ಣಯ ರಾಜ್ಯದ ಜನತೆಯ ಮನಸ್ಸಿಗೆ, ರಾಜ್ಯದ ಜನತೆಯ ನೀತಿಗೆ, ರಾಜ್ಯದ ಜನರು ಮಾಡುತ್ತಿರುವ ಹೋರಾಟಕ್ಕೆ ವಿರುದ್ಧವಾಗಿರುವಂತಹ ನಿರ್ಣಯ, ಈ ನಿರ್ಣಯದಲ್ಲಿ ನಾನು ಭಾಗಿಯಾಗುವುದಿಲ್ಲ ಈ ನಿರ್ಣಯ ಇದು ಸತ್ತ ಕುದುರೆ ಇದ್ದಹಾಗೆ, ಈ ನಿರ್ಣಯವನ್ನು ವಿರೋಧಿಸಿ ನಾನು ಹೊರಗೆ ಹೋಗುತ್ತಿದ್ದೇನೆ ತಿರಸ್ಕರಿಸುತ್ತೇವೆಂದು ಸ್ಪಷ್ಟವಾಗಿ ಹೇಳಬೇಕಾಗಿತ್ತು

ಶ್ರೀ ಕೆ.ಎಸ್ ಈಶ್ವರಪ್ಪ (ಜಲಸಂಪನ್ಮೂಲ ಸಚಿವರು) ಮಾನ್ಯ ವಾಟಾಳ್ ನಾಗರಾಜ್‌ರವರೆ, ಒಂದು ನಿಮಿಷ ತಾಳಿ ಈಗಾಗಲೇ ನಮ್ಮ ಕ್ಯಾಬಿನೆಟ್ ಕೂಡ ಈ ದಿಕ್ಕಿನಲ್ಲಿ ಏನು ಚರ್ಚೆ ಮಾಡಿದೆ ಎಂಬುದನ್ನು ಕೂಡ ತಾವು ಏನು ತೀರ್ಮಾನ ಮಾಡಿದ್ದೀರಿ ಅದನ್ನು ಕೂಡ ತಮ್ಮ ಗಮನಕ್ಕೆ ತರುತ್ತಿದ್ದೇನೆ ಭಾರತದ ಸಂವಿಧಾನದ ಅನುಚ್ಛೇದ 131ರ ಅಡಿಯಲ್ಲಿ ನಾವು ಏನು ಮಾಡಿದ್ದೇವೆಂದು ಹೇಳುತ್ತಿದ್ದೇನೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಅದನ್ನು ಹೇಳಬಾರದು ಸ್ಸಾರ್

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ಕ್ಯಾಬಿನೆಟ್‌ನಲ್ಲಿ ತೀರ್ಮಾನವಾಗಿರುವುದನ್ನು ಇಲ್ಲಿ ಓದುವುದು ಸರಿಯಲ್ಲ ಎಂದು ನನಗನಿಸುತ್ತದೆ

ಶ್ರೀ ಕೆ.ಎಸ್ ಈಶ್ವರಪ್ಪ ನಾನು ತಮ್ಮ ಹತ್ತಿರ ರಿಕ್ವೆಸ್ಟ್ ಮಾಡಿಕೊಳ್ಳುತ್ತೇನೆ ಇವತ್ತು ಇಡೀ ಕರ್ನಾಟಕ ರಾಜ್ಯದಲ್ಲಿ ಕನ್ನಡದ ಪರವಾಗಿ ಹೋರಾಟ ಮಾಡುತ್ತಿರುವ ವ್ಯಕ್ತಿ ಎಂದರೆ ಫಸ್ಟ್ ನೆನಪಾಗುವುದು ಶ್ರೀ ವಾಟಾಳ್ ನಾಗರಾಜ್ ಇವತ್ತು ಇಡೀ ಸದನ ಏಕೆಂದರೆ ವಿರೋಧಪಕ್ಷದ ನಾಯಕರು ಆಡಳಿತ ಪಕ್ಷದ ಪ್ರಮುಖರು ಎಲ್ಲಾ ಪಕ್ಷದ ಪ್ರಮುಖರುಗಳು ಸೇರಿಕೊಂಡು ತೀರ್ಮಾನ ಮಾಡಿ ಒಂದಾಗಿದ್ದೇವೆ ಈ ವಿಚಾರದಲ್ಲಿ ಎಂಬ ತೀರ್ಮಾನವನ್ನು ಮಾಡಿದ್ದೇವೆ ಎಲ್ಲರೂ ಒಟ್ಟಿಗೆ ಸೇರಿಕೊಂಡು ನಿರ್ಣಯ ಮಾಡುತ್ತಿರುವಂತಹ ಸಂದರ್ಭದಲ್ಲಿ ನಾವು ಏನು ಮಾಡಬೇಕು ಎಂಬುದನ್ನು ಕೂಡ ನಾವು 2–3 ದಿನದಿಂದ ಚರ್ಚೆ ಮಾಡಿದ್ದೇವೆ ಈಗಾಗಲೇ ಲೋಕಸಭಾ ಸದಸ್ಯರು ಕೂಡ ಒಕ್ಕೊರಲಿನಿಂದ ಹೋರಾಟ ಮಾಡುವುದಕ್ಕೆ ಅವರು ಕೂಡ ಅಲ್ಲಿ ಹೇಳಿದ್ದಾರೆ ಇಡೀ ಕರ್ನಾಟಕ ರಾಜ್ಯದಲ್ಲಿ ಒಂದು ಧ್ವನಿಯಲ್ಲಿ ನಾವು ಹೇಳುವಂತಹ ಸಂದರ್ಭದಲ್ಲಿ ನಾನು ನಿಮ್ಮಲ್ಲಿ ಮನವಿಯನ್ನು ಮಾಡುವುದು ಇಷ್ಟೆ ಇವತ್ತು ಏನು ಮಾನ್ಯ ವಿರೋಧಪಕ್ಷದ ನಾಯಕರು ಮಂಡನೆ ಮಾಡುತ್ತಿದ್ದಾರೆ ಇದನ್ನು ಮಾನ್ಯ ಸದಸ್ಯರಾದ ಮಾಧುಸ್ವಾಮಿಯವರು ಅನುಮೋದನೆಯನ್ನು ಮಾಡುತ್ತಾರೆ ಇಡೀ ಸದನ ನಾವು ಒಂದಾಗಿದ್ದೇವೆಂಬ ಮಾತನ್ನು ತೋರಿಸಿಕೊಳ್ಳಬೇಕೆಂದು ನನ್ನ ಪ್ರಾರ್ಥನೆ

ಶ್ರೀ ವಾಟಾಳ್ ನಾಗರಾಜ್ ನಾನು ನಿಮಗೆ ಏನು ವಿರೋಧ ಮಾಡುತ್ತಿಲ್ಲ ನಿಮ್ಮ ಭಾಷೆ, ನಿಮ್ಮ ನೀತಿ ಈ ರಾಜ್ಯದ ಜನತೆಗೆ ವಿರುದ್ಧವಾಗಿದೆ ರಾಜ್ಯದ ಜನತೆಯ ಮನೋಭಾವನೆ, ರಾಜ್ಯದ ಜನತೆಯ ಚಿಂತನೆ ಏನು, ಇದನ್ನು ತಿರಸ್ಕರಿಸಬೇಕು ನ್ಯಾಯಮಂಡಳಿಯ ತೀರ್ಪನ್ನು

ತಿರಸ್ಕರಿಸುತ್ತೀರೆಂದರೆ ಒಪ್ಪಿಕೊಳ್ಳುತ್ತೇನೆ, ಅದನ್ನು ತಿರಸ್ಕರಿಸಬೇಕು "ತಿರಸ್ಕರಿಸುವ" ಪದ ಇರಲೇಬೇಕು ಆಗ ಅದಕ್ಕೆ ಶಕ್ತಿ ಬರುತ್ತದೆ ಆದ್ದರಿಂದ ನಾನು ಇದನ್ನು ವಿರೋಧಿಸುತ್ತೇನೆ

ಶ್ರೀ ಜೆ ಸಿ ಮಾಧುಸ್ವಾಮಿ ಐತೀರ್ಪು ರಾಜ್ಯದ ರೈತರ ಹಿತಾಸಕ್ತಿಗೆ ಬಾಧಕವಾಗಿದೆ ಐತೀರ್ಪನ್ನು ಕಾರ್ಯಗತಗೊಳಿಸುವುದು ಸಾಧ್ಯವಾಗದಿರುವ ಹಿನ್ನೆಲೆ ಎಂದರೆ ಪುರಸ್ಕರಿಸದಿರುವುದು ಎಂದು

ಶ್ರೀ ವಾಟಾಳ್ ನಾಗರಾಜ್ ಬೇಡ, ಅದನ್ನು ಏತಕ್ಕೆ ಸುತ್ತಿಬಳಸಿ ಹೇಳುತ್ತೀರಿ?

(ಗೊಂದಲ)

ಕಾವೇರಿ ನ್ಯಾಯಾಧೀಕರಣ ಎಂದು ಹೇಳಿ

ಶ್ರೀ ಜೆ ಸಿ ಮಾಧುಸ್ವಾಮಿ ಮಾನ್ಯ ವಾಟಾಳ್ ನಾಗರಾಜ್‌ರವರ ಮನೋಭಾವ ಏನಿದೆ ಅವೆಲ್ಲವೂ ಇದರಲ್ಲಿ ಅಡಕವಾಗಿದೆ

ಶ್ರೀ ವಾಟಾಳ್ ನಾಗರಾಜ್ ಇಲ್ಲ ತಾವು ಸುಮ್ಮನೆ ಹೇಳುತ್ತಿದ್ದೀರಿ, ತಾವು ಪರಕಾಯ ಪ್ರವೇಶವನ್ನು ಮಾಡುತ್ತಿದ್ದೀರಿ ಏನು?

ಶ್ರೀ ಜೆ ಸಿ ಮಾಧುಸ್ವಾಮಿ ಇದೆ ಸಾರ್

ಶ್ರೀ ವಾಟಾಳ್ ನಾಗರಾಜ್ ಇಲ್ಲಾ ಸಾರ್

ಶ್ರೀ ಜೆ ಸಿ ಮಾಧುಸ್ವಾಮಿ ನೀವು ಸಮಾಧಾನವಾಗುವುದಾದರೆ

ಶ್ರೀ ವಾಟಾಳ್ ನಾಗರಾಜ್ ನಿಮ್ಮ ಬಗ್ಗೆ ನಮಗೆ ಬಹಳ ಗೌರವವಿದೆ ಎಲ್ಲಿದೆ? ಅವೆಲ್ಲಾ ನೀವು ಮಡಿವಂತಿಕೆಯ ಭಾಷೆ ಬೇಡ ತಿರಸ್ಕರಿಸಿದ್ದೇವೆಂದು ಇದರ ಬಗ್ಗೆ ನೇರವಾಗಿ ಹೇಳಿ

(ಗೊಂದಲ)

ಶ್ರೀ ಸಿದ್ದರಾಮಯ್ಯ ಮಡಿವಂತಿಕೆ ಅಲ್ಲ ಭಾಷೆಯಲ್ಲಿ ಒರಟುತನ ಬೇಡವೆಂದು ಹೇಳಿದ್ದಾರೆ

ಶ್ರೀ ವಾಟಾಳ್ ನಾಗರಾಜ್ ಆಯಿತು

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ಇಲ್ಲಿ ಸುಳ್ಳು ಎಂದು ಹೇಳಬಾರದು ಸತ್ಯಕ್ಕೆ ದೂರವಾದುದು ಎಂದು ಹೇಳ ಬೇಕು

ಶ್ರೀ ವಾಟಾಳ್ ನಾಗರಾಜ್ ನಾನು 1967ರಿಂದ ಈ ಮನೆಯ ಸದಸ್ಯನಾಗಿದ್ದೇನೆ ಯಾವುದು ಸತ್ಯ, ಯಾವುದು ಸುಳ್ಳು, ಯಾವ ಭಾಷೆ, ಸಂಸದೀಯ ಭಾಷೆ ಏನು ಇವೆಲ್ಲವೂ ನನಗೆ ಗೊತ್ತಿದೆ ಆದ್ದರಿಂದ ಈವಾಗ ಎಷ್ಟು ಶಕ್ತಿಯುತವಾಗಿ ನಿರ್ಣಯವಾಗಬೇಕಾಗಿತ್ತೋ ಅಷ್ಟು ಆಗಿಲ್ಲ

ಶ್ರೀ ಎಂ ಪಿ ಪ್ರಕಾಶ್ (ಗೃಹ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಮಾನ್ಯ ನಾಗರಾಜ್‌ರವರೆ, ಒಂದು ನಿಮಿಷ ತಾಳಿ ತಮ್ಮ ಭಾವನೆಗಳನ್ನು ನಾನು ಸಂಪೂರ್ಣವಾಗಿ ಅರ್ಥಮಾಡಿಕೊಂಡಿದ್ದೇನೆ ನೀವು ಕೂಡ ಈ ತರಹದ ಹೋರಾಟವನ್ನು ಮಾಡಿಕೊಂಡು ಬಂದಿದ್ದೀರಿ ನಿಮಗೂ ಕೂಡ ರಾಜ್ಯದ ಹಿತಾಸಕ್ತಿಯ ಬಗ್ಗೆ ಸಂಪೂರ್ಣವಾದ ಆಸಕ್ತಿ ನಮಗಿಂತಲೂ ಹೆಚ್ಚಿಗೆ ಇರುವುದರಿಂದ ಈ ಗೊತ್ತುವಳಿ ಎನ್ನುವುದು ಸರ್ವಾನುಮತದಿಂದ ಆಗಿದೆ ಎಂಬುದು ಬಹಳ ಮುಖ್ಯವಾಗಿರುವುದರಿಂದ ತಾವು ದಯವಿಟ್ಟು ತಮ್ಮ ಅಭಿಪ್ರಾಯಗಳನ್ನು ಇಲ್ಲಿ ವ್ಯಕ್ತಮಾಡುತ್ತಾ, ನಿಮಗೆ ಅಷ್ಟು ಮನಸ್ಸಿಗೆ ಬೇಸರವಾಗಿದೆ ಎಂದರೆ ನಾನು ಸದನದಿಂದ ಹೊರಗಡೆ ಹೋಗಿದ್ದೇನೆ ಎಂದು ಹೇಳಿ ಸಭಾತ್ಯಾಗ ಮಾಡಬೇಡಿ ದಯವಿಟ್ಟು Kindly do not withdraw from the House Let this Resolution be passed as a unanimous resolution.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಮಾನ್ಯ ಅಧ್ಯಕ್ಷರೆ, ಈ ರಾಜ್ಯದ ಜನತೆ ಏನು ನಿರೀಕ್ಷಣೆ ಮಾಡಿದ್ದರು ದಯವಿಟ್ಟು ಸ್ವಲ್ಪ ಕೇಳಬೇಕು ಸರ್ ಮಾನ್ಯ ಪ್ರಕಾಶ್‌ರವರೆ, ನಾನು ತಮಗೆ ಬಹಳ ಗೌರವ ಕೊಟ್ಟು ಮಾತನಾಡುತ್ತೇನೆ ಒಂದು ನಿಮಿಷ, ಈ ಸದನ ಮೊದಲನೆಯದಾಗಿ ಕಾವೇರಿ ವಿಷಯದ ಸಲುವಾಗಿ ಚರ್ಚೆಗೆ ಕರೆಯಬೇಕಾಗಿತ್ತು

ಶ್ರೀ ಜೆ ಸಿ ಮಾಧುಸ್ವಾಮಿ ಯಾವಾಗಲಾದರೂ ಮಾಡಿ ಎಂದು ನಾವು ಹೇಳಿದ್ದೇವಾ?

ಶ್ರೀ ವಾಟಾಳ್ ನಾಗರಾಜ್ ಆಯಿತು ತೊಗೊಳ್ಳಿ ಯಾವಾಗ ಲಾದರೂ ಮಾಡಬಹುದು ಮಾಡಿ ಯಾರು ಬೇಡವೆಂದು ಅನ್ನುತ್ತಾರೆ ಅದಕ್ಕೆ ನಮ್ಮ ಅಭ್ಯಂತರವೇನಿಲ್ಲ ನೀವು ಯಾವಾಗ ಬೇಕಾದರೂ ಮಾಡಿ ಕೊಳ್ಳಬಹುದು, ನೀವು ಮಾಡಿ ಆಯಿತಾ? 5ನೇ ತಾರೀಖು ಮಾಡಬಹುದಾಗಿತ್ತು ನಾನು ಆ ಸಭೆಯಲ್ಲಿಯೂ ಕೇಳಿದೆ, ನೀವು ಮಾಡಲಿಲ್ಲ ಅಪ್ಪಿತಪ್ಪಿ ನಿನ್ನಿಂದ ಏನೋ ಚರ್ಚೆಯಾಯಿತು ನನ್ನ ದೃಷ್ಟಿಯಲ್ಲಿ ಈ ರಾಜ್ಯದ ಜನ ಏನು ನಿರೀಕ್ಷಣೆ ಮಾಡಿದ್ದರು ಈ ರಾಜ್ಯದ ಎಲ್ಲಾ ಭಾಷೆಯ ಜನತೆ ಪಕ್ಷಬೇಧ ಮರೆತು ಅವರ ಹೋರಾಟ ಅವರ ಶಕ್ತಿಯನ್ನು ತೋರಿಸಿದ್ದಾರೆ ಯಾವ ರೀತಿಯಾಗಿ ನಾವು ಪಕ್ಷಬೇಧ ಮರೆತು ಹೋರಾಟವನ್ನು ಮಾಡಿದ್ದೇವೆ ಈ ನಿರ್ಣಯ ಇದೆಯಲ್ಲಾ ಆ ಹೋರಾಟಕ್ಕೆ ಆ ಒಂದು ತೀರ್ಪಿಗೆ ಸರಿಯಾದ ನಿರ್ಣಯ ಅಲ್ಲ ಆದ್ದರಿಂದ ನಾನೇನು

ನಿಮ್ಮನ್ನು ಬಿಟ್ಟು ಲಂಡನ್‌ಗೆ ಹೋಗುತ್ತಿಲ್ಲ ನಿಮ್ಮ ಜೊತೆಯಲ್ಲಿ ನಾವು ಇರುತ್ತೇವೆ ಆದರೆ ಈ ನಿರ್ಣಯದಲ್ಲಿ ಸ್ಪಷ್ಟವಾಗಿ ಇರಬೇಕು ಅದು ಇಲ್ಲದ್ದರಿಂದ ನಾನು ಆ ನಿರ್ಣಯ ಮಂಡಿಸುವಾಗ ಇರಬಾರದು ಆದ್ದರಿಂದ ನಾನು ಸಭಾತ್ಯಾಗ ಮಾಡುತ್ತೇನೆ

(ಗೊಂದಲ)

ಶ್ರೀ ಜೆ ಸಿ ಮಾಧುಸ್ವಾಮಿ ನೀವು ಸಭಾತ್ಯಾಗ ಮಾಡುವುದನ್ನು ನಾವು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ

ಶ್ರೀ ಹೆಚ್ ಡಿ ಬಸವರಾಜು ಇದರಲ್ಲಿ ಅಪಸ್ವರ ಬೇಡ ಸರ್ ನಾವೆಲ್ಲರೂ ಇದರಲ್ಲಿ ಒಗ್ಗಟ್ಟಾಗಿದ್ದೇವೆಂದು ಬರಲಿ ಇಲ್ಲವೆಂದರೆ ಅಪಸ್ವರ ಇಲ್ಲಿಯೆ ಶುರುವಾಗುತ್ತದೆ ನೀವು ಸಭಾತ್ಯಾಗ ಮಾಡಬಾರದು ಸರ್

(ಈ ಹಂತದಲ್ಲಿ ಶ್ರೀ ವಾಟಾಳ್ ನಾಗರಾಜರವರು ಘೋಷಣೆಯನ್ನು ಕೂಗುತ್ತಾ ಸಭಾತ್ಯಾಗ ಮಾಡಿದರು)

ಶ್ರೀ ಹೆಚ್ ಡಿ ಬಸವರಾಜು ಇದು ಪಚಾರದ ಸಲುವಾಗಿ ಹೋದಂತಾಗುತ್ತದೆ ದಯವಿಟ್ಟು ಅಪಸ್ವರ ಬೇಡ ಸರ್ ಈ ವಿಚಾರದಲ್ಲಿ ನಾವೆಲ್ಲರೂ ಒಂದಾಗಿರಬೇಕು ಈ ವಿಚಾರ ಕರ್ನಾಟಕಕ್ಕೆ ಸಂಬಂಧಪಟ್ಟಿದ್ದು ಇದು ವ್ಯಕ್ತಗತವಾಗಿರತಕ್ಕಂಥದ್ದಲ್ಲ

ಶ್ರೀ ಎಂ ಪಿ ಪ್ರಕಾಶ್ ಸರ್ ಒಂದು ನಿಮಿಷ

ಉಪಾಧ್ಯಕ್ಷರು ಹೇಳಿ

ಶ್ರೀ ಎಂ ಪಿ ಪ್ರಕಾಶ್ ಮಾನ್ಯ ಉಪಾಧ್ಯಕ್ಷರೆ, ಈಗ 2–3 ಮುಖ್ಯವಾದ ಬಿಲ್‌ಗಳು ಇವೆ, ಅವುಗಳನ್ನು ಈಗ ಮಂಡಿಸುತ್ತೇವೆ, ನಂತರ ಇದರ ಬಗ್ಗೆ ಪರ್ಯಾಲೋಚನೆ ಮಂಗಳವಾರವಾಗಲಿ

ಉಪಾಧ್ಯಕ್ಷರು ಈಗ ಸದನವನ್ನು ನಾಳೆ ಮಧ್ಯಾಹ್ನ 12 30 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ

(ಸದನವು ಸಂಜೆ 6 ಗಂಟೆಗೆ ಮುಂದೂಡಲ್ಪಟ್ಟು ಪುನ ದಿನಾಂಕ 16ನೇ ಮಾರ್ಚ್ 2007 ರಂದು ಮಧ್ಯಾಹ್ನ 12 ಗಂಟೆ 30 ನಿಮಿಷಕ್ಕೆ ಸೇರಲು ನಿಶ್ಚಯಿಸಿತು)

ಕರ್ನಾಟಕ ವಿಧಾನಸಭೆ
ಶುಕ್ರವಾರ 16ನೇ ಮಾರ್ಚ್ 2007ರಂದು ಸದನವು
ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ
ಮಧ್ಯಾಹ್ನ 12 ಗಂಟೆ 30 ನಿಮಿಷಕ್ಕೆ ಸಮಾವೇಶಗೊಂಡಿತು
ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ
ಪೀಠವನ್ನು ಅಲಂಕರಿಸಿದರು

ಅಧ್ಯಕ್ಷರು ಈಗ ಆಯವ್ಯಯ ಮಂಡನೆ ಮಾನ್ಯ ಉಪ-ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರೂ ಆದ ಶ್ರೀ ಬಿ ಎಸ್ ಯಡಿಯೂರಪ್ಪನವರು ಆಯವ್ಯಯವನ್ನು ಮಂಡಿಸುವುದು

ಶ್ರೀ ಜಿ ವಿ ಶ್ರೀರಾಮರೆಡ್ಡಿ ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ಹಣಕಾಸು ಸಚಿವರಾದ ಶ್ರೀ ಬಿ ಎಸ್ ಯಡಿಯೂರಪ್ಪನವರು ಮಂಡಿಸ ತಕ್ಕಂಥ ಆಯವ್ಯಯಕ್ಕೆ ಯಾವುದೇ ಪಾವಿತ್ರ್ಯತೆ ಉಳಿದಿಲ್ಲ ಏಕೆಂದರೆ, ಇವತ್ತು ಏನು ಮಂಡಿಸುತ್ತಿದ್ದಾರೆ ಎನ್ನುವ ವಿಚಾರ ಎಲ್ಲವೂ ಕೂಡ ಪತ್ರಿಕೆಗಳಲ್ಲಿ ಬಂದು

(ಗೊಂದಲ)

ಅಧ್ಯಕ್ಷರು ದಯಮಾಡಿ ಮಾನ್ಯ ಸದಸ್ಯರುಗಳು ಯಾರ್ಯಾರು ಎದ್ದು ನಿಂತಿದ್ದೀರಿ ತಾವೆಲ್ಲ ದಯಮಾಡಿ ಕುಳಿತುಕೊಳ್ಳಬೇಕು ಮಾನ್ಯ ಶ್ರೀರಾಮರೆಡ್ಡಿಯವರೇ ದಯಮಾಡಿ ಕುಳಿತುಕೊಳ್ಳಿ

(ಗೊಂದಲ)

ಆಯವ್ಯಯ ಮಂಡನೆ

ಶ್ರೀ ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯಮಂತ್ರಿ ಹಾಗೂ ಹಣಕಾಸು ಸಚಿವರು) ಸನ್ಮಾನ್ಯ ಸಭಾಧ್ಯಕ್ಷರೆ,

1 ನಾನು ಕರ್ನಾಟಕ ಸರ್ಕಾರದ 2007–08ನೇ ಸಾಲಿನ ಮುಂಗಡ ಪತ್ರವನ್ನು ಮಂಡಿಸಲು ಹರ್ಷಿಸುತ್ತೇನೆ

(ಗೊಂದಲ)

ಶ್ರೀ ಜಿ ವಿ ಶ್ರೀರಾಮರೆಡ್ಡಿ ಇದಕ್ಕೆ ಯಾವುದೇ ಪಾವಿತ್ರ್ಯತೆ ಉಳಿದಿಲ್ಲ

(ಗೊಂದಲ)

ಅಧ್ಯಕ್ಷರು ದಯಮಾಡಿ ಕುಳಿತುಕೊಳ್ಳಿ ಹಣಕಾಸು ಸಚಿವರು ಓದುತ್ತಿದ್ದಾರೆ ದಯಮಾಡಿ ಕುಳಿತುಕೊಳ್ಳಿ Silence please Silence please

(ಗೊಂದಲ)

ಶ್ರೀ ಬಿ ಎಸ್ ಯಡಿಯೂರಪ್ಪ

1 ದೇಶದಲ್ಲಿ ಸಮ್ಮಿಶ್ರ ಸರ್ಕಾರದ ಪರಿಕಲ್ಪನೆ ಗಟ್ಟಿಗೊಂಡಿದೆ ಕರ್ನಾಟಕದಲ್ಲಿ ಭಾರತೀಯ ಜನತಾ ಪಾರ್ಟಿ ಮತ್ತು ಜಾತ್ಯಾತೀತ ಜನತಾದಳದ ಮೈತ್ರಿ ಸರ್ಕಾರ **"ಕರ್ನಾಟಕ ಅಭಿವೃದ್ಧಿ ರಂಗ"** ಒಂದು ವರ್ಷದ ಅಧಿಕಾರವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ ಮುನ್ನಡೆದಿದೆ ರಾಜ್ಯದಲ್ಲಿ ಅಭಿವೃದ್ಧಿ ಪ್ರಕ್ರಿಯೆಯನ್ನು ಚುರುಕುಗೊಳಿಸುವಲ್ಲಿ ರಾಜಕೀಯ ಸಿದ್ಧಾಂತಗಳ ಭಿನ್ನತೆಯನ್ನು ಬದಿಗಿರಿಸಿ ಏಕೋಭಾವದಿಂದ ಜನರಿಗೆ ವಚನವಿತ್ತಿದ್ದಂತೆ ದುಡಿಯುತ್ತಿದ್ದೇವೆ ಈ ಬದ್ಧತೆ ಮುಂದೆಯೂ ಮುಂದುವರಿಯಲಿದೆ ಎರಡೂ ಪಕ್ಷಗಳ ಸಹಮತದಲ್ಲಿ ಸಿದ್ಧಪಡಿಸಿರುವ "ಸಾಮಾನ್ಯ ಕನಿಷ್ಠ ಕಾರ್ಯಕ್ರಮ"ವನ್ನು ಮಾದರಿಯನ್ನಾಗಿರಿಸಿಕೊಂಡು ನಾವು ಆಡಳಿತ ನಡೆಸುತ್ತಿದ್ದೇವೆ 'ಮೈತ್ರಿ ಧರ್ಮ' ವಿಧಿಸುವ 'ಲಕ್ಷ್ಮಣ ರೇಖೆ' ಯನ್ನು ದಾಟದೆ ನಾಡಿನ ಸರ್ವಾಂಗೀಣ ಅಭಿವೃದ್ಧಿಯ ಗುರಿ ಸಾಧಿಸಲು ಶ್ರಮಿಸುತ್ತಿದ್ದೇವೆ

ಹಾಲು ಹಳ್ಳ ಹರಿಯಲಿ
ಬೆಣ್ಣೆ ಬೆಟ್ಟವಾಗಲಿ!
ಜೇನು ಮಳೆಯು ಸುರಿಯಲಿ
ತೊಟ್ಟಲೊಲಿದು ತೂಗಲಿ
ಮುನಿದು ಸಮರ ನರಬಲಿ
ನರರು ನರರ ನಂಬಲಿ
ಸ್ವಾಮಿಯಮೃತ ಕೃಪೆಯಲಿ
ಶಾಂತಿ ಜಗವ ತುಂಬಲಿ

ರಾಷ್ಟ್ರಕವಿ ಕುವೆಂಪು ಅವರ ಕವನದ ಈ ಸಾಲುಗಳು ಧ್ವನಿಸುವ ಅರ್ಥ ನಮ್ಮ ಮೈತ್ರಿ ಸರ್ಕಾರದ ಸದಾಶಯಗಳಾಗಿವೆ ಅವರ ಸಂದೇಶ ನಮಗೆ ಅನುಗಾಲ ಅನುಕರಣೀಯ ಆದರ್ಶವಾಗಿದೆ

3 ಜನರ ನಡುವೆ ಕೆಲಸ ಮಾಡುವ ಮತ್ತು ಜನಾಭಿಪ್ರಾಯಗಳಿಗೆ ಸ್ಪಂದಿಸುವ ಸರ್ಕಾರ ಇದು ಎಂಬುದು ಕಳೆದೊಂದು ವರ್ಷದಲ್ಲಿ ನಿರೂಪಿತವಾಗಿದೆ ಸರ್ಕಾರವನ್ನು ನಾಡ ಬಾಂಧವರ ಮನೆ ಬಾಗಿಲುಗಳಿಗೆ ಕೊಂಡೊಯ್ದ ಶ್ರೇಯಸ್ಸು ನಮ್ಮದು ಕೇವಲ ರಾಜಧಾನಿಗೆ ಸೀಮಿತವಾಗದೆ,

ರಾಜ್ಯದ ಉದ್ದಗಲಕ್ಕೂ ಸರ್ಕಾರದ ಅಸ್ತಿತ್ವ ಮತ್ತು ಕಾರ್ಯಶೈಲಿ ಜನಾನುಭವಕ್ಕೆ ಬರುವಂತೆ ಮಾಡುವಲ್ಲಿ ನಾವು ಯಶಸ್ವಿಯಾಗಿದ್ದೇವೆ ಎಂದು ಹೇಳಲು ಹೆಮ್ಮೆ ಪಡುತ್ತೇನೆ ಸಮ್ಮಿಶ್ರ ಸರ್ಕಾರಗಳಿಗೆ ಕರ್ನಾಟಕದ ಮೈತ್ರಿ ಸರ್ಕಾರ ಮಾದರಿಯಾಗುವಂತೆ ಹೊಸ ದೃಷ್ಟಿಕೋನ, ನವಚಿಂತನೆ ಮತ್ತು ಹೊಸ ಕಾರ್ಯಕ್ರಮಗಳಿಗೆ ನಾಂದಿ ಹಾಡಲಾಗಿದೆ

4 ಇದು ನಮ್ಮ ಮೈತ್ರಿ ಸರ್ಕಾರದ ಎರಡನೆಯ ಮುಂಗಡ ಪತ್ರ. ಮೊದಲ ಮುಂಗಡ ಪತ್ರದಲ್ಲಿ ಕೊಟ್ಟ ಮಾತಿನಂತೆ ಕರ್ನಾಟಕದ ಸರ್ವಾಂಗೀಣ ಅಭಿವೃದ್ಧಿಗೆ ನೀಲ ನಕ್ಷೆ ಸಿದ್ಧಪಡಿಸಿ ಅನುಷ್ಠಾನಕ್ಕೆ ಮುಂದಾಗಿದ್ದೇವೆ ಸ್ವಚ್ಛ ಮತ್ತು ದಕ್ಷ ಆಡಳಿತದ ಮೂಲಕ "ಸರ್ವರಿಗೂ ಸಮಪಾಲು ಮತ್ತು ಸಮಬಾಳನ್ನೀಯುವ" ದಿಕ್ಕಿನಲ್ಲಿ ಹಲವು ಜನಪರ ಯೋಜನೆಗಳನ್ನು ಜಾರಿಗೊಳಿಸಿದ್ದೇವೆ ಮತ್ತೂ ಕೆಲವು ಯೋಜನೆಗಳು ಜಾರಿಗೊಳ್ಳುತ್ತಿವೆ ರೈತರು, ಕೃಷಿ ಕಾರ್ಮಿಕರು, ಪರಿಶಿಷ್ಟರು, ಹಿಂದುಳಿದವರು, ಅಲ್ಪಸಂಖ್ಯಾತರು, ಮಹಿಳೆಯರು ಮತ್ತು ಯುವಕರೂ ಸೇರಿ ಸಮಾಜದ ಎಲ್ಲಾ ಸ್ತರಗಳ ಜನರ ಆಶಯಗಳಿಗೆ ಸ್ಪಂದಿಸಲು ರೂಪಿಸಲಾಗಿರುವ ಕಾರ್ಯಕ್ರಮಗಳು ಸಾಮಾಜಿಕ ನ್ಯಾಯದ ನೆಲೆಯಲ್ಲಿ ಸಿದ್ಧಗೊಂಡಿವೆ

5 ಕರ್ನಾಟಕವನ್ನು ಭಾರತದ ರಾಜ್ಯಗಳ ಪೈಕಿ ಅಭಿವೃದ್ಧಿ ಹೊಂದಿದ ಮುಂಚೂಣಿ ರಾಜ್ಯವನ್ನಾಗಿ ಬೆಳೆಸಲು ನಾವು ಕಂಡುಕೊಂಡ ಹಾದಿ ಶೈಕ್ಷಣಿಕ, ಸಾಮಾಜಿಕ ಮತ್ತು ಆರ್ಥಿಕ ವಲಯಗಳಲ್ಲಿ ಸಮತೋಲನದ ಬೆಳವಣಿಗೆ ಸಾಧಿಸುವುದು ಈ ದಿಶೆಯಲ್ಲಿ ರಾಜ್ಯದ ಮೂಲಭೂತ ಸೌಕರ್ಯಗಳ ಸುಧಾರಣೆ, ಮಾನವ ಸಂಪನ್ಮೂಲದ ಸದ್ಬಳಕೆ, ಕೌಶಲ್ಯವೃದ್ಧಿ ಹಾಗೂ ಉದ್ಯೋಗ ಸೃಜನೆಗೆ ಒತ್ತು ನೀಡಲಾಗಿದೆ ನಮ್ಮ ಧ್ಯೇಯ ಸಾಧನೆಗೆ ಪೂರಕವಾಗಿ ಸಂಪನ್ಮೂಲ ಸಂಗ್ರಹಣೆ ಮತ್ತು ಬಂಡವಾಳ ಹೂಡಿಕೆ ಹೆಚ್ಚಿಸಲು ಶ್ರಮಿಸಲಾಗಿದೆ

ಅಲ್ಲಮ ಪ್ರಭುಗಳು ನುಡಿದಂತೆ

"ಹಿಂದಣ ಹೆಜ್ಜೆಯ ನೋಡಿ ಕಂಡಲ್ಲದೆ
ನಿಂದ ಹೆಜ್ಜೆಯನರಿಯಬಾರದು"

ಅಂದರೆ ನಮ್ಮ ಹಿಂದಿನ ಹೆಜ್ಜೆಗಳನ್ನು ವಿಮರ್ಶಿಸದೆ ವರ್ತಮಾನವನ್ನು ಅರ್ಥೈಸುವುದು ಸಮರ್ಪಕವಲ್ಲ ಭೂತ ಮತ್ತು ವರ್ತಮಾನಗಳ ಸಂಬಂಧವನ್ನು ವಿಶ್ಲೇಷಿಸಿಕೊಂಡು ಮುನ್ನಡೆಯುವ ವಿವೇಕ ನಮಗಿರಬೇಕು

6 ಈ ಹಿನ್ನೆಲೆಯಲ್ಲಿ ನಾನು ಕಳೆದ ಮುಂಗಡ ಪತ್ರದಲ್ಲಿ ಮಂಡಿಸಿದ್ದ ಯೋಜನೆಗಳ ಸಂಕ್ಷಿಪ್ತ ವಿಶ್ಲೇಷಣೆ ನಂತರ ವರ್ತಮಾನದ ಮುಂಗಡಪತ್ರದಲ್ಲಿ ಮೂಡಿಬರುವ ಕಾರ್ಯಕ್ರಮಗಳ ಮೇಲೆ ಬೆಳಕು ಹರಿಸಲು ಪ್ರಯತ್ನಿಸಿದ್ದೇನೆ

7 ಮಾನವ ಸಂಪನ್ಮೂಲದ ಗುಣಾತ್ಮಕ ಬೆಳವಣಿಗೆ ಹಾಗೂ ಕೌಶಲ್ಯವೃದ್ಧಿಸುವ ಸಲುವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚು ಸರ್ಕಾರಿ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಲಾಗಿದೆ ಉದಾಹರಣೆಗೆ ಕಳೆದ ಒಂದೇ ವರ್ಷದಲ್ಲಿ 716 ಸರ್ಕಾರಿ ಪ್ರಾಥಮಿಕ ಶಾಲೆಗಳು, 500 ಪ್ರೌಢ ಶಾಲೆಗಳು, 200 ಪದವಿಪೂರ್ವ ಕಾಲೇಜುಗಳು ಮತ್ತು 15 ಪ್ರಥಮ ದರ್ಜೆ ಕಾಲೇಜುಗಳನ್ನು ಪ್ರಾರಂಭಿಸಲು ಮಂಜೂರಾತಿ ನೀಡಿದ್ದು ಇವುಗಳಲ್ಲಿ ಬಹುತೇಕ ಕಾರ್ಯಾರಂಭ ಮಾಡಿವೆ 104 ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು ಆಧುನೀಕರಣಗೊಳಿಸಲಾಗಿದೆ ಏಳು ಹೊಸ ಕೈಗಾರಿಕಾ ತರಬೇತಿ ಸಂಸ್ಥೆಗಳು ಮತ್ತು 32 ಹೊಸ ಶಾಖೆಗಳನ್ನು ಪ್ರಾರಂಭಿಸಲಾಗಿದೆ ಹಾಗೆಯೇ ಹೆಣ್ಣು ಮಕ್ಕಳ ಸಬಲೀಕರಣಕ್ಕೆ ಭಾಗ್ಯಲಕ್ಷ್ಮಿ ಭದ್ರತಾ ರೇವಣಿ ಯೋಜನೆ, ಉಚಿತ ಭಾಗ್ಯರಥ ಬೈಸಿಕಲ್ ಯೋಜನೆ ಮತ್ತು ಪ್ರತಿಭಾವಂತ ಹೆಣ್ಣು ಮಕ್ಕಳಿಗೆ ವೃತ್ತಿ ಶಿಕ್ಷಣದ ಪೂರ್ಣ ವೆಚ್ಚ ಭರಿಸುವ ಕಾರ್ಯಕ್ರಮಗಳಿಗೆ ಚಾಲನೆ ನೀಡಲಾಗಿದೆ

8 ರೈತರಿಗೆ ಶೇ 4 ರ ಬಡ್ಡಿ ದರದಲ್ಲಿ ಸಾಲ, ಶೇ 75 ರ ರಿಯಾಯಿತಿ ದರದಲ್ಲಿ ಬಿತ್ತನೆ ಬೀಜ ಹಾಗೂ ಹನಿ ನೀರಾವರಿ ಉಪಕರಣ ಮತ್ತು ಶೇ 50 ರ ಸಹಾಯ ಧನದಲ್ಲಿ ಎತ್ತು-ಗಾಡಿ ವಿತರಿಸುವ ಕಾರ್ಯಕ್ರಮಗಳು ಅನುಷ್ಠಾನಗೊಂಡಿವೆ ದೀರ್ಘಕಾಲದಿಂದ ನೆನೆಗುದಿಗೆ ಬಿದ್ದಿದ್ದ 39 ನೀರಾವರಿ ಯೋಜನೆಗಳ ಪೈಕಿ 35 ಯೋಜನೆಗಳು ಪೂರ್ಣಗೊಂಡಿವೆ ಉಳಿದ ನಾಲ್ಕು ಯೋಜನೆಗಳು ಸಧ್ಯದಲ್ಲೇ ಪೂರ್ಣಗೊಳ್ಳಲಿವೆ

9 **"ಹಳ್ಳಿಗಳ ಸಮಗ್ರ ಅಭಿವೃದ್ಧಿಯಿಂದ ಮಾತ್ರ ದೇಶದ ಸರ್ವಾಂಗೀಣ ಬೆಳವಣಿಗೆ ಸಾಧ್ಯ"** ಎಂದು ಮಹಾತ್ಮ ಗಾಂಧೀಜಿಯವರು ಪ್ರತಿಪಾದಿಸಿದ್ದರು ನಗರಗಳಲ್ಲಿ ಲಭ್ಯವಿರುವ ಸೌಲಭ್ಯಗಳು ಗ್ರಾಮಗಳಲ್ಲೂ ದೊರೆಯಬೇಕು ಎಂಬುದು ರಾಷ್ಟ್ರಪತಿ ಡಾ ಎ ಪಿ ಜೆ ಅಬ್ದುಲ್ ಕಲಾಂ ಅವರ ಆಶಯ ಈ ಅಭಿಪ್ರಾಯಗಳಿಂದ ಪ್ರೇರಿತವಾಗಿರುವ ನಮ್ಮ ಸರ್ಕಾರ ಪ್ರತಿವರ್ಷ ಒಂದು ಸಾವಿರ ಗ್ರಾಮಗಳ ಸಮಗ್ರ ಅಭಿವೃದ್ಧಿಯ ಕನಸಿನೊಂದಿಗೆ **'ಸುವರ್ಣ ಗ್ರಾಮೋದಯ ಯೋಜನೆ'** ಪ್ರಾರಂಭಿಸಿದೆ ಹಾಗೆಯೇ ನಿರುದ್ಯೋಗಿ ಯುವಕ-ಯುವತಿಯರಿಗೆ ಉದ್ಯೋಗಾವಕಾಶ ಕಲ್ಪಿಸಿಕೊಡಲು ಸುವರ್ಣ

ಕಾಯಕ ಯೋಜನೆ ಅನುಷ್ಠಾನಗೊಳಿಸಿದೆ ಅತ್ಯಲ್ಪ ಕಾಲದಲ್ಲಿ ಯಶಸ್ಸು ಮತ್ತು ಜನಪ್ರಿಯತೆ ಈ ಯೋಜನೆಗೆ ದೊರೆತಿದೆ ಉದ್ಯೋಗ ಒದಗಿಸುವ ನಿಟ್ಟಿನಲ್ಲಿ ಇದು ನಮ್ಮ ಸರ್ಕಾರದ ಅತ್ಯಂತ ಪರಿಣಾಮಕಾರಿ ಪ್ರಯತ್ನವಾಗಿದೆ

10 ಏಕೀಕೃತ ಕರ್ನಾಟಕದ ಸುವರ್ಣ ಮಹೋತ್ಸವವನ್ನು ವೈಭವಯುತ ಹಾಗೂ ಅರ್ಥಪೂರ್ಣವಾಗಿ ಆಚರಿಸಿದ ನಮ್ಮ ಸರ್ಕಾರ ಕನ್ನಡಕ್ಕೆ ಶಾಸ್ತ್ರೀಯ ಭಾಷಾ ಸ್ಥಾನಮಾನವನ್ನು ಗಳಿಸಿಕೊಳ್ಳುವ ನಿಟ್ಟಿನಲ್ಲಿ ಪ್ರಯತ್ನ ಮುಂದುವರಿಸಿದೆ

11 ಅಭಿವೃದ್ಧಿ ಪಥದಲ್ಲಿ ಹೊಸ ಹೆಜ್ಜೆ ಗುರುತುಗಳನ್ನು ಮೂಡಿಸಿರುವ ಮೈತ್ರಿ ಸರ್ಕಾರ ಸುವರ್ಣ ಕರ್ನಾಟಕ ವರ್ಷಾಚರಣೆಯ ನೆನಪಿನಲ್ಲಿ ನಾಡಿನ ಸಮಗ್ರ ಅಭಿವೃದ್ಧಿಗೆ ಸಮೃದ್ಧ ಕಾರ್ಯಕ್ರಮ ನೀಡಿದೆ ಎಂದು ಹೇಳಲು ಹರ್ಷವಾಗುತ್ತದೆ ಕಳೆದ ವರ್ಷ ಪ್ರಾರಂಭಿಸಿದ ಹೊಸ ಯೋಜನೆಗಳಲ್ಲಿ ಅನುಷ್ಠಾನದ ವಿವಿಧ ಹಂತಗಳಲ್ಲಿರುವ ಯೋಜನೆಗಳನ್ನು ಈ ವರ್ಷ ಪೂರ್ಣ ಪ್ರಮಾಣದಲ್ಲಿ ಜಾರಿಗೊಳಿಸಲಾಗುವುದು

12 ಕಾವೇರಿ ನೀರು ಹಂಚಿಕೆಯಲ್ಲಿ ರಾಜ್ಯಕ್ಕೆ ಆಗಿರುವ ಅನ್ಯಾಯವನ್ನು ಸರಿಪಡಿಸಿಕೊಳ್ಳಲು ನಾಡ ಜನರ ಅಭಿಪ್ರಾಯದಂತೆ ಕಾನೂನು ಮತ್ತು ನೀರಾವರಿ ತಜ್ಞರ ಸಲಹೆ ಪಡೆದು, ಸರ್ವ ಪಕ್ಷಗಳ ಮುಖಂಡರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕಾನೂನು ಕ್ರಮ ಕೈಗೊಳ್ಳುವಲ್ಲಿ ಎಚ್ಚರಿಕೆಯಿಂದ ಮುಂದಡಿ ಇರಿಸಿದ್ದೇವೆ

13 ಸಮಸ್ತ ನಾಡ ಬಾಂಧವರಿಗೆ ಶಾಂತಿ, ಸಮೃದ್ಧಿ ಮತ್ತು ಸಂತೃಪ್ತಿ ತರಲು ಎಲ್ಲಾ ಪ್ರಯತ್ನಗಳನ್ನು ನಮ್ಮ ಸರ್ಕಾರ ಮುಂದುವರಿಸುತ್ತದೆ

ನಮ್ಮ ಸರ್ಕಾರದ ಆದ್ಯತೆಗಳು ಇಂತಿವೆ

- ಅಭಿವೃದ್ಧಿಯ ವೇಗೋತ್ಕರ್ಷ
- ಸಮತೋಲನದ ಅಭಿವೃದ್ಧಿ
- ಸಾಮಾಜಿಕ ನ್ಯಾಯ
- ಸಾಮಾಜಿಕ ಸಾಮರಸ್ಯ
- ಸಾಮಾಜಿಕ ಭದ್ರತೆ
- ಆಹಾರ ಭದ್ರತೆ
- ಮಾನವ ಸಂಪನ್ಮೂಲದ ಸದ್ಬಳಕೆಗೆ ಕೌಶಲ್ಯಾಭಿವೃದ್ಧಿ

- ಉದ್ಯೋಗಾವಕಾಶಗಳಲ್ಲಿ ಹೆಚ್ಚಳ
- ನಾಡಿನ ನೆಲ-ಜಲ, ಭಾಷೆ ಮತ್ತು ಸಂಸ್ಕೃತಿಗಳ ಸಂರಕ್ಷಣೆ

ಆರ್ಥಿಕ ಪರಿಸ್ಥಿತಿ

14 ಕರ್ನಾಟಕದ ಆರ್ಥಿಕತೆಯು 2006-07ನೇ ಸಾಲಿನಲ್ಲಿ ಸಾಮಾನ್ಯ ಬೆಳವಣಿಗೆ ಕಂಡಿದೆ ರಾಜ್ಯದ ಸ್ಥೂಲ ಆರ್ಥಿಕ ಮೂಲ ಅಂಶಗಳು ಶಕ್ತಿ ತುಂಬಿಕೊಂಡಿವೆ 2006-07ನೇ ಸಾಲಿನ ಮುಂಗಡ ಅಂದಾಜುಗಳು 1,94,009 ಕೋಟಿ ರೂ ಗಳ ಒಟ್ಟು ಆಂತರಿಕ ಉತ್ಪನ್ನವನ್ನು (ಜಿಎಸ್‌ಡಿಪಿ) ಬಿಂಬಿಸುತ್ತಿವೆ ಜಿಎಸ್‌ಡಿಪಿಗೆ ಪ್ರಾಥಮಿಕ ವಲಯವು ಶೇ 19 2 ಮತ್ತು ದ್ವಿತೀಯ ವಲಯವು ಶೇ 26 13 ಹಾಗೂ ಪೂರಕ ವಲಯವು ಶೇ 54 56 ರ ಕೊಡುಗೆ ನೀಡುವ ನಿರೀಕ್ಷೆಯಿದೆ ಪ್ರಾಥಮಿಕ, ದ್ವಿತಿಯ ಮತ್ತು ಪೂರಕವಲಯಗಳು ಕ್ರಮವಾಗಿ ಶೇ 2, ಶೇ 9 9 ಮತ್ತು ಶೇ 9 2 ರ ವಾಸ್ತವಿಕ-ದರದಲ್ಲಿ ಬೆಳೆಯಲಿವೆ 2006-07ನೇ ಸಾಲಿಗೆ ಒಟ್ಟಾರೆ ಶೇ 13 ರ ಸಾಂಕೇತಿಕ ಬೆಳವಣಿಗೆಯನ್ನು ಮತ್ತು ಶೇ 8 ರ ವಾಸ್ತವಿಕ ಬೆಳವಣಿಗೆಯನ್ನು ದಾಖಲಿಸಲಿದೆ ಇದು 2005-06ರ ಶೇ 7 8 ರ ಬೆಳವಣಿಗೆಗೆ ಹೋಲಿಸಿದರೆ ತುಸು ಹೆಚ್ಚಿನ ಬೆಳವಣಿಗೆಯಾಗಿರುತ್ತದೆ ಕೃಷಿ ವಲಯದಲ್ಲಿನ ವಾಸ್ತವಿಕ ಬೆಳವಣಿಗೆಯು ಶೇ 2 ರಷ್ಟಾಗಿದ್ದು ತೃಪ್ತಿದಾಯಕವಾಗಿರುವುದಿಲ್ಲ

15 ರಾಜ್ಯದಲ್ಲಿ ಸೇವಾ ವಲಯವು ಅತ್ಯಧಿಕ ಮಟ್ಟದ ಹೂಡಿಕೆಯನ್ನು ಆಕರ್ಷಿಸಿದೆ ಉತ್ಪಾದನಾ ವಲಯವು ಪುನಶ್ಚೇತನಗೊಂಡಿದ್ದು, 2006-07ನೇ ಸಾಲಿನಲ್ಲಿ 1,01,280 23 ಕೋಟಿ ರೂ ಗಳ ಹೂಡಿಕೆಯನ್ನು ಆಕರ್ಷಿಸಿದೆ ಆದರೆ, ಕೃಷಿವಲಯವು ಮಾತ್ರ ಯಾವುದೇ ಪ್ರಮುಖ ಹೂಡಿಕೆಯನ್ನು ಆಕರ್ಷಿಸಿಲ್ಲ ಈ ಹಿನ್ನೆಲೆಯಲ್ಲಿ ನಾವು ಕೃಷಿವಲಯಕ್ಕೆ ಹೆಚ್ಚಿನ ಬಂಡವಾಳ ಹರಿಸಲು ಬೆಂಬಲ ನೀಡಲೇಬೇಕು ಇದರ ಜೊತೆಗೆ ದ್ವಿತೀಯ ಮತ್ತು ಪೂರಕ ವಲಯಗಳೂ ಸಹ ಗ್ರಾಮೀಣ ಪ್ರದೇಶಗಳಿಗೆ ವಿಸ್ತರಿಸುವಂತೆ ನೋಡಿಕೊಳ್ಳಬೇಕಾಗಿದೆ

16 ಕೃಷಿ ನಮ್ಮ ರಾಜ್ಯದ ಗ್ರಾಮೀಣ ಜನತೆಯ ಮುಖ್ಯ ಕಸುಬಾಗಿದೆ ಜಿಎಸ್‌ಡಿಪಿಗೆ ಕೃಷಿ ವಲಯದ ಕೊಡುಗೆ ಶೇ 19 2 ರಷ್ಟಕ್ಕೆ ಇಳಿಕೆಯಾಗಿದ್ದರೂ ಸಹ ರಾಜ್ಯದ ಶೇ 64 ರಷ್ಟು ಜನಸಮುದಾಯವು ಜೀವನ ನಿರ್ವಹಣೆಗೆ ಕೃಷಿ ವಲಯವನ್ನೇ ಅವಲಂಬಿಸಿದೆ ನಿಜ ಅರ್ಥದಲ್ಲಿ ಹೇಳುವುದಾದರೆ, ಕೃಷಿ ಅವಲಂಬಿತ ಜನಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ ಕೃಷಿ

ವಲಯದಲ್ಲಿನ ನಿರಾಶದಾಯಕ ಬೆಳವಣಿಗೆ ಗ್ರಾಮೀಣ ಪ್ರದೇಶದ ಜನರ ಜೀವನ ಗುಣಮಟ್ಟಕ್ಕೆ ದಕ್ಕೆ ತಂದಿದೆ

17 ಇತ್ತೀಚಿನ ಹಣದುಬ್ಬರ ಏರಿಕೆಯು ಉತ್ಪಾದನಾ ವೆಚ್ಚ ಏರಿಕೆಗೆ ದಾರಿಮಾಡಿದೆ ಈ ಹಿನ್ನೆಲೆಯಲ್ಲಿ ವೃದ್ಧಿಯನ್ನು ಕುಗ್ಗಿಸದಂತೆ ಹಣದುಬ್ಬರ ನಿಯಂತ್ರಿಸುವುದು ಈಗ ನಮ್ಮ ಮುಂದಿರುವ ಸವಾಲಾಗಿದೆ ಹಣದುಬ್ಬರ ನಿಯಂತ್ರಿಸಲು ಅಧಿಕ ಬೇಡಿಕೆಯನ್ನು ಹತ್ತಿಕ್ಕುವ ಜೊತೆ ಜೊತೆಯಲ್ಲೇ ಮಾರುಕಟ್ಟೆ ಅಗತ್ಯವನ್ನು ಈಡೇರಿಸಲು ಪೂರೈಕೆ ವ್ಯವಸ್ಥೆಯನ್ನು ಸಜ್ಜುಗೊಳಿಸುವುದು ಅಗತ್ಯವಾಗಿದೆ

ರಾಜ್ಯ ಹಣಕಾಸು

18 ರಾಜ್ಯದಲ್ಲಿ 2006-07ನೇ ಸಾಲಿನಲ್ಲಿ ವ್ಯಾಟ್ ತೆರಿಗೆ ಸಂಗ್ರಹಗಳು ಶೇ 24 ರಷ್ಟು ಬೆಳೆದಿವೆ ವ್ಯಾಟ್‌ನಿಂದ 2006-07ನೇ ಸಾಲಿನಲ್ಲಿ 1580 ಕೋಟಿ ರೂ ಗಳ ತೆರಿಗೆ ನಷ್ಟವಾಗುತ್ತದೆ ಎಂದು ಅಂದಾಜಿಸಲಾಗಿತ್ತಾದರೂ ವಾಸ್ತವದಲ್ಲಿ ನಮಗೆ 2006-07ನೇ ಸಾಲಿನಲ್ಲಿ 730 ಕೋಟಿ ರೂ ಗಳ ನಷ್ಟವಾಗಿದೆ ಈ ಸಂಬಂಧ ಕೇಂದ್ರ ಸರ್ಕಾರದ ಪರಿಹಾರ ಸೂತ್ರದಂತೆ ನಾವು ಕೇಂದ್ರದಿಂದ ಶೇ 75 ರಷ್ಟು ಅಂದರೆ 390 ಕೋಟಿ ರೂ ಗಳ ವ್ಯಾಟ್ ನಷ್ಟ ಪರಿಹಾರ ಧನವನ್ನು ಸ್ವೀಕರಿಸಿದ್ದೇವೆ ವ್ಯಾಟ್ ಆಡಳಿತವನ್ನು ನಾವು ಸರಳ, ಪಾರದರ್ಶಕ ಮತ್ತು ಗ್ರಾಹಕ ಸ್ನೇಹಿಯಾಗಿರುವಂತೆ ಮಾಡಲು ಪ್ರಯತ್ನಿಸಿದ್ದೇವೆ ವ್ಯಾಟ್ ಆಡಳಿತ ದಕ್ಷತೆಯನ್ನು ಹೆಚ್ಚಿಸಲು ವಾಣಿಜ್ಯ ತೆರಿಗೆ ಇಲಾಖೆಯನ್ನು ವ್ಯಾಪಕವಾಗಿ ಮತ್ತು ವ್ಯವಸ್ಥಿತವಾಗಿ ಗಣಕೀಕರಿಸಲಾಗುತ್ತಿದೆ

19 ಅಬಕಾರಿ ತೆರಿಗೆ ಸಂಗ್ರಹಣೆಯಲ್ಲಿ ನಮ್ಮದು ಗುರಿ ಮೀರಿದ ಸಾಧನೆಯಾಗಿದೆ 2006-07ನೇ ಸಾಲಿನಲ್ಲಿ ನಾವು ಭಾರತೀಯ ಮದ್ಯ ಉತ್ಪನ್ನಗಳ ಸಗಟು ಮಾರಾಟ ಪದ್ಧತಿಯನ್ನು ತೆಗೆದುಹಾಕಿದೆವು ಇದು ರಾಜ್ಯಕ್ಕೆ ಒಳ್ಳೆಯದನ್ನೇ ತಂದಿದೆ ಅಬಕಾರಿ ತೆರಿಗೆಯಲ್ಲಿ 4100 ಕೋಟಿ ರೂ ಗಳ ಆಯವ್ಯಯ ಗುರಿಗೆ ಎದುರಾಗಿ 4536 ಕೋಟಿ ರೂ ಗಳು ಸಂಗ್ರಹಣೆಯಾಗುವ ಸಾಧ್ಯತೆಯಿದೆ ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಸಂಗ್ರಹಣೆ ಕೂಡ ಉತ್ಸಾಹದಾಯಕವಾಗಿದೆ 2766 ಕೋಟಿ ರೂ ಗಳ ಆಯವ್ಯಯ ಗುರಿಗೆ ಎದುರಾಗಿ 2006-07 ರ ಕೊನೆಗೆ ಈ ಮೂಲದಿಂದ 3331 ಕೋಟಿ ರೂ ಗಳ ಸಂಗ್ರಹಣೆಯನ್ನು ನಿರೀಕ್ಷಿಸಲಾಗಿದೆ ಸಾರಿಗೆ ವಲಯದಲ್ಲಿ ಕೂಡ ನಾವು ಆಯವ್ಯಯ ಗುರಿ ಸಾಧಿಸಲಿದ್ದೇವೆ

20 ರಾಜ್ಯದ ತೆರಿಗೆಯೇತರ ರಾಜಸ್ವಗಳು ಕಳೆದ ಹತ್ತು ವರ್ಷಗಳಿಂದ ಹೆಚ್ಚು ಕಡಿಮೆ ಸ್ಥಗಿತಗೊಂಡಿವೆ ನೀರು ದರಗಳ ವಸೂಲಿ ಮತ್ತು ಅರಣ್ಯ ಉತ್ಪನ್ನಗಳ ಮಾರಾಟದ ರಾಜಸ್ವಗಳು ಇಳಿಕೆ ಪ್ರವೃತ್ತಿಯನ್ನು ತೋರಿಸುತ್ತಿವೆ ಗಣಿ ವಲಯವು ಹಿಂದೆಂದೂ ಕಾಣದ ಭಾರೀ ವಹಿವಾಟನ್ನು ನಡೆಸಿದ್ದರೂ ಸಹ ಗಣಿ ವಹಿವಾಟಿಗೆ ಅನುಗುಣವಾಗಿ ರಾಜ್ಯದ ಬೊಕ್ಕಸಕ್ಕೆ ಹಣ ಹರಿದು ಬರುತ್ತಿಲ್ಲ ಖನಿಜಗಳ ಮೌಲ್ಯದಲ್ಲಿ ಅಪಾರ ಪ್ರಮಾಣದ ಏರಿಕೆಯಾಗಿದ್ದರೂ ರಾಜಸ್ವದರ ಕಡಿಮೆ ದರದಲ್ಲಿ ನಿಗದಿಯಾಗಿರುವುದರಿಂದ ರಾಜ್ಯಕ್ಕೆ ಹೆಚ್ಚಿನ ರಾಜಸ್ವ ದೊರೆಯುತ್ತಿಲ್ಲ ಬಳಕೆದಾರರ ಶುಲ್ಕವನ್ನು ನಾವು ಹಲವಾರು ವರ್ಷಗಳಿಂದ ಪರಿಷ್ಕರಿಸಿಲ್ಲ ಈ ಹಿನ್ನೆಲೆಯಲ್ಲಿ ಬಳಕೆದಾರರ ಶುಲ್ಕ ಏರಿಸಿ ಅದನ್ನು ಕಟ್ಟುನಿಟ್ಟಾಗಿ ಸಂಗ್ರಹಿಸಲು ಇದು ಸಕಾಲ

21 ಸಾಲ ನಿರ್ವಹಣೆ ವಿಷಯದಲ್ಲಿ ಕರ್ನಾಟಕವು ಉತ್ತಮ ಸ್ಥಾನದಲ್ಲಿದೆ. ರಾಜ್ಯದ ಸಾಲ ಮೊತ್ತವು ಜಿಎಸ್‌ಡಿಪಿಯ ಶೇ 30 ಕ್ಕಿಂತ ಕಡಿಮೆಯಿದೆ ರಾಜ್ಯದ ಒಟ್ಟಾರೆ ಸಾಲ ಮೊತ್ತವು 53912 68 ಕೋಟಿ ರೂ ಗಳಾಗಿದ್ದು, ಇದು ರಾಜ್ಯದ ಒಟ್ಟಾರೆ ರಾಜಸ್ವ ಸಂಗ್ರಹಣೆಯ ಶೇ 300 ಕ್ಕಿಂತ ಕಡಿಮೆಯಿದೆ ರಾಜ್ಯದ ಬಡ್ಡಿ ಪಾವತಿ ಮೊತ್ತವು 4366 ಕೋಟಿ ರೂ ಗಳಾಗಿದ್ದು, ಇದು ರಾಜ್ಯದ ಒಟ್ಟಾರೆ ರಾಜಸ್ವ ಸಂಗ್ರಹಣೆಯ ಶೇ 18 ಕ್ಕಿಂತ ಕಡಿಮೆಯಿದೆ ರಾಜ್ಯದ ಸಾಲ ವೃದ್ಧಿ ದರವು ಶೇ 10 14 ರಷ್ಟಿದ್ದು ಇದು ರಾಜ್ಯದ ರಾಜಸ್ವ ವೃದ್ಧಿಯ ಶೇ 1 25 ರ ಪ್ರಮಾಣಕ್ಕಿಂತ ಹೆಚ್ಚಾಗಿರುವುದಿಲ್ಲ ರಾಜ್ಯವು ಅಧಿಕ ರಾಜಸ್ವದಲ್ಲಿದ್ದು ಅಂತಿಮವಾಗಿ ನಮ್ಮ ವಿತ್ತೀಯ ಕೊರತೆಯು 5210 ಕೋಟಿ ರೂ ಗಳಾಗಿದ್ದು ಇದು ಒಟ್ಟಾರೆ ರಾಜಸ್ವ ಸಂಗ್ರಹದ ಶೇ 25 ಕ್ಕಿಂತ ಕಡಿಮೆಯಿದೆ ಹೀಗಾಗಿ ನಮ್ಮ ರಾಜ್ಯವು ಸಾಲದ ಒತ್ತಡಕ್ಕೆ ಸಿಲುಕಿಲ್ಲವೆಂದು ನಾನು ಹೆಮ್ಮೆಯಿಂದ ಹೇಳುತ್ತೇನೆ ನಮ್ಮದು ದೂರದೃಷ್ಟಿಯ ಆರ್ಥಿಕ ನೀತಿ ಸಾಲ ಸಿಗುತ್ತದೆ ಎಂದು ನಾವು ಸಾಲ ಎತ್ತುವುದಿಲ್ಲ ನಮ್ಮ ಸಾಲ ತೀರಿಸುವ ಸಾಮರ್ಥ್ಯವನ್ನು ಆಧರಿಸಿ ನಾವು ಸಾಲ ಎತ್ತುವಳಿ ಮಾಡುತ್ತೇವೆ

22 ವಿತ್ತೀಯ ಕ್ರೋಢೀಕರಣದಿಂದ ನಮ್ಮ ರಾಜ್ಯದ ಸ್ಥೂಲ ಆರ್ಥಿಕ ಮೂಲ ಅಂಶಗಳು ಬಹಳ ಗಟ್ಟಿಮುಟ್ಟಾಗಿವೆ 2006-07ನೇ ಸಾಲಿನಲ್ಲಿ ನಾವು ತೆರಿಗೆ ಸಂಗ್ರಹಣೆ ಗುರಿಗಳನ್ನು ದಾಟಿ ಮುನ್ನಡೆಯಲಿದ್ದೇವೆ ತೆರಿಗೆ ಸಂಪನ್ಮೂಲಗಳ ಸೋರಿಕೆ ತಡೆಗಟ್ಟಲು ನಾವು ತೆಗೆದುಕೊಂಡ ಹಲವಾರು ಕಾರ್ಯಕ್ರಮಗಳಿಂದಾಗಿ ಇದು ಸಾಧ್ಯವಾಯಿತು ಭಾರತೀಯ ರಿಸರ್ವ್ ಬ್ಯಾಂಕ್ ಮತ್ತು ಯೋಜನಾ ಆಯೋಗವೂ ಸೇರಿದಂತೆ ಹಲವಾರು ಸಂಸ್ಥೆಗಳು

ರಾಜ್ಯದ ಸಂಪನ್ಮೂಲ ಸಂಗ್ರಹಣೆ ಮತ್ತು ವಿತ್ತೀಯ ಶಿಸ್ತಿನ ಪ್ರಯತ್ನಗಳನ್ನು ಮುಕ್ತ ಕಂಠದಿಂದ ಪ್ರಶಂಶಿಸಿವೆ ವಿತ್ತೀಯ ಕ್ರೋಢೀಕರಣದ ಹಾದಿಯಲ್ಲಿ ನಾವು ಸರಿಯಾಗಿ ಸಾಗುತ್ತಿರುವುದರಿಂದ 2006-07ನೇ ಸಾಲಿನಲ್ಲಿ ರಾಜ್ಯಕ್ಕೆ ಕೇಂದ್ರದ ಸಾಲ ಮನ್ನಾ ಉತ್ತೇಜನ ಹಣ ಮತ್ತೊಮ್ಮೆ ದೊರೆತಿದೆ

23 ರಾಜ್ಯದ ಆರ್ಥಿಕ ಸದೃಢತೆಯನ್ನು ಪರಿಗಣಿಸಿ ಐಸಿಆರ್‌ಎ (ಇಕ್ರಾ) ಸಂಸ್ಥೆಯು 'LA^{+}' ವರ್ಗೀಕರಣ ಶ್ರೇಣಿಯನ್ನು ಮತ್ತು ಕ್ರಿಸಿಲ್ ಸಂಸ್ಥೆಯು AA$^{(-)}$ ಶ್ರೇಣಿಯನ್ನು ನೀಡಿವೆ ಇದು ರಾಷ್ಟ್ರದಲ್ಲಿನ ಇತರೆ ಎಲ್ಲ ರಾಜ್ಯಗಳಿಗಿಂತ ಅಧಿಕ ಶ್ರೇಣಿಯಾಗಿರುತ್ತದೆ

ಆರ್ಥಿಕ ಸುಧಾರಣೆಗಳು

24 ನಾವು 2007-08ನೇ ಸಾಲಿನಲ್ಲಿ ತರಲು ಉದ್ದೇಶಿಸಿರುವ ಕೆಲವು ಪ್ರಮುಖ ವಿತ್ತೀಯ ನೀತಿಗಳು ಈ ಕೆಳಕಂಡಂತಿವೆ

- ರಾಜಸ್ವ ಬೆಳವಣಿಗೆ ಆರ್ಥಿಕ ವೃದ್ಧಿಗೆ ಅತ್ಯಗತ್ಯ ಆದ್ದರಿಂದ ರಾಜ್ಯದ ಆರ್ಥಿಕ ಬೆಳವಣಿಗೆ ರಕ್ಷಿಸಲು ನಮ್ಮ ಸರ್ಕಾರ ತೀವ್ರ ಗಮನ ಹರಿಸಿದೆ ತೆರಿಗೆ ದರಗಳ ದಿಢೀರ್ ಏರಿಕೆಯು ಆರ್ಥಿಕ ವ್ಯವಸ್ಥೆ ಮತ್ತು ವ್ಯಾಪಾರ ವಾತಾವರಣವನ್ನು ಮಂಕುಗೊಳಿಸಬಹುದು ಆದ್ದರಿಂದ ನಮ್ಮ ಸರ್ಕಾರವು ತೆರಿಗೆ ದರಗಳಲ್ಲಿ ದಿಢೀರ್ ಹಾಗೂ ಅನಿರೀಕ್ಷಿತ ಏರಿಕೆ ಬದಲಿಗೆ ಮೃದುವಾದ ಆದರೆ ಕರಿಣ ತೆರಿಗೆ ವಸೂಲಿ ಆಡಳಿತದತ್ತ ಗಮನವನ್ನು ಕೇಂದ್ರೀಕರಿಸಲಿದೆ
- ರಾಜ್ಯದ ಜನತೆಯ ಆರೋಗ್ಯ ಕಾಪಾಡಲು ಜುಲೈ 2007 ರಿಂದ ರಾಜ್ಯಾದ್ಯಂತ ಸಾರಾಯಿ ಮಾರಾಟ ನಿಷೇಧಿಸಲಾಗುವುದು ಈ ಕ್ರಮ ಜನತೆಯ ಆರೋಗ್ಯ ಸುಧಾರಣೆಗೆ ನೆರವಾದರೂ ರಾಜ್ಯದ ಬೊಕ್ಕಸಕ್ಕೆ ನಷ್ಟ ತರಲಿದೆ ಈ ವಿಷಯವನ್ನು ನನ್ನ ಭಾಷಣದ ಮುಂದಿನ ಭಾಗದಲ್ಲಿ ವಿಷದವಾಗಿ ಚರ್ಚಿಸುತ್ತೇನೆ
- ರಾಜ್ಯ ಸರ್ಕಾರಗಳು ಹಾಗೂ ಇತರರು ನಡೆಸುತ್ತಿರುವ ಲಾಟರಿಗಳು ಜನತೆಯ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತಿವೆ ಈ ಹಿನ್ನೆಲೆಯಲ್ಲಿ ಏಪ್ರಿಲ್ 1, 2007 ರಿಂದ ಕರ್ನಾಟಕ ರಾಜ್ಯವನ್ನು ಲಾಟರಿ ಮುಕ್ತ ವಲಯವೆಂದು ಘೋಷಿಸಲಾಗುವುದು ಇದರಿಂದ ಬಡಜನತೆಯ ಸಾಲದ

ಪಿಡುಗು ಕಡಿಮೆಯಾದರೂ ರಾಜ್ಯದ ಬೊಕ್ಕಸಕ್ಕೆ ಧಕ್ಕೆಯಾಗಲಿದೆ ಈ ವಿಷಯವನ್ನು ಸಹ ನನ್ನ ಭಾಷಣದ ಮುಂದಿನ ಭಾಗದಲ್ಲಿ ವಿಷದವಾಗಿ ಹೇಳುತ್ತೇನೆ

- ಕೇಂದ್ರ ಮಾರಾಟ ತೆರಿಗೆಯು ವಾಣಿಜ್ಯ ವಿರೂಪಗೊಳಿಸುವ ತೆರಿಗೆಯಾಗಿದ್ದು ಮುಂದಿನ ಮೂರು ವರ್ಷಗಳಲ್ಲಿ ಇದು ಹಂತ ಹಂತವಾಗಿ ರದ್ದುಗೊಳ್ಳಲಿದೆ ರಾಜ್ಯ ಸರ್ಕಾರಗಳಿಗೆ ವಿತ್ತ ಮಂತ್ರಿಗಳ ಉನ್ನತಾಧಿಕಾರ ಸಮಿತಿಯು ಸಹ ಕೇಂದ್ರಿಯ ಮಾರಾಟ ತೆರಿಗೆಯನ್ನು ತೆಗೆದುಹಾಕಲು ಸೂಚಿಸಿದೆ 2007-08ನೇ ಸಾಲಿನಲ್ಲಿ ಕೇಂದ್ರೀಯ ಮಾರಾಟ ತೆರಿಗೆಯು ಶೇ 4 ರಿಂದ ಶೇ 3 ಕ್ಕೆ ಇಳಿಕೆಯಾಗಲಿದೆ ಇದರಿಂದ ರಾಜ್ಯಗಳಿಗೆ ಉಂಟಾಗಬಹುದಾದ ನಷ್ಟವನ್ನು ಕೇಂದ್ರ ಸರ್ಕಾರವು ನಗದು ಪರಿಹಾರ ಮತ್ತು ಇತರೆ ತೆರಿಗೆ ಕ್ರಮಗಳ ಮೂಲಕ ಸಂಪೂರ್ಣವಾಗಿ ಭರಿಸಿಕೊಡಲಿದೆ ಕೆಲವು ಸೇವೆಗಳ ತೆರಿಗೆ ಸಂಗ್ರಹಣೆಯನ್ನು ಕೇಂದ್ರವು 2008-09ರಲ್ಲಿ ರಾಜ್ಯ ಸರ್ಕಾರಗಳಿಗೆ ವರ್ಗಾಯಿಸಲಿದೆ ಈ ತೆರಿಗೆ ಸಂಗ್ರಹಿಸಲು ಆಡಳಿತ ವ್ಯವಸ್ಥೆಯನ್ನು 2007-08ರಲ್ಲಿಯೇ ಸಜ್ಜುಗೊಳಿಸಲಾಗುವುದು
- ವಸತಿ ಮತ್ತು ಮೂಲಸೌಕರ್ಯ ವಲಯದಲ್ಲಿ ಹೂಡಿಕೆದಾರರ ವಿಶ್ವಾಸ ಉತ್ತೇಜಿಸಲು ಅಗತ್ಯ ನೀತಿಗಳನ್ನು ರೂಪಿಸಲಾಗುವುದು ನೋಂದಣಿ ನೀತಿ ಮೂಲಕ ಆಸ್ತಿ ಒಡೆತನದ ವಿಮಾ ವ್ಯವಸ್ಥೆಯನ್ನು ಪ್ರೋತ್ಸಾಹಿಸಲಾಗುವುದು ಆಸ್ತಿವಿಮೆ ಪತ್ರ ವ್ಯವಸ್ಥೆಗೆ ಪೂರಕವಾಗಿ ಬೆಂಗಳೂರು ನಗರದ ಜಮೀನು ಮತ್ತು ಕಟ್ಟಡ ನಿರ್ಮಾಣಗಾರರ ವಿವರಗಳ ಮಾಹಿತಿ ಭಂಡಾರವನ್ನು ಸ್ಥಾಪಿಸಲಾಗುವುದು
- ಸಾರ್ವಜನಿಕ ವೆಚ್ಚಗಳನ್ನು ಸುಧಾರಿಸಲು ಆಯವ್ಯಯ ನಿಯಂತ್ರಣ ಪದ್ಧತಿಯನ್ನು ಜಾರಿಗೊಳಿಸಿ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತ್ ವಲಯಗಳ ಲೆಕ್ಕಪತ್ರ ನಿರ್ವಹಣೆಯಲ್ಲಿ ಬಳಸಲಾಗುವುದು

- ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಶಿಕ್ಷಣ ಇಲಾಖೆಗಳಲ್ಲಿ **'ಕಾರ್ಯಕ್ರಮ ಪ್ರಗತಿ ಆಯವ್ಯಯ ಪತ್ರ'** ವ್ಯವಸ್ಥೆಯನ್ನು ಜಾರಿಗೆ ತರಲಾಗುವುದು
- ಸಾರ್ವಜನಿಕ ವೆಚ್ಚದಲ್ಲಿ ಮತ್ತಷ್ಟು ದಕ್ಷತೆ ತರಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮಕ್ಕೆ ತಿದ್ದುಪಡಿ ತಂದು ಇ-ಸಂಗ್ರಹಣೆಗೆ ಪ್ರೋತ್ಸಾಹಿಸಲಾಗುವುದು
- ಶಿಕ್ಷಣ ವಲಯದ ಸಂಪನ್ಮೂಲಗಳ ಬಳಕೆಯಲ್ಲಿ ದಕ್ಷತೆ ಹೆಚ್ಚಿಸಲು ವಿನೂತನವಾದ **'ವಿದ್ಯಾರ್ಥಿ ಕೇಂದ್ರೀಕೃತ ಅನುದಾನ'** ಪದ್ಧತಿಯನ್ನು ಪ್ರೌಢಶಾಲಾ ಶಿಕ್ಷಣಕ್ಕೆ ಅಳವಡಿಸಲಾಗುವುದು

ಅಭಿವೃದ್ಧಿ ತಂತ್ರ.

25 ನಮ್ಮ ರಾಜಸ್ವ ಸುಧಾರಣಾ ತಂತ್ರಗಳು ರಾಜಸ್ವ ಕೊರತೆಯ ನಿವಾರಣೆಗೆ ನೆರವಾಗಿದ್ದು ವಿತ್ತೀಯ ಕೊರತೆ ಜಿಎಸ್‌ಡಿಪಿಯ ಶೇ 3 ಕ್ಕಿಂತ ಕಡಿಮೆಯಾಗಿದೆ ನಮ್ಮ ವಿತ್ತೀಯ ಸುಧಾರಣೆ ಕ್ರಮಗಳು ಕೆಳಕಂಡಂತಿವೆ

- ವಿತ್ತೀಯ ಸುಧಾರಣೆಗಳ ಅಂಗವಾಗಿ ರಾಜಸ್ವ ವೆಚ್ಚಗಳನ್ನು ತಗ್ಗಿಸಿ ಇದರಿಂದ ಲಭ್ಯವಾಗುವ ಸಂಪನ್ಮೂಲವನ್ನು ಬಂಡವಾಳವಾಗಿ ಬಳಸಿಕೊಳ್ಳಲಾಗುವುದು ನಮ್ಮ ಈಗಿನ ಮೂಲ ಸೌಕರ್ಯ ಹೂಡಿಕೆಗಳು ಮುಂಬರುವ ವರ್ಷಗಳಲ್ಲಿ ಮತ್ತಷ್ಟು ಹೂಡಿಕೆಗೆ ಉತ್ತೇಜನಕಾರಿ ವಾತಾವರಣ ನಿರ್ಮಿಸಲಿವೆ ಜೊತೆಗೆ ನಮ್ಮ ನಾಗರೀಕರ ಜೀವನ ಗುಣಮಟ್ಟವನ್ನು ಕೂಡ ಸುಧಾರಣೆಗೊಳಿಸಲಿವೆ
- ನಮ್ಮ ಸರ್ಕಾರವು ನಿಖರ ಗುರಿಯ, ನಿರ್ದಿಷ್ಟ ಉದ್ದೇಶದ ಸಹಾಯಧನ ನೀಡಿಕೆಯಲ್ಲಿ ನಂಬಿಕೆಯಿಟ್ಟಿದೆ ವಿತ್ತೀಯ ಸುಧಾರಣಾ ಕ್ರಮಗಳ ಅಂಗವಾಗಿ ನಿಖರ ಗುರಿಯಿಲ್ಲದ, ನಿರ್ದಿಷ್ಟ ಉದ್ದೇಶವಿಲ್ಲದ ಸಹಾಯಧನಗಳನ್ನು ಆದಷ್ಟು ಕಡಿಮೆ ಮಾಡಲಾಗುವುದು
- ನಮ್ಮ ಸರ್ಕಾರಕ್ಕೆ ರಾಜ್ಯದ ಸಮಾನ ಅಭಿವೃದ್ಧಿಯಲ್ಲಿ ಆಸಕ್ತಿಯಿದೆ ಪ್ರಾಂತೀಯ ಅಸಮಾನತೆಯನ್ನು ಸರಿಪಡಿಸಲು ಡಾ॥ನಂಜುಂಡಪ್ಪ ಸಮಿತಿಯ ವರದಿಯನ್ನು ಅನುಷ್ಠಾನಗೊಳಿಸಲು ನಾವು ಬದ್ಧರಿದ್ದೇವೆ
- ಕೃಷಿಕ ಕ್ಷೇತ್ರದ ಅಭಿವೃದ್ಧಿ ನಮ್ಮ ಪ್ರಮುಖ ಕಾರ್ಯಕ್ಷೇತ್ರ.

- ಗ್ರಾಮೀಣ ಪ್ರದೇಶದಲ್ಲಿ ಎಲ್ಲಾ ವಲಯಗಳಲ್ಲೂ ಉದ್ಯೋಗವಕಾಶ ಸೃಷ್ಟಿಸಲು ಮತ್ತು ಕೌಶಲ್ಯ ಅಭಿವೃದ್ಧಿ ಪಡಿಸಲು ನಾವು ಹೆಚ್ಚು ಒತ್ತು ನೀಡುತ್ತೇವೆ
- ನಮ್ಮ ರಾಜ್ಯವು ವಿತ್ತೀಯ ಶಿಸ್ತು ಪಾಲಿಸಲು ಮಧ್ಯಮಾವಧಿ ವಿತ್ತೀಯ ಯೋಜನೆಯಡಿ ಮುಂದುವರಿಯಲಿದೆ ಆರೋಗ್ಯ, ಶಿಕ್ಷಣ, ಸಮಾಜಕಲ್ಯಾಣ ಮತ್ತು ಮೂಲಸೌಕರ್ಯಗಳು ನಮ್ಮ ಅಭಿವೃದ್ಧಿ ಕೇಂದ್ರೀಕೃತ ವಲಯಗಳಿಗಾಗಿ ಮುಂದುವರಿಯಲಿವೆ

ಆಯವ್ಯಯ ಮುಖ್ಯಾಂಶಗಳು

ನನ್ನ ಆಯವ್ಯಯದ ಪ್ರಧಾನ ಅಂಶಗಳು ಹೀಗಿವೆ

- ಪ್ರಾದೇಶಿಕ ಅಸಮತೋಲನ ನಿವಾರಣೆಗೆ ಡಾ ಡಿ ಎಂ ನಂಜುಂಡಪ್ಪ ಸಮಿತಿ ಶಿಫಾರಸ್ಸುಗಳ ಜಾರಿಗೆ ಸಾಮಾನ್ಯ ಅನುದಾನದ ಜೊತೆಗೆ 1,571 ಕೋಟಿ ರೂ ಗಳ ವಿಶೇಷ ಅನುದಾನ
- ರೈತರು ಸಹಕಾರಿ ಸಂಸ್ಥೆಗಳಿಂದ ಪಡೆದಿರುವ 25;000 ರೂ ವರೆಗಿನ ಪ್ರಸಕ್ತ ಸಾಲಿನ ಅಲ್ಪಾವಧಿ ಬೆಳೆ ಸಾಲ ಮನ್ನಾ ಇತರೆ ರೈತರು ಪ್ರಸಕ್ತ ಸಾಲಿನ ಸಹಕಾರಿ ಸಾಲಗಳ ಅಸಲನ್ನು ಮಾರ್ಚ್ 31ರೊಳಗೆ ಪಾವತಿಸಿದರೆ ಶೇ 4ರ ಬಡ್ಡಿ ಮನ್ನಾ
- ನೇಕಾರರು ಮತ್ತು ಮೀನುಗಾರರೂ ಪ್ರಸಕ್ತ ಸಾಲಿನಲ್ಲಿ ಪಡೆದಿರುವ 25,000 ರೂ ಗಳವರೆಗಿನ ಅಲ್ಪಾವಧಿ ಸಹಕಾರ ಸಾಲ ಮನ್ನಾ ಇತರ ಸಾಲಗಳ ಅಸಲನ್ನು ಮಾರ್ಚ್ 31ರೊಳಗೆ ಪಾವತಿಸಿದರೆ ಬಡ್ಡಿ ಮನ್ನಾ
- ಶೇ 4ರ ಬಡ್ಡಿ ದರದಲ್ಲಿ ಕೃಷಿಸಾಲ ಸೌಲಭ್ಯ ಮುಂದುವರಿಕೆ
- ನೇಕಾರರು ಮತ್ತು ಮೀನುಗಾರರಿಗೂ ಶೇ 4ರ ಬಡ್ಡಿ ದರದ ಸಾಲ ಸೌಲಭ್ಯ ಮುಂದುವರಿಕೆ
- ಸ್ತ್ರೀಶಕ್ತಿ ಮತ್ತು ಇತರ ಸ್ವ-ಸಹಾಯ ಗುಂಪುಗಳಿಗೂ ಶೇ 4ರ ಬಡ್ಡಿ ದರದಲ್ಲಿ ಸಾಲ ಸೌಲಭ್ಯ
- ಐದನೇ ವೇತನ ಆಯೋಗದ ಶಿಫಾರಸ್ಸುಗಳ ಜಾರಿ
- ಸಾರಾಯಿ ಮಾರಾಟ ನಿಷೇಧ
- ಲಾಟರಿ ನಿಷೇಧ

- ಹಿರಿಯ ಶ್ರಮಜೀವಿಗಳಿಗೆ ಮಾಸಿಕ 400 ರೂ ಸಾಮಾಜಿಕ ಭದ್ರತಾ ವೇತನ ನೀಡಲು **"ಸಂಧ್ಯಾ ಸುರಕ್ಷಾ"** ಯೋಜನೆ
- ವಿಧವೆಯರು, ದೇವದಾಸಿಯರು ಹಾಗೂ ಇತರೆ ಅಬಲ ಮಹಿಳೆಯರನ್ನು ಸಬಲಗೊಳಿಸುವ **'ಅಮೃತ'** ಯೋಜನೆ ಜಾರಿ 50,000 ಮಹಿಳೆಯರಿಗೆ ಹಾಲು ನೀಡುವ ಹಸು/ಎಮ್ಮೆ ವಿತರಣೆ
- ಸರಳ ಸಾಮೂಹಿಕ ವಿವಾಹ ಜನಪ್ರಿಯಗೊಳಿಸಲು **"ಆದರ್ಶ ವಿವಾಹ"** ಯೋಜನೆ ಜಾರಿ ವಧುವಿಗೆ 2 ವರ್ಷದ ಠೇವಣಿ ರೂಪದಲ್ಲಿ 10 ಸಾವಿರ ರೂಗಳ ಪ್ರೋತ್ಸಾಹ ಧನ
- ಗ್ರಾಮೀಣ ಪ್ರದೇಶದಲ್ಲಿ ಕ್ಷೌರಿಕ ಅಂಗಡಿಗಳನ್ನು ಮೇಲ್ದರ್ಜೆಗೇರಿಸಲು 10 ಸಾವಿರ ರೂಗಳ ನೆರವು (ರೂ 5000 ಸಹಾಯಧನ)
- ಅಸಂಘಟಿತ ಕುಶಲಕರ್ಮಿಗಳಾದ ದರ್ಜಿಗಳು, ಮಡಿವಾಳರು, ಬಡಗಿಗಳು, ಕ್ಷೌರಿಕರು, ಕುಂಬಾರರು ಇತ್ಯಾದಿ ವೃತ್ತಿನಿರತರ ಹಿತರಕ್ಷಣೆಗೆ ಪ್ರತ್ಯೇಕ **ಕಲ್ಯಾಣ ಮಂಡಳಿ** ರಚನೆ
- ವಿಧವಾ ವೇತನ, ವೃದ್ಧಾಪ್ಯ ವೇತನ ಮತ್ತು ಅಂಗವಿಕಲರ ವೇತನಗಳು ಮಾಸಿಕ 200 ರೂ ಗಳಿಂದ 400 ರೂ ಗಳಿಗೆ ಹೆಚ್ಚಳ
- ಸ್ವಾತಂತ್ರ್ಯ ಹೋರಾಟಗಾರರ ಗೌರವ ಧನ ದ್ವಿಗುಣ ಮಾಸಿಕ 1,500 ರೂ ಗಳಿಂದ 3,000 ರೂ ಗಳಿಗೆ ಏರಿಕೆ
- ಗೋವಾ ವಿಮೋಚನಾ ಚಳುವಳಿಗಾರರಿಗೆ ಪ್ರಸಕ್ತ ಸಾಲಿನಿಂದ ಮಾಸಿಕ 2,000 ರೂಗಳ ಗೌರವಧನ
- ಬೆಳಗಾವಿಯಲ್ಲಿ 250 ಕೋಟಿ ರೂ ವೆಚ್ಚದಲ್ಲಿ ಸುವರ್ಣ ವಿಧಾನಸೌಧ ನಿರ್ಮಾಣ
- ಕಿತ್ತೂರು ಅಭಿವೃದ್ಧಿ ಪ್ರಾಧಿಕಾರದ ರಚನೆ
- ಹುಬ್ಬಳ್ಳಿ-ಧಾರವಾಡ ಮತ್ತು ಗುಲ್ಬರ್ಗಾಗಳಲ್ಲಿ ಸಂಚಾರಿ ಹೈಕೋರ್ಟ್ ಪೀಠಗಳನ್ನು ಪೂರ್ಣಗೊಳಿಸಲು ಕ್ರಮ
- 6 ಮಿನಿ ವಿಮಾನ ನಿಲ್ದಾಣ ಮತ್ತು 22 ಹೆಲಿಪ್ಯಾಡ್‌ಗಳ ನಿರ್ಮಾಣ
- ಹೊಸದಾಗಿ ಸಾಮಾಜಿಕ ಭದ್ರತಾ ಮತ್ತು ಪಿಂಚಣಿ ನಿರ್ದೇಶನಾಲಯ ಸ್ಥಾಪನೆ

- ಯಕ್ಷಗಾನ ಅಕಾಡೆಮಿ ಸ್ಥಾಪನೆ
- ಹಿರಿಯ ಪತ್ರಕರ್ತರ ಕ್ಷೇಮನಿಧಿ ಸ್ಥಾಪನೆ
- ಮಧ್ಯಾಹ್ನದ ಬಿಸಿಯೂಟ "ಅಕ್ಷರ ದಾಸೋಹ" 10ನೇ ತರಗತಿವರೆಗೆ ವಿಸ್ತರಣೆ
- ವಿದ್ಯಾವಿಕಾಸ ಯೋಜನೆಯಡಿ 10ನೇ ತರಗತಿವರೆಗಿನ ಗಂಡು ಮಕ್ಕಳಿಗೆ ಉಚಿತ ಪಠ್ಯ ಪುಸ್ತಕ ಮತ್ತು ಸಮವಸ್ತ್ರ ವಿತರಣೆ
- ಬಾಗಲಕೋಟೆಯಲ್ಲಿ ತೋಟಗಾರಿಕೆ ವಿಶ್ವವಿದ್ಯಾಲಯ ಸ್ಥಾಪನೆ
- ಮೈಸೂರಿನಲ್ಲಿ ಸಂಗೀತ ವಿಶ್ವವಿದ್ಯಾಲಯ ಸ್ಥಾಪನೆ
- ಹುಬ್ಬಳ್ಳಿಯಲ್ಲಿ ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ ತರಬೇತಿ ಕೇಂದ್ರ ಸ್ಥಾಪನೆ
- ಖ್ಯಾತ ಹಿಂದೂಸ್ಥಾನಿ ಗಾಯಕಿ ಡಾ ಗಂಗೂಬಾಯಿ ಹಾನಗಲ್ ಅವರ ಮನೆ ವಸ್ತು ಸಂಗ್ರಹಾಲಯವಾಗಿ ಪರಿವರ್ತನೆ
- ಕೊಡಗು ರಾಜವಂಶದ ಕೊಡುಗೆಯ ಬಗ್ಗೆ ಸಮಗ್ರ ಅಧ್ಯಯನಕ್ಕೆ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಪೀಠ ಸ್ಥಾಪನೆ
- ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಬಸವ ಪೀಠದ ಕಟ್ಟಡ ನಿರ್ಮಾಣ ಮತ್ತು ವಚನ ಸಾಹಿತ್ಯ ಹಾಗೂ ಬಸವೇಶ್ವರರನ್ನು ಕುರಿತ ಕೃತಿಗಳ ಭಾಷಾಂತರಕ್ಕೆ 2 ಕೋಟಿ ರೂಗಳ ನೆರವು
- ಡಾ ಅಂಬೇಡ್ಕರ್ ಅವರ ಕೃತಿಗಳ ಪುನರ್ ಮುದ್ರಣಕ್ಕೆ 50 ಲಕ್ಷ ರೂ
- ರಾಷ್ಟ್ರಕವಿ ಡಾ ಜಿ ಎಸ್ ಶಿವರುದ್ರಪ್ಪ ಅವರ ಸಮಗ್ರ ಕೃತಿಗಳ ಮರು ಮುದ್ರಣಕ್ಕೆ 50 ಲಕ್ಷ ರೂ
- 5 00 ಕೋಟಿ ರೂ ಗಳ ವೆಚ್ಚದಲ್ಲಿ ಬಸವಣ್ಣನವರ ಜನ್ಮಸ್ಥಳ ಇಂಗಳೇಶ್ವರ ಮತ್ತು ಬಸವಣ್ಣನವರ ಪತ್ನಿ ಗಂಗಾಂಬಿಕೆಯವರ ಮುಕ್ತಿ ಸ್ಥಳ ಕೂಡಲಸಂಗಮ ಮಾದರಿಯಲ್ಲಿ ಅಭಿವೃದ್ಧಿ
- ಗುಲ್ಬರ್ಗ ಜಿಲ್ಲೆ ಮರ್ತೂರಿನಲ್ಲಿ ವಿಜ್ಞಾನೇಶ್ವರ ರಾಜನೀತಿ ಸಂಶೋಧನಾ ಕೇಂದ್ರಕ್ಕೆ 1 ಕೋಟಿ ರೂ ಗಳ ವಿಶೇಷ ನೆರವು
- ಕನ್ನಡ ವಿಶ್ವಕೋಶದ 14 ಸಂಪುಟಗಳು ಹಾಗೂ ಶಾಸನ ಸಂಪುಟಗಳ ಪುನರ್ ಮುದ್ರಣಕ್ಕೆ 1 ಕೋಟಿ ರೂ ಗಳ ನೆರವು

- ಉತ್ತರ ಕರ್ನಾಟಕದಲ್ಲಿ ಹೈನುಗಾರಿಕೆ ಬೆಳವಣಿಗೆಗೆ ಸಮಗ್ರ ಹೈನು ಅಭಿವೃದ್ಧಿ ಕಾರ್ಯಕ್ರಮ
- ಗುಲ್ಬರ್ಗಾದಲ್ಲಿ ಹೈನು ವಿಜ್ಞಾನ ವಿದ್ಯಾಲಯ ಸ್ಥಾಪನೆ
- ಚಾಮರಾಜನಗರ, ಕುಶಾಲನಗರ, ಬಳ್ಳಾರಿ ಮತ್ತು ರಾಯಚೂರು ಪಾಲಿಟೆಕ್ನಿಕ್‌ಗಳು ಇಂಜಿನಿಯರಿಂಗ್ ಕಾಲೇಜುಗಳಾಗಿ ಉನ್ನತೀಕರಣ
- ಶತಾಯುಷಿ ಸಿದ್ಧಗಂಗಾ ಶ್ರೀಗಳ ಜನ್ಮ ಶತಮಾನೋತ್ಸವ ಸರ್ಕಾರದಿಂದ ಆಚರಣೆ ದಾಸೋಹಭವನ ನಿರ್ಮಾಣ ಹಾಗೂ ಇತರ ಅಭಿವೃದ್ಧಿ ಕಾರ್ಯಗಳಿಗೆ 10 ಕೋಟಿ ರೂ
- ಡಾ ರಾಜಕುಮಾರ್ ಸ್ಮಾರಕ ಭವನ ನಿರ್ಮಾಣಕ್ಕೆ 3 ಕೋಟಿ ರೂ
- ಬೆಂಗಳೂರಿನಲ್ಲಿ 3 ಕೋಟಿ ರೂಗಳ ವೆಚ್ಚದಲ್ಲಿ ಬಾಬು ಜಗಜೀವನರಾಂ ಶತಮಾನೋತ್ಸವ ಭವನ ನಿರ್ಮಾಣ
- ಹುಬ್ಬಳ್ಳಿ ಸಮೀಪ ವರೂರು ನವಗ್ರಹ ತೀರ್ಥ ಜೈನ ಕ್ಷೇತ್ರದಲ್ಲಿ ಯಾತ್ರಿನಿವಾಸ ನಿರ್ಮಾಣಕ್ಕೆ 2 ಕೋಟಿ ರೂ ನೆರವು
- ಶಿಕಾರಿಪುರ ತಾಲ್ಲೂಕು ತೊಗರ್ಸಿಯ ಐತಿಹಾಸಿಕ ಮಲ್ಲಿಕಾರ್ಜುನ ದೇವಾಲಯವನ್ನು ಪ್ರವಾಸಿ ತಾಣವಾಗಿ ಅಭಿವೃದ್ಧಿ ಪಡಿಸಲು 2 ಕೋಟಿ ರೂ
- ಕನಕದಾಸರ ಜನ್ಮಸ್ಥಳ ಬಾಡ ಗ್ರಾಮದ ಸಮಗ್ರ ಅಭಿವೃದ್ಧಿ
- ಕಾಗಿನೆಲೆ ಪ್ರಾಧಿಕಾರ ರಚನೆಗೆ 3 ಕೋಟಿ ರೂ ಅನುದಾನ
- ಉಡುಪಿಯಲ್ಲಿ ಕನಕದಾಸರ 'ಸಂಶೋಧನಾ ಕೇಂದ್ರ ಸ್ಥಾಪನೆ
- ಧಾರವಾಡ ಮತ್ತು ಮಂಗಳೂರು ವಿಶ್ವವಿದ್ಯಾನಿಲಯಗಳಲ್ಲಿ ಕನಕ ಅಧ್ಯಯನ ಪೀಠಗಳಿಗೆ ತಲಾ 50 ಲಕ್ಷ ರೂ ನೆರವು
- ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ 'ಸೋಮವಂಶ ಸಹಸ್ರಾರ್ಜುನ ಕ್ಷತ್ರಿಯ ಅಧ್ಯಯನ ಕೇಂದ್ರ' ಸ್ಥಾಪಿಸಲು 2 ಕೋಟಿ ರೂ
- ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮಕ್ಕೆ 10 ಕೋಟಿ ರೂ ಅನುದಾನ

- ಹಾವೇರಿಯಲ್ಲಿ ಸರ್ವಜ್ಞ ಸ್ಮಾರಕ ಭವನ ನಿರ್ಮಾಣ
- ತ್ಯಾಗವೀರ ಸಿರಸಂಗಿ ಲಿಂಗರಾಜರ ಶತಮಾನೋತ್ಸವ ಭವನ ನಿರ್ಮಾಣಕ್ಕೆ 50 ಲಕ್ಷ ರೂ
- ಬೆಂಗಳೂರಿನಲ್ಲಿ ಮಧುಮೇಹ ಅಧ್ಯಯನ ಸಂಸ್ಥೆ ಸ್ಥಾಪನೆ
- ಬೆಂಗಳೂರು ಮತ್ತು ಕಾರವಾರಗಳಲ್ಲಿ ಆಭರಣ ತಯಾರಿಕಾ ತರಬೇತಿ ಸಂಸ್ಥೆಗಳ ಸ್ಥಾಪನೆ
- ಶಿವಮೊಗ್ಗ ಮತ್ತು ಹುಬ್ಬಳ್ಳಿಯಲ್ಲಿ ಖಾಯಂ ಕೈಗಾರಿಕಾ ವಸ್ತು ಪ್ರದರ್ಶನಾಲಯಗಳ ಸ್ಥಾಪನೆ
- ಶಿವಮೊಗ್ಗದಲ್ಲಿ ಅಂತರ ರಾಷ್ಟ್ರೀಯ ಮಟ್ಟದ ಕ್ರೀಡಾಂಗಣ ನಿರ್ಮಾಣ
- ಶಿವಮೊಗ್ಗದಲ್ಲಿ ವಿಷಾಣು ಅಧ್ಯಯನ ಸಂಸ್ಥೆ (ಇನ್‌ಸ್ಟಿಟ್ಯೂಟ್ ಆಫ್ ಟಾಕ್ಸಿಕಾಲಜಿ) ಸ್ಥಾಪನೆ
- ಶಿವಮೊಗ್ಗ ಜಿಲ್ಲೆ ಸೊರಬ ತಾಲ್ಲೂಕು ಜೋಡಿಗೆರೆ ಬಳಿ ದಂಡಾವತಿ ನದಿಗೆ ಜಲಾಶಯ ನಿರ್ಮಾಣಕ್ಕೆ 25 ಕೋಟಿ ರೂ
- ಬೆಂಗಳೂರು ಇತಿಹಾಸ ಅಧ್ಯಯನ ಮಾಡಲು ಕೆಂಪೇಗೌಡ ಪ್ರತಿಷ್ಠಾನಕ್ಕೆ ಆರ್ಥಿಕ ನೆರವು
- ತುಮಕೂರು ನಗರಾಭಿವೃದ್ಧಿಗೆ 54 ಕೋಟಿ ರೂ
- ಕೋಲಾರ ನಗರಕ್ಕೆ ಯರಗೋಳ ಕುಡಿಯುವ ನೀರು ಯೋಜನೆ
- ಬಾಗಲಕೋಟೆ ಪುನರ್ವಸತಿ ಯೋಜನೆಗೆ 50 ಕೋಟಿ ರೂ
- ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಮೂಲಸೌಕರ್ಯಗಳ ಅಭಿವೃದ್ಧಿಗೆ 50 ಕೋಟಿ ರೂ
- ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಮೂಲಸೌಕರ್ಯಗಳ ಅಭಿವೃದ್ಧಿಗೆ 50 ಕೋಟಿ ರೂ
- ನೂತನ ಜೈವಿಕ ಇಂಧನ ನೀತಿ
- ದ್ರಾಕ್ಷಾರಸ ನೀತಿ

ಕೃಷಿ, ತೋಟಗಾರಿಕೆ, ಸಹಕಾರ ಮತ್ತು ನೀರಾವರಿ

ಯಾರೂ ಅರಿಯದ ನೇಗಿಲ ಯೋಗಿಯೆ
ಲೋಕಕೆ ಅನ್ನವನೀಯುವನು
ಹೆಸರನು ಬಯಸದೆ ಅತಿಸುಖಿಕೆಳಸದೆ
ದುಡಿವನು ಗೌರವಕಾತಿಸದೆ
ನೇಗಿಲ ಕುಳದೊಳಗಡಗಿದೆ ಕರ್ಮ;
ನೇಗಿಲ ಮೇಲೆಯೇ ನಿಂತಿದೆ ಧರ್ಮ

ರಾಷ್ಟ್ರಕವಿ ಕುವೆಂಪು ಅವರು ಅನ್ನದಾತ ರೈತನ ಮತ್ತು ಕೃಷಿಯ ಮಹತ್ವವನ್ನು ಮನಮುಟ್ಟುವಂತೆ ಚಿತ್ರಿಸಿದ್ದಾರೆ

26 ನಾಡಿಗೆ ಅನ್ನವೀಯುವ ನೇಗಿಲ ಯೋಗಿ ಪ್ರಾತಃಸ್ಮರಣೀಯ ಜೀವದಾಯಿನಿ ಕೃಷಿ ಎಲ್ಲ ಕಸುಬುಗಳ ಮೂಲ ಕೃಷಿ ಕ್ಷೇತ್ರವನ್ನು ಬಲಪಡಿಸಿ ಕೃಷಿಕರನ್ನು ನೆಮ್ಮದಿಯಿಂದ ಇರಿಸಿದಾಗ ಮಾತ್ರ ಸಮಾಜದಲ್ಲಿ ನೆಮ್ಮದಿ ನೆಲಸಬಹುದು ಎಂಬ ಸತ್ಯವನ್ನು ರೈತನ ಮಗನಾಗಿ ನಾನು ಅರ್ಥಮಾಡಿಕೊಂಡಿದ್ದೇನೆ ರೈತರ ಅಗತ್ಯಗಳ ಪೂರೈಕೆ ಮತ್ತು ಅವರ ನೋವು ಹಾಗೂ ನಲಿವುಗಳಿಗೆ ಸ್ಪಂದಿಸಲು ಸರ್ಕಾರ ಶ್ರಮಿಸುತ್ತಿದೆ ಕಳೆದ ವರ್ಷ ಮಳೆ-ಬೆಳೆ ವೈಫಲ್ಯ ಮತ್ತು ಕೃಷಿ ಉತ್ಪನ್ನಗಳ ಬೆಲೆ ಕುಸಿತದಿಂದ ರೈತರು ಸಂಕಷ್ಟಕ್ಕೀಡಾದರು ಕೆಲವರು ಆತ್ಮಹತ್ಯೆಯ ಹಾದಿ ಹಿಡಿದರು ಇದು ನನಗೆ ಅತೀವ ವೇದನೆಯುಂಟು ಮಾಡಿದ ವಿಚಾರ ಅವರ ನೋವಿಗೆ ಮಿಡಿಯಲು ಮನಃಪೂರ್ವಕವಾಗಿ ಪ್ರಯತ್ನಿಸಿದ್ದೇನೆ

27 ಕರ್ನಾಟಕದ ಕೃಷಿಯು 2006-07ನೇ ಸಾಲಿನಲ್ಲಿ ಪ್ರವಾಹದಿಂದ ತೊಂದರೆಗೆ ಒಳಗಾಯಿತು 10 ಜಿಲ್ಲೆಗಳ 26 ಲಕ್ಷ ಹೆಕ್ಟೇರ್ ಪ್ರದೇಶ ಪ್ರವಾಹದಿಂದ ಹಾನಿಗೀಡಾಯಿತು 128 ತಾಲ್ಲೂಕುಗಳಲ್ಲಿನ 6 ಲಕ್ಷ ಹೆಕ್ಟೇರ್ ಪ್ರದೇಶಗಳು ಬರದ ಪರಿಸ್ಥಿತಿ ಎದುರಿಸಿದವು 2006-07ನೇ ಸಾಲಿನಲ್ಲಿ ಕೃಷಿ ಉತ್ಪಾದನೆಯು ಉದ್ದೇಶಿತ ಗುರಿಗಿಂತ ಶೇ 25ರಷ್ಟು ಕಡಿಮೆಯಾಗುವ ನಿರೀಕ್ಷೆಯಿದೆ ಎಣ್ಣೆ ಕಾಳುಗಳ ಉತ್ಪಾದನೆಯಲ್ಲಿ ಗುರಿಗಿಂತ ಶೇ 40ರಷ್ಟು ಕಡಿಮೆಯಾಗಲಿದೆ 2006-07ನೇ ಸಾಲಿನಲ್ಲಿ ಕೃಷಿಗೆ ಆಗಿರುವ ತೊಂದರೆಯನ್ನು ನಿವಾರಿಸಿ ಕೃಷಿ ಉತ್ಪಾದನೆಯನ್ನು ಪುನಶ್ಚೇತನಗೊಳಿಸುವ ಜವಾಬ್ದಾರಿಯನ್ನು ನಮ್ಮ ಸರ್ಕಾರ ನಿರ್ವಹಿಸಬೇಕಾಗಿದೆ

28 ರಾಜ್ಯದ ಕೃಷಿಯೋಗ್ಯ ಜಮೀನಿನಲ್ಲಿ ಶೇಕಡಾ 70 ಕ್ಕಿಂತಲೂ ಹೆಚ್ಚಿನ ಜಮೀನು ಮಳೆ ಆಧಾರಿತ ಕೃಷಿಯನ್ನೇ ಅವಲಂಬಿಸಿದೆ ನಮ್ಮ ಕೃಷಿ

ಉತ್ಪಾದನೆಯು ಮಳೆಯ ಪ್ರಮಾಣ, ನೀರಾವರಿ ವಿಧಾನ, ಗುಣಮಟ್ಟದ ವಿದ್ಯುತ್ ಲಭ್ಯತೆ, ಗುಣಮಟ್ಟದ ಬಿತ್ತನೆ ಬೀಜ, ರಸಗೊಬ್ಬರ ಬಳಕೆಯ ಸಾಮರ್ಥ್ಯ, ವಿಸ್ತರಣಾ ಚಟುವಟಿಕೆಗಳು ಅಲ್ಪಾವಧಿ ಸಾಲ, ಕೃಷಿ ಉತ್ಪನ್ನಗಳ ಲಾಭದಾಯಕ ಸಂಸ್ಕರಣೆ, ಮತ್ತು ಉತ್ಪನ್ನಗಳ ಮಾರುಕಟ್ಟೆ ಇತ್ಯಾದಿಗಳನ್ನು ಅವಲಂಬಿಸಿದೆ ಇದರ ಜೊತೆಗೆ ಇತ್ತೀಚಿನ ವರ್ಷಗಳಲ್ಲಿ ಕೃಷಿ ಉತ್ಪನ್ನಗಳ ಮಾರಾಟ ಕಷ್ಟದ ಕೆಲಸವಾಗುತ್ತಿದೆ ಈ ಎಲ್ಲದರ ಹಿನ್ನೆಲೆಯಲ್ಲಿ ಕೃಷಿಯಲ್ಲಿನ ಹತಾಶೆ ನಿಚ್ಚಳವಾಗಿದೆ ಇಂತಹ ನಿರಾಶಾದಾಯಕ ಸಂದರ್ಭದಲ್ಲಿ 'ರೈತರ ಆತ್ಮಹತ್ಯೆ' ಪ್ರಕರಣಗಳಿಂದ ತೊಂದರೆಗೊಳಗಾದ ಜಿಲ್ಲೆಗಳಿಗೆ, ಪರಿಹಾರ ಪ್ಯಾಕೇಜ್ ಮೂಲಕ ನೆರವು ನೀಡಿದ ಕೇಂದ್ರ ಸರ್ಕಾರಕ್ಕೆ ನಾನು ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ ಈ ಕರಿಣ ಪರಿಸ್ಥಿತಿಯಿಂದ ಹೊರಬಂದು ಕೃಷಿ ಬೆಳವಣಿಗೆ ಸಾಧಿಸುವುದು ಹೇಗೆನ್ನುವ ಸವಾಲು ಈಗ ನಮ್ಮ ಮುಂದಿದೆ

ನೀರಾವರಿ

29 ಬರಪರಿಸ್ಥಿತಿಯನ್ನು ತಡೆಗಟ್ಟುವ ಅತ್ಯುತ್ತಮ ಸಾಮರ್ಥ್ಯವುಳ್ಳ ನೀರಾವರಿ ನಮ್ಮ ಪ್ರಥಮ ಆದ್ಯತೆಯಾಗಿದೆ 2006-07ನೇ ಸಾಲಿನಲ್ಲಿ ರಾಜ್ಯದ ಯಾವುದೇ ನೀರಾವರಿ ಯೋಜನೆಗಳು ಸಂಪನ್ಮೂಲಗಳ ಕೊರತೆಯಿಂದ ಬಳಲದಂತೆ ನೋಡಿಕೊಳ್ಳುತ್ತೇವೆ, ಬಹಳ ವರ್ಷಗಳಿಂದ ನೆನೆಗುದಿಗೆ ಬಿದ್ದಿರುವ 39 ನೀರಾವರಿ ಯೋಜನೆಗಳನ್ನು ಸಂಪೂರ್ಣಗೊಳಿಸುತ್ತೇವೆ ಎಂದು ನಾವು ಭರವಸೆ ನೀಡಿದ್ದೆವು ಇದೀಗ 2006-07ನೇ ಸಾಲಿನಲ್ಲಿ ನಾವು 35 ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಿ 1,27,335 ಹೆಕ್ಟೇರ್ ಜಮೀನನ್ನು ನೀರಾವರಿಗೆ ಒಳಪಡಿಸಿದ್ದೇವೆ ಗೌರವಾನ್ವಿತ ಸದಸ್ಯರಿಗೆ ಸಂತೋಷದಿಂದ ತಿಳಿಸುತ್ತಿದ್ದೇನೆ ಈ ಮೂಲಕ 2007-08ನೇ ಸಾಲಿನಲ್ಲಿ 19 ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳನ್ನು ನಾವು ಪೂರ್ಣಗೊಳಿಸಲಿದ್ದೇವೆ ಕೆಎನ್ಎನ್ಎಲ್, ಸಿಎನ್ಎನ್ಎಲ್ ಮತ್ತು ಕೆಬಿಜೆಎನ್ಎಲ್ ಅಡಿಯಲ್ಲಿ ನಡೆಯುತ್ತಿರುವ ನೀರಾವರಿ ಕಾಮಗಾರಿಗಳಿಗೆ ಹಣದ ಕೊರತೆಯಾಗದಂತೆ ನಾವು ನೋಡಿಕೊಳ್ಳುತ್ತೇವೆ

- ಕಾವೇರಿ ಕಣಿವೆ ಪ್ರದೇಶದ ಸಣ್ಣ ನೀರಾವರಿ ಕೆರೆಗಳ ಅಭಿವೃದ್ಧಿ ಮತ್ತು ಆಧುನೀಕರಣವನ್ನು ನಾವು ಕೈಗೆತ್ತಿಕೊಳ್ಳಲಿದ್ದೇವೆ

- ತುಂಗಭದ್ರಾ ಎಡದಂಡೆ ಕಾಲುವೆ ಕಾಮಗಾರಿಗಳು ಮುಂದುವರಿಯಲಿವೆ ಭದ್ರಾ ಕಾಲುವೆಯ ನೀರನ್ನು ಎಂಟು ತಿಂಗಳುಕಾಲ ನಿಲ್ಲಿಸಿ ಉಳಿಕೆ ಆಧುನೀಕರಣ ಕಾಮಗಾರಿಗಳನ್ನು ಪ್ಯಾಕೇಜ್ ವಿಧಾನದಲ್ಲಿ ಕೈಗೆತ್ತಿಕೊಳ್ಳಲಾಗುವುದು
- ಕೆಎನ್ಎನ್ಎಲ್ ಮೂಲಕ ಭದ್ರಾ ಮೇಲ್ದಂಡೆ ಯೋಜನೆಗೆ ಅಗತ್ಯ ಆರ್ಥಿಕ ನೆರವು ಒದಗಿಸಿ ನಿಗದಿತ ಅವಧಿಯಲ್ಲಿ ಯೋಜನೆ ಪೂರ್ಣಗೊಳಿಸಲಾಗುವುದು ತುಂಗಾಕಾಲುವೆ, ಗೋಂದಿಕಾಲುವೆ ಮತ್ತು ವಿಜಯನಗರ ಕಾಲುವೆಗಳ ಆಧುನೀಕರಣ ಕಾಮಗಾರಿಯನ್ನು 2007-08ನೇ ಸಾಲಿನಲ್ಲಿ ಕೈಗೆತ್ತಿಕೊಳ್ಳಲಾಗುವುದು
- ಕಾಲುವೆಯ ಕೊನೆ ತುದಿಯ ಜಮೀನುಗಳಿಗೆ ಅಗತ್ಯ ನೀರಾವರಿ ಸೌಕರ್ಯ ಕಲ್ಪಿಸಲು ತುಂಗಭದ್ರಾ ಜಲಾಶಯದ ಅಚ್ಚುಕಟ್ಟು ಪ್ರದೇಶದ ಆಯ್ದ ಸ್ಥಳಗಳಲ್ಲಿ ಸಮತೋಲಿತ ಜಲಾಶಯಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ
- ಶ್ರೀ ಶ್ರೀ ರವಿಶಂಕರ್ ಗುರೂಜಿಯವರಿಗೆ ಜ್ಞಾನೋದಯವಾದ ಭದ್ರಾ ಜಲಾಶಯದ ಸುತ್ತಮುತ್ತಲಿನ ಪ್ರದೇಶವನ್ನು ಅಭಿವೃದ್ಧಿಗೊಳಿಸಲು ಉದ್ದೇಶಿಸಲಾಗಿದೆ
- ದಾವಣಗೆರೆ ಜಿಲ್ಲೆಯಲ್ಲಿನ 19 ಸಣ್ಣ ನೀರಾವರಿ ಕೆರೆಗಳಿಗೆ ನೀರು ತುಂಬಿಸುವ ಕಾಮಗಾರಿಯನ್ನು 100 ಕೋಟಿ ರೂ ಗಳ ವೆಚ್ಚದಲ್ಲಿ ಕೆಎನ್ಎನ್ಎಲ್ ಮೂಲಕ ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ
- ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳ ಬರ ಪರಿಸ್ಥಿತಿಯನ್ನು ನಿವಾರಿಸಲು ಇಲ್ಲಿನ ಎಲ್ಲಾ ಸಣ್ಣ ನೀರಾವರಿ ಕೆರೆಗಳಿಗೆ 86 10 ಕೋಟಿ ರೂ ಗಳ ವೆಚ್ಚದಲ್ಲಿ ಕೃಷ್ಣಾ ನದಿಯಿಂದ ನೀರು ಹಾಯಿಸಲು ಉದ್ದೇಶಿಸಲಾಗಿದೆ
- ಉತ್ತರ ಕರ್ನಾಟಕದ ಜನರ ಬಹಳ ದಿನಗಳ ಬೇಡಿಕೆಯಾದ ಕಳಸಾ-ಬಂಡೂರಿ (ಮಹಾದಾಯಿ ಯೋಜನೆ) ನಾಲಾ ತಿರುವು ಯೋಜನೆಯನ್ನು ಪೂರ್ಣಗೊಳಿಸಲಾಗುವುದು ಈ ಯೋಜನೆಗೆ ಸಂಬಂಧಿಸಿದಂತೆ ಈಗಾಗಲೇ ಅರಣ್ಯೇತರ ಪ್ರದೇಶದಲ್ಲಿ

ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ 2007-08ನೇ ಸಾಲಿನಲ್ಲಿ 30 ಕೋಟಿ ರೂ ಗಳನ್ನು ಕೆಎನ್ಎನ್ಎಲ್‌ಗೆ ಒದಗಿಸಲಾಗುವುದು

- ಬಾಗಲಕೋಟೆ ಪುನರ್‌ವಸತಿ ಪ್ಯಾಕೇಜ್‌ನ್ನು ಅನುಷ್ಠಾನಗೊಳಿಸಲು 2007-08ನೇ ಸಾಲಿನಲ್ಲಿ 50 ಕೋಟಿ ರೂ ಗಳನ್ನು ಹಂಚಿಕೆ ಮಾಡಲಾಗುವುದು
- ದಂಡಾವತಿ ನದಿಗೆ ಶಿವಮೊಗ್ಗ ಸೊರಬ ತಾಲ್ಲೂಕಿನ ಜೋಡಿಗೇರಿ ಬಳಿ 200 ಕೋಟಿ ರೂ ಗಳ ವೆಚ್ಚದಲ್ಲಿ ಜಲಾಶಯ ನಿರ್ಮಿಸಲಾಗುವುದು ಇದಕ್ಕಾಗಿ 2007-08ನೇ ಸಾಲಿನಲ್ಲಿ 25 ಕೋಟಿ ರೂ ಗಳನ್ನು ಒದಗಿಸಲಾಗುವುದು ಕೆಎನ್ಎನ್ಎಲ್ ಈ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಿದೆ
- ಇಲಾಖೆಯ ಎಂಜಿನಿಯರುಗಳಿಗೆ ತಾಂತ್ರಿಕ, ಆಡಳಿತಾತ್ಮಕ ಮತ್ತು ಕಂಪ್ಯೂಟರ್ ತರಬೇತಿಯನ್ನು ನೀಡಲು ಕೃಷ್ಣರಾಜ ಸಾಗರದಲ್ಲಿರುವ ಕರ್ನಾಟಕ ಎಂಜಿನಿಯರಿಂಗ್ ಸಂಶೋಧನಾ ಸಂಸ್ಥೆಯ ಸೌಲಭ್ಯಗಳನ್ನು ಮೇಲ್ದರ್ಜೆಗೇರಿಸಲು 2 ಕೋಟಿ ರೂ ಗಳನ್ನು ನೀಡಲು ಉದ್ದೇಶಿಸಿದ್ದೇನೆ
- **ಭಾರಿ ಮತ್ತು ಸಣ್ಣ ನೀರಾವರಿಯ ಬಂಡವಾಳ ಕಾಮಗಾರಿಗಳಿಗಾಗಿ 2007-08ನೇ ಸಾಲಿನಲ್ಲಿ 3630 ಕೋಟಿ ರೂ ಗಳನ್ನು ಹಂಚಿಕೆ ಮಾಡಲು ನಾನು ಉದ್ದೇಶಿಸಿದ್ದೇನೆ 19 ಭಾರಿ ನೀರಾವರಿ ಯೋಜನೆಗಳನ್ನು 2007-08ನೇ ಸಾಲಿನಲ್ಲಿ ಪೂರ್ಣಗೊಳಿಸಲಾಗುವುದು**

ಸಣ್ಣ ನೀರಾವರಿ

30 ನಮ್ಮ ರಾಜ್ಯದ 6 067 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಒದಗಿಸುವಲ್ಲಿ ಸಣ್ಣ ನೀರಾವರಿ ಕೆರೆಗಳು ಪ್ರಮುಖ ಪಾತ್ರ ವಹಿಸಿವೆ ನೀರಾವರಿಯಲ್ಲಿ ಕೆರೆಗಳ ಮಹತ್ವವನ್ನು ಅರಿತಿರುವ ನಾವು ಈ ಕೆರೆಗಳ ಪುನರುಜ್ಜೀವನ ಕಾರ್ಯಕ್ರಮವನ್ನು 677 ಕೋಟಿ ರೂ ಗಳ ವೆಚ್ಚದಲ್ಲಿ ಕೈಗೆತ್ತಿಕೊಳ್ಳುತ್ತಿದ್ದೇವೆ **ಈ ಉದ್ದೇಶಕ್ಕಾಗಿ 2007-08ನೇ ಸಾಲಿನಲ್ಲಿ ನಾನು 160 ಕೋಟಿ ರೂ ಗಳನ್ನು ಹಂಚಿಕೆ ಮಾಡಲಿದ್ದೇನೆ**

31 ರೈತರ ಆತ್ಮಹತ್ಯೆಯ ಹೆಚ್ಚು ಪ್ರಕರಣಗಳು ವರದಿಯಾಗಿರುವ ಜಿಲ್ಲೆಗಳಿಗೆ ಸನ್ಮಾನ್ಯ ಪ್ರಧಾನ ಮಂತ್ರಿಯವರು ವಿಶೇಷ ಪ್ಯಾಕೇಜನ್ನು

ಘೋಷಣೆ ಮಾಡಿದ್ದಾರೆ ರಾಜ್ಯದ ಬೆಳಗಾವಿ, ಹಾಸನ, ಚಿತ್ರದುರ್ಗ, ಚಿಕ್ಕಮಗಳೂರು, ಕೊಡಗು ಮತ್ತು ಶಿವಮೊಗ್ಗ ಜಿಲ್ಲೆಗಳು ಈ ವಿಶೇಷ ಪ್ಯಾಕೇಜ್‌ನಡಿ ಸಹಾಯಕ್ಕಾಗಿ ಗುರುತಿಸಲ್ಪಟ್ಟಿವೆ ಈ ಜಿಲ್ಲೆಗಳಲ್ಲಿನ ಸಣ್ಣ ನೀರಾವರಿ ಕೆರೆಗಳನ್ನು 458 20 ಕೋಟಿ ರೂ ಗಳ ವೆಚ್ಚದಲ್ಲಿ ಮುಂದಿನ ಮೂರು ವರ್ಷಗಳಲ್ಲಿ ನಬಾರ್ಡ್ ನೆರವಿನಿಂದ ಅಭಿವೃದ್ಧಿ ಪಡಿಸಲಾಗುವುದು

32 **ಬೆಂಗಳೂರು ಗ್ರಾಮಾಂತರ ಮತ್ತು ಗುಲ್ಬರ್ಗಾ ಜಿಲ್ಲೆಗಳ ಕೆರೆಗಳ ದುರಸ್ತಿ ಹಾಗೂ ಪುನರುಜ್ಜೀವನವನ್ನು ಪ್ರಾಯೋಗಿಕ ಯೋಜನೆಯಾಗಿ** ಕೈಗೆತ್ತಿಕೊಳ್ಳಲಾಗುವುದು ಈ ಯೋಜನೆಯ ಸಂಪೂರ್ಣ ವೆಚ್ಚವನ್ನು ಭಾರತ ಸರ್ಕಾರವು ಅನುದಾನದ ರೂಪದಲ್ಲಿ ಭರಿಸುತ್ತಿದೆ ಈ ಉದ್ದೇಶಕ್ಕಾಗಿ **ನಾನು 2007-08ನೇ ಸಾಲಿನಲ್ಲಿ 200 ಕೋಟಿ ರೂ ಗಳನ್ನು** ಒದಗಿಸಲಿದ್ದೇನೆ ಈ ಯೋಜನೆಯನ್ನು ರಾಜ್ಯದ ಇತರೆ ಜಿಲ್ಲೆಗಳಿಗೆ ಕೂಡ ವಿಸ್ತರಿಸುವಂತೆ ನಾವು ಭಾರತ ಸರ್ಕಾರಕ್ಕೆ ಮನವಿ ಮಾಡುತ್ತಿದ್ದೇವೆ

33 **ಸಣ್ಣ ನೀರಾವರಿ ಯೋಜನೆಗಳಿಗೆ 2006-07ನೇ ಸಾಲಿನಲ್ಲಿ ನೀಡಲಾಗಿದ್ದ ಅನುದಾನ 603 99 ಕೋಟಿ ರೂ ಗಳಿಗೆ ಎದುರಾಗಿ 2007-08ನೇ ಸಾಲಿನಲ್ಲಿ 767 ಕೋಟಿ ರೂ ಗಳ ಅನುದಾನ ಒದಗಿಸಿದ್ದೇನೆ**

ಕೃಷಿ ಸಾಲ ಮತ್ತು ಸಹಕಾರ

34 ರೈತರಿಗೆ ಕಡಿಮೆ ಬಡ್ಡಿ ದರದಲ್ಲಿ ಕೃಷಿ ಸಾಲ ಒದಗಿಸಲು **ನಾವು ಶೇ 4 ರ ಕಡಿಮೆ ಬಡ್ಡಿದರದ** ಯೋಜನೆಯನ್ನು ಜಾರಿಗೊಳಿಸಿದೆವು ರೈತ ಸಮುದಾಯವು ಇದರ ಬಗ್ಗೆ ಮೆಚ್ಚುಗೆ ಮತ್ತು ಕೃತಜ್ಞತೆಗಳನ್ನು ವ್ಯಕ್ತಪಡಿಸಿದೆ ನಾನು ಈ ಯೋಜನೆಯನ್ನು 2007-08ನೇ ಸಾಲಿನಲ್ಲಿ ಕೂಡ ಮುಂದುವರಿಸಲು ಉದ್ದೇಶಿಸಿದ್ದು **ಇದಕ್ಕಾಗಿ 160 ಕೋಟಿ ರೂ ಗಳನ್ನು ಮೀಸಲಿಡುತ್ತಿದ್ದೇನೆ**

35 ಹಿಂದಿನ ಸರ್ಕಾರಗಳು ಘೋಷಣೆ ಮಾಡಿದ್ದ 'ದಾಮ್‌ದುಪ್ಪಟು ಯೋಜನೆ' 'ಸಾಲ ಮನ್ನಾ ಯೋಜನೆ' ಮತ್ತು 'ವಿಫಲ ಬಾವಿಗಳ ಯೋಜನೆ'ಗಳ ಹಣ ಪಾವತಿಯಾಗದೆ ಹಲವಾರು ವರ್ಷಗಳಿಂದ ಬಾಕಿ ಉಳಿದಿದ್ದು, ಸಾಲ ಸಹಕಾರ ವ್ಯವಸ್ಥೆಯನ್ನು ಕುಂಠಿತಗೊಳಿಸಿದೆ 2006-07ನೇ ಸಾಲಿನಲ್ಲಿ ಇವುಗಳನ್ನು ಇತ್ಯರ್ಥಪಡಿಸಲು ನಾವು ಪ್ರಯತ್ನಪಡುತ್ತಿದ್ದೇವೆ

36 ಅಪಾರ ಸಂಖ್ಯೆಯ ಸ್ವಸಹಾಯ ತಂಡಗಳು ಸಹಕಾರಿ ವಲಯದಲ್ಲಿ ಅತ್ಯುತ್ತಮ ಸಾಧನೆಯನ್ನು ಮಾಡಿವೆ **ಈ ತಂಡಗಳಿಗೆ ಶೇ 4ರ** ಬಡ್ಡಿ ದರದಲ್ಲಿ

ಸಹಕಾರ ಸಂಘಗಳಿಂದ ಸಾಲವನ್ನು ದೊರಕಿಸಿಕೊಡಲು **ನಾನು 15 ಕೋಟಿ ರೂ ಗಳನ್ನು ಹಂಚಿಕೆ** ಮಾಡಲು ಉದ್ದೇಶಿಸಿದ್ದೇನೆ

37 ಸೌಹಾರ್ದ **ಸಹಕಾರಿ ಒಕ್ಕೂಟಕ್ಕೆ ನಾನು 50 ಲಕ್ಷ ರೂ ಗಳನ್ನು ಹಂಚಿಕೆ ಮಾಡಲು ಉದ್ದೇಶಿಸಿದ್ದೇನೆ**

ಬೆಳೆಸಾಲ ಮನ್ನಾ

38 ರಾಜ್ಯದ ಕೃಷಿಯು 2006-07 ರಲ್ಲಿ ಬರ ಮತ್ತು ಪ್ರವಾಹಕ್ಕೆ ತುತ್ತಾಗಿ ರೈತರು ತೊಂದರೆಗೆ ಈಡಾಗಿದ್ದಾರೆ ನಮ್ಮ ಸರ್ಕಾರವು ರೈತರ ತೊಂದರೆ ನಿವಾರಿಸಲು ಸಹಕಾರಿ ಸಂಸ್ಥೆಗಳಿಂದ ರೈತರು ಪಡೆದಿರುವ ಅಲ್ಪಾವದಿ ಬೆಳೆ ಸಾಲವನ್ನು ಒಂದು ಬಾರಿಯ ಪರಿಹಾರವಾಗಿ ಮನ್ನಾ ಮಾಡಲು ಉದ್ದೇಶಿಸಿದೆ

39 ದಿನಾಂಕ 01 04 2006 ದಿಂದೀಚೆಗೆ ಈಚೆಗೆ ರೈತರು ಪಡೆದಿರುವ 25,000 ರೂಪಾಯಿಗಳವರೆಗಿನ ಹಾಗೂ **31 12 2006 ರವರೆಗೆ ಬಾಕಿ ಉಳಿದಿರುವ ಎಲ್ಲಾ ಅಲ್ಪಾವಧಿ ಬೆಳೆ ಸಾಲವನ್ನು ಸರ್ಕಾರವು ಮನ್ನಾ ಮಾಡಲಿದೆ** ದಿನಾಂಕ 01 04 2006 ರಿಂದ ಈಚೆಗೆ ರೈತರು ಪಡೆದಿರುವ 25,000 ರೂ ಗಳಿಗಿಂತ ಹೆಚ್ಚಿನ ಮೊತ್ತದ ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ, ಬೆಳೆಸಾಲದ ಸಂಪೂರ್ಣ ಅಸಲನ್ನು 31 03 2007ರೊಳಗಾಗಿ ಪಾವತಿ ಮಾಡಿದರೆ, ಅವರ ಸಾಲದ ಮೇಲಿನ ಬಡ್ಡಿಯನ್ನು ಸಂಪೂರ್ಣವಾಗಿ ಮನ್ನಾ ಮಾಡಲಾಗುವುದು 01 04 2006 ರಿಂದ ಈಚೆಗೆ 25,000 ರೂ ಗಳ ವರೆಗಿನ ಮೊತ್ತದ ಅಲ್ಪಾವಧಿ ಕೃಷಿ ಸಾಲ ಪಡೆದಿರುವ ರೈತರು ತಮ್ಮ ಸಾಲವನ್ನು 31 12 2006 ರೊಳಗೆ ಪಾವತಿ ಮಾಡಿದ್ದರೆ ಆ ರೈತರ ಸಾಲದ ಮೊತ್ತವನ್ನು ಮೂರು ವರ್ಷಗಳ ನಿಗದಿತ ರೇವಣಿಯನ್ನಾಗಿ ಪರಿವರ್ತಿಸಿ ಶೇ 4 ರ ಬಡ್ಡಿದರದಲ್ಲಿ 3 ವರ್ಷಗಳ ನಂತರ ರೈತರಿಗೆ ನೀಡಲಾಗುವುದು ಈ ಅನುಕೂಲವು 25,000 ರೂ ಗಳವರೆಗಿನ ಅಲ್ಪಾವಧಿ ಬೆಳೆ ಸಾಲದ ಮೊತ್ತಕ್ಕೆ ಮಾತ್ರ ಸೀಮಿತವಾಗಿರುತ್ತದೆ ಸರ್ಕಾರವು 25,000 ರೂ ಗಳ ವರೆಗಿನ ಅಲ್ಪಾವಧಿ ಬೆಳೆ ಸಾಲವನ್ನು ಮನ್ನಾ ಮಾಡಲು ಉದ್ದೇಶಿಸಿರುವುದರಿಂದ ಇದಕ್ಕೆ ಸಂಬಂಧಿಸಿದಂತೆ ದೊರೆಯಲಿರುವ ಬೆಳೆ ವಿಮೆ ಪರಿಹಾರವನ್ನು ರೈತರ ಸಾಲಕ್ಕೆ ಹೊಂದಾಣಿಕೆ ಮಾಡಿಕೊಳ್ಳಲಾಗುವುದು ಈ ಸೌಲಭ್ಯವನ್ನು ನಮ್ಮ ರೈತ ಸಮುದಾಯಕ್ಕೆ ನೀಡುವುದರಿಂದ ಸರ್ಕಾರಕ್ಕೆ ಒಟ್ಟಾರೆ 1,505 ಕೋಟಿ ರೂ ಗಳಷ್ಟು ಹೊರೆಯಾಗಲಿದೆ ಈ ಹೊರೆಯ ಸ್ವಲ್ಪ ಭಾಗವನ್ನು 2006-07ನೇ ಆರ್ಥಿಕ

ವರ್ಷದಲ್ಲಿಯೇ ಭರಿಸಲಾಗುವುದು **2007-08ನೇ ಸಾಲಿನಲ್ಲಿ ಈ ಉದ್ದೇಶಕ್ಕಾಗಿ ನಾನು 500 ಕೋಟಿ ರೂ ಗಳನ್ನು ಒದಗಿಸಲಿದ್ದೇನೆ**

ಕೃಷಿ ಉತ್ಪಾದನೆಗೆ ಬೆಂಬಲ

40 ನಮ್ಮ ಸರ್ಕಾರವು ಕೃಷಿಗೆ ಬೆಂಬಲ ನೀಡಲು ಮತ್ತು ಆಧುನಿಕ ಕೃಷಿ ತಂತ್ರಜ್ಞಾನಕ್ಕೆ ಉತ್ತೇಜನ ನೀಡಲು ಹಲವಾರು ವಿನೂತನ ಕ್ರಮಗಳನ್ನು 2006-07ನೇ ಸಾಲಿನಲ್ಲಿ ಕೈಗೊಂಡಿತ್ತು ಸಣ್ಣ ಮತ್ತು ಅತೀ ಸಣ್ಣ ರೈತರಿಗೆ ಶೇ 75ರ ಸಹಾಯಧನದಲ್ಲಿ ಬಿತ್ತನೆ ಬೀಜವನ್ನು ವಿತರಿಸಿತ್ತು ಶೇ 50 ರ ಸಹಾಯ ಧನದಲ್ಲಿ ರೈತರಿಗೆ ಎತ್ತು ಮತ್ತು ಗಾಡಿಗಳನ್ನು ಒದಗಿಸಿತ್ತು ಹನಿ ನೀರಾವರಿಗೆ ಶೇ 75 ರ ಸಹಾಯಧನವನ್ನು ಒದಗಿಸಲಾಗಿತ್ತು

41 2006-07ರಲ್ಲಿ ಚಾಲನೆ ನೀಡಿದ್ದ ಈ ಎಲ್ಲಾ ಯೋಜನೆಗಳನ್ನು ಮುಂದುವರೆಸಲು ನಾನು ಉದ್ದೇಶಿಸಿದ್ದೇನೆ ಸಣ್ಣ ಮತ್ತು ಅತೀ ಸಣ್ಣ **ರೈತರಿಗೆ 2007-08ನೇ ಸಾಲಿನಲ್ಲಿ ಶೇ 75ರ ಸಹಾಯಧನದಲ್ಲಿ ಬಿತ್ತನೆ ಬೀಜ ವಿತರಿಸಲು ನಾನು 80 ಕೋಟಿ ರೂ ಗಳನ್ನು ಹಂಚಿಕೆ ಮಾಡಲು ಉದ್ದೇಶಿಸಿದ್ದೇನೆ**

42 **50,000 ಮಂದಿ ರೈತರಿಗೆ ಎತ್ತುಗಳನ್ನು ವಿತರಿಸಲು 2007-08ನೇ ಸಾಲಿನಲ್ಲಿ 50 ಕೋಟಿ ರೂ ಗಳನ್ನು ಹಂಚಿಕೆ ಮಾಡಲು ಉದ್ದೇಶಿಸಿದ್ದೇನೆ** ಇದರಿಂದ ಪ್ರತೀ ತಾಲ್ಲೂಕಿನಲ್ಲಿ 285 ರೈತರು ಈ ನೆರವನ್ನು ಪಡೆಯಲಿದ್ದಾರೆ

43 ಕೃಷಿ ಯಾಂತ್ರೀಕರಣಕ್ಕೆ ನೆರವು ನೀಡಲು ನಾನು 39 ಕೋಟಿ ರೂ ಗಳನ್ನು ಒದಗಿಸಲು ಉದ್ದೇಶಿಸಿದ್ದೇನೆ ಪ್ರತಿ ತಾಲ್ಲೂಕಿನಲ್ಲಿ 10 ಟ್ರಾಕ್ಟರ್‌ಗಳು, 10 ಮಿನಿಟ್ರಾಕ್ಟರ್‌ಗಳು, 20 ಪವರ್ ಟಿಲ್ಲರ್‌ಗಳು ಫಲಾನುಭವಿ ರೈತರಿಗೆ ಶೇ 50 ರ ಸಹಾಯಧನದಲ್ಲಿ ದೊರೆಯಲಿವೆ

44 ಪೆಟ್ರೋಲಿಯಂ ಇಂಧನ ಬಿಕ್ಕಟ್ಟನ್ನು ಪರಿಹರಿಸಲು ಜೈವಿಕ ಇಂಧನಗಳು ಆಶಾದಾಯಕವಾಗಿ ಒಡಮೂಡುತ್ತಿವೆ ಈ ಹಿನ್ನೆಲೆಯಲ್ಲಿ ನಾನು **'ಕರ್ನಾಟಕ ಜೈವಿಕ ಇಂಧನ ಕಾರ್ಯಕ್ರಮ'**ಕ್ಕೆ ಚಾಲನೆ ನೀಡಲಿದ್ದೇನೆ ಈ ಯೋಜನೆಯ ಮೊದಲ ಹಂತವು ಮುಂದಿನ ಏಳು ವರ್ಷಗಳವರೆಗೆ ವಿಸ್ತರಣೆಯಾಗಲಿದೆ ಇದಕ್ಕಾಗಿ ಕೃಷಿ ಇಲಾಖೆಯಲ್ಲಿ ಪ್ರತ್ಯೇಕ ಯೋಜನಾ ಘಟಕ ಸ್ಥಾಪಿಸಿ ರಾಜ್ಯದ ಆಯ್ದ 15 ತಾಲ್ಲೂಕುಗಳಲ್ಲಿ ಚಟುವಟಿಕೆ ಹಮ್ಮಿಕೊಳ್ಳಲಾಗುವುದು ಪ್ರಸ್ತುತ ನಿಷ್ಕ್ರಿಯವಾಗಿರುವ ಕೃಷಿ ಫಾರಂಗಳನ್ನು ಈ ಯೋಜನೆಯಡಿ ಸಕ್ರಿಯಗೊಳಿಸಲಾಗುವುದು ಈ ಯೋಜನೆಯ

ಅನುಷ್ಠಾನ ಉಸ್ತುವಾರಿಯನ್ನು ನೋಡಿಕೊಳ್ಳಲು ಕರ್ನಾಟಕ ಸರ್ಕಾರದ ಕೃಷಿ ಉತ್ಪಾದನಾ ಆಯುಕ್ತರ ಅಧ್ಯಕ್ಷತೆಯಲ್ಲಿ ವಿಜ್ಞಾನಿಗಳು, ಸ್ವಯಂ ಸೇವಾ ಸಂಸ್ಥೆಗಳು ಮತ್ತು ಬ್ಯಾಂಕರ್‌ಗಳ ಅಧಿಕಾರ ಸಮಿತಿಯನ್ನು ರಚಿಸಲಾಗುವುದು **ಈ ಉದ್ದೇಶಕ್ಕಾಗಿ 2007-08ನೇ ಸಾಲಿನಲ್ಲಿ 4 ಕೋಟಿ ರೂ ಗಳನ್ನು ನೀಡಲು ಉದ್ದೇಶಿಸಿದ್ದೇನೆ**

45 ಕರ್ನಾಟಕ ರಾಜ್ಯವು ಪ್ರಸ್ತುತ ಉದಯಿಸುತ್ತಿರುವ ಕ್ಷೇತ್ರವಾದ ಬಿತ್ತನೆ ಬೀಜವಲಯದಲ್ಲಿ ಹೆಸರಾಗಿದೆ ಆದ್ದರಿಂದ ನಾವೀಗ ನಮ್ಮನ್ನು ಕೇವಲ ಆಂತರಿಕ ಬೀಜ ಮಾರುಕಟ್ಟೆಗೆ ಸೀಮಿತಗೊಳಿಸಿಕೊಳ್ಳದೆ ಜಾಗತಿಕ ಬಿತ್ತನೆ ಮಾರುಕಟ್ಟೆಗೂ ವಿಸ್ತರಿಸಿಕೊಳ್ಳಬೇಕು ಈ ಹಿನ್ನೆಲೆಯಲ್ಲಿ ಸರ್ಕಾರದ ನೂತನ ಯೋಜನೆಯಾದ **'ಕರ್ನಾಟಕ-ಜಾಗತಿಕ ಬೀಜ ತಾಣ' ಕಾರ್ಯಕ್ರಮಕ್ಕೆ ನಾನು 5 ಕೋಟಿ** ರೂ ಗಳನ್ನು ನೀಡಲು ಉದ್ದೇಶಿಸಿದ್ದೇನೆ ಕೃಷಿ ಇಲಾಖೆಯಲ್ಲಿ ಇದಕ್ಕಾಗಿ ಪ್ರತ್ಯೇಕ ಯೋಜನಾ ಘಟಕವನ್ನು ಸ್ಥಾಪಿಸಲಾಗುವುದು ಈ ಯೋಜನೆಯ ಉಸ್ತುವಾರಿ ನೋಡಿಕೊಳ್ಳಲು ರಾಜ್ಯದ ಕೃಷಿ ಉತ್ಪಾದನಾ ಆಯುಕ್ತರ ಅಧ್ಯಕ್ಷತೆಯಲ್ಲಿ ವಿಜ್ಞಾನಿಗಳು, ಬೀಜ ಕಂಪನಿಗಳು, ಭಾರತ ಸರ್ಕಾರದ ಪ್ರತಿನಿಧಿಗಳು, ಸ್ವಯಂ ಸೇವಾ ಸಂಸ್ಥೆಗಳು ಮತ್ತು ಬ್ಯಾಂಕರ್‌ಗಳನ್ನು ಒಳಗೊಂಡ ಅಧಿಕಾರಸ್ಥರ ಸಮಿತಿಯನ್ನು ರಚಿಸಲಾಗುವುದು

ತೋಟಗಾರಿಕೆ

46 ತೋಟಗಾರಿಕೆ ಕರ್ನಾಟಕದಲ್ಲಿ ವೇಗವಾಗಿ ಬೆಳೆಯುತ್ತಿದೆ ಕೇಂದ್ರ ಸರ್ಕಾರದ ನೆರವಿನ **'ರಾಷ್ಟ್ರೀಯ ತೋಟಗಾರಿಕಾ ಮಿಷನ್'** ಕಾರ್ಯಕ್ರಮ ಅನುಷ್ಠಾನವನ್ನು ನಾವು ರಾಜ್ಯದಲ್ಲಿ ಮುಂದುವರೆಸುತ್ತೇವೆ ಈ ಯೋಜನೆಗೆ ಅಗತ್ಯವಾದ ರಾಜ್ಯದ ಪಾಲನ್ನು ಸಂಪೂರ್ಣವಾಗಿ ಒದಗಿಸಲಾಗುವುದು

47 **ಹನಿ ನೀರಾವರಿ ಯೋಜನೆಯನ್ನು ಉತ್ತೇಜಿಸಲು ನಾನು 20** ಕೋಟಿ ರೂ ಗಳನ್ನು ಹಂಚಿಕೆ ಮಾಡಲು ಉದ್ದೇಶಿಸಿದ್ದೇನೆ ಪ್ರಸ್ತುತ ಜಾರಿಯಲ್ಲಿರುವ ಬಿಜಾಪುರ ಮತ್ತು ಕೋಲಾರ ಜಿಲ್ಲೆಗಳಿಗೆ ಶೇ 100ರ ಸಹಾಯಧನ ಮತ್ತು ಉಳಿದ ಜಿಲ್ಲೆಗಳಿಗೆ ಶೇ 75ರ ಸಹಾಯಧನ ಪದ್ಧತಿಯು ಮುಂದುವರೆಯಲಿದೆ

48 ಇತರೆ ಮೈದಾನ ಬೆಳೆಗಳಿಗೆ ಅಗತ್ಯವಿರುವಂತೆ ಆಧುನಿಕ ಉಪಕರಣಗಳು ತೋಟಗಾರಿಕೆ ಉತ್ತೇಜನಕ್ಕೂ ಅಗತ್ಯವಿದೆ ತೋಟಗಾರಿಕೆ

ಬೆಳೆಗಾರರಲ್ಲಿ ಯಾಂತ್ರೀಕರಣವನ್ನು ಉತ್ತೇಜಿಸಲು 2007-08ನೇ ಸಾಲಿನಲ್ಲಿ 5 ಕೋಟಿ ರೂ ಗಳನ್ನು ಒದಗಿಸಲು ಉದ್ದೇಶಿಸಿದ್ದೇನೆ

49 ಅಡಿಕೆ ಬೆಳೆಗೆ ಕೊಳೆ ರೋಗ ಮತ್ತು ದಾಳಿಂಬೆ ಬೆಳೆಗೆ ಬ್ಯಾಕ್ಟೀರಿಯ ಕಾಟ ಗಂಭೀರ ತೊಂದರೆಗಳಾಗಿವೆ ಆದ್ದರಿಂದ ಕೀಟ ನಿಯಂತ್ರಣ ಚಟುವಟಿಕೆಗಳಿಗೆ ಬೆಂಬಲ ನೀಡಲು 3 ಕೋಟಿ ರೂ ಗಳನ್ನು ಹಂಚಿಕೆ ಮಾಡಲು ಉದ್ದೇಶಿಸಿದ್ದೇನೆ

50 ಕೃಷಿ, ತೋಟಗಾರಿಕೆ, ಪಶುಸಂಗೋಪನೆ, ರೇಷ್ಮೆ, ಮೀನುಗಾರಿಕೆ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಉತ್ಪಾದನೆ, ಸಂಸ್ಕರಣೆ, ಸಂಗ್ರಹಣೆ ಮತ್ತು ಮಾರುಕಟ್ಟೆ ತಂತ್ರಜ್ಞಾನಗಳನ್ನು ಜನಪ್ರಿಯಗೊಳಿಸಲು ನಾನು **'ಕರ್ನಾಟಕ ಕೃಷಿ ವಾಣಿಜ್ಯ ಮೇಳ ಪ್ರಾಧಿಕಾರ'**ವನ್ನು ರಾಜ್ಯದ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ಸ್ಥಾಪಿಸಲು ಉದ್ದೇಶಿಸಿದ್ದೇನೆ ಮುಂಗಾರು ಮತ್ತು ಹಿಂಗಾರು ಕೃಷಿ ವಾಣಿಜ್ಯ ಮೇಳಗಳನ್ನು ಸಂಘಟಿಸುವ ಜವಾಬ್ದಾರಿ ಈ ಪ್ರಾಧಿಕಾರದ್ದಾಗಿರುತ್ತದೆ ಬೆಂಗಳೂರಿನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ಇರುವ ಪೂಂಜನಹಳ್ಳಿ ತೋಟಗಾರಿಕೆ ಕೇಂದ್ರವನ್ನು ಶಾಶ್ವತ **'ವಾಣಿಜ್ಯ ಮೇಳ ತಾಣವನ್ನಾಗಿ'** ಅಭಿವೃದ್ಧಿ ಪಡಿಸಲಾಗುವುದು

ಕೃಷಿ ಸಂಶೋಧನೆ

51 ಕೃಷಿ ಸಂಶೋಧನೆ ಮತ್ತು ವಿಸ್ತರಣಾ ಚಟುವಟಿಕೆಗಳು ಕೃಷಿ ಅಭಿವೃದ್ಧಿಗೆ ಪ್ರಮುಖವಾಗಿವೆ

ಬಾಗಲಕೋಟೆಯಲ್ಲಿ ತೋಟಗಾರಿಕೆ ವಿಶ್ವವಿದ್ಯಾಲಯ

52 ನಮ್ಮ ಬೇಸಾಯದಲ್ಲಿ ತೋಟಗಾರಿಕೆಯ ಪ್ರಾಬಲ್ಯ ಬೆಳೆಯುತ್ತಿರುವ ಹಿನ್ನೆಲೆಯಲ್ಲಿ ನಮ್ಮ ಸರ್ಕಾರವು ಬಾಗಲಕೋಟೆಯನ್ನು ಕೇಂದ್ರಸ್ಥಾನವನ್ನಾಗಿಟ್ಟುಕೊಂಡು **'ಕರ್ನಾಟಕ ತೋಟಗಾರಿಕೆ ವಿಶ್ವವಿದ್ಯಾಲಯ'**ಯವನ್ನು ಸ್ಥಾಪಿಸಲು ಉದ್ದೇಶಿಸಿದೆ ಇದಕ್ಕಾಗಿ ನಾನು 10 ಕೋಟಿ ರೂ ಗಳನ್ನು ಹಂಚಿಕೆ ಮಾಡಲಿದ್ದೇನೆ

53 ಬೀದರ್ ಜಿಲ್ಲೆಯಲ್ಲಿ ತೋಟಗಾರಿಕೆ ಉತ್ತೇಜನಕ್ಕೆ ಅತ್ಯುತ್ತಮ ಅವಕಾಶಗಳಿದ್ದು, ಬೀದರ್‌ನಲ್ಲಿ ತೋಟಗಾರಿಕೆ ಕಾಲೇಜನ್ನು ಸ್ಥಾಪಿಸಲು ನಾನು 4 ಕೋಟಿ ರೂ ಗಳನ್ನು ನೀಡಲು ಉದ್ದೇಶಿಸಿದ್ದೇನೆ

54 ಹಳದಿ ಎಲೆರೋಗ ಮತ್ತು ಕೊಳೆ ರೋಗಗಳು ಅಡಿಕೆ ಬೆಳೆಯನ್ನು ಬಾಧಿಸುತ್ತಿವೆ ಶೃಂಗೇರಿಯಲ್ಲಿ ಅಡಿಕೆ ಸಂಶೋಧನಾ ಸಂಸ್ಥೆಯನ್ನು ಸ್ಥಾಪಿಸಿ

ಅದಕ್ಕೆ ಅಗತ್ಯವಿರುವ ಮಾನವಶಕ್ತಿ, ಉಪಕರಣ ಮತ್ತು ಇತರೆ ಸೌಲಭ್ಯಗಳನ್ನು ಒದಗಿಸಲು ನಾನು 2 ಕೋಟಿ ರೂ ಗಳನ್ನು ಒದಗಿಸಲು ಉದ್ದೇಶಿಸಿದ್ದೇನೆ

55 ದಾಳಿಂಬೆ ಬೇಸಾಯಕ್ಕೆ ಬ್ಯಾಕ್ಟೀರಿಯ ಕಾಟದಿಂದ ನಷ್ಟವಾಗುತ್ತಿದ್ದು ಈ ರೋಗದ ಬಗ್ಗೆ ಹೆಚ್ಚಿನ ಸಂಶೋಧನೆ ನಡೆಸಲು ಧಾರವಾಡ ಕೃಷಿ ವಿಶ್ವವಿದ್ಯಾಲಯಕ್ಕೆ ನಾನು 50 ಲಕ್ಷ ರೂ ಗಳನ್ನು ನೀಡಲು ಉದ್ದೇಶಿಸಿದ್ದೇನೆ

56 ಉತ್ತರ ಕರ್ನಾಟಕದಲ್ಲಿ ಡೈರಿ ಚಟುವಟಿಕೆಗೆ ಉತ್ತೇಜನ ನೀಡಲು ನಮ್ಮ ಸರ್ಕಾರಗಳು ಸಂಕಲ್ಪ ತಳೆದಿದೆ ಈ ನಿಟ್ಟಿನಲ್ಲಿ ಗುಲ್ಬರ್ಗದಲ್ಲಿ **ಡೈರಿ ವಿಜ್ಞಾನ ಕಾಲೇಜನ್ನು ಸ್ಥಾಪಿಸಲು ಉದ್ದೇಶಿಸಿದ್ದು ಇದಕ್ಕಾಗಿ 6 ಕೋಟಿ** ರೂ ಗಳನ್ನು ಒದಗಿಸಲಾಗುವುದು

57 ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯದ ಆವರಣದಲ್ಲಿ 30 ಕೋಟಿ ರೂ ಗಳ ವೆಚ್ಚದಲ್ಲಿ ಅಂತರರಾಷ್ಟ್ರೀಯ ಮಟ್ಟದ ಸಮ್ಮೇಳನ ಸಂಭಾಗಣವನ್ನು ನಿರ್ಮಿಸಲಾಗುವುದು ಈ ಉದ್ದೇಶಕ್ಕಾಗಿ 2007-08ನೇ ಸಾಲಿನಲ್ಲಿ 8 ಕೋಟಿ ರೂ ಗಳನ್ನು ಹಂಚಿಕೆ ಮಾಡಲು ಉದ್ದೇಶಿಸಿದ್ದೇನೆ

58 ನೂತನ ಔಷಧಿಗಳ ಕ್ಲಿನಿಕಲ್ ಪ್ರಯೋಗ ಕ್ಷೇತ್ರದಲ್ಲಿ ಮತ್ತು ಕೃಷಿ ಮಾಲಿಕ್ಯೂಲ್ಸ್‌ಗಳ ಕ್ಷೇತ್ರದಲ್ಲಿ ಹೆಚ್ಚಿನ ಅವಕಾಶಗಳು ಹೊರಹೊಮ್ಮುತ್ತಿವೆ ಎವಿಯನ್ ಟಾಕ್ಸಿಸಿಟಿ ಮತ್ತು ಮೆಮೆಲಿಯನ್ ಟಾಕ್ಸಿಸಿಟಿ ಅಧ್ಯಯನಗಳು ಕ್ಲಿನಿಕಲ್ ಪ್ರಯೋಗದ ಅಂಗಗಳಾಗಿವೆ ಈ ಕ್ಷೇತ್ರದಲ್ಲಿ ವಿಪುಲ ವಾಣಿಜ್ಯ ಅವಕಾಶಗಳಿದ್ದು, ಕ್ಲಿನಿಕಲ್ ಪ್ರಯೋಗಗಳನ್ನು ನಡೆಸಲು ಅಗತ್ಯ ತರಬೇತಿ ನೀಡುವ ಸಲುವಾಗಿ ನಾನು ಶಿವಮೊಗ್ಗದಲ್ಲಿ **'ಟಾಕ್ಸಿಕೊಲಾಜಿಕಲ್ ಅಧ್ಯಯನ ಕೇಂದ್ರ'**ವನ್ನು 2 ಕೋಟಿ ರೂ ಗಳ ವೆಚ್ಚದಲ್ಲಿ ಸ್ಥಾಪಿಸಲು ಉದ್ದೇಶಿಸಿದ್ದೇನೆ

59 ವ್ಯಾಕ್ಸಿನ್ ಅಭಿವೃದ್ಧಿ ವಲಯದಲ್ಲಿ ಮೂಡಿಬರುತ್ತಿರುವ ಅವಕಾಶಗಳನ್ನು ಉಪಯೋಗಿಸಿಕೊಳ್ಳಲು **'ವ್ಯಾಕ್ಸಿನ್‌ಗಳ ಅಧ್ಯಯನ ಕೇಂದ್ರ'**ವನ್ನು ಬೆಳಗಾವಿಯಲ್ಲಿ ಸ್ಥಾಪಿಸಲು ಉದ್ದೇಶಿಸಿದ್ದೇನೆ

60 ವನ್ಯಜೀವಿಗಳ ಜೀವಶಾಸ್ತ್ರ ಕೂಡ ಮತ್ತೊಂದು ಹೊಸ ವಲಯವಾಗಿದೆ ವನ್ಯಪ್ರಾಣಿಗಳ ರೋಗ ಅಧ್ಯಯನವು ಜಾಗತಿಕ ಪ್ರಭಾವವನ್ನು ಹೊಂದಿದೆ ಆದ್ದರಿಂದ ನಾನು **'ವನ್ಯಜೀವಿ ಪಶುವೈದ್ಯಕೀಯ ಅಧ್ಯಯನ ಸಂಸ್ಥೆ'**ಯನ್ನು 2 ಕೋಟಿ ರೂ ಗಳ ವೆಚ್ಚದಲ್ಲಿ ಮಡಿಕೇರಿಯಲ್ಲಿ ಸ್ಥಾಪಿಸಲು ಉದ್ದೇಶಿಸಿದ್ದೇನೆ

ಪಶು ಸಂಗೋಪನೆ

61 ಉಪ ಕಸುಬಾಗಿದ್ದ ಪಶುಸಂಗೋಪನೆ ಈಗ ಪ್ರಮುಖ ಕಸುಬಾಗಿದೆ ಗ್ರಾಮೀಣ ಪ್ರದೇಶದಲ್ಲಿ ಡೈರಿ ಚಟುವಟಿಕೆ ರೈತರಿಗೆ ಪ್ರಧಾನವಾಗಿದೆ ಜಾನುವಾರುಗಳಿಗೆ ತಗುಲುವ ಸಾಂಕ್ರಾಮಿಕ ಕಾಲುಬಾಯಿ ಜ್ವರವು ಹಾಲು ನೀಡುವ ಹಸು, ಎಮ್ಮೆಗಳಿಗೆ ತಗುಲಿ ಸತ್ತರೆ ರೈತರಿಗೆ ಅಪಾರ ನಷ್ಟ ಉಂಟಾಗುತ್ತದೆ ಆದ್ದರಿಂದ ಈ ಕಾಯಿಲೆಯನ್ನು ನಿಯಂತ್ರಿಸುವ ಕಾರ್ಯಚಟುವಟಿಕೆಗಳಿಗೆ 8 ಕೋಟಿ ರೂ ಗಳನ್ನು ನೀಡಲು ಉದ್ದೇಶಿಸಿದ್ದೇನೆ

62 ಸ್ಥಳೀಯ ದೇಶಿ ಜಾನುವಾರುಗಳ ಸಂರಕ್ಷಣೆಯ ನಮ್ಮ ಆದ್ಯತೆ ಮುಂದುವರಿಯಲಿದೆ ಸುಧಾರಿತ ತಳಿ ಹಸುಗಳ ಅಭಿವೃದ್ಧಿಗಾಗಿ ಪಶುಸಂಗೋಪನಾ ಕೇಂದ್ರಗಳನ್ನು ಗುತ್ತಿಗೆ ಆಧಾರದಲ್ಲಿ ನೀಡುವ ನಮ್ಮ ಹಿಂದಿನ ನೀತಿಯು ಸಹ ಮುಂದುವರೆಯಲಿದೆ 2007-08ನೇ ಸಾಲಿನಲ್ಲಿ ಶಿವಮೊಗ್ಗ ಜಿಲ್ಲೆಯ ರಾಮಚಂದ್ರಪುರದಲ್ಲಿ ನಡೆಯಲಿರುವ **ವಿಶ್ವ ಗೋ ಸಂರಕ್ಷಣಾ ಸಮ್ಮೇಳನಕ್ಕಾಗಿ** ನಾನು 2 ಕೋಟಿ ರೂ ಗಳನ್ನು ನೀಡಲು ಉದ್ದೇಶಿಸಿದ್ದೇನೆ

63 ರಾಜ್ಯದ ಅತೀ ಹೆಚ್ಚು ಹಿಂದುಳಿದ ತಾಲ್ಲೂಕುಗಳಲ್ಲಿ ನೂತನ ಪಶು ಚಿಕಿತ್ಸಾಲಯಗಳನ್ನು ಮತ್ತು ಸಂಚಾರಿ ಕ್ಲಿನಿಕ್‌ಗಳನ್ನು ಆರಂಭಿಸಲು 28 70 ಕೋಟಿ ರೂ ಗಳನ್ನು ನೀಡಲು ಉದ್ದೇಶಿಸಿದ್ದೇನೆ

64 ಗುಲ್ಬರ್ಗಾ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಡೈರಿ ಚಟುವಟಿಕೆ ಇನ್ನೂ ಬಲವಾಗಿ ಬೇರೂರಬೇಕಾಗಿದೆ ಈ ಎರಡು ಜಿಲ್ಲೆಗಳ ಹಾಲು ಒಕ್ಕೂಟಗಳಿಗೆ ಬೆಂಬಲ ನೀಡಲು ಮತ್ತು ಡೈರಿ ಚಟುವಟಿಕೆಗಳನ್ನು ಅಭಿವೃದ್ಧಿಪಡಿಸಲು ನಾನು 6 ಕೋಟಿ ರೂ ಗಳನ್ನು ನೀಡಲು ಉದ್ದೇಶಿಸಿದ್ದೇನೆ

65 **ಕುರಿಸಾಕಾಣಿಕೆ ಚಟುವಟಿಕೆಗಳಿಗೆ ಕುರಿ ಅಭಿವೃದ್ಧಿ ನಿಗಮದ ಮೂಲಕ ನೆರವು ನೀಡಲು ನಾನು 10** ಕೋಟಿ ರೂ ಗಳನ್ನು ಒದಗಿಸಲಿದ್ದೇನೆ ಸುಧಾರಿತ ತಳಿಯ ಕುರಿ ಮತ್ತು ಮೇಕೆಗಳನ್ನು ಶೇ 25ರ ಸಹಾಯಧನದಲ್ಲಿ ಒದಗಿಸಲಾಗುವುದು ನಮ್ಮ ಹಿಂದಿನ ಯೋಜನೆಗಳು ಮುಂದುವರಿಯಲಿವೆ

ಕೃಷಿ ಮಾರುಕಟ್ಟೆ

66 ನಮ್ಮ ಸರ್ಕಾರವು **'ಕರ್ನಾಟಕ ಕೃಷಿ ಸರಕುಗಳ ಮುನ್ನಡೆ ಮಾರುಕಟ್ಟೆಗಳ ಆಯೋಗ'** ಎನ್ನುವ ಖಾಯಂ ಸಂಸ್ಥೆಯನ್ನು ಸ್ಥಾಪಿಸಲು ಉದ್ದೇಶಿಸಿದೆ ಈ ಆಯೋಗವು ಕೃಷಿ ಸರಕುಗಳಿಗೆ ಸಂಬಂಧಿಸಿದ

ಉಪಕರಣಗಳ ವಾಣಿಜ್ಯಕ್ಕೆ ಮಾತ್ರ ಸೀಮಿತಗೊಳ್ಳದೆ ರೈತರು ಮತ್ತು ಸರಕು ಮಾರುಕಟ್ಟೆಗಳ ನಡುವೆ ಸಂಪರ್ಕ ಸೇತುವೆಯಾಗಿ ಕಾರ್ಯನಿರ್ವಹಿಸಲಿದೆ ಆರಂಭಿಕ ವೆಚ್ಚಕ್ಕಾಗಿ 1 ಕೋಟಿ ರೂ ಗಳನ್ನು ಒದಗಿಸಿದ್ದೇನೆ

67 ಮಾರುಕಟ್ಟೆ ಸ್ಥಿರ ಆವರ್ತ ನಿಧಿಯನ್ನು ಮುನ್ನೂರು ಕೋಟಿ ರೂ ಗಳಿಗೆ ಹೆಚ್ಚಿಸಲಾಗುವುದು

ಮೀನುಗಾರಿಕೆ

68 ಮೀನುಗಾರರಿಗೆ ವಸತಿ ಕಲ್ಪಿಸುವ **'ಮತ್ಸ್ಯ ಆಶ್ರಯ'** ಯೋಜನೆಯನ್ನು ಇನ್ನು ಮುಂದೆ ಮೀನುಗಾರಿಕೆ ಅಭಿವೃದ್ಧಿ ನಿಗಮವು ಅನುಷ್ಠಾನಗೊಳಿಸಲಿದೆ ಇದಕ್ಕಾಗಿ **ನಾನು 10 ಕೋಟಿ ರೂ ಗಳನ್ನು ಹಂಚಿಕೆ ಮಾಡಲು ಉದ್ದೇಶಿಸಿದ್ದೇನೆ**

69 ಸಾಲ ಮನ್ನಾ ಯೋಜನೆಯು ರೈತರಿಗೆ ಅನ್ವಯವಾಗುವ ರೀತಿಯಲ್ಲಿಯೇ ಮೀನುಗಾರರಿಗೂ ಕೂಡ ಅನ್ವಯಿಸುತ್ತದೆ ಸಹಕಾರ ಸಂಘಗಳು ಮತ್ತು ಸಹಕಾರ ಬ್ಯಾಂಕುಗಳಿಂದ ಮೀನುಗಾರರು ದಿನಾಂಕ 01 04 2006 ರಿಂದ ಈಚೆಗೆ ಪಡೆದಿರುವ 25,000 ರೂ ಗಳ ವರೆಗಿನ ಹಾಗೂ 31 12 2006ರವರೆಗೆ ಬಾಕಿ ಉಳಿಸಿಕೊಂಡಿರುವ ಎಲ್ಲಾ ಅಲ್ಪಾವಧಿ ಸಾಲವನ್ನು ಸರ್ಕಾರವು ಮನ್ನಾ ಮಾಡಲಿದೆ ದಿನಾಂಕ 01 04 2006 ರಿಂದ ಈಚೆಗೆ ಮೀನುಗಾರರು ಪಡೆದಿರುವ 25,000 ರೂ ಗಳಿಗಿಂತ ಹೆಚ್ಚಿನ ಮೊತ್ತದ ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ, ಸಾಲದ ಸಂಪೂರ್ಣ ಅಸಲನ್ನು 31 03 2007ರೊಳಗಾಗಿ ಪಾವತಿ ಮಾಡಿದರೆ, ಅವರ ಸಾಲದ ಮೇಲಿನ ಬಡ್ಡಿಯನ್ನು ಸಂಪೂರ್ಣವಾಗಿ ಮನ್ನಾ ಮಾಡಲಾಗುವುದು 01 04 2006 ರಿಂದ ಈಚೆಗೆ 25,000 ರೂ ಗಳ ವರೆಗಿನ ಮೊತ್ತದ ಅಲ್ಪಾವಧಿ ಸಾಲ ಪಡೆದಿರುವ ಮೀನುಗಾರರು ತಮ್ಮ ಸಾಲವನ್ನು 31 12 2006 ರೊಳಗೆ ಪಾವತಿ ಮಾಡಿದ್ದರೆ ಆ ಮೀನುಗಾರರ ಸಾಲದ ಮೊತ್ತವನ್ನು ಮೂರು ವರ್ಷಗಳ ನಿಗದಿತ ರೇವಣಿಯನ್ನಾಗಿ ಪರಿವರ್ತಿಸಿ ಶೇ 4 ರ ಬಡ್ಡಿ ಸೇರಿಸಿ 3 ವರ್ಷಗಳ ನಂತರ ಮೀನುಗಾರರಿಗೆ ನೀಡಲಾಗುವುದು ಈ ಅನುಕೂಲವು 25,000 ರೂ ಗಳವರೆಗಿನ ಅಲ್ಪಾವಧಿ ಸಾಲದ ಮೊತ್ತಕ್ಕೆ ಮಾತ್ರ ಸೀಮಿತವಾಗಿರುತ್ತದೆ

70 ನಮ್ಮ ಸರ್ಕಾರವು **ಮೀನುಗಾರಿಕೆ ಅಭಿವೃದ್ಧಿ ನಿಗಮವನ್ನು ಪುನಶ್ಚೇತನಗೊಳಿಸಿದೆ** ಈ ಪುನಶ್ಚೇತನ ಚಟುವಟಿಕೆಯ ಅಂಗವಾಗಿ ನಿಗಮವು ರಾಜ್ಯದ 10 ಪ್ರಮುಖ ನಗರಗಳಲ್ಲಿ ಮೀನು ಮಾರಾಟ ಕೇಂದ್ರಗಳನ್ನು ತೆರೆಯಲಿದೆ ಈ ಉದ್ದೇಶಕ್ಕಾಗಿ ಹಾಗೂ ಇತರೆ ಮಾರುಕಟ್ಟೆ ಸಂಬಂಧಿ

ಚಟುವಟಿಕೆಗಳಿಗೆ ನೆರವಾಗಲು ನಾನು 10 ಕೋಟಿ ರೂ ಗಳನ್ನು ನೀಡಲು ಉದ್ದೇಶಿಸಿದ್ದೇನೆ

ಪ್ರಾಂತೀಯ ಅಸಮತೋಲನೆ

71 ಕರ್ನಾಟಕದಲ್ಲಿರುವ ಪ್ರಾಂತೀಯ ಅಸಮತೋಲನೆಯು ಸರ್ವರಿಗೂ ತಿಳಿದ ವಿಷಯವೇ ಈ ಅಸಮತೋಲನೆಯನ್ನು ಹೋಗಲಾಡಿಸಲು ಸರ್ಕಾರವು ದಿವಂಗತ ಡಾ ನಂಜುಂಡಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿದ್ದು, ಆ ಸಮಿತಿಯು ಪ್ರಾಂತೀಯ ಅಸಮತೋಲನೆಯನ್ನು ಹೋಗಲಾಡಿಸುವ ಬಗ್ಗೆ ತನ್ನ ವರದಿಯನ್ನು ನೀಡಿರುತ್ತದೆ ಈ ವರದಿಯನ್ನು ಅನುಷ್ಠಾನಗೊಳಿಸುವ ಬಗ್ಗೆ ನಮ್ಮಲ್ಲಿ ಯಾರಿಗೂ ಸಹ ಭಿನ್ನಮತ ಇರುವುದಿಲ್ಲ ಆದರೆ ಈವರೆಗೆ ನಾವು ಈ ವರದಿಯ ಸಲಹೆಗಳನ್ನು ಎಲ್ಲರಿಗೂ ಒಪ್ಪುವಂತೆ ಒಂದು ವ್ಯವಸ್ಥಿತ ರೀತಿಯಲ್ಲಿ ಅನುಷ್ಠಾನ ಮಾಡಲು ಸಾಧ್ಯವಾಗಿರುವುದಿಲ್ಲ

72 ಈ ನಿಟ್ಟಿನಲ್ಲಿ ನಾವು ಕಾರ್ಯೋನ್ಮುಖರಾಗುತ್ತಿದ್ದೇವೆ ಡಾ ನಂಜುಂಡಪ್ಪ ಸಮಿತಿಯ ವರದಿಯ ಪ್ರಕಾರ ಸುಮಾರು 15 ಸಾವಿರ ಕೋಟಿ ರೂಪಾಯಿಗಳಷ್ಟು ಬಂಡವಾಳವನ್ನು ಹಿಂದುಳಿದ ಪ್ರದೇಶಗಳಲ್ಲಿ ಹೂಡುವುದರ ಜೊತೆಗೆ ಹೆಚ್ಚುವರಿಯಾಗಿ ಸುಮಾರು 16 ಸಾವಿರ ಕೋಟಿ ರೂಪಾಯಿಗಳಷ್ಟು ಹೂಡಿಕೆಯನ್ನು ಮುಂದಿನ 8 ವರ್ಷಗಳಲ್ಲಿ ಮಾಡಬೇಕಾಗುತ್ತದೆ ಯಾವ ಯಾವ ಕ್ಷೇತ್ರಗಳಲ್ಲಿ ಎಷ್ಟು ಹಂಚಿಕೆಯನ್ನು ಮಾಡಬೇಕಾಗಿದೆ ಎನ್ನುವುದನ್ನು ಸಹ ಸಮಿತಿ ತಿಳಿಸಿರುತ್ತದೆ ಡಾ ನಂಜುಂಡಪ್ಪ ಸಮಿತಿಯು ನೀಡಿರುವ ಸಲಹೆಯನ್ನು ಆಧರಿಸಿ ಮುಂದಿನ 8 ವರ್ಷಗಳಲ್ಲಿ ಅನುಷ್ಠಾನಗೊಳಿಸಬಹುದಾದ ಒಂದು **"ವಿಶೇಷ ಅಭಿವೃದ್ಧಿ ಯೋಜನೆ"** (Special Development Plan) ಯನ್ನು ತಯಾರು ಮಾಡಲು ನಾವು ಪ್ರಯತ್ನ ಪಟ್ಟಿರುತ್ತೇವೆ ಹಂಚಿಕೆ ಮಾಡುವಾಗ ಶೇ 5 ರಷ್ಟು ಉಂಟಾಗಬಹುದಾದ ಹಣದುಬ್ಬರವನ್ನು ಸಹ ಪರಿಗಣಿಸಲಾಗಿದೆ ಈ ವಿಶೇಷ ಅಭಿವೃದ್ಧಿ ಯೋಜನೆಯನ್ನು ಗೌರವಾನ್ವಿತ ಸದನದ ಮುಂದೆ ಪ್ರಸ್ತುತ ಪಡಿಸಲಾಗುವುದು

73 ಈಗ "ವಿಶೇಷ ಅಭಿವೃದ್ಧಿ ಯೋಜನೆ"ಯು ನಮಗೆ ಲಭ್ಯವಿರುವುದರಿಂದ ನಾವು ತಕ್ಷಣವೇ ಕಾರ್ಯೋನ್ಮುಖವಾಗಬೇಕಾಗಿದೆ ಈ ಯೋಜನೆಯ ಪ್ರಕಾರ 2007-08ನೇ ಸಾಲಿನಲ್ಲಿ ನಾವು ಇತರೆ ಕಾರ್ಯಕ್ರಮಗಳಲ್ಲಿ ನೀಡಿರುವ ಅನುದಾನದ ಜೊತೆಗೆ ಹೆಚ್ಚುವರಿಯಾಗಿ 1536

ಕೋಟಿ ರೂ ಗಳನ್ನು ಪ್ರಾದೇಶಿಕ ಅಸಮತೋಲನೆ ನಿವಾರಣೆಗಾಗಿ ಮೀಸಲಿಡಬೇಕಾಗಿದೆ ಇದೇ ಲೆಕ್ಕಾಚಾರದನ್ವಯ 2007-08ನೇ ಸಾಲಿಗೆ ವಿಶೇಷ ಅಭಿವೃದ್ಧಿ ಯೋಜನೆಯನ್ನು ಅನುಷ್ಠಾನಗೊಳಿಸಲು **ನಾನು 1571 ಕೋಟಿ ರೂ ಗಳನ್ನು ಹೊಂದಿಸಲು ಪ್ರಸ್ತಾಪಿಸಿರುತ್ತೇನೆ** ಯಾವ ಯಾವ ಕ್ಷೇತ್ರಗಳಲ್ಲಿ ಈ ಹಣವನ್ನು ಹೂಡಿಕೆ ಮಾಡಬೇಕೆನ್ನುವುದನ್ನು ಮತ್ತು ಯಾವ ಯಾವ ಲೆಕ್ಕ ಶೀರ್ಷಿಕೆಯಲ್ಲಿ ಈ ಹಣವನ್ನು ಅಡಕ ಮಾಡಲಾಗುವುದು ಎನ್ನುವುದನ್ನು "ವಿಶೇಷ ಅಭಿವೃದ್ಧಿ ಯೋಜನೆ" ಯಲ್ಲಿ ಅಳವಡಿಸಲಾಗಿದೆ

74 ಅತ್ಯಂತ ಹೆಚ್ಚು ಹಿಂದುಳಿದ, ಹೆಚ್ಚು ಹಿಂದುಳಿದ ಮತ್ತು ಹಿಂದುಳಿದ ತಾಲ್ಲೂಕುಗಳಿಗೆ ಈ ಹಣವನ್ನು ಹಂಚುವಾಗ 50 30 20ರ ಅನುಪಾತದಂತೆ ಹಣವನ್ನು ವಿನಿಯೋಗಿಸಬೇಕೆನ್ನುವ ಸಲಹೆಯನ್ನು ಸಹ ಸದನದ ಮುಂದೆ ಇಡುತ್ತಿದ್ದೇನೆ ಪ್ರತಿಯೊಂದು ಇಲಾಖೆಯು ಆ ಇಲಾಖೆಗೆ ಸಂಬಂಧಪಟ್ಟ ವಿಶೇಷ ಅಭಿವೃದ್ಧಿ ಯೋಜನೆಯ ಸಂಬಂಧಿತ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಲು ವಾರ್ಷಿಕ ಯೋಜನೆಯನ್ನು ತಯಾರಿಸಬೇಕಾಗಿರುತ್ತದೆ ಯೋಜನಾ ಇಲಾಖೆಯಲ್ಲಿ ವಿಶೇಷ ಯೋಜನೆಯನ್ನು ಉಸ್ತುವಾರಿ ಮಾಡಲು ಒಂದು ವಿಶೇಷ ಕೋಶವನ್ನು ತೆರೆಯಲಾಗುವುದು ಇದಲ್ಲದೇ ರಾಜ್ಯ ಯೋಜನಾ ಆಯೋಗದ ಉಪಾಧ್ಯಕ್ಷರ ನೇತೃತ್ವದಲ್ಲಿ ಉನ್ನತ ಮಟ್ಟದ ಸಮಿತಿಯನ್ನು ರಚಿಸಿ ಈ ಸಮಿತಿಯ ಮುಖೇನ ವಿಶೇಷ ಅಭಿವೃದ್ಧಿ ಯೋಜನೆಯ ಕಾರ್ಯಕ್ರಮಗಳನ್ನು ಕಾಲ ಕಾಲಕ್ಕೆ ಸಮೀಕ್ಷೆ ಮಾಡಲಾಗುವುದು

75 ನಮ್ಮ ನೆಚ್ಚಿನ ಖ್ಯಾತ ಅರ್ಥಶಾಸ್ತ್ರಜ್ಞರಾದ ಶ್ರೀ ಅಮಾರ್ತ್ಯಸೇನ್ ರವರು ಮೂಲ ಸವಲತ್ತುಗಳ ವಂಚನೆಗೆ ಪ್ರಾಂತೀಯ ಭಿನ್ನತೆ ಹೇಗೆ ಕಾರಣವಾಗುತ್ತದೆ ಎನ್ನುವುದನ್ನು ಪ್ರಸ್ತಾಪಿಸುವಾಗ ಜನರ ಜೀವನ ಗುಣಮಟ್ಟದ ವೃದ್ಧಿ ಮತ್ತು ಮಾನವ ಸಾಮರ್ಥ್ಯಗಳನ್ನು ವೃದ್ಧಿಯಲ್ಲಿ ಸಾರ್ವಜನಿಕ ನೀತಿಗಳು ಮತ್ತು ಕ್ರಿಯೆಗಳ ಪ್ರಾಮುಖ್ಯತೆಯನ್ನು ಹೇಳಿದ್ದಾರೆ ಈ ಹಿನ್ನೆಲೆಯಲ್ಲಿ ನಾನು ಕರ್ನಾಟಕ ಪ್ರಾಂತೀಯ ಅಸಮಾನತೆಯನ್ನು ನಿವಾರಿಸುವಲ್ಲಿ ಇದೀಗ ನಾವು ಸದನದಲ್ಲಿ ಮಂಡಿಸಿರುವ ವಿಶೇಷ ಅಭಿವೃದ್ಧಿ ಯೋಜನೆಯು ಸರ್ಕಾರದ ನೀತಿ ಪತ್ರ ಹಾಗೂ ಕಾರ್ಯಕ್ರಮ ಅನುಷ್ಠಾನ ಸಾಧನವಾಗಿದೆ

76 ಶಾಸಕರ ಕ್ಷೇತ್ರ ಅಭಿವೃದ್ಧಿಗಾಗಿ 2006-07ನೇ ಸಾಲಿನಲ್ಲಿ 300 ಕೋಟಿ ರೂ ಗಳನ್ನು ಒದಗಿಸಲಾಗಿತ್ತು 2007-08ನೇ ಸಾಲಿನಲ್ಲಿ ಕೂಡ ಈ

ಅಭಿವೃದ್ಧಿ ಯೋಜನೆಯನ್ನು ಮುಂದುವರೆಸಲಿದ್ದು ಇದಕ್ಕಾಗಿ ನಾನು 300 ಕೋಟಿ ರೂ ಗಳನ್ನು ಹಂಚಿಕೆ ಮಾಡಲು ಉದ್ದೇಶಿಸಿದ್ದೇನೆ

77 2007-08ನೇ ಸಾಲಿನಲ್ಲಿ ನಾನು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಗೆ 53 ಕೋಟಿ ರೂ ಗಳು ಮತ್ತು ಮಲೆನಾಡು ಅಭಿವೃದ್ಧಿ ಮಂಡಳಿಗೆ 34 50 ಕೋಟಿ ರೂ ಗಳನ್ನು ಬಯಲು ಸೀಮೆ ಅಭಿವೃದ್ಧಿ ಮಂಡಳಿಗೆ 21 ಕೋಟಿ ರೂ ಗಳನ್ನು ಮತ್ತು ಗಡಿ ಅಭಿವೃದ್ಧಿ ಮಂಡಳಿಗೆ 10 30 ಕೋಟಿ ರೂ ಗಳನ್ನು ನಿಗದಿಪಡಿಸಲು ಉದ್ದೇಶಿಸಿದ್ದೇನೆ

ಕನ್ನಡ ಮತ್ತು ಸಂಸ್ಕೃತಿ

78 ನಾವು 2006-07ನೇ ಸಾಲಿನಲ್ಲಿ 'ಸುವರ್ಣ ಕರ್ನಾಟಕ' ಸಂಭ್ರಮವನ್ನು ಆಚರಿಸಿದ್ದೇವೆ ಸುವರ್ಣ ಕರ್ನಾಟಕದ ಚಟುವಟಿಕೆಗಳು ನವಂಬರ್ 2007ರ ವರೆಗೂ ಮುಂದುವರಿಯುತ್ತವೆ ಕರ್ನಾಟಕ ಏಕೀಕರಣದ 50ನೇ ವರ್ಷವನ್ನು ನಾವು ಸ್ಮರಣೀಯ ರೀತಿಯಲ್ಲಿ ಆಚರಿಸಿದ್ದೇವೆ ಕಳೆದ ನವಂಬರ್ 1ರಂದು ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸುವರ್ಣ ಕರ್ನಾಟಕ ರಾಜ್ಯೋತ್ಸವ ಅದ್ದೂರಿಯಾಗಿ ನಡೆಯಿತು **'ಜಾನಪದ ಜಾತ್ರೆ'** -ರಾಜ್ಯದ ಗ್ರಾಮೀಣ ಕಲಾವಿದರನ್ನು ಬೆಂಗಳೂರಿಗೆ ಕರೆಸಿ ಅವರ ಅದ್ಭುತ ಕಲೆಯನ್ನು ವಿಧಾನಸೌಧದ ಮುಂದೆ ಇಡೀ ನಾಡಿಗೇ ಪರಿಚಯಿಸಿದ ವಿನೂತನ ಕಾರ್ಯಕ್ರಮವಾಗಿದೆ ನಮ್ಮೆಲ್ಲರ ನಲ್ಮೆಯ ಕವಿ ಡಾ ಜಿ ಎಸ್ ಶಿವರುದ್ರಪ್ಪ ರವರಿಗೆ ರಾಷ್ಟ್ರಕವಿ ಪ್ರಶಸ್ತಿ ನೀಡಿ ನಾವೆಲ್ಲರೂ ಸಂಭ್ರಮಿಸಿದ್ದೇವೆ

79 ಕರ್ನಾಟಕದ ಇತಿಹಾಸದಲ್ಲಿ ಪ್ರಪ್ರಥಮವಾಗಿ ರಾಜಧಾನಿ ಬೆಂಗಳೂರಿನಿಂದ ಹೊರಗೆ ಬೆಳಗಾವಿಯಲ್ಲಿ ವಿಧಾನಮಂಡಲದ ವಿಶೇಷ ಅಧಿವೇಶನವನ್ನು ನಡೆಸಲಾಗಿದೆ ಇನ್ನು ಮುಂದೆ ವಿಧಾನಮಂಡಲದ ಮಧ್ಯಂತರ ಅಧಿವೇಶನವನ್ನು ಬೆಳಗಾವಿಯಲ್ಲಿ ನಡೆಸಲು ಅನುಕೂಲವಾಗುವಂತೆ **ಖಾಯಂ ಸಚಿವಾಲಯ ಕಟ್ಟಡವನ್ನು ನಿರ್ಮಿಸಲು** ಉದ್ದೇಶಿಸಲಾಗಿದೆ

80 ನಮ್ಮ ಸರ್ಕಾರವು 2007-08ನೇ ಸಾಲಿನಲ್ಲಿ ಕೂಡ ಸುವರ್ಣ ಕರ್ನಾಟಕ ಆಚರಣೆಯನ್ನು ಮುಂದುವರಿಸಲು ಉದ್ದೇಶಿಸಿದೆ ಈ ಸಂದರ್ಭದಲ್ಲಿ ಕೆಳಕಂಡ ನಿರ್ದಿಷ್ಟ ಉದ್ದೇಶಗಳಿಗಾಗಿ ನೆರವನ್ನು ಒದಗಿಸಲು ನಾನು ಉದ್ದೇಶಿಸಿದ್ದೇನೆ

- ಡಾ· ರಾಜ್‌ಕುಮಾರ್ ಸ್ಮಾರಕ ನಿರ್ಮಾಣಕ್ಕಾಗಿ 3 ಕೋಟಿ ರೂ
- ಪುಸ್ತಕ ಪ್ರಕಟಣೆಗಾಗಿ ಕನ್ನಡ ಪುಸ್ತಕ ಪ್ರಾಧಿಕಾರಕ್ಕೆ 60 ಲಕ್ಷ ರೂ
- ಡಾ ಬೇಂದ್ರೆ ಸ್ಮಾರಕ ಟ್ರಸ್ಟ್, ಡಾ ಪು ತಿ ನ ಗ್ರಂಥಾಲಯ ಅಧ್ಯಯನ ಕೇಂದ್ರ, ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಟ್ರಸ್ಟ್‌ಗಳಿಗೆ ತಲಾ 10 ಲಕ್ಷ ರೂ
- ಹಂಪಿ ಉತ್ಸವದ ಆಚರಣೆಗೆ 1 ಕೋಟಿ ರೂ
- ಬೆಂಗಳೂರು ನಗರದ ಇತಿಹಾಸವನ್ನು ಬಿಂಬಿಸುವ ಮ್ಯೂಸಿಯಂನ ಸ್ಥಾಪನೆಗಾಗಿ ಕೆಂಪೇಗೌಡ ಪ್ರತಿಷ್ಠಾನಕ್ಕೆ 1 ಕೋಟಿ ರೂ
- ಜಗಜ್ಯೋತಿ ಬಸವೇಶ್ವರ ಜನ್ಮಸ್ಥಳ ಇಂಗಳೇಶ್ವರದ ಅಭಿವೃದ್ಧಿಗೆ 2 ಕೋಟಿ ರೂ
- ಶಿವಮೊಗ್ಗ ಜಿಲ್ಲೆಯ ತೊಗರ್ಸಿ ಗ್ರಾಮದ ಇತಿಹಾಸ ಪ್ರಸಿದ್ಧ ಮಲ್ಲಿಕಾರ್ಜುನ ದೇವಸ್ಥಾನದ ಅಭಿವೃದ್ಧಿಗಾಗಿ 2 ಕೋಟಿ ರೂ
- ಹುಬ್ಬಳ್ಳಿಯ ಸಿದ್ಧಾರೂಢ ಮರಕ್ಕೆ 1 ಕೋಟಿ ರೂ
- ಕರ್ನಾಟಕ ಜಾನಪದ ಪರಿಷತ್‌ಗೆ 50 ಲಕ್ಷ ರೂ
- ಕಾಸರಗೋಡಿನ ಕನ್ನಡ ಸಂಘಕ್ಕೆ 5 ಲಕ್ಷ ರೂ
- 'ಗಂಗಾಬಿಕಾ' ಐಕ್ಯ ಮಂಟಪದ ಅಭಿವೃದ್ಧಿಗೆ 5 ಕೋಟಿ ರೂ
- ಧಾರವಾಡದಲ್ಲಿರುವ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಬಸವಪೀಠ ಕಟ್ಟಡ ನಿರ್ಮಾಣ ಮತ್ತು ಬಸವ ಸಾಹಿತ್ಯದ ಭಾಷಾಂತರಕ್ಕಾಗಿ ಎರಡು ಕೋಟಿ ರೂ
- ಹಾವೇರಿಯಲ್ಲಿ ಸರ್ವಜ್ಞ ಸ್ಮಾರಕಕ್ಕೆ 50 ಲಕ್ಷ ರೂ
- ಗುಲ್ಬರ್ಗಾ ವಿಶ್ವವಿದ್ಯಾಲಯದಲ್ಲಿ ಹಡಪದ ಅಪ್ಪಣ್ಣ ಪೀಠ ಸ್ಥಾಪನೆಗೆ 50 ಲಕ್ಷ ರೂ
- ಗುಲ್ಬರ್ಗಾದ ವಿಶ್ವವಿದ್ಯಾಲಯದಲ್ಲಿ ಅಂಬಿಗರ ಚೌಡಯ್ಯ ಪೀಠ ಸ್ಥಾಪನೆಗೆ 1 ಕೋಟಿ ರೂ
- ತುಮಕೂರಿನ ಸಿದ್ಧಗಂಗಾ ಕ್ಷೇತ್ರದಲ್ಲಿ ವಿದ್ಯಾರ್ಥಿ ನಿಲಯದ ನೈರ್ಮಲ್ಯ ಮತ್ತು ಮೂಲಸೌಕರ್ಯಗಳನ್ನು ನಿರ್ಮಿಸಲು 10 ಕೋಟಿ ರೂ

- ಬೆಳಗಾವಿಯ ಅಧಣಿಯಲ್ಲಿನ ದೇವದಾಸಿಯರ ಮಕ್ಕಳ ವಿಮೋಚನಾ ವಸತಿ ಶಾಲೆಗೆ 150 ಕೋಟಿ ರೂ
- ಯಕ್ಷಗಾನ ಅಕಾಡೆಮಿಗೆ 20 ಲಕ್ಷ ರೂ
- ಜಿಗಣಿಯಲ್ಲಿರುವ ಶ್ರೀ ಸ್ವಾಮಿವಿವೇಕಾನಂದ ಯೋಗ ಅನುಸಂದಾನ ಸಂಸ್ಥೆಗೆ 2 ಕೋಟಿ ರೂ
- ಕುವೆಂಪು ವಿದ್ಯಾವರ್ಧಕ ಟ್ರಸ್ಟ್‌ಗೆ 6 ಲಕ್ಷ ರೂ
- ಬಿ ಎಂ ಶ್ರೀ ಪ್ರತಿಷ್ಠಾನಕ್ಕೆ 5 ಲಕ್ಷ ರೂ
- ಹೊಸರಿತ್ತಿ ಗ್ರಾಮದಲ್ಲಿ ಹಳ್ಳಿಕೇರಿ ಗುದ್ಲಪ್ಪ ಸ್ಮಾರಕ ಭವನ ನಿರ್ಮಾಣಕ್ಕೆ 125 ಕೋಟಿ ರೂ
- ಕನಕದಾಸರ ಜನ್ಮಸ್ಥಳ ಹಾವೇರಿಯ 'ಬಾಡಾ' ಗ್ರಾಮದ ಅಭಿವೃದ್ಧಿಗಾಗಿ 125 ಕೋಟಿ ರೂ
- ಹೊಳೆ ಆಲೂರಿನ ಅಭಿವೃದ್ಧಿ ಮತ್ತು ಆಲೂರು ವೆಂಕಟರಾಯರ ಸ್ಮಾರಕ ನಿರ್ಮಾಣಕ್ಕಾಗಿ 125 ಕೋಟಿ ರೂ
- ಉಡುಪಿಯಲ್ಲಿ ನಡೆಯಲಿರುವ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ 1 ಕೋಟಿ ರೂ
- ಕನ್ನಡ ವಿಶ್ವಕೋಶದ ಮರುಮುದ್ರಣಕ್ಕೆ 50 ಲಕ್ಷ ರೂ
- ಎಫಿಗ್ರಾಫಿಯಾ ಕರ್ನಾಟಕ ಸಂಪುಟಗಳ ಮರು ಮುದ್ರಣಕ್ಕೆ 50 ಲಕ್ಷ ರೂ
- ಕಾದಂಬರಿಕಾರ ಅನಕೃ ಅವರ ನಿವಾಸವನ್ನು ಸ್ಮಾರಕವಾಗಿ ಪರಿವರ್ತಿಸಲು 1 ಕೋಟಿ ರೂ
- ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ 1 50 ಕೋಟಿ ರೂ
- ಪಂಜೆ ಮಂಗೇಶರಾಯರ ಸ್ಮಾರಕ ನಿರ್ಮಾಣಕ್ಕಾಗಿ 50 ಲಕ್ಷ ರೂ
- ಮಂಡ್ಯ ಜಿಲ್ಲೆಯ ಬೂಕನಕೆರೆ ಗ್ರಾಮದಲ್ಲಿ ಸಮುದಾಯ ಭವನ ಮತ್ತು ಗ್ರಾಮದ ಅಭಿವೃದ್ಧಿ ಕಾಮಗಾರಿಗಾಗಿ 1 ಕೋಟಿ ರೂ
- ರಾಜ್ಯ ಸರ್ಕಾರ ಪ್ರಕಟಿಸಿರುವ ಡಾ ಬಿ ಆರ್ ಅಂಬೇಡ್ಕರ್‌ರವರ ಪುಸ್ತಕಗಳ ಮರು ಮುದ್ರಣಕ್ಕೆ 1 ಕೋಟಿ ರೂ
- ದ ರಾ ಬೇಂದ್ರೆ ಸಾಹಿತ್ಯ ಮರುಮುದ್ರಣಕ್ಕಾಗಿ 1 ಕೋಟಿ ರೂ

- ಡಾ ಜಿ ಎಸ್ ಶಿವರುದ್ರಪ್ಪನವರ ಸಾಹಿತ್ಯ ಮುದ್ರಣಕ್ಕಾಗಿ 50 ಲಕ್ಷ ರೂ
- ಎ ಆರ್ ಕೃಷ್ಣಶಾಸ್ತ್ರಿಗಳ ಜನ್ಮಸ್ಥಳವಾದ ಅಂಬಳೆ ಗ್ರಾಮದ ಅಭಿವೃದ್ಧಿಗಾಗಿ 1 ಕೋಟಿ ರೂ
- ಕುವೆಂಪುರವರ ಗುರುಗಳಾದ ಟಿ ಎಸ್ ವೆಂಕಣ್ಣಯ್ಯನವರ ಜನ್ಮಸ್ಥಳ ಚಿತ್ರದುರ್ಗದ ಧಳುಕು ಗ್ರಾಮದ ಅಭಿವೃದ್ಧಿಗಾಗಿ 15 ಲಕ್ಷ ರೂ
- ಡಾ ಸಿದ್ದಯ್ಯ ಪುರಾಣಿಕರ ಸ್ಮಾರಕ ನಿರ್ಮಾಣಕ್ಕಾಗಿ 1 ಕೋಟಿ ರೂ
- ಧಾರವಾಡ ಜಿಲ್ಲೆಯ ಜೈನ ಯಾತ್ರಾಸ್ಥಳ ವರೂರಿನ ಅಭಿವೃದ್ಧಿಗೆ 3 ಕೋಟಿ ರೂ
- ಮಲೆಮಹದೇಶ್ವರ ಬೆಟ್ಟದಲ್ಲಿ ಜಾನಪದ ಅಧ್ಯಯನ ಕೇಂದ್ರ ಸ್ಥಾಪನೆ

ಸಂಗೀತ

81 ಭಾರತದಲ್ಲಿ ಕರ್ನಾಟಕ ರಾಜ್ಯ ಮಾತ್ರವೇ ಕರ್ನಾಟಕ ಸಂಗೀತ ಮತ್ತು ಹಿಂದೂಸ್ತಾನಿ ಸಂಗೀತಗಳೆರಡರ ಏಕೈಕ ಸಂಗಮ ಸ್ಥಾನವಾಗಿದೆ ಪಿಟೀಲು ಚೌಡಯ್ಯ, ವೀಣೆ ಶೇಷಣ್ಣ, ಬಿಡಾರಂ ಕೃಷ್ಣಪ್ಪ, ಇವರು ಕರ್ನಾಟಕ ಸಂಗೀತದ ದಂತ ಕತೆಗಳಾಗಿದ್ದಾರೆ ಕುಮಾರ ಗಂದರ್ವ, ಬೀಮಸೇನ್ ಜೋಷಿ, ಗಂಗೂಬಾಯಿ ಹಾನಗಲ್, ಮಲ್ಲಿಕಾರ್ಜುನ ಮನ್ಸೂರ್, ಬಸವರಾಜ ರಾಜಗುರು, ಪುಟ್ಟರಾಜ ಗವಾಯಿ ಇವರುಗಳು ಹಿಂದೂಸ್ತಾನಿ ಸಂಗೀತದ ದಿಗ್ಗಜರಾಗಿದ್ದಾರೆ ಸಂಗೀತವನ್ನು ಬೆಳೆಸುವ ಹಾಗೂ ಸಂರಕ್ಷಿಸುವ ಉದ್ದೇಶದಿಂದ ನಮ್ಮ ಸರ್ಕಾರವು ಮೈಸೂರಿನಲ್ಲಿ ಸಂಗೀತ ವಿಶ್ವವಿದ್ಯಾಲಯವನ್ನು ಸ್ಥಾಪಿಸಲು 5 ಕೋಟಿ ರೂ ಗಳನ್ನು ನೀಡಲಿದೆ

82 ಹಿಂದೂಸ್ತಾನಿ ಸಂಗೀತದ ರಕ್ಷಣೆ ಮತ್ತು ಅಭಿವೃದ್ಧಿಗಾಗಿ ಧಾರವಾಡದಲ್ಲಿ **ಹಿಂದೂಸ್ತಾನಿ ಸಂಗೀತ ಕೇಂದ್ರವನ್ನು ಸ್ಥಾಪಿಸಲು ನಾನು 5 ಕೋಟಿ ರೂ ಗಳನ್ನು** ಒದಗಿಸಲು ಉದ್ದೇಶಿಸಿದ್ದೇನೆ

83 ಶ್ರೀ ಪಿ ಕಾಳಿಂಗರಾವ್ ಮತ್ತು ಮೈಸೂರು ಅನಂತಸ್ವಾಮಿಯವರ ಹೆಸರಿನಲ್ಲಿ ಸಂಗೀತ ಕಛೇರಿಗಳನ್ನು ನಡೆಸಲು ನಾನು ತಲಾ 50 ಲಕ್ಷ ರೂ ಗಳನ್ನು ನೀಡಲು ಉದ್ದೇಶಿಸಿದ್ದೇನೆ

84 ಶ್ರೀ ಮಲ್ಲಿಕಾರ್ಜುನ ಮನ್ಸೂರ್ ಟ್ರಸ್ಟ್‌ಗೆ 10 ಲಕ್ಷ ರೂಗಳ ನೆರವು ನೀಡಲು ಉದ್ದೇಶಿಸಿದ್ದೇನೆ

85 ಶ್ರೀಮತಿ ಗಂಗೂಬಾಯಿ ಹಾನಗಲ್‌ರವರ ನಿವಾಸವನ್ನು ನಮ್ಮ ಸರ್ಕಾರದಿಂದ ನವೀಕರಿಸಿ, ವಸ್ತು ಸಂಗ್ರಹಾಲಯ ಸ್ಥಾಪಿಸಲು 25 ಲಕ್ಷ ರೂಗಳನ್ನು ನೀಡಲು ಉದ್ದೇಶಿಸಿದ್ದೇನೆ

ಕಂದಾಯ

86 ನಮ್ಮ ಸರ್ಕಾರವು ಅನಾಥ ವಿಧವೆಯರು, ಅಂಗವಿಕಲರು, ವೃದ್ಧರಿಗೆ ಮಾಸಾಶನವನ್ನು ನೀಡುತ್ತಿದೆ ಕಂದಾಯ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಅಂಗವಿಕಲರ ನಿರ್ದೇಶನಾಲಯ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹೀಗೆ ವಿವಿಧ ಇಲಾಖೆಗಳು ಈ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿವೆ ಈ ಕಾರಣದಿಂದಾಗಿ ಈ ಯೋಜನೆಗಳ ಬಗ್ಗೆ ಒಂದೇ ಸೂರಿನಡಿ ಸಾಮಾನ್ಯ ಮಾಹಿತಿ ಭಂಡಾರ ಇರುವುದಿಲ್ಲ ಆದರೆ ಮೇಲೆ ಹೇಳಿದ ಎಲ್ಲಾ ಯೋಜನೆಗಳನ್ನು ತಾಲ್ಲೂಕುಮಟ್ಟದಲ್ಲಿ ತಹಶೀಲ್ದಾರರು ಅನುಷ್ಠಾನಗೊಳಿಸುತ್ತಿದ್ದಾರೆ ಈ ಹಿನ್ನೆಲೆಯಲ್ಲಿ ನಮ್ಮ ಸರ್ಕಾರವು ನೂತನವಾಗಿ **'ಸಾಮಾಜಿಕ ಭದ್ರತೆ ಮತ್ತು ವೇತನಗಳ ನಿರ್ದೇಶನಾಲಯ'**ವನ್ನು ಸ್ಥಾಪಿಸಿ ಎಲ್ಲಾ ಮಾಸಾಶನ ಯೋಜನೆಗಳನ್ನು ಅನುಷ್ಠಾನಗೊಳಿಸುವ ಜವಾಬ್ದಾರಿಯನ್ನು ಈ ನಿರ್ದೇಶನಾಲಯಕ್ಕೆ ನೀಡಲು ಉದ್ದೇಶಿಸಿದೆ ಇದರ ಜೊತೆಗೆ 'ಅಂತ್ಯೋದಯ' 'ಶವಸಂಸ್ಕಾರ', ಮತ್ತು 'ರಾಷ್ಟ್ರೀಯ ಕುಟುಂಬ ಸಹಾಯ ಯೋಜನೆ' ಇತ್ಯಾದಿ ಯೋಜನೆಗಳ ಅನುಷ್ಠಾನ ಜವಾಬ್ದಾರಿಯನ್ನು ಸಹ ಈ ನೂತನ ನಿರ್ದೇಶನಾಲಯಕ್ಕೆ ವಹಿಸಲಾಗುವುದು ನಿರ್ದೇಶನಾಲಯದ ಸ್ಥಾಪನೆ ಮತ್ತಿತರ ಚಟುವಟಿಕೆಗಳಿಗಾಗಿ ನಾನು 4 ಕೋಟಿ ರೂಗಳನ್ನು ಹಂಚಿಕೆ ಮಾಡಲು ಉದ್ದೇಶಿಸಿದ್ದೇನೆ

ಸಂಧ್ಯಾ ಸುರಕ್ಷಾ, ನೂತನ ಸಾಮಾಜಿಕ ಭದ್ರತಾ ವೇತನ

ಹಗಲೆಲ್ಲಾ ಗಾಡಿಯನ್ನೆಳೆದು ಸೊರಗಿದ
ಜಟಕಾ ಕುದುರೆಯಂತೆ,
ಸೋತ ದಳಪತಿಯಂತೆ,
ಕೆನ್ನವಿರ ತಲೆಗೆದರಿ ಮುಳುಗುತಿಹನಲ್ಲಿ ಅದೊ
ಮುದಿಯ ಸೂರ್ಯ,

ಮುಗಿಲ ಕೊತ್ತಳದಲ್ಲಿ ಮೊಳಗುತಿದೆ ಆಗಲೇ
ಇರುಳ ಸೂರ್ಯ!

ರಾಷ್ಟ್ರಕವಿ ಜಿ ಎಸ್ ಶಿವರುದ್ರಪ್ಪನವರು ಮುಸ್ಸಂಜೆಯ ಹೊರಳುದಾರಿಯಲ್ಲಿ ನಿಂತ ಹಿರಿಯ ಜೀವದ ಸ್ಥಿತಿಗತಿಗಳನ್ನು ಸಹಾನುಭೂತಿಯಿಂದ ಚಿತ್ರಿಸಿರುವ ರೀತಿ ಇದು

87 ಜೀವಿತವಿಡಿ ಮುಡಿದುಣ್ಣುವ ಶ್ರಮಜೀವಿಗಳು ಬಾಳ ಮುಸ್ಸಂಜೆಯಲ್ಲಿ ಆರ್ಥಿಕ ಸಂಕಷ್ಟಕ್ಕೀಡಾಗುತ್ತಿರುವುದು ನೋವಿನ ಸಂಗತಿ ಅರವತ್ತು ವರ್ಷ ಮೇಲ್ಪಟ್ಟ ಹಿರಿಯ ಜೀವಗಳಿಗೆ ಸಾಮಾಜಿಕ ಭದ್ರತೆ ಒದಗಿಸಲು "ಸಂಧ್ಯಾ ಸುರಕ್ಷಾ" ಎಂಬ ಯೋಜನೆಯನ್ನು ಹೊಸದಾಗಿ ಪ್ರಾರಂಭಿಸುತ್ತಿದ್ದೇನೆ ಈ ಯೋಜನೆಯನ್ವಯದಡಿ 60 ವರ್ಷ ಮೇಲ್ಪಟ್ಟ ಪ್ರಜೆಗಳಿಗೆ **ಮಾಸಿಕ 400 ರೂ ಗಳ ಸಾಮಾಜಿಕ ಭದ್ರತಾ ವೇತನ ನೀಡಲಾಗುವುದು** ಸಣ್ಣ ಮತ್ತು ಅತಿಸಣ್ಣ ರೈತರು, ನೇಕಾರರು, ಮೀನುಗಾರರು, ಅಸಂಘಟಿತ ವಲಯದ ಕಾರ್ಮಿಕರು, ಕೃಷಿ ಕಾರ್ಮಿಕರು ಈ ಯೋಜನೆಯಡಿ ಫಲಪಡೆಯುತ್ತಾರೆ

88 ಅರವತ್ತು ವರ್ಷ ತುಂಬಿರುವ ಉದ್ದೇಶಿತ ಫಲಾನುಭವಿಯ ಪತಿ ಅಥವಾ ಪತ್ನಿಯ ಒಟ್ಟು ವಾರ್ಷಿಕ ಸಂಯೋಜಿತ ಆದಾಯವು ಸ್ಥಳೀಯ ಕಂದಾಯ ಪ್ರಾಧಿಕಾರಿಯು ಪ್ರಮಾಣೀಕರಿಸಿರುವಂತೆ 20,000 ರೂಪಾಯಿಗಳಿಗಿಂತ ಹೆಚ್ಚಾಗಿರಕೂಡದು ಫಲಾನುಭವಿಯ ಪತ್ನಿ ಅಥವಾ ಪತಿಯ ಸಂಯೋಜಿತ ರೇವಣಿಗಳ ಒಟ್ಟು ಮೌಲ್ಯವು 10,000 ರೂಪಾಯಿಗಳಿಗಿಂತ ಹೆಚ್ಚಾಗಿರಬಾರದು ಫಲಾನುಭವಿಯು ಈ ಪರಿಮಿತಿಗೆ ಸಂಬಂಧಿಸಿದಂತೆ ಒಂದು ಘೋಷಣೆ ನೀಡಬೇಕಾಗುತ್ತದೆ ರೇವಣಿಯು 10,000 ರೂ ಗಳಿಗಿಂತ ಹೆಚ್ಚಾಗಿರುವುದಾಗಿ ಕಂಡುಬಂದರೆ ಮಾಸಾಶನ ನೀಡುವುದನ್ನು ನಿಲ್ಲಿಸಲಾಗುವುದು ಮತ್ತು ರೇವಣಿ ಮೊತ್ತವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಓಎಪಿ, ಡಿಡಬ್ಲ್ಯೂಪಿ ಅಥವಾ ಪಿಹೆಚ್‌ಪಿ ಅಥವಾ ಯಾವುದೇ ಇತರ ರೀತಿಯ ಮಾಸಾಶನವನ್ನು ಸಾರ್ವಜನಿಕ ಅಥವಾ ಖಾಸಗಿ ಮೂಲಗಳಿಂದ ಪಡೆಯುತ್ತಿರುವ ವ್ಯಕ್ತಿಗಳು ಈ ಯೋಜನೆಯಡಿಯಲ್ಲಿ ಮಾಸಾಶನ ಪಡೆಯಲು ಅರ್ಹರಾಗಿರುವುದಿಲ್ಲ ಭಾರತ ಚುನಾವಣಾ ಆಯೋಗವು ನೀಡಿರುವ ಮತದಾರರ ಗುರುತಿನ ಚೀಟಿಯಲ್ಲಿರುವ ಜನ್ಮ ದಿನಾಂಕವು ವಯಸ್ಸಿಗೆ ಸಂಬಂಧಿಸಿದ ದಾಖಲೆಯಾಗಿರುತ್ತದೆ ಈ ಮಾಸಾಶನವನ್ನು ಫಲಾನುಭವಿಯ

ಹೆಸರಿನಲ್ಲಿರುವ ಬ್ಯಾಂಕ್ ಅಥವಾ ಅಂಚೆ ಕಛೇರಿಯ ಖಾತೆಗೆ ಪ್ರತಿ ತಿಂಗಳು ವರ್ಗಾಯಿಸಲಾಗುವುದು ಫಲಾನುಭವಿಯೇ ತಾನು ಬಡವನೆಂದು ಘೋಷಿಸಿಕೊಂಡಿದ್ದರೆ ಅವರ ಆದಾಯವನ್ನು ಲೆಕ್ಕ ಹಾಕುವಾಗ ಅವರ ವಯಸ್ಕ ಮಕ್ಕಳ ಆದಾಯವನ್ನು ಗಣನೆಗೆ ತೆಗೆದುಕೊಳ್ಳಬಾರದು ಈ ಯೋಜನೆಯು 29ನೇ ಜುಲೈ 2007ರಿಂದ ಜಾರಿಗೆ ಬರಲಿದೆ **ಈ ಯೋಜನೆಯನ್ನು ಅನುಷ್ಠಾನಗೊಳಿಸಲು ನಾನು 250 ಕೋಟಿ ರೂ ಗಳನ್ನು ಮೀಸಲಿಡಲು ಉದ್ದೇಶಿಸಿದ್ದೇನೆ**

89 **ವೃದ್ಧಾಪ್ಯವೇತನ, ಅಂಗವಿಕಲರ ವೇತನ, ವಿಧವಾವೇತನವನ್ನು ಮಾಸಿಕ 400 ರೂ ಗಳಿಗೆ ಹೆಚ್ಚಿಸಲು ಉದ್ದೇಶಿಸಿದ್ದೇನೆ** ಈ ಉದ್ದೇಶಕ್ಕಾಗಿ 2006-07ನೇ ಸಾಲಿನಲ್ಲಿ ಹಂಚಿಕೆ ಮಾಡಿದ್ದ ಅನುದಾನಕ್ಕಿಂತ ಹೆಚ್ಚುವರಿಯಾಗಿ 350 ಕೋಟಿ ರೂ ಗಳನ್ನು ಹಂಚಿಕೆ ಮಾಡುತ್ತಿದ್ದೇನೆ

90 ಈ ಎಲ್ಲಾ ಮಾಸಾಶನಗಳ ಒಟ್ಟು ವೆಚ್ಚವು 720 ಕೋಟಿ ರೂ ಗಳಾಗಿರುತ್ತವೆ

91 **ಮಿನಿ ವಿಧಾನಸೌಧ ನಿರ್ಮಾಣಕ್ಕೆ 45 ಕೋಟಿ** ರೂ ಗಳನ್ನು ಹಂಚಿಕೆ ಮಾಡಲು ಉದ್ದೇಶಿಸಿದ್ದೇನೆ ಇದರ ಜೊತೆಗೆ ದಾವಣಗೆರೆ ಮತ್ತು ಮಡಿಕೇರಿಯಲ್ಲಿ ಜಿಲ್ಲಾ ಕಛೇರಿಗಳ ನಿರ್ಮಾಣವನ್ನು 12 ಕೋಟಿ ರೂ ಗಳ ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗುವುದು

92 **ಕಿತ್ತೂರು ಅಭಿವೃದ್ಧಿ ಪ್ರಾಧಿಕಾರದ** ಸ್ಥಾಪನೆಗಾಗಿ ನಾನು **3 ಕೋಟಿ** ರೂ ಗಳನ್ನು ಒದಗಿಸುತ್ತಿದ್ದೇನೆ

ಧಾರ್ಮಿಕ ದತ್ತಿ

93 ಪ್ರಸ್ತುತ ಆರಾಧನಾ ಯೋಜನೆಯಡಿ ಪ್ರತಿ ವಿಧಾನಸಭಾ ಕ್ಷೇತ್ರಗಳಿಗೆ ಐದು ಲಕ್ಷ ರೂ ಗಳನ್ನು ಒದಗಿಸಲಾಗುತ್ತಿದೆ ನಾನು ಇದನ್ನು ಹತ್ತು ಲಕ್ಷ ರೂ ಗಳಿಗೆ ಹೆಚ್ಚಿಸಲು ಬಯಸಿದ್ದು ಈ ಉದ್ದೇಶಕ್ಕಾಗಿ 88 ಕೋಟಿ ರೂ ಗಳನ್ನು ಮೀಸಲಿಡಲು ಉದ್ದೇಶಿಸಿದ್ದೇನೆ

94 ಪ್ರಸಿದ್ಧ ಯಾತ್ರಾಸ್ಥಳ ತಿರುಪತಿಯಲ್ಲಿ ರಾಜ್ಯದ ಅತಿಥಿ ಗೃಹ ನಿರ್ಮಾಣಕ್ಕಾಗಿ 2007-08ನೇ ಸಾಲಿನಲ್ಲಿ ಕೂಡ ಐದು ಕೋಟಿ ರೂ ಗಳನ್ನು ಒದಗಿಸಲು ಉದ್ದೇಶಿಸಿದ್ದೇನೆ ಖ್ಯಾತ ಕೀರ್ತನೆಕಾರ ಪುರಂದರದಾಸರ ಶಿಲಾಪ್ರತಿಮೆಯನ್ನು ತಿರುಮಲ ತಿರುಪತಿ ದೇವಸ್ಥಾನದ ಆವರಣದಲ್ಲಿ ಟಿಟಿಡಿ ಸಂಸ್ಥೆಯ ವತಿಯಿಂದಲೇ ಪ್ರತಿಷ್ಠಾಪಿಸಲಾಗುವುದು

95 ಮಾನಸ ಸರೋವರಕ್ಕೆ ತೆರಳುವ ಯಾತ್ರಿಗಳಿಗೆ ಆರ್ಥಿಕ ನೆರವು ಒದಗಿಸಲು 2007-08ನೇ ಸಾಲಿನಲ್ಲಿ 2 ಕೋಟಿ ರೂ ಗಳನ್ನು ಒದಗಿಸಲಾಗುವುದು

ನೋಂದಣಿ ಮತ್ತು ಮುದ್ರಾಂಕ

96 ಮಿನಿ ವಿಧಾನಸೌಧದಲ್ಲಿ ನೋಂದಣಿ ಕಛೇರಿಗೆ ಸ್ಥಳಾವಕಾಶ ಇಲ್ಲದಿರುವ ಕಡೆ ಉಪನೋಂದಣಾಧಿಕಾರಿಗಳ ಕಛೇರಿ ಕಟ್ಟಡದ ನಿರ್ಮಾಣಕ್ಕಾಗಿ ನಾನು 3 ಕೋಟಿ ರೂ ಗಳನ್ನು ಒದಗಿಸಲು ಉದ್ದೇಶಿಸಿದ್ದೇನೆ ನೋಂದಣಿ ದಾಖಲೆಗಳ ಕಂಪ್ಯೂಟರೀಕರಣ ಕಾರ್ಯಕ್ಕಾಗಿ ಕೂಡ ಬೆಂಬಲ ಒದಗಿಸಲಾಗುವುದು

97 ಕಟ್ಟಡ ನಿರ್ಮಾಣಕಾರರು ಮತ್ತು ಆಸ್ತಿ ಅಭಿವೃದ್ಧಿದಾರರಿಂದ ಸರ್ಕಾರಿ ಜಮೀನಿನ ಅತಿಕ್ರಮಣ ಪ್ರಕರಣಗಳು ವಿಶೇಷವಾಗಿ ಬೆಂಗಳೂರು ನಗರದಲ್ಲಿ ಒಂದು ಪಿಡುಗಾಗಿ ಪರಿಣಮಿಸಿದೆ ಹಕ್ಕುಪತ್ರ ಕಳೆದುಕೊಂಡ ಅಮಾಯಕ ಸಾರ್ವಜನಿಕರು ತೊಂದರೆ ಅನುಭವಿಸುತ್ತಿದ್ದಾರೆ ಕಾನೂನು ಗೌರವಿಸುವ ಜಮೀನು ಮತ್ತು ವಸತಿ ಸಮುಚ್ಚಯಗಳ ಅಭಿವೃದ್ಧಿದಾರರು ಆಸ್ತಿ ಹಕ್ಕುಪತ್ರದ ಸಾಚಾತನದ ಬಗ್ಗೆ ಉದ್ದೇಶಿತ ಖರೀದಿಗಾರರಿಗೆ ಮನವರಿಕೆ ಮಾಡಿಕೊಡಲು ಕಷ್ಟಪಡುತ್ತಿದ್ದಾರೆ ಮನೆ, ನಿವೇಶನ ಮತ್ತು ವಸತಿ ಸಂಕೀರ್ಣಗಳಲ್ಲಿ ಮನೆ ಖರೀದಿಸುವವರು ಆಸ್ತಿ ಒಡೆತನ ಪತ್ರದ ನ್ಯಾಯಬದ್ಧ ಸಿಂಧುತ್ವದ ಬಗ್ಗೆ ಚಿಂತಿಸುತ್ತಾರೆ ಪೂರ್ಣವಾದ ಮತ್ತು ನ್ಯಾಯಬದ್ಧ ಸಿಂಧುತ್ವದ ಮಾಹಿತಿಯ ಕೊರತೆಯಿಂದ ಬಂಡವಾಳ ಹೂಡಿಕೆ ನಿರ್ಧಾರಗಳು ಮುಂದೂಡಲ್ಪಡುತ್ತವೆ ದಾಖಲೆಪತ್ರಗಳ ನ್ಯಾಯಬದ್ಧತೆಯನ್ನು ದೃಢಪಡಿಸಿಕೊಳ್ಳಲು ಅಪಾರ ಹಣ ಖರ್ಚಾಗುತ್ತದೆ ಗೃಹ ನಿರ್ಮಾಣಕ್ಕೆ ಸಾಲ ನೀಡುವ ಸಂಸ್ಥೆಗಳು ಸಹ ನ್ಯಾಯಬದ್ಧ ಹಕ್ಕುಪತ್ರಗಳ ಸಿಂಧುತ್ವವನ್ನು ಖಾತ್ರಿಪಡಿಸಿಕೊಳ್ಳಲು ಅಪಾರ ಹಣ ವೆಚ್ಚ ಮಾಡುತ್ತಿವೆ ಈ ಅಡೆತಡೆಗಳನ್ನು ನಿವಾರಿಸಲು ನಾನು ಈ ಕೆಳಕಂಡ ಎರಡು ಕ್ರಮಗಳನ್ನು ಜಾರಿಗೊಳಿಸಲು ಉದ್ದೇಶಿಸಿದ್ದೇನೆ

(ಅ) ನಮ್ಮ ಸರ್ಕಾರವು ಆಸ್ತಿ ಹಕ್ಕಿನ ವಿಮಾ ಪತ್ರದ ವ್ಯವಸ್ಥೆಯನ್ನು ಜಾರಿಗೊಳಿಸಲು ಉದ್ದೇಶಿಸಿದೆ ಆಸ್ತಿ ವಿಮೆಯನ್ನು ಹೊಂದಿರುವ ಎಲ್ಲಾ ಆಸ್ತಿಗಳ ನೋಂದಣಿಗೆ ಶೇ 0 5 ರಷ್ಟು ಮುದ್ರಾಂಕ ಶುಲ್ಕ ರಿಯಾಯಿತಿ ನೀಡಲು ಉದ್ದೇಶಿಸಿದ್ದೇನೆ

(ಆ) ಬೆಂಗಳೂರು ನಗರದಲ್ಲಿನ ಅಭಿವೃದ್ಧಿದಾರರು, ಕಟ್ಟಡ ನಿರ್ಮಾಣಗಾರರು ಮತ್ತು ಮನೆ ಮಾಲೀಕರ ಹಾಗೂ ಆಸ್ತಿಯ ವಿವರಗಳನ್ನೊಳಗೊಂಡ ಮಾಹಿತಿ ಭಂಡಾರವನ್ನು ಖಾಸಗಿ ಮತ್ತು ಸಾರ್ವಜನಿಕ ಸಹಭಾಗಿತ್ವದ ಮಾದರಿಯಲ್ಲಿ ಸ್ಥಾಪಿಸಲು ನಾನು ಉದ್ದೇಶಿಸಿದ್ದೇನೆ ಈ ಮಾಹಿತಿ ಭಂಡಾರವು ನಿರ್ದಿಷ್ಟ ಅಭಿವೃದ್ಧಿದಾರರು ಅಥವಾ ಕಟ್ಟಡ ನಿರ್ಮಾಣಗಾರರು ಅಥವಾ ಮನೆಮಾಲೀಕರು ಘೋಷಿಸಿಕೊಳ್ಳುವ ಮಾಹಿತಿಯನ್ನು ಉದ್ದೇಶಿತ ಖರೀದಿದಾರರಿಗೆ ಒದಗಿಸಲಿದೆ ಆಸ್ತಿ ಹಕ್ಕಿನ ವಿಮಾ ಪತ್ರದ ರಕ್ಷಣೆಯನ್ನು ಹೊಂದಿರುವ ಆಸ್ತಿಗಳ ಬಗ್ಗೆ ಎಲ್ಲಾ ವಿವರ ಮತ್ತು ಮಾಹಿತಿಗಳು ಲಭ್ಯವಿರುವುದರಿಂದ ಸಹಜವಾಗಿ ಇದು ಆಸ್ತಿ ವ್ಯವಹಾರಗಳನ್ನು ಸುಲಲಿತಗೊಳಿಸುತ್ತವೆ

ಸಮಾಜ ಕಲ್ಯಾಣ

ಶತಶತಮಾನದ ಮಾಘಮೌನದಲಿ
ನೂರುಗಾಳಿಗಳ ಸುಲಿಗೆಯ ದಾಳಿಗೆ
ಎದೆಯನೊಡ್ಡಿ ಎಲೆಯುದುರಿದ ಬಾಳಿಗೆ
ವಸಂತ ಮೂಡುವುದೆಂದಿಗೆ?

– ಡಾ ಜಿ.ಎಸ್ ಶಿವರುದ್ರಪ್ಪ

98 ದುರ್ಬಲ ವರ್ಗದ ಜನರ ಅಭಿವೃದ್ಧಿಗಾಗಿ ನಮ್ಮ ಸರ್ಕಾರವು ಶೈಕ್ಷಣಿಕ ಮತ್ತು ಆರ್ಥಿಕ ಕಾರ್ಯಕ್ರಮಗಳಿಗೆ ಹೆಚ್ಚಿನ ಒತ್ತು ನೀಡುತ್ತದೆ ಈ ಆಶಯಕ್ಕೆ ಅನುಗುಣವಾಗಿ ನಮ್ಮ ಸರ್ಕಾರವು ಹೆಚ್ಚಿನ ಸಂಖ್ಯೆಯಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಸ್ಥಾಪಿಸಲು ಉದ್ದೇಶಿಸುತ್ತಿದೆ ವಸತಿ ಶಾಲೆಗಳು ದುರ್ಬಲ ವರ್ಗದ ವಿದ್ಯಾರ್ಥಿಗಳ ಕಲಿಕೆಗೆ ಹೆಚ್ಚಿನ ಅವಕಾಶ ಕಲ್ಪಿಸಿ ಈ ಮಕ್ಕಳು ಮಧ್ಯದಲ್ಲೇ ಶಾಲೆ ಬಿಡುವ ಪ್ರಮಾಣವನ್ನು ಕಡಿಮೆ ಮಾಡುತ್ತಿರುವುದರಿಂದ ನಾವು ಮತ್ತಷ್ಟು ಹೊಸ ವಸತಿ ನಿಲಯಗಳನ್ನು ಸ್ಥಾಪಿಸುತ್ತಿದ್ದೇವೆ ದುರ್ಬಲ ವರ್ಗಗಳ ವಿದ್ಯಾರ್ಥಿನಿಯರಿಗೆ ಹೆಚ್ಚಿನ ಪ್ರಮಾಣದಲ್ಲಿ ಉನ್ನತ ಶಿಕ್ಷಣಕ್ಕೆ ಅವಕಾಶ ಕಲ್ಪಿಸಲು ನೂತನವಾಗಿ ಆರಂಭವಾಗಲಿರುವ ಹೊಸ ಮೆಟ್ರಿಕ್ ನಂತರದ ಹಾಸ್ಟೆಲ್‌ಗಳಲ್ಲಿ ಶೇ 50ರಷ್ಟು ಹಾಸ್ಟೆಲ್‌ಗಳನ್ನು ಹೆಣ್ಣು ಮಕ್ಕಳಿಗೆ ಮೀಸಲಿಡಲಾಗುವುದು ಹಲವಾರು ವಿದ್ಯಾರ್ಥಿನಿಲಯಗಳು ಬಾಡಿಗೆ ಕಟ್ಟಡದಲ್ಲಿದ್ದು, ಇಕ್ಕಟ್ಟಾದ ಪರಿಸರದಲ್ಲಿ ಕಾರ್ಯನಿರ್ವಹಿಸುತ್ತಿದ್ದು ಈ ತೊಂದರೆಯನ್ನು ನಿವಾರಿಸಲು ನಾವು ಹೆಚ್ಚು ವಸತಿ ನಿಲಯ ಕಟ್ಟಡಗಳನ್ನು ನಿರ್ಮಿಸಲು ಉದ್ದೇಶಿಸಿದ್ದೇವೆ

99 ದುರ್ಬಲ ವರ್ಗಗಳ ಆರ್ಥಿಕ ಸುಧಾರಣೆಗಾಗಿ ನೆರವಾಗುವ ಜಮೀನು ಖರೀದಿ ಯೋಜನೆ ಮತ್ತು ಗಂಗಾಕಲ್ಯಾಣ ಯೋಜನೆಗಳಿಗೆ ನಮ್ಮ ಸರ್ಕಾರವು ಹೆಚ್ಚು ಒತ್ತು ನೀಡುತ್ತಿದೆ ಇದರ ಜೊತೆಗೆ **'ಕಿರು ಸಾಲ'** ಎನ್ನುವ ನೂತನ ಯೋಜನೆಯನ್ನು ಜಾರಿಗೊಳಿಸಲು ನಾನು ಉದ್ದೇಶಿಸಿದ್ದೇನೆ ಈ ಯೋಜನೆಯಡಿ ಗ್ರಾಮೀಣ, ಅರೆನಗರ ಮತ್ತು ನಗರ ಪ್ರದೇಶಗಳಿಗೆ ಸೇರಿದ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ, ಹಿಂದುಳಿದ ಜಾತಿ ಮತ್ತು ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ಕುಶಲಿ ಅಥವಾ ಕುಶಲಿಯಲ್ಲದ ವ್ಯಕ್ತಿಗಳು ಸಣ್ಣಪುಟ್ಟ ವ್ಯಾಪಾರ ಚಟುವಟಿಕೆಗಳನ್ನು **ಕೈಗೊಳ್ಳಲು ಧನಸಹಾಯ ನೀಡಲಾಗುವುದು ಈ ಉದ್ದೇಶಕ್ಕಾಗಿ ನಾನು 10 ಕೋಟಿ ರೂ ಗಳನ್ನು** ನೀಡಲು ಉದ್ದೇಶಿಸಿದ್ದೇನೆ

ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳು

100 ಪ್ರಸಕ್ತ ವರ್ಷದಲ್ಲಿ ಪರಿಶಿಷ್ಟ ಜಾತಿಗಳಿಗೆ ವಿಶೇಷ ಘಟಕ ಯೋಜನೆಯಡಿ **2560 ಕೋಟಿ** ರೂ ಗಳನ್ನು ಮತ್ತು ಪರಿಶಿಷ್ಟ ಪಂಗಡಗಳಿಗೆ ಗಿರಿಜನ ಉಪಯೋಜನೆಗಳಲ್ಲಿ **1035 ಕೋಟಿ** ರೂ ಗಳನ್ನು ಹಂಚಿಕೆ ಮಾಡಲಾಗಿದೆ ಹಿಂದಿನ ವರ್ಷಗಳಿಗೆ ಹೋಲಿಸಿದರೆ ಇದು ಗಣನೀಯವಾದ ಏರಿಕೆಯಾಗಿದೆ ಎನ್ನುವ ವಿಷಯವನ್ನು ಸದನದ ಗೌರವಾನ್ವಿತ ಸದಸ್ಯರಿಗೆ ತಿಳಿಸಲು ನನಗೆ ಸಂತಸವಾಗುತ್ತಿದೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸ್ಥಾನಮಾನವನ್ನು ಉತ್ತಮಗೊಳಿಸುವ ನಮ್ಮ ಪ್ರಾಮಾಣಿಕ ಪ್ರಯತ್ನಗಳಿಗೆ ಇದು ಸಾಕ್ಷಿಯಾಗಿದೆ

101 ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗಾಗಿ 25 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ 5 ವಸತಿ ಶಾಲೆಗಳನ್ನು ಆರಂಭಿಸಲು ನಾವು ಉದ್ದೇಶಿಸಿದ್ದೇವೆ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ 75 ಹೊಸ ವಿದ್ಯಾರ್ಥಿನಿಲಯಗಳನ್ನು ಮತ್ತು ಪರಿಶಿಷ್ಟ ಪಂಗಡಗಳಿಗೆ 10 ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ ಇದರ ಜೊತೆಗೆ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣಕ್ಕಾಗಿ ಕ್ರಮವಾಗಿ 24 ಕೋಟಿ ಮತ್ತು 8 5 ಕೋಟಿ ರೂ ಗಳನ್ನು ನಾವು ವೆಚ್ಚ ಮಾಡಲಿದ್ದೇವೆ

102 ಗಂಗಾಕಲ್ಯಾಣ ಯೋಜನೆಯ ವ್ಯಾಪ್ತಿಯನ್ನು ವಿಸ್ತರಿಸಲು ನಮ್ಮ ಸರ್ಕಾರವು ಉದ್ದೇಶಿಸಿದ್ದು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಫಲಾನುಭವಿಗಳಿಗೆ ಒಗ್ಗೂಡಿಸಿದ ಮೊತ್ತಸೇರಿ 100 ಕೋಟಿ ರೂ ಗಳ

ಹಂಚಿಕೆಯನ್ನು ಮಾಡಲಾಗುವುದು ಜಮೀನು ಖರೀದಿ ಯೋಜನೆಯಡಿ ಪರಿಶಿಷ್ಟ ಜಾತಿಯವರಿಗೆ 18 50 ಕೋಟಿ ರೂ ಗಳನ್ನು ಮತ್ತು ಪರಿಶಿಷ್ಟಪಂಗಡದವರಿಗೆ 7 ಕೋಟಿ ರೂ ಗಳನ್ನು ಹಂಚಿಕೆ ಮಾಡಲು ನಾನು ಉದ್ದೇಶಿಸಿದ್ದೇನೆ

103 ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಒಂದು ಸಾವಿರ ಬುದ್ಧಿವಂತ ಅರ್ಹ ವಿದ್ಯಾರ್ಥಿಗಳಿಗೆ ಜಿಲ್ಲೆಗಳಲ್ಲಿರುವ ಪ್ರತಿಷ್ಠಿತ ವಸತಿ ಮತ್ತು ವಸತಿಯೇತರ ಶಾಲೆಗಳಲ್ಲಿ ಪ್ರವೇಶ ಪಡೆಯಲು ಅನುಕೂಲವಾಗುವಂತೆ ನಾನು 2 ಕೋಟಿ ರೂ ಗಳನ್ನು ಒದಗಿಸಲು ಉದ್ದೇಶಿಸಿದ್ದೇನೆ

104 ರಾಷ್ಟ್ರದ ದಲಿತನಾಯಕ ಶ್ರೀ ಬಾಬು ಜಗಜೀವನರಾಮ್‌ರವರ ಶತಮಾನೋತ್ಸವ ಆಚರಣೆ ಸಂದರ್ಭದಲ್ಲಿ ಬೆಂಗಳೂರು ನಗರದಲ್ಲಿ ಒಂದು ಭವನವನ್ನು ನಿರ್ಮಿಸಲು ನಾನು 3 ಕೋಟಿ ರೂ ಗಳನ್ನು ಒದಗಿಸಲಿದ್ದೇನೆ ಗದಗ್‌ನಲ್ಲಿ ಡಾ ಬಿ ಆರ್ ಅಂಬೇಡ್ಕರ್ ಭವನ ನಿರ್ಮಿಸಲು ಸಹ 1 ಕೋಟಿ ರೂ ಗಳನ್ನು ಒದಗಿಸಲು ಉದ್ದೇಶಿಸಿದ್ದೇನೆ

ಅಲ್ಪಸಂಖ್ಯಾತರ ಅಭಿವೃದ್ಧಿ

105 ರಾಜ್ಯದಲ್ಲಿ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗಾಗಿ 2007-08ನೇ ಸಾಲಿನಲ್ಲಿ 7 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಮತ್ತು 50 ಹೊಸ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಲಾಗುವುದು ಇದರ ಜೊತೆಗೆ ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣಕ್ಕಾಗಿ 11 ಕೋಟಿ ರೂ ಗಳನ್ನು ಒದಗಿಸಲು ಉದ್ದೇಶಿಸಲಾಗಿದೆ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಮೂಲಕ ಗಂಗಾಕಲ್ಯಾಣ ಯೋಜನೆಯನ್ನು ಮುಂದುವರೆಸಲು ನಾವು ಉದ್ದೇಶಿಸಿದ್ದು ಇದಕ್ಕಾಗಿ 2007-08ನೇ ಸಾಲಿನಲ್ಲಿ 22. ಕೋಟಿ ರೂ ಗಳನ್ನು ಮೀಸಲಿಡಲಾಗಿದೆ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮವು 5 5 ಕೋಟಿ ರೂ ಗಳ ವೆಚ್ಚದಲ್ಲಿ ಉದ್ಯೋಗ ಆಧಾರಿತ ತರಬೇತಿ ಕಾರ್ಯಕ್ರಮವನ್ನು ಕೈಗೆತ್ತಿಕೊಳ್ಳಲಿದೆ

106 ಶಾದಿ ಮಹಲುಗಳ ನಿರ್ಮಾಣಕ್ಕಾಗಿ 6 5 ಕೋಟಿ ರೂ ಗಳನ್ನು ನಾನು ಮೀಸಲಿಡಲು ಉದ್ದೇಶಿಸಿದ್ದೇನೆ

107 ಅಲ್ಪಸಂಖ್ಯಾತರ ಸಮುದಾಯಕ್ಕೆ ಸ್ವಂತ ಉದ್ಯೋಗ ಅವಕಾಶಗಳನ್ನು ನೀಡುವುದರ ಜೊತೆಗೆ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮವು, ರಾಷ್ಟ್ರೀಯ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಸಾಲವನ್ನು ಪಡೆಯಲು

ಅನುಕೂಲವಾಗುವಂತೆ ಕರ್ನಾಟಕ ಸರ್ಕಾರವು 15 ಕೋಟಿ ರೂ ಗಳ ಸರ್ಕಾರಿ ಖಾತರಿಯನ್ನು ನೀಡಲು ಉದ್ದೇಶಿಸಿದೆ ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ಆಯವ್ಯಯದಲ್ಲಿ ಒದಗಿಸಿರುವ 92 ಕೋಟಿ ರೂ ಗಳ ಜೊತೆಗೆ ಇದು ಹೆಚ್ಚುವರಿಯಾಗಿದೆ ನಿಗಮವು ಈ ಮೊತ್ತವನ್ನು ಬಳಸಿಕೊಂಡು ನಗರದ ಕೊಳೆಗೇರಿಗಳಲ್ಲಿ ಮತ್ತು ಹಳ್ಳಿಗಳಲ್ಲಿ ವಾಸಿಸುವ ಅಲ್ಪಸಂಖ್ಯಾತ ಸಮುದಾಯದ ಮಹಿಳೆಯರಿಗೆ ಅಭಿವೃದ್ಧಿ ಸಾಲವನ್ನು ಒದಗಿಸಲಿದೆ ಅಲ್ಪಸಂಖ್ಯಾತರ ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ **ರಾಜ್ಯದ ಇತಿಹಾಸದಲ್ಲಿಯೇ ಪ್ರಥಮ ಬಾರಿಗೆ 100 ಕೋಟಿ ರೂ ಗಳಿಗೂ ಹೆಚ್ಚು ಹಣವನ್ನು ಹಂಚಿಕೆ** ಮಾಡಿರುವ ವಿಷಯವನ್ನು ಸದನದಲ್ಲಿ ಹಂಚಿಕೊಳ್ಳಲು ನನಗೆ ಹೆಮ್ಮೆ ಎನಿಸುತ್ತದೆ

ಹಿಂದುಳಿದ ವರ್ಗಗಳು·

108 ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗಾಗಿ 2007-08ನೇ ಸಾಲಿನಲ್ಲಿ ಹೊಸದಾಗಿ 22 ಮೊರಾರ್ಜಿ ದೇಸಾಯಿ ಶಾಲೆಗಳನ್ನು ಸ್ಥಾಪಿಸಲು ನಾವು ಬದ್ಧರಾಗಿದ್ದೇವೆ ಇದರ ಜೊತೆಗೆ ನಾವು ಹೊಸದಾಗಿ 75 ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳನ್ನು ತೆರೆಯುತ್ತಿದ್ದೇವೆ ಸ್ವಂತ ಕಟ್ಟಡವಿಲ್ಲದ ಹಿಂದುಳಿದ ವರ್ಗದ ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣಕ್ಕಾಗಿ 26 ಕೋಟಿ ರೂ ಗಳನ್ನು ನಾನು ಹಂಚಿಕೆ ಮಾಡುತ್ತಿದ್ದೇನೆ

ಹಿಂದುಳಿದ ವರ್ಗಗಳ ಗಂಗಾಕಲ್ಯಾಣ ಯೋಜನೆಗಾಗಿ 2007-08ನೇ ಸಾಲಿನಲ್ಲಿ 27 ಕೋಟಿ ರೂ ಗಳ ಹಂಚಿಕೆಯನ್ನು ಮಾಡುತ್ತಿದ್ದೇವೆ

109 ದೇವರಾಜ ಅರಸ್ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಮೂಲಕ ಅಲೆಮಾರಿ ಮತ್ತು ಅರೆ ಅಲೆಮಾರಿ ಪಂಗಡಗಳವರಿಗಾಗಿ ವಿಶೇಷ ಯೋಜನೆಯನ್ನು ಆರಂಭಿಸಲು ಉದ್ದೇಶಿಸಿದ್ದೇವೆ ಈ ಕಾರ್ಯಕ್ರಮದಲ್ಲಿ ಸ್ವಂತ ಉದ್ಯೋಗ ಕೈಗೊಳ್ಳಲು ಪ್ರತಿ ಫಲಾನುಭವಿಗಳಿಗೆ 5,000 ರೂ ಗಳ ಸಾಲ ಮತ್ತು 5,000 ಸಾವಿರ ರೂ ಗಳ ಸಹಾಯಧನ ಸೇರಿ ಒಟ್ಟು 10,000 ಸಾವಿರ ರೂ ಗಳನ್ನು ನೀಡಲಾಗುವುದು ಇದಕ್ಕಾಗಿ 4 ಕೋಟಿ ರೂ ಗಳನ್ನು ಮೀಸಲಿಡಲಾಗಿದೆ

110 ಹಿಂದುಳಿದ ವರ್ಗಕ್ಕೆ ಸೇರಿದ ಸವಿತಾ ಸಮಾಜದವರ ಅಭಿವೃದ್ಧಿಗಾಗಿ ನಾನು 1 ಕೋಟಿ ರೂ ಗಳನ್ನು ಒದಗಿಸಲು ಉದ್ದೇಶಿಸಿದ್ದೇನೆ ಈ ಮೊತ್ತವನ್ನು ತಾಲ್ಲೂಕು ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿನ ಕೇಶಾಲಂಕಾರ ಸಲೂನ್‌ಗಳ

ನವೀಕರಣಕ್ಕಾಗಿ ಅರ್ಹ ಫಲಾನುಭವಿಗಳಿಗೆ ನೀಡಲಾಗುವುದು ಈ ಯೋಜನೆಯಡಿ ಪ್ರತಿ ಫಲಾನುಭವಿಗೆ ಒಟ್ಟು 10,000 ರೂ ಗಳ ಸಾಲವನ್ನು ನೀಡಲಾಗುವುದು ಇದರಲ್ಲಿ 5,000 ಸಾವಿರ ರೂ ಗಳು ಸಹಾಯಧನವಾಗಿರುತ್ತದೆ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ

ಮನೆ ಮನೆಯಲಿ ದೀಪ ಮುಡಿಸಿ
ಹೊತ್ತು ಹೊತ್ತಿಗನ್ನವುಣಿಸಿ
ತಂದೆ-ಮಗುವ ತಬ್ಬಿದಾಕೆ
ನಿನಗೆ ಬೇರೆ ಹೆಸರು ಬೇಕೆ
ಸ್ತ್ರೀ ಎಂದರೆ ಅಷ್ಟೆ ಸಾಕೆ?

ಮಹಿಳೆಯರ ಸೇವೆ ಮತ್ತು ತ್ಯಾಗ ಮನೋಭಾವವನ್ನು ರಾಷ್ಟ್ರಕವಿ ಡಾ ಜಿ ಎಸ್ ಶಿವರುದ್ರಪ್ಪ ಅವರು ಆರ್ದ್ರ ಹೃದಯದಿಂದ ಬಣ್ಣಿಸುವ ಪರಿ ಎಂಥಹವರನ್ನೂ ಕರಗಿಸುತ್ತದೆ

ಚೊಚ್ಚಲ ಲಿಂಗ ಆಧಾರಿತ ಆಯವ್ಯಯ

111 ನಾನು 2006-07ನೇ ಸಾಲಿನಲ್ಲಿ ಆಯವ್ಯಯವನ್ನು ಮಂಡಿಸುವ ಸಮಯದಲ್ಲಿ ಆರ್ಥಿಕ ಇಲಾಖೆಯಲ್ಲಿ ಒಂದು ವಿಶೇಷ ಕೋಶವನ್ನು ತೆಗೆದು, ಲಿಂಗ ಆಧಾರಿತ ಆಯವ್ಯಯ ಪತ್ರವನ್ನು ಮಂಡಿಸುವ ಬಗ್ಗೆ ಗೌರವಾನ್ವಿತ ಸದನದ ಮುಂದೆ ಆಶ್ವಾಸನೆಯನ್ನು ನೀಡಿದ್ದೆನು ಲಿಂಗ ಆಧಾರಿತ ಪತ್ರವು ಮಹಿಳೆಯರ ಸಮಸ್ಯೆಗಳ ಬಗ್ಗೆ ಸರ್ಕಾರವು ಯಾವ ರೀತಿ ಸ್ಪಂದಿಸುತ್ತಿದೆ ಎನ್ನುವುದನ್ನು ತಿಳಿಸುವ ಒಂದು ದಾಖಲೆ ಪತ್ರವಾಗಿದೆ ಕರ್ನಾಟಕ ಸರ್ಕಾರದ **ಮೊಟ್ಟಮೊದಲ ಲಿಂಗ ಆಧಾರಿತ ಆಯವ್ಯಯದ ದಾಖಲೆಪತ್ರವನ್ನು** ಗೌರವಾನ್ವಿತ ಸದನದ ಮುಂದೆ ಮಂಡಿಸಲು ನಾನು ಹರ್ಷಿಸುತ್ತೇನೆ ಈ ದಾಖಲೆ ಪತ್ರದ ಗುಣಮಟ್ಟವನ್ನು ಹೆಚ್ಚಿಸುವ ಬಗ್ಗೆ ತಮ್ಮಿಂದ ಟೀಕೆ ಟಿಪ್ಪಣಿಗಳು, ಸಲಹೆಗಳು ಮತ್ತು ಸಹಾಯವನ್ನು ನಾನು ಆಶಿಸುತ್ತೇನೆ ಈ ರೀತಿಯ ಲಿಂಗ ಆಧಾರಿತ ಆಯವ್ಯಯ ದಾಖಲೆ ಪತ್ರದಿಂದ ಮುಂದಿನ ವರ್ಷಗಳಲ್ಲಿ ಮಹಿಳೆಯರ ಬಗ್ಗೆ ನಮ್ಮ ಸರ್ಕಾರದ ಸ್ಪಂದನೆಯನ್ನು ಹೆಚ್ಚಿಸಲಿದೆ ಎಂದು ನಾನು ಆಶಿಸುತ್ತೇನೆ

112 ನಮ್ಮ ಸರ್ಕಾರವು 2006-07ನೇ ಸಾಲಿನಲ್ಲಿ ಮಹಿಳೆಯರ ಅಭಿವೃದ್ಧಿಗಾಗಿ ಹಲವಾರು ಕಾರ್ಯಕ್ರಮಗಳಿಗೆ ಚಾಲನೆ ನೀಡಿದೆ ಇಡೀ

ರಾಜ್ಯವೇ **ಭಾಗ್ಯಲಕ್ಷ್ಮಿ ಯೋಜನೆಯನ್ನು** ಸ್ವಾಗತಿಸಿದೆ ಯೋಜನೆಗೆ ನೋಂದಣಿ ಮತ್ತು ಅರ್ಹತೆಯನ್ನು ಕುರಿತಂತೆ ವಿವರವಾದ ಮಾರ್ಗದರ್ಶಿ ಸೂತ್ರಗಳನ್ನು ನೀಡಲಾಗಿದೆ ಬಡತನ ರೇಖೆಗಿಂತ ಕೆಳಗಿರುವ ಕುಟುಂಬದಲ್ಲಿ ಏಪ್ರಿಲ್ 1, 2006 ರ ನಂತರ ಜನಿಸಿದ ಸುಮಾರು 15 ಲಕ್ಷ ಹೆಣ್ಣು ಮಕ್ಕಳನ್ನು ಇದರಡಿ ಯೋಜಿಸಿಕೊಳ್ಳಲಾಗಿದೆ ಭಾಗ್ಯಲಕ್ಷ್ಮಿ ಯೋಜನೆಯ ನಿಧಿಯನ್ನು ನಿರ್ವಹಿಸಲು ನಮ್ಮ ಸರ್ಕಾರವು ಒಂದು ನೋಂದಾಯಿತ ಟ್ರಸ್ಟನ್ನು ಸ್ಥಾಪಿಸಿದೆ ಪ್ರತಿ ಫಲಾನುಭವಿ ಹೆಣ್ಣು ಮಗುವಿಗೆ ತಲಾ 10, 000 ರೂ ಗಳ ರೇವಣಿ ಮತ್ತು ಈ ರೇವಣಿಗೆ 2006-07ನೇ ಸಾಲಿನಲ್ಲಿ ಸಂಗ್ರಹವಾದ ಶೇ 85 ರ ಬಡ್ಡಿ ಹಣವನ್ನು ಸೇರಿಸಿ ಒಟ್ಟು 166 ಕೋಟಿ ರೂ ಗಳನ್ನು ಈ ಟ್ರಸ್ಟ್‌ಗೆ ವರ್ಗಾಯಿಸಲಾಗಿದೆ ಭಾಗ್ಯಲಕ್ಷ್ಮಿ ಯೋಜನೆಗೆ ನಿಗದಿ ಮಾಡಿರುವ ನಿಧಿಯನ್ನು ಸಂಪೂರ್ಣವಾಗಿ ವರ್ಗಾಯಿಸಲಾಗಿದ್ದು, ಇದು ಸುರಕ್ಷಿತವಾಗಿದೆ ನಮ್ಮ ಸರ್ಕಾರವು ಈ ಯೋಜನೆಯನ್ನು 2007-08ನೇ ಸಾಲಿನಲ್ಲೂ ಕೂಡ ಮುಂದುವರೆಸಲು ಉದ್ದೇಶಿಸಿದ್ದು ಇದಕ್ಕಾಗಿ **ನಾನು 225 ಕೋಟಿ ರೂ ಗಳನ್ನು ಮೀಸಲಿಡುತ್ತಿದ್ದೇನೆ**

113 ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯು 27 ವಿದ್ಯಾರ್ಥಿನಿ ನಿಲಯಗಳನ್ನು ನಡೆಸುತ್ತಿದೆ 2007-08ನೇ ಸಾಲಿನಲ್ಲಿ ಹೆಚ್ಚುವರಿಯಾಗಿ 10 ನೂತನ ಹಾಸ್ಟೆಲ್‌ಗಳನ್ನು ಆರಂಭಿಸಲಾಗುವುದು ಮಹಿಳೆಯರು ಉದ್ಯೋಗಾಧಾರಿತ ತರಬೇತಿಯನ್ನು ಕೈಗೊಳ್ಳಲು ಅನುವಾಗುವಂತೆ 2 ಕೋಟಿ ರೂ ಗಳನ್ನು ನಾನು ಮೀಸಲಿಡುತ್ತಿದ್ದೇನೆ ಮಹಿಳಾ ಅಭಿವೃದ್ಧಿ ನಿಗಮದ ಮೂಲಕ ದೇವದಾಸಿಯರ ಪುನರ್ವಸತಿ ಮತ್ತು ಮಹಿಳೆಯರ ಸ್ವಂತ ಉದ್ಯೋಗ ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳಲಾಗುವುದು

114 ರಾಜ್ಯದಲ್ಲಿ 2000-01ರಲ್ಲಿ ಆರಂಭವಾಗಿರುವ ಸ್ತ್ರೀಶಕ್ತಿ ಯೋಜನೆಯು ಅಭೂತಪೂರ್ವ ಯಶಸ್ಸನ್ನು ಕಂಡಿದೆ ಗ್ರಾಮೀಣ ಮಹಿಳೆಯರು ಇದರಿಂದ ಸಬಲರಾಗಿದ್ದಾರೆ ಕರ್ನಾಟಕದಲ್ಲಿ ಸಾರಾಯಿ ನಿಷೇಧ ಮಾಡುತ್ತಿರುವುದನ್ನು ಈ ಮುಂಗಡ ಪತ್ರದಲ್ಲಿ ನಾನು ಪ್ರಸ್ತಾಪಿಸಿದ್ದೇನೆ ಇದರ ಭಾಗಶಃ ಯಶಸ್ಸು ಈ ಸ್ತ್ರೀಶಕ್ತಿ ತಂಡಗಳಿಗೆ ಸಲ್ಲುತ್ತದೆ

ಸ್ತ್ರೀಶಕ್ತಿ ಭವನ

115 ಸ್ತ್ರೀಶಕ್ತಿ ತಂಡಗಳ ತರಬೇತಿ ಮತ್ತು ಆವರ್ತನಿಧಿಗೆ ಹಣ ಒದಗಿಸಲು ನಾನು 23 ಕೋಟಿ ರೂ ಗಳನ್ನು ಹಂಚಿಕೆ ಮಾಡುತ್ತಿದ್ದೇನೆ ಸ್ತ್ರೀಶಕ್ತಿ

ತಂಡಗಳ ಉತ್ಪನ್ನಗಳಿಗೆ ಮಾರುಕಟ್ಟೆ ಬೆಂಬಲ ಒದಗಿಸಲು ನಾನು 2007-08ನೇ ಸಾಲಿನಲ್ಲಿ 75 ಕೋಟಿ ರೂಗಳನ್ನು ಮೀಸಲಿಡುತ್ತಿದ್ದೇನೆ ಆಯ್ದ 50 ತಾಲ್ಲೂಕು ಕೇಂದ್ರಗಳಲ್ಲಿ 'ಸ್ತ್ರೀಶಕ್ತಿ ಭವನ'ಗಳನ್ನು ನಿರ್ಮಿಸಲು ಉದ್ದೇಶಿಸಿದ್ದು, ಈ ಭವನಗಳಲ್ಲಿ ಸ್ತ್ರೀಶಕ್ತಿ ತಂಡಗಳ ಉತ್ಪನ್ನಗಳ ಮಾರಾಟಕ್ಕೆ ಸ್ಥಳಾವಕಾಶ ಕಲ್ಪಿಸಲಾಗುವುದು

ಆದರ್ಶ ವಿವಾಹ:

116 ನಮ್ಮ ಸಮಾಜದಲ್ಲಿ ಈಗ ವಿವಾಹಗಳು ದುಬಾರಿಯ ವಿಷಯಗಳಾಗುತ್ತಿವೆ ಬಡಕುಟುಂಬಗಳಿಗೆ ಮತ್ತು ಮಧ್ಯಮವರ್ಗದ ಕುಟುಂಬಗಳಿಗೆ ಮದುವೆ ಹೊರೆಯಾಗುತ್ತಿದೆ ಸಾಮೂಹಿಕ ವಿವಾಹಗಳು ಈ ನಿಟ್ಟಿನಲ್ಲಿ ಒಂದು ಪರಿಹಾರವಾಗಿದೆ ಇದಕ್ಕೆ ಬೆಂಬಲವಾಗಿ ಸರ್ಕಾರವು **'ಆದರ್ಶ ವಿವಾಹ'** ಎನ್ನುವ ನೂತನ ಕಾರ್ಯಕ್ರಮವನ್ನು ಜಾರಿಗೆ ತರಲು ಉದ್ದೇಶಿಸಿದೆ ಈ ಯೋಜನೆಯಡಿ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಮದುವೆಯಾಗುವ ಪ್ರತಿಯೊಬ್ಬ ಯುವತಿಗೂ 10,000 ರೂಗಳ ಪ್ರೋತ್ಸಾಹ ಧನವನ್ನು 2 ವರ್ಷಗಳ ಅವಧಿಯ ರೇವಣಿ ರೂಪದಲ್ಲಿ ಸರ್ಕಾರದ ವತಿಯಿಂದ ನೀಡಲಾಗುವುದು ಕನಿಷ್ಠ 25 ವಿವಾಹಗಳು ನಡೆದಿರುವ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಮದುವೆಯಾಗಿರುವವರು ಮಾತ್ರ ಈ ಅನುಕೂಲ ಪಡೆಯಲು ಅರ್ಹತೆ ಹೊಂದಿರುತ್ತಾರೆ **ನಾನು ಈ ಉದ್ದೇಶಕ್ಕಾಗಿ 10 ಕೋಟಿ ರೂಗಳನ್ನು ಹಂಚಿಕೆ ಮಾಡುತ್ತಿದ್ದೇನೆ**

ಅಮೃತ ಯೋಜನೆ

117 ಸಾಮಾಜಿಕ-ಧಾರ್ಮಿಕ ಕಟ್ಟುಪಾಡುಗಳಿಂದಾಗಿ ವಿಧವೆಯರು ಮತ್ತು ದೇವದಾಸಿಯರು ತುಂಬಾ ಕಷ್ಟದ ಪರಿಸ್ಥಿತಿಯಲ್ಲಿ ಜೀವನ ನಿರ್ವಹಿಸುತ್ತಿದ್ದಾರೆ ಇವರು ಗೌರವಯುತ ಜೀವನ ನಡೆಸಲು ಅನುಕೂಲವಾಗುವಂತೆ ನಾನು **'ಅಮೃತಾ ಯೋಜನೆ'** ಯನ್ನು ಆರಂಭಿಸಲು ಉದ್ದೇಶಿಸಿದ್ದೇನೆ ಈ ಯೋಜನೆಯಡಿ 50,000 ಮಹಿಳೆಯರಿಗೆ ತಲಾ ಒಂದೊಂದು ಹಾಲು ಕರೆಯುವ ಹಸು ಅಥವಾ ಎಮ್ಮೆಯನ್ನು ಖರೀದಿಸಲು ನೆರವು ನೀಡಲಾಗುವುದು 10,000 ರೂಗಳ ಸಾಲದ ಜೊತೆಗೆ 10,000 ರೂಗಳ ಸಹಾಯಧನ ಸೇರಿಸಿ ಒಟ್ಟು 20,000 ರೂಗಳನ್ನು ಈ ಮಹಿಳೆಯರಿಗೆ ನೀಡಲಾಗುವುದು

118 ಕರ್ನಾಟಕ ಹಾಲು ಒಕ್ಕೂಟವು ಈ ಮಹಿಳೆಯರಿಗೆ ಉತ್ತಮ ತಳಿಯ ಹಸು, ಎಮ್ಮೆಯನ್ನು ನೀಡುವುದರಿಂದ ಹಿಡಿದು ಸೂಕ್ತ ತರಬೇತಿ, ಚಿಕಿತ್ಸೆ ಹಾಗೂ ಹಾಲು ಮಾರಾಟ ವ್ಯವಸ್ಥೆಯನ್ನು ಕಲ್ಪಿಸಲಿದೆ **ಈ ಉದ್ದೇಶಕ್ಕಾಗಿ ನಾನು 50 ಕೋಟಿ ರೂ ಗಳನ್ನು ಮೀಸಲಿಡುತ್ತಿದ್ದೇನೆ**

119 ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಕಾರ್ಯಚಟುವಟಿಕೆಗಳಿಗೆ 2007-08ನೇ ಸಾಲಿನಲ್ಲಿ ನಾನು 1 ಕೋಟಿ ರೂ ಗಳನ್ನು ಒದಗಿಸಲು ಉದ್ದೇಶಿಸಿದ್ದೇನೆ

ಅಂಗವಿಕಲರ ಕಲ್ಯಾಣ

120 ಅಂಗವಿಕಲರಿಗಾಗಿ 2001-02ರಲ್ಲಿ ಜಾರಿಗೊಳಿಸಿರುವ ಎನ್‌ಪಿಡಿಆರ್‌ಪಿ ಯೋಜನೆಯನ್ನು ನಮ್ಮ ಸರ್ಕಾರವು ಪುನರ್ ಪರಿಶೀಲಿಸಿ ಹೊಸ ಮಾರ್ಗದರ್ಶಿ ಸೂತ್ರಗಳನ್ನು ಹೊರಡಿಸಲಾಗುವುದು ಈ ಹೊಸ ಯೋಜನೆಯನ್ನು ಅನುಷ್ಠಾನಗೊಳಿಸಲು **ನಾನು 5 92 ಕೋಟಿ ರೂಗಳನ್ನು ಮೀಸಲಿಡಲು ಉದ್ದೇಶಿಸಿದ್ದೇನೆ**

121 ಅಂಗವಿಕಲರಿಗಾಗಿ ರೂಪಿಸಿರುವ ಆಧಾರ ಯೋಜನೆಯಡಿ ಪ್ರತಿ ಫಲಾನುಭವಿಗೆ 35,000 ರೂ ಗಳ ಸಾಲವನ್ನು ಒದಗಿಸಲಾಗುವುದು ಇದರಲ್ಲಿ 15,000 ರೂ ಗಳ ಕಿರು ಮಳಿಗೆ ದೊರೆಯುತ್ತದೆ ಮತ್ತು ಉಳಿಕೆ 20,000 ರೂ ಗಳು ಉದ್ಯೋಗ ಕೈಗೊಳ್ಳಲು ಬಡ್ಡಿರಹಿತ ಸಾಲವಾಗಿರುತ್ತದೆ ಈ ಉದ್ದೇಶಕ್ಕಾಗಿ 1 ಕೋಟಿ ರೂ ಗಳನ್ನು ಹಂಚಿಕೆ ಮಾಡಲಾಗುವುದು

122 ಅಂಗವಿಕಲರು ಸಾಮಾನ್ಯರಂತೆ ಕಾರ್ಯನಿರ್ವಹಿಸಲು **ಕೆಲವೊಮ್ಮೆ ಅವರಿಗೆ ಟ್ರೈಸಿಕಲ್, ಶ್ರವಣ ಸಾಧನ ಅಥವಾ ಊರುಗೋಲಿನಂತಹ** ಸರಳ ಉಪಕರಣಗಳು ಅಥವಾ ಸಾಧಾರಣ ನೆರವು ಅಗತ್ಯವಿರುತ್ತದೆ ಆದ್ದರಿಂದ ಇವರಿಗೆ ಅಗತ್ಯವಿರುವ ಉಪಕರಣ ಹಾಗೂ ನೆರವನ್ನು ಒದಗಿಸಿ ಅವರ ಸಾಮರ್ಥ್ಯವನ್ನು ಹೆಚ್ಚಿಸಲು ಉದ್ದೇಶಿಸಲಾಗಿದೆ **ಇದಕ್ಕಾಗಿ 10 ಕೋಟಿ ರೂ ಗಳನ್ನು ಒದಗಿಸಲಾಗುವುದು**

ಆರೋಗ್ಯ ಮತ್ತು ಕುಟುಂಬ ಕಲ್ಯಾಣ

123 ನಮ್ಮ ಸರ್ಕಾರವು 2006-07ನೇ ಸಾಲಿನಲ್ಲಿ ರಾಜ್ಯದ ಎಲ್ಲಾ ಜಿಲ್ಲಾ ಆಸ್ಪತ್ರೆಗಳಲ್ಲಿ ಟೆಲಿಮೆಡಿಸನ್ ಕಾರ್ಯಕ್ರಮಗಳನ್ನು ಜಾರಿಗೊಳಿಸಿತು ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳಾದ ಮಲೇರಿಯಾ ನಿಯಂತ್ರಣ, ಅಂಧತ್ವ ತಡೆ ಮತ್ತು ನಿಯಂತ್ರಣ, ಕ್ಷಯ ರೋಗ ನಿಯಂತ್ರಣ ಇವುಗಳನ್ನು

ಅನುಷ್ಠಾನಗೊಳಿಸಲಾಗುತ್ತಿದ್ದು, ರಾಜ್ಯದ ಪಾಲಿನ ಹಣವನ್ನು ಸಂಪೂರ್ಣವಾಗಿ ಒದಗಿಸಲಾಗಿದೆ

124 ಭಾರತ ಸರ್ಕಾರವು ತನ್ನ 2007-08ನೇ ಸಾಲಿನ ಆಯವ್ಯಯದಲ್ಲಿ **'ಆಮ್ ಆದ್ಮಿ ವಿಮಾ ಯೋಜನೆ'** ಎನ್ನುವ ನೂತನ ಯೋಜನೆಯನ್ನು ಘೋಷಿಸಿದೆ ನಮ್ಮ **'ಸುವರ್ಣ ಸುರಕ್ಷಾ ಯೋಜನೆ'**ಯನ್ನು ಕೇಂದ್ರದ ನೂತನ ಯೋಜನೆಯ ಜೊತೆಗೆ ಸಂಯೋಜಿಸುವ ಸಾಧ್ಯತೆಯನ್ನು ಪರಿಶೀಲಿಸಲಾಗುತ್ತಿದೆ ಸುವರ್ಣ ಸುರಕ್ಷಾ ಯೋಜನೆಯನ್ನು ಅನುಷ್ಠಾನಗೊಳಿಸಲು 2007-08ನೇ ಸಾಲಿಗೆ 35 ಕೋಟಿ ರೂ ಗಳನ್ನು ಮೀಸಲಿಡುತ್ತಿದ್ದೇನೆ

125 ರಾಜ್ಯದಲ್ಲಿರುವ ಎಲ್ಲಾ ತಾಲ್ಲೂಕು ಆಸ್ಪತ್ರೆಗಳನ್ನು ಹಂತ ಹಂತವಾಗಿ 100 ಹಾಸಿಗೆ ಸಾಮರ್ಥ್ಯದ ಆಸ್ಪತ್ರೆಗಳನ್ನಾಗಿ ಮೇಲ್ದರ್ಜೆಗೇರಿಸಲು 2006-07ನೇ ಸಾಲಿನಲ್ಲಿ ನಾವು ತೀರ್ಮಾನ ಕೈಗೊಂಡಿದ್ದೆವು ಈಗಾಗಲೇ 45 ಆಸ್ಪತ್ರೆಗಳ ಕಟ್ಟಡ ನಿರ್ಮಾಣವು ಆರಂಭವಾಗಿದೆ ಉಳಿದ ಆಸ್ಪತ್ರೆಗಳ ಕಟ್ಟಡ ನಿರ್ಮಾಣ ಕಾರ್ಯ 2007-08ನೇ ಸಾಲಿನಲ್ಲಿ ಆರಂಭವಾಗಲಿದೆ **ಈ ಉದ್ದೇಶಕ್ಕಾಗಿ ನಾನು 45 ಕೋಟಿ ರೂ ಗಳನ್ನು ಹಂಚಿಕೆ ಮಾಡುತ್ತಿದ್ದೇನೆ**

ಆಸ್ಪತ್ರೆಗಳಲ್ಲಿ ಸಂಜೆ ಹೊರ ರೋಗಿ ಸೇವೆಗಳ ಆರಂಭ

126 ಸರ್ಕಾರಿ ಆಸ್ಪತ್ರೆಗಳನ್ನು ಅವಲಂಬಿಸುವವರು ಬಹುತೇಕ ಬಡಜನರಾಗಿರುತ್ತಾರೆ ನಮ್ಮ ಹಲವಾರು ಆಸ್ಪತ್ರೆಗಳ ಹೊರರೋಗಿ ವಿಭಾಗಗಳು ಸರ್ಕಾರಿ ಕಛೇರಿಗಳಂತೆ ಬೆಳಿಗ್ಗೆ 9 ರಿಂದ ಸಂಜೆ 5ರ ವರೆಗೆ ಮಾತ್ರ ಕಾರ್ಯನಿರ್ವಹಿಸುತ್ತಿವೆ ಇದು ದುಡಿಯುವ ಜನರು, ಮತ್ತು ಕಛೇರಿಗೆ ಹೋಗುವ ಜನರು ಕೆಲಸಕ್ಕೆ ಹೋಗುವ ಸಮಯವಾಗಿರುತ್ತದೆ ಅವರು ಕೆಲಸದಿಂದ ವಾಪಸ್ಸು ಬರುವ ವೇಳೆಗೆ ಹೊರರೋಗಿ ವಿಭಾಗಗಳು ಮುಚ್ಚಿರುತ್ತವೆ ಹೀಗಾಗಿ ನಮ್ಮ ಆಸ್ಪತ್ರೆ ವ್ಯವಸ್ಥೆ ಗರಿಷ್ಠ ಪ್ರಮಾಣದಲ್ಲಿ ಬಳಕೆಯಾಗುತ್ತಿಲ್ಲ ಆದ್ದರಿಂದ ನಮ್ಮ ಆಸ್ಪತ್ರೆಗಳನ್ನು ಗರಿಷ್ಠ ಪ್ರಮಾಣದಲ್ಲಿ ಬಳಸಿಕೊಳ್ಳಲು 30 ಹಾಸಿಗೆ ಹಾಗೂ ಅದಕ್ಕಿಂತ ಹೆಚ್ಚಿನ ಹಾಸಿಗೆ ಸಾಮರ್ಥ್ಯವುಳ್ಳ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಸಂಜೆಯ ಹೊರರೋಗಿ ವಿಭಾಗಗಳನ್ನು ತೆರೆಯಲು ಉದ್ದೇಶಿಸಲಾಗಿದೆ ಈ ವಿಭಾಗಗಳು ಸಂಜೆ 5 30 ರಿಂದ ರಾತ್ರಿ 8 30 ರವರೆಗೆ ಕಾರ್ಯ ನಿರ್ವಹಿಸಲಿವೆ ಸರ್ಕಾರಿ ಆಸ್ಪತ್ರೆಯ ಎಲ್ಲಾ ವೈದ್ಯರು ವಾರದಲ್ಲಿ ಗರಿಷ್ಟ ಐದು ದಿನ ಸಂಜೆ ಹೊರರೋಗಿ

ವಿಭಾಗದಲ್ಲಿ ಕಾರ್ಯನಿರ್ವಹಿಸಬೇಕು ಈ ವಿಭಾಗದಲ್ಲಿ ಕಾರ್ಯನಿರ್ವಹಿಸುವ ವೈದ್ಯರಿಗೆ ಪ್ರತಿ ದಿನಕ್ಕೆ 300 ರೂ ಗಳ ಹೆಚ್ಚುವರಿ ಗೌರವ ಧನವನ್ನು ನೀಡಲಾಗುವುದು ಇದೇ ರೀತಿ ದಾದಿಯರು ಮತ್ತು ಪ್ಯಾರಾಮೆಡಿಕಲ್ ಸಿಬ್ಬಂದಿಗೆ ಪ್ರತಿ ದಿನಕ್ಕೆ 100 ರೂ ಗಳ ಗೌರವ ಧನವನ್ನು ನೀಡಲಾಗುವುದು ಸಂಬಂಧಿಸಿದ ಆಸ್ಪತ್ರೆಯ ಆಡಳಿತ ವೈದ್ಯರು ಮತ್ತು ವೈದ್ಯಾಧಿಕಾರಿಗಳು ಸಂಜೆ ಹೊರರೋಗಿಯ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸಲು ಸಿಬ್ಬಂದಿಗಳನ್ನು ನಿಯೋಜಿಸುತ್ತಾರೆ ಈ ಸಂಜೆ ಹೊರರೋಗಿ ಸೇವೆಯು ವೈದ್ಯರುಗಳಿಗೆ ಸ್ವಯಂ ಪ್ರೇರಣೆ ಸೇವೆಯಾಗಿರುತ್ತದೆ ಸರ್ಕಾರಿ ವೈದ್ಯರುಗಳು ಸಂಜೆ ಹೊರರೋಗಿ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸಲು ಮುಂದೆ ಬಾರದಿದ್ದರೆ ಸಂಬಂಧಿಸಿದ ಆಡಳಿತ ವೈದ್ಯಾಧಿಕಾರಿಗಳು ಅರ್ಹತೆಯುಳ್ಳ ಖಾಸಗಿ ವೈದ್ಯರ ಸೇವೆಯನ್ನು ಪಡೆದು ಸಂಜೆ ಹೊರರೋಗಿ ವಿಭಾಗವನ್ನು ನಡೆಸಬಹುದು ಈ ಬಗ್ಗೆ ವಿವರವಾದ ಮಾರ್ಗದರ್ಶಿ ಸೂತ್ರಗಳನ್ನು ಹೊರಡಿಸಲಾಗುವುದು

127 ಈ ಹೊಸ ವಿಧಾನದಿಂದ ಆಸ್ಪತ್ರೆಗೆ ಭೇಟಿ ನೀಡುವ ರೋಗಿಗಳ ಸಂಖ್ಯೆ ಹೆಚ್ಚಾಗುವ ನಿರೀಕ್ಷೆಯಿದೆ ಆದ್ದರಿಂದ ಆಸ್ಪತ್ರೆಗೆ ಪೂರೈಸುವ ಔಷಧಿಗಳಿಗಾಗಿ ಅನುದಾನವನ್ನು **2007-08ನೇ ಸಾಲಿನಲ್ಲಿ 107 ಕೋಟಿ ರೂ ಗಳಿಗೆ ಹೆಚ್ಚಿಸಲು ಉದ್ದೇಶಿಸಿದ್ದೇನೆ**

128 ಗರ್ಭಿಣಿ ತಾಯಂದಿರು ಹೆರಿಗೆಗೆ ಸಾರ್ವಜನಿಕ ಆಸ್ಪತ್ರೆಗಳಿಗೆ ಹೋಗುವಂತೆ ಉತ್ತೇಜಿಸಲು ವೈದ್ಯಕೀಯ ಕಿಟ್ ಒದಗಿಸಲು ಉದ್ದೇಶಿಸಲಾಗಿದೆ ಈ ಕಿಟ್‌ನಲ್ಲಿ ಹೆರಿಗೆ ನಂತರದ ಮೂರು ತಿಂಗಳವರೆಗೆ ತಾಯಿ ಮತ್ತು ಮಗುವಿಗೆ ಅಗತ್ಯವಿರುವ ಸೊಳ್ಳೆ ಪರದೆ, ಸೋಪು, ಲೋಶನ್ ಇತ್ಯಾದಿ ಆರೋಗ್ಯ ಸಂಬಂಧಿ ಸಾಮಗ್ರಿಗಳಿರುತ್ತವೆ **ಈ ಕಿಟ್‌ಗಳ ಪೂರೈಕೆಗಾಗಿ ನಾನು 5 ಕೋಟಿ ರೂ ಗಳನ್ನು ಮೀಸಲಿಡುತ್ತಿದ್ದೇನೆ**

ವೈದ್ಯಕೀಯ ಶಿಕ್ಷಣ

129 ಸರ್ಕಾರವು 2005-06ನೇ ಸಾಲಿನಲ್ಲಿ ಆರು ನೂತನ ವೈದ್ಯಕೀಯ ಕಾಲೇಜುಗಳನ್ನು ಆರಂಭಿಸಲು ಚಾಲನೆ ನೀಡಿತು ಈ ಕಾರ್ಯ ಚುರುಕಿನಿಂದ ನಡೆಯುತ್ತಿದೆ ಆರು ಕಾಲೇಜುಗಳ ಪ್ರಥಮ ಹಂತದ ಕಾಮಗಾರಿಗಳು ಮುಗಿದಿದ್ದು, ಎರಡನೆ ಹಂತದ ಕಾಮಗಾರಿ ಪ್ರಗತಿಯಲ್ಲಿರುತ್ತವೆ ಈ ನೂತನ ವೈದ್ಯಕೀಯ ಕಾಲೇಜುಗಳನ್ನು ಪೂರ್ಣಗೊಳಿಸಲು 2007-08ನೇ ಸಾಲಿನಲ್ಲಿ ನಾನು **64 5 ಕೋಟಿ ರೂ ಗಳನ್ನು ಒದಗಿಸಲು ಉದ್ದೇಶಿಸಿದ್ದೇನೆ**

130 ಹುಬ್ಬಳ್ಳಿಯ ಕರ್ನಾಟಕ ವೈದ್ಯಕೀಯ ಕಾಲೇಜು (ಕೆಎಂಸಿ) ತನ್ನ ಬೆಳ್ಳಿ ಹಬ್ಬವನ್ನು ಆಚರಿಸುತ್ತಿದೆ ನಮ್ಮ ಸರ್ಕಾರವು ಈ ಸಂಸ್ಥೆಯನ್ನು ಚಂಡಿಗಡದ ಪಿಜಿಐ ಮಾದರಿಯಲ್ಲಿ 100 ಕೋಟಿ ರೂಗಳ ವೆಚ್ಚದಲ್ಲಿ ಅಭಿವೃದ್ಧಿಪಡಿಸಲು ನಿರ್ಧರಿಸಿದೆ 2007-08ನೇ ಸಾಲಿನಲ್ಲಿ ಈ ಉದ್ದೇಶಕ್ಕೆ **20 ಕೋಟಿ ರೂಗಳನ್ನು ಮೀಸಲಿಡುತ್ತಿದ್ದೇನೆ**

131 **ಬಳ್ಳಾರಿಯ ವೈದ್ಯಕೀಯ ಕಾಲೇಜನ್ನು ಮೇಲ್ದರ್ಜೆಗೇರಿಸಲು ಉದ್ದೇಶಿಸಲಾಗಿದ್ದು,** ಇದಕ್ಕಾಗಿ 8 ಕೋಟಿ ರೂಗಳನ್ನು ನಾನು ಒದಗಿಸುತ್ತಿದ್ದೇನೆ ಇದರಿಂದ 100 ವಿದ್ಯಾರ್ಥಿಗಳ ಪ್ರವೇಶ ಸಾಮರ್ಥ್ಯವು 150ಕ್ಕೆ ಏರಿಕೆಯಾಗಲಿದೆ ಇದರ ಜೊತೆಗೆ ಬಳ್ಳಾರಿಯ ದಂತವೈದ್ಯ ಕಾಲೇಜಿನ ಕಟ್ಟಡ ನಿರ್ಮಾಣವನ್ನು **8 ಕೋಟಿ ರೂಗಳ ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗುವುದು**

132 **ಗುಲ್ಬರ್ಗಾದಲ್ಲಿರುವ ನರ್ಸಿಂಗ್ ಶಾಲೆಯ** ಸೌಲಭ್ಯಗಳನ್ನು ಮೇಲ್ದರ್ಜೆಗೇರಿಸುವ ಅಗತ್ಯವಿದ್ದು ಇದಕ್ಕಾಗಿ **ನಾನು 13 ಕೋಟಿ** ರೂಗಳನ್ನು ಒದಗಿಸುತ್ತಿದ್ದೇನೆ

133 ಬೆಂಗಳೂರು ನಗರವು ಬೃಹದಾಕಾರವಾಗಿ ಬೆಳೆಯುತ್ತಿದ್ದು, ಬೆಂಗಳೂರು ಪೂರ್ವ ಭಾಗದ ನಾಗರೀಕರಿಗೆ ಆರೋಗ್ಯ ಸೇವೆ ನೀಡಲು ಸಾರ್ವಜನಿಕ ಆಸ್ಪತ್ರೆಗಳು ಇರುವುದಿಲ್ಲ ಆದ್ದರಿಂದ ಇಂದಿರಾನಗರದಲ್ಲಿ **ಸಾರ್ವಜನಿಕ ಆಸ್ಪತ್ರೆಯ ನಿರ್ಮಾಣಕ್ಕಾಗಿ ನಾನು 10 ಕೋಟಿ ರೂಗಳನ್ನು** ಒದಗಿಸಲು ಉದ್ದೇಶಿಸಿದ್ದೇನೆ

134 ಮಧುಮೇಹ ಕಾಯಿಲೆಯು ಈಗ ಶ್ರೀಮಂತರ ಖಾಯಿಲೆಯಾಗಿ ಉಳಿದಿಲ್ಲ ಇತ್ತೀಚಿನ ಸಮೀಕ್ಷೆಯಂತೆ ಬಡಜನರಲ್ಲೂ ಕೂಡ ಈ ಖಾಯಿಲೆಯು ವ್ಯಾಪಕವಾಗಿದೆ ಆದ್ದರಿಂದ **'ಬೆಂಗಳೂರು ಮಧುಮೇಹ ಕೇಂದ್ರ'**ವನ್ನು ಸ್ಥಾಪಿಸಲು ನಾನು 6 ಕೋಟಿ ರೂಗಳನ್ನು ಹಂಚಿಕೆ ಮಾಡಲು ಉದ್ದೇಶಿಸಿದ್ದೇನೆ

135 ಕರ್ನಾಟಕ ನೆಫ್ರೋಯುರಾಲಜಿ ಸಂಸ್ಥೆಗೆ 2007-08ನೇ ಸಾಲಿನಲ್ಲಿ 35 ಕೋಟಿ ರೂಗಳನ್ನು ಒದಗಿಸಲು ಉದ್ದೇಶಿಸಿದ್ದೇನೆ

136 ಸ್ವಾಯತ್ತ ವೈದ್ಯಕೀಯ ಸಂಸ್ಥೆಗಳಾದ ಜಯದೇವ ಹೃದ್ರೋಗ ಆಸ್ಪತ್ರೆ, ಕಿದ್ವಾಯಿ ಆಸ್ಪತ್ರೆ, ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಗಳಿಗೆ ನೀಡುವ ಅನುದಾನವನ್ನು 2006-07ನೇ ಸಾಲಿನಲ್ಲಿನ 30 ಕೋಟಿ ರೂಗಳಿಂದ

2007-08ನೇ ಸಾಲಿನಲ್ಲಿ 40 50 ಕೋಟಿ ರೂ ಗಳಿಗೆ ಹೆಚ್ಚಿಸಲು ಉದ್ದೇಶಿಸಿದ್ದೇನೆ

ರಾಮನಗರ ಆರೋಗ್ಯ ನಗರ

137 ನಮ್ಮ ಸರ್ಕಾರವು ರಾಮನಗರವನ್ನು **'ಆರೋಗ್ಯ ನಗರ'**ವನ್ನಾಗಿ ಅಭಿವೃದ್ಧಿಪಡಿಸಲು ಉದ್ದೇಶಿಸಿದೆ ವೈದ್ಯಕೀಯ ವಿಶ್ವವಿದ್ಯಾನಿಲಯವು ತನ್ನ ಆಡಳಿತ ವಿಭಾಗ, ಸಂಯೋಜಿತ ವೈದ್ಯಕೀಯ ಕಾಲೇಜು, ದಂತವೈದ್ಯಕಾಲೇಜು ಮತ್ತು ನರ್ಸಿಂಗ್ ಶಾಲೆಗಳನ್ನು ಉದ್ದೇಶಿತ ಆರೋಗ್ಯ ನಗರದಲ್ಲಿ ಸ್ಥಾಪಿಸಲಿದೆ ವೈದ್ಯಕೀಯ ವಿಶ್ವವಿದ್ಯಾಲಯವು 250 ಹಾಸಿಗೆ ಸಾಮರ್ಥ್ಯದ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಕೂಡ ಸ್ಥಾಪಿಸಲಿದೆ ಈ ಯೋಜನೆಯ ಒಟ್ಟಾರೆ ವೆಚ್ಚವು 283 ಕೋಟಿ ರೂ ಗಳಾಗಿದ್ದು ವೈದ್ಯಕೀಯ ವಿಶ್ವವಿದ್ಯಾಲಯವು ಮುಂದಿನ ಮೂರು ವರ್ಷಗಳಲ್ಲಿ 150 ಕೋಟಿ ರೂ ಗಳನ್ನು ವೆಚ್ಚ ಮಾಡಲಿವೆ ನಮ್ಮ ಸರ್ಕಾರವು ಮುಂದಿನ ಮೂರು ವರ್ಷಗಳಲ್ಲಿ 133 ಕೋಟಿ ರೂ ಗಳನ್ನು ಒದಗಿಸಲಿದೆ ಈ ಉದ್ದೇಶಕ್ಕಾಗಿ **2007-08ನೇ ಸಾಲಿನಲ್ಲಿ ನಾನು 43 ಕೋಟಿ ರೂ ಗಳನ್ನು** ಒದಗಿಸುತ್ತಿದ್ದೇನೆ

ಪ್ರಾಥಮಿಕ ಶಿಕ್ಷಣ.

'ವಿದ್ಯೆಯಿಂದ ವಿನಯ,
ವಿನಯದಿಂದ ಗೌರವ
ಗೌರವದಿಂದ ಧನ ಪ್ರಾಪ್ತಿ
ಧನದಿಂದ ಧರ್ಮಾಚರಣೆ
ತನ್ಮೂಲಕ ಸುಖ ಪ್ರಾಪ್ತಿ' - ಎಂದು ಸುಭಾಷಿತ ಸಾರುತ್ತದೆ

ಎಲ್ಲರೂ ವಿದ್ಯಾವಂತರಾಗಿ ಏಳಿಗೆ ಹೊಂದಬೇಕೆಂಬುದು ಸರ್ಕಾರದ ಆಶಯ ಆದ್ದರಿಂದ ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚು ಪ್ರಾಮುಖ್ಯತೆ ನೀಡಲಾಗಿದೆ

138 ಕರ್ನಾಟಕವು ಮೂಲ ಶಿಕ್ಷಣದ ಸಾರ್ವತ್ರೀಕರಣದಲ್ಲಿ ಗಣನೀಯ ಪ್ರಗತಿ ಸಾಧಿಸಿದೆ ರಾಜ್ಯದ ಶೇಕಡಾ 97ರಷ್ಟು ಜನಸಂಖ್ಯೆಯು ಒಂದು ಕಿಲೋ ಮೀಟರ್ ಅಂತರದಲ್ಲಿ ಪ್ರಾಥಮಿಕ ಶಾಲೆಯನ್ನು ಹೊಂದಿರುತ್ತದೆ ಒಂದರಿಂದ ಐದನೇ ತರಗತಿ ನಡುವೆ ಶಾಲೆ ಬಿಡುವ ಮಕ್ಕಳ ಪ್ರಮಾಣ ಅತ್ಯಲ್ಪವಾಗಿದೆ ಶಿಕ್ಷಕರ ನೇಮಕಾತಿಯ ಜೊತೆಗೆ ನಾವು ಶಿಕ್ಷಕರ ತರಬೇತಿ ಶಾಲೆಗಳನ್ನು ಸ್ಥಾಪಿಸಲು ಕೂಡ ಹೆಚ್ಚು ಒತ್ತು ನೀಡುತ್ತಿದ್ದೇವೆ

139 ಸರ್ವಶಿಕ್ಷಣ ಅಭಿಯಾನ ಯೋಜನೆಯು ಕೇಂದ್ರ ನೆರವಿನ ಯೋಜನೆಯಾಗಿದೆ ಈ ಯೋಜನೆಗಾಗಿ 2007-08ನೇ ಸಾಲಿನಿಂದ ರಾಜ್ಯಸರ್ಕಾರವು ಶೇ 50ರಷ್ಟು ವೆಚ್ಚವನ್ನು ಭರಿಸಬೇಕಾಗಿದ್ದು ಇದು ಈವರೆಗೆ ಶೇ 25ರಷ್ಟು ಮಾತ್ರ ಇತ್ತು ಆದ್ದರಿಂದ 2007-08ನೇ ಸಾಲಿಗೆ ನಾನು 700 ಕೋಟಿ ರೂ ಗಳನ್ನು ಸರ್ವಶಿಕ್ಷಣ ಅಭಿಯಾನ ಯೋಜನೆಗೆ ಒದಗಿಸಲು ಉದ್ದೇಶಿಸಿದ್ದೇನೆ

140 ನಮ್ಮ ಸರ್ಕಾರವು **'ವಿದ್ಯಾವಿಕಾಸ'** ಕಾರ್ಯಕ್ರಮವನ್ನು ಎಂಟರಿಂದ ಹತ್ತನೇ ತರಗತಿ ವಿದ್ಯಾರ್ಥಿಗಳಿಗೂ ಕೂಡ ವಿಸ್ತರಿಸಲು ಉದ್ದೇಶಿಸಿದೆ ಈ ಕಾರ್ಯಕ್ರಮದ ವಿಸ್ತರಣೆಯಿಂದ 4 70 ಲಕ್ಷ ವಿದ್ಯಾರ್ಥಿಗಳು ಉಚಿತ ಪಠ್ಯಪುಸ್ತಕ ಮತ್ತು ಸಮವಸ್ತ್ರಗಳ ಅನುಕೂಲ ಪಡೆಯಲಿದ್ದಾರೆ ಈ ಕಾರ್ಯಕ್ರಮಕ್ಕಾಗಿ ನಾನು 6 ಕೋಟಿ ರೂ ಗಳನ್ನು ನೀಡಲು ಉದ್ದೇಶಿಸಿದ್ದೇನೆ

141 ನಮ್ಮ ಸರ್ಕಾರವು **'ಅಕ್ಷರ ದಾಸೋಹ'** ಯೋಜನೆಯನ್ನು 2007-08ನೇ ಸಾಲಿನ ಶೈಕ್ಷಣಿಕ ವರ್ಷದಿಂದ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿನ ಎಂಟರಿಂದ ಹತ್ತನೇ ತರಗತಿ ವಿದ್ಯಾರ್ಥಿಗಳಿಗೂ ಕೂಡ ವಿಸ್ತರಿಸಲು ಉದ್ದೇಶಿಸಿದೆ ಇದರಿಂದ ಎಂಟರಿಂದ ಹತ್ತನೇ ತರಗತಿಯಲ್ಲಿ ಕಲಿಯುತ್ತಿರುವ ಸುಮಾರು 17 18 ಲಕ್ಷ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟ ದೊರೆಯಲಿದೆ

142 2007-08ನೇ ಸಾಲಿನಲ್ಲಿ ನಾನು ಸರ್ಕಾರಿ ಪ್ರೌಢಶಾಲೆ ಮತ್ತು ಪಿ ಯು ಕಾಲೇಜುಗಳಲ್ಲಿ **ಕೊಠಡಿಗಳ ನಿರ್ಮಾಣಕ್ಕಾಗಿ 70 ಕೋಟಿ** ರೂ ಗಳನ್ನು ಒದಗಿಸಲಿದ್ದೇನೆ

ಸಹಾಯಾನುದಾನದ ವಿಸ್ತರಣೆ

143 ದಿನಾಂಕ 01 06 1987 ರಿಂದ 01 07 1992ರ ವರೆಗಿನ ನಡುವೆ ಆರಂಭವಾಗಿರುವ ಪರಿಶಿಷ್ಟ ಜಾತಿ/ ಪಂಗಡಗಳ ಆಡಳಿತ ವರ್ಗಕ್ಕೆ ಸೇರಿದ ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ಸರ್ಕಾರಿ ಅನುದಾನಕ್ಕೆ ಒಳಪಡಿಸಲಾಗಿದೆ ಈ ಅನುದಾನ ಸೌಲಭ್ಯವನ್ನು ಶಿಕ್ಷಣ ಇಲಾಖೆಯು ನಿಗದಿಪಡಿಸಿರುವ ಷರತ್ತುಗಳನ್ನು ಪೂರೈಸಿರುವ ಸಾಮಾನ್ಯ ವರ್ಗಕ್ಕೆ ಸೇರಿದ ಆಡಳಿತ ಮಂಡಳಿಗಳ, 1992-93 ಮತ್ತು ಅದಕ್ಕೂ ಹಿಂದೆ ಆರಂಭವಾಗಿರುವ, ಪ್ರಾಥಮಿಕ, ಹೈಸ್ಕೂಲ್ ಮತ್ತು ಪಿ ಯು ಕಾಲೇಜುಗಳಿಗೂ ಕೂಡ ವಿಸ್ತರಿಸಲಾಗುವುದು

144 ವಿದ್ಯಾರ್ಥಿಗಳ ಪ್ರಗತಿ ಆಧರಿಸಿ ಅನುದಾನ ನೀಡುವ ನೂತನ ನೀತಿಯನ್ನು ಸರ್ಕಾರವು ಜಾರಿಗೊಳಿಸಲು ಉದ್ದೇಶಿಸಿದೆ ಈ ನೀತಿಯು 1993-94ನೇ ಶೈಕ್ಷಣಿಕ ವರ್ಷದಿಂದೀಚೆಗೆ ಆರಂಭವಾಗಿರುವ ಖಾಸಗಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಅನ್ವಯವಾಗುತ್ತದೆ ಈ ನೀತಿಯಿಂದ ಅನುದಾನಿತವಲ್ಲದ ಹಲವಾರು ಶಿಕ್ಷಣ ಸಂಸ್ಥೆಗಳಿಗೆ ಕಾರ್ಯಾಧಾರಿತ ಅನುದಾನವನ್ನು ಪಡೆಯುವ ಅವಕಾಶ ದೊರೆಯುತ್ತದೆ ಈ ಸಂಬಂಧ **ವಿವರವಾದ ಮಾರ್ಗದರ್ಶಿ ಸೂತ್ರಗಳನ್ನು ಹೊರಡಿಸಲಾಗುವುದು ಈ ಯೋಜನೆಯ ಅನುಷ್ಠಾನಕ್ಕಾಗಿ 50 ಕೋಟಿ ರೂ ಗಳನ್ನು ನಾನು ಹಂಚಿಕೆ ಮಾಡುತ್ತಿದ್ದೇನೆ**

145 ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಉತ್ತಮ ಗುಣಮಟ್ಟ ಸಾಧಿಸಲು ಪ್ರಸ್ತುತ ಜಾರಿಯಲ್ಲಿರುವ ಯೋಜನೆಗಳನ್ನು ಸರಿಯಾಗಿ ಉಸ್ತುವಾರಿ ಮಾಡುವುದು ಅಗತ್ಯವಾಗಿದೆ ಇದಕ್ಕಾಗಿ ಪ್ರತಿಯೊಂದು ಕ್ಲಸ್ಟರ್‌ನಲ್ಲಿರುವ ಒಂದು ಸರ್ಕಾರಿ ಪ್ರೌಢಶಾಲೆಯನ್ನು ಆಯ್ಕೆ ಮಾಡಿ ಅದನ್ನು ಎಲ್ಲಾ ರೀತಿಯ ಶೈಕ್ಷಣಿಕ ಚಟುವಟಿಕೆಗಳ ಕೇಂದ್ರವನ್ನಾಗಿ ರೂಪಿಸಲಾಗುವುದು ರಾಜ್ಯದಲ್ಲಿ 2,158 ಕ್ಲಸ್ಟರ್‌ಗಳಿದ್ದು, ಪ್ರತಿ ಕ್ಲಸ್ಟರ್‌ನಲ್ಲಿ ಆಯ್ಕೆಮಾಡುವ ಪ್ರೌಢಶಾಲೆಗೆ ಎಲ್ಲಾ ರೀತಿಯ ಮೂಲಸೌಕರ್ಯಗಳನ್ನು ಒದಗಿಸಲಾಗುವುದು ಹೀಗೆ ಆಯ್ಕೆಮಾಡಿದ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರನ್ನು ಕ್ಲಸ್ಟರ್ ಎಜುಕೇಷನ್ ಆಫೀಸರ್ ಎಂದು ನಿಯೋಜಿಸಿ ಹೆಚ್ಚಿನ ಜವಾಬ್ದಾರಿಯನ್ನು ನೀಡಲಾಗುವುದು ಶಿಕ್ಷಕರಿಗಾಗಿ ವಸತಿ ಗೃಹಗಳನ್ನು ಕೂಡ ಹಂತ ಹಂತವಾಗಿ ನಿರ್ಮಿಸಲಾಗುವುದು ಆರಂಭದಲ್ಲಿ ಶೈಕ್ಷಣಿಕವಾಗಿ ಹಿಂದುಳಿದ ಕೆಲವು ಬ್ಲಾಕ್‌ಗಳಲ್ಲಿ ಶಿಕ್ಷಕರ ವಸತಿ ಗೃಹಗಳನ್ನು ನಿರ್ಮಿಸಲಾಗುವುದು ಈ ಉದ್ದೇಶಕ್ಕಾಗಿ ನಾನು 19 ಕೋಟಿ ರೂ ಗಳನ್ನು ಮೀಸಲಿಡುತ್ತಿದ್ದೇನೆ

146 'ಎಜುಸ್ಯಾಟ್'-1 ಕಾರ್ಯಕ್ರಮವನ್ನು ಭಾರತ ಸರ್ಕಾರದ ಇಸ್ರೋದ ಸಹಯೋಗದೊಂದಿಗೆ ರಾಜ್ಯಾದ್ಯಂತ ಆಯ್ದ ಸರ್ಕಾರಿ ಉನ್ನತ ಪ್ರಾಥಮಿಕ ಶಾಲೆಗಳಿಗೆ ವಿಸ್ತರಿಸಲು ಉದ್ದೇಶಿಸಲಾಗಿದೆ ಈ ಉದ್ದೇಶಕ್ಕಾಗಿ 2 ಕೋಟಿ ರೂ ಗಳನ್ನು ನಾನು ಮೀಸಲಿಡುತ್ತಿದ್ದೇನೆ

147 ನಮ್ಮ ಸರ್ಕಾರವು ಶ್ರೀ ವೈದ್ಯನಾಥನ್ ಸಮಿತಿ ಶಿಫಾರಸ್ಸುಗಳ ಮೇರೆಗೆ ಶಾಲೆಗಳಲ್ಲಿ ದೈಹಿಕ ಶಿಕ್ಷಣ ಮತ್ತು ಯೋಗವನ್ನು ಆರಂಭಿಸಲು ಉದ್ದೇಶಿಸಿದೆ ಇದನ್ನು ಅನುಷ್ಠಾನಗೊಳಿಸಲು ನಾನು 2 ಕೋಟಿ ರೂ ಗಳನ್ನು

ಹಂಚಿಕೆ ಮಾಡುತ್ತಿದ್ದೇನೆ 2007-08ನೇ ಸಾಲಿನಲ್ಲಿ ಈ ಯೋಜನೆಯನ್ನು ರಾಜ್ಯದ ಅತೀ ಹೆಚ್ಚು ಹಿಂದುಳಿದ ತಾಲ್ಲೂಕುಗಳಲ್ಲಿ ಅನುಷ್ಠಾನಗೊಳಿಸಲಾಗುವುದು

148 ಇದರ ಜೊತೆಗೆ ರಾಜ್ಯದ ಅತೀ ಹೆಚ್ಚು ಹಿಂದುಳಿದ ತಾಲ್ಲೂಕುಗಳಲ್ಲಿ 200 ಹೊಸ ಸರ್ಕಾರಿ ಪ್ರೌಢ ಶಾಲೆಗಳು ಮತ್ತು 100 ಸರ್ಕಾರಿ ಪಿ ಯು ಕಾಲೇಜುಗಳನ್ನು 2007-08ನೇ ಸಾಲಿನಲ್ಲಿ ಆರಂಭಿಸಲು ಉದ್ದೇಶಿಸಲಾಗಿದೆ

ಉನ್ನತ ಶಿಕ್ಷಣ

149 ಇಂಜಿನಿಯರಿಂಗ್ ಕಾಲೇಜುಗಳಿಗೆ ಏರುತ್ತಿರುವ ಬೇಡಿಕೆಯನ್ನು ಗಮನದಲ್ಲಿಟ್ಟುಕೊಂಡು ನಾನು ಕುಶಾಲನಗರ, ರಾಯಚೂರು, ಚಾಮರಾಜನಗರ ಮತ್ತು ಬಳ್ಳಾರಿಗಳಲ್ಲಿರುವ ಪಾಲಿಟೆಕ್ನಿಕ್‌ಗಳನ್ನು ಇಂಜಿನಿಯರಿಂಗ್ ಕಾಲೇಜುಗಳಾಗಿ ಮೇಲ್ದರ್ಜೆಗೇರಿಸಲು ಉದ್ದೇಶಿಸಿದ್ದೇನೆ ಇದರ ಜೊತೆಗೆ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವು ತನ್ನ ಸಂಯೋಜಿತ ಇಂಜಿನಿಯರಿಂಗ್ ಕಾಲೇಜನ್ನು ಹಾಸನದಲ್ಲಿ ಆರಂಭಿಸಲಿದೆ ಈ ಎಲ್ಲಾ ಉದ್ದೇಶಗಳಿಗಾಗಿ 2007-08ನೇ ಸಾಲಿನಲ್ಲಿ 50 ಕೋಟಿ ರೂ ಗಳನ್ನು ಮೀಸಲಿಡುತ್ತಿದ್ದೇನೆ

150 ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಬೋಧನೆಯ ಗುಣಮಟ್ಟವನ್ನು ಟೆಕ್‌ವ್ಯೂಪ್ (**Tequip**) ಯೋಜನೆಯಡಿ ಮೇಲ್ದರ್ಜೆಗೇರಿಸಲಾಗುವುದು ಇದಕ್ಕಾಗಿ 2007-08ನೇ ಸಾಲಿನಲ್ಲಿ 70 ಕೋಟಿ ರೂ ಗಳನ್ನು ಹಂಚಿಕೆ ಮಾಡುತ್ತಿದ್ದೇನೆ

151 ಚಾಮರಾಜನಗರ, ಚಿಕ್ಕಮಗಳೂರು, ಕೆ ಆರ್ ಪೇಟೆ, ಮಂಗಳೂರು, ಚನ್ನಪಟ್ಟಣ, ಬಿಜಾಪುರ, ಬಳ್ಳಾರಿ, ಕಾರವಾರ ಮತ್ತು ಶಿಕಾರಿಪುರಗಳಲ್ಲಿನ ಪಾಲಿಟೆಕ್ನಿಕ್ ಕಾಲೇಜುಗಳ ಕಟ್ಟಡಗಳನ್ನು ಪೂರ್ಣಗೊಳಿಸಲಾಗುವುದು ಶಿಕಾರಿಪುರ ತಾಲ್ಲೂಕಿನ ಶಿರಾಳಕೊಪ್ಪದಲ್ಲಿ ಮಹಿಳಾ ಪಾಲಿಟೆಕ್ನಿಕ್‌ನ್ನು ಸ್ಥಾಪಿಸಲಾಗುವುದು ಈ ಉದ್ದೇಶಕ್ಕಾಗಿ 2007-08ನೇ ಸಾಲಿನಲ್ಲಿ 6 ಕೋಟಿ ರೂ ಗಳನ್ನು ಒದಗಿಸಲಿದ್ದೇನೆ

152 ಎಲ್ಲಾ ಪ್ರಥಮ ದರ್ಜೆ ಕಾಲೇಜುಗಳ ಕಟ್ಟಡ ನಿರ್ಮಾಣಕ್ಕಾಗಿ 2007-08ನೇ ಸಾಲಿನಲ್ಲಿ ನಾನು 45 ಕೋಟಿ ರೂ ಗಳನ್ನು ಒದಗಿಸಲು ಉದ್ದೇಶಿಸಿದ್ದೇನೆ

153 ರಾಜ್ಯದ 17 ಪ್ರಥಮ ದರ್ಜೆ ಕಾಲೇಜುಗಳಲ್ಲಿ ವಿಜ್ಞಾನ ಶಿಕ್ಷಣವನ್ನು ಆರಂಭಿಸಲಾಗುವುದು

154 ರಾಜಧರ್ಮ ಮತ್ತು ನ್ಯಾಯದರ್ಶನ ಇವು ನಮ್ಮ ಶ್ರೀಮಂತ ಸಾಂಸ್ಕೃತಿ ಪರಂಪರೆಗೆ ಹೊಸದಲ್ಲ ಹಳೆಯ ಪದ್ಧತಿಗಳನ್ನು ಅಧ್ಯಯನ ಮಾಡಿ ಪ್ರಸಕ್ತ ಪರಿಸ್ಥಿತಿಯ ಜೊತೆಗೆ ಹೋಲಿಕೆ ಮಾಡುವ ಅಗತ್ಯವಿದೆ ಇದು ನ್ಯಾಯಾಂಗ ಆಡಳಿತ ವಿಧಾನಕ್ಕೆ ಹೊಸತನವನ್ನು ನೀಡಲು ನೆರವಾಗಲಿದೆ ಇದಕ್ಕಾಗಿ ಗುಲ್ಬರ್ಗಾ ವಿಶ್ವವಿದ್ಯಾಲಯದಲ್ಲಿ ನ್ಯಾಯದರ್ಶನ ಮತ್ತು ರಾಜಧರ್ಮ ಅಧ್ಯಯನಕ್ಕಾಗಿ ಪೀಠವನ್ನು ಸ್ಥಾಪಿಸಲು 1 ಕೋಟಿ ರೂ ಗಳನ್ನು ಹಂಚಿಕೆ ಮಾಡುತ್ತಿದ್ದೇನೆ

155 ಕುಪ್ಪಂನಲ್ಲಿರುವ ದ್ರಾವಿಡಿಯನ್ ವಿಶ್ವವಿದ್ಯಾನಿಲಯದಲ್ಲಿ ತುಳು ಅಧ್ಯಯನ ಕೇಂದ್ರ ಸ್ಥಾಪಿಸಲು ನಾನು 10 ಲಕ್ಷ ರೂ ಗಳನ್ನು ನೀಡಲು ಉದ್ದೇಶಿಸಿದ್ದೇನೆ

156 ಮಂಗಳೂರು ವಿಶ್ವವಿದ್ಯಾಲಯದಲ್ಲಿ ಕೊಡವರ ಇತಿಹಾಸ ಅಧ್ಯಯನಕ್ಕಾಗಿ ಒಂದು ಪೀಠವನ್ನು ಸ್ಥಾಪಿಸಲು 25 ಲಕ್ಷ ರೂ ಗಳನ್ನು ನೀಡಲು ಉದ್ದೇಶಿಸಿದ್ದೇನೆ

157 ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ 'ಸೋಮವಂಶ ಸಹಸ್ರ ಅರ್ಜುನ ಕ್ಷತ್ರಿಯ'ರ ಅಧ್ಯಯನಕ್ಕಾಗಿ ಪೀಠ ಸ್ಥಾಪಿಸಲು 25 ಲಕ್ಷ ರೂ ಗಳನ್ನು ಹಂಚಿಕೆ ಮಾಡಲು ಉದ್ದೇಶಿಸಿದ್ದೇನೆ

158 ಹಂಪಿ ವಿಶ್ವವಿದ್ಯಾಲಯವು 'ಆಡಳಿತದಲ್ಲಿ ಕನ್ನಡ ಬಳಕೆ' ವಿಷಯದ ಬಗ್ಗೆ ಕೋರ್ಸ್‌ನ್ನು ಆರಂಭಿಸಲು ಉದ್ದೇಶಿಸಿದೆ ಸರ್ಕಾರಿ ಆಡಳಿತಗಾರರಿಗೆ ಈ ಕೋರ್ಸ್‌ನಿಂದ ಬಹಳ ಉಪಯೋಗವಾಗಲಿದೆ ಇದಕ್ಕಾಗಿ ನಾನು 50 ಲಕ್ಷ ರೂ ಗಳನ್ನು ಒದಗಿಸುತ್ತಿದ್ದೇನೆ

159 ಧಾರವಾಡ ಮತ್ತು ಮೈಸೂರಿನಲ್ಲಿ ಕನಕ ಅಧ್ಯಯನ ಪೀಠಗಳಿಗಾಗಿ ತಲಾ 1 ಕೋಟಿ ರೂ ಗಳ ಅನುದಾನ ಒದಗಿಸಲಾಗುವುದು

160 ಶಿವಮೊಗ್ಗದಲ್ಲಿರುವ ಕುವೆಂಪು ವಿಶ್ವವಿದ್ಯಾಲಯದಲ್ಲಿ ಕ್ರೀಡಾಂಗಣದ ನಿರ್ಮಾಣಕ್ಕಾಗಿ ನಾನು 2 ಕೋಟಿ ರೂ ಗಳನ್ನು ನೀಡಲು ಉದ್ದೇಶಿಸಿದ್ದೇನೆ

161 ಶಿವಮೊಗ್ಗ ಮತ್ತು ಗುಲ್ಬರ್ಗಾ ನಗರಗಳಲ್ಲಿ ಕಾನೂನು ಕಾಲೇಜುಗಳನ್ನು ಆರಂಭಿಸಲಾಗುವುದು

ಗ್ರಾಮೀಣಾಭಿವೃದ್ಧಿ

162 ಅಗತ್ಯ ಕನಿಷ್ಟ ಮೂಲ ಸೇವೆಗಳಲ್ಲಿ ಸುರಕ್ಷಿತ ಕುಡಿಯುವ ನೀರನ್ನು ಒದಗಿಸುವುದು ಅತೀ ಮುಖ್ಯವಾಗಿದೆ ನಾವು ಸುರಕ್ಷಿತ ಕುಡಿಯುವ ನೀರನ್ನು ಕೊಳವೆ ನೀರು ಸರಬರಾಜು, ಕಿರು ನೀರು ಸರಬರಾಜು ಮತ್ತು ಕೈಪಂಪಿನ ಕೊಳವೆಬಾವಿಗಳ ಮೂಲಕ ಒದಗಿಸುತ್ತಿದ್ದೇವೆ 2006-07ನೇ ಸಾಲಿನಲ್ಲಿ ಭಾರತ ಸರ್ಕಾರವು ಗ್ರಾಮೀಣ ಕುಡಿಯುವ ನೀರಿನ ಯೋಜನೆಗಳಿಗಾಗಿ 210 ಕೋಟಿ ರೂ ಗಳನ್ನು ಒದಗಿಸಿದೆ 2007-08ನೇ ಸಾಲಿನಲ್ಲಿ ನಾನು ಕುಡಿಯುವ ನೀರಿನ ಯೋಜನೆಗಳಿಗಾಗಿ 420 ಕೋಟಿ ರೂ ಗಳನ್ನು ಹಂಚಿಕೆ ಮಾಡುತ್ತಿದ್ದೇನೆ ಈ ಯೋಜನೆಗಳಿಗೆ ಅಗತ್ಯವಾದ ರಾಜ್ಯದ ಪಾಲಿನ ಹಣವನ್ನು ಒದಗಿಸಲಾಗುವುದು

163 **'ಸುವರ್ಣ ಗ್ರಾಮೋದಯ'** ಯೋಜನೆಯ ಪ್ರಥಮ ಹಂತದ ಗ್ರಾಮಗಳ ಆಯ್ಕೆ ಪೂರ್ಣಗೊಂಡಿದೆ 2007-08ನೇ ಸಾಲಿನಲ್ಲಿ ಈ ಯೋಜನೆಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು 350 ಕೋಟಿ ರೂ ಗಳನ್ನು ನಾನು ಒದಗಿಸುತ್ತಿದ್ದೇನೆ

164 'ಜಲನಿರ್ಮಲ ಯೋಜನೆ' ಅನುಷ್ಠಾನಕ್ಕೆ ನಾನು 2007-08ನೇ ಸಾಲಿನಲ್ಲಿ 311 ಕೋಟಿ ರೂ ಗಳನ್ನು ಹಂಚಿಕೆ ಮಾಡುತ್ತಿದ್ದೇನೆ '

ಸಾರಿಗೆ

165 ಕೈಗೆಟಕುವ ದರಗಳಲ್ಲಿ ಸಾರ್ವಜನಿಕರಿಗೆ ಸಾರಿಗೆ ಸೌಲಭ್ಯ ಒದಗಿಸುವುದು ನಮ್ಮ ಪ್ರಮುಖ ಉದ್ದೇಶಗಳಲ್ಲಿ ಒಂದಾಗಿದೆ 2007-08ನೇ ಸಾಲಿನಲ್ಲಿ ಸುಮಾರು 11 3 ಲಕ್ಷ ವಿದ್ಯಾರ್ಥಿಗಳು ರಿಯಾಯಿತಿ ದರದ ಪಾಸ್‌ನ ಸೌಲಭ್ಯವನ್ನು ಪಡೆಯುವ ನಿರೀಕ್ಷೆಯಿದೆ ಈ ವೆಚ್ಚದ ಶೇ 25 ರಷ್ಟನ್ನು ಸಾರಿಗೆ ನಿಗಮಗಳು, ಮತ್ತು ಶೇ 25 ರಷ್ಟನ್ನು ವಿದ್ಯಾರ್ಥಿಗಳು ಭರಿಸುತ್ತಾರೆ ಉಳಿಕೆ ಶೇ 50 ಸಹಾಯಧನವನ್ನು ಸರ್ಕಾರವು ಭರಿಸಲಿದ್ದು, ಈ ಉದ್ದೇಶಕ್ಕಾಗಿ ನಾನು 130 ಕೋಟಿ ರೂ ಗಳನ್ನು ಹಂಚಿಕೆ ಮಾಡುತ್ತಿದ್ದೇನೆ

166 ಎಲ್ಲಾ ಜಿಲ್ಲೆಗಳಲ್ಲಿ ವಾಹನ ಪರೀಕ್ಷಾ ಟ್ರಾಕ್‌ಗಳನ್ನು ಸ್ಥಾಪಿಸುವ ಕಾರ್ಯಕ್ರಮಕ್ಕೆ 2006-07ರಲ್ಲಿ ಚಾಲನೆ ನೀಡಲಾಗಿತ್ತು ಈ ಚಟುವಟಿಕೆಯನ್ನು ಮುಂದುವರಿಸಲು 2007-08ನೇ ಸಾಲಿನಲ್ಲಿ ನಾನು 5 ಕೋಟಿ ರೂ ಗಳನ್ನು ಮೀಸಲಿಡುತ್ತಿದ್ದೇನೆ

167 ಸಾರಿಗೆ ಇಲಾಖೆಯ ಆಧುನೀಕರಣಕ್ಕಾಗಿ ನಾನು 5 ಕೋಟಿ ರೂ ಗಳನ್ನು ಹಂಚಿಕೆ ಮಾಡಲಿದ್ದೇನೆ

168 ಪ್ರಾಂತೀಯ ಸಾರಿಗೆ ಅಧಿಕಾರಿಗಳ ಕಛೇರಿ ನಿರ್ಮಾಣಕ್ಕಾಗಿ ನಾನು 5 ಕೋಟಿ ರೂ ಗಳನ್ನು ನೀಡಲು ಉದ್ದೇಶಿಸಿದ್ದೇನೆ

169 ಟ್ರಕ್ ಟರ್ಮಿನಲ್‌ಗಳ ನಿರ್ಮಾಣಕ್ಕಾಗಿ ನಾನು 5 ಕೋಟಿ ರೂ ಗಳನ್ನು ಒದಗಿಸಲಿದ್ದೇನೆ

170 ಬೆಂಗಳೂರಿನಲ್ಲಿರುವ ಬಿಎಂಟಿಸಿ ಸಂಸ್ಥೆಯು ಉತ್ತಮ ಮೂಲಸೌಕರ್ಯಗಳನ್ನು ಹೊಂದಿರುತ್ತದೆ ಆದರೆ ಎನ್‌ಇಕೆಆರ್‌ಟಿಸಿ ಮತ್ತು ಎನ್‌ಡಬ್ಲ್ಯೂಕೆಆರ್‌ಟಿಸಿ ಸಂಸ್ಥೆಗಳ ವ್ಯಾಪ್ತಿಯಲ್ಲಿ ಬರುವ ಬಸ್ ನಿಲ್ದಾಣಗಳು ಮೂಲಸೌಕರ್ಯಗಳ ಕೊರತೆಯಿಂದ ಬಳಲುತ್ತಿವೆ ಈ ಬಸ್ ನಿಲ್ದಾಣಗಳ ಮೂಲಸೌಕರ್ಯ ಸುಧಾರಿಸಲು ನಾನು ಪ್ರಾಂತೀಯ ಅಸಮತೋಲನೆ ನಿವಾರಿಸಲು ಮೀಸಲಿಟ್ಟಿರುವ ವಿಶೇಷ ಅಭಿವೃದ್ಧಿ ಯೋಜನೆಯ ನಿಧಿಯಿಂದ 100 ಕೋಟಿ ರೂ ಗಳನ್ನು ಒದಗಿಸಲಿದ್ದೇನೆ

ಕಾರ್ಮಿಕ, ಉದ್ಯೋಗ ಮತ್ತು ತರಬೇತಿ

171 ಕೇರಳ ಸರ್ಕಾರದ ಮಾದರಿಯಲ್ಲಿ ನಮ್ಮ ಸರ್ಕಾರವೂ ಸಹ ದರ್ಜಿಗಳು, ಕುಂಬಾರರು, ಕಮ್ಮಾರರು, ಮಡಿವಾಳರು ಇತ್ಯಾದಿ ಅಸಂಘಟಿತ ಕಾರ್ಮಿಕರ ಕಲ್ಯಾಣಕ್ಕಾಗಿ ಒಂದು ಮಂಡಳಿಯನ್ನು ಸ್ಥಾಪಿಸಲು ಉದ್ದೇಶಿಸಿದೆ ಇದಕ್ಕಾಗಿ ನಾನು ಆರಂಭಿಕವಾಗಿ 3 ಕೋಟಿ ರೂ ಗಳನ್ನು ಮೀಸಲಿಡುತ್ತಿದ್ದೇನೆ

172 ಕಾರ್ಮಿಕ ಇಲಾಖೆಯ ಸಿಬ್ಬಂದಿಗಳಿಗೆ ತರಬೇತಿ ಒದಗಿಸಲು ಕರ್ನಾಟಕ ರಾಜ್ಯ ಕಾರ್ಮಿಕರ ಅಧ್ಯಯನ ಸಂಸ್ಥೆಯನ್ನು ರಾಷ್ಟ್ರೀಯ ಕಾನೂನು ಶಾಲೆ ಸಹಯೋಗದಲ್ಲಿ ಸ್ಥಾಪಿಸಲಾಗುವುದು

173 ಪ್ರಸ್ತುತ ರಾಜ್ಯದಲ್ಲಿ 636 ಖಾಸಗಿ ಐಟಿಐ ಗಳಿರುತ್ತವೆ ಇದರಲ್ಲಿ 124 ಐಟಿಐ ಗಳು ಅನುದಾನವನ್ನು ಪಡೆಯುತ್ತಿವೆ ಗುಣಮಟ್ಟದ ವೃತ್ತಿಶಿಕ್ಷಣ ತರಬೇತಿಯನ್ನು ಉತ್ತೇಜಿಸಲು ನಾನು **'ವಿದ್ಯಾರ್ಥಿ ಕೇಂದ್ರಿಕೃತ ಸಹಾಯಾನುದಾನ'** ನೂತನ ನೀತಿಯನ್ನು ಈವರೆಗೆ ಅನುದಾನ ಪಡೆಯದಿರುವ ಐಟಿಐಗಳಿಗಾಗಿ ಜಾರಿಗೊಳಿಸುತ್ತಿದ್ದೇನೆ ಈ ಯೋಜನೆಯ ವಿವರವಾದ ಮಾರ್ಗಸೂತ್ರಗಳನ್ನು ಶೀಘ್ರದಲ್ಲೇ ಹೊರಡಿಸಲಾಗುತ್ತದೆ. ಈ ಉದ್ದೇಶಕ್ಕಾಗಿ ನಾನು 10 ಕೋಟಿ ರೂ ಗಳನ್ನು ಒದಗಿಸುತ್ತಿದ್ದೇನೆ

174 ಹೊರದೇಶಗಳಲ್ಲಿ ಉದ್ಯೋಗಕ್ಕೆ ತೆರಳುವ ಕುಶಲ ಕೆಲಸಗಾರರಿಗೆ ವಿದೇಶಕ್ಕೆ ತೆರಳುವ ಮುನ್ನ ಸೂಕ್ತ ತರಬೇತಿ ನೀಡಲು ಒಂದು ತರಬೇತಿ ಯೋಜನೆ ರೂಪಿಸಲು ಉದ್ದೇಶಿಸಲಾಗಿದೆ ಇದರ ಜೊತೆಗೆ ವಿದೇಶಗಳಲ್ಲಿ ಕೆಲಸ ಮಾಡುತ್ತಿರುವ ರಾಜ್ಯದ ವ್ಯಕ್ತಿಗಳ ವಿವರ ಮತ್ತು ಅವರ ಕಲ್ಯಾಣವನ್ನು ನೋಡಿಕೊಳ್ಳಲು ಸಂಸ್ಥೆಯೊಂದನ್ನು ಸ್ಥಾಪಿಸಲಾಗುವುದು ಇದು ಕೇಂದ್ರ ಸರ್ಕಾರದ ನೆರವಿನ ಯೋಜನೆಯಾಗಿದ್ದು ರಾಜ್ಯದ ಪಾಲು ಶೇ 25 ರಷ್ಟಿರುತ್ತದೆ

175 ಅಸಂಘಟಿತ ವಲಯದ ಕಾರ್ಮಿಕರ ಕೌಶಲ್ಯ ವೃದ್ಧಿಸುವ ಸಲುವಾಗಿ ನಾನು 1 ಕೋಟಿ ರೂ ಗಳನ್ನು ಒದಗಿಸಲು ಉದ್ದೇಶಿಸಿದ್ದೇನೆ

176 ಅತೀ ಹೆಚ್ಚು ಹಿಂದುಳಿದ 39 ತಾಲ್ಲೂಕುಗಳ ಪೈಕಿ ಈಗಾಗಲೇ 15 ತಾಲ್ಲೂಕುಗಳಲ್ಲಿ ಸರ್ಕಾರಿ ಐಟಿಐಗಳು ಇರುತ್ತವೆ ಉಳಿದ ತಾಲ್ಲೂಕುಗಳಲ್ಲಿ ಐಟಿಐಗಳನ್ನು ಸ್ಥಾಪಿಸಲು ನಾನು ವಿಶೇಷ ಅಭಿವೃದ್ಧಿ ಯೋಜನೆಯಡಿ ಹಣವನ್ನು ನೀಡಲು ಉದ್ದೇಶಿಸಿದ್ದೇನೆ ಇದರ ಜೊತೆಗೆ ಹಲವಾರು ಮಹಿಳೆಯರು ವೃತ್ತಿ ಶಿಕ್ಷಣ ತರಬೇತಿಯನ್ನು ಬಯಸುತ್ತಿದ್ದು ಇವರಿಗಾಗಿ 2007-08ನೇ ಸಾಲಿನಲ್ಲಿ ಎಂಟು ನೂತನ ಸರ್ಕಾರಿ ಮಹಿಳಾ ಐಟಿಐಗಳನ್ನು ಸ್ಥಾಪಿಸಲು ಉದ್ದೇಶಿಸಿದ್ದೇನೆ

177 ಅಸಂಘಟಿತ ವಲಯದಲ್ಲಿ ದುಡಿಯುತ್ತಿರುವ ಮಹಿಳೆಯರ ಹಿತಾಸಕ್ತಿ ರಕ್ಷಿಸಲು ನಾನು ಮಹಿಳಾ ಹಕ್ಕು ತರಬೇತಿ ಮತ್ತು ಸುರಕ್ಷಾ ಉಸ್ತುವಾರಿ ಕೇಂದ್ರವನ್ನು ಸ್ಥಾಪಿಸಲು ಉದ್ದೇಶಿಸಿದ್ದೇನೆ

ಲೋಕೋಪಯೋಗಿ

178 ನಮ್ಮ ರಾಜ್ಯದಲ್ಲಿ ಅತ್ಯುತ್ತಮವಾಗಿ ಅಭಿವೃದ್ಧಿ ಹೊಂದಿರುವ ಜಲಮಾರ್ಗ ಮತ್ತು ವಾಯುಮಾರ್ಗ ವ್ಯವಸ್ಥೆ ಇಲ್ಲದೇ ಇರುವುದರಿಂದ ಭೂಮಾರ್ಗದ ರಸ್ತೆಗಳೇ ನಮ್ಮ ರಾಜ್ಯದ ಜೀವನಾಡಿಗಳಾಗಿವೆ ಅತ್ಯುತ್ತಮವಾಗಿ ನಿರ್ಮಿಸಿರುವ ಮತ್ತು ಉತ್ತಮವಾಗಿ ನಿರ್ವಹಿಸಿರುವ ರಸ್ತೆಗಳು, ಆರ್ಥಿಕ ಚಟುವಟಿಕೆಯನ್ನು ಉತ್ತೇಜಿಸುತ್ತವೆ ಸಮಾನ ಆರ್ಥಿಕ ಬೆಳವಣಿಗೆಗೆ ದಾರಿ ಮಾಡಿಕೊಡುತ್ತವೆ ನಮ್ಮ ಸಾರ್ವಜನಿಕ ಆಸ್ತಿಗಳನ್ನು ಕಾಪಾಡಿಕೊಂಡು ಅವುಗಳಿಂದ ಗರಿಷ್ಟ ಪ್ರತಿಫಲ ಪಡೆಯಲು ನಮ್ಮ ರಸ್ತೆಗಳನ್ನು ಉತ್ತಮ ಸ್ಥಿತಿಯಲ್ಲಿಟ್ಟುಕೊಳ್ಳುವುದು ಮುಖ್ಯವಾಗಿದೆ ಈ ನಿಟ್ಟಿನಲ್ಲಿ ನಾನು ಜಿಲ್ಲಾ ಪ್ರಮುಖ ರಸ್ತೆಗಳ ಉತ್ತಮ ನಿರ್ವಣೆಗಾಗಿ

2006-07ನೇ ಸಾಲಿನಲ್ಲಿ ಮೀಸಲಿಟ್ಟಿದ್ದ 132 71 ಕೋಟಿ ರೂ ಗಳ ಹಂಚಿಕೆಯನ್ನು 2007-08ನೇ ಸಾಲಿನಲ್ಲಿ 300 ಕೋಟಿ ರೂ ಗಳಿಗೆ ಹೆಚ್ಚಿಸುತ್ತಿದ್ದೇನೆ ಪ್ರಮುಖ ಜಿಲ್ಲಾ ರಸ್ತೆಗಳ ನಿರ್ಮಾಣಕ್ಕಾಗಿ ನಾನು 2007-08ನೇ ಸಾಲಿನಲ್ಲಿ 111 8 ಕೋಟಿ ರೂ ಗಳನ್ನು ಮೀಸಲಿಡುತ್ತಿದ್ದು, ಇದು 2006-07ನೇ ಸಾಲಿನ 81 16 ಕೋಟಿ ರೂ ಗಳಿಗಿಂತ ಹೆಚ್ಚಾಗಿರುತ್ತದೆ

179 ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದ (ಕೆಆರ್‌ಡಿಸಿಎಲ್) ಮೂಲಕ ರಾಜ್ಯದ ಹೆದ್ದಾರಿಗಳನ್ನು ಮುಂದಿನ ಮೂರು ವರ್ಷಗಳಲ್ಲಿ 450 ಕೋಟಿ ರೂ ಗಳ ವೆಚ್ಚದಲ್ಲಿ ಮೇಲ್ದರ್ಜೆಗೇರಿಸಲು ಉದ್ದೇಶಿಸಲಾಗಿದೆ ಈ ಯೋಜನೆಯು 2007-08 ರಲ್ಲಿ ಪೂರ್ಣಗೊಳ್ಳಲಿದ್ದು, ಕಾಮಗಾರಿಗಳ ಬಾಕಿ ಹಣ ಪಾವತಿಗಾಗಿ ನಾನು 108 ಕೋಟಿ ರೂ ಗಳನ್ನು ಮೀಸಲಿಡುತ್ತಿದ್ದೇನೆ ಈ ಯೋಜನೆಯ ದಕ್ಷತೆಯನ್ನು ಆಧರಿಸಿ ಮುಂದಿನ ದಿನಗಳಲ್ಲಿ ರಾಜ್ಯ ಹೆದ್ದಾರಿಯ ನಿರ್ವಹಣೆ ಮತ್ತು ಮೇಲ್ದರ್ಜೆ ಕಾಮಗಾರಿಗಳ ಬಗ್ಗೆ ಮುಂದಿನ ನಿರ್ಧಾರಗಳನ್ನು ತೆಗೆದುಕೊಳ್ಳಲಿದ್ದೇವೆ

180 ಈ ಹಿಂದಿನ ವರ್ಷಗಳಲ್ಲಿ ಸಾಕಷ್ಟು ದೂರದ ಪ್ರಮುಖ ಜಿಲ್ಲಾ ರಸ್ತೆಗಳನ್ನು ರಾಜ್ಯ ಹೆದ್ದಾರಿಯೆಂದು ಘೋಷಿಸಲಾಗಿದೆ ಇದೀಗ ಈ ರಸ್ತೆಗಳನ್ನು ರಾಜ್ಯ ಹೆದ್ದಾರಿಯ ಮಟ್ಟಕ್ಕೆ ತರಲು ರಸ್ತೆಗಳನ್ನು ಅಗಲೀಕರಿಸಿ ಮೇಲ್ದರ್ಜೆಗೇರಿಸುವುದು ಅತಿ ಮುಖ್ಯವಾಗಿದೆ ಕರ್ನಾಟಕ ರಾಜ್ಯ ಹೆದ್ದಾರಿ ಸುಧಾರಣಾ ಯೋಜನೆಯಡಿಯಲ್ಲಿ ರಾಜ್ಯ ಹೆದ್ದಾರಿಗಳ ಗುಣಮಟ್ಟ ಸುಧಾರಣೆಗೆ ಸಾಕಷ್ಟು ಶ್ರಮಿಸಲಾಗಿದೆ ಈ ಯೋಜನೆಯಲ್ಲಿ ಬಾಕಿ ಉಳಿದಿರುವ ಕಾಮಗಾರಿಗಳನ್ನು ಪೂರ್ಣಗೊಳಿಸಲು ಅನುವಾಗುವಂತೆ ನಾನು 2007-08ರಲ್ಲಿ 251 ಕೋಟಿ ರೂ ಗಳನ್ನು ಹಂಚಿಕೆ ಮಾಡುತ್ತಿದ್ದೇನೆ ವಿದೇಶಿ ನೆರವಿನ ಮೂಲಕ ಕರ್ನಾಟಕ ರಾಜ್ಯ ಹೆದ್ದಾರಿ ಸುಧಾರಣಾ ಯೋಜನೆ-2ನ್ನು ಕೈಗೆತ್ತಿಕೊಳ್ಳಲು ರಾಜ್ಯವು ಯೋಚಿಸುತ್ತಿದೆ ಈ ಯೋಜನೆಯನ್ನು 2007-08 ರಲ್ಲಿ ಕಾರ್ಯಾಚರಣೆಗೊಳಿಸಲು ಅಗತ್ಯವಿರುವ ಕ್ರಮಗಳನ್ನು ಕೈಗೊಳ್ಳಲಾಗುವುದು ಯೋಜನೆ ಮಂಜೂರಾದ ನಂತರ ಆಯವ್ಯಯ ಬೆಂಬಲವನ್ನು ನೀಡಲಾಗುವುದು

181 ಕೆಆರ್‌ಡಿಸಿಎಲ್ ಸಂಸ್ಥೆಯು ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವದಲ್ಲಿ ರಾಜ್ಯದ ಹೆದ್ದಾರಿಗಳ ಮೇಲ್ದರ್ಜೆ, ಸೇತುವೆ ಮತ್ತು ರಸ್ತೆ ಕಾಮಗಾರಿಯನ್ನು ಕೈಗೆತ್ತಿಕೊಳ್ಳುತ್ತಿದೆ ಈ ಕಾಮಗಾರಿಗಳನ್ನು ಶೀಘ್ರವಾಗಿ

ಪೂರ್ಣಗೊಳಿಸುವುದರಿಂದ ರಾಜ್ಯದ ಆರ್ಥಿಕತೆಗೆ ಉತ್ತೇಜನ ದೊರೆಯಲಿದೆ ಈ ಉದ್ದೇಶದಿಂದ ನಾನು ಕೆಆರ್‌ಡಿಸಿಎಲ್‌ನ ಬಂಡವಾಳ ಕಾಮಗಾರಿಗಳಿಗಾಗಿ ಹಂಚಿಕೆಯನ್ನು 2006-07ರಲ್ಲಿನ 200 ಕೋಟಿ ರೂ ಗಳಿಂದ 2007-08ರಲ್ಲಿ 300 ಕೋಟಿ ರೂ ಗಳಿಗೆ ಹೆಚ್ಚಿಸುತ್ತಿದ್ದೇನೆ

182 ಕಳೆದ ವರ್ಷ ನಾವು ಬೆಂಗಳೂರು ನಗರದ ಸುತ್ತಮುತ್ತಲಿನ ರಸ್ತೆ ಸಂಚಾರವನ್ನು ಸುಗಮಗೊಳಿಸಲು ಮೂರು ವರ್ಷಗಳ ಕಾಲಮಿತಿಯನ್ನಿಟ್ಟುಕೊಂಡು 600 ಕೋಟಿ ರೂಪಾಯಿಗಳ ಯೋಜನೆಯನ್ನು ಕೈಗೆತ್ತಿಕೊಂಡಿದ್ದೆವು ಈ ಯೋಜನೆಗಾಗಿ 2006-07ನೇ ಸಾಲಿನಲ್ಲಿ 200 ಕೋಟಿ ರೂ ಗಳನ್ನು ಒದಗಿಸಲಾಗಿತ್ತು ಈ ಯೋಜನೆಯನ್ನು ಮುಂದುವರೆಸಲು 2007-08ನೇ ಸಾಲಿನಲ್ಲಿ ಕೂಡ ನಾನು 200 ಕೋಟಿ ರೂ ಗಳನ್ನು ಒದಗಿಸಲು ಉದ್ದೇಶಿಸಿದ್ದೇನೆ

183 ಮೇಲೆ ಹೇಳಿದ ಎಲ್ಲಾ ರಸ್ತೆ ಕಾಮಗಾರಿಗಳ ಜೊತೆಗೆ, ಗ್ರಾಮೀಣ ಮೂಲ ಸೌಕರ್ಯ ಮತ್ತು ಅಭಿವೃದ್ಧಿ ನಿಧಿಯಿಂದ ಕೈಗೆತ್ತಿಕೊಂಡಿರುವ ಕಾಮಗಾರಿಗಳನ್ನು ಸಹ ಶೀಘ್ರದಲ್ಲೇ ಪೂರ್ಣಗೊಳಿಸಲಾಗುವುದು ನಾನು ಈ ಕಾಮಗಾರಿಗಳಿಗಾಗಿ 2006-07ರಲ್ಲಿ ನಿಗದಿಪಡಿಸಿದ್ದ 135 ಕೋಟಿ ರೂ ಗಳ ಹಂಚಿಕೆಯನ್ನು ಮೀರಿ ಹೆಚ್ಚುವರಿಯಾಗಿ 150 ಕೋಟಿ ರೂ ಗಳನ್ನು ಒದಗಿಸಿದ್ದೇನೆ ಈಗ 2007-08ನೇ ಸಾಲಿನಲ್ಲಿ ಈ ಕಾಮಗಾರಿಗಳಿಗಾಗಿ 135 ಕೋಟಿ ರೂ ಗಳನ್ನು ಮೀಸಲಿಡುತ್ತಿದ್ದೇನೆ

184 ನಾನು ಕಳೆದ ಆಯವ್ಯಯ ಭಾಷಣದಲ್ಲಿ ಹಾಸನ ನಗರದ ವರ್ತುಲ ರಸ್ತೆಯನ್ನು ಅಭಿವೃದ್ಧಿ ಪಡಿಸುವ ಅಗತ್ಯದ ಬಗ್ಗೆ ಹೇಳಿದ್ದೆ ಈ ಸಂಬಂಧ ಪ್ರಾಥಮಿಕ ಅಧ್ಯಯನ ನಡೆಸಿದ್ದು, 2007-08ನೇ ಸಾಲಿನಲ್ಲಿ ಈ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ನಾನು 50 ಕೋಟಿ ರೂ ಗಳನ್ನು ನಿಗದಿಪಡಿಸುತ್ತಿದ್ದೇನೆ

185 ದಕ್ಷ ಹಾಗೂ ಪರಿಣಾಮಕಾರಿ ಸಾರ್ವಜನಿಕ ಸೇವೆಯನ್ನು ಒದಗಿಸಲು ಉತ್ತಮ ಸಾರ್ವಜನಿಕ ಕಟ್ಟಡಗಳ ಅವಶ್ಯಕತೆ ಇದೆ ಈ ಹಿನ್ನೆಲೆಯಲ್ಲಿ ಸಾರ್ವಜನಿಕ ಕಟ್ಟಡಗಳ ನಿರ್ಮಾಣದ ಕಾರ್ಯಕ್ರಮಕ್ಕೆ ಹೆಚ್ಚು ಒತ್ತು ನೀಡಲು ನಾನು 2006-07ನೇ ಸಾಲಿನಲ್ಲಿದ್ದ 101 ಕೋಟಿ ರೂ ಗಳ ಅನುದಾನವನ್ನು 2007-08ರಲ್ಲಿ 190 ಕೋಟಿ ರೂ ಗಳಿಗೆ ಹೆಚ್ಚಿಸಿದ್ದೇನೆ

186 ಈ ಎಲ್ಲಾ ಕಾಮಗಾರಿಗಳ ಜೊತೆಗೆ 12ನೇ ಹಣಕಾಸು ಆಯೋಗದ ಅನುದಾನದ ಅಡಿಯಲ್ಲಿ ರಸ್ತೆ ಮತ್ತು ಕಟ್ಟಡ ನಿರ್ವಹಣೆಯನ್ನು ಕೈಗೆತ್ತಿಕೊಳ್ಳಲು 2007-08ರಲ್ಲಿ ರಸ್ತೆಗಳಿಗಾಗಿ 146 15 ಕೋಟಿ ಮತ್ತು ಕಟ್ಟಡ ನಿರ್ವಹಣೆಗೆ 13 20 ಕೋಟಿ ರೂ ಗಳನ್ನು ಒದಗಿಸುತ್ತಿದ್ದೇನೆ

187 ಮೇಲೆ ಹೇಳಿದ ಹಂಚಿಕೆಗಳ ಜೊತೆಗೆ ಆರೋಗ್ಯ, ಶಿಕ್ಷಣ ಮತ್ತು ಸಮಾಜ ಕಲ್ಯಾಣ ವಲಯಗಳಲ್ಲಿನ ಕಟ್ಟಡ ನಿರ್ಮಾಣಗಳಿಗೆ ಹಣವನ್ನು ಒದಗಿಸಲಾಗಿದೆ ಎನ್ನುವ ವಿಷಯವನ್ನು ಮಾನ್ಯ ಸದಸ್ಯರುಗಳ ಗಮನಕ್ಕೆ ತರಲು ಬಯಸುತ್ತೇನೆ

188 2007-08ನೇ ಸಾಲಿನಲ್ಲಿ ಲೋಕೋಪಯೋಗಿ ಇಲಾಖೆಗೆ ಒಟ್ಟು 2253 ಕೋಟಿ ರೂ ಗಳು ಹಂಚಿಕೆಯಾಗಿರುತ್ತದೆ

ವಾರ್ತೆ

189 ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಸಮುದಾಯ ಅಭಿವೃದ್ಧಿಗೆ ಅಗತ್ಯವಾದ ಮಾಹಿತಿಯನ್ನು ಬಿತ್ತರಿಸಲು ಸಮುದಾಯ ರೇಡಿಯೋ ಕೇಂದ್ರಗಳ ಸ್ಥಾಪನೆಗೆ ಉತ್ತೇಜನ ನೀಡಲು ಸರ್ಕಾರವು ಉದ್ದೇಶಿಸಿದೆ ಈ ನಿಟ್ಟಿನಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಸಮುದಾಯ ರೇಡಿಯೋ ಕೇಂದ್ರಗಳನ್ನು ಸ್ಥಾಪಿಸಲು ಮುಂದೆ ಬರುವ ಸ್ವಯಂ ಸೇವಾ ಸಂಸ್ಥೆಗಳು, ಶಿಕ್ಷಣ ಸಂಸ್ಥೆಗಳಿಗೆ ಸಹಾಯಧನ ನೀಡಲು **'ನಮ್ಮ ಬಾನುಲಿ'** ಎನ್ನುವ ನೂತನ ಯೋಜನೆಯನ್ನು ಆರಂಭಿಸಲಾಗಿದೆ 2007-08ನೇ ಸಾಲಿನಲ್ಲಿ ರಾಜ್ಯದ ನಾಲ್ಕು ಕಂದಾಯ ವಲಯಗಳಲ್ಲಿ ಒಟ್ಟು 12 ಸಮುದಾಯ ರೇಡಿಯೋ ಕೇಂದ್ರಗಳನ್ನು ಸ್ಥಾಪಿಸಲು ನಾನು 1 80 ಕೋಟಿ ರೂ ಗಳನ್ನು ಮೀಸಲಿಟ್ಟಿದ್ದೇನೆ

190 ನಮ್ಮ ಸರ್ಕಾರವು ಹಿರಿಯ ಪತ್ರಕರ್ತರ ಭದ್ರತೆಗಾಗಿ ನಿಧಿಯೊಂದನ್ನು ಸ್ಥಾಪಿಸಲು ಉದ್ದೇಶಿಸಿದೆ ಇದಕ್ಕಾಗಿ ನಾನು 50 ಲಕ್ಷ ರೂ ಗಳನ್ನು 2007-08ನೇ ಸಾಲಿನಲ್ಲಿ ಮೀಸಲಿಡುತ್ತಿದ್ದೇನೆ

191 ತ್ವರಿತವಾಗಿ ಬದಲಾಗುತ್ತಿರುವ ಸಮೂಹ ಮಾಧ್ಯಮಗಳ ಸ್ವರೂಪಕ್ಕೆ ಅನುಗುಣವಾಗಿ ಸರ್ಕಾರದ ಜಾಹೀರಾತು ನೀತಿ ಕೂಡ ಬದಲಾಗಬೇಕಿರುತ್ತದೆ ಈ ಹಿನ್ನೆಲೆಯಲ್ಲಿ ಕನ್ನಡ ಭಾಷಾ ಪತ್ರಿಕೆಗಳು ಅದರಲ್ಲೂ ವಿಶೇಷವಾಗಿ ಜಿಲ್ಲಾ ಮಟ್ಟದ ಸಣ್ಣ ಪತ್ರಿಕೆಗಳ ಹಿತ ಕಾಪಾಡುವಂತಹ **'ನೂತನ ಜಾಹೀರಾತು ನೀತಿ'**ಯನ್ನು ರೂಪಿಸಲು ನಾನು ಉದ್ದೇಶಿಸಿದ್ದೇನೆ

192 ಕನ್ನಡ ಚಲನ ಚಿತ್ರೋದ್ಯಮಕ್ಕೆ ಪ್ರವೇಶಿಸುವ ಹೊಸ ಪ್ರತಿಭೆಗಳಿಗೆ, ಕನ್ನಡದ ಕಥೆ, ಕಾದಂಬರಿ ಆಧಾರಿತ ಕನ್ನಡ ಚಲನ ಚಿತ್ರಗಳಿಗೆ, ಹೊಸ ಅಲೆಯ ಚಿತ್ರಗಳಿಗೆ ಹಾಗೂ ಆಧುನಿಕ ತಂತ್ರಜ್ಞಾನವಾದ ಡಿಜಿಟಲ್ ಚಲನ ಚಿತ್ರಗಳಿಗೆ ಪ್ರೋತ್ಸಾಹ ನೀಡಲು ಅನುಕೂಲವಾಗುವಂತೆ **'ನೂತನ ಕನ್ನಡ ಚಲನ ಚಿತ್ರ ನೀತಿ'**ಯನ್ನು ರೂಪಿಸಲು ನಾನು ಉದ್ದೇಶಿಸಿದ್ದೇನೆ

193 ಟೆಲಿವಿಷನ್ ಮಾಧ್ಯಮವು ಸಮಾಜದ ಮೇಲೆ ಗಾಢ ಪ್ರಭಾವವನ್ನು ಬೀರುತ್ತಿದೆ ಈ ಹಿನ್ನೆಲೆಯಲ್ಲಿ ಕಿರುತೆರೆಯಲ್ಲಿ ಪ್ರಸಾರವಾಗುವ ಉತ್ತಮ ಗುಣಮಟ್ಟದ ಕಾರ್ಯಕ್ರಮಗಳಿಗೆ ಹಾಗೂ ಪ್ರತಿಭಾವಂತ ಕಲಾವಿದರಿಗೆ, ತಂತ್ರಜ್ಞರಿಗೆ ಪ್ರಶಸ್ತಿ ನೀಡಲು ಉದ್ದೇಶಿಸಲಾಗಿದೆ 2007-08ನೇ ಸಾಲಿನಿಂದಲೇ ಈ ಪ್ರಶಸ್ತಿಗಳನ್ನು ನೀಡಲಾಗುವುದು

ಪ್ರವಾಸೋದ್ಯಮ

194 ಕರ್ನಾಟಕ ಪ್ರವಾಸೋದ್ಯಮವು ವೇಗದ ಹಳಿಯ ಮೇಲಿದ್ದು, ಪ್ರವಾಸೋದ್ಯಮ ಚಟುವಟಿಕೆಗಳು ಚುರುಕುಗೊಂಡಿವೆ 2005-06ನೇ ಸಾಲಿಗೆ ಹೋಲಿಸಿದರೆ ಕರ್ನಾಟಕಕ್ಕೆ ಭೇಟಿ ನೀಡಿದ ಪ್ರವಾಸಿಗರ ಸಂಖ್ಯೆಯಲ್ಲಿ ಶೇ 40ರಷ್ಟು ಏರಿಕೆಯಾಗಿದೆ

195 ಪ್ರವಾಸೋದ್ಯಮವನ್ನು ಉತ್ತೇಜಿಸಲು ನಾವು ನಾಲ್ಕು ಮುಖ್ಯ ಪ್ರವಾಸಿ ಮಾರ್ಗಗಳನ್ನು ಗುರುತಿಸಿದ್ದೇವೆ

- ಬೇಲೂರು-ಹಳೆಬೀಡು-ಶ್ರವಣಬೆಳಗೊಳ-ಮಡಿಕೇರಿ-ಮೈಸೂರು ಶ್ರೀರಂಗಪಟ್ಟಣ-ಸೋಮನಾಥಪುರ-ಶಿಂಷಾ
- ಶಿವಮೊಗ್ಗ-ತೀರ್ಥಹಳ್ಳಿ-ಆಗುಂಬೆ-ಜೋಗ್-ಮಂಗಳೂರು
- ಹಂಪಿ-ಬಾದಾಮಿ-ಐಹೊಳೆ-ಪಟ್ಟದಕಲ್ಲು-ಕೂಡಲಸಂಗಮ-ಬಿಜಾಪುರ
- ಮಂಗಳೂರು-ಉಡುಪಿ-ಧರ್ಮಸ್ಥಳ-ಕೊಲ್ಲೂರು-ಮರವಂತೆ-ಮುರುಡೇಶ್ವರ- ಗೋಕರ್ಣ

196 ಪ್ರತೀ ಸರ್ಕ್ಯೂಟ್‌ನಲ್ಲಿ ಎರಡು ಸ್ಥಳ ಆಯ್ಕೆ ಮಾಡಿ ಅಲ್ಲಿ ಪ್ರವಾಸಿಗರಿಗೆ ಖಾಸಗಿ-ಸಾರ್ವಜನಿಕ ಸಹಭಾಗಿತ್ವದಲ್ಲಿ ಮೂಲಸೌಕರ್ಯ ಗಳನ್ನು ಕಲ್ಪಿಸಲು ನಮ್ಮ ಸರ್ಕಾರವು ಉದ್ದೇಶಿಸಿದೆ ಈ ನಿಟ್ಟಿನಲ್ಲಿ ಖಾಸಗಿ-ಸಾರ್ವಜನಿಕ ಪ್ರವಾಸಿ ಚಟುವಟಿಕೆಗಳಿಗೆ ಚಾಲನೆ ನೀಡಲು

ಪಟ್ಟದಕಲ್ಲು, ಬೇಲೂರು, ಮರವಂತೆ, ಕೊಡಚಾದ್ರಿ, ತಲಕಾಡು ಇಲ್ಲಿ ಈಗಾಗಲೇ ಸರ್ಕಾರಿ ಜಾಗವನ್ನು ಗುರುತಿಸಲಾಗಿದೆ ಹಂಪಿ, ಬಿಜಾಪುರ ಮತ್ತು ಹೊರನಾಡಿನಲ್ಲಿ ಸೂಕ್ತ ಸ್ಥಳಕ್ಕಾಗಿ ಪರಿಶೀಲನೆ ನಡೆದಿದೆ ಈ ಖಾಸಗಿ-ಸಾರ್ವಜನಿಕ ಸಹಭಾಗಿತ್ವದ ಯೋಜನೆಯನ್ನು ಅನುಷ್ಠಾನಗೊಳಿಸುವಾಗ ಕೊರತೆ ಬೀಳಬಹುದಾದ ನಿಧಿಯನ್ನು ಸರ್ಕಾರದ ವತಿಯಿಂದ ಭರಿಸಲಾಗುವುದು ಈ ಯೋಜನೆಗಳಿಗೆ ಕೆಎಸ್ಐಐಡಿಸಿ ನೋಡಲ್ ಏಜೆನ್ಸಿಯಾಗಿರುತ್ತದೆ 2007-08ನೇ ಸಾಲಿನಲ್ಲಿ ನಾನು 50 ಕೋಟಿ ರೂ ಗಳನ್ನು ಸಾಮರ್ಥ್ಯ ಕೊರತೆ ನಿಧಿಗಾಗಿ ನೀಡಲು ಉದ್ದೇಶಿಸಿದ್ದೇನೆ

197 ನಮ್ಮ ಸರ್ಕಾರವು ಅಕ್ವಾಮೆರೈನ್ ಪಾರ್ಕ್, ಗಾಲ್ಫ್ ಕ್ಲಬ್ ಹಾಗೂ ಮಂಗಳೂರು ಸಮೀಪದಲ್ಲಿರುವ ತಣ್ಣೀರು ಬಾವಿ ಮತ್ತು ಸುಲ್ತಾನ್ಬತ್ತೇರಿ ನಡುವೆ ರೋಪ್ವೇಗಳನ್ನು ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿ ಪಡಿಸಲು ಉದ್ದೇಶಿಸಿದೆ ಈ ಕಾರ್ಯವನ್ನು ಕೆಎಸ್ಐಐಡಿಸಿಗೆ ವಹಿಸಲಾಗುವುದು ಯೋಜನೆ ಅನುಷ್ಠಾನಗೊಳಿಸುವಲ್ಲಿ ಕೊರತೆ ಬೀಳಬಹುದಾದ ಹಣ ಭರಿಸಲು 2007-08ನೇ ಸಾಲಿನಲ್ಲಿ 20 ಕೋಟಿ ರೂ ಗಳನ್ನು ಹಂಚಿಕೆ ಮಾಡಲು ಉದ್ದೇಶಿಸಿದ್ದೇನೆ ನಂದಿಬೆಟ್ಟ ಮತ್ತು ಕೆಮ್ಮಣ್ಣುಗುಂಡಿಗಳಲ್ಲಿರುವ ನಮ್ಮ ಪ್ರಮುಖ ಗಿರಿಧಾಮಗಳನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿ ಪಡಿಸುವುದು ಅಗತ್ಯವಾಗಿದೆ ಈ ಉದ್ದೇಶಕ್ಕಾಗಿ ನಾನು 25 ಕೋಟಿ ರೂ ಗಳನ್ನು ಹಂಚಿಕೆ ಮಾಡುತ್ತಿದ್ದೇನೆ ಖಾಸಗಿ ಹೂಡಿಕೆದಾರರನ್ನು ಗುರುತಿಸುವ ಕಾರ್ಯವನ್ನು ಕೆಎಸ್ಐಐಡಿಸಿಗೆ ವಹಿಸಲಾಗುವುದು ಪ್ರವಾಸೋದ್ಯಮದ ಹೆಸರಿನಲ್ಲಿ ನಮ್ಮ ಪ್ರಶಾಂತ ಪರಿಸರವು ಕಲುಷಿತಗೊಳ್ಳದಂತೆ ನಾವು ಎಚ್ಚರ ವಹಿಸಬೇಕಾಗಿದೆ

198 ಮಲೆಮಹಾದೇಶ್ವರ ಬೆಟ್ಟವು ಪ್ರಸಿದ್ಧ ಯಾತ್ರಾಸ್ಥಳ ಹಾಗೂ ಪ್ರವಾಸಿ ತಾಣವಾಗಿದೆ ಇಲ್ಲಿ ಜಾನಪದ ಅಧ್ಯಯನ ಕೇಂದ್ರವನ್ನು ಸ್ಥಾಪಿಸಲು ಉದ್ದೇಶಿಸಿದ್ದು ಇದಕ್ಕಾಗಿ ನಾನು 5 ಕೋಟಿ ರೂ ಗಳನ್ನು ಹಂಚಿಕೆ ಮಾಡುತ್ತಿದ್ದೇನೆ

199 ರಾಜ್ಯದಲ್ಲಿ ಪ್ರವಾಸೋದ್ಯಮವನ್ನು ಉತ್ತೇಜಿಸಲು 6 ಮಿನಿ ವಿಮಾನನಿಲ್ದಾಣಗಳು ಮತ್ತು 22 ಹೆಲಿಪ್ಯಾಡ್ಗಳನ್ನು ಅಭಿವೃದ್ಧಿ ಗೊಳಿಸಲಾಗುವುದು

200 ಹಂಪಿ ಸಮಗ್ರ ಅಭಿವೃದ್ಧಿ ಯೋಜನೆಯನ್ನು ಯುನೆಸ್ಕೋದ ಸಹಭಾಗಿತ್ವದೊಂದಿಗೆ ಸಿದ್ಧಪಡಿಸಲಾಗಿದೆ 2007-08ನೇ ಸಾಲಿನಲ್ಲಿ ಯುನೆಸ್ಕೋದ ಸಹಯೋಗದೊಂದಿಗೆ ಬೇಲೂರು ಮತ್ತು ಹಳೇಬೀಡಿನಲ್ಲಿ ಪುರಾತನ ಮನೆಗಳನ್ನು ಗುರುತಿಸಿ ಅವುಗಳನ್ನು ಬಾಟಿಕ್ ಹೋಟೆಲ್‌ಗಳಾಗಿ ಅಭಿವೃದ್ಧಿ ಪಡಿಸಲಾಗುವುದು

201 **2007-08ನೇ ಸಾಲಿನಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ನಾನು ಒಟ್ಟು 148 ಕೋಟಿ ರೂ ಗಳನ್ನು ಒದಗಿಸುತ್ತಿದ್ದು** ಇದು ಕರ್ನಾಟಕದ ಪ್ರವಾಸೋದ್ಯಮಕ್ಕೆ ನವಚೈತನ್ಯವನ್ನು ತುಂಬಲಿದೆ

ಯುವ ಜನಸೇವೆ

202 ಕ್ರೀಡಾ ಹಾಸ್ಟೆಲ್‌ನ ವಿದ್ಯಾರ್ಥಿಗಳ ಊಟ, ವಸತಿ ಮತ್ತು ಕ್ರೀಡಾ ಸಾಮಗ್ರಿಗಳ ಕಿಟ್‌ಗಳಿಗೆ ನಾನು 4 73 ಕೋಟಿ ರೂ ಗಳನ್ನು ಮೀಸಲಿಡುತ್ತಿದ್ದೇನೆ ಇದಲ್ಲದೆ ಕರ್ನಾಟಕ ಕ್ರೀಡಾ ಪ್ರಾಧಿಕಾರಕ್ಕೆ 1 67 ಕೋಟಿ ರೂ ಗಳನ್ನು ರಾಜ್ಯಮಟ್ಟದ ಒಲಂಪಿಕ್ ಕ್ರೀಡೆಗಳನ್ನು ನಡೆಸುವ ಉದ್ದೇಶಕ್ಕಾಗಿ ಒದಗಿಸಲಾಗುವುದು

ವಾಣಿಜ್ಯ ಮತ್ತು ಕೈಗಾರಿಕೆ

203 ಕೈಗಾರಿಕೆಗಳು ಪ್ರಾಥಮಿಕ ಮತ್ತು ಪೂರಕವಲಯಗಳ ನಡುವೆ ಪ್ರಮುಖ ಸಂಪರ್ಕವಾಗಿವೆ ಚುರುಕಾದ ಕೈಗಾರಿಕಾ ಬೆಳವಣಿಗೆಯಾಗದ ಹೊರತು ಉದ್ಯೋಗ ಸೃಷ್ಟಿ ಮತ್ತು ಆರ್ಥಿಕ ಬೆಳವಣಿಗೆ ಸಾಧಿಸುವುದು ಕಷ್ಟ ಭಾರತ ಸರ್ಕಾರದ ಕೈಗಾರಿಕಾ ನೀತಿ ಮತ್ತು ಉತ್ತೇಜನಾ ಇಲಾಖೆಯ ಮಾಹಿತಿಯ ಪ್ರಕಾರ ರಾಷ್ಟ್ರದಲ್ಲಿ ಬಂಡವಾಳ ಹೂಡಿಕೆದಾರರನ್ನು ಆಕರ್ಷಿಸುವಲ್ಲಿ ಕರ್ನಾಟಕವು ಪ್ರಥಮ ಸ್ಥಾನದಲ್ಲಿದೆ ಎನ್ನುವ ವಿಷಯವನ್ನು ಈ ಗೌರವಾನ್ವಿತ ಸದನಕ್ಕೆ ತಿಳಿಸಲು ನನಗೆ ಹೆಮ್ಮೆಯಾಗುತ್ತಿದೆ ನಮ್ಮ ಸರ್ಕಾರವು ರೂಪಿಸಿರುವ ಹೂಡಿಕೆದಾರರ ಸ್ನೇಹಮಯಿ ವಾತಾವರಣವೇ ಇದಕ್ಕೆ ಕಾರಣವಾಗಿದೆ ಕಳೆದ ಆಯವ್ಯಯ ಭಾಷಣದಲ್ಲಿ ನಾನು ಪ್ರಸ್ತಾಪಿಸಿದ್ದಂತೆ ನೂತನ ಕೈಗಾರಿಕಾ ನೀತಿ 2006-11 ಘೋಷಣೆ ಮಾಡಲಾಗಿದೆ ಈ ನೂತನ ನೀತಿಯು ಹಳೇ ಮಾದರಿಯ ತೆರಿಗೆ ವಿನಾಯಿತಿ ಆಧಾರಿತ ಸೂತ್ರಗಳಿಂದ ದೂರ ಸರಿದು ಮೂಲ ಸೌಕರ್ಯಗಳ ಸುಧಾರಣೆ ಮತ್ತು ಕೌಶಲ್ಯ ವೃದ್ಧಿಯ ಮೂಲಕ ಉದ್ಯೋಗ ಸೃಜನೆ ಮಾಡುವುದಕ್ಕೆ ಒತ್ತು ನೀಡಿದೆ

204 **ನೂತನ ಕೈಗಾರಿಕಾ ನೀತಿಯಲ್ಲಿ** ಹೇಳಿರುವಂತೆ ಮುಂದಿನ ಐದು ವರ್ಷಗಳಲ್ಲಿ ಕೈಗಾರಿಕಾ ಮೂಲಸೌಕರ್ಯ ಅಭಿವೃದ್ಧಿಗೆ 500 ಕೋಟಿ ರೂ ಗಳನ್ನು ವೆಚ್ಚಮಾಡಲು ರಾಜ್ಯವು ಬದ್ಧವಾಗಿದೆ ಈ ನಿಟ್ಟಿನಲ್ಲಿ **2007-08ನೆ ಸಾಲಿನಲ್ಲಿ ನಾನು 100 ಕೋಟಿ ರೂ ಗಳನ್ನು ಮೀಸಲಿಡಲು ಉದ್ದೇಶಿಸಿದ್ದೇನೆ**

205 ಕೃಷಿ ವಲಯ ಒಂದೇ ಗ್ರಾಮೀಣ ಪ್ರದೇಶಗಳಲ್ಲಿ ಬಡತನವನ್ನು ಕಡಿಮೆ ಮಾಡಲಾರದು ಆದ್ದರಿಂದ ಇತರೇ ವಲಯಗಳಲ್ಲಿ ಗ್ರಾಮೀಣ ಪ್ರದೇಶದ ಯುವಜನರ ಕೌಶಲ್ಯವೃದ್ಧಿಸಲು ನಾವು ಪ್ರಯತ್ನಗಳನ್ನು ಮಾಡಬೇಕು ಈ ನಿಟ್ಟಿನಲ್ಲಿ ಕಳೆದ ವರ್ಷ ನಾವು ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವದಲ್ಲಿ ಆರಂಭಿಸಿರುವ ಸುವರ್ಣ ಕಾಯಕ ಯೋಜನೆ ಪ್ರಶಂಸೆಗೆ ಒಳಗಾಗಿದ್ದು ಸಾವಿರಾರು ನಿರುದ್ಯೋಗಿ ಯುವಜನರಿಗೆ ಅನುಕೂಲ ಕಲ್ಪಿಸಿದೆ ಈ ಕಾರ್ಯಕ್ರಮಕ್ಕೆ ನಾನು ಮತ್ತಷ್ಟು ಉತ್ತೇಜನ ನೀಡಲು ಬಯಸಿದ್ದು, ಮುಂದಿನ ವರ್ಷದಲ್ಲಿ ಕನಿಷ್ಟ ಒಂದು ಲಕ್ಷ ಯುವ ಜನರಿಗೆ ತರಬೇತಿ ನೀಡಲು ಉದ್ದೇಶಿಸಿದ್ದೇನೆ ಈ ಉದ್ದೇಶಕ್ಕಾಗಿ **2007-08ನೇ ಸಾಲಿನಲ್ಲಿ 60 ಕೋಟಿ ರೂ ಗಳನ್ನು ಮೀಸಲಿಡಲಾಗುತ್ತಿದೆ**

206 ನೂತನ ಕೈಗಾರಿಕಾ ನೀತಿಯಲ್ಲಿ ಘೋಷಿಸಿರುವಂತೆ ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವದಲ್ಲಿ **ಕೌಶಲ್ಯ ಅಭಿವೃದ್ಧಿ ಯೋಜನೆಯಡಿ** 2007-08ನೇ ಸಾಲಿನಲ್ಲಿ ತರಬೇತಿ ಸಂಸ್ಥೆಗಳನ್ನು ಸ್ಥಾಪಿಸಲು ಈ ಯೋಜನೆಗೆ **30 ಕೋಟಿ ರೂ ಗಳನ್ನು** ನಾನು ಹಂಚಿಕೆ ಮಾಡಲಿದ್ದೇನೆ

207 ಈ ಹಿಂದಿನ ವರ್ಷಗಳಲ್ಲಿ **ಬಾಕಿ ಉಳಿದಿರುವ ಕೈಗಾರಿಕಾ ಸಹಾಯ ಧನದ** ಸಂಪೂರ್ಣ ಬಾಕಿಯನ್ನು 2007-08ನೇ ಸಾಲಿನಲ್ಲಿ ಪೂರ್ಣವಾಗಿ ಪಾವತಿಸಲಾಗುವುದು **ಈ ಉದ್ದೇಶಕ್ಕಾಗಿ ನಾನು 75 ಕೋಟಿ ರೂ** ಗಳನ್ನು ಮೀಸಲಿಡುತ್ತಿದ್ದೇನೆ

208 ನಗರ ಸಂತೆಗಳು ಸ್ಥಳೀಯ ಕುಶಲಕರ್ಮಿಗಳ ಉತ್ಪನ್ನಗಳನ್ನು ಪ್ರದರ್ಶಿಸಲು ಪ್ರಮುಖ ಮೂಲಸೌಕರ್ಯಗಳಾಗಿವೆ ಮಂಗಳೂರು ಮತ್ತು ಶಿವಮೊಗ್ಗ ನಗರಗಳಲ್ಲಿ ನಗರ ಸಂತೆಗಳನ್ನು ಆರಂಭಿಸಲಾಗುವುದು **ಈ ಉದ್ದೇಶಕ್ಕಾಗಿ 6 ಕೋಟಿ ರೂ ಗಳನ್ನು ನಾನು ಮೀಸಲಿಡುತ್ತಿದ್ದೇನೆ** ಭಾರತ ಸರ್ಕಾರದ ನಗರ ಸಂತೆ ಯೋಜನೆಯಡಿ ಇದನ್ನು ಅನುಷ್ಠಾನಗೊಳಿಸಲಾಗುವುದು

209 ಆಭರಣ ಹಾಗೂ ಮುತ್ತು, ರತ್ನಗಳ ವ್ಯವಹಾರದಲ್ಲಿ ತೊಡಗಿರುವ ಯುವಕರಿಗೆ ಸೂಕ್ತ ತರಬೇತಿ ನೀಡುವ ಸಂಸ್ಥೆಗಳು ರಾಜ್ಯದಲ್ಲಿ ಇರುವುದಿಲ್ಲ ಈ ಕೊರತೆಯನ್ನು ನಿವಾರಿಸಲು ನಾನು ಆಭರಣ ತರಬೇತಿ ಸಂಸ್ಥೆಯನ್ನು ಬೆಂಗಳೂರು ಮತ್ತು ಕಾರವಾರಗಳಲ್ಲಿ ಸ್ಥಾಪಿಸಲು ಉದ್ದೇಶಿಸಿದ್ದು **ಇದಕ್ಕಾಗಿ 2 ಕೋಟಿ ರೂ ಗಳನ್ನು ಮೀಸಲಿಡುತ್ತಿದ್ದೇನೆ**

ಕೆಎಸ್ಎಫ್ಸಿ

210 ಕರ್ನಾಟಕ ರಾಜ್ಯ ಹಣಕಾಸು ನಿಗಮದಿಂದ ಸಣ್ಣ ಪ್ರಮಾಣದ ಸಾಲ ಪಡೆದಿರುವ ಬಹಳಷ್ಟು ಜನರು ಈ ಹಿಂದಿನ ವರ್ಷಗಳಲ್ಲಿನ ಕೈಗಾರಿಕಾ ಹಿನ್ನಡೆಯಿಂದಾಗಿ ಸಾಲ ತೀರಿಸಲಾಗದೆ ತುಂಬಾ ತೊಂದರೆಯಲ್ಲಿರುವುದು ನನ್ನ ಗಮನಕ್ಕೆ ಬಂದಿದೆ ಒಂದು ಅವಧಿಯ ತೀರುವಳಿ ಯೋಜನೆಯಡಿ ಈ ಸಾಲದ ಮೇಲಿನ ಬಡ್ಡಿಗೆ ವಿನಾಯಿತಿ ನೀಡುವ ಯೋಜನೆಯನ್ನು ಕೆಎಸ್ಎಫ್ಸಿ ಈಗಾಗಲೇ ಜಾರಿಗೊಳಿಸಿದೆ ಈ ಸಾಲಗಾರರಿಗೆ ಮತ್ತಷ್ಟು ನೆರವು ಕಲ್ಪಿಸುವ ಉದ್ದೇಶದಿಂದ ನಾನು 10 ಲಕ್ಷ ರೂ ಗಳಿಗಿಂತ ಕಡಿಮೆ ಇರುವ ಸಾಲದ ಮೇಲಿನ ಸರಳ ಬಡ್ಡಿಯನ್ನು ಮನ್ನಾ ಮಾಡಲು ಉದ್ದೇಶಿಸಿದ್ದೇನೆ ಇದಕ್ಕಾಗಿ **ನಾನು 2007-08ನೇ ಸಾಲಿನಲ್ಲಿ 54 ಕೋಟಿ ರೂ ಗಳನ್ನು ಮೀಸಲಿಡುತ್ತಿದ್ದೇನೆ**

ರೇಷ್ಮೆ , ಕೈಮಗ್ಗ ಮತ್ತು ಜವಳಿ

211 **ಕೇಂದ್ರ ನೆರವಿನ ಕ್ಯಾಟಲಿಟಿಕ್ ಅಭಿವೃದ್ಧಿ** ಯೋಜನೆಯಡಿ ನಮ್ಮ ರೇಷ್ಮೆ ಉತ್ಪಾದನೆ ಸಾಮರ್ಥ್ಯವನ್ನು ಸುಧಾರಿಸುವ **ಉದ್ದೇಶಕ್ಕಾಗಿ ನಾನು 24 40 ಕೋಟಿ** ರೂ ಗಳನ್ನು ಒದಗಿಸಲಿದ್ದೇನೆ

212 ಸುಧಾರಿತ ರೇಷ್ಮೆ ಸಾಕಾಣಿಕೆ ಪದ್ಧತಿಯನ್ನು ಅಳವಡಿಸಲು ನಾನು 3 40 ಕೋಟಿ ರೂ ಗಳನ್ನು ಒದಗಿಸುತ್ತಿದ್ದೇನೆ

213 ರೇಷ್ಮೆ ವರದಾನ ಯೋಜನೆಗಾಗಿ ನಾನು 2007-08ನೇ ಸಾಲಿನಲ್ಲಿ 3 00 ಕೋಟಿ ರೂ ಗಳನ್ನು ಹಂಚಿಕೆ ಮಾಡಲು ಉದ್ದೇಶಿಸಿದ್ದೇನೆ

214 ದೊಡ್ಡಬಳ್ಳಾಪುರದ ಬಳಿ ನಿರ್ಮಾಣವಾಗುತ್ತಿರುವ ಸಿದ್ದಉಡುಪು ಪಾರ್ಕ್ನ ಅಭಿವೃದ್ಧಿಗಾಗಿ ರಾಜ್ಯದ ಪಾಲಿನ ಹಣ 4 70 ಕೋಟಿ ರೂ ಗಳನ್ನು ನಾನು ಒದಗಿಸುತ್ತಿದ್ದೇನೆ

215 **ಖಾದಿ ಮತ್ತು ಕೈಮಗ್ಗ ಜವಳಿಯನ್ನು ಉತ್ತೇಜಿಸಲು** ನಾನು ಖಾದಿ ವಸ್ತುಕ್ಕೆ ವರ್ಷಪೂರ್ತಿ ಶೇಕಡಾ 5ರ ಸಹಾಯಧನವನ್ನು ಮತ್ತು ವಿಶೇಷ

ಸಂದರ್ಭಗಳಲ್ಲಿ ಶೇಕಡಾ 10ರ ಸಹಾಯಧನವನ್ನು ನೀಡಲು ಉದ್ದೇಶಿಸಿದ್ದೇನೆ ವಿದ್ಯುತ್ ಮಗ್ಗದ ಉತ್ಪನ್ನಗಳ ಜೊತೆ ಕೈಮಗ್ಗದ ಉತ್ಪನ್ನಗಳು ಸ್ಪರ್ಧಿಸಿ ಮಾರುಕಟ್ಟೆ ಮಾಡಲು ವಿಶೇಷ ನೆರವಿನ ಅಗತ್ಯವಿದೆ ಇದಕ್ಕಾಗಿ ನಾನು 2007-08ನೇ ಸಾಲಿನಲ್ಲಿ **3 ಕೋಟಿ** ರೂಗಳ ನೆರವನ್ನು ಕೈಮಗ್ಗ ವಲಯಕ್ಕೆ ನೀಡಲಿದ್ದೇನೆ

216 ಸುವರ್ಣ ಕರ್ನಾಟಕದ ಹಿನ್ನೆಲೆಯಲ್ಲಿ ನಮ್ಮ ಗೌರವಾನ್ವಿತ ರಾಷ್ಟ್ರಪತಿಗಳು ರಾಜ್ಯವಿಧಾನಮಂಡಲವನ್ನುದ್ದೇಶಿಸಿ ಭಾಷಣ ಮಾಡಿದ ಸಂದರ್ಭದಲ್ಲಿ ಸಿದ್ದ ಉಡುಪುಗಳ ವಲಯದ ಪ್ರಾಮುಖ್ಯತೆ ಮತ್ತು ಅದರ ಅಭಿವೃದ್ಧಿಯ ಉತ್ತೇಜನಕ್ಕೆ ಸಲಹೆ ನೀಡಿದ್ದರು ನಮ್ಮ ಸರ್ಕಾರವು **'ಸಿದ್ಧ ಉಡುಪು ನೀತಿ'**ಯನ್ನು ಪ್ರಕಟಿಸಲಿದ್ದು, ಮುಂದಿನ ಐದು ವರ್ಷಗಳಲ್ಲಿ ಸಿದ್ದ ಉಡುಪುಗಳ ವಲಯದ ಅಭಿವೃದ್ಧಿಗೆ ಉತ್ತೇಜನ ನೀಡಲು 500 ಕೋಟಿ ರೂಗಳನ್ನು ಒದಗಿಸಲಿದೆ ಮುಂದಿನ ಐದು ವರ್ಷಗಳಲ್ಲಿ ಜವಳಿ ವಲಯದಲ್ಲಿ ಐದು ಲಕ್ಷ ಉದ್ಯೋಗಗಳನ್ನು ಸೃಜಿಸಲು ನಾನು ಉದ್ದೇಶಿಸಿದ್ದೇನೆ ಗೌರವಾನ್ವಿತ ಜವಳಿ ಸಚಿವರ ಅಧ್ಯಕ್ಷತೆಯ ಸಮಿತಿಯು ಈ ಸಂಬಂಧ ಸೂಕ್ತ ವಿಧಿವಿಧಾನಗಳನ್ನು ಕೈಗೊಳ್ಳಲಿದೆ ಈ ಉದ್ದೇಶಕ್ಕಾಗಿ ನಾನು 2007-08ನೇ ಸಾಲಿನಲ್ಲಿ 100 ಕೋಟಿ ರೂಗಳನ್ನು ಹಂಚಿಕೆ ಮಾಡಲಿದ್ದೇನೆ ಇದರಲ್ಲಿ 50 00 ಕೋಟಿ ರೂಗಳನ್ನು ಪ್ರಾದೇಶಿಕ ಅಸಮತೋಲನ ನಿವಾರಣೆಗಾಗಿ ವಿಶೇಷ ಅಭಿವೃದ್ಧಿ ಯೋಜನೆ ಆಧಾರಗಳ ಮೇಲೆ ಉಪಯೋಗಿಸಲಾಗುವುದು

ನೇಕಾರರ ಪ್ಯಾಕೇಜ್

217 ನೇಕಾರರ ವಿಶೇಷ ಪ್ಯಾಕೇಜ್‌ಗಾಗಿ ನಾನು 60 ಕೋಟಿ ರೂಗಳನ್ನು ಹಂಚಿಕೆ ಮಾಡಲು ಉದ್ದೇಶಿಸಿದ್ದು, ಇದರ ಅಡಿಯಲ್ಲಿ ನೇಕಾರರಿಗೆ ಹಲವಾರು ರಿಯಾಯಿತಿಗಳು ದೊರೆಯಲಿವೆ

- ವಿದ್ಯುತ್ ಮಗ್ಗಗಳಿಗೆ ವಿದ್ಯುತ್ ಸಹಾಯಧನ ನೀಡಲು 30 ಕೋಟಿ ರೂಗಳನ್ನು ಒದಗಿಸಲಾಗುವುದು
- ಸಹಕಾರಿ ಸಂಘಗಳು ಮತ್ತು ಪಟ್ಟಣ ಸಹಕಾರಿ ಬ್ಯಾಂಕುಗಳ ಮೂಲಕ ಕೈಮಗ್ಗ ನೇಕಾರರು ಪಡೆದಿರುವ 25,000 ರೂಗಳ ವರೆಗಿನ ಸಾಲಗಳನ್ನು ಮನ್ನಾ ಮಾಡಲಾಗುವುದು 25,000 ರೂಗಳವರೆಗೆ ಸಾಲಪಡೆದಿರುವ ನೇಕಾರರು ತಮ್ಮ ಸಾಲದ

ಅಸಲನ್ನು ಮಾರ್ಚ್ 2007ಕ್ಕೆ ಮುನ್ನ ಪಾವತಿ ಮಾಡಿದರೆ ಅವರ ಸಾಲದ ಮೇಲಿನ ಬಡ್ಡಿಯನ್ನು ಮನ್ನಾ ಮಾಡಲಾಗುವುದು

- ಕೈಮಗ್ಗದ ನೇಕಾರರಿಗೆ ಸಾಲ ನೀಡಿರುವ ಪಟ್ಟಣ ಸಹಕಾರಿ ಬ್ಯಾಂಕ್‌ಗಳಿಗೆ ಶೇ 4 ರಷ್ಟು ಬಡ್ಡಿ ಸಹಾಯಧನವನ್ನು ಪಾವತಿಸಲಾಗುವುದು
- ಗದಗ್‌ನಲ್ಲಿರುವ ಕರ್ನಾಟಕ ಕೈಮಗ್ಗ ತಂತ್ರಜ್ಞಾನ ಸಂಸ್ಥೆಗೆ ಮತ್ತು ಜಮಖಂಡಿಯಲ್ಲಿರುವ ಸುಧಾರಿತ ಕೈಮಗ್ಗ ತರಬೇತಿ ಕೇಂದ್ರಕ್ಕೆ ಅನುದಾನ ಒದಗಿಸಲಾಗುವುದು
- ಬಳ್ಳಾರಿಯಲ್ಲಿ ತರಬೇತಿ ಸಂಸ್ಥೆಯನ್ನು ಸ್ಥಾಪಿಸಲಾಗುವುದು
- ಇಳಕಲ್‌ನಲ್ಲಿ ನೇಕಾರರ ಕಾಲೋನಿಯನ್ನು ಸ್ಥಾಪಿಸಲಾಗುವುದು

ವಸತಿ

218 ನಮ್ಮ ಸರ್ಕಾರವು ವಸತಿಗೆ ಅತಿ ಹೆಚ್ಚಿನ ಆದ್ಯತೆಯನ್ನು ನೀಡಿದೆ ಅಪೂರ್ಣ ಮನೆಗಳ ನಿರ್ಮಾಣವನ್ನು ಪೂರ್ಣಗೊಳಿಸಲು 2006-07ನೇ ಸಾಲಿನಲ್ಲಿ 370 ಕೋಟಿ ರೂ ಗಳನ್ನು ಒದಗಿಸಲಾಗಿತ್ತು 2007-08ನೇ ಸಾಲಿನಲ್ಲಿ 6 ಲಕ್ಷ ಮನೆಗಳ ನಿರ್ಮಾಣ ಕೈಗೆತ್ತಿಕೊಳ್ಳಲು 600 ಕೋಟಿ ರೂ ಗಳನ್ನು ಒದಗಿಸಲು ಉದ್ದೇಶಿಸಿದ್ದೇನೆ

ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿ.

219 ಜವಾಹರಲಾಲ್ ನೆಹರು ನಗರ ನವೀಕರಣ ಯೋಜನೆಯಡಿ ಬೆಂಗಳೂರು ನಗರದ ಕೊಳಗೇರಿಗಳನ್ನು 160 ಕೋಟಿ ರೂ ಗಳ ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗುವುದು ಇದೇ ರೀತಿ 40 ಕೋಟಿ ರೂ ಗಳ ವೆಚ್ಚದಲ್ಲಿ ಮೈಸೂರು ನಗರದ ಕೊಳಗೇರಿಗಳನ್ನು ಅಭಿವೃದ್ಧಿಪಡಿಸಲಾಗುವುದು

220 ಐ ಹೆಚ್ ಎಸ್ ಡಿ ಪಿ ಯೋಜನೆಯು ಬೆಂಗಳೂರು ಮತ್ತು ಮೈಸೂರು ನಗರಗಳಲ್ಲದೆ ಉಳಿದ ನಗರಗಳಲ್ಲಿನ ಕೊಳಗೇರಿ ನಿವಾಸಿಗಳಿಗೆ ವಸತಿ ಮತ್ತು ಮೂಲಸೌಕರ್ಯಗಳನ್ನು ಒದಗಿಸಲಿದೆ 2007-08ನೇ ಸಾಲಿನಲ್ಲಿ ಈ ಯೋಜನೆಯನ್ನು 100 ಕೋಟಿ ರೂ ಗಳಲ್ಲಿ ಅನುಷ್ಠಾನಗೊಳಿಸಲು ಪ್ರಸ್ತಾವಿಸುತ್ತೇವೆ ಈ ಯೋಜನೆಗಾಗಿ 2007-08ನೇ ಸಾಲಿನಲ್ಲಿ ರಾಜ್ಯದ ಪಾಲಾಗಿ 20 80 ಕೋಟಿ ರೂ ಗಳನ್ನು ಒದಗಿಸಲಾಗುವುದು

ನಗರಾಭಿವೃದ್ಧಿ

221 ನಮ್ಮ ಸರ್ಕಾರವು ತುಮಕೂರು ನಗರವನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲು 54 ಕೋಟಿ ರೂಗಳನ್ನು ಒದಗಿಸಲು ಉದ್ದೇಶಿಸಿದೆ

222 ಮಂಗಳೂರು ಮತ್ತು ಶಿವಮೊಗ್ಗ ನಗರಗಳ ರಸ್ತೆ ಅಭಿವೃದ್ಧಿಗಾಗಿ ನಾನು ತಲಾ 20 ಕೋಟಿ ರೂಗಳನ್ನು ಒದಗಿಸಲು ಉದ್ದೇಶಿಸಿದ್ದೇನೆ

223 ಸಣ್ಣ ಮತ್ತು ಮಧ್ಯಮ ಪಟ್ಟಣಗಳ ಅಭಿವೃದ್ಧಿಗಾಗಿ ರೂಪಿಸಿರುವ ನಗರ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆಯಡಿ ಈ ನಗರಗಳ ನೀರು ಸರಬರಾಜು, ಒಳಚರಂಡಿ ವ್ಯವಸ್ಥೆ, ಮಳೆ ನೀರಿನ ಚರಂಡಿ, ಮತ್ತು ರಸ್ತೆ ನಿರ್ಮಾಣಕ್ಕೆ 2007-08ನೇ ಸಾಲಿನಲ್ಲಿ 369 ಕೋಟಿ ರೂಗಳನ್ನು ಒದಗಿಸಲಾಗುತ್ತಿದೆ

224 ಉತ್ತರ ಕರ್ನಾಟಕದ ಪ್ರಾಂತೀಯ ಅಸಮತೋಲನೆಯನ್ನು ನಿವಾರಿಸುವ ಪ್ರಯತ್ನದಲ್ಲಿ ರೂಪಿತವಾಗಿರುವ ಉತ್ತರ ಕರ್ನಾಟಕ ನಗರ ಮೂಲ ಸೌಕರ್ಯಗಳ ಅಭಿವೃದ್ಧಿ ಯೋಜನೆಗಾಗಿ 2007-08ನೇ ಸಾಲಿನಲ್ಲಿ 220 ಕೋಟಿ ರೂಗಳನ್ನು ಒದಗಿಸಲಾಗುತ್ತಿದೆ

225 ಕರ್ನಾಟಕ ಕರಾವಳಿ ನಿರ್ವಹಣೆ ಮತ್ತು ನಗರಾಭಿವೃದ್ಧಿ ಯೋಜನೆಗಾಗಿ 167 04 ಕೋಟಿ ರೂಗಳನ್ನು ಒದಗಿಸಲಾಗುತ್ತಿದೆ ಇದು ಕರಾವಳಿ ತೀರದ 10 ಪಟ್ಟಣಗಳ ಸಮಗ್ರ ಮೂಲ ಸೌಕರ್ಯ ಅಭಿವೃದ್ಧಿಗಾಗಿ ವೆಚ್ಚವಾಗಲಿದೆ

ನಗರ ನೀರು ಸರಬರಾಜು

226 ಕರ್ನಾಟಕದಲ್ಲಿ ಶೀಘ್ರ ಗತಿಯಲ್ಲಿ ನಗರೀಕರಣವಾಗುತ್ತಿದ್ದು, ನಗರ ಪ್ರದೇಶದಲ್ಲಿ ಕುಡಿಯುವ ನೀರಿಗೆ ಬೇಡಿಕೆ ಹೆಚ್ಚಾಗಿದೆ ಒಳಚರಂಡಿ ವ್ಯವಸ್ಥೆ ಹಾಗೂ ತ್ಯಾಜ್ಯ ವಸ್ತುಗಳ ನಿರ್ಮೂಲನೆಯ ನಿರ್ವಹಣೆ ತ್ರಾಸದಾಯಕವಾಗುತ್ತಿದೆ ಈ ತೊಂದರೆಯನ್ನು ನಿವಾರಿಸಲು ನಾನು ಕೇಂದ್ರ ನೆರವಿನ ತ್ವರಿತ ನೀರು ಸರಬರಾಜು ಯೋಜನೆಗೆ ರಾಜ್ಯದ ಪಾಲಿನ ಹಣವಾದ 30 98 ಕೋಟಿ ರೂಗಳನ್ನು ಒದಗಿಸಲು ಉದ್ದೇಶಿಸಿದ್ದೇನೆ

227 ಕರ್ನಾಟಕ ನಗರ ನೀರು ಸರಬರಾಜು ಮತ್ತು ನೈರ್ಮಲ್ಯ ಸುಧಾರಣೆ ಯೋಜನೆಯು ಗುಲ್ಬರ್ಗಾ, ಹುಬ್ಬಳ್ಳಿ-ಧಾರವಾಡ, ಮತ್ತು ಬೆಳಗಾವಿ ನಗರಗಳ ನೈರ್ಮಲ್ಯ ಮತ್ತು ಕುಡಿಯುವ ನೀರಿನ ಸಮಸ್ಯೆಯನ್ನು ಸುಧಾರಿಸುವ ಕಾಳಜಿಯನ್ನು ಹೊಂದಿದ್ದು, ಈ ಯೋಜನೆಗೆ ನಾನು 2007-08ನೇ ಸಾಲಿನಲ್ಲಿ 57 01 ಕೋಟಿ ರೂಗಳನ್ನು ಒದಗಿಸಲು ಉದ್ದೇಶಿಸಿದ್ದೇನೆ

228 ಇದರ ಜೊತೆಗೆ ನಾನು ಕುಡಿಯುವ ನೀರು ಮತ್ತು ಒಳಚರಂಡಿ ಯೋಜನೆಗಳಿಗೆ 2007-08ನೇ ಸಾಲಿನಲ್ಲಿ 128 89 ಕೋಟಿ ರೂ ಗಳನ್ನು ಒದಗಿಸುತ್ತಿದ್ದೇನೆ

229 ಕಾವೇರಿ 4ನೇ ಹಂತದ ಎರಡನೇ ಘಟ್ಟದ ನೀರು ಸರಬರಾಜು ಯೋಜನೆಗೆ ಮತ್ತು ಬೆಂಗಳೂರು ನಗರಕ್ಕೆ 500 ಎಂ ಎಲ್ ಡಿ ಸಂಸ್ಕರಣಾ ನೀರಿನ ಪೂರೈಕೆಗಾಗಿ 415 ಕೋಟಿ ರೂ ಗಳನ್ನು 2007-08ನೇ ಸಾಲಿನಲ್ಲಿ ಒದಗಿಸುತ್ತಿದ್ದೇನೆ

230 ಮೈಸೂರು ನಗರದ ನೀರು ಸರಬರಾಜು ವ್ಯವಸ್ಥೆಯನ್ನು JNNURM ಯೋಜನೆಯಡಿ 198 ಕೋಟಿ ರೂ ಗಳ ವೆಚ್ಚದಲ್ಲಿ ಸುಧಾರಿಸಲಾಗುವುದು

231 ಇದಲ್ಲದೇ ಕೋಲಾರದ 2ನೇ ಹಂತದ ಒಳಚರಂಡಿ ಯೋಜನೆಯನ್ನು 6 42 ಕೋಟಿ ರೂ ಗಳ ವೆಚ್ಚದಲ್ಲಿ ಅನುಷ್ಠಾನ ಗೊಳಿಸಲಾಗುವುದು ಯರಗೋಳ ನೀರು ಸರಬರಾಜು ಯೋಜನೆಯನ್ನು 2007-08ನೇ ಸಾಲಿನಲ್ಲಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮೂಲಕ ಅನುಷ್ಠಾನ ಗೊಳಿಸಲಾಗುವುದು

ಬೆಂಗಳೂರು ಅಭಿವೃದ್ಧಿ:

232 ಕರ್ನಾಟಕ ಪೌರಾಡಳಿತ ಸುಧಾರಣಾ ಯೋಜನೆಗೆ ನಾನು 2007-08ನೇ ಸಾಲಿನಲ್ಲಿ 250 ಕೋಟಿ ರೂ ಗಳನ್ನು ಹಂಚಿಕೆ ಮಾಡಲು ಉದ್ದೇಶಿಸಿದ್ದು, ಇದು 2006-07ನೇ ಸಾಲಿನಲ್ಲಿ ನೀಡಿದ ಹಣಕ್ಕಿಂತ ದುಪ್ಪಟ್ಟಾಗಿದೆ

233 ಬೆಂಗಳೂರು ನಗರದ ಸಮಗ್ರ ಅಭಿವೃದ್ಧಿಗಾಗಿ ನಮ್ಮ ಸರ್ಕಾರವು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ರೂಪಿಸಿದೆ ದಿನಾಂಕ 16 01 2007 ರಿಂದ ಜಾರಿಗೆ ಬರುವಂತೆ ಏಳು ನಗರ ಸಭೆಗಳು, ಒಂದು ಪುರಸಭೆ ಮತ್ತು 110 ಗ್ರಾಮಗಳು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಗೆ ಸೇರಿವೆ ಇದರೊಂದಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿ 225 ಚ ಕಿಮೀ ನಿಂದ ಸುಮಾರು 741 ಚ ಕಿಮೀಗಳಿಗೆ ವಿಸ್ತಾರವಾಗಿದೆ ಹಾಲಿ ಇರುವ ವಲಯಗಳ ಜೊತೆಗೆ 5 ಹೊಸ ವಲಯಗಳನ್ನು ರಚಿಸಲಾಗಿದ್ದು, 1106 ಹೊಸ ಹುದ್ದೆಗಳಿಗೆ ಮಂಜೂರಾತಿ ನೀಡಲಾಗಿದೆ

234 ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ಜಾಗತಿಕ ಮಟ್ಟದ ನಗರವನ್ನಾಗಿ ರೂಪಿಸಲು ನಮ್ಮ ಸರ್ಕಾರವು ಬದ್ಧವಾಗಿದೆ ಈ

ಉದ್ದೇಶಕ್ಕಾಗಿ ಹಲವು ಕಾರ್ಯಕ್ರಮಗಳಿಗೆ ಅನುದಾನವನ್ನು ನೀಡಲು ಪ್ರಸ್ತಾಪಿಸಿರುತ್ತೇನೆ ಮೊಟ್ಟಮೊದಲನೆಯದಾಗಿ ಹೊಸದಾಗಿ ಸೃಷ್ಟಿಸಲಾಗಿರುವ ಬ್ಯಾಟರಾಯನಪುರ, ಬೊಮ್ಮನಹಳ್ಳಿ, ದಾಸರಹಳ್ಳಿ, ಮಹದೇವಪುರ, ರಾಜರಾಜೇಶ್ವರಿ ನಗರ ವಲಯಗಳು, ಹಿಂದಿನ ಎಂಟು ನಗರ ಸಭೆಗಳು ಮತ್ತು ಸದ್ಯದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪರಿದಿಯಲ್ಲಿ ಬರುವ ಹಳ್ಳಿಗಳನ್ನೊಳಗೊಂಡಂತೆ ಈ ಸ್ಥಳಗಳಲ್ಲಿ ಮುಖ್ಯ ರಸ್ತೆಗಳ ಡಾಂಬರೀಕರಣ, ರಸ್ತೆ ಪಕ್ಕದ ಚರಂಡಿ ನಿರ್ಮಾಣ ಮತ್ತು ಕಾಲುದಾರಿ ನಿರ್ಮಾಣಕ್ಕಾಗಿ ಪ್ರತಿ ವಲಯಕ್ಕೆ ತಲಾ 30 ಕೋಟಿ ರೂ ಗಳನ್ನು ಅನುದಾನವಾಗಿ ನೀಡಲು ಬಯಸುತ್ತೇನೆ ಬೆಂಗಳೂರು ನಗರದಲ್ಲಿ ಜನದಟ್ಟಣೆ ಇರುವ ಒಂಭತ್ತು ಸ್ಥಳಗಳಲ್ಲಿ ಓವರ್ ಪಾಸ್‌ಗಳನ್ನು ಕಟ್ಟಲು 50 ಕೋಟಿ ರೂ ಗಳನ್ನು ಹಂಚಿಕೆ ಮಾಡಲು ಬಯಸುತ್ತೇನೆ ಇದಲ್ಲದೇ ಬಿಡಿಎ ಸಮೀಪದಿಂದ ಮಿನ್ಸ್ಕ್ ವೃತ್ತದವರೆಗೆ ಸುರಂಗ ಮಾರ್ಗವನ್ನು ನಿರ್ಮಿಸಲು 2007-08ನೇ ಸಾಲಿನಲ್ಲಿ 50 ಕೋಟಿ ರೂ ಗಳನ್ನು ನಿಗದಿಪಡಿಸುತ್ತಿದ್ದೇನೆ

235 ಬೆಂಗಳೂರು ನಗರದ ಸಂಚಾರಿ ವ್ಯವಸ್ಥೆಯ ತೊಂದರೆಯನ್ನು ನಿವಾರಿಸಲು 'ನಮ್ಮ ಮೆಟ್ರೋ' ರೈಲು ಯೋಜನೆಗೆ 2006-07ನೇ ಸಾಲಿನಲ್ಲಿ ಚಾಲನೆ ನೀಡಲಾಗಿತ್ತು ಇದು ಭಾರತ ಸರ್ಕಾರ ಮತ್ತು ಕರ್ನಾಟಕ ರಾಜ್ಯ ಸರ್ಕಾರಿ ಸಹಭಾಗಿತ್ವದ 6395 ಕೋಟಿ ರೂ ಗಳ ವೆಚ್ಚದ ಯೋಜನೆಯಾಗಿದ್ದು, 2009ರ ವೇಳೆಗೆ ಪೂರ್ಣಗೊಳ್ಳುವ ನಿರೀಕ್ಷೆ ಇದೆ ಈ ಯೋಜನೆಗೆ ಕರ್ನಾಟಕ ಸರ್ಕಾರವು 2007-08ನೇ ಸಾಲಿನಲ್ಲಿ ರಾಜ್ಯದ ಪಾಲಿನ ಕೊಡುಗೆಯಾದ 172 88 ಕೋಟಿ ರೂ ಗಳನ್ನು ಒದಗಿಸಲಿದೆ

236 ಬೆಂಗಳೂರು ನಗರದ ಮೂಲಭೂತ ಸೌಕರ್ಯ ಅಗತ್ಯತೆಗಳನ್ನು ಜವಹರ್‌ಲಾಲ್ ನೆಹರು ರಾಷ್ಟ್ರೀಯ ನಗರ ನವೀಕರಣ ಯೋಜನೆಯಡಿ ತೆಗೆದುಕೊಳ್ಳಲಾಗುತ್ತಿದೆ ಈ ಉದ್ದೇಶಕ್ಕಾಗಿ 2007-08ನೇ ಸಾಲಿನಲ್ಲಿ 800 ಕೋಟಿ ರೂ ಗಳನ್ನು ಒದಗಿಸಲಾಗುವುದು 2007-08ನೇ ಸಾಲಿನಲ್ಲಿ ಬೆಂಗಳೂರು ನಗರದಲ್ಲಿ ಈ ಕೆಳಕಂಡ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು

ಮಳೆ ನೀರನ್ನು ಸೂಕ್ತವಾಗಿ ಹರಿಸಲು ಅನುಕೂಲ ಕಲ್ಪಿಸುವ **'ಕಣಿವೆ ಯೋಜನೆ'** ಯನ್ನು 640 ಕೋಟಿ ರೂ ಗಳ ವೆಚ್ಚದಲ್ಲಿ ಅನುಷ್ಠಾನಗೊಳಿಸಲಾಗುವುದು

- ಮಹಾತ್ಮಗಾಂಧಿರಸ್ತೆ ಮತ್ತು ಕೋರಮಂಗಲದ ಸುತ್ತಮುತ್ತಲಿನ ರಸ್ತೆ ಅಭಿವೃದ್ಧಿಯನ್ನು 99 ಕೋಟಿ ರೂಗಳ ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗುವುದು
- ಬೃಹತ್ ಬೆಂಗಳೂರು ನಗರ ಪಾಲಿಕೆಯಡಿ ಬರುವ 110 ಗ್ರಾಮಗಳಲ್ಲಿ ಕುಡಿಯುವ ನೀರಿನ ಅಭಿವೃದ್ಧಿಗಾಗಿ ಈ ಯೋಜನೆಯನ್ನು 98 ಕೋಟಿ ರೂಗಳ ವೆಚ್ಚದಲ್ಲಿ ತೆಗೆದುಕೊಳ್ಳುವುದು
- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಸೇರಿರುವ 110 ಗ್ರಾಮಗಳಿಗೆ 98 ಕೋಟಿ ರೂಗಳ ವೆಚ್ಚದಲ್ಲಿ ನೀರಿನ ಸೌಕರ್ಯ ಕಲ್ಪಿಸುವುದು
- JNNURM ಯೋಜನೆಗೆ ರಾಜ್ಯದ ಪಾಲಿನ ಹಣವಾಗಿ 800 ಕೋಟಿ ರೂಗಳನ್ನು ನಾನು 2007-08ನೇ ಸಾಲಿನಲ್ಲಿ ಹಂಚಿಕೆ ಮಾಡಲು ಉದ್ದೇಶಿಸಿದ್ದೇನೆ

ಮೂಲ ಸೌಕರ್ಯ ಅಭಿವೃದ್ಧಿ

237 ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಕಾಮಗಾರಿಯು ತೃಪ್ತಿದಾಯಕ ವೇಗದಲ್ಲಿ ಸಾಗುತ್ತಿದ್ದು, ನಿಗದಿತ ವೇಳೆಯಲ್ಲಿ ಕಾರ್ಯಾರಂಭಗೊಳ್ಳಲಿದೆ 2007-08ನೇ ಸಾಲಿನಲ್ಲಿ ಈ ಯೋಜನೆಗೆ ಸಂಬಂಧಿಸಿದಂತೆ ರಾಜ್ಯದ ಪಾಲಿನ ಹಣ 137 33 ಕೋಟಿ ರೂಗಳನ್ನು ಮೀಸಲಿಡಲಾಗಿದೆ

238 ಮೈಸೂರು, ಹಾಸನ, ಶಿವಮೊಗ್ಗ, ಬೆಳಗಾವಿ, ಬಿಜಾಪುರ, ಗುಲ್ಬರ್ಗಾ ಮತ್ತು ಬಳ್ಳಾರಿ ಜಿಲ್ಲಾ ಕೇಂದ್ರಗಳಲ್ಲಿ **ಚಿಕ್ಕ ವಿಮಾನ ನಿಲ್ದಾಣಗಳನ್ನು** ಆರಂಭಿಸಲು ಯೋಜಿಸಲಾಗಿದೆ ಪ್ರಸ್ತುತ ಹುಬ್ಬಳ್ಳಿ ಮತ್ತು ಮಂಗಳೂರಿನಲ್ಲಿರುವ ವಿಮಾನ ನಿಲ್ದಾಣಗಳನ್ನು ವಿಸ್ತರಿಸಲು ಉದ್ದೇಶಿಸಲಾಗಿದೆ ಕಾರವಾರ ಮತ್ತು ಬೀದರ್‌ನಲ್ಲಿರುವ ಮಿಲಿಟರಿ ವಿಮಾನ ನಿಲ್ದಾಣಗಳನ್ನು ನಾಗರೀಕ ಸೇವೆಗೆ ಬಳಸಿಕೊಳ್ಳಲು ಉದ್ದೇಶಿಸಲಾಗಿದೆ **ಈ ನಿಟ್ಟಿನಲ್ಲಿ ನಾನು 50 ಕೋಟಿ ರೂ ಗಳನ್ನು ಮೀಸಲಿಡುತ್ತಿದ್ದೇನೆ**

239 ಹೆಲಿಕ್ಯಾಪ್ಟರ್‌ಗಳು ದೂರದ ಸ್ಥಳಗಳಿಗೆ ಶೀಘ್ರ ಸಂಪರ್ಕ ಕಲ್ಪಿಸಲು ಉತ್ತಮ ವಾಹನವಾಗಿದ್ದು ಇದು ರಾಜ್ಯದ ಪ್ರವಾಸೋದ್ಯಮಕ್ಕೆ ಚೈತನ್ಯ ನೀಡುವ ಸಾಮರ್ಥ್ಯ ಹೊಂದಿವೆ ಈ ನಿಟ್ಟಿನಲ್ಲಿ ನಾನು ರಾಜ್ಯದ ಎಲ್ಲಾ

ಜಿಲ್ಲೆಗಳಲ್ಲಿರುವ ಹಾಗೂ ಪ್ರಮುಖ ಪ್ರವಾಸಿ ಸ್ಥಳಗಳಲ್ಲಿರುವ ಹೆಲಿಪ್ಯಾಡ್‌ಗಳನ್ನು ಅಭಿವೃದ್ಧಿಪಡಿಸಿ ಮೂಲಸೌಕರ್ಯಗಳನ್ನು ಮೇಲ್ದರ್ಜೆಗೇರಿಸಲು 2 ಕೋಟಿ ರೂ ಗಳನ್ನು ಮೀಸಲಿಡಲು ಉದ್ದೇಶಿಸಿದ್ದೇನೆ

240 ಕರ್ನಾಟಕ ರಾಜ್ಯವು ಹಲವಾರು **ರೈಲ್ವೆ ಯೋಜನೆಗಳಿಗೆ** ಗಣನೀಯ ಪ್ರಮಾಣದಲ್ಲಿ ಹಣ ಹೂಡುತ್ತಿರುವ ದೇಶದಲ್ಲಿನ ಏಕೈಕ ಭಾಗೀದಾರ ರಾಜ್ಯವಾಗಿದೆ ಹಲವಾರು ವರ್ಷಗಳಿಂದ ನೆನೆಗುದಿಗೆ ಬಿದ್ದಿರುವ ರೈಲ್ವೆ ಯೋಜನೆಗಳಿಗೆ ರಾಜ್ಯದ ಪಾಲಿನ ಹಣವನ್ನು ನೀಡಿ ಶೀಘ್ರವಾಗಿ ಪೂರ್ಣಗೊಳಿಸುವುದು ಸರ್ಕಾರದ ಉದ್ದೇಶವಾಗಿದೆ ರೈಲ್ವೆ ಮೇಲುಸೇತುವೆಗಳು ಮತ್ತು ಕೆಳಸೇತುವೆಗಳು ವೇಗವಾದ ಮತ್ತು ಸುರಕ್ಷ ಸಂಚಾರಕ್ಕೆ ನೆರವಾಗುತ್ತಿವೆ ರಾಜ್ಯದ ರೈಲ್ವೆ ಯೋಜನೆಗಳಿಗೆ ಬೆಂಬಲ ಮುಂದುವರೆಸುವ ನಿಟ್ಟಿನಲ್ಲಿ 2007-08ನೇ ಸಾಲಿನಲ್ಲಿ ನಾನು ರಾಜ್ಯದ ಪಾಲಿನ ಹಣ ನೀಡಲು 158 ಕೋಟಿ ರೂ ಗಳನ್ನು ಮೀಸಲಿಡುತ್ತಿದ್ದೇನೆ

241 ಹಲವಾರು ಮೂಲಸೌಕರ್ಯ ಯೋಜನೆಗಳಿಗೆ ಬೇಡಿಕೆ ಹೆಚ್ಚುತ್ತಿದ್ದು ಮೂಲಸೌಕರ್ಯ ನಿಧಿಯ ಮೊತ್ತವನ್ನು ಹೆಚ್ಚಿಸುವ ಅಗತ್ಯವಿದೆ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಯೋಜನೆಯು ಮೂಲವಿನ್ಯಾಸ ಬದಲಾವಣೆಯಾದ ನಂತರ ಉಳಿದಿರುವ ಹೆಚ್ಚುವರಿ ಜಮೀನನ್ನು ಗರಿಷ್ಟ ಪ್ರಮಾಣದಲ್ಲಿ ಬಳಸಿಕೊಳ್ಳಲು ಉದ್ದೇಶಿಸಲಾಗಿದೆ ಆದ್ದರಿಂದ ಈ ಹೆಚ್ಚುವರಿ **ಜಮೀನನ್ನು ಸಾರ್ವಜನಿಕವಾಗಿ ಹರಾಜು ಮಾಡುವ ಮೂಲಕ ಕನಿಷ್ಟ 700 ಕೋಟಿ ರೂ ಗಳನ್ನು 2007-08ನೇ** ಸಾಲಿನಲ್ಲಿ ಸಂಗ್ರಹಿಸಲು ಉದ್ದೇಶಿಸಲಾಗಿದೆ

ಮಾಹಿತಿ ತಂತ್ರಜ್ಞಾನ.

242 ಕರ್ನಾಟಕವು ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ತ್ವರಿತ ಬೆಳವಣಿಗೆ ಸಾಧಿಸಿದೆ ಬೆಂಗಳೂರು ನಗರವಂತೂ ಐಟಿ ವಲಯದಲ್ಲಿ ಮುಂಚೂಣಿಯಲ್ಲಿದೆ ಮಾಹಿತಿ ತಂತ್ರಜ್ಞಾನವನ್ನು ಕರ್ನಾಟಕದ ಇತರೆ ಪ್ರದೇಶಗಳಿಗೆ ವಿಸ್ತರಿಸಲು ರಾಜ್ಯವು ಎಲ್ಲಾ ರೀತಿಯ ಪ್ರಯತ್ನಗಳನ್ನು ಮಾಡುತ್ತಿದೆ ಈಗಾಗಲೇ ರಾಜ್ಯ ಸರ್ಕಾರವು ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನೀತಿಯನ್ನು ಪ್ರಚುರಪಡಿಸಿ ರಾಜ್ಯ ಸರ್ಕಾರದ ಉದ್ದೇಶವನ್ನು ಸಮಸ್ತರಿಗೂ ಸಹ ತಿಳಿಸಿದೆ ಯಾವ ರೀತಿಯ ಉತ್ತೇಜನ ಮತ್ತು ಅನುಕೂಲಗಳನ್ನು ಸರ್ಕಾರ ನೀಡಲಿದೆ ಎನ್ನುವ ಮಾಹಿತಿ ಇದರಲ್ಲಿದೆ

243 ನಿಜವಾಗಿ ಹೇಳಬೇಕಾದಲ್ಲಿ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಂಸ್ಥೆಗಳು ರಾಜ್ಯ ಸರ್ಕಾರದಿಂದ ಯಾವುದೇ ರೀತಿಯ ಪ್ರತ್ಯಕ್ಷ ಮತ್ತು ಪರೋಕ್ಷ ತೆರಿಗೆಯ ರಿಯಾಯತಿಯನ್ನು ಕೇಳುತ್ತಿಲ್ಲ ಈ ಸಂಸ್ಥೆಗಳು ಬೆಂಗಳೂರಿನಲ್ಲಿ ಮತ್ತು ರಾಜ್ಯದ ಇತರೆ ಪ್ರದೇಶಗಳಲ್ಲಿ ಹಲವು ಮೂಲಭೂತ ಸೌಕರ್ಯಗಳನ್ನು ಉನ್ನತೀಕರಿಸಲು ಕೇಳುತ್ತಿವೆ ಈ ಹಿನ್ನೆಲೆಯಲ್ಲಿ ನಾವು ನಗರಾಭಿವೃದ್ಧಿ ಮತ್ತು ಮೂಲ ಸೌಕರ್ಯ ಕ್ಷೇತ್ರಗಳಲ್ಲಿ ಹೆಚ್ಚು ಬಂಡವಾಳವನ್ನು ಹೂಡುತ್ತಿದ್ದು, ಮಾಹಿತಿ ತಂತ್ರಜ್ಞಾನದ ಬೆಳವಣಿಗೆಯ ಬಗ್ಗೆ ನಮ್ಮ ಬದ್ಧತೆಯನ್ನು ತೋರಿಸಿದ್ದೇವೆ

244 ಧಾರವಾಡದಲ್ಲಿ ಪ್ರಾಂತೀಯ ವಿಜ್ಞಾನ ಕೇಂದ್ರವನ್ನು ಸ್ಥಾಪನೆ ಪ್ರಗತಿಯಲ್ಲಿದೆ ಈ ಯೋಜನೆಗೆ 2007-08ನೇ ಸಾಲಿನಲ್ಲಿ 1 ಕೋಟಿ ರೂ ಗಳ ಹಣವನ್ನು ನಿಗದಿಪಡಿಸಿರುತ್ತೇನೆ ಅಂತೆಯೇ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಇತರೆ ಯೋಜನೆಗಳಿಗೂ ಸಹ 5 ಕೋಟಿ ರೂ ಗಳನ್ನು ಒದಗಿಸಲು ನಾನು ಪ್ರಸ್ತಾಪಿಸಿರುತ್ತೇನೆ ಇದರ ಜೊತೆಗೆ **ಜಿಲ್ಲಾ ವಿಜ್ಞಾನ ಕೇಂದ್ರಗಳ ಸ್ಥಾಪನೆಗೆ ಬೇಡಿಕೆ ಬರುತ್ತಿದ್ದು ಈ ಉದ್ದೇಶಕ್ಕಾಗಿ ನಾನು 5 ಕೋಟಿ ರೂ ಗಳನ್ನು ನಿಗದಿಪಡಿಸುತ್ತಿದ್ದೇನೆ** ಹೊಸ ಉದ್ಯಮಗಳನ್ನು ಸ್ಥಾಪಿಸಲು ಮುಂದೆ ಬರುವ ಉದ್ದಿಮೆದಾರರಿಗೆ ಬಂಡವಾಳ ನೆರವನ್ನು ನೀಡಲು ನಾನು 5 ಕೋಟಿ ರೂ ಗಳನ್ನು ಮೀಸಲಿಡುತ್ತಿದ್ದೇನೆ

245 ನ್ಯಾನೋ ಟೆಕ್ನಾಲಜಿ ವಿಜ್ಞಾನದ ಹೊಸ ಕ್ಷೇತ್ರವಾಗಿ ಹೊರಹೊಮ್ಮುತ್ತಿದ್ದು, ಇದು ಅನೇಕ ಅವಕಾಶಗಳನ್ನು ಒದಗಿಸಿಕೊಡಲಿದೆ ಈ ದಿಕ್ಕಿನಲ್ಲಿ ಮುನ್ನಡೆಯಲು ನಾನು ಪ್ರಾಸ್ತವಿಕವಾಗಿ 3 ಕೋಟಿ ರೂ ಗಳನ್ನು ನೀಡಲು ಬಯಸುತ್ತೇನೆ ಅವಶ್ಯಕತೆ ಇದ್ದಲ್ಲಿ ಮುಂದೆ ಇನ್ನೂ ಹೆಚ್ಚಿನ ಹಣವನ್ನು ಈ ಉದ್ದೇಶಕ್ಕೆ ಒದಗಿಸಲಾಗುವುದು

ಇಂಧನ

246 ಕರ್ನಾಟಕ ವಿದ್ಯುತ್ ನಿಗಮ ಸಂಸ್ಥೆಯ ಸ್ಥಾಪಿತ ಸಾಮರ್ಥ್ಯವು 4994 83 ಮೆಗಾ ವ್ಯಾಟ್ ಆಗಿರುತ್ತದೆ ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಕೇಂದ್ರದ ಘಟಕ 1 ಮತ್ತು 2, ವರಾಹಿ ಜಲವಿದ್ಯುತ್ ಯೋಜನೆ, ಹಾಗೂ ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರದ ಯೋಜನೆಗಳನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಲು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ 400 ಮೆಗಾ ವ್ಯಾಟ್ ಸಾಮರ್ಥ್ಯದ ಗುಂಡ್ಯ ಜಲೋತ್ಪನ್ನ ವಿದ್ಯುತ್ ಕೇಂದ್ರವನ್ನು ಹನ್ನೊಂದನೇ ಪಂಚ ವಾರ್ಷಿಕ ಯೋಜನೆಯಲ್ಲಿ ಕೈಗೆತ್ತಿಕೊಳ್ಳಲಾಗುವುದು

ನಮ್ಮ ಸರ್ಕಾರವು ಖಾಸಗಿ ಸಂಸ್ಥೆಗಳಿಗೆ ವಿದ್ಯುತ್ ಉತ್ಪಾದನಾ ಕ್ಷೇತ್ರದಲ್ಲಿ ಬಂಡವಾಳವನ್ನು ಹೂಡಲು ಉತ್ತೇಜನ ನೀಡಲಿದೆ ಹರಾಜು ಮೂಲಕ ಖಾಸಗಿ ಬಂಡವಾಳ ಹೂಡಿಕೆಯನ್ನು ವಿದ್ಯುತ್ ಉತ್ಪಾದನಾ ಕ್ಷೇತ್ರದಲ್ಲಿ ತೊಡಗಿಸಲು ಕ್ರಮವನ್ನು ಕೈಗೊಳ್ಳಲಿದ್ದೇವೆ

247 ಈಗಾಗಲೇ ಕರ್ನಾಟಕ ವಿದ್ಯುತ್ ನಿಯಂತ್ರಣಾ ಪ್ರಾಧಿಕಾರಕ್ಕೆ **ತಿಳಿಸಿರುವಂತೆ 2007-08ನೇ ಸಾಲಿನಲ್ಲೂ 1,800 ಕೋಟಿ ರೂ ಗಳನ್ನು ವಿದ್ಯುತ್ ಸಹಾಯಧನ ರೂಪದಲ್ಲಿ ನೀಡಲು ಪ್ರಸ್ತಾಪಿಸುತ್ತೇನೆ** ಕರ್ನಾಟಕ ವಿದ್ಯುತ್ ಪ್ರಸರಣಾ ನಿಗಮ ದಿನಾಂಕ 31 05 2002ಕ್ಕೆ ಬಾಕಿ ಇರುವ ವಿದ್ಯುತ್ ಸರಬರಾಜು ಕಂಪನಿಗಳ ನೌಕರರ ಪಿಂಚಣಿ, ಗ್ರಾಚುಯಿಟಿ ಹಣವನ್ನು ನೀಡಲು 280 ಕೋಟಿ ರೂ ಗಳನ್ನು ಒದಗಿಸಲು ಪ್ರಸ್ತಾಪಿಸುತ್ತೇನೆ

248 ಹಿಂದುಳಿದ ತಾಲ್ಲೂಕುಗಳಲ್ಲಿ ಉತ್ತಮ ಗುಣಮಟ್ಟದ ವಿದ್ಯುತ್‌ನ್ನು ಒದಗಿಸುವುದು ನಮ್ಮ ಸರ್ಕಾರದ ಪ್ರಮುಖ ಉದ್ದೇಶವಾಗಿದೆ ವಿದ್ಯುತ್ ವಿತರಣಾ ಸಂಸ್ಥೆಗಳಿಗೆ ಗ್ರಾಮೀಣ ಪ್ರದೇಶಗಳಲ್ಲಿ ವಿದ್ಯುತ್ ನಿರ್ವಹಣಾ ಯೋಜನೆಯನ್ನು ವಹಿಸಲಾಗುವುದು ಈ ಕಾರ್ಯಕ್ಕೆ 250 ಕೋಟಿ ರೂ ಗಳನ್ನು ನೀಡಲು ಉದ್ದೇಶಿಸಿದ್ದೇನೆ ಈ ಹಣವನ್ನು ವಿಶೇಷ ಅಭಿವೃದ್ಧಿ ಯೋಜನೆಯಲ್ಲಿರುವಂತೆ ಪ್ರಾಂತೀಯ ಅಸಮಾನತೆ ನಿವಾರಿಸಲು ಉದ್ದೇಶಿಸಿದ್ದೇನೆ

249 2007-08 ನೇ ಸಾಲಿನಲ್ಲಿ 1,000 ತಾಂಡಾಗಳಿಗೆ ಸೌರಶಕ್ತಿ, ಕಿರು ಜಲೋತ್ಪನ್ನ, ಜೈವಿಕ, ಅನಿಲ ರೂಪದ ನವೀಕೃತ ಇಂಧನ ಮೂಲಗಳಿಂದ ಉತ್ಪಾದನೆ ಆಗುವ ವಿದ್ಯುತ್‌ನ್ನು ಒದಗಿಸಲು ಉದ್ದೇಶಿಸಿದ್ದೇನೆ ಈ ಯೋಜನೆಗೆ ಕೇಂದ್ರ ಸರ್ಕಾರದಿಂದ ಶೇಕಡಾ 90ರಷ್ಟು ಸಹಾಯ ಧನ ದೊರೆಯಲಿದೆ

ಅರಣ್ಯ

250 ಜೆಬಿಐಸಿ ನೆರವಿನ **'ಕರ್ನಾಟಕ ಸುಸ್ಥಿರ ಅರಣ್ಯ ನಿರ್ವಹಣೆ ಮತ್ತು ಜೈವಿಕ ವೈವಿಧ್ಯ ಸಂರಕ್ಷಣಾ ಯೋಜನೆ'**ಯನ್ನು ಅನುಷ್ಠಾನಗೊಳಿಸಲು ನಾನು 2007-08ರಲ್ಲಿ **137 ಕೋಟಿ ರೂ ಗಳನ್ನು ಒದಗಿಸಲು** ಉದ್ದೇಶಿಸಿದ್ದೇನೆ

251 ತುಮಕೂರು ಜಿಲ್ಲೆಯ ಮೈದನಹಳ್ಳಿಯಲ್ಲಿ ಸುಮಾರು 323 28 ಹೆಕ್ಟೇರ್ ಪ್ರದೇಶದಲ್ಲಿ ವನ್ಯ ಜೀವಿಗಳನ್ನು ಕಾಪಾಡಲು ಹಾಗೂ ಸಂರಕ್ಷಣೆ

ಮಾಡುವ ಉದ್ದೇಶದಿಂದ "ಕೃಷ್ಣಮೃಗ ಸಂರಕ್ಷಣಾ ವಲಯ" (Black Buck Conservation Area) ಎಂದು ಘೋಷಿಸಲು 2007-08ನೇ ಸಾಲಿನಲ್ಲಿ ಕ್ರಮವನ್ನು ಕೈಗೊಳ್ಳಲಾಗುವುದು

ಪರಿಸರ ಮತ್ತು ಜೀವಿಶಾಸ್ತ್ರ

252 2007-08ನೇ ಸಾಲಿನಲ್ಲಿ **'ಕರ್ನಾಟಕ ರಾಜ್ಯ ಪರಿಸರ ಪ್ರಭಾವ ಮೌಲ್ಯಮಾಪನಾ ಪ್ರಾಧಿಕಾರ'** ಮತ್ತು **'ಕರ್ನಾಟಕ ರಾಜ್ಯ ತಜ್ಞ ಮಾಲೀಕರಣ ಸಮಿತಿ'** ಯನ್ನು ಸ್ಥಾಪಿಸಲಾಗುವುದು ರಾಷ್ಟ್ರೀಯ ಕೆರೆ ಸಂರಕ್ಷಣಾ ಕಾರ್ಯಕ್ರಮ ಮತ್ತು ರಾಷ್ಟ್ರೀಯ ನದಿ ಸಂರಕ್ಷಣಾ ಕಾರ್ಯಕ್ರಮ ಎನ್ನುವ ಎರಡು ಕೇಂದ್ರ ಪುರಸ್ಕೃತ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುವುದು ಈ ಕಾರ್ಯಕ್ಕಾಗಿ ರೂ 34 ಕೋಟಿಗಳನ್ನು 2007-08ನೇ ಸಾಲಿನಲ್ಲಿ ಮೀಸಲಿಡಲು ಉದ್ದೇಶಿಸಿರುತ್ತೇನೆ

253 ಕರ್ನಾಟಕ ರಾಜ್ಯ ಮತ್ತು ವಿಶೇಷವಾಗಿ ಬೆಂಗಳೂರು ನಗರದಲ್ಲಿ ಎಲೆಕ್ಟ್ರಾನಿಕ್ ವಸ್ತುಗಳ ಪುನರ್ ಬಳಕೆಗೆ ವಿಪುಲವಾದ ಅವಕಾಶಗಳಿವೆ ಎಲೆಕ್ಟ್ರಾನಿಕ್ ವಸ್ತುಗಳು ಬಹು ಬೇಗ ಹಾಳಾಗುವುದರಿಂದ ಸಧ್ಯಕ್ಕೆ ಈ ವಸ್ತುಗಳ ತ್ಯಾಜ್ಯವನ್ನು ಸಮರ್ಪಕವಾಗಿ ವಿಲೇವಾರಿ ಮಾಡಲು ವ್ಯವಸ್ಥೆ ಅಥವಾ ಅನುಕೂಲಗಳಿರುವುದಿಲ್ಲ ಪುನರ್ ಬಳಕೆ ಮಾಡಬಹುದಾದ ಎಲೆಕ್ಟ್ರಾನಿಕ್ ವಸ್ತುಗಳನ್ನು ಮಾರಾಟ ಮಾಡಲು ವ್ಯವಸ್ಥೆ ಕಲ್ಪಿಸಬೇಕಾಗಿರುತ್ತದೆ ಈ ರೀತಿ ಕ್ರಮಗಳನ್ನು ಕೈಗೊಳ್ಳಲು 85 ಲಕ್ಷ ರೂ ಗಳನ್ನು ಮೀಸಲಿಡಲು ಬಯಸುತ್ತೇನೆ

ಕಾನೂನು ಮತ್ತು ಸಂಸದೀಯ ವ್ಯವಹಾರಗಳು'

254 ತ್ವರಿತಗತಿಯ ನ್ಯಾಯಾಲಯಗಳನ್ನು ಈ ಹಿಂದೆ ಸ್ಥಾಪಿಸಲಾಗಿದ್ದು, ಅವುಗಳನ್ನು 2007-08ನೇ ಸಾಲಿನಲ್ಲಿಯೂ ಸಹ ಮುಂದುವರಿಸುವುದು ನಮ್ಮ ಧ್ಯೇಯವಾಗಿದೆ ಅಲ್ಲದೇ ಎಲ್ಲಾ ಜಿಲ್ಲೆಗಳಲ್ಲೂ ಸಹ ಲೋಕ ಅದಾಲತ್‌ನ್ನು ಸ್ಥಾಪಿಸಲು 2 00 ಕೋಟಿ ರೂ ಗಳನ್ನು ವಿನಿಯೋಗಿಸಲಾಗುವುದು ನವ ಕಾನೂನು ಪದವೀಧರರಿಗೆ ಸಧ್ಯಕ್ಕೆ ನೀಡುತ್ತಿರುವ ಮಾಸಾಶನವನ್ನು 1000 ರೂ ಗಳಿಂದ 2000 ರೂ ಗಳಿಗೆ ಹೆಚ್ಚಿಸಲು ಪ್ರಸ್ತಾಪಿಸುತ್ತೇನೆ

255 ಧಾರವಾಡ ಮತ್ತು ಗುಲ್ಬರ್ಗಾಗಳಲ್ಲಿ ಸಂಚಾರಿ ಪೀಠದ ನಿರ್ಮಾಣ ಪೂರ್ಣಗೊಳಿಸಲು 20 ಕೋಟಿ ರೂ ಗಳನ್ನು ಪ್ರಸ್ತಾವಿಸಿರುತ್ತೇನೆ

256 ಶಿವಮೊಗ್ಗ ಮತ್ತು ಗುಲ್ಬರ್ಗಾಗಳಲ್ಲಿ ಸರ್ಕಾರಿ ಕಾನೂನು ಕಾಲೇಜುಗಳನ್ನು ಸ್ಥಾಪಿಸಲಾಗುವುದು

ಗೃಹ

257 ಕರ್ನಾಟಕ ರಾಜ್ಯದ ಕಾನೂನು ಸುವ್ಯವಸ್ಥೆ ವರ್ಷದೊಳಗೆ ಸಾಲಿನಲ್ಲಿ ಶಾಂತಿಯುತವಾಗಿತ್ತು ತೀವ್ರ ಸ್ವರೂಪದ ಅವಘಡಗಳು ಸಂಭವಿಸಿರುವುದಿಲ್ಲ ಆದರೂ ರಾಜ್ಯದಲ್ಲಿ ಹೆಚ್ಚಿರುವ ಜನಸಂಖ್ಯೆಗೆ ಅನುಗುಣವಾಗಿ ಪೊಲೀಸ್ ಸಾಮರ್ಥ್ಯವನ್ನು ಬಲಪಡಿಸಬೇಕಿದೆ ಈ ಹಿನ್ನೆಲೆಯಲ್ಲಿ **ಮುನಿರಾಬಾದ್‌ನಲ್ಲಿ ಇಂಡಿಯಾ ರಿಸರ್ವ್ ಪೊಲೀಸ್ ಪಡೆಯನ್ನು ಸ್ಥಾಪಿಸಲು ನಾನು 2 ಕೋಟಿ ರೂ ಗಳನ್ನು ಮೀಸಲಿಡಲು** ಬಯಸುತ್ತೇನೆ ಅಲ್ಲದೇ, **ಹೂವಿನಹಡಗಲಿಯಲ್ಲಿ ಸಶಸ್ತ್ರ ಮೀಸಲು ಪಡೆಗೆ ತರಬೇತಿ ಕೇಂದ್ರವನ್ನು ಸ್ಥಾಪಿಸಲು 3 00 ಕೋಟಿ ರೂ ಗಳನ್ನು ಒದಗಿಸಲು** ಪ್ರಸ್ತಾಪಿಸಿರುತ್ತೇನೆ ಹುಬ್ಬಳ್ಳಿ ನಗರ ಸಶಸ್ತ್ರ ಮೀಸಲು ಪಡೆಯ ನೌಕರರಿಗೆ ವಸತಿ ಸೌಕರ್ಯ ಒದಗಿಸುವ ಸಲುವಾಗಿ ರೂ 3 00 ಕೋಟಿ ರೂ ಗಳನ್ನು ಮೀಸಲಿಡಲು ಪ್ರಸ್ತಾಪಿಸಿರುತ್ತೇನೆ ಮತ್ತು ಈ ಕೆಲಸವನ್ನು ಪೊಲೀಸ್ ಹೌಸಿಂಗ್ ಕಾರ್ಪೊರೇಷನ್ ಕೈಗೆತ್ತಿಕೊಳ್ಳಲಿದೆ

258 ರಾಜ್ಯದ ಪ್ರಾಸಿಕ್ಯೂಷನ್ ಇಲಾಖೆಯು ಕಂಪ್ಯೂಟರ್‌ಗಳನ್ನು ಕಾನೂನು ಪುಸ್ತಕಗಳನ್ನು, ನಿಯತಕಾಲಿಕೆಗಳನ್ನು ನೀಡಲು ಕೋರಿಕೆ ಸಲ್ಲಿಸಿರುತ್ತದೆ ಈ ಹಿನ್ನೆಲೆಯಲ್ಲಿ ನಾನು 1 50 ಕೋಟಿ ರೂ ನೀಡಲು ಪ್ರಸ್ತಾಪಿಸಿರುತ್ತೇನೆ

259 **ಬೆಂಗಳೂರು ನಗರದಲ್ಲಿ ವಾಹನ ಸಂಚಾರ ನಿಯಂತ್ರಣಕ್ಕೆ 'ಬಿ' ಟ್ರಾಕ್** ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ ಈ ಯೋಜನೆಗೆ **2007-08ನೇ ಸಾಲಿನಲ್ಲಿ 35 ಕೋಟಿ ರೂ ಗಳನ್ನು ಮೀಸಲಿಡಲು** ಪ್ರಸ್ತಾಪಿಸಿರುತ್ತೇನೆ

ಅಗ್ನಿಶಾಮಕ ದಳ

260 ಕೆ-ಸೇಫ್ (K-safe) 2010 ಎನ್ನುವ ಯೋಜನೆಯಡಿ ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲಿ ಅಗ್ನಿಶಾಮಕ ಕೇಂದ್ರಗಳನ್ನು ತೆರೆಯುವ ಉದ್ದೇಶ ಇದೆ **ಇದಕ್ಕಾಗಿ 35 ಕೋಟಿ ರೂ ಗಳನ್ನು ಈ ಕಾರ್ಯಕ್ಕಾಗಿ** ಮೀಸಲಿಡುತ್ತಿದ್ದೇನೆ ಪ್ರಾದೇಶಿಕ ಅಸಮತೋಲನ ನಿವಾರಣೆಗಾಗಿ ವಿಶೇಷ ಅಭಿವೃದ್ಧಿ ಯೋಜನೆಯಡಿ ಅನುದಾನವನ್ನು ವೆಚ್ಚ ಮಾಡಲಾಗುವುದು

261 ಸದ್ಯಕ್ಕೆ ಪೊಲೀಸ್ ಸಿಬ್ಬಂದಿಗಳಿಗೆ ಮಾತ್ರ ಸರ್ಕಾರದ ವತಿಯಿಂದ ಉಚಿತ ಆಹಾರ ಧಾನ್ಯಗಳನ್ನು ಪೂರೈಸಲಾಗುತ್ತಿದೆ ಮತ್ತು ಪೊಲೀಸರ ಕಲ್ಯಾಣ ನಿಧಿಗೆ ಸರ್ಕಾರ ವಂತಿಗೆ ನೀಡುತ್ತಿದೆ ಇದೇ ಅನುಕೂಲಗಳನ್ನು ಅಗ್ನಿಶಾಮಕದ ಸೇವೆಯಲ್ಲಿ ಮತ್ತು ಹೋಮ್‌ಗಾರ್ಡ್ ಸೇವೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ ಖಾಯಂ ನೌಕರರಿಗೂ ಸಹ ನೀಡಲು ಯೋಜಿಸಲಾಗಿದೆ ಇದಲ್ಲದೆ ಅಗ್ನಿಶಾಮಕದಳ ಸಿಬ್ಬಂದಿಗಳಿಗೆ ಹೆಚ್ಚುವರಿಯಾಗಿ ಮತ್ತೊಂದು ಜೊತೆ ಸಮವಸ್ತ್ರಕ್ಕಾಗಿ ಭತ್ಯೆ ನೀಡಲು ಪ್ರಸ್ತಾಪಿಸಿರುತ್ತೇನೆ

262 ಬೆಂಗಳೂರು ಅಗ್ನಿಶಾಮಕ ದಳಕ್ಕೆ ಅಗತ್ಯವಿರುವ ಸ್ಕೈ ಲಿಫ್ಟ್ ನೀಡಲು ಉದ್ದೇಶಿಸಲಾಗಿದೆ

ಜೈಲು ಮತ್ತು ಬಂದೀಖಾನೆ

263 ರಾಜ್ಯದಲ್ಲಿ ಹಾಲಿ ಸುಮಾರು 13,000 ಖೈದಿಗಳು ಮತ್ತು ವಿಚಾರಣಾಧೀನರು ಇರುತ್ತಾರೆ ಈ ರೀತಿಯ ವ್ಯಕ್ತಿಗಳಿಗೆ ಪುರ್ನವಸತಿ ಯೋಜನೆ ಕಾರ್ಯಕ್ರಮದಡಿಯಲ್ಲಿ ಅನೇಕ ರೀತಿಯ ಸೇವಾ ಕೌಶಲ್ಯ ತರಬೇತಿಯನ್ನು ನೀಡಲಾಗುವುದು ಸಧ್ಯಕ್ಕೆ ಸೇವಾ ಕೌಶಲ್ಯ ನೀಡಲು ಅಗತ್ಯ ಇರುವ ಸ್ಥಳಾವಕಾಶ, ಉಪಕರಣಗಳು, ತರಬೇತಿದಾರರು, ಲಭ್ಯ ಇದ್ದರೂ ಸಹ ತರಬೇತಿ ನೀಡಲು ಬೇಕಾಗಿರುವ ಕಚ್ಚಾಸಾಮಗ್ರಿಗಳಿಗೆ ಹಣ ಸಾಕಷ್ಟು ಇರುವುದಿಲ್ಲ **ಆದುದರಿಂದ 2007-08ನೇ ಸಾಲಿನಲ್ಲಿ ಕಚ್ಚಾಸಾಮಗ್ರಿಗಳಿಗಾಗಿ 2 70 ಕೋಟಿ ರೂ ಗಳನ್ನು ಮೀಸಲಿಡಲು ಪ್ರಸ್ತಾಪಿಸಿರುತ್ತೇನೆ** ಎರಡನೆಯದಾಗಿ ವಿಚಾರಣಾಧೀನ ಖೈದಿಗಳು ನ್ಯಾಯಾಧೀಶರ ಮುಂದೆ ಹಾಜರಾಗಲು ಸೆರೆಮನೆಯಿಂದ ಹೊರಗೆ ಬರುವುದನ್ನು ತಪ್ಪಿಸುವ ಸಲುವಾಗಿ ನ್ಯಾಯಾಲಯ ಮತ್ತು ಬಂದೀಖಾನೆಗಳ ಮಧ್ಯೆ ವೀಡಿಯೋ ಕಾನ್‌ಫರೆನ್ಸಿಂಗ್ ತಂತ್ರಜ್ಞಾನವನ್ನು ಅಳವಡಿಸಲು ಯೋಜಿಸಲಾಗಿದೆ **ಈ ನಿಟ್ಟಿನಲ್ಲಿ 12 ಬಂದೀಖಾನೆಗಳ ಮತ್ತು 12 ನ್ಯಾಯಾಲಯಗಳ ಮಧ್ಯೆ ವೀಡಿಯೋ ಕಾನ್‌ಫರೆನ್ಸಿಂಗ್ ವ್ಯವಸ್ಥೆಯನ್ನು ಅಭಿವೃದ್ಧಿ ಪಡಿಸಲು 1 78 ಕೋಟಿ ರೂ ಗಳನ್ನು ಮೀಸಲಿಡಲು ಪ್ರಸ್ತಾಪಿಸಿರುತ್ತೇನೆ**

ಆಹಾರ ಮತ್ತು ನಾಗರೀಕ ಪೂರೈಕೆ

264 ದುರ್ಬಲ ವರ್ಗದವರಿಗೆ ಆಹಾರ ಸುರಕ್ಷತೆ ಒದಗಿಸುವುದು ರಾಜ್ಯ ಸರ್ಕಾರದ ಪ್ರಮುಖ ಉದ್ದೇಶವಾಗಿದೆ ಪಡಿತರ ಚೀಟಿಯ ಬಳಕೆಯನ್ನು

ನ್ಯಾಯಬೆಲೆ ಅಂಗಡಿಗಳಲ್ಲಿ ಕೇವಲ ಪಡಿತರ ಪಡೆಯಲಿಕ್ಕೆ ಮಾತ್ರ ಸೀಮಿತಗೊಳಿಸುತ್ತೇನೆ ಇನ್ನು ಮುಂದೆ ಸರ್ಕಾರದ ಹಲವಾರು ಕಾರ್ಯಕ್ರಮಗಳ ಅನುಕೂಲ ಪಡೆಯಲು ಪಡಿತರ ಚೀಟಿ ಹೊಂದಿರುವುದು ಆಧಾರವಾಗಿರುವುದಿಲ್ಲ

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಮತ್ತು ಇ-ಆಡಳಿತ

265 ಮೊದಲಬಾರಿಗೆ ವಿಧಾನಸಭೆ ಅಧಿವೇಶನವು ರಾಜಧಾನಿಯ ಹೊರಗೆ ನಡೆದಿದೆ ಈ ಅಧಿವೇಶನದ ನಂತರ, ಡಾ ಡಿ.ಎಂ ನಂಜುಂಡಪ್ಪ ವರದಿ ಪ್ರಾದೇಶಿಕ ಅಸಮತೋಲನ ವರದಿಯ ಶಿಫಾರಸ್ಸುಗಳು ನಿರ್ದಿಷ್ಟರೂಪ ಪಡೆದಿರುತ್ತದೆ ಇದನ್ನು ಆಯವ್ಯಯದಲ್ಲಿ ಹೇಳಲಾಗಿದೆ ಇನ್ನು ಮುಂದೆ ಪ್ರತಿವರ್ಷ ಕಡೆ-ಪಕ್ಷ 15 ದಿನದ ವಿಧಾನ ಮಂಡಲದ ಜಂಟಿ ಅಧಿವೇಶನವನ್ನು ಬೆಳಗಾವಿಯಲ್ಲಿ ನಡೆಸಲು ತೀರ್ಮಾನಿಸಿರುತ್ತೇವೆ ಈ ಅಧಿವೇಶನವನ್ನು ಬೆಳಗಾವಿಯಲ್ಲಿ ನಡೆಸಲು ಸುವರ್ಣ ವಿಧಾನಸೌಧ ನಿರ್ಮಾಣವನ್ನು 250 ಕೋಟಿ ರೂ ಗಳ ವೆಚ್ಚದಲ್ಲಿ ತೆಗೆದುಕೊಳ್ಳಲಾಗುವುದು **ರೂ 70 ಕೋಟಿಯನ್ನು ವಿಧಾನಸೌಧ ಹಾಗೂ ಇತರೇ ಕಟ್ಟಡಗಳ ನಿರ್ಮಾಣಕ್ಕಾಗಿ ಮೀಸಲಿಡುತ್ತೇನೆ**

266 ಹೈದರಾಬಾದ್ ಕರ್ನಾಟಕ ವಿಮೋಚನಾ ಚಳುವಳಿಯಲ್ಲಿ ಭಾಗವಹಿಸಿದ ರಮಾನಂದತೀರ್ಥರು, ಕೊಲ್ಲೂರುಮಲ್ಲಪ್ಪ, ಚಂದ್ರಶೇಖರ ಪಾಟೀಲ, ಶಿವಮೂರ್ತಿಅಳವಂಡಿ ಮೊದಲಾದ ಮಹನೀಯರ ಹೆಸರಿನಲ್ಲಿ **ಸುವರ್ಣ ಸ್ವಾತಂತ್ರ್ಯ ಹೋರಾಟ ಭವನವನ್ನು ನಿರ್ಮಿಸಲು 5 ಕೋಟಿ ರೂ ಗಳನ್ನು ಮೀಸಲಿಡಲು ಪ್ರಸ್ತಾಪಿಸುತ್ತಿದ್ದೇನೆ** ಹಾವೇರಿ ಜಿಲ್ಲೆಯ ಹೊಸರೀಕ್ತಿಯಲ್ಲಿ ಸ್ವಾತಂತ್ರ್ಯ ಯೋಧರ ಸ್ಮಾರಕ ಭವನವನ್ನು **ಕಟ್ಟಲು ರೂ 40 ಲಕ್ಷ ರೂ ಗಳನ್ನು ಭರಿಸಲು ಪ್ರಸ್ತಾಪಿಸುತ್ತೇನೆ**

ಸ್ವಾತಂತ್ರ್ಯ ಹೋರಾಟಗಾರರ ಗೌರವಧನ

267 ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದವರು ಪ್ರಸ್ತುತ ಮಾಸಿಕ 1500 ರೂ ಗಳ ಗೌರವಧನ ಪಡೆಯುತ್ತಿದ್ದಾರೆ ಈ ಮೊತ್ತವನ್ನು ಹೆಚ್ಚಿಸುವಂತೆ ಹಲವಾರು ಸಂಘ ಸಂಸ್ಥೆಗಳಿಂದ ಮನವಿ ಮತ್ತು ಬೇಡಿಕೆಗಳು ಬಂದಿವೆ ಇವರ ಮನವಿಯನ್ನು ಪರಿಗಣಿಸಿ ಸ್ವಾತಂತ್ರ್ಯ ಹೋರಾಟಗಾರರ ಗೌರವಧನವನ್ನು **1,500 ರೂ ಗಳಿಂದ 3,000 ರೂ ಗಳಿಗೆ ಹೆಚ್ಚಿಸಲು ನಾನು ಉದ್ದೇಶಿಸಿದ್ದೇನೆ**

ಗೋವಾ ವಿಮೋಚನಾ ಚಳವಳಿಗಾರರಿಗೆ ಗೌರವಧನ

268 ಕ್ವಿಟ್ ಇಂಡಿಯ ಚಳವಳಿ ಮತ್ತು 1947ರ ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿದ್ದ ಸ್ವಾತಂತ್ರ್ಯ ಹೋರಾಟಗಾರರಿಗೆ ಗೌರವಧನವನ್ನು ನೀಡಲಾಗುತ್ತಿದೆ ಆದರೆ ಗೋವಾ ವಿಮೋಚನಾ ಚಳವಳಿಗಾರರಿಗೆ ಈ ಗೌರವಧನವನ್ನು ನೀಡುತ್ತಿಲ್ಲ ಬಹಳ ದಿನಗಳಿಂದ ನೆನೆಗುದಿಯಲ್ಲಿದ್ದ ಬೇಡಿಕೆಯನ್ನು ಮೈತ್ರಿಕೂಟ ಸರ್ಕಾರ ಈಡೇರಿಸಲಿದೆ ಆದ್ದರಿಂದ ಗೋವಾ ವಿಮೋಚನಾ ಚಳವಳಿಗಾರರ ಬಹಳ ದಿನಗಳ ಬೇಡಿಕೆಯನ್ನು ಮನ್ನಿಸಿ **ಅವರಿಗೆ ಮಾಸಿಕ 2000 ರೂ ಗಳ** ಗೌರವಧನವನ್ನು ನೀಡಲು ನಾನು ಉದ್ದೇಶಿಸಿದ್ದೇನೆ

269 ಸರ್ಕಾರ ಮತ್ತು ನಾಗರೀಕರ ನಡುವೆ ಸಂಪರ್ಕವನ್ನು ಹೆಚ್ಚಿಸಲು ನಮ್ಮ ಸರ್ಕಾರವು "ಕರ್ನಾಟಕ ಕರೆ ಕೇಂದ್ರ" ಎನ್ನುವ ಸಂಸ್ಥೆಯನ್ನು ಪ್ರಾರಂಭಿಸಲು ತೀರ್ಮಾನಿಸಿದೆ ಇದರಿಂದಾಗಿ ಸಾರ್ವಜನಿಕರು ತಮ್ಮ ಕುಂದು ಕೊರತೆಗಳನ್ನು ಸರ್ಕಾರಕ್ಕೆ ತಿಳಿಸಲು ಬೆಂಗಳೂರು ಮತ್ತು ಇತರೇ ಜಿಲ್ಲಾ ಕೇಂದ್ರಕ್ಕೆ ಬರುವ ಅಗತ್ಯವಿರುವುದಿಲ್ಲ ತಾವಿರುವ ಸ್ಥಳದಿಂದಲೇ ತಮ್ಮ ತೊಂದರೆಗಳನ್ನು ಈ ಕರೆ ಕೇಂದ್ರಕ್ಕೆ ತಿಳಿಸಬಹುದಾಗಿರುತ್ತದೆ ಈ ಕೇಂದ್ರವು ಹೆಚ್ಚು ನೈಪುಣ್ಯತೆಯಿಂದ ಹಾಗೂ ದಕ್ಷತೆಯಿಂದ ಕೆಲಸ ನಿರ್ವಹಿಸಲು ಸಾರ್ವಜನಿಕ-ಖಾಸಗಿ-ಸಹಭಾಗಿತ್ವದಲ್ಲಿ ಕರೆ ಕೇಂದ್ರವನ್ನು ತೆರೆಯಲು ಯೋಜಿಸಲಾಗಿದೆ

ಸರ್ಕಾರಿ ನೌಕರರು

270 ಸರ್ಕಾರಿ ನೌಕರರ ವೇತನ ಪರಿಷ್ಕರಣೆಗೆ ಸರ್ಕಾರವು ರಚಿಸಿದ 5ನೇ ವೇತನ ಆಯೋಗವು ತನ್ನ ವರದಿಯನ್ನು ನೀಡಿದೆ ನಮ್ಮ ಸರ್ಕಾರವು ವೇತನ ಆಯೋಗದ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಲು ಉದ್ದೇಶಿಸಿದೆ ಆಯೋಗವು ಶಿಫಾರಸ್ಸು ಮಾಡಿರುವಂತೆ **ದಿನಾಂಕ . 01-07-2005 ರಿಂದ ಸಾಂಕೇತಿಕವಾಗಿ ಅನ್ವಯವಾಗುವಂತೆ ವೇತನವನ್ನು ನಿಗದಿಪಡಿಸಲಾಗುವುದು**

271 ವೇತನ ಆಯೋಗದ ಶಿಫಾರಸ್ಸಿನಂತೆ ಸರ್ಕಾರಿ ಸಿಬ್ಬಂದಿಗಳಿಗೆ ನೀಡಬೇಕಾಗಿರುವ ಪ್ರಮುಖ ಭಾಗವನ್ನು ನೀಡಲಾಗಿದೆ **1 4 2006 ರಿಂದ 31 3 2007 ರವರೆಗೆ ಬಾಕಿ ವೇತನವನ್ನು 2008-09ನೇ ಸಾಲಿನಲ್ಲಿ ವಿತರಿಸಲಾಗುವುದು** ಪರಿಷ್ಕರಿಸಿದ ವೇತನ ಮತ್ತು ಪಿಂಚಣಿಯನ್ನು 1 4 2007 ರಿಂದ ವಿತರಿಸಲಾಗುವುದು

ವಾರ್ಷಿಕ ಯೋಜನೆ 2007-08

272 ನಾನು ವಾರ್ಷಿಕ ಯೋಜನೆಯ ಅಂದಾಜನ್ನು 2006-07ರ ಮುಂಗಡ ಅಂದಾಜು 16166 ಕೋಟಿ ರೂಗಳಿಂದ 2007-08ರ ಮುಂಗಡ ಅಂದಾಜು 17782 56 ಕೋಟಿ ರೂಗಳಿಗೆ ಹೆಚ್ಚಿಸಿದ್ದೇನೆ ಇದು ಯೋಜನಾ ಅಂದಾಜು ವೆಚ್ಚದಲ್ಲಿ ಶೇಕಡ 10 ರಷ್ಟು ಹೆಚ್ಚಳವಾಗಿದೆ ಪ್ರಮುಖ ವಲಯವಾರು ಹಂಚಿಕೆಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ

ಮಾನ್ಯರೆ,

ನಾನು ಈಗ ತೆರಿಗೆ ಪ್ರಸ್ತಾವಗಳನ್ನು ಮಂಡಿಸುತ್ತೇನೆ

ಜೇನ ಹನಿಯಂತೆ ತೆರಿಗೆ ಸಂಗ್ರಹ

273 ಅಭಿವೃದ್ಧಿ ಕಾರ್ಯಗಳಿಗೆ ಸಂಪನ್ಮೂಲಗಳನ್ನು ಕ್ರೋಢೀಕರಿಸುವುದು ಅತ್ಯಗತ್ಯ "ಯಾವ ರೀತಿ ಜೇನುನೊಣಗಳು ಸ್ವಲ್ಪ ಸ್ವಲ್ಪ ಮಧುವನ್ನು ಸಂಗ್ರಹ ಮಾಡುತ್ತವೋ, ಅದೇ ರೀತಿ ಜನರಿಂದ ಸ್ವಲ್ಪ ಸ್ವಲ್ಪ ತೆರಿಗೆಯನ್ನು ಸಂಗ್ರಹಿಸಬೇಕು" ಎಂದು ಸ್ಮೃತಿಗಳಲ್ಲಿ ಹೇಳಿದೆ ತೆರಿಗೆ ವಿಧಿಸುವ ಪ್ರಕ್ರಿಯೆಯಲ್ಲಿ ನಾನು ಈ ಹಿತೋಕ್ತಿಯಿಂದ ನಿರ್ದೇಶಿತನಾಗಿದ್ದೇನೆ ತೆರಿಗೆ ಸಂಪನ್ಮೂಲ ಹೆಚ್ಚಿಸಲು ವಾಣಿಜ್ಯ ಇಲಾಖೆ ಗುಪ್ತವಾರ್ತೆ ವಿಭಾಗವನ್ನು ಬಲಪಡಿಸಲು ನಿರ್ಧರಿಸಿದ್ದೇನೆ

ವಾಣಿಜ್ಯ ತೆರಿಗೆಗಳು

ಮೌಲ್ಯವರ್ಧಿತ ತೆರಿಗೆ

274 ಸಭಾಧ್ಯಕ್ಷರೇ, ಕಳೆದ ಎರಡು ವರ್ಷಗಳಿಂದ ರಾಜ್ಯದಲ್ಲಿ ಜಾರಿಯಲ್ಲಿರುವ ಮೌಲ್ಯವರ್ಧಿತ ತೆರಿಗೆ ವ್ಯವಸ್ಥೆಯಡಿಯಲ್ಲಿ ಆದಾಯ ನಾವು ನಿರೀಕ್ಷಿಸಿದ ಮಟ್ಟಕ್ಕೆ ಬಂದಿದ್ದರೂ ಅದರಲ್ಲಿ ಇನ್ನೂ ಸುಧಾರಣೆ ಆಗಬೇಕಾಗಿದೆ ಬಹುತೇಕ ವಾಣಿಜ್ಯ ಮತ್ತು ಉದ್ಯಮಗಳು ತಮ್ಮ ತೆರಿಗೆ ಅನುವರ್ತನೆಯನ್ನು ಉತ್ತಮಗೊಳಿಸಿದ್ದರೂ, ಕೆಲವು ವ್ಯಾಪಾರಿಗಳು ಈ ವಿಷಯದಲ್ಲಿ ಬಹಳ ಹಿಂದಿದ್ದಾರೆ ಇವರುಗಳ ಬಗ್ಗೆ ಕಟ್ಟುನಿಟ್ಟಿನ ಕ್ರಮ ಕೈಗೊಂಡು ರಾಜ್ಯದ ತೆರಿಗೆ ಆದಾಯ ಹೆಚ್ಚಿಸಲು ಸರ್ಕಾರ ಉದ್ದೇಶಿಸಿರುತ್ತದೆ ಇದಕ್ಕೆ ಅಗತ್ಯವಾದ ಕಾನೂನು ತಿದ್ದುಪಡಿಗಳನ್ನು ಮತ್ತು ಆಡಳಿತಾತ್ಮಕ ಕ್ರಮಗಳನ್ನು ಕೈಗೊಳ್ಳಲು ಪ್ರಸ್ತಾವಿಸಲಾಗಿದೆ

ಪರಿಹಾರಗಳು

275 ಹಲವಾರು ತೆರಿಗೆ ವಿನಾಯಿತಿ, ರಿಯಾಯಿತಿ ಹಾಗೂ ಇತರ ಪರಿಹಾರಗಳನ್ನು ಕೋರುತ್ತಾ ವಾಣಿಜ್ಯ ಉದ್ಯಮಗಳ ಸಂಘ ಸಂಸ್ಥೆಗಳಿಂದ

ಮನವಿಗಳು ಬಂದಿರುತ್ತವೆ ಎಲ್ಲಾ ರಾಜ್ಯಗಳ ಒಟ್ಟಾರೆ ಅಭಿಪ್ರಾಯದ ಆಧಾರದ ಮೇಲೆ ರಾಜ್ಯದಲ್ಲಿ ಜಾರಿಯಲ್ಲಿರುವ ಮೌಲ್ಯವರ್ಧಿತ ತೆರಿಗೆ ವ್ಯವಸ್ಥೆಯಡಿಯಲ್ಲಿ ಮಾರ್ಪಾಡು ಮಾಡಲು ರಾಜ್ಯಕ್ಕಿರುವ ಸೀಮಿತ ಅವಕಾಶದಲ್ಲಿ ಸಾಧ್ಯವಿರುವ ಕೆಲವು ಕೋರಿಕೆಗಳನ್ನು ಪರಿಗಣಿಸಲು ನಾನು ಉದ್ದೇಶಿಸಿರುತ್ತೇನೆ

276 ಅದರಂತೆ, ಸಾಮಾನ್ಯ ಜನ ಬಳಸುವ ಅಕ್ಕಿ, ಭತ್ತ ಮತ್ತು ಗೋಧಿ ಹಾಗೂ ಅಕ್ಕಿ ಮತ್ತು ಗೋಧಿ ಪದಾರ್ಥಗಳು ಹಾಗೂ ದ್ವಿದಳ ಧಾನ್ಯಗಳ ಮೇಲಿನ ತೆರಿಗೆ ವಿನಾಯಿತಿಯನ್ನು ಮತ್ತೊಂದು ವರ್ಷಕ್ಕೆ ಮುಂದುವರೆಸಲು ನಾನು ಪ್ರಸ್ತಾವಿಸುತ್ತೇನೆ

277 ಇದಲ್ಲದೆ,

(1) ಟ್ರಾಕ್ಟರ್‌ಗಳ ರಬ್ಬರ್ ಟೈರುಗಳು ಮತ್ತು ಟ್ಯೂಬುಗಳು,

(2) ಸಾಫ್ಟ್‌ವೇರ್ ಲೈಸೆನ್ಸ್ ಮತ್ತು

(3) ಉಪಯೋಗಿಸಿದ ಮೋಟಾರು ವಾಹನಗಳ ಮೇಲಿನ ತೆರಿಗೆಯನ್ನು ಶೇ 12 5 ರಿಂದ ಶೇ 4ಕ್ಕೆ ಇಳಿಸಲು ನಾನು ಪ್ರಸ್ತಾಪಿಸುತ್ತೇನೆ

278 ಶೇ 4ರ ತೆರಿಗೆಗೆ ಒಳಗಾಗುವ ಕೈಗಾರಿಕಾ ಕಚ್ಚಾ ವಸ್ತುಗಳು ಮತ್ತು ಬಂಡವಾಳ ಸರಕುಗಳ ಪಟ್ಟಿಗೆ ಮತ್ತಷ್ಟು ಸರಕುಗಳನ್ನು ಸೇರಿಸಲು ನಾನು ಪ್ರಸ್ತಾವಿಸುತ್ತೇನೆ

279 ವಿಶೇಷ ಆರ್ಥಿಕ ವಲಯ ನಿರ್ಮಾಣಗಾರರು ಮತ್ತು ಅಲ್ಲಿರುವ ಘಟಕಗಳ ಖರೀದಿಯ ಮೇಲೆ ತೆರಿಗೆ ವಿನಾಯಿತಿ ನೀಡಲು ನಾನು ಪ್ರಸ್ತಾವಿಸುತ್ತೇನೆ

280 ಇದಲ್ಲದೆ,

(1) ರಾಜಿ ತೆರಿಗೆ ಸೌಲಭ್ಯದಡಿಯಲ್ಲಿರುವ ಗುತ್ತಿಗೆದಾರರಿಗೆ ತೆರಿಗೆ ಸಂಗ್ರಹಿಸಲು ಅನುಮತಿ ನೀಡಲು,

(2) ಮಾರಾಟದ ಬಗ್ಗೆ ತೆರಿಗೆ ಇನ್ವಾಯಿಸ್ ನೀಡಲು ಕನಿಷ್ಟ ಮೊತ್ತವನ್ನು ನಿಗದಿ ಪಡಿಸಲು,

(3) ಮಾಸಿಕ ರಿಟರ್ನ್ ಸಲ್ಲಿಕೆಯಲ್ಲಿ ಆದ ವಿಳಂಬದ ಬಗ್ಗೆಯ ದಂಡವನ್ನು ಕಡಿಮೆ ಮಾಡಲು,

(4) ಟ್ಯಾಕ್ಸ್ ಇನ್ವಾಯಿಸ್ ಮೇಲೆ ಡಿಜಿಟಲ್ ಸಹಿ ಮಾಡಲು ಅವಕಾಶ ನೀಡಲು,

(5) ಲೆಕ್ಕ ಪರಿಶೋಧನೆಗಾಗಿ ನಿಗದಿ ಮಾಡಿರುವ ವಹಿವಾಟಿನ ಮಿತಿಯನ್ನು ಏರಿಸಲು,

(6) ಲೆಕ್ಕ ಪುಸ್ತಕಗಳನ್ನು ಸರಿಯಾಗಿ ನಿರ್ವಹಿಸದೇ ಇರುವ ಬಗ್ಗೆ ಇರುವ ದಂಡವನ್ನು ಇಳಿಸಲು,

(7) ಮುಖ್ಯ ಕಾಮಗಾರಿ ಗುತ್ತಿಗೆದಾರರ ವಹಿವಾಟಿನಲ್ಲಿ ಉಪ ಗುತ್ತಿಗೆದಾರರಿಗೆ ಪಾವತಿಸಬೇಕಾದ ಮೊತ್ತಗಳಿಗೆ ಕಡಿತ ನೀಡಲು,

(8) ಪೆಟ್ರೋಲಿಯಂ ಪದಾರ್ಥಗಳು ಹಾಗೂ ಅಂತರ ರಾಜ್ಯ ಸರಕು ವರ್ಗಾವಣೆ ಸಂಬಂಧದ ಹೂಡುವಳಿ ತೆರಿಗೆ ಕಡಿತದ ದರದಲ್ಲಿ ಮಾರ್ಪಾಡು ಮಾಡಲು,

(9) ಕಾಸ್ಟ್ ಅಕೌಂಟೆಂಟ್‌ಗಳು ವ್ಯಾಪಾರಿಗಳ ಲೆಕ್ಕ ಪರಿಶೋಧನೆ ಮಾಡಲು ಅವಕಾಶ ಮಾಡಲು ಮತ್ತು

(10) ಒಂದಕ್ಕಿಂತ ಹೆಚ್ಚಿನ ವ್ಯಾಪಾರಗಳಲ್ಲಿ ತೊಡಗಿರುವ ಒಬ್ಬನೇ ವ್ಯಾಪಾರಿಗೆ ರಾಜಿ ತೆರಿಗೆ ಪಾವತಿ ಸೌಲಭ್ಯ ಆಯ್ಕೆ ಮಾಡಲು ಅವಕಾಶ ನೀಡಲು ನಾನು ಪ್ರಸ್ತಾಪಿಸುತ್ತೇನೆ

ಸುಧಾರಣಾ ಕ್ರಮಗಳು

281 ತೆರಿಗೆ ಪಾವತಿ ಕಾರ್ಯವನ್ನು ಸರಳಗೊಳಿಸಲು ಹಾಗೂ ತೆರಿಗೆ ಆಡಳಿತವನ್ನು ಇನ್ನಷ್ಟು ಪರಿಣಾಮಕಾರಿಯಾಗಿಸಲು ನಾನು ಕೆಲವು ಸುಧಾರಣಾ ಕ್ರಮಗಳನ್ನು ತರಲು ಪ್ರಸ್ತಾಪಿಸುತ್ತೇನೆ ಈ ಕ್ರಮಗಳ ವಿವರಗಳು ಅನುಬಂಧ-2 ರಲ್ಲಿ ಇರುತ್ತವೆ

282 ಇದಲ್ಲದೆ, ಅಬಕಾರಿ ಕಾಯ್ದೆಯಡಿಯಲ್ಲಿ ಶುಲ್ಕ ವಿಧಿಸಲು ಕಾನೂನು ತೊಡಕಿರುವ ಕಾಕಂಬಿ (ಮೊಲಾಸೆಸ್), ಈಥೈಲ್ ಆಲ್ಕೋಹಾಲ್, ಡೀನೇಚರ್ಡ್ ಸ್ಪಿರಿಟ್ ಮತ್ತು ರೆಕ್ಟಿಫೈಡ್ ಸ್ಪಿರಿಟ್‌ಗಳ ಮೇಲೆ ಶೇ 20ರ ತೆರಿಗೆ ವಿಧಿಸಲು ನಾನು ಪ್ರಸ್ತಾವಿಸುತ್ತೇನೆ

ಮಾರಾಟ ತೆರಿಗೆ

ಪರಿಹಾರಗಳು·

283 ಸ್ವಯಂ ವಿದ್ಯುಚ್ಛಕ್ತಿ ಉತ್ಪಾದನೆಗೆ ಖರೀದಿಸುವ ಡೀಸೆಲ್ ಮೇಲೆ ನೀಡಿರುವ ಶೇ 4ರ ತೆರಿಗೆ ವಿನಾಯಿತಿ ಬಗ್ಗೆ ಸ್ವಯಂ ಪ್ರಮಾಣ ಪತ್ರ ನೀಡಲು ಅವಕಾಶ ಮಾಡಿಕೊಡಲು ನಾನು ಪ್ರಸ್ತಾವಿಸುತ್ತೇನೆ

ಪ್ರವೇಶ ತೆರಿಗೆ

ಪರಿಹಾರಗಳು

284 ಅಂತರ ರಾಜ್ಯ ಮಾರಾಟ ಹಾಗೂ ಸರಕು ವರ್ಗಾವಣೆಯಂತೆ ರಾಜ್ಯದ ಹೊರಗೆ ಕಳುಹಿಸಿದ ಸರಕುಗಳ ವಾಪಸಾತಿಗೆ ಸಂಬಂಧಿಸಿದ ಪ್ರವೇಶದ ಮೇಲೆ ತೆರಿಗೆ ವಿನಾಯಿತಿ ನೀಡಲು ನಾನು ಪ್ರಸ್ತಾವಿಸುತ್ತೇನೆ

285 ಇದಲ್ಲದೇ, ರಾಜ್ಯದ ಮಂಗಳೂರಿನಲ್ಲಿರುವ ಓಎನ್‌ಜಿಸಿ ಸ್ವಾಮ್ಯದ ತೈಲ ಸಂಸ್ಕರಣಾ ಘಟಕ ತರಿಸುವ ಕಚ್ಚಾ ತೈಲದ ಮೇಲೆ ತೆರಿಗೆಯನ್ನು ಶೇ 1ಕ್ಕೆ ಇಳಿಸಲು ನಾನು ಪ್ರಸ್ತಾವಿಸುತ್ತೇನೆ

ವೃತ್ತಿ ತೆರಿಗೆ

ಸುಧಾರಣಾ ಕ್ರಮಗಳು

286 (1) ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ನೌಕರರ ವೃತ್ತಿ ತೆರಿಗೆಯನ್ನು ಅವರ ಸೇವೆ ಪಡೆಯುತ್ತಿರುವವರು,

(2) ಬಾಡಿಗೆ ಆಧಾರದ ಮೇಲೆ ಪಡೆದುಕೊಳ್ಳುವ ವಾಣಿಜ್ಯ ವಾಹನಗಳ ಮಾಲೀಕರ ವೃತ್ತಿ ತೆರಿಗೆಯನ್ನು ಅಂತಹ ವಾಹನಗಳನ್ನು ಉಪಯೋಗಿಸುವವರು,

(3) ಕುದುರೆ ಮಾಲೀಕರು, ಸವಾರರು ಮತ್ತು ಬುಕ್ಕಿಗಳ ವೃತ್ತಿ ತೆರಿಗೆಯನ್ನು ರೇಸ್ ಕ್ಲಬ್‌ಗಳು ಮತ್ತು

(4) ಆಸ್ಪತ್ರೆಗಳಿಗೆ ಮತ್ತು ನರ್ಸಿಂಗ್ ಹೋಂಗಳಿಗೆ ಭೇಟಿ ನೀಡುವ ವೈದ್ಯಕೀಯ ಪರಿಣಿತರ ವೃತ್ತಿ ತೆರಿಗೆಯನ್ನು ಅಂತಹ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಂಗಳೇ ಮೂಲದಲ್ಲಿಯೇ ಕಡಿತ ಮಾಡಿ ಸರ್ಕಾರಕ್ಕೆ ಪಾವತಿಸುವಂತೆ ಕಾಯ್ದೆಗೆ ತಿದ್ದುಪಡಿ ತರಲು ನಾನು ಪ್ರಸ್ತಾವಿಸುತ್ತೇನೆ

287 ಇದಲ್ಲದೇ, ಸ್ವಯಂ ವೃತ್ತಿ ನಿರತ ವ್ಯಕ್ತಿಗಳು ವಾರ್ಷಿಕ ವಿವರ ಪಟ್ಟಿ (ರಿಟರ್ನ್) ಸಲ್ಲಿಸುವಂತೆ ನಿಯಮ ತರಲು ಹಾಗೂ ಒಂದಕ್ಕಿಂತ ಹೆಚ್ಚು ವ್ಯಾಪಾರ ಸ್ಥಳ ಹೊಂದಿರುವ ಉದ್ಯೋಗದಾತರು ನೊಂದಣಿಗೆ ಒಂದೇ ಅರ್ಜಿ ಸಲ್ಲಿಸಲು ಅವಕಾಶ ಮಾಡಿಕೊಡಲು ನಾನು ಪ್ರಸ್ತಾವಿಸುತ್ತೇನೆ

ಅಧಿಕ ಸಂಪನ್ಮೂಲ ಕ್ರೋಢೀಕರಣ ಕ್ರಮಗಳು

288 ಈ ಮುಂದಿನ ಕೆಲವು ವೃತ್ತಿ ವರ್ಗದವರನ್ನು ತೆರಿಗೆ ವ್ಯಾಪ್ತಿಗೆ ತರಲು ನಾನು ಪ್ರಸ್ತಾವಿಸುತ್ತೇನೆ

(1) ವಾಹನ ನಿರ್ಮಾಣ ಸೇವೆ ಒದಗಿಸುವ ಗುತ್ತಿಗೆದಾರರು,

(2) ಆಯುರ್ವೇದ ಮುಂತಾದ ಮಸಾಜ್ ಪಾರ್ಲರ್‌ಗಳು,

(3) ಉಪಯೋಗಿಸಿದ ಮೋಟಾರು ವಾಹನಗಳ ಮಾರಾಟ ಏಜೆಂಟ್‌ಗಳು ಮತ್ತು ಸಲಹೆಗಾರರು / ಬ್ರೋಕರ್‌ಗಳು,

(4) ಕಂಪನಿಗಳ ಪ್ರತಿನಿಧಿಗಳಾಗಿ ಕಾರ್ಯ ನಿರ್ವಹಿಸುವ ವ್ಯಕ್ತಿಗಳು,

(5) ವರಮಾನ ತೆರಿಗೆದಾತರಾದ ಆದರೆ ವೃತ್ತಿ ತೆರಿಗೆ ಕಾಯ್ದೆ ಅನುಸೂಚಿಯಲ್ಲಿಲ್ಲದ ಯಾವುದೇ ಸ್ವಯಂ ವೃತ್ತಿ ನಿರತ ವ್ಯಕ್ತಿಗಳು

289 ಇದಲ್ಲದೇ ಶಿಕ್ಷಣ ಸಂಸ್ಥೆಗಳು ಮತ್ತು ಟ್ಯುಟೋರಿಯಲ್‌ಗಳನ್ನು ನಡೆಸುವ ವ್ಯಕ್ತಿಗಳಿಗಿರುವ ತೆರಿಗೆ ವಿನಾಯಿತಿಯನ್ನು ಹಿಂತೆಗೆದುಕೊಳ್ಳಲು ನಾನು ಪ್ರಸ್ತಾವಿಸುತ್ತೇನೆ

ಮನರಂಜನಾ ತೆರಿಗೆ ·

ಪರಿಹಾರಗಳು

290 (1) ಮಲ್ಟಿ ಸಿಸ್ಟಂ ಆಪರೇಟರುಗಳು ತೆರಬೇಕಾದ ತೆರಿಗೆಯನ್ನು ಶೇ 10 ರಿಂದ ಶೇ 6ಕ್ಕೆ ಮತ್ತು

(2) ಅಮ್ಯೂಸ್‌ಮೆಂಟ್ ಪಾರ್ಕ್‌ಗಳ ಮಾಲೀಕರು ತೆರಬೇಕಾದ ತೆರಿಗೆಯನ್ನು ಶೇ 20 ರಿಂದ ಶೇ 10ಕ್ಕೆ ಇಳಿಸಲು ನಾನು ಪ್ರಸ್ತಾವಿಸುತ್ತೇನೆ

291 ನಶಿಸಿ ಹೋಗುತ್ತಿರುವ ನಾಟಕ ಕಲೆಯನ್ನು ರಕ್ಷಿಸುವ ಸಲುವಾಗಿ ಅವುಗಳ ಪ್ರವೇಶದ ಮೇಲೆ ವಿಧಿಸಲಾಗುತ್ತಿರುವ ಮನರಂಜನಾ ತೆರಿಗೆಯನ್ನು ವಿನಾಯಿತಿಗೊಳಿಸಲು ನಾನು ಪ್ರಸ್ತಾವಿಸುತ್ತೇನೆ

ವಿಲಾಸಿ ತೆರಿಗೆ

ಪರಿಹಾರ

292 ಬಹುತೇಕ ರಾಜ್ಯಗಳಲ್ಲಿರುವಂತೆ, ರಾಜ್ಯದಲ್ಲೂ ಕೂಡ ಹೋಟೆಲುಗಳು ವಾಸ್ತವಿಕವಾಗಿ ವಸೂಲು ಮಾಡುವ ಬಾಡಿಗೆ ಮೊತ್ತಗಳ ಮೇಲೆ ಮಾತ್ರ ತೆರಿಗೆ ವಿಧಿಸಲು ನಾನು ಪ್ರಸ್ತಾವಿಸುತ್ತೇನೆ

ಸುಧಾರಣಾ ಕ್ರಮ

293 ಆಸ್ಪತ್ರೆಗಳಲ್ಲಿ ಒದಗಿಸುವ ವಿಲಾಸಿ ಸೌಲಭ್ಯಗಳ ಮೇಲೆ ತೆರಿಗೆ ವಿಧಿಸುವ ಕಲಂನಲ್ಲಿರುವ ಗೊಂದಲವನ್ನು ತೆಗೆದು ಹಾಕಲು ಅದಕ್ಕೆ ಸೂಕ್ತ ತಿದ್ದುಪಡಿ ತರಲು ನಾನು ಪ್ರಸ್ತಾವಿಸುತ್ತೇನೆ

294 ತತ್ಸಂಬಂಧ ತಿದ್ದುಪಡಿಗಳು. ಮೇಲೆ ಪ್ರಸ್ತಾಪಿಸಿದ ಕ್ರಮಗಳನ್ನು ಜಾರಿಗೊಳಿಸಲು ಸಂಬಂಧಪಟ್ಟ ತೆರಿಗೆ ಅಧಿನಿಯಮಗಳಿಗೆ ತಿದ್ದುಪಡಿ ಅವಶ್ಯಕತೆ ಇರುತ್ತದೆ ಸದರಿ ತಿದ್ದುಪಡಿಗಳಲ್ಲದೇ ಸುಧಾರಣಾ ಕ್ರಮವಾಗಿ ಇತರೆ ತಿದ್ದುಪಡಿಗಳನ್ನು ಸಹ ಮಂಡಿಸಲಾಗುವುದು

ಲಾಟರಿ :

295 ರಾಜ್ಯದಲ್ಲಿ ಪ್ರಸ್ತುತ ಪೇಪರ್ ಲಾಟರಿ ಮತ್ತು ಇಂಟರ್‌ನೆಟ್ ಸೇರಿದಂತೆ ಆನ್‌ಲೈನ್ ಲಾಟರಿಗಳನ್ನು ನಡೆಸಲಾಗುತ್ತಿದ್ದು, ಇವುಗಳನ್ನು ಸಮಾಜದ ಮತ್ತು ಬಡಜನರ ಹಿತದೃಷ್ಟಿಯಿಂದ ಮುಂದುವರೆಸಬಾರ ದೆನ್ನುವುದು ಜನತೆಯ ಹಾಗೂ ಸರ್ಕಾರದ ಇಚ್ಛೆಯಾಗಿರುತ್ತದೆ ಅದರಂತೆ ಮುಂದಿನ ಆರ್ಥಿಕ ವರ್ಷದಿಂದ ರಾಜ್ಯದಲ್ಲಿ ಎಲ್ಲಾ ತರಹದ ಲಾಟರಿಗಳನ್ನು ನಿಷೇಧಿಸಿ, ಕರ್ನಾಟಕ ರಾಜ್ಯವನ್ನು 'ಲಾಟರಿ ಮುಕ್ತ ವಲಯ' ಎಂದು ಘೋಷಿಸಲು ನಾನು ಪ್ರಸ್ತಾವಿಸುತ್ತೇನೆ ಲಾಟರಿಗಳ ನಿಷೇಧದಿಂದ ರಾಜ್ಯದ ಬೊಕ್ಕಸಕ್ಕೆ ಸುಮಾರು 250 ಕೋಟಿ ರೂಪಾಯಿಗಳ ನಷ್ಟವಾಗಲಿದ್ದು, ಅದನ್ನು ತೆರಿಗೆ ಸಂಗ್ರಹಣೆ ಕಾರ್ಯವನ್ನು ಇನ್ನಷ್ಟು ಬಲಪಡಿಸುವ ಮೂಲಕ ಭರಿಸಿಕೊಳ್ಳುವ ವಿಶ್ವಾಸ ನನಗಿರುತ್ತದೆ ಇದಲ್ಲದೆ, ಲಾಟರಿ ಟಿಕೇಟುಗಳನ್ನು ಮಾರಾಟ ಮಾಡಿ ಬದುಕುವ ಹಲವಾರು ಜನರು ನಿರುದ್ಯೋಗಿಗಳಾಗುವ ಸಂಭವ ಸರ್ಕಾರದ ಗಮನದಲ್ಲಿದ್ದು, ಅವರುಗಳು ನಿಪುಣತೆ ಅಭಿವೃದ್ಧಿಯಲ್ಲಿ ತರಬೇತಿ ಪಡೆಯಲು ಮುಂದೆ ಬಂದ ಪಕ್ಷದಲ್ಲಿ ಅವರಿಗೆ 'ಕರ್ನಾಟಕ ಸುವರ್ಣ ಕಾಯಕ ಯೋಜನೆ' ಯಡಿಯಲ್ಲಿ ಆದ್ಯತೆ ಕೊಡುವ ಭರವಸೆ ನಾನು ನೀಡುತ್ತೇನೆ

ಅಬಕಾರಿ

296 2006-07 ನೇ ಸಾಲಿನಲ್ಲಿ ಅಬಕಾರಿ ಇಲಾಖೆಯಿಂದ ಒಟ್ಟು 4400 ಕೋಟಿ ರೂ ಗಳ ಆದಾಯವನ್ನು ನಿರೀಕ್ಷಿಸಲಾಗಿದೆ ಇದರಲ್ಲಿ 1905 ಕೋಟಿ ರೂಪಾಯಿಗಳು, ಅಂದರೆ ಒಟ್ಟು ಆದಾಯದ ಶೇಕಡಾ 43 ರಷ್ಟು ಆದಾಯವು ಸಾರಾಯಿ ಮೂಲದಿಂದಲೇ ಬರಲಿದೆ

297 ಆದರೆ ಸ್ತ್ರೀಶಕ್ತಿ ಸ್ವಸಹಾಯ ಸಂಘ, ದಲಿತ ವಿಮೋಚನಾ ರಂಗ, ದಲಿತ ಸಂಘರ್ಷ ಸಮಿತಿ ಹಾಗೂ ಇತರೆ ಸಂಘ ಸಂಸ್ಥೆಗಳಲ್ಲದೆ ಕೆಲವು ಗ್ರಾಮ ಪಂಚಾಯ್ತಿಗಳು ಸಾರಾಯಿ ಮಾರಾಟ ನಿಷೇಧಿಸಲು ತೀವ್ರ ಹೋರಾಟ ನಡೆಸುತ್ತಿರುತ್ತವೆ ಆದುದರಿಂದ ಸರ್ಕಾರದ ಬೊಕ್ಕಸಕ್ಕೆ ಹೆಚ್ಚಿನ ಆದಾಯವಿದ್ದರೂ ಸಹ ಸರ್ಕಾರವು ಈ ಬೇಡಿಕೆಗಳಿಗೆ ಸ್ಪಂದಿಸಿ ಸಾರಾಯಿ ಸೇವನೆಯು ಸಮಾಜದ ಮೇಲೆ ಅದರಲ್ಲೂ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದ ಜನತೆಯ ಮೇಲೆ ದುಷ್ಪರಿಣಾಮ ಮಾಡುತ್ತಿರುವುದನ್ನು ಅತ್ಯಂತ ಕಳಕಳಿಯಿಂದ ಪರಿಗಣಿಸಿದೆ ಸರ್ಕಾರದ ರಾಜಸ್ವಕ್ಕೆ ಹೆಚ್ಚಿನ ಹಿನ್ನಡೆಯಾದರೂ ಸಹ ಹಿಂದುಳಿದ ಮತ್ತು ಬಡ ಜನರ

ಶ್ರೇಯೋಭಿವೃದ್ಧಿ ದೃಷ್ಟಿಯಿಂದ ಇಡೀ ರಾಜ್ಯದಲ್ಲಿ ದಿನಾಂಕ 17 2007 ರಿಂದ ಸಾರಾಯಿ ನಿಷೇಧವನ್ನು ಜಾರಿಗೊಳಿಸಲು ಪ್ರಸ್ತಾವಿಸುತ್ತೇನೆ

298 ಸಾರಾಯಿ ನಿಷೇಧ ಮಾಡುವುದರಿಂದ ಸರ್ಕಾರದ ಜವಾಬ್ದಾರಿ ಹೆಚ್ಚಾಗಲಿದೆ ಇದರ ಪೂರ್ಣ ಅರಿವು ಸರ್ಕಾರಕ್ಕೆ ಇದೆ ಸಾರಾಯಿ ನಿಷೇಧವನ್ನು ಸಮಾಜಘಾತುಕ ವ್ಯಕ್ತಿಗಳು ದುರುಪಯೋಗಪಡಿಸಿಕೊಂಡು ಕಳ್ಳಭಟ್ಟಿ, ನಕಲಿ ಮದ್ಯ ತಯಾರಿಕೆ, ಸಾಗಾಣಿಕೆ ಮತ್ತು ಮಾರಾಟ ಮಾಡುವ ದುಷ್ಕೃತ್ಯಗಳಲ್ಲಿ ತೊಡಗುವ ಸಾಧ್ಯತೆಗಳಿರುತ್ತವೆ ಅಬಕಾರಿ ಇಲಾಖೆಗೆ ಮಾತ್ರ ಇಂತಹ ಕೃತ್ಯಗಳನ್ನು ತಡೆಗಟ್ಟುವುದು ಕಷ್ಟವಾಗುತ್ತದೆ ಆದ್ದರಿಂದ ಇದನ್ನು ಪರಿಣಾಮಕಾರಿಯಾಗಿ ತಡೆಗಟ್ಟುವ ದೃಷ್ಟಿಯಿಂದ ಇನ್ನು ಮುಂದೆ ಅಬಕಾರಿ ಅಪರಾಧಗಳನ್ನು ತಡೆಗಟ್ಟುವಲ್ಲಿ ಅಬಕಾರಿ ಮತ್ತು ಪೊಲೀಸ್ ಇಲಾಖೆಗೆ ನೀಡಿರುವ ಅಧಿಕಾರವನ್ನು ಕೆಳಗಿನಂತೆ ಪುನರ್ ವಿಭಜಿಸಲು ಪ್ರಸ್ತಾವಿಸುತ್ತೇನೆ –

(ಅ) ಅಬಕಾರಿ ಕಾಯ್ದೆ ಹಾಗೂ ನಿಯಮಗಳಡಿಯಲ್ಲಿ ಸನ್ನದು ಪಡೆದಿರುವ ಸನ್ನದುದಾರರು ಅಥವಾ ಅಧಿಕೃತ ವ್ಯಕ್ತಿಗಳು ಅಬಕಾರಿ ಕಾಯ್ದೆ ಹಾಗೂ ಅದರಡಿಯಲ್ಲಿನ ನಿಯಮಗಳನ್ನು ಉಲ್ಲಂಘಿಸದಂತೆ ನಿಯಂತ್ರಣ ಮಾಡುವುದು, ಅಪರಾಧಗಳನ್ನು ಮಾಡಿದ್ದಲ್ಲಿ ಅಂತಹ ಅಪರಾಧಗಳನ್ನು ಪತ್ತೆ ಮಾಡುವುದು, ತನಿಖೆ ನಡೆಸಿ ನ್ಯಾಯಾಲಯದಲ್ಲಿ ಆರೋಪ ಪಟ್ಟಿ ಸಲ್ಲಿಸಿ ಅಪರಾಧಿಗಳಿಗೆ ಶಿಕ್ಷೆಯಾಗುವಂತೆ ಕ್ರಮ ಕೈಗೊಳ್ಳುವುದು ಅಬಕಾರಿ ಅಧಿಕಾರಿಗಳ ಕರ್ತವ್ಯವಾಗಿರುತ್ತದೆ

(ಆ) ಸನ್ನದುದಾರರಲ್ಲದ ಹಾಗೂ ಅಧಿಕೃತ ಪರವಾನಿಗೆ ಹೊಂದಿಲ್ಲದ ಇತರ ವ್ಯಕ್ತಿಗಳು ಅಬಕಾರಿ ಕಾಯ್ದೆ ಹಾಗೂ ಅದರಡಿಯಲ್ಲಿ ರಚಿತವಾದ ಯಾವುದೇ ನಿಯಮಗಳನ್ವಯ ಯಾವುದೇ ಅಪರಾಧ ಹಾಗೂ ಕಾನೂನು ಉಲ್ಲಂಘನೆ ಮಾಡಿದ್ದಲ್ಲಿ ಅಂತಹ ಅಪರಾಧಗಳನ್ನು ಪತ್ತೆ ಹಚ್ಚುವುದು, ನಿಯಂತ್ರಿಸುವುದು, ಅಪರಾಧಗಳ ತನಿಖೆ, ನ್ಯಾಯಾಲಯದಲ್ಲಿ ಆರೋಪ ಪಟ್ಟಿ ಸಲ್ಲಿಸಿ ಅಪರಾಧಿಗಳಿಗೆ ಶಿಕ್ಷೆಯಾಗುವಂತೆ ಕ್ರಮ ಕೈಗೊಳ್ಳುವುದು ಪೊಲೀಸ್ ಇಲಾಖೆಯ ಅಧಿಕಾರಿಗಳ ಕರ್ತವ್ಯವಾಗಿರುತ್ತದೆ

299 ಕಳ್ಳಭಟ್ಟಿ ತಯಾರಕರನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಲು ಪೊಲೀಸ್ ಇಲಾಖೆಯು ವಿಶೇಷ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕಾಗಿರುತ್ತದೆ ಕಳ್ಳಭಟ್ಟಿ ತಯಾರಿಕೆಯಲ್ಲಿ ತೊಡಗುವಂತಹ ದುಷ್ಪಶಕ್ತಿಗಳ ಮೇಲೆ ದಿ ಪ್ರಿವೆನ್ಷನ್ ಆಫ್ ಡೇಂಜರಸ್ ಆಕ್ಟಿವಿಟೀಸ್ ಆಫ್

ಬೂಟ್‌ಲೆಗ್ಗರ್ಸ್, ಡ್ರಗ್-ಅಫೆಂಡರ್ಸ್, ಗ್ಯಾಂಬ್ಲರ್ಸ್, ಗೂಂಡಾಸ್, ಇಮ್ಮೋರಲ್ ಟ್ರಾಫಿಕ್-ಅಫೆಂಡರ್ಸ್ ಅಂಡ್ ಸ್ಲಮ್ ಗ್ರಾಬರ್ಸ್ ಕಾಯ್ದೆ,1 1985 ಕಾಯ್ದೆಯಡಿಯಲ್ಲಿ ಕ್ರಮ ಕೈಗೊಳ್ಳಲು ಪೊಲೀಸ್ ಇಲಾಖೆಯು ವಿಶೇಷ ಕಾರ್ಯಕ್ರಮ ರೂಪಿಸಲು ಪ್ರಸ್ತಾವಿಸುತ್ತೇನೆ ಈ ಬಗ್ಗೆ ಪೊಲೀಸ್ ಇಲಾಖೆಯಲ್ಲಿ ವಿಶೇಷ ಸಿಬ್ಬಂದಿಯನ್ನು ನಿಯೋಜಿಸುವ ಬಗ್ಗೆ ಹಾಗೂ ವಾಹನ ಸಂಪರ್ಕ ಸಾಧನಗಳನ್ನು ಹೊಂದುವ ದೃಷ್ಟಿಯಿಂದ 25 ಕೋಟಿ ರೂ ಗಳ ವಿಶೇಷ ಅನುದಾನವನ್ನು ನೀಡಲು ಪ್ರಸ್ತಾವಿಸುತ್ತೇನೆ ಅದೇ ರೀತಿ ಅಬಕಾರಿ ಇಲಾಖೆಗೆ ಬೇಕಾದಂತಹ ಹೆಚ್ಚಿನ ಸಿಬ್ಬಂದಿ, ವಾಹನ ಹಾಗೂ ಇತರ ಸಂಪರ್ಕ ಸಾಧನಗಳನ್ನು ಒದಗಿಸಲು 25 ಕೋಟಿ ರೂ ಗಳ ವಿಶೇಷ ಅನುದಾನವನ್ನು ನೀಡಲು ಪ್ರಸ್ತಾವಿಸುತ್ತೇನೆ

300 ಕಳ್ಳಭಟ್ಟಿ ಸಾರಾಯಿ ಹಾಗೂ ಕಲಬೆರಕೆ ಮದ್ಯಗಳ ಸೇವನೆಯಿಂದ ಆಗುವ ದುಷ್ಪರಿಣಾಮಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸಲು ಸಾಮಾಜಿಕ ಸಂಸ್ಥೆಗಳು, ಸ್ತ್ರೀಶಕ್ತಿ ಸ್ವಸಹಾಯ ಸಂಘಗಳು, ಗ್ರಾಮ ಪಂಚಾಯ್ತಿ, ಮಠ ಮಾನ್ಯಗಳ ಸಹಕಾರ ಮತ್ತು ಸಹಾಯವನ್ನು ಪಡೆಯಲಾಗುವುದು ಇಲಾಖಾ ವತಿಯಿಂದ, ದೃಶ್ಯ, ಶ್ರವ್ಯ, ವಿದ್ಯುನ್ಮಾನ ಹಾಗೂ ಮುದ್ರಣ ಮಾಧ್ಯಮಗಳ ಮೂಲಕ ವ್ಯಾಪಕ ಪ್ರಚಾರ ನಡೆಸುವ ಸಲುವಾಗಿ 10 ಕೋಟಿ ರೂ ಗಳ ವಿಶೇಷ ಅನುದಾನ ನೀಡಲು ಪ್ರಸ್ತಾವಿಸುತ್ತೇನೆ

301 ಸಾರಾಯಿ ಮಾರಾಟದಲ್ಲಿ ತೊಡಗಿರುವ ಹಲವಾರು ಕುಟುಂಬಗಳು ಕೂಡಲೇ ಸೂಕ್ತ ಉದ್ಯೋಗವನ್ನು ಪಡೆಯಲಾರವು ಎಂಬ ಅರಿವು ನನಗಿದೆ ನಮ್ಮ ಸರ್ಕಾರವು "ಸುವರ್ಣ ಕಾಯಕ" ಎಂಬ ಹೆಸರಿನಲ್ಲಿ ಕಾರ್ಯೋನ್ಮುಖವಾಗಿರುವ ಕೈಗಾರಿಕೆಗಳಲ್ಲಿ ಒಂದು ಲಕ್ಷ ಜನರಿಗೆ ತರಬೇತಿ ನೀಡುವ ಕಾರ್ಯಕ್ರಮವನ್ನು ಜಾರಿಗೊಳಿಸುತ್ತಿದೆ - ತರಬೇತಿಯ ಸಮಯದಲ್ಲಿ ಇವರಿಗೆ ಸಹಾಯಧನ (Stipend) ನೀಡಲಾಗುವುದು ಈ ಕಾರ್ಯಕ್ರಮದಲ್ಲಿ ಸಾರಾಯಿ ಮಾರಾಟವನ್ನು ರದ್ದುಪಡಿಸಿದ್ದರಿಂದ ನಿರುದ್ಯೋಗಿಗಳಾದವರಿಗೆ ಆದ್ಯತೆಯನ್ನು ನೀಡಲು ತೀರ್ಮಾನಿಸಲಾಗಿದೆ

302 ಪ್ರಸ್ತುತ ರಾಜ್ಯದಾದ್ಯಂತ 15248 ಅಂಗಡಿಗಳ ಮುಖಾಂತರ ಸಾರಾಯಿ ಮಾರಾಟ ಮಾಡಲಾಗುತ್ತಿದೆ ದಿನಾಂಕ 01 07 2007 ರಿಂದ ಈ ಎಲ್ಲಾ ಸಾರಾಯಿ ಅಂಗಡಿಗಳನ್ನು ಮುಚ್ಚಲಾಗುವುದು ಹೀಗೆ ಮುಚ್ಚಲಾದ ಅಂಗಡಿಗಳಿಗೆ ಬದಲಾಗಿ ಅದೇ ಸ್ಥಳದಲ್ಲಿ ಹೊಸದಾಗಿ ಭಾರತೀಯ ಮದ್ಯದ ಚಿಲ್ಲರೆ ಮದ್ಯ ಮಾರಾಟದ ಸನ್ನದುಗಳನ್ನು ನೀಡಲಾಗುವುದಿಲ್ಲ ಭಾರತೀಯ

ಮದ್ಯದ ಚಿಲ್ಲರೆ ಮದ್ಯ ಮಾರಾಟ ಸನ್ನದು (ಸಿಎಲ್-2) ಗಳನ್ನು ಜನಸಂಖ್ಯೆಯ ಆಧಾರದ ಮೇಲೆ ನಿಯಮಾನುಸಾರ ನೀಡಲಾಗುತ್ತದೆ ಇನ್ನು ಮುಂದೆ ಸಹಾ ಚಿಲ್ಲರೆ ಮದ್ಯ ಮಾರಾಟ ಸನ್ನದುಗಳನ್ನು ಈ ನೀತಿಯನ್ವಯವೇ ನೀಡಲಾಗುವುದು ಈ ಬಗ್ಗೆ ಸಾರ್ವಜನಿಕರಿಂದ ಅರ್ಜಿಗಳನ್ನು ಆಹ್ವಾನಿಸಿ ಸನ್ನದುಗಳನ್ನು ನೀಡಲಾಗುವುದು ಒಂದು ವೇಳೆ ನೀಡಬಹುದಾದ ಚಿಲ್ಲರೆ ಮದ್ಯದ ಅಂಗಡಿ (ಸಿಎಲ್-2) ಸನ್ನದುಗಳ ಸಂಖ್ಯೆಗಿಂತ ಹೆಚ್ಚಿನ ಅರ್ಜಿಗಳು ಬಂದಲ್ಲಿ, ಅಬಕಾರಿ ನಿಯಮಗಳ ಅನುಸಾರ ಜಿಲ್ಲಾಧಿಕಾರಿಗಳು ಲಾಟರಿ ಮೂಲಕ ಯಾರಿಗೆ ಸನ್ನದು ನೀಡಬೇಕೆಂಬುದನ್ನು ನಿರ್ಧರಿಸಿ ನಿಯಮಾನುಸಾರ ಸನ್ನದು ಮಂಜೂರು ಮಾಡಬಹುದೆಂದು ಪ್ರಸ್ತಾವಿಸುತ್ತೇನೆ

303 ಹಲವಾರು ವರ್ಷಗಳಿಂದ ಬಾರ್ (ಸಿಎಲ್-9) ಸನ್ನದುಗಳನ್ನು ಸರ್ಕಾರವು ನೀಡುತ್ತಿರುವುದಿಲ್ಲ ಈ ಸನ್ನದುಗಳಿಗಾಗಿ ಬೇಡಿಕೆ ಅತ್ಯಂತ ಹೆಚ್ಚಾಗಿರುತ್ತದೆ ಆದುದರಿಂದ ಇನ್ನು ಮುಂದೆ ಹೋಟೆಲುಗಳಿಗೆ ಬಾರ್ (ಸಿಎಲ್-9) ಸನ್ನದುಗಳನ್ನು ಅಂತಹ ಸನ್ನದುಗಳ ಬೇಡಿಕೆಗೆ ಅನುಗುಣವಾಗಿ ಹಾಲಿ ಇರುವ ನಿಯಮಗಳ ಪ್ರಕಾರವೇ ನೀಡಲಾಗುವುದು ಈ ಕ್ರಮ ಕೈಗೊಂಡ ನಂತರ ರಸ್ತೆಪಕ್ಕದ (ಸಿಎಲ್-2) ಅಂಗಡಿಗಳಲ್ಲಿ ಸ್ಥಳದಲ್ಲೇ ಕುಡಿದು ಹೋಗುವ ಪರಿಪಾಠವನ್ನು ನಿಯಂತ್ರಿಸಲು ಇನ್ನೂ ಹೆಚ್ಚಿನ ಕಠಿಣ ಕ್ರಮ ಕೈಗೊಳ್ಳಲಾಗುವುದು

304 ಪ್ರಸ್ತುತ ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶೀಯ ಮದ್ಯ ಮಾರಾಟ) ನಿಯಮಗಳು, 1968 ರಡಿಯಲ್ಲಿ ಭಾರತೀಯ ಮದ್ಯ ಮಾರಾಟಕ್ಕಾಗಿ ನೀಡಿರುವ ಎಲ್ಲಾ ಸನ್ನದುಗಳನ್ನು ಪ್ರಸ್ತುತ ಜಾರಿಯಲ್ಲಿರುವ ನಿಯಮಗಳ ಅನುಸಾರವೇ ನವೀಕರಣಗೊಳಿಸಲಾಗುವುದು

305 ಪ್ರಸ್ತುತ ಅಬಕಾರಿ ಕಾಯ್ದೆಯಡಿಯಲ್ಲಿ ಮದ್ಯ ಮದ್ಯಸಾರಗಳನ್ನು ಸಾಗಾಣಿಕೆ ಮಾಡಲು ಪರ್ಮಿಟ್‌ಗೆ 50 ರೂ ಗಳ ಶುಲ್ಕವನ್ನು ವಿಧಿಸಲಾಗುತ್ತಿದ್ದು, ಈ ಶುಲ್ಕವನ್ನು ದಿನಾಂಕ 1-4-2007 ರಿಂದ ಜಾರಿಗೆ ಬರುವಂತೆ ರದ್ದುಪಡಿಸಲು ಪ್ರಸ್ತಾವಿಸುತ್ತೇನೆ ಹಾಗೂ ರಹದಾರಿಗಳನ್ನು ನೀಡುವ ಪದ್ಧತಿಯನ್ನು ಸಹಾ ಸರಳೀಕರಣಗೊಳಿಸಲು ಪ್ರಸ್ತಾವಿಸುತ್ತೇನೆ

306 ಪಾನೀಕರ ಆರೋಗ್ಯದ ದೃಷ್ಟಿಯಿಂದ ಹಾಗೂ ಅಧಿಕೃತ ಮದ್ಯ ತಯಾರಕರ ಹೆಸರಿನಲ್ಲಿ ಅನಧಿಕೃತವಾಗಿ ತಯಾರಾದ ಮದ್ಯ ಮದ್ಯಸಾರವನ್ನು ಮಾರಾಟ ಮಾಡುವುದನ್ನು ತಪ್ಪಿಸುವ

ದೃಷ್ಟಿಯಿಂದ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡ ಎಲ್ಲಾ ಬಗೆಯ ಮದ್ಯ ಹಾಗೂ ಮದ್ಯಸಾರಗಳನ್ನು ನಾಶಪಡಿಸಲು ಪ್ರಸ್ತಾವಿಸುತ್ತೇನೆ

307 ಸುಧಾರಣಾ ದೃಷ್ಟಿಯಿಂದ ರೆಕ್ಟಿಫೈಡ್ ಸ್ಪಿರಿಟ್, ಡಿನೇಚರ್ಡ್ ಸ್ಪಿರಿಟ್ ಮತ್ತು ಆಯಿಲ್ ಕಂಪನಿಗಳಿಗೆ ಸರಬರಾಜು ಮಾಡುವ ಅನ್‌ಹೈಡ್ರಸ್ ಆಲ್ಕೋಹಾಲ್ (ಎಥನಾಲ್)ಗಳ ಮೇಲಿನ ಶುಲ್ಕ (ಫೀ)ವನ್ನು ಕೈ ಬಿಡಲು ಪ್ರಸ್ತಾವಿಸುತ್ತೇನೆ ಈ ಪ್ರಸ್ತಾವವು ದಿನಾಂಕ 14 2007 ರಿಂದ ಜಾರಿಗೆ ಬರುತ್ತದೆ

308 ಸುಧಾರಣಾ ದೃಷ್ಟಿಯಿಂದ ಮದ್ಯದ ಮೇಲಿನ ಘೋಷಿತ ಬೆಲೆಯನ್ನು ನಿಗದಿಪಡಿಸುವ ಬಗ್ಗೆ ಪ್ರಸ್ತುತ ಜಾರಿಯಲ್ಲಿರುವ ಪದ್ಧತಿಯನ್ನು ಸರಳೀಕರಣಗೊಳಿಸುವ ಬಗ್ಗೆ ಪ್ರಸ್ತಾವಿಸುತ್ತೇನೆ

309 ವಿದೇಶದಿಂದ ಆಮದು ಮಾಡಿಕೊಂಡ ಮದ್ಯಗಳ ಮೇಲೆ ವಿಧಿಸುತ್ತಿರುವ ಲೀಟರ್ ಫೀ ಗಳನ್ನು ಕೈಬಿಡಲು ಪ್ರಸ್ತಾವಿಸುತ್ತೇನೆ

310 ಸಿಎಲ್-2, ಸಿಎಲ್-7 ಮತ್ತು ಸಿಎಲ್-9 ಸನ್ನದುಗಳಂತೆ ಸಿಎಲ್-6ಎ (Star Hotel Licence) ಸನ್ನದುಗಳನ್ನು ಸಹ ವರ್ಗಾವಣೆ ಮಾಡಲು ನಿಯಮಗಳಲ್ಲಿ ಅವಕಾಶ ಕಲ್ಪಿಸಲು ಪ್ರಸ್ತಾವಿಸುತ್ತೇನೆ

311 ಚಿಲ್ಲರೆ ಮದ್ಯದ ಅಂಗಡಿಗಳು (ಸಿಎಲ್-2) ಕ್ಲಬ್‌ಗಳು (ಸಿಎಲ್-4) ಸಾಂದರ್ಭಿಕ ಸನ್ನದುಗಳು (ಸಿಎಲ್-5) ಸ್ಟಾರ್ ಹೋಟೆಲ್ಸ್ (ಸಿಎಲ್-6ಎ) ಹೋಟೆಲುಗಳು ಮತ್ತು ಬೋರ್ಡಿಂಗ್ ಹೌಸ್‌ಗಳು (ಸಿಎಲ್-7) ಮತ್ತು ರಿಫ್ರೆಷ್‌ಮೆಂಟ್ ಕೊರಡಿಗಳು (ಬಾರ್) (ಸಿಎಲ್-9) ಲೈಸೆನ್ಸುಗಳ ಮೇಲಿನ ಸನ್ನದು ಶುಲ್ಕವನ್ನು ಅನುಬಂಧ-3ರಲ್ಲಿ ಕೊಟ್ಟಿರುವಂತೆ ಹೆಚ್ಚಿಸಲು ಪ್ರಸ್ತಾವಿಸುತ್ತೇನೆ ಈ ದರಗಳು ದಿನಾಂಕ 17 2007 ರಿಂದ ಜಾರಿಗೆ ಬರುತ್ತದೆ

ಮುದ್ರಾಂಕ ಮತ್ತು ನೋಂದಣಿ

312 ರಾಜ್ಯದಲ್ಲಿ ಪೈಲಟ್ ಮಾದರಿಯಲ್ಲಿ ಸೂಕ್ತವಾದ ಇ-ಸ್ಟಾಂಪಿಂಗ್ ವಿಧಾನವನ್ನು ಜಾರಿಗೊಳಿಸಲು ನಾನು ಉದ್ದೇಶಿಸಿದ್ದೇನೆ

313 2006-07ನೇ ಸಾಲಿನ ಆಯವ್ಯಯದ ಭಾಷಣದಲ್ಲಿ ಸರ್ಕಾರವು ಸ್ವತ್ತಿನ ಹಕ್ಕು ಖಾತರಿಗಾಗಿ ಒಂದು ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವ ಬಗ್ಗೆ ಉಪಕ್ರಮಿಸುವುದಾಗಿ ಪ್ರಕಟಿಸಿತ್ತು ಅದನ್ನು ಜಾರಿಗೊಳಿಸುವ ಸಲುವಾಗಿ ವಿಮಾ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರದಿಂದ ಅಂಗೀಕೃತವಾಗಿರುವ

ವಿಮಾ ಕಂಪನಿಗಳು ನೀಡುವ ಕ್ರಮಬದ್ಧ ಹಕ್ಕು ವಿಮಾ ಪಾಲಿಸಿಯಿಂದೊಡಗೂಡಿದ ಹಸ್ತಾಂತರ ಪತ್ರಗಳಿಗೆ ಶೇ 0 5% ರಷ್ಟು ಮುದ್ರಾಂಕ ರಿಯಾಯಿತಿ ನೀಡಲು ಉದ್ದೇಶಿಸಿದ್ದೇನೆ

314 ಸ್ಥಿರಾಸ್ತಿಗಳ ವರ್ಗಾವಣೆ ಸಂಬಂಧಿಸಿದಂತೆ ಅವಾರ್ಡ್‌ಗಳು ನ್ಯಾಸ ಪತ್ರಗಳು, ವಾಣಿಜ್ಯ ಹಾಗೂ ವಾಸದ ಸ್ವತ್ತುಗಳನ್ನು ಅಭಿವೃದ್ಧಿಪಡಿಸಲು ಮಾಡಿಕೊಂಡ ಅಭಿವೃದ್ಧಿ ಕರಾರುಗಳು ಮತ್ತು ಮೊಖ್ತಾರ ನಾಮೆಗಳಿಗೆ ಮಾರುಕಟ್ಟೆ ಬೆಲೆ ಆಧರಿಸಿ ಮುದ್ರಾಂಕ ಶುಲ್ಕವನ್ನು ಲೆಕ್ಕ ಹಾಕಲು ಕರ್ನಾಟಕ ಮುದ್ರಾಂಕ ಅಧಿನಿಯಮ, 1957ರ ಅನುಸೂಚಿಯ 11,54,5 ಮತ್ತು 41ರ ಅನುಚ್ಛೇದಗಳಿಗೆ ಅವಶ್ಯಕ ತಿದ್ದುಪಡಿಯನ್ನು ಮಾಡಿ ಅವುಗಳನ್ನು ಸದರಿ ಕಾಯಿದೆಯ ಕಲಂ 45-ಎ ಪರಿಧಿಗೆ ಸೇರಿಸಲಾಗುವುದು

315 ಮೊಖ್ತಾರ ನಾಮೆಯ ಜೊತೆಗೆ ನೀಡುವ ಮಾರಾಟದ ಕರಾರನ್ನು ಸ್ವತ್ತಿನ ಸ್ವಾಧೀನ ಸಹಿತವೆಂದು ಪರಿಗಣಿಸುವ ಬಗ್ಗೆ ಅನುಚ್ಛೇದ-5ಕ್ಕೆ ಒಂದು ವಿವರಣೆಯನ್ನು ಸೇರಿಸಲಾಗುವುದು

316 ಕರ್ನಾಟಕ ಮುದ್ರಾಂಕ ಕಾಯಿದೆ, 1957ರ ಅನುಸೂಚಿಯ ಅನುಚ್ಛೇದ 6(1)(ಬಿ) ಅಡಿಯಲ್ಲಿ ವಾಣಿಜ್ಯೋಪಯೋಗಕ್ಕಾಗಿ ಸ್ಥಿರಾಸ್ತಿಗಳನ್ನು ಅಭಿವೃದ್ಧಿಪಡಿಸುವ ಬಗ್ಗೆ ಬರೆದುಕೊಡುವ ಹಕ್ಕುಪತ್ರ ನಿಕ್ಷೇಪ ಪತ್ರಗಳಿಗೆ ಗರಿಷ್ಟ ಮುದ್ರಾಂಕ ಶುಲ್ಕ ಐದು ಲಕ್ಷ ರೂಪಾಯಿಗಳನ್ನೂ ವಾಸೋಪಯೋಗಕ್ಕಾಗಿ ಅಭಿವೃದ್ಧಿಪಡಿಸುವ ಬಗ್ಗೆ ರೂ ಐವತ್ತು ಸಾವಿರ ಗರಿಷ್ಟ ಮಿತಿಯನ್ನೂ ಮತ್ತು ಇನ್ನಿತರ ಉದ್ದೇಶಕ್ಕೆ ಅಡವೇಲೋರಮ್ ದರದಂತೆ ಮುದ್ರಾಂಕ ಶುಲ್ಕವನ್ನು ನಿಗದಿ ಪಡಿಸಲಾಗುವುದು

317 ಕರ್ನಾಟಕ ಮುದ್ರಾಂಕ ಕಾಯಿದೆ, 1957ರ ಅನುಸೂಚಿಯ ಅನುಚ್ಛೇದ 14ರ ಅಡಿ ಹಿಂದೆ ಬರೆದು ಕೊಟ್ಟ ಲಿಖಿತ ಪತ್ರಗಳನ್ನು ರದ್ದು ಪಡಿಸುವ ಪತ್ರಗಳಿಗೆ ಮುದ್ರಾಂಕ ಶುಲ್ಕವನ್ನು ನಿಗದಿ ಪಡಿಸಿದೆ ಆದರೆ ಕೆಲವೊಂದು ಪತ್ರಗಳ ರದ್ದಿಯಾತಿಗೆ ಶುಲ್ಕವನ್ನು ಸಂಬಂಧಪಟ್ಟ ಅನುಚ್ಛೇದಗಳಡಿಯೇ ನಿಗದಿ ಮಾಡಿರುವುದರಿಂದ ಅಂತಹ ರದ್ದು ಪತ್ರಗಳನ್ನು ಅನುಚ್ಛೇದ 14ರ ವ್ಯಾಪ್ತಿಯಿಂದ ಹೊರತು ಪಡಿಸುವುದು ಅವಶ್ಯಕವಾಗಿರುತ್ತದೆ ಆದಕಾರಣ ಈ ಅನುಚ್ಛೇದದಲ್ಲಿರುವ ಈ ಅಸಂಗತವನ್ನು ಸರಿಪಡಿಸಲಾಗುವುದು

7/43

318 ಕಂಪನಿಗಳ ಸಂಯೋಜನೆಗಳಿಗಾಗಿ ಅನುಚ್ಛೇದ 20(4)ರಲ್ಲಿ ಇರುವ ಅಸಂಗತವನ್ನು ನಿವಾರಿಸಲು ಮತ್ತು ಸೋರಿಕೆಯನ್ನು ತಡೆಯಲು ಮಾತೃ ಕಂಪನಿಗಳೊಂದಿಗೆ ಸಂಯೋಜನೆಗೊಳ್ಳುವ ಅಧೀನ ಕಂಪನಿಗಳಿಗೆ ಮತ್ತು ಪುನರ್ ಐಕ್ಯವಾಗುವುದಕ್ಕೆ ಮುದ್ರಾಂಕ ಶುಲ್ಕ ವಿಧಿಸಲು ಒಂದು ಹೊಸ ಪರಿವಿಧಿಯನ್ನು ತರಲಾಗುವುದು

319 ಅನುಚ್ಛೇದ 28ರಲ್ಲಿ ದಾನ ಪತ್ರಗಳಿಗೆ ಮತ್ತು ಅನುಚ್ಛೇದ 48ರಲ್ಲಿ ವ್ಯವಸ್ಥಾ ಪತ್ರಗಳಲ್ಲಿನ ಕುಟುಂಬದ ಶಬ್ದದ ವ್ಯಾಖ್ಯಾನವನ್ನು ವಿಸ್ತರಿಸಿ, ಸಹೋದರರು ಮತ್ತು ಸಹೋದರಿಯರನ್ನು ಸೇರಿಸಲಾಗುವುದು

320 ಅನುಚ್ಛೇದ 5(ಎಫ್)ನ ಅಭಿವೃದ್ಧಿ ಕರಾರು ಪತ್ರಗಳಿಗೆ ಮತ್ತು ತತ್ಸಮಾನವಾದ ಅನುಚ್ಛೇದ 41(ಇಎ) ನ ಮೊಖ್ತಾ ್ಯರ ನಾಮೆಗಳಿಗೆ ಅವುಗಳಲ್ಲಿನ ಸ್ವತ್ತಿನ ಮಾರುಕಟ್ಟೆ ಮೌಲ್ಯದ ಮೇಲೆ ಸ್ಲಾ ್ಯಬ್ ದರದಂತೆ ಒಂದು ಲಕ್ಷದ ಐವತ್ತು ಸಾವಿರ ಗರಿಷ್ಟ ಮುದ್ರಾಂಕ ಶುಲ್ಕವನ್ನು ಆಕರಿಸಲು ನಾನು ಉದ್ದೇಶಿಸಿದ್ದೇನೆ

321 ಹಕ್ಕು ನಿವೃತ್ತಿ ಪತ್ರಗಳಿಗೆ ಸಂಬಂಧಿಸಿದಂತೆ ಕಾಯಿದೆಯ ಅನುಸೂಚಿಯ ಅನುಚ್ಛೇದ 45(ಎ)(1) ಮತ್ತು (11) ರಲ್ಲಿನ ಅಸಂಗತತೆ ಮತ್ತು ತಪ್ಪು ವ್ಯಾಖ್ಯಾನವನ್ನು ನಿವಾರಿಸಲು ಮತ್ತು ರಾಜಸ್ವ ಸೋರುವಿಕೆಯನ್ನು ತಡೆಗಟ್ಟಲಾಗುವುದು

322 ಸಾರ್ವಜನಿಕರಿಗೆ ಉತ್ತಮ ಸೇವೆಯನ್ನು ಒದಗಿಸಲು ಮತ್ತು ಈಗಿರುವ ಇ-ಗವರ್ನೆನ್ಸನ್ನು ಅಭಿವೃದ್ಧಿಪಡಿಸಲು ಕಾವೇರಿ ನಿರ್ವಹಣ ಸಲಹ ಕೋಶವೊಂದನ್ನು ರಚಿಸಲು ನಾನು ಉದ್ದೇಶಿಸಿದ್ದೇನೆ ಅಲ್ಲದೆ ಬೆಂಗಳೂರು ಮತ್ತು ಧಾರವಾಡಗಳಲ್ಲಿ ಶಾಶ್ವತ ದಾಖಲೆಗಳ ಸಂಗ್ರಹಣೆ ಮತ್ತು ಸಂರಕ್ಷಣೆ ಮಾಡಲು, ವಿಪತ್ತು ನಿರ್ವಹಣಾ ಆಡಳಿತ ಕೇಂದ್ರಗಳನ್ನು ಸ್ಥಾಪಿಸಲೂ ಸಹ ನಾನು ಉದ್ದೇಶಿಸಿದ್ದೇನೆ.

323 ಉದ್ದೇಶಿತ ಬದಲಾವಣೆಗಳ ವಿವರಗಳು ಅನುಬಂಧ 4 ರಲ್ಲಿ ಇವೆ

ಸಾರಿಗೆ

324 ಪ್ರಸಕ್ತ ಸಾಲಿನಲ್ಲಿ ವಿವಿಧ ವರ್ಗಗಳ ವಾಹನಗಳಿಗೆ ಸಂಬಂಧಿಸಿದಂತೆ ತೆರಿಗೆಯನ್ನು ಹೆಚ್ಚಳ ಮಾಡುವುದರಿಂದ ರೂ 75 ಕೋಟಿ ಅಧಿಕ ತೆರಿಗೆ ಸಂಗ್ರಹಿಸಲಾಗುವುದು ಅದರ ವಿವರಗಳು ಈ ಕೆಳಕಂಡಂತಿವೆ –

325 ದ್ವಿಚಕ್ರ ಮತ್ತು ಮೋಟಾರು ಕಾರುಗಳ ತೆರಿಗೆಯನ್ನು ಜೀವಾವಧಿ ರೂಪದಲ್ಲಿ ಪಡೆಯಲಾಗುತ್ತಿದೆ ದಿನೇ ದಿನೇ ಈ ವಾಹನಗಳ ನೋಂದಣಿ ಬಹಳ ವೇಗವಾಗಿ ಹೆಚ್ಚುತ್ತಿರುವುದರಿಂದ ವಾಯುಮಾಲಿನ್ಯ ಹೆಚ್ಚಾಗುತ್ತಿದೆ ಮತ್ತು ಸಂಚಾರಕ್ಕೆ ಅಡ್ಡಿಯಾಗುತ್ತಿದೆ ಆದುದರಿಂದ ಇಂತಹ ವಾಹನಗಳ ನೋಂದಣಿಯನ್ನು ತಡೆಗಟ್ಟಲು ಅವುಗಳ ಮೇಲೆ ವಿಧಿಸುವ ತೆರಿಗೆಯನ್ನು ಹೆಚ್ಚಿಸಲಾಗಿದೆ

326 ವಾಹನಗಳನ್ನು ಶಾಶ್ವತ ನೋಂದಣಿ ಮಾಡುವುದಕ್ಕೆ ಮೊದಲು ಅವುಗಳನ್ನು ನೋಂದಣಿ ಪ್ರಾಧಿಕಾರದ ಮುಂದೆ ಕೊಂಡು ಹೋಗಲು ತಾತ್ಕಾಲಿಕ ನೋಂದಣಿಯನ್ನು ನೀಡಲಾಗುತ್ತಿದೆ ಈ ತಾತ್ಕಾಲಿಕ ನೋಂದಣಿಗಳಿಗೆ ತೆರಿಗೆ ವಿಧಿಸುವ ಬಗ್ಗೆ ಸೂಕ್ತವಾದ ಅವಕಾಶವನ್ನು ತೆರಿಗೆ ಷೆಡ್ಯೂಲ್‌ನಲ್ಲಿ ಮಾಡಿರಲಿಲ್ಲ ಈಗ ಅಂತಹ ವಾಹನಗಳಿಗೆ ಅಲ್ಪ ಪ್ರಮಾಣದ ತೆರಿಗೆಯನ್ನು ವಿಧಿಸಲು ಪ್ರಸ್ತಾಪಿಸಿದೆ

327 ಸಾಮಾನ್ಯ ಮತ್ತು ಐಷಾರಾಮಿ ಒಪ್ಪಂದ ವಾಹನಗಳ ತೆರಿಗೆಯನ್ನು ಹೆಚ್ಚಿಸಲು ಪ್ರಸ್ತಾಪಿಸಿದೆ

328 ಕ್ಯಾಂಪರ್ಸ್ -ವ್ಯಾನ್ ವರ್ಗದ ವಾಹನಗಳನ್ನು ಮಲಗಿ ಮತ್ತು ಕುಳಿತು ಪ್ರಯಾಣ ಮಾಡಲು ಉಪಯೋಗಿಸುತ್ತಿದ್ದು ಇವುಗಳ ನೆಲ ವಿಸ್ತೀರ್ಣದ ಮೇಲೆ ಹೆಚ್ಚಿನ ತೆರಿಗೆಯನ್ನು ವಿಧಿಸಲು ಪ್ರಸ್ತಾಪಿಸಿದೆ

329 ದಿನಾಂಕ 14 2006ರ ಮೊದಲು ಇದ್ದಂತೆ ಮಲ್ಟಿ-ಆಕ್ಸಲ್ಡ್ ಮತ್ತು ಆರ್ಟಿಕ್ಯುಲೇಟೆಡ್ ವಾಹನಗಳ ಮೇಲೆ ತೆರಿಗೆಯನ್ನು ಹೆಚ್ಚಿಸಲು ಪ್ರಸ್ತಾಪಿಸಿದೆ

